|| ಶ್ರೀಃ ||

ಶ್ರೀ ಆನಂದತೀರ್ಥಭಗವತ್ಪಾದಾಚಾರ್ಯ ವಿರಚಿತ

ಶ್ರೀ ಸರ್ವಮೂಲ ಗ್ರಂಥಗಳು

(ಕನ್ನಡ ಅನುವಾದ ವಿವರಣೆ ಸಹಿತ)

ಸಂಪುಟ -೧೬

ಶ್ರೀಮದ್ಭಾಗವತ ತಾತ್ಪರ್ಯನಿರ್ಣಯ

(ಪಂಚಮ ಮತ್ತು ಷಷ್ಠ ಸ್ಕಂಧ)

ಭಾಗ - ೪

ಅನುವಾದಕರು

ವಿದ್ವಾನ್ ಕೆ.ಹಯವದನ ಪುರಾಣಿಕ ಎಮ್.ಎ.

ಪ್ರಕಾಶಕರು

ಅಖಿಲ ಭಾರತ ಮಾಧ್ವಮಹಾ ಮಂಡಲ, ಬೆಂಗಳೂರು.

ಪೂರ್ಣಪ್ರಜ್ಞ ವಿದ್ಯಾಪೀಠ

ಬೆಂಗಳೂರು - ೫೬೦ ೦೨೮

Kannada Sarvamoola Vol 16
SRI MADBHAGAVATHA TATPARYA NIRNAYA (Part IV) of Sri Anandatirtha with kannada traslation and notes (for 5th & 6th skandas). Published by Akhila Bharata Madhwa Maha Mandala, Bangalore-560028, released during 26th All India Tatvajnaana Sammelana at Sri Krishnadhama,Mysore on 13th to 16th March 2008.

ಪುಟಗಳು : 567
ಮೊದಲನೆ ಮುದ್ರಣ 2008
ಪ್ರತಿಗಳು : 2000

ಪ್ರತಿ ಬೆಲೆ : ರೂ. 160.00

ಗ್ರಂಥಗಳು ದೊರೆಯುವ ಸ್ಥಳ

ಅಖಿಲ ಭಾರತ ಮಾಧ್ವ ಮಹಾ ಮಂಡಲದ ಕಾರ್ಯಾಲಯ
ಪೂರ್ಣಪ್ರಜ್ಞ ವಿದ್ಯಾಪೀಠ , ಪೂರ್ಣಪ್ರಜ್ಞ ನಗರ , ಬೆಂಗಳೂರು -28

ಅಕ್ಷರ ಜೋಡಣೆ : ಕೆ.ಎಸ್.ಬದರೀನಾರಾಯಣಾಚಾರ್

ಮುದ್ರಣ : ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್, ನ್ಯೂ ತರಗ ಪೇಟೆ, ಬೆಂಗಳೂರು.

ಪ್ರಕಾಶಕರ ನುಡಿ

ಅಖಿಲ ಭಾರತ ಮಾಧ್ವ ಮಹಾ ಮಂಡಲವು ಕ್ರಿ.ಶ. 1986 ನೇ ವರ್ಷದಲ್ಲಿ ಸರ್ವಮೂಲದ ಕನ್ನಡ ಅನುವಾದದ ಆವೃತ್ತಿಗಳನ್ನು ಹೊರತರುವ ನಿರ್ಧಾರವನ್ನು ಕೈಗೊಂಡಿತು. ಸುಮಾರು 22 ವರ್ಷಗಳಲ್ಲಿ ಹದಿನೈದು ಸಂಪುಟಗಳನ್ನು ತರಲಾಗಿದೆ. ಗೀತಾಪ್ರಸ್ಥಾನ (ಗೀತಾಭಾಷ್ಯ ಹಾಗೂಗೀತಾ ತಾತ್ಪರ್ಯ ನಿರ್ಣಯ), ಉಪನಿಷತ್ ಪ್ರಸ್ಥಾನ ಹತ್ತು ಉಪನಿಷತ್ (3 ಸಂಪುಟಗಳಲ್ಲಿ), ಸಂಕೀರ್ಣ ಗ್ರಂಥ ತಂತ್ರಸಾರ ಮತ್ತು ಸ್ತೋತ್ರಗಳು (ಒಂದು ಸಂಪುಟದಲ್ಲಿ), ಪುರಾಣದಲ್ಲಿ ಒಂದಾದ 32 ಅಧ್ಯಾಯಗಳನ್ನು ಒಳಗೊಂಡ ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (4 ಸಂಪುಟಗಳಲ್ಲಿ) ಹಾಗೂ ಸೂತ್ರ ಪ್ರಸ್ಥಾನದಲ್ಲಿ ಸೇರಿದ ಬ್ರಹ್ಮಸೂತ್ರಭಾಷ್ಯ 1ನೇ ಅಧ್ಯಾಯ ಹಾಗೂ ಶ್ರೀಮದನುವ್ಯಾಖ್ಯಾನ ಭಾಗ 1.(ಮೊದಲಿನ ಐದು ಸೂತ್ರಗಳು) ಈ ಎರಡು (ಪ್ರತ್ಯೇಕ ಸಂಪುಟಗಳಲ್ಲಿ) ಪ್ರಕಟನೆಗೊಂಡು ಜಿಜ್ಞಾಸುಗಳ ಕೈ ಸೇರಿತು. ಇದಲ್ಲದೆ ಹಿಂದೆ ಪ್ರಕಟನೆಗೊಂಡಿದ್ದ ಸರ್ವಮೂಲ ಗ್ರಂಥಗಳ ಪುನರ್ಮುದ್ರಣ ಅತ್ಯಗತ್ಯವಾಗಿದ್ದು , ಅದರಲ್ಲಿ ಗೀತಾಪ್ರಸ್ಥಾನ (3ನೇ ಆವೃತ್ತಿ), ಉಪನಿಷತ್ ಪ್ರಸ್ಥಾನ 8 ಉಪನಿಷತ್‌ಗಳು (3ನೇ ಆವೃತ್ತಿ), ಛಾಂದೋಗ್ಯ (ಎರಡನೇ ಆವೃತ್ತಿ), ಬೃಹದಾರಣ್ಯಕ (ಎರಡನೇ ಆವೃತ್ತಿ), ಹಾಗೂ ದಶಪ್ರಕರಣ (3 ನೇ ಆವೃತ್ತಿ), ಪ್ರಕಟನೆಗೊಂಡು ಜಿಜ್ಞಾಸುಗಳಿಗೆ ಲಭ್ಯವಾಗಿರುತ್ತದೆ.

ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ಪ್ರಥಮ, ದ್ವಿತೀಯ ಹಾಗೂ ತೃತಿಯ ಸ್ಕಂಧ (ಸರ್ವಮೂಲ ಕ್ರಮಸಂಖ್ಯೆ 13 ಮತ್ತು 14)ದ ಕನ್ನಡ ಅನುವಾದವನ್ನು ನಾಡಿನ ಹಿರಿಯ ವಿದ್ವಾಂಸರಾದ ಶ್ರೀ ಕೆ. ಹಯವದನ ಪುರಾಣಿಕರು ಮಾಡಿಕೊಟ್ಟಿದ್ದಾರೆ. ಹಾಗೂ ಚತುರ್ಥ ಸ್ಕಂಧದ (ಸರ್ವಮೂಲ ಕ್ರಮ ಸಂಖ್ಯೆ 15) ಏಪ್ರಿಲ್ ತಿಂಗಳ 2007ರಲ್ಲಿ ಬೆಂಗಳೂರಿನಲ್ಲಿ ಬಿಡುಗಡೆಗೊಂಡಿತು. ಇದೇ ಗ್ರಂಥದ ಪಂಚಮ ಹಾಗೂ ಷಷ್ಠ ಸ್ಕಂಧಗಳ (ಕನ್ನಡ ಸರ್ವಮೂಲ ಕ್ರಮಸಂಖ್ಯೆ 16) ತಮ್ಮ ಬಿಡುವಿಲ್ಲದ ಕಾರ್ಯಕ್ರಮದಲ್ಲಿಯೂ ಶ್ರೀ ಕೆ. ಹಯವದನ ಪುರಾಣಿಕರು ಅನುವಾದಿಸಿ ಕೊಟ್ಟಿದ್ದು , ಸದ್ಯದಲ್ಲೇ ಈ ಗ್ರಂಥದ ಬಿಡುಗಡೆಯು 26ನೇ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ, ಶ್ರೀ ಮಧ್ವ ನವಮಿ ಹಾಗೂ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀ ಪಾದರ ಸುಧಾ ಮಂಗಳ ಮಹೋತ್ಸವದ ಶುಭ

ಮುಹೂರ್ತದಲ್ಲಿ ಶ್ರೀಪರಮಪೂಜ್ಯ ಶ್ರೀ ಶ್ರೀವಿಶ್ವೇಶತೀರ್ಥ ಶ್ರೀಪಾದರ ಅಮೃತ ಹಸ್ತದಿಂದ ಬಿಡುಗಡೆಯಾಗಲಿದೆ. ಶ್ರೀ ಪುರಾಣಿಕರಿಗೆ ಅಖಿಲ ಭಾರತ ಮಾಧ್ವ ಮಹಾ ಮಂಡಲದಅನಂತ ಧನ್ಯವಾದಗಳು.

ಈ ಸಂಪುಟದ ಅಕ್ಷರ ಜೋಡಣೆಯ ಕಾರ್ಯವನ್ನು ವಿದ್ವಾನ್ ಕಡ್ಡಿ ಬದರಿನಾರಾಯಣಾಚಾರ್ಯರು ವಹಿಸಿಕೊಂಡು ಅಂದವಾಗಿ ಮಾಡಿ ಕೊಟ್ಟಿದ್ದಾರೆ. ಇವರಿಗೆ ಮಂಡಲದ ಅಭಿನಂದನೆಗಳು. ಈ ಸಂಪುಟವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಓಂಕಾರ್ ಆಫ್ ಸೆಟ್ ಪ್ರಿಂಟರ್ಸ್ ಅವರಿಗೂ, ಮುಖಪುಟ ವಿನ್ಯಾಸ ಹಾಗೂ ಈ ಸಂಪುಟ ಬಿಡುಗಡೆಗೆ ವಿವಿಧ ಹಂತದಲ್ಲಿ ಶ್ರಮಿಸಿದ ಮಂಡಲದ ಪ್ರಧಾನ ಕಾರ್ಯದರ್ಶಿ ಹೆಚ್.ಎನ್. ನಾರಾಯಣ ರಾವ್ ಹಾಗೂ ಗ್ರಂಥ ಪ್ರಕಟನೆಯ ಕಾರ್ಯದರ್ಶಿ ಶ್ರೀ ಎ.ಆರ್. ತಂತ್ರಿ ಯವರಿಗೂ ಅಭಿನಂದನೆಗಳು.

ಇನ್ನು ಉಳಿದ ಮೂರು ಗ್ರಂಥಗಳಾದ ಋಗ್ಭಾಷ್ಯ, ನ್ಯಾಯ ವಿವರಣ, ಅಣುಭಾಷ್ಯ ಹಾಗೂ ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನ, ಭಾಗವತ ತಾತ್ಪರ್ಯ ನಿರ್ಣಯಗಳ ಉಳಿದ ಅಧ್ಯಾಯಗಳನ್ನು ಒಳಗೊಂಡ ಸಂಪುಟಗಳ ಪ್ರಕಟನೆಗೆ ಒಂದು ನೀಲಿ ನಕ್ಷೆ ತಯಾರಿಸಿ ಈ ಗ್ರಂಥಗಳ ಪ್ರಕಟನೆಗೆ ಸರ್ವ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಸಹೃದಯ ವಾಚಕರು ವಿಳಂಬಕ್ಕೆ ಬೇಸರಿಸಿದೆ ಆತ್ಮೀಯತೆಯಿಂದ ಈ ಸಂಪುಟವನ್ನು ಬರಮಾಡಿಕೊಳ್ಳುವರೆಂದು ನಂಬಿದ್ದೇವೆ.

ಕೆ.ವಿಷ್ಣುಮೂರ್ತಿ ಎರ್ಕಾಡಿತ್ತಾಯ

13.02.2008

ಅಧ್ಯಕ್ಷರು
ಅಖಿಲ ಭಾರತ ಮಾಧ್ವ ಮಹಾ ಮಂಡಲ,
ಬೆಂಗಳೂರು.

ಸಂಪಾದಕ ಮಂಡಳಿಯ ನಿವೇದನೆ

ಕ್ರಿ.ಶ. 1986ರಲ್ಲಿ ಶ್ರೀ ಮಧ್ವಾಚಾರ್ಯರ 750ನೇ ಜಯಂತಿಯ ಅಂಗವಾಗಿ ಆಚಾರ್ಯರು ಅನುಗ್ರಹಿಸಿದ ಸರ್ವಮೂಲ ಗ್ರಂಥಗಳ ಭಾಷಾಂತರ ಕಾರ್ಯವನ್ನು ಶ್ರೀ ಶ್ರೀ ವಿಶ್ವೇಶತೀರ್ಥರು ಸಂಕಲ್ಪಿಸಿದ್ದು ಅಂದಿನಿಂದ ಇದುವರೆಗೆ 15 ಸಂಪುಟಗಳು ಹೊರ ಬಂದಿದೆ.

ಕ್ರಿ.ಶ. 1987ರಲ್ಲಿ ಗೀತಾ ಪ್ರಸ್ಥಾನ ಪ್ರಕಟವಾಯಿತು. ಆಮೇಲಿನ ಎರಡು ವರ್ಷಗಳಲ್ಲಿ ಎಂಟು ಉಪನಿಷತ್ ಉಳ್ಳ ಒಂದು ಸಂಪುಟ ಹಾಗೂ ಬೃಹದಾರಣ್ಯಕ ಮತ್ತು ಛಾಂದೋಗ್ಯೋಪನಿಷತ್ ಪ್ರತ್ಯೇಕ ಸಂಪುಟದಲ್ಲಿ ಹೀಗೆ ಮೂರು ಸಂಪುಟಗಳಲ್ಲಿ ಹೊರ ಬಂದವು. 1993 ರಲ್ಲಿ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ರಾಮಾಯಣ ಮತ್ತು ಮಹಾಭಾರತದ ಕಥೆಗಳು ಅಡಕವಾಗಿ ಮೊದಲ ಒಂಬತ್ತು ಅಧ್ಯಾಯದವರಗಿನ ಕಥಾ ಭಾಗವು ಮುಕ್ತಾಯವಾಗಿ ಒಂದು ಸಂಪುಟದಲ್ಲಿ ಪ್ರಕಟನೆ ಗೊಂಡಿತು. 1999ರ ನಂತರ ಹತ್ತನೇ ಅಧ್ಯಾಯದಿಂದ ಮಹಾಭಾರತ ಕಥೆಯು ಆರಂಭವಾಗಿ, 18 ನೇ ಅಧ್ಯಾಯದ ವರೆಗೆನ ಕಥಾಭಾಗವು ಮತ್ತೊಂದು ಸಂಪುಟದಲ್ಲಿ ಪ್ರಕಟನೆಗೊಂಡಿತು. ಹತ್ತೊಂಬತ್ತನೇ ಅಧ್ಯಾಯದಿಂದ ಇಪ್ಪತ್ತೆರಡನೇ ಅಧ್ಯಾಯಗಳವರೆಗಿನ ಭಾಗವನ್ನು ಮತ್ತೊಂದು ಸಂಪುಟ ಹಾಗೂ ಇದರ ಜೊತೆಯಲ್ಲಿ ಸಂಕೀರ್ಣ ಗ್ರಂಥ (ಹತ್ತು ಗ್ರಂಥಗಳನ್ನು ಒಳಗೊಂಡ ಗ್ರಂಥ - ಇದರಲ್ಲಿ ಸದಾಚಾರ ಸ್ಮೃತಿ, ತಂತ್ರಸಾರ ಸಂಗ್ರಹ , ಯಮಕ ಭಾರತ ಹತ್ತು ಸ್ತೋತ್ರಾದಿಗಳ ದ್ವಾದಶ ಸ್ತೋತ್ರ , ನರಸಿಂಹ ಸ್ತುತಿ, ಜಯಂತಿ ನಿರ್ಣಯ, ಯತಿಪ್ರಣವಕಲ್ಪ, ಕಂದುಕ ಸ್ತುತಿ, ಬಿಲ್ವಮಂಗಲಃ ಸಾಧುಃ 10 ಸರ್ವಮೂಲ ಗ್ರಂಥಗಳು ಸೇರಿದ್ದು).1999 ರಲ್ಲಿ ಪರಮ ಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥರ 60 ನೇ ವರ್ಷ ಪೀಠಾರೋಹಣ ಸಂದರ್ಭದಲ್ಲಿ ಹಂಪೆಯ ಯಂತ್ರೋದ್ಧಾರಕ ಶ್ರೀ ಪ್ರಾಣದೇವರ ಸನ್ನಿಧಿಯಲ್ಲಿ ಬಿಡುಗಡೆಯಾಯ್ತು. ಇದೇ ವರ್ಷದ ಕೊನೆಯಲ್ಲಿ ಮಹಾ ಭಾರತ ತಾತ್ಪರ್ಯ ನಿರ್ಣಯ 19 ನೇ ಅಧ್ಯಾಯದಿಂದ 22ನೇ ಅಧ್ಯಾಯಗಳನ್ನು ಒಳಗೊಂಡ ಸಂಪುಟ ಪ್ರಕಟನೆಗೊಂಡಿತು. ಈ ಗ್ರಂಥದ 4ನೇ ಭಾಗ ಅಂದರೆ ಅಧ್ಯಾಯ 23 ರಿಂದ 32ರ ಅಧ್ಯಾಯಗಳು ಹಾಗೂ ಸೂತ್ರ ಪ್ರಸ್ಥಾನದ ಮೊದಲ ಗ್ರಂಥವಾಗಿ ಬ್ರಹ್ಮಸೂತ್ರ ಭಾಷ್ಯ ಪ್ರಥಮಾಧ್ಯಾಯ ಪ್ರತ್ಯೇಕ ಸಂಪುಟಗಳಲ್ಲಿ 2001ರಲ್ಲಿ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಚತುರ್ಥ ಪರ್ಯಾಯದ ಶ್ರೀ ಮಧ್ವನವಮಿಯ ಶುಭ ಅವಸರದಲ್ಲಿ ಉಡುಪಿಯಲ್ಲಿ ಪ್ರಕಟನೆಗೊಂಡಿತು. ನಂತರ 2003ರಲ್ಲಿ ಶ್ರೀ ಮದನುವ್ಯಾಖ್ಯಾನ (ಭಾಗ 1, ಮೊದಲಿನ ಐದು ಸೂತ್ರಗಳನ್ನು ಒಳಗೊಂಡ ಸರ್ವಮೂಲ ಸಂಪುಟ ಕ್ರಮಸಂಖ್ಯೆ 12) ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ ಹಾಗೂ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ತಮ್ಮ 25ನೇ

ಅನುವ್ಯಾಖ್ಯಾನ ನ್ಯಾಯ ಸುಧಾ ಮಂಗಳ ಮಹೋತ್ಸವದ ಸಂದರ್ಭದಲ್ಲಿ ಬಿಡುಗಡೆ ಗೊಂಡಿತು.

ಪ್ರಕೃತ, ಪುರಾಣಗಳಲ್ಲಿ ಒಂದಾದ ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ಮೊದಲನೇ ಭಾಗ (ಸರ್ವಮೂಲ ಕ್ರಮಸಂಖ್ಯೆ 13, ಪ್ರಥಮ ಹಾಗೂ ದ್ವಿತಿಯ ಸ್ಕಂಧ)ಕನ್ನಡ ಅನುವಾದ, ನಾಡಿನ ಹಿರಿಯ ವಿದ್ವಾಂಸರಾದ ವಿದ್ವಾನ್ ಶ್ರೀ ಕೆ. ಹಯವದನ ಪುರಾಣಿಕರು ಅನುವಾದ ಮಾಡಿದ ಗ್ರಂಥವು 23ನೇಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ ಹಾಗೂ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ನಡಿಸಿದ ತಮ್ಮ25ನೇ ಶ್ರೀ ಅನುವ್ಯಾಖ್ಯಾನ ನ್ಯಾಯ ಸುಧಾ ಮಂಗಳ ಮಹೋತ್ಸವದ ಸಂದರ್ಭದಲ್ಲಿ, 2004ನೇ ಜನವರಿ 20 ರಂದು ಧಾರವಾಡದಲ್ಲಿ ಪ್ರಕಟನೆಗೊಂಡಿತು. ನಂತರ ಇವರಿಂದಲೇ ಈ ಗ್ರಂಥದ 3ನೇ ಸ್ಕಂಧದ ಅನುವಾದ (ಸರ್ವಮೂಲ ಕ್ರಮಸಂಖ್ಯೆ 14) 2006 ರಲ್ಲಿ, ಚೆನ್ನೈ ನಗರದ 25ನೇಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನದಲ್ಲಿ ಬಿಡುಗಡೆಗೊಂಡಿತು. ಇದೇ ಗ್ರಂಥದ ಚತುರ್ಥಸ್ಕಂಧದ ಕನ್ನಡ ಅನುವಾದವು (ಸರ್ವಮೂಲ ಕ್ರಮ ಸಂಖ್ಯೆ 15)2007ನೇ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಬಿಡುಗಡೆಗೊಂಡಿತು.

ಪ್ರಸ್ತುತ, ಪಂಚಮ ಹಾಗೂ ಷಷ್ಠ ಸ್ಕಂಧದ ಕನ್ನಡ ಅನುವಾದವನ್ನು ಶ್ರೀ ಕೆ. ಹಯವದನ ಪುರಾಣಿಕರು ತಮ್ಮ ಬಿಡುವಿಲ್ಲದ ಕಾರ್ಯಕ್ರಮದಲ್ಲಿಯೂ ಮಾಡಿದ್ದು ಈ ಗ್ರಂಥವು ಶ್ರೀ ಶ್ರೀ ವಿಶ್ವೇಶತೀರ್ಥರ ಅಮೃತ ಹಸ್ತದಿಂದ ಬಿಡುಗಡೆಗೆ ಸಿದ್ಧವಾಗಿದೆ. ಇದರ ಅನುವಾದವನ್ನು ಮಾಡಿ ಹಾಗೂ ಕರಡುಪ್ರತಿಯನ್ನು ತಾವೇ ಸ್ವತಃ ಮಾಡಿದ ಶ್ರೀ ಕೆ. ಹಯವದನ ಪುರಾಣಿಕರಿಗೆ ಅಭಿನಂದನೆಗಳು.

ಈ ಸಂಪುಟದ ಅಕ್ಷರ ಜೋಡಣೆಯ ಕಾರ್ಯವನ್ನು ವಿದ್ವಾನ್ ಶ್ರೀ ಕಡ್ಡಿ ಬದರಿನಾರಾಯಣಚಾರ್ಯರು ವಹಿಸಿಕೊಂಡು ಅಂದವಾಗಿ ಮಾಡಿಕೊಟ್ಟಿದ್ದಾರೆ. ಮುಖಪುಟವಿನ್ಯಾಸ ಹಾಗೂ ಈ ಸಂಪುಟದ ಪ್ರಕಟನೆಗೆ - ಎಲ್ಲಾ ಹಂತದಲ್ಲಿ ಶ್ರಮಿಸಿದ ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಹೆಚ್.ಎನ್. ನಾರಾಯಣ ರಾವ್ ಇವರಿಗೂ ಹಾಗೂ ಸರ್ವಮೂಲಗ್ರಂಥ ಪ್ರಕಟನೆಯ ಕಾರ್ಯದರ್ಶಿಗಳಾದ ಶ್ರೀ ಎ.ಆರ್. ತಂತ್ರಿಯವರಿಗೂ ಅಭಿನಂದನೆಗಳು. ಈ ಸಂಪುಟದ ಮುದ್ರಣದ ಕಾರ್ಯವನ್ನು ನಿರ್ವಹಿಸಿದ ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೂ ಅಭಿನಂದನೆಗಳು.

ಬೆಂಗಳೂರು
13.02.2008

ಮಹಾ ಮಹೋಪಾಧ್ಯಾಯ,
ಪ್ರೊ|| ಕೆ.ಟಿ. ಪಾಂಡುರಂಗಿ,
ಕಾರ್ಯಾಧ್ಯಕ್ಷರು.
ಸಂಪಾದಕ ಮಂಡಳಿ.

ಅನುಗ್ರಹ ಸಂದೇಶ

ಶ್ರೀಮದ್ಭಾಗವತವು ಯದ್ ವೈಷ್ಣವಾನಾಂ ಧನಮ್ - ವೈಷ್ಣವರ ದೊಡ್ಡ ಆಸ್ತಿ. ಮಹಾಭಾರತ ಹಾಗೂ ಇತರ ಪುರಾಣಗಳನ್ನು ರಚಿಸಿದ ವೇದ ವ್ಯಾಸರು ಅತೃಪ್ತರಂತೆ ನಟಿಸಿ ಈ ಪುರಾಣವನ್ನು ರಚಿಸಿದ್ದಾರೆ. ಅಲ್ಲದೆ, ಇತರ ಪುರಾಣಗಳನ್ನು ರೋಮಹರ್ಷಣ ಸೂತರಿಗೆ ಪ್ರಚಾರಕ್ಕಾಗಿ ನೀಡಿದರೆ, ಭಾಗವತವನ್ನು ತಮ್ಮ ಮಗನಾದ ಶುಕಾ ಚಾರ್ಯರಿಗೇ ನೀಡಿದ್ದಾರೆ. ಹೀಗೆ ಶ್ರೀವೇದವ್ಯಾಸರು ಕಲಿಕಾಲದ ಸಜ್ಜನರ ಶ್ರೇಯಸ್ಸಿಗಾಗಿಯೇ ರಚಿಸಿರುವ ಪುರಾಣ ಭಾಗವತ.

ಶ್ರೀಮಧ್ವಾಚಾರ್ಯರು ಭಾಗವತಪುರಾಣದ ಅರ್ಥನಿರ್ಣಯಕ್ಕಾಗಿಯೇ ಗ್ರಂಥವೊಂದನ್ನು ರಚಿಸಿದ್ದಾರೆ. ಬಾಲ್ಯದಿಂದಲೇ ಭಾಗವತ ಗ್ರಂಥವನ್ನು ಮುಖೋದ್ಗತವಾಗಿ ಹೇಳಿ ಗುರುಗಳಿಗೆ ಅಚ್ಚರಿಪಡಿಸಿದ್ದಲ್ಲದೆ ತಮ್ಮ ಶಿಷ್ಯರಾದ ಶ್ರೀಹೃಷೀಕೇಶತೀರ್ಥರಿಂದ ರಾಗಬದ್ಧವಾಗಿ ಭಾಗವತದ ಶ್ಲೋಕ ಗಳನ್ನು ಹಾಡಿಸಿ ತಾವು ಅದರ ವಿವರಣೆಯನ್ನು ಸಾರ್ವಜನಿಕ ಸಭೆಗಳಲ್ಲಿ ನಿರೂಪಿಸುತ್ತಿದ್ದರು. ಹೀಗೆ ಆಚಾರ್ಯರಿಗೂ ಅತ್ಯಂತ ಪ್ರಿಯವಾದ ಪುರಾಣಶ್ರೀಮದ್ಭಾಗವತ.

ಶ್ರೀಮದಾಚಾರ್ಯರು ಭಾಗವತದ ಅರ್ಥನಿರ್ಣಯಕ್ಕಾಗಿ ಬರೆದಿರುವ ಈ ಗ್ರಂಥ ಭಾಗವತದ ಅಧ್ಯಯನಕ್ಕೆ ಅತ್ಯಂತ ಅವಶ್ಯಕವಾದ ಒಂದು ಕೈಪಿಡಿ. ಮಹಾಭಾರತ ಮತ್ತು ಭಾಗವತಗಳಿಗೆ ವಿರೋಧ ಬಂದಾಗ ಶ್ರೀವೇದವ್ಯಾಸರೇ ರಚಿಸಿದ ಇತರ ಪುರಾಣಗಳ ಆಧಾರ ಕೊಟ್ಟು ವಿರೋಧವನ್ನು ಪರಿಹರಿಸಿರುವುದು ಆಚಾರ್ಯರಿಗೆ ಪುರಾಣ ಸಾಹಿತ್ಯ ದಲ್ಲಿದ್ದ ಸಂಶೋಧಕ ದೃಷ್ಟಿಯನ್ನು ಈ ಗ್ರಂಥ ಸ್ಪಷ್ಟಪಡಿಸುತ್ತದೆ. ಭಾಗವತದಲ್ಲಿ ಬರುವ ಅನೇಕ ಕ್ಲಿಷ್ಟವಾದ ಅಪಾರ್ಥವಾಗುವ ಶ್ಲೋಕಗಳಿಗೆ ಪ್ರಮಾಣಬದ್ಧವಾದ ವಿವರಣೆಯೂ ಈ ಗ್ರಂಥದಲ್ಲಿದೆ. ಇತರ ವ್ಯಾಖ್ಯಾನಕಾರರು ಹಿಡಿದಿರುವ ಪಾಠಗಳಿಗಿಂತ ಉತ್ತಮವಾದ, ವೇದವ್ಯಾಸರಿಗೆ, ಶ್ರುತಿಗಳಿಗೆ ಸಮ್ಮತವಾದ ಅಪೂರ್ವ ಪಾಠಗಳನ್ನು

ಆಚಾರ್ಯರು ತೋರಿಸಿಕೊಟ್ಟಿದ್ದಾರೆ. ಹೀಗೆ ಭಾಗವತದ ವಸ್ತುನಿಷ್ಠ ಅಧ್ಯಯನಕ್ಕೆ ಅನಿವಾರ್ಯವಾದ ಗ್ರಂಥ ಇದು.

ನಮ್ಮ ಪ್ರಿಯಶಿಷ್ಯರಾದ ಶ್ರೀಹಯವದನ ಪುರಾಣಿಕರು ಭಾಗವತದ ತಾತ್ಪರ್ಯದ ಪ್ರಥಮ, ದ್ವಿತೀಯ, ತೃತಿಯ, ಚತುರ್ಥ ಸ್ಕಂಧದ ಕನ್ನಡಾನುವಾದವನ್ನು ಮಾಡಿದ್ದಾರೆ. ಕನ್ನಡ ಸರ್ವಮೂಲ ಗ್ರಂಥಗಳಲ್ಲಿ ಈಗಾಗಲೇ ಮಹಾಭಾರತ ತಾತ್ಪರ್ಯನಿರ್ಣಯದ ಸಮಗ್ರ ಕನ್ನಡ ಅನುವಾದವನ್ನು ಮಾಡಿರುವ ಪುರಾಣಿಕರು ಈಗಾಗಲೇ ಜನರ ಅಭಿಮಾನಗಳಿಸಿರುತ್ತಾರೆ. ನ್ಯಾಯ, ವೇದಾಂತಗಳಲ್ಲಿ ಉತ್ತಮ ಪಾಂಡಿತ್ಯವಿದ್ದರೆ ಮಾತ್ರ ಭಾಗವತ ತಾತ್ಪರ್ಯದ ಸರಿಯಾದ ಅನುವಾದ ಮಾಡಲು ಸಾಧ್ಯ. ಅಂತಹ ಅರ್ಹತೆ ಹಯವದನ ಪುರಾಣಿಕರಿಗೆ ಇದೆ. ಪ್ರಕೃತ ಶ್ರೀಯುತರು ಇದರ ಪಂಚಮ ಮತ್ತು ಷಷ್ಠ ಸ್ಕಂಧದ ಕನ್ನಡಾನುವಾದವನ್ನು (ಸರ್ವ ಮೂಲ 16ನೇ ಸಂಪುಟ) ಮಾಡಿದ್ದು ಬಿಡುಗಡೆಗೆ ಸಿದ್ಧವಾಗಿದೆ. ಆದ್ದರಿಂದ ನಿರ್ದುಷ್ಟವಾದ ಈ ಅನುವಾದದ ಉಪಯೋಗವನ್ನು ಜಿಜ್ಞಾಸುಗಳು ಪಡೆದು, ಶ್ರೀಹರಿಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ನಾವು ಅಪೇಕ್ಷಿಸುತ್ತೇವೆ.

13.02.2008

ಶ್ರೀ ವಿಶ್ವೇಶ ತೀರ್ಥಶ್ರೀಪಾದರು
ಶ್ರೀ ಪೇಜಾವರ ಅಧೋಕ್ಷಜ ಮಠ
ಉಡುಪಿ

भागवततात्पर्यनिर्णयः

Introduction

In the course of the introduction to the first volume of Bhāgavata Tātparya Nirṇaya, it is already stated that this work of Śrī Ānanda tīrtha (Śrī Madhvāchārya) is a critical exposition of Śrīmad Bhāgavata. It is also stated that Bhāgavata is quite distinct from Mahābhārata, Rāmāyaṇa and Purāṇas in respect of its style, subject matter and the purpose. Its theme is to describe the different incarnations of the Supreme God Nārāyaṇa, particularly, the incarnation of Śrī Krishna.

In the course of this description discourses on philosophy, theology and ethics are introduced. Inculcation of devotion to the Supreme God and detachment from worldly things are stressed. A noble conduct designated as Bhāgavata Dharma is advocated all along. In the course of the narration of the main theme the episodoes of the Sages, Kings and distinguished devotees are introduced.

The style of Bhāgavata is not simple like that of Mahābhārata and Purāṇas. It is scholastic style like later Mahākāvyas. The Bhāgavata tradition is a continuation of

Pancharātra tradition. Hence, a number of terms of pancharātra theology are introduced in Bhāgavata. It is difficult for an average reader to comprehend the deeper philosophical and theological implication of these terms and the discourses on philosophy and theology. Bhāgavata tātparya nirṇaya explains these quoting appropriate authorities of Pancharātra tradition.

The philosophy presented in Upaniṣads and Brahmasūtra is also incorporated in the course of developing its theme of the concept of Supreme God designated as Bhagavan. While selecting the episodes to demonstrate bhakti and vairāgya information from ohter purāṇas particularly from Harivamśa and Viṣṇupurāṇa is drawn. The first two skandhas establish a link between Mahābhārata and Bhāgavata. In this way Bhāgavata is a composition of multi dimension in respect of its source, theme, thought and purpose.

This is effectively stated by Śrī Madhavāchārya in the following verse :

अर्थोऽयं ब्रह्मसूत्राणां भारतार्थविनिर्णयः ।
गायत्रीभाष्यरूपोऽसौ वेदार्थपरिबृंहितः ॥
पुराणानां साररूपः साक्षाद् भगवतोदितः ।
द्वादशस्कन्धसंयुक्तः शतविच्छेदसंयुतः ।
ग्रन्थोऽष्टादशसाहस्रः श्रीमद्भागवताभिधः ॥

The very invocatery verse ''जन्माद्यस्य यत:' etc., is an exposition of the first four sūtras of Brahmasūtras directly and the entire brahmasūtras by appropriate

explanation. The teachings of brahmasūtra, particularly of Sādhanādhyāya and Phalādhyāya are incorporated in Bhāgavata verses all along.

There are a few situations wherein Mahābhārata statements are not clear. There are differences in the narration of certain events. These are to be settled on the basis of the remarks in Bhāgavata. Thus Bhāgavata helps to clarify the statements in Mahābhārata, Śrī Madhvāchārya has written the digests of both these giving a critical exposition. The importance of the Gāyatri hymn is explained in the very first verse of Bhāgavata. It is already stated above that many episodes of sages, kings, and incarnations of God described in other purāṇas are partially or fully incorporated in Bhāgavata and their philosophical, theological and moral implications are developed.

पुराणस्थानपान्थानामभाषात्रयवेदिनाम् ।
भवता सुसखा चक्रे श्रीभागवतनिर्णयः ॥

It is difficult for an average reader to grasp all these aspects by reading the text of Bhāgavata alone. Naturally very learned commentators have written commentaries composed by Chitsuka and Puṇyāraṇya before Śrī Madhvāchārya. These interpreted Bhāgavata to develop Advaita Philosophywhich is against the very spirit of Bhāgavata.

Out of eighteen thousand verses of Bhāgavata sixteen hundred verses only are selected for comments in this

work. Such verses only that are significant from philosophical and theological point of view are selected for comment. These comments are of four types :

i) The special meaning of certain important words are given.
ii) The special point made by a word or phrase or the verse is explained.
iii) The theological and philosophical doctrines are explained.
iv) The expressions and phrases that are likely to be given advaita interpretation are examined and their correct import is explained.

In majority of cases all these points are supported quoting appropriate authorities. The remarks made are brief but the authorities quoted are long. Śrī Madhvāchārya quotes from three hundred and eight works, in his thirty seven works. Among these quotation from two hundred and twenty four works are given in Bhāgavata tātparya nirṇaya which has a rich reference to philosophical and theological doctrines.

II

We will illustrate the special points made in Bhāgavata Tātparya Nirṇaya from the Fifth Skandha contains the episodes of King Priyavṛta, Ṛṣabha, Bharata and a detailed description of Bhūmaṇḍala, particularly, Jambudvīpa and Bharatavarṣa. There is a charming

description of mountains, rivers, natural gardens, trees and Islands.

The sun, moon, stars and planets are described. There is also the discription of Netherlands and the hells.

The Sixth Skandha gives the story of Ajamiḷa, the birth of Vṛtrāsura, preparation of Vajrāyudha, the story of Chitraketu who was born as Vṛtrāsura later and the birth of Maruts.

1) The meaning of technical and rare words

1) निरीहा– not taking any interest in the धर्मs of others and interest in his own धर्म.

---

i) निरीहा आत्मनो विहितं कर्म वर्जयित्वाऽन्यकर्मणः कामस्य च परित्यागो निरीहेत्याहुः सत्यसंहिता । (V-5-10)

2) नाभिः – The word नाभि is also a name of the God in the sense that he is सर्वाश्रय.

नाभिरित्यथ नाम स्याद् हरेः सर्वाश्रयो यतः । –कौर्मे (V-5-27)

3) विविक्तदृष्टिः – Realising that all sentient and non sentient are distinct from the God who is present in all these.

विविक्तदृष्टिः जीवानां धिष्ण्यतया भेददृष्टिः ।
यो हरेश्चैव जीवानां भेदवक्ता हरेः प्रियः । (V-5-26)

4) अभिमानाभासेन अभितो ज्ञानप्रकाशेन (V-6-7)

The expression अभिमानाभासेन means 'with the

enlightened mind that could see all around' within ब्रह्माण्ड and also outside ब्रह्मणाण्ड.

This is the discription of the mind of ऋषभदेव who was free from जडदेह.

5) क्षितिः – आश्रयत्वात् क्षितिरिति निर्वचने क्षितिशब्दोपि तस्मिन्नेव ।
(V-12-8)

The word क्षिति conveys आश्रय. The God is आश्रय for all. Therefore, the word क्षिति conveys God.

6) त्रिनयनो नृसिंहादिरूपी

विष्णोः नृसिंहनामानि त्रिनेत्रोग्रादिकानितु ।
–शब्दनिर्णये (VI-9-33)

त्रिनेत्र, उग्र etc. are the names of नृसिंह.

7) अयं देहः ज्ञानद्रव्यक्रियात्मकः

द्रव्यात्मकः स्थूलदेहः क्रिया कर्मेन्द्रियाणि च
ज्ञानेन्द्रियाणि च मनो ज्ञानात्मकमुदाहृतम् ।
–ब्रह्मवैवर्ते (VI-15-29)

Here the body is stated to be ज्ञानद्रव्यक्रियात्मक. In this phrase द्रव्य refers to the physical body. क्रिया refers to कर्मेन्द्रियs and ज्ञान refers to ज्ञानेन्द्रियs.

8) केवलो हरिः – कैवल्यस्वभावः

ब्रह्मेशानादिभिः देवैः यत् प्राप्तुं नैव शक्यते ।
तद्यत् स्वभावः कैवल्यं स भगवान् केवलो हरिः । (VI-15-36)

god is stated to be केवल as he has कैवल्य nature. The nature of कैवल्य is that which cannot be attained evan by Chaturmukhabrahma etc.

8) मायामात्राणि – प्रकृति निर्मितानि (VI-16-54)

एवं जागरणादीनि जीवस्थानानि चात्मनः ।
मायामात्राणि विज्ञाय तद्रष्टारं परं स्मरेत्

Waking, dream and deep sleep states of man are caused by God through the प्रकृति. The word माया refers to प्रकृति.

2) Some important references

---

1) पूर्वसृष्टान् रथावृत्त्या स्थूलान् चक्रे प्रियव्रतः ।
समुद्रान् तेन तत्कर्तेत्याहुरेनं प्रियव्रतम् ॥ –गारुडे (V-1-31)

The seven oceans and seven hills were already created in पाद्मकल्प. Priyavrata brodened them in वराहकल्प. Keeping this in mind it is stated that he created them.

2) एकदातु कांकट कर्नाटकात् दक्षिणकर्नाटकान् देशान् यदृच्छया उपगतः । (V-6-8)

Here, there is a reference to कर्नाटक. The region below the river भीमरथी is refered to as दक्षिणकर्णाटक and above it as कांकट कर्नाटक.

3) नूनं स्वार्थपरोलोकः न वेद परसंकटम्
यदि वेद न याचेत नेति नाह यदीश्वरः । (VI-10-6)

Self centred persons will not realise the difficulties of others. If they knew there would not have been any need to beg them. They would not deny the help.

4) परिहास विकल्पादिषु अनर्थावाग् भवेत् कचित् ।

While joking or crying words are uttered without intending their meaning.

3) Authorities quoted to explain the philosophical and theological concepts

1) विहितो यस्य यो धर्मो विष्णुना प्रभविष्णुना
तेन मुक्तिर्भवेत् तस्य तं गुरुर्वेद सर्ववित्
–प्रवृत्तसंहिता (V-1-19)

One has to perform the आश्रमधर्म prescribed for him by God. This will enable him to attain the liberation. His preceptor will inform him his आश्रमधर्म taking into account his capacity.

2) दुष्टानां मोहनार्थाय यज्ञ इन्द्रपदेस्थितः
पस्पर्ध वृषभेणैव स्वरूपेण हरिः स्वयम् ॥ –वाराहे (V-4-3)

Indra stopped the rain in the country of ऋषभ. But ऋषभ managed to have it with his power.

Both यज्ञ नामक इन्द्र and ऋषभ were the incornations of Viṣṇu. Therefore this competing was intended to mislead the ignorant.

3) सर्वस्मादुत्तमो विष्णुरिति ज्ञानमुदाहृतम् ।
प्रति जीवं येन मुक्तिः तद्विज्ञानमुदाहृतम् । (V-5-13)

The knowledge that Viṣṇu is supreme is ज्ञान. That knowledge by which a जीव attains liberation is विज्ञान i.e. knowledge about particular attribute of God.

4) ब्रह्मणोऽन्यस्य नो पूर्णा दद्यात् भक्तिं जनार्दनः
मुक्तिं ददाति सर्वेषामुच्चानां कोह्यधीशता (V-6-19)

Chaturmukha brahma will have highest bhakti. The others will have bhakti and liberation as per their innate capacity.

5) अतः सर्वाश्रयश्चैव गोप्ता च हरिरीश्वरः ।
सर्वशब्दाभिधेयश्च शब्दवृत्तेर्हि कारणम् ।
सर्वान्तरे सर्वबहिरेक एव जनार्दनः । (V-12-11)

God is the abode for all. Protector of all. He is conveyed by all words.

6) यथा भागवतेतूक्तं भौवनं कोशलक्षणम् ।
तस्याविरोधतो योज्यं सर्वग्रन्थान्तरस्थितम् । (V-16-1)

The लोकs within ब्रह्माण्ड are described in different ways in different पुराणs. The extent and the order of the seven seas and seven Islands is described differently. However the description of these in Bhāgavata is athentic. The others should be reconciled with it.

7) प्रियव्रतो गयश्चैव कर्मदेवसमौ गुणैः (V-15-7)

Priyavrata and Gaya are on par with कर्मदेव.

8) अनन्तान्तःस्थितो विष्णुः अनन्तश्च सहामुना ।
पूज्यते गिरिशेनेश इलावृतगतेनतु । (V-17-16)

In इलावृतखण्ड शिव worships संकर्षण present in शेष and also worships शेष.

9) वाराहे वामपादं तु तदन्येषु तु दक्षिणम् ।
पादं कल्पेषु भगवानुज्जहार त्रिविक्रमः । (V-17-1)

God त्रिविक्रम lifts above his left foot in वराहकल्प and the right foot in other कल्पs.

10) स्पर्धन्त इव देवास्तु हरिणा यत्रकुत्रचित्
हरेरेवाज्ञया क्वपि दैत्यावेशादथापि वा ॥ (V-18-27)

The other deities sometimes compete with the Supreme God. They do so by the order of the God or from the influence of असुर.

11) सर्वान्तर्यामकत्वात्तु सर्वनामाहरिः स्वयम् ।
न तु सर्वस्वरूपत्वात् रूपत्वमुपचारतः (V-18-32)

God Hari is conveyed by the name सर्व as he is present in all. But he is not identical with all. The expression जगद्रूप should be understand in this sense.

12) सूर्यसोमाग्नि वारीशविधातृषु यथाक्रमम् ।
प्लक्षादि द्वीपसंस्थासु स्थितं हरिमुपासते । (V-20-33)

The Supreme God is worshiped as present in the deities in the Islands as stated bellow.

i) प्लक्षद्वीप in सूर्य
ii) शाल्मलीद्वीप in चन्द्र
iii) कुशद्वीप in अग्नि

iv) कौञ्चद्वीप in जल

v) शाकद्वीप in वायु

vi) पुष्करद्वीप in ब्रह्मा

13) i) वेदप्रणिहितो धर्मः अधर्मः तद्विपर्ययः ।
वेदा नारायणः साक्षात् स्वयं भूरिति शुश्रुम ।

ii) वेदानां प्रथमो वक्ता हरिरेव यतो विभुः ।
अतो विष्ण्वत्मका वेदा इत्याहुर्वेदवादिनः ।

–शब्दनिर्णये (VI-1-1)

Whatever is enjoined by Veda that is धर्म and whatever is prohibited by Veda that is अधर्म.

The God taught veda first. Hence, these are stated to be नारायण himself.

14) यथा कन्थपटाः सूत्रे ओताः प्रोताश्च संस्थिताः ।
एवं विष्णाविदं विश्वं ओतं प्रोतं च संस्थितम् ।। (VI-3-12)

Just as a cloth is woven into thread, the world is woven into God.

15) इच्छादित्वेन त्रिविधा विमलाद्यास्तु शक्तयः ।
विष्णोः स्वरूपभूतायाः ताभ्यः सन्नामिकाः परा ।

–तन्त्रनिर्णये (VI-4-27)

There are nine powers viz. विमला, उत्कर्षिणी, ज्ञाना, क्रिया, योगा, प्रह्वी, सत्त्या, ईशाना, प्रह्वी. Each of these have three forms viz. इच्छाविमला, ज्ञानविमला, क्रियाविमला. The God has those three fold nine powers.

16) दशेन्द्रियाणि च मनोबुद्धिप्राणप्रधानका:
चतुर्दशैषां परमः पाश्वदश्यो हरिः स्मृतः ।
–तन्त्रनिर्णये (VI-4-27)

There are fourteen तत्त्व, viz. दशइन्द्रिय, मनस्, बुद्धि, महत्तत्व and अव्यक्त. The God is different and superior to all these.

17) सदसन्नियामकतया सदसद्रूप उच्यते । (VI-8-31)

The expression सदसत्, refer to कार्य and कारण and also व्यक्त and अव्यक्त. God is नियामक for these. Therefore, he is described as सदसत्.

18) गुरुशिष्ययोरयोग्यत्वात् गुरुवृत्तेरपूर्तितः ।
अप्रसादाद् गुरोर्विद्या न यथोक्तफलप्रदा ।
विद्याः कर्माणि च सदा गुरोः प्रोक्ताः फलप्रदाः । (VI-8-33)

Either गुरु or शिष्य is not of good conduct, or गुरु is not properly served or गुरु does not bless the शिष्य, then, the विद्या will not lead to proper result. The knowledge and conduct will be beneficial only when गुरु blessess.

19) अज्ञानं तु चतुर्वारं द्विवारं भयमेव च
शोकोपि तावान् नान्यत्र कदाचित् ब्रह्मणो भवेत् ।
–ब्रह्मतर्के (VI-9-23)

Chaturmukha brahma will have i) fear once, ii) ignorance four times and iii) grief once.

i) At the commencement of creation ब्रह्मा was sitting alone in the lotus. In the absence of the second a little fear affected him.

ii) When he was sitting in the lotus i) he did not know who he was, ii) he also did not know who created the lotus (iii) what he should do now iv) he also did not know as to how to worship God.

He has grief once only when there was a little delay in achieving his wish.

20) देवलोकात् पितृलोकात् निरयाच्च यत्परम् ।
तिसृभ्यः परमं स्थानं वैष्णवं विदुषां गतिः ।-माहात्म्ये (VI-9-31)

Visṇuloka is higher than देवलोक. पितृलोक and नरक. ज्ञानिन् only attain the विष्णुलोक.

21) विष्णोः प्रियं कामयन्ति देवा नाप्रियं क्वचित् ।
यद्यप्रियं कामयन्ति न रातीशो प्रियो हि सः ।
—तन्त्रभागवते (VI-9-40)

The deities desire for those things that please the Supreme God. If they desire something that does not please God, he will not grant it. Like a physician he will grant only such a thing that will do good for them.

22) समर्था अपि याचन्ते देवा मुन्यादिकान् क्वचित् ।
आज्ञयैव हरेः तेषां यशोऽर्थमपि नान्यथा (VI-9-41)

Though the deities are superior to sages, they ask them to give something as per the order of the God or to bring fame to them.

23) नवकोट्यस्तु देवानां ऋषयः शतकोटयः
नारायणायनाः सर्वे ये केचित् तत्परायणाः ।
—तन्त्रभागवते (VI-14-5,19)

Nine crores of deities and hundred crores of sages are devoted to the Supreme God Nārāyaṇas. Some of these such as Chaturmukha brahma are antaranga bhakta.

24) हरिस्तु सर्वभूतानि तदन्तर्याम्यपेक्षया
तिङ् पदानि तु सर्वाणि सुप्पदानि तथैव च
तस्मिन्नेव प्रवर्तन्ते मुख्यवृत्त्या विशेषतः । (VI-16-51)

The God is present in all. In view of this all verbs and nouns convey him only.

25) i) अशक्ता अपि शक्तानां शक्ताः शापादिषु स्फुटम् ।
तथाप्यशक्तैः विहिताः शापाद्याः शक्तिमत्सुतु
अत्यल्पाश्चाल्पकालाश्च न सम्यक् प्रभवन्ति च

ii) उत्तमेषु कृताः शापाः कर्तॄणां पापपुण्ययोः ।
निश्शेषेण निहन्तारः तदनुग्रहमन्तरा

iii) सदारयोः ब्रह्मविष्णोः वराः शापादयोऽखिलाः
तदन्येन कृताः सर्वे निष्फला एव निश्चयात् ।

Persons of lessor capacity may curse the Superior. However, its effect will be very little and for very short time. The curse given to Superior will reduce the पुण्य of the giver. The curse given to Lord Viṣṇu and his wife and Chaturmukha brahma and his wife will not be effecive.

Mahāmahopadhyāya
Prof. K.T. Pandurangi
Upakulapati
Poornaprajna Vidyapeetha
Bangalore-28.

ವಿಷಯಾನುಕ್ರಮಣಿಕೆ

ಪಂಚಮಸ್ಕಂಧ

೪.೩ ಋಷಭದೇವನೊಂದಿಗೆ ಸ್ಪರ್ಧಿಸುತ್ತ ಇಂದ್ರ ಅವನ ದೇಶದಲ್ಲಿ ಮಳೆಯಾಗದಂತೆ ಮಾಡಿದ. ಆದರೆ ಋಷಭದೇವನ ಕಾಲದಲ್ಲಿ ಇಂದ್ರಪದವಿಯನ್ನು ಆಳುತ್ತಿದ್ದವನೂ ಯಜ್ಞನಾಮಕನಾದ ಭಗವಂತನೆ. ಋಷಭದೇವನೂ ಭಗವಂತನ ಇನ್ನೊಂದು ಅವತಾರ. ಇಬ್ಬರೂ ಸ್ಪರ್ಧಿಸಿದ್ದು ದುರ್ಜನಮೋಹನಕ್ಕಾಗಿ ಎಂದು ವರಾಹಪುರಾಣ ಹೇಳಿದೆ. ೨೪೧

೫.೫. ಅಪರೋಕ್ಷವಾಗದ ತನಕವೇ ಕರ್ಮಫಲಲೇಪ. ಮನಸ್ಸು ಕರ್ಮಾನುಸಾರವೇ ಸುಖದುಃಖಫಲವನ್ನು ಉಂಟುಮಾಡುವುದರಿಂದ ಕರ್ಮಾತ್ಮಕವೆನಿಸುತ್ತದೆ ಎಂದು ಋಷಭದೇವನ ಉಪದೇಶವಿದೆ. ೨೪೪

೫.೬ ಹರಿಯೇ ಸ್ವತಂತ್ರನೆಂಬ ಪ್ರಜ್ಞೆ ಇಲ್ಲದ್ದರಿಂದಲೇ ಜೀವ ಮನಸ್ಸನ್ನು ಸಂಸಾರದ ಕಡೆಗೆ ತಿರುಗಿಸುತ್ತಾನೆ. ಕರ್ಮದಂತೆ ಈ ಅವಿದ್ಯೆ ಸಂಸಾರಕ್ಕೆ ಇನ್ನೊಂದು ಮೂಲ ಕಾರಣ. ಭಕ್ತಿ ಮೋಕ್ಷಕ್ಕೆ ಕಾರಣ ಎಂದು ಋಷಭದೇವ ಉಪದೇಶಿಸಿದ. ೨೪೭

೫.೮ ಪತ್ನಿಯೊಂದಿಗೆ ಮೋಕ್ಷಸಾಧನೆ ಯಾರಿಗೆ ವಿಹಿತವಲ್ಲವೋ ಅವರು ಸಪತ್ನೀಕರಾಗಿರುವಷ್ಟು ಕಾಲ ಸತ್ಸಂಗ ದೊರಕದೆ ಸಂಸಾರದಲ್ಲಿಯೇ ಇರಬೇಕಾಗುತ್ತದೆ ಎಂದು ಸತ್ಯಸಂಹಿತೆಯಲ್ಲಿ ಹೇಳಿದೆ. ೨೪೮

೫.೧೦ ಲಿಂಗಶರೀರದಿಂದ ಬಿಡುಗಡೆಯಾಗಬೇಕಾದರೆ ತನಗೆ ವಿಹಿತವಾದ ಕರ್ಮವನ್ನು ಹೊರತು ಬೇರೆ ಎಲ್ಲ ಕರ್ಮವನ್ನು ತ್ಯಜಿಸಬೇಕು. ಕರ್ಮಫಲದ ಆಸೆಯನ್ನೂ ನಿಷಿದ್ಧವಿಷಯಕಾಮನೆಯನ್ನೂ ತೊರೆಯಬೇಕು ಎಂದು ಸತ್ಯಸಂಹಿತೆಯಲ್ಲಿ ಹೇಳಿದೆ. ೨೫೦

೫.೧೩ ವಿಷ್ಣುಸರ್ವೋತ್ತಮತ್ವಜ್ಞಾನವೇ 'ಜ್ಞಾನ'ವೆನಿಸುತ್ತದೆ. ಆಯಾ ಜೀವನಿಗೆ ಉಪಾಸನಾಯೋಗ್ಯವಾದ ವಿಶೇಷಗುಣಗಳನ್ನು ವಿಷಯೀಕರಿಸುತ್ತಿದ್ದರೆ ಆ ಜ್ಞಾನವೆ 'ವಿಜ್ಞಾನ'ವೆನಿಸುತ್ತದೆ. ಆಯಾ ಜೀವನಿಗೆ ಯೋಗ್ಯವಾದ ಗುಣಗಳನ್ನು ಸರ್ವಜ್ಞನಾದ ಗುರು ಹೇಳುತ್ತಾನೆ. ದ್ವಾತ್ರಿಂಶಲ್ಲಕ್ಷಣಯುಕ್ತನಾಗಿರುವುದು ಸರ್ವಜ್ಞ ಗುರುವಿನ ಲಕ್ಷಣ ಎಂದು ಸತ್ಯಸಂಹಿತೆ ಮತ್ತು ಅಧ್ಯಾತ್ಮಗ್ರಂಥಗಳಲ್ಲಿ ಉಕ್ತವಾಗಿದೆ. ೨೫೧

೫.೨೦ ಸರ್ವಲೋಕಾಶ್ರಯನಾದ್ದರಿಂದ ಹರಿ ನಾಭಿ ಎನಿಸುತ್ತಾನೆ ಎಂದು ಕೂರ್ಮಪುರಾಣ ಹೇಳಿದೆ. ಅದರಿಂದ ಸುನಾಭ ಎಂದರೆ ನಾಭಿ ಎನಿಸಿದ ಋಷಭದೇವನ ಪುತ್ರ ಭರತ. ಭರತ ರಾಜ್ಯಭಾರ ಮಾಡಲಿ. ಅವನ ಸೇವೆ

ಮಾಡಿದರೆ ಅವನ ತಮ್ಮಂದಿರು ತಾವೂ ರಾಜ್ಯಭಾರಮಾಡಿದಂತಾಗುವುದು. ಅದು ನನ್ನ ಸೇವೆಯಾಗುವುದೆಂದು ಋಷಭದೇವ ಮಕ್ಕಳಿಗೆ ಉಪದೇಶಿಸಿದ. ೨೫೩

೫.೨೨ 'ಅಹಂ ದ್ವಿಜದೇವದೇವಃ' ಎಂದರೆ ದ್ವಿಜಶ್ರೇಷ್ಠರು ನನಗೆ ದೇವರು, ಪೂಜ್ಯರೆಂದು ಋಷಭದೇವ ಹೇಳುತ್ತಿಲ್ಲ. 'ದ್ವಿಜಶ್ರೇಷ್ಠರಿಗೆ ತಾನು ದೇವ, ಪೂಜ್ಯ' ಎಂದು ಹೇಳುತ್ತಾನೆ. ೨೫೬

೫.೨೬ ಜೀವರಿಗೆ ಪರಮಾತ್ಮನಿಗಿಂತ ಭೇದವಿದೆ. ಜೀವರು ಅವನ ಪ್ರತಿಮೆಗಳು, ಅವನ ವಾಸಸ್ಥಾನ ಎಂದು ಉಪಾಸನ ಮಾಡುವುದು 'ವಿವಿಕ್ತದೃಷ್ಟಿ' ಎನಿಸುತ್ತದೆ. ಈ ಉಪಾಸನೆ ಮಾಡುವವನಿಗಿಂತ ಹೆಚ್ಚು ಪ್ರಿಯರೆನಿಸುವವರು ಭಗವಂತನಿಗೆ ಬೇರೆ ಇಲ್ಲ ಎಂದು ಪದ್ಮಪುರಾಣ ಹೇಳಿದೆ. ೨೫೭

೬.೧ ಯೋಗಿಗಳು ಯೋಗಸಿದ್ಧಿಗಳನ್ನು ಸ್ವೀಕರಿಸಿದರೆ ಅವರ ಮನಃಸ್ಥೈರ್ಯ ಹಾಳಾಗುವುದು. ವಿಷಯಾಸಕ್ತಿ ಬಂದು ಬಿಡುವುದು. ಅದರಿಂದ ನಿಷಿದ್ಧಕರ್ಮ ಉಂಟಾಗಿ ಮೋಕ್ಷದಲ್ಲಿ ಆನಂದಾನುಭವ ಕಡಿಮೆಯಾಗುವುದು ಎಂದು ಲೋಕಕ್ಕೆ ತಿಳಿಸುವುದಕ್ಕಾಗಿ ಋಷಭದೇವ ತನಗೆ ಸ್ವತಃ ಸಿದ್ಧವೇ ಆಗಿರುವ ಯೋಗಸಿದ್ಧಿಗಳನ್ನು ತೋರಲಿಲ್ಲ ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ. ೨೬೦

೬.೬ ಶ್ರೀಹರಿ ಅವತಾರಗಳಲ್ಲಿ ಶರೀರತ್ಯಾಗ ಮಾಡುವುದೆಂದರೆ ತನಗೆ ಶರೀರದಂತಿರುವ ಭೂಲೋಕವನ್ನು ತ್ಯಾಗ ಮಾಡುವುದು. ಅಂದರೆ ಭೂಲೋಕದಲ್ಲಿ ಜನರ ಕಣ್ಣಿಗೆ ಕಾಣದಿರುವುದು ಹೊರತು ಜೀವರಂತೆ ಮರಣ ಹೊಂದುವುದಲ್ಲ ಎಂದು ಕೂರ್ಮಪುರಾಣ ಹೇಳಿದೆ. ಯೋಗಿಗಳು ಮರಣಕಾಲದಲ್ಲಿ ಪರಮಾತ್ಮನಿಗೂ ಅವನ ಅವತಾರಗಳಿಗೂ ಭೇದವಿಲ್ಲವೆಂದು ಚಿಂತಿಸಬೇಕೆಂದು ತಿಳಿಸಲು ಋಷಭದೇವ ತನ್ನನ್ನು ಪರಮಾತ್ಮನಿಗಿಂತ ಬೇರೆ ಅಲ್ಲ ಎಂದು ಚಿಂತಿಸಿದ. ೨೬೫

೬.೭ 'ಅಭಿಮಾನಾಭಾಸ' ಎಂದರೆ ಭಗವಂತನಾದ ಋಷಭದೇವನ ಮನಸ್ಸು ಏಕೆಂದರೆ ಅದು ಎಲ್ಲೆಡೆ ಕಾಣಬಲ್ಲ ಜ್ಞಾನಪ್ರಕಾಶಸ್ವರೂಪವಾಗಿದೆ. ೨೬೯

೬.೮ ಋಷಭದೇವ ಕುಟಚಾದ್ರಿಯಲ್ಲಿ ಕಾಳ್ಗಿಚ್ಚನ್ನು ಪ್ರವೇಶಿಸಿದ ಬಳಿಕ ತಿರುಗಿ ಹೊರಗೆ ಪ್ರಕಟನಾಗಿ 'ನಾನು ವಾಸುದೇವ' ಎಂದ. ಆ ಕಾಲದಲ್ಲಿ 'ಅರ್ಹ'ನೆಂಬ ರಾಜನಾಗಿ ಹುಟ್ಟಿದ್ದ ಪೌಂಡ್ರಕವಾಸುದೇವ ಇದನ್ನು ತಪ್ಪಾಗಿ

ತಿಳಿದು ತನ್ನನ್ನೇ ವಾಸುದೇವನೆಂದು ಹೇಳಿಕೊಂಡ. ಅವನ ಪ್ರಶಿಷ್ಯ ಕ್ರಮು ಅದನ್ನೂ ತಪ್ಪಾಗಿ ತಿಳಿದು ಎಲ್ಲ ಜೀವರನ್ನೂ ವಾಸುದೇವಸ್ವರೂಪರೆಂದು ಪ್ರತಿಪಾದಿಸಿದ. ಅದರಿಂದ ಕಲಿಯುಗದಲ್ಲಿ ಅಜ್ಞರು ಶೌಚಾಚಾರಗಳಿಲ್ಲದ ಆರ್ಹತಮತವನ್ನೂ ನಾನೇ ಭಗವಂತನೆನ್ನುವ ಅದ್ವೈತಮತವನ್ನೂ ಅನುಸರಿಸಿ ಪ್ರಚಾರ ಮಾಡುತ್ತಾರೆ ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ. ೨೭೦

೬.೧೪ ಭಾರತದೇಶದಲ್ಲಿ ಪುಣ್ಯಸಾಧನೆಯೂ ಹೆಚ್ಚು. ಪಾಪಸಾಧನೆಯೂ ಹೆಚ್ಚು. ಭಗವದ್ಭಕ್ತಿಸಂಪಾದನೆಯೂ ಹೆಚ್ಚು. ಬೇರೆ ದೇಶಗಳಲ್ಲಿ ಹೀಗಿಲ್ಲ ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ. ೨೭೫

೬.೧೬ ಋಷಭದೇವ ಯೋಗಸಿದ್ಧಿಗಳನ್ನು ದೂರವಿರಿಸಿದನೆಂದರೆ ಅದರ ಅಭಿಪ್ರಾಯ ಬೇರೆಯೇ ಇದೆ. ಅವು ಅವನ ಸ್ವರೂಪಭೂತವಾಗಿರುವುದರಿಂದ ಪರಿತ್ಯಾಗ ಮಾಡುವುದು ಶಕ್ಯವಿರಲಿಲ್ಲ. ಹೀಗಾಗಿ ಅವುಗಳಿಂದಾಗಬಹುದಾದ ಸ್ವರೂಪಭೂತವಲ್ಲದ ಫಲವನ್ನು ಅವನು ಬಯಸಲಿಲ್ಲ ಎಂದು ಅಭಿಪ್ರಾಯದಿಂದ ಯೋಗಸಿದ್ಧಿ ಪರಿತ್ಯಾಗ ವ್ಯವಹಾರವಷ್ಟೆ ಎಂದು ಪದ್ಮಪುರಾಣದಲ್ಲಿ ಹೇಳಿದೆ. ೨೭೬

೬.೧೮ ಏಕಾಂತಭಕ್ತರು ಮೋಕ್ಷವನ್ನು ಅಪೇಕ್ಷಿಸದಿರುವುದು ಅವರಿಗೆ ಮೋಕ್ಷದಲ್ಲಿ ಸ್ವರೂಪಾನಂದ ಅಧಿಕವಾಗಿ ವ್ಯಕ್ತವಾಗಲು ಕಾರಣವಾಗುತ್ತದೆ ಎಂದು ವ್ಯೋಮಸಂಹಿತೆಯಲ್ಲಿ ಉಕ್ತವಾಗಿದೆ. ೨೭೭

೬.೧೯ ಉತ್ತಮಭಕ್ತರಿಗೆ ವಿಶೇಷವಾಗಿ ಭಕ್ತಿಪ್ರೇರಕ ಚತುರ್ಮುಖನೊಬ್ಬನೇ ಆದುದರಿಂದ ಶ್ರೀಹರಿ ಪೂರ್ಣಭಕ್ತಿಯನ್ನು ಅವನಿಗೆ ಹೊರತು ಅನ್ಯರಿಗೆ ಕೊಡುವುದಿಲ್ಲ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೨೭೯

೭.೧೩ ಪರೋರಜ ವೇದಗರ್ಭ ತುರೀಯ ಮುಂತಾದ ವೈದಿಕಪದಗಳಿಗೆ ತಂತ್ರನಿರುಕ್ತಗ್ರಂಥದಲ್ಲಿ ವಿವರಣೆ ಇದೆ. ೨೮೧

೧೦.೯ ಭರತಚಕ್ರವರ್ತಿ ಭಗವತ್ಪ್ರಿಯರಾದ ಎಲ್ಲ ಮಾನವರಿಗೆ ಆಶ್ರಯದಾತನಾಗಿದ್ದ. ಅವನೇ ಜಡಭರತನಾಗಿ ಜನಿಸಿದ್ದ. ರಹೂಗಣರಾಜ ಅಜ್ಞಾನದಿಂದ ಅವನನ್ನು ಅವಮಾನಿಸಿದನೆಂದು ಗರುಡ ಪುರಾಣ ಹೇಳಿದೆ. ೨೮೮

೧೦.೧೦ ಮೇನೆಯನ್ನು ಹೊತ್ತಿದ್ದ ಜಡಭರತ 'ನಾನು ಹೊರುತ್ತಿಲ್ಲ' ಎಂದುದು ತಾನು ಸ್ವತಂತ್ರನಾಗಿ ಏನೂ ಮಾಡುತ್ತಿಲ್ಲ ಎಂಬ ಅಭಿಪ್ರಾಯದಿಂದ ಎಂದು ಗರುಡಪುರಾಣ ಹೇಳಿದೆ. ೨೯೦

೧೧.೧೦ ಹತ್ತು ಇಂದ್ರಿಯಗಳ ಹತ್ತು ವಿಷಯಗಳು ಮತ್ತು ಅಹಂಕಾರ ಮಮಕಾರಗಳೆರಡು ಎಂದು ಸಂಸಾರಕ್ಕೆ ಮುಖ್ಯಕಾರಣಗಳು ಹನ್ನೆರಡು. ಅಥವಾ ಅಹಂಕಾರ ಮಮಕಾರಗಳೆರಡೇ ಮುಖ್ಯಕಾರಣ. ಅಥವಾ ಮಮಕಾರವೂ ಅಹಂಕಾರದಲ್ಲಿಯೇ ಸೇರುವುದರಿಂದ ನಾನೇ ಸ್ವತಂತ್ರ ಕರ್ತ ಎನ್ನುವ ಅಹಂಕಾರ ಒಂದೇ ಸಂಸಾರಕ್ಕೆ ಮುಖ್ಯಕಾರಣ. ೩೦೮

೧೧.೧೧ ದ್ರವ್ಯವೆಂದರೆ ದೇಹೇಂದ್ರಿಯಗಳು. ಸ್ವಭಾವವೆಂದರೆ ಜೀವಯೋಗ್ಯತೆ. 'ಜೀವಸ್ಯ' ಎಂದು ಅಧ್ಯಾಹಾರ. ಜೀವಸ್ಯ ಕ್ಷೇತ್ರಜ್ಞತಃ ಸ್ಯುಃ, ಸ್ವತಶ್ಚ ನ ಸ್ಯುಃ' ಮನೋವೃತ್ತಿಗಳು ಜೀವನಿಗೆ ಪರಮಾತ್ಮನಿಂದಲೇ ಉಂಟಾಗುವುವು. ಸ್ವತಃ ಉಂಟಾಗುವುದಿಲ್ಲ. ೩೦೯

೧೧.೧೩ ಪರಮಾತ್ಮ ಸ್ವೇಚ್ಛೆಯಿಂದಲೇ ತನ್ನಲ್ಲಿಯೇ ತಾನು ಆಶ್ರಯಿಸಿಕೊಂಡಿದ್ದು ಜೀವನಿಗೆ ಕಾಣದಂತಿದ್ದಾನೆ. ಅವನಿಗೆ ಅಂತರ್ಯಾಮಿಯಾಗಿದ್ದಾನೆ. ಅವನೇ ಪುರುಷೋತ್ತಮ ಕ್ಷೇತ್ರಜ್ಞ. ೩೧೨

೧೧.೧೭ ಶರೀರದಿಂದ ಜನಿಸಿರುವ ಜಡಭರತ 'ತನಗೆ ಸಂಸಾರ ದುಃಖವಿಲ್ಲ' ಎಂಬುದು ಹೇಗೆ ಎಂದರೆ, ತನಗೆ ದೇಹಾಭಿಮಾನವಿಲ್ಲ. ಅಭಿಮಾನದಿಂದಲೆ ಸಂಸಾರದುಃಖಲೇಪ, ಅಭಿಮಾನವಿಲ್ಲದಿದ್ದರೆ ಅದಿಲ್ಲ ಎಂದು. ೩೧೪

೧೨.೫-೬ ಹರಿಯೆ ಸರ್ವಕ್ಕೂ ಮೂಲಕಾರಣ, ಮುಖ್ಯಕರ್ತನೆಂಬ ಮುಖ್ಯಕರ್ತೃತ್ವ ವಿವಕ್ಷೆಯಿಂದಲೇ ವ್ಯವಹಾರ ಮಾಡಬೇಕು. ಇಲ್ಲದಿದ್ದರೆ ನೆಲದಲ್ಲಿ ನಡೆಯುತ್ತಾನೆ ಎನ್ನದೆ ಕಾಲುಗಳಲ್ಲಿ ತೊಡೆಗಳಲ್ಲಿ ಎದೆಯಲ್ಲಿ ನಡೆಯುತ್ತಾನೆ. ಎಂದು ಮುಂತಾಗಿಯೂ ಹೇಳಬೇಕಾದೀತು ಎಂದು ಜಡಭರತ ಉಪದೇಶಿಸುತ್ತಾನೆ. ೩೧೭

೧೨.೭ ರಾಜನ ಮೇನೆಯನ್ನು ಹೊರುವವನು ನನ್ನ ಅಂತರ್ಯಾಮಿ ಹರಿಯೆ. ರಾಜನೂ ಮುಖ್ಯವಾಗಿ ನಿನ್ನ ಅಂತರ್ಯಾಮಿಯಾದ ಹರಿಯೇ ಎಂದು ಜಡಭರತ ರಹೂಗಣರಾಜನಿಗೆ ಹೇಳುತ್ತಾನೆ. ೩೨೦

೧೨.೮ ಮುಖ್ಯಾಶ್ರಯವನ್ನೇ ಆಶ್ರಯ ಎಂದು ವ್ಯವಹರಿಸುವುದಾದರೆ ನೆಲದಲ್ಲಿ ನಡೆಯುತ್ತಾನೆ ಎನ್ನದೆ ಹರಿಯಲ್ಲಿ ನಡೆಯುತ್ತಾನೆ ಎಂದು ನೀವು ವ್ಯವಹರಿಸ ಬೇಕಾದೀತು ಎಂಬ ಆಕ್ಷೇಪಕ್ಕೆ ಹಾಗೇ ವ್ಯವಹರಿಸುತ್ತೇವೆ. ನೆಲ ಪೃಥಿವೀ ಕ್ಷಿತಿ ಎಂದೆಲ್ಲ ನಾವು ಹೇಳುವುದು ಅವನನ್ನೇ ಎನ್ನುತ್ತಾನೆ ಜಡಭರತ. ೩೨೧

೧೨.೯ ಪೃಥಿವೀಗಿಂತಲೂ ಪೃಥಿವೀಪರಮಾಣುಗಳು ಮುಖ್ಯ ಆಶ್ರಯ ನಿಜ. ಆದರೂ ಪರಮಾಣುಗಳು ಮುಖ್ಯಾಶ್ರಯವೆನಿಸಿದುದೂ ಪರಮಾತ್ಮನ ಸಂಕಲ್ಪದಿಂದ ಹೀಗಾಗಿ ಅವನೇ ಮುಖ್ಯಾಶ್ರಯ. ೩೨೩

೧೨.೧೦-೧೧ ಸೃಷ್ಟಿಕರ್ತನೆಂದು ಪ್ರಸಿದ್ಧನಾದ ಚತುರ್ಮುಖಬ್ರಹ್ಮನಾಗಲಿ ಅವನಿಗೂ ಜನನಿಯಾದ ಚೇತನಪ್ರಕೃತಿಯಾಗಲಿ ಸ್ವತಂತ್ರರಲ್ಲ, ಹರಿಯೊಬ್ಬನೇ ಸ್ವತಂತ್ರ. ಅವನೆ ಮೂಲಕಾರಣ ಮೂಲಾಶ್ರಯ. ರಾಜ ಭೂಮಿಗೆ ಪಾಲಕನಲ್ಲ, ಭೂಮಿಯೆ ರಾಜನನ್ನು ಪಾಲಿಸುತ್ತಾಳೆ, ಆಶ್ರಯ ನೀಡುತ್ತಾಳೆ. ರಾಜಮುಂತಾದವರನ್ನು ಪಾಲಕ, ಆಶ್ರಯ ಎಂದು ಮುಂತಾಗಿ ವ್ಯವಹರಿಸುವುದು ಮುಖ್ಯವಲ್ಲ. ತಲೆಗೆ ಕುತ್ತಿಗೆ ಆಧಾರ ಎನ್ನುವುದು ಹೇಗೋ ಹಾಗೆ ಅಮುಖ್ಯ ಎಂದು ಗರುಡಪುರಾಣ ಹೇಳಿದೆ. ೩೨೫

೧೩.೨೬ ಕಾರ್ತವೀರ್ಯಾರ್ಜುನ ಪ್ರಿಯವ್ರತ ಪೃಥು ಮುಂತಾದವರು ಕರ್ಮಜದೇವತೆಗಳಿಗೆ ಸಮಾನರಾದ ರಾಜರು. ಇವರನ್ನು ಬಿಟ್ಟರೆ ಭರತನಿಗೆ ಸಮಾನರಾದ ಬೇರೆ ರಾಜರಿಲ್ಲ. ಅವನ ಉಪದೇಶದ ಬಲದಿಂದ ರಹೂಗಣರಾಜ ಕಪಿಲಮುನಿಯ ದರ್ಶನ ಪಡೆಯಲು ಅರ್ಹನೆನಿಸಿದ ಎಂದೂ ಗರುಡಪುರಾಣ ಹೇಳಿದೆ. ೩೩೧

೧೩.೨೯ ಜೀವರ ಇಂದ್ರಿಯಗಳಿಗೆ ವಿಷಯಪದಾರ್ಥಸಂಪರ್ಕ ಉಂಟುಮಾಡುವುದರಿಂದ ಹರಿ 'ಯೋಗ' ಎನಿಸುತ್ತಾನೆ. 'ಸಾಂಖ್ಯಶಿರಸ್' ಎಂದರೆ ಉತ್ತಮಜ್ಞಾನರೂಪನಾದ ಹರಿ. ೩೩೨

೧೫.೭ ಪ್ರಿಯವ್ರತರಾಜನೂ ಗಯರಾಜನೂ ಗುಣದಲ್ಲಿ ಕರ್ಮಜದೇವತೆಗಳಿಗೆ ಸಮಾನರೆಂದು ಷಾಡ್ಗುಣ್ಯವೆಂಬ ಗ್ರಂಥದಲ್ಲಿ ಉಕ್ತವಾಗಿದೆ. ೩೩೪

೧೬ನೇ ಅಧ್ಯಾಯ- ಬ್ರಹ್ಮಾಂಡದೊಳಗಿನ ಲೋಕಗಳ ಲಕ್ಷಣ ಪರಿಮಾಣಗಳ ವಿಷಯದಲ್ಲಿ ಭಾಗವತದಲ್ಲಿ ಹೇಳಿದ್ದೇ ಗ್ರಾಹ್ಯ. ಅದಕ್ಕೆ ಅನುಸಾರವಾಗಿಯೇ ಬೇರೆ ಗ್ರಂಥಗಳಲ್ಲಿ ಹೇಳುವುದನ್ನು ಅರ್ಥೈಸಬೇಕು. ಆದರೆ ಏಳು ಸಮುದ್ರಗಳಲ್ಲಿ ಐದನೆಯದು ಕ್ಷೀರಸಮುದ್ರ, ಆರನೆಯದು ದಧಿಸಮುದ್ರ ಎಂದು ಭಾಗವತ ಹೇಳಿದ್ದನ್ನೂ, ಸೂರ್ಯಮಂಡಲ ಚಂದ್ರಮಂಡಲ ರಾಹುಮಂಡಲಗಳು ಕ್ರಮವಾಗಿ ಹತ್ತು ಹನ್ನೆರಡು ಹದಿಮೂರು ಸಾವಿರಯೋಜನ ವಿಸ್ತಾರವೆಂದು ಭಾಗವತ ಹೇಳಿದ್ದನ್ನೂ ಬೇರೆ ಗ್ರಂಥಗಳಿಗೆ ಅನುಸಾರವಾಗಿ ಅರ್ಥೈಸಬೇಕು, ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ. ೩೩೪

೧೭.೧ ತ್ರಿವಿಕ್ರಮ ಭೂಮಿಯನ್ನು ಅಳೆಯುವಾಗ ಎಡಗಾಲನ್ನು ಮೇಲೆ ಎತ್ತಿದ್ದು ವರಾಹಕಲ್ಪದಲ್ಲಿ ಮಾತ್ರ. ಬೇರೆ ಕಲ್ಪಗಳಲ್ಲಿ ಬಲಗಾಲನ್ನೇ ಎತ್ತುತ್ತಾನೆ ಎಂದೂ ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ. ೩೪೧

೧೭.೧೫ ಇಳಾವೃತಖಂಡದಲ್ಲಿ ಶಿವ ಸಂಕರ್ಷಣನನ್ನು ಸ್ತುತಿಸುವಾಗ ಜೊತೆಗೆ ಅವನಿಗೆ ಅಧಿಷ್ಠಾನವಾಗಿ ಶೇಷನನ್ನೂ ಸ್ತುತಿಸುತ್ತಾನೆ. ಇದು ಮಿಶ್ರಸ್ತುತಿ. ಸಂಕರ್ಷಣನನ್ನು ಹೇಳುವ ಶಬ್ದಗಳನ್ನು ಅಮುಖ್ಯವೃತ್ತಿಯಿಂದ ಶೇಷನಿಗೂ ಅನ್ವಯಿಸಬೇಕು. ೩೪೨

೧೮.೫ ಅನಾಯಾಸದಿಂದ ಜಗತ್ತಿನ ಸೃಷ್ಟ್ಯಾದಿಸಮಸ್ತಕಾರ್ಯಗಳನ್ನೂ ಹರಿ ನಡೆಸುವುದರಿಂದ ಅಕರ್ತನೆನಿಸಿದ್ದಾನೆ. ಒಬ್ಬನೆ ಎಲ್ಲವನ್ನೂ ಅನಾಯಾಸವಾಗಿ ಮಾಡುವುದು ಮಹಾಶಕ್ತಿ ಉಳ್ಳವನಾಗಿದ್ದು ಲೋಕವಿಲಕ್ಷಣನಾದ್ದರಿಂದ ಕೂಡುತ್ತದೆ ಎಂದು ತಂತ್ರಸಾರದಲ್ಲಿ ಹೇಳಿದೆ. ೩೪೫

೧೮.೧೫ ಕೇತುಮಾಲಖಂಡದಲ್ಲಿ ರತಿದೇವಿಯಲ್ಲಿ ಅಂತರ್ಗತಳಾದ ಲಕ್ಷ್ಮೀದೇವಿ ಕಾಮದೇವಾಂತರ್ಗತನಾದ ಹರಿಯನ್ನೂ ರತಿದೇವಿ ಕಾಮದೇವನನ್ನೂ ಉಪಾಸನೆ ಮಾಡುತ್ತಾರೆ ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ. ೩೪೭

೧೮.೨೭ ದೇವತೆಗಳು ಕೆಲವೊಮ್ಮೆ ಹರಿಯೊಂದಿಗೆ ಸ್ವಾಭಾವಿಕವಾಗಿ ಸ್ಪರ್ಧಿಸುವಂತೆ ಕಾಣುತ್ತಾರೆ. ಇದಕ್ಕೆ ಕೇವಲ ಹರೀಚ್ಛೆ ಕಾರಣ, ಅಥವಾ ಅಸುರಾವೇಶ ಕಾರಣ ಎಂದೂ ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ. ೩೫೦

೧೮.೩೧ 'ಅಯಥೋಪಲಂಭನಾತ್' ಎಂದು ಒಂದು ಪದವಲ್ಲ. 'ಉಪಲಂಭನಾತ್ ಅಯಥಾ' ಇಂದು ಕಂಡಂತೆ ನಾಳೆ ಇರುವುದಿಲ್ಲ ಎಂದರ್ಥ. ೩೫೦

೧೮.೩೨ ಹರಿ ಸರ್ವಾಂತರ್ಯಾಮಿಯಾದ್ದರಿಂದ ಸರ್ವಶಬ್ದಗಳೂ ಪರಮ ಮುಖ್ಯವೃತ್ತಿಯಿಂದ ಹರಿಯ ನಾಮಗಳೇ ಆಗಿವೆ. ಹಿಂದಿನ ಶ್ಲೋಕದಲ್ಲಿ 'ಯದ್ರೂಪಮೇತತ್' 'ಜಗತ್ತು ಭಗವಂತನದೇ ರೂಪ'ವೆಂದು ಹೇಳಿದ್ದರೂ ಅದು ಭಗವಂತನ ರೂಪದಂತಿದೆ ಎಂಬ ಅಭಿಪ್ರಾಯದಿಂದ ಗೌಣ ಪ್ರಯೋಗ. ಹೊರತು ಭಗವಂತ ಸರ್ವಸ್ವರೂಪನಲ್ಲ ಎಂದು ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ. ೩೫೨

೧೮.೩೩ 'ಸಂಖ್ಯಾ ತತ್ವದೃಶಾ ವಿನೀಯತೇ' ಎಂದರೆ ದಶಾವತಾರ, ಪಂಚಮೂರ್ತಿ ದ್ವಾದಶ ಮೂರ್ತಿ ಎಂದು ಮುಂತಾಗಿ ಹೇಳುವಲ್ಲಿ ದಶ ಪಂಚ ದ್ವಾದಶ

ಮುಂತಾದ ಶಬ್ದಗಳಿಗೆ 'ಅನಂತ' ಎಂದೇ ಅರ್ಥ. ಏಕೆಂದರೆ ಭಗವಂತನ ರೂಪಗಳು ಹತ್ತಾಗಲಿ ಐದು ಹನ್ನೆರಡು ಮುಂತಾದುವಾಗಲಿ ಅಲ್ಲ. ಅನಂತವೆ ಆಗಿವೆ. ಇಂಥ ತತ್ವಜ್ಞಾನ ಭಗವಂತನ ಸ್ವರೂಪವೇ ಆಗಿದೆ. ೩೫೪

೧೮.೩೬ 'ಕ್ರಿಯಾರ್ಥೈಃ ಈರಿತಾತ್ಮನೇ' ಎಂದು ಅನ್ವಯ. ಯಜ್ಞಕ್ರಿಯೆಗೆ ಅವಶ್ಯಬೇಕಾಗುವ ಇಂದ್ರಾದಿನಾಮಗಳಿಂದ ಪರಮಮುಖ್ಯವೃತ್ತಿಯಿಂದ ಕರೆಸಿಕೊಳ್ಳುವವನು ಶ್ರೀಹರಿ ಎಂದರ್ಥ. ೩೫೭

೧೮.೩೭ 'ಮಾಯಾಗುಣೈಃ' ಎಂದರೆ ಭಗವಂತನ ಇಚ್ಛೆಗೆ ಅಧೀನರಾಗಿರುವವರು, ಇಚ್ಛೆಗೆ ಅನುಸಾರವಾಗಿಯೆ ವರ್ತಿಸುವವರು, ಬ್ರಹ್ಮಾದಿದೇವತೆಗಳು .ಅವರಿಂದ ಮಾತ್ರ ಭಗವಂತನನ್ನು ಸರಿಯಾಗಿ ತಿಳಿಯಲು ಸಾಧ್ಯವಿದೆ. ದ್ರವ್ಯಾಭಿಮಾನಿ ಶಿವ. ಕರ್ಮಾಭಿಮಾನಿ ಗರುಡ, ಕಾರಣಾಭಿಮಾನಿ ಬ್ರಹ್ಮ. ಆಧಾರಾಭಿಮಾನಿ ವಾಯು ಎಂದು ಬ್ರಹ್ಮತರ್ಕದಲ್ಲಿ ಹೇಳಿದಂತೆ ಶಿವಗರುಡಬ್ರಹ್ಮವಾಯುಗಳು 'ದ್ರವ್ಯಕ್ರಿಯಾಹೇತ್ವಯನೇಶ'ರು. ಇವರು 'ಮಾಯಾಗುಣ'ರು. ೩೫೮

೧೯.೧೪-೧೫ ನಾರದರಿಗೆ ಪ್ರಾರಬ್ಧವಶದಿಂದ ದೇಹಾಭಿಮಾನ ಬಂದರೂ ಅವರು ಅಪರೋಕ್ಷಜ್ಞಾನಿಗಳಾದ್ದರಿಂದ ಆ ದೇಹಾಭಿಮಾನ ಮೋಕ್ಷಕ್ಕೆ ಪ್ರತಿಬಂಧಕವಲ್ಲ. ಅಜ್ಞಾನಿಗೆ ಅದು ಮೋಕ್ಷಪ್ರತಿಬಂಧಕ. ೩೬೦

೧೯.೨೮ ಪುಣ್ಯಕರ್ಮದಿಂದ ಸ್ವರ್ಗಸುಖ ಅನುಭವಿಸಿದ ಮಾನವರು ಪುಣ್ಯ ತೀರಿದಾಗ ಮೋಕ್ಷಕ್ಕಾಗಿ ಪುಣ್ಯಕರ್ಮ ಮಾಡಲು ಭಾರತಭೂಮಿಯಲ್ಲಿ ಜನಿಸಲು ಬಯಸುತ್ತಾರೆ. ಸ್ವರ್ಗದಲ್ಲಿಯೇ ಇರುವ ದೇವತೆಗಳು ಮೋಕ್ಷದಲ್ಲಿ ಆನಂದವೃದ್ಧಿಗಾಗಿ ಪುಣ್ಯಕರ್ಮ ಮಾಡಲು ಬಯಸಿ ಭೂಮಿಯಲ್ಲಿ ಜನಿಸುತ್ತಾರೆ ಎಂದು ಕೂರ್ಮಪುರಾಣದಲ್ಲಿ ಹೇಳಿದೆ. ೩೬೨

ಅಧ್ಯಾಯ-೨೦ ಪ್ಲಕ್ಷ ಶಾಲ್ಮಲಿ ಕುಶ ಕ್ರೌಂಚ ಶಾಕ ಪುಷ್ಕರ ದ್ವೀಪಗಳಲ್ಲಿ ಕ್ರಮವಾಗಿ ಸೂರ್ಯ ಚಂದ್ರ ಅಗ್ನಿ ವರುಣ ವಾಯು ಬ್ರಹ್ಮರಲ್ಲಿ ಅಂತರ್ಗತನಾದ ಹರಿಯನ್ನು ಜನರು ಉಪಾಸನೆ ಮಾಡುತ್ತಾರೆ. ಅದರಿಂದ ಸೂರ್ಯಾದಿಗಳ ಜಪಕ್ಕೆ ವಿಷ್ಣುಮಂತ್ರ ಹೇಗೆ ಯುಕ್ತವಾದೀತೆಂಬ ಪ್ರಶ್ನೆಗೆ ಅವಕಾಶವಿಲ್ಲ. ೩೬೪

೨೦.೨೪ ಸಿಹಿಮೊಸರನ್ನು ಕ್ಷೀರವೆಂದೂ ಗಟ್ಟಿ ಹಾಲನ್ನೂ ದಧಿ ಎಂದೂ ಗೌಣವೃತ್ತಿಯಿಂದ ಇಟ್ಟುಕೊಂಡು ಭಾಗವತದಲ್ಲಿ 'ಕ್ಷೀರಸಮುದ್ರದ ಸುತ್ತಲೂ ಶಾಕದ್ವೀಪ, ಅದರ ಸುತ್ತಲೂ ದಧಿಸಮುದ್ರ'ವೆಂದು ಹೇಳಿದೆ. ೩೬೭

೨೨.೩೨ ಶಿಂಶುಮಾರನ ಶರೀರ ಜ್ಞಾನಾನಂದಾತ್ಮಕವೇ ಹೊರತು ಪ್ರಾಕೃತವಲ್ಲ. ಅದನ್ನು ಸೂರ್ಯಾದಿಗ್ರಹನಕ್ಷತ್ರಗಳು ಆಶ್ರಯಿಸಿರುವುದು ಜ್ಞಾನಿಗಳಿಗೆ ಸಮ್ಮತ. ಇದು ಬ್ರಹ್ಮಾಂಡಪುರಾಣದಲ್ಲಿ ಸ್ಪಷ್ಟವಿದೆ. ಭಾಗವತದಲ್ಲಿ 'ಕೇಚನ' ಎಂದರೆ ಕೆಲವರು ಜ್ಞಾನಿಗಳೆಂದೇ ಅರ್ಥ. ೩೭೨

೨೩.೪೦ ಪಾತಾಳಲೋಕಕ್ಕೆ ಕೆಳಭಾಗದಲ್ಲಿ ಹದಿನಾಲ್ಕು ಲೋಕಗಳನ್ನು ಹೊತ್ತು ನಿಂತ ಶೇಷನನ್ನು ಬ್ರಹ್ಮಸಭೆಯಲ್ಲಿ ನಾರದ ತುಂಬುರುಗಳು ಹಾಡಿ ಹೊಗಳುತ್ತಾರೆ. ಇಳಾವೃತಖಂಡದಲ್ಲಿ ಶಿವನು ಮಾಡುವ ಶೇಷಸ್ತುತಿಯಂತೆಯೇ ಇದೂ ಮಿಶ್ರಸ್ತುತಿ. ಅಮುಖ್ಯವಾಗಿ ಶೇಷನಲ್ಲಿಯೂ ಮುಖ್ಯವಾಗಿ ಅವನ ಅಂತರ್ಯಾಮಿಯಾದ ಹರಿಯಲ್ಲಿಯೂ ಕೂಡಿಸಬೇಕು. ೩೭೫

—o—

ವಿಷಯಾನುಕ್ರಮಣಿಕೆ

ಷಷ್ಠಸ್ಕಂಧ

೪.೨೫ ಶರೀರ ಪ್ರಾಣ ಇಂದ್ರಿಯ ಮನಸ್ಸುಗಳ ಅಭಿಮಾನಿಗಳೂ ಕೂಡ ತಮ್ಮ ಹಾಗೂ ಪರರ ಸ್ವರೂಪಗಳನ್ನು ಚೆನ್ನಾಗಿ ತಿಳಿಯಲಾರರು. ಜೀವಾಭಿಮಾನಿ ಬ್ರಹ್ಮ ಮಾತ್ರ ತಿಳಿಯಬಲ್ಲ. ಆದರೆ ಅವನೂ ಪರಮಾತ್ಮನನ್ನು ಪೂರ್ತಿಯಾಗಿ ತಿಳಿಯಲಾರ. ಪರಮಾತ್ಮನೊಬ್ಬನೆ ಎಲ್ಲವನ್ನೂ ತಿಳಿಯಬಲ್ಲವನು ಎಂದು ಸ್ಕಂದಪುರಾಣದಲ್ಲಿ ಹೇಳಿದೆ. ೩೯೪

೪.೨೬ ಸುಷುಪ್ತಿಯಲ್ಲಿ ಮನಸ್ಸು ಉಪರತವಾಗುವುದರಿಂದ ಎಚ್ಚರಗೊಳ್ಳುವಲ್ಲಿ ಜೀವನಿಗೆ ಏನೂ ಸ್ವಾತಂತ್ರ್ಯವಿಲ್ಲ. ಎಚ್ಚರ ಹೊಂದುವ ಇಚ್ಛೆ ಅವನಿಗಿಲ್ಲದಿದ್ದರೂ ಎಚ್ಚರವಾಗುತ್ತದೆ. ಆದರಿಂದ ಅದು ಭಗವಂತನ ಇಚ್ಛೆ ಎನ್ನಬೇಕು. ಹೀಗೆ ನಿಯಾಮಕನಾದ ಭಗವಂತನ ಅಸ್ತಿತ್ವವನ್ನು ಊಹಿಸಿ ತಿಳಿಯಬಹುದೆಂದು ಹರಿವಂಶದಲ್ಲಿ ಹೇಳಿದೆ. ೩೯೬

೪.೨೭ ಶ್ರೀಹರಿಯ ವಿಮಲಾದಿ ನವಶಕ್ತಿಗಳು ಪ್ರತಿಯೊಂದೂ ಜ್ಞಾನ ಇಚ್ಛಾ ಕ್ರಿಯಾ ಎಂದು ಮೂರು ಬಗೆಯವು. ಶ್ರೀಹರಿ ದಶ ಇಂದ್ರಿಯಗಳು ಮನಸ್ಸು ಬುದ್ಧಿ ಮಹತ್ತತ್ತ್ವ ಪ್ರಕೃತಿಗಳೆಂದು ಹದಿನಾಲ್ಕು ತತ್ತ್ವಗಳಿಗಿಂತ ಉತ್ತಮನಾದ್ದರಿಂದಲೂ, ಐದು ಮನಸಿನ ಪ್ರಭೇದಗಳೊಂದಿಗೆ ದಶ ಇಂದ್ರಿಯಗಳೆಂದು ಹದಿನೈದು ತತ್ತ್ವಗಳಿಗೆ ನಿಯಾಮಕನಾದ್ದರಿಂದಲೂ 'ಪಾಂಚದಶ್ಯ'ನೆನಿಸುತ್ತಾನೆ ಎಂದು ತಂತ್ರನಿರ್ಣಯದಲ್ಲಿ ಹೇಳಿದೆ. ೩೯೯

೪.೨೮ ಹರಿಯ ಆನಂದಾದಿ ಗುಣಗಳಿಗೆ ಪರಿಮಿತಿ ಇಲ್ಲ. ಪರಿಮಿತಿಯೆ ವಿಶೇಷವೆನಿಸುತ್ತದೆ. ಆದರಿಂದ ಹರಿ ಸರ್ವವಿಶೇಷರಹಿತ. ಅಪ್ರಾಕೃತಸ್ವರೂಪನಾದ್ದರಿಂದ ಮಾಯಾರಹಿತ. ಪ್ರಪಂಚದಲ್ಲಿ ಎಲ್ಲಕ್ಕೂ ಹರಿಯ ರೂಪಕ್ಕೆ ಸದೃಶವಾದ ರೂಪವೇ ಇರುವುದರಿಂದ ಹರಿ 'ಸರ್ವರೂಪ'ನೆನಿಸುತ್ತಾನೆ. ಎಲ್ಲ ಶಬ್ದಗಳೂ ಮುಖ್ಯವಾಗಿ ಹರಿಯ ನಾಮಗಳೇ ಆದ್ದರಿಂದ ಅವನು 'ಸರ್ವನಾಮ' ಎಂದು ತಂತ್ರನಿರ್ಣಯದಲ್ಲಿ ಹೇಳಿದೆ. ೪೦೨

೪.೨೯ ಲೋಕವಿಲಕ್ಷಣನಾದ್ದರಿಂದ ಲೌಕಿಕಪ್ರಮಾಣಶಬ್ದಗಳಿಂದ ಹರಿ ಉಕ್ತನಾಗುವುದಿಲ್ಲ. ಲೌಕಿಕ ಪ್ರಮಾಣವಾದ ಬುದ್ಧಿಗೂ ಗೋಚರಿಸುವುದಿಲ್ಲ. ವೇದಪ್ರತಿಪಾದ್ಯನಾದ್ದರಿಂದ ವೇದಾನುಸಾರಿಯಾಗಿ ಸರ್ವಶಬ್ದವಾಚ್ಯನೂ ಆಗುತ್ತಾನೆ. ವೇದಾನುಸಾರಿಯಾದ ಸರ್ವಪ್ರಮಾಣಗಳಿಗೆ ಗೋಚರನೂ ಆಗುತ್ತಾನೆ. ಆದರಿಂದ ವಿರೋಧವಿಲ್ಲವೆಂದು ವ್ಯೋಮಸಂಹಿತೆ ಹೇಳಿದೆ. ೪೦೫

೪.೩೦ ಎಲ್ಲ ವಿಭಕ್ತ್ಯರ್ಥಗಳಿಗೂ ಕಾರಣ ವಿಷ್ಣುವೆ. ಎಲ್ಲಕ್ಕೂ ಅಸ್ತಿತ್ವವನ್ನು ನೀಡುವವನು ಅವನೊಬ್ಬನೇ ಆದ್ದರಿಂದ ಅವನು ಏಕನೆನಿಸುತ್ತಾನೆ. ಅಸದೃಶನಾದ್ದರಿಂದ

ಅನನ್ಯ. ತನ್ನ ರೂಪಗುಣಕ್ರಿಯಾದಿಗಳಿಂದ ತಾನು ಬೇರೆಯಲ್ಲದವನಾದ್ದರಿಂದಲೂ ಅವನು 'ಏಕ' ಎಂದು ಭವಿಷ್ಯತ್ಪರ್ವದಲ್ಲಿ ಹೇಳಿದೆ. ೪೦೮

೪.೩೨ ಒಬ್ಬನೇ ಪರಮಾತ್ಮನ ವಿಷಯದಲ್ಲಿ, ಅವನಿಲ್ಲವೆಂದು ಅಸುರರೂ, ಇದ್ದಾನೆ ಎಂದು ದೇವತೆಗಳೂ ವಾದಿಸುತ್ತಾರೆ. ಅವರ ಈ ಎರಡೂ ಬಗೆಯ ಬುದ್ಧಿಗಳಿಗೂ ಅವನೇ ಕಾರಣ. ಮತ್ತು ಆ ಬುದ್ಧಿಗಳಿಗೆ ತಕ್ಕ ಫಲವನ್ನೂ ಅವನೇ ಕೊಡುತ್ತಾನೆ ಎಂದು ಭವಿಷ್ಯತ್ಪರ್ವದಲ್ಲಿ ಹೇಳಿದೆ. ೪೧೦

೪.೩೩ ಪರಮಾತ್ಮನಿಗೆ 'ಹೆಸರಿಲ್ಲ, ಆಕಾರವಿಲ್ಲ' ಎಂದರೆ ಅವನ ಅವತಾರರೂಪಗಳ 'ಕಂಸಾರಿ' ಮುಂತಾದ ಹೆಸರಾಗಲಿ ಕಂಸವಧ ಮುಂತಾದ ಕರ್ಮಗಳಾಗಲಿ ಮೂಲರೂಪದಲ್ಲಿ ಜನರಿಗೆ ಕಾಣುವುದಿಲ್ಲವಾದ್ದರಿಂದ ಇಲ್ಲವೆಂದು ವ್ಯವಹಾರ. ಮೂಲರೂಪದಲ್ಲಿ ಬೇರೆಯೇ ನಾಮಗಳಿದ್ದರೂ ಅವುಗಳ ಅರ್ಥ ಲೋಕವಿಲಕ್ಷಣ. ಬೇರೆಯೆ ಆಕಾರಗಳಿದ್ದರೂ ಅವು ಜನರಿಗೆ ಅವ್ಯಕ್ತವಾಗಿವೆ. ಹೀಗಾಗಿ ಅವನಿಗೆ ನಾಮರೂಪಗಳಿವೆ, ಇಲ್ಲ ಎರಡೂ ಸರಿ ಎಂದು ಪ್ರಕಾಶಸಂಹಿತೆ ಹೇಳಿದೆ. ೪೧೪

೪.೩೪ ಶರೀರದಲ್ಲಿ ಸಂಚರಿಸುವ ಪ್ರಾಣವಾಯುವನ್ನು ಅಧಮರು ಶ್ವಾಸಮಾತ್ರ ಎನ್ನುವರು. ಮಧ್ಯಮರು ಅದರ ಸ್ವರೂಪವನ್ನು ನಿರ್ಣಯಿಸಲಾಗದು ಎನ್ನುವರು. ಉತ್ತಮರು ಪ್ರಾಣದೇವನೆನ್ನುವರು. ಹಾಗೇ ಶರೀರದಲ್ಲಿರುವ ಪರಮಾತ್ಮನನ್ನು ಅಧಮರು ಜೀವನೆಂದೂ ಮಧ್ಯಮರು ಏನೆಂದು ಹೇಳಲಾಗದೆಂದೂ ಉತ್ತಮರು ಜೀವವಿಲಕ್ಷಣಗುಣಪೂರ್ಣತತ್ತ್ವವೆಂದೂ ಅವರವರ ಬುದ್ಧಿಗನುಸಾರವಾಗಿ ಹೇಳುತ್ತಾರೆ ಎಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ. ೪೧೭

೪.೪೫ ಶ್ರೀಹರಿಯ 'ವಿ'ವಿಶೇಷವಾದ 'ಭೂತಿ'ಗೆ ಅಂದರೆ ಅಭಿವ್ಯಕ್ತಿಗೆ ಸ್ಥಾನಭೂತರಾದ್ದರಿಂದ ಬ್ರಹ್ಮಾದಿಗಳು ವಿಭೂತಿಗಳೆನಿಸುತ್ತಾರೆ. ಹರಿಯ ಮತ್ಸ್ಯಾದಿರೂಪಗಳೂ ಜೀವಾಂತರ್ಯಾಮಿರೂಪಗಳೂ 'ವಿ'ವಿಶೇಷವಾಗಿ, ಸರ್ವೋತ್ತಮವಾಗಿ 'ಭವ' ಇರುವವುಗಳಾದ್ದರಿಂದ ವಿಭವಗಳೆನಿಸುತ್ತವೆ ಎಂದು ತಂತ್ರನಿರ್ಣಯದಲ್ಲಿ ಉಕ್ತವಾಗಿದೆ. ೪೨೦

೪.೪೬ ತಪಸ್ಸು ವಿದ್ಯೆ ಕ್ರಿಯೆ ಮುಂತಾದವುಗಳ ಅಭಿಮಾನಿಗಳಾದ ರುದ್ರಪಾರ್ವತಿ ಇಂದ್ರಮುಂತಾದದೇವತೆಗಳು ಹರಿಯ ಹೃದಯ ಮುಂತಾದ ಅಂಗಗಳಲ್ಲಿ ನೆಲೆಸಿರುವುದರಿಂದ ಆ ಅಂಗಗಳಿಗೆ ತಪಸ್ಸು ವಿದ್ಯೆ ಕ್ರಿಯೆ ಮುಂತಾದ ನಾಮಗಳು ಎಂದು ಶಬ್ದನಿರ್ಣಯದಲ್ಲಿ ಹೇಳಿದೆ. ೪೨೧

೪.೪೭ ದಕ್ಷಪ್ರಜಾಪತಿ ತಪಸ್ಸಿನಿಂದ ಕಂಡ ಹರಿಯ ರೂಪ ಸೃಷ್ಟಿಗೆ ಮೊದಲೂ ಪ್ರಳಯಕಾಲದಲ್ಲಿ ಇದ್ದಿತು. ಅದಕ್ಕೆ ಲಯವಿಲ್ಲ. ಆದರೆ ಲಕ್ಷ್ಮೀದೇವಿ ಸೃಷ್ಟಿಕಾರ್ಯ ಮಾಡದಿರುವುದರಿಂದ, ಪ್ರಕೃತಿಯೂ ಸ್ಥೂಲರೂಪದಲ್ಲಿ ಇಲ್ಲದಿರುವುದರಿಂದ, ಅದನ್ನೇ ಅವರಿಗೆ ಲಯವೆನ್ನುವುದುಂಟು ಎಂದು ಮತ್ಸ್ಯಪುರಾಣದಲ್ಲಿ ಹೇಳಿದೆ. ೪೨೨

೪.೪೮ ಪರಮಾತ್ಮ ಅನಂತಗುಣ ಉಳ್ಳವನೂ ಹೌದು. ಗುಣದಿಂದ ಅನಂತನೂ ಹೌದು. ಗುಣಗಳು ಅಸಂಖ್ಯವಾದ್ದರಿಂದ 'ಅನಂತಗುಣಉಳ್ಳವನು' ಪ್ರತಿಯೊಂದು ಗುಣವೂ ಅನಂತ ಬಗೆಯಾದ್ದರಿಂದ 'ಗುಣದಿಂದ ಅನಂತ' ಎಂದು ತಂತ್ರಭಾಗವತದಲ್ಲಿ ಹೇಳಿದೆ. ೪೨೪

೮.೧೭ ನಾರಾಯಣವರ್ಮದಲ್ಲಿ ಸನತ್ಕುಮಾರಮುನಿ ಎಂದರೆ ಬ್ರಹ್ಮನ ಮಾನಸಪುತ್ರನಾದ ಒಬ್ಬ ಮುನಿಯಲ್ಲ. ಅವನಲ್ಲಿ ಆವಿಷ್ಟನಾದ ಸನತ್ಕುಮಾರ ಎಂಬ ಭಗವದ್ರೂಪ. ಅವನು ನನ್ನಲ್ಲಿ ಅಯೋಗ್ಯಕಾಮನೆ ಉಂಟಾಗದಂತೆ ಕಾಪಾಡಲಿ ಎಂದು ಪ್ರಾರ್ಥನೆ. ದೇವರ್ಷಿವರ್ಯ ಎಂದರೂ ನಾರದ ಮುನಿಯಲ್ಲ, ಐತರೇಯ ಮಹಿದಾಸ. ಅನ್ಯದೇವತೆಗಳನ್ನು ಸರ್ವೋತ್ತಮ ರೆಂದು ಪೂಜಿಸುವ, ವಿಷ್ಣುವಿಗೆ ಕರ್ಮಸಮರ್ಪಣೆ ಮಾಡದಿರುವ, ಮತ್ತು ಅವನನ್ನು ಸ್ಮರಿಸದಿರುವ ಎಲ್ಲ ಅಪರಾಧಗಳಿಂದ ಮಹಿದಾಸ ನನ್ನನ್ನು ಕಾಪಾಡಲಿ ಎಂದು ಪ್ರಾರ್ಥನೆ. ಇದು ತಂತ್ರಭಾಗವತದಲ್ಲಿ ಉಕ್ತವಾಗಿದೆ. ೪೩೦

೮.೩೧,೩೨ 'ಸದಸತ್' ಎಂದರೆ ಮೂರ್ತ-ಅಮೂರ್ತ, ಕಾರ್ಯಕಾರಣ ಪ್ರಪಂಚವೆಲ್ಲವೂ ಭಗವಂತನಲ್ಲ. ಭೂಷಣ ಆಯುಧ ಮುಂತಾದುವು ಭಗವಂತನ ಆವಿರ್ಭಾವಗಳೂ ಅಲ್ಲ. ಎಲ್ಲೆಡೆ ಭಗವಂತ ನಿಯಾಮಕನಾಗಿ ನೆಲೆಸಿದ್ದಾನೆ. ಈ ಸತ್ಯವನ್ನು ತಿಳಿದರೆ ಭಗವಂತನೊಲಿದು ಕಾಪಾಡುತ್ತಾನೆ ಎಂದು ತಂತ್ರಭಾಗವತ ಹೇಳಿದೆ. ೪೩೨

೮.೩೬ ಮಂತ್ರಜಪಿಸಿದರೂ ಫಲ ಬಾರದಿರಬಹುದು. ಅದಕ್ಕೆ ಕಾರಣ, ಗುರುಶಿಷ್ಯರಿಬ್ಬರೂ ಅಥವಾ ಅವರಲ್ಲಿ ಯಾರಾದರೊಬ್ಬರು ಅಯೋಗ್ಯ ರಿರಬಹುದು. ಗುರುಸೇವೆ ಪೂರ್ತಿಯಾಗದೆ ಗುರ್ವನುಗ್ರಹವಾಗ ದಿದ್ದಿರಬಹುದು. ಮಂತ್ರಜಪವೂ ಗುರುವಿನ ಆದೇಶದಂತೆ ನಡೆಯ ದಿದ್ದಿರಬಹುದು, ಪ್ರಸನ್ನಚಿತ್ತನಾದ ಶಿಷ್ಯನಿಗೆ ಪ್ರಸನ್ನಚಿತ್ತನಾದ ಗುರುವಿನಿಂದ ಉಪದೇಶ ಬಾರದಿದ್ದಿರಬಹುದು, ಹೊರತು, ಮಂತ್ರಕ್ಕೇ ಶಕ್ತಿ ಇಲ್ಲ ಎನ್ನಬಾರದು ಎಂದು ತಂತ್ರಸಾರದಲ್ಲಿ ಉಕ್ತವಾಗಿದೆ. ೪೩೪

೯.೨೦ ಅಂತಕ ಎಂದರೆ ಯಮನಲ್ಲ. ಜಡವಾದ ಕಾಲವೂ ಅಲ್ಲ, ಶ್ರೀಭೂದುರ್ಗಾನಾಮಕಳಾದ ಲಕ್ಷ್ಮಿ. ಎಲ್ಲ ದೇವತೆಗಳೂ ಅವಳಿಗೆ ಅಂಜುತ್ತಾರೆ. ಅವಳೂ ಹರಿಯ ಪತ್ನಿಯಾದ್ದರಿಂದ ಅವನ ವಶಳಾಗಿದ್ದು ಅಂಜುವಳಂತೆ ನಡೆದುಕೊಳ್ಳುತ್ತಾಳೆ ಎಂದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿ ಉಕ್ತವಾಗಿದೆ. ೪೩೭

೯.೨೩. ಜಡವಾದ ಪ್ರಳಯಸಮುದ್ರ ಮತ್ತು ಬಿರುಗಾಳಿಗಳಿಗೆ ಜೀವೋತ್ತಮನಾದ ಬ್ರಹ್ಮ ಅಂಜುವುದಿಲ್ಲ. ಭಯಕ್ಕೆ ಕಾರಣವಾದ ಅಜ್ಞಾನವೂ ಸರ್ವಜ್ಞನಾದ ಆತನಿಗೆ ಇಲ್ಲ. ಆದರೂ ಪ್ರಳಯಸಮುದ್ರ ಬಿರುಗಾಳಿ ಎಲ್ಲವೂ ಲಕ್ಷ್ಮೀಸ್ವರೂಪವಾದ್ದರಿಂದ ಬ್ರಹ್ಮ ಭಯಪಟ್ಟ. ಆತ ಸರ್ವಜ್ಞನಾದರೂ ಕ್ಷಣಾರ್ಧ ಕಾಲದಲ್ಲಿ ಅತ್ಯಲ್ಪವಾಗಿ ಭಯ ಶೋಕಾದಿಗಳು ಅವನಿಗೂ ಬರುತ್ತವೆ. ಈ ಭಯ ಶೋಕಾದಿಗಳು ಭಗವಂತನ ಅನುಗ್ರಹಕ್ಕೇ ಕಾರಣವಾಗುತ್ತವೆ. ನಾಲ್ಕು ಬಾರಿ ಅಜ್ಞಾನ, ಎರಡು ಬಾರಿ ಭಯ, ಎರಡು ಬಾರಿ ಶೋಕ ಹೊರತು ಇನ್ನೆಂದೂ ಅವನಿಗೆ ಅಜ್ಞಾನಾದಿಗಳಿಲ್ಲ ಎಂದು ಬ್ರಹ್ಮತರ್ಕ ಹೇಳಿದೆ. ೪೩೮

೯.೨೪ 'ನಾವು ಸ್ವತಂತ್ರರೆಂದು ಅಭಿಮಾನ ಪಡುವುದರಿಂದ, ನಿನ್ನ ಸ್ವರೂಪದರ್ಶನ ನಮಗೆ ಸಿಗುತ್ತಿಲ್ಲ' ಎಂದು ದೇವತೆಗಳು ಭಗವಂತನಲ್ಲಿ ಹೇಳಿಕೊಳ್ಳುತ್ತಾರೆ. ಆದರೆ ಈ ಸ್ವಾತಂತ್ರ್ಯಾಭಿಮಾನ ಆಗಾಗ ಸ್ವಲ್ಪಕಾಲ ಮಾತ್ರ ದೇವತೆಗಳಿಗೆ ಬರುತ್ತದೆ. ಅದೂ ಅಸುರಾವೇಶದಿಂದ. ಬ್ರಹ್ಮನಿಗೆ ಅದೂ ಸರ್ವಥಾ ಇಲ್ಲ. ಉಳಿದವರಿಗೆ ತಾರತಮ್ಯಾನುಸಾರ ಕೆಳಗಿನವರಿಗೇ ಹೆಚ್ಚಾಗಿ ಬರುತ್ತದೆ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೪೪೧

೯.೨೮ 'ಶ್ರೀವತ್ಸಕೌಸ್ತುಭೌ ವಿನಾ' ಎಂದರೆ ಹರಿಯನ್ನು ಸುತ್ತುವರಿದು ನಿಂತಿದ್ದ ಹದಿನಾರು ಮಂದಿ ದಿವ್ಯಪುರುಷರು ಶ್ರೀವತ್ಸಕೌಸ್ತುಭ ರಹಿತರಾಗಿದ್ದರೆಂದರ್ಥವಲ್ಲ. ಲಕ್ಷ್ಮೀಬ್ರಹ್ಮರನ್ನೂ ಮೀರಿ ಅವರಿಗಿಂತ ಶ್ರೇಷ್ಠರಾಗಿದ್ದರೆಂದರ್ಥ. ಅವರು ಹರಿಯ ವಾಸುದೇವಾದಿ ಮತ್ತು ಕೇಶವಾದಿ ಎಂದು ಹದಿನಾರು ಮೂರ್ತಿಗಳೇ ಹೊರತು ಅನ್ಯರಲ್ಲ. ೪೪೩

೯.೩೦ ವಯಸ್ಸೆಂದರೆ 'ವಯ ಬಂಧನೇ' ಧಾತುನಿಷ್ಪನ್ನಶಬ್ದವಾದ್ದರಿಂದ, ಎಲ್ಲರನ್ನೂ ತನ್ನ ಆಜ್ಞೆಯಲ್ಲಿ ಬಂಧಿಸುವ ಸ್ವತಂತ್ರನಾದ ಪರಮಾತ್ಮ ಎಂದರ್ಥ ತಂತ್ರಸಾರಗ್ರಂಥದಲ್ಲಿ ಉಕ್ತವಾಗಿದೆ. ವಯಧಾತುವಿಗೆ ಬಂಧನಾರ್ಥದಲ್ಲಿ ಪ್ರಯೋಗ ಋಗ್ವೇದದಲ್ಲಿಯೂ ಕಂಡಿದೆ. ೪೪೬

೯.೩೧ ದೇವಲೋಕ ಪಿತೃಲೋಕ ನರಲೋಕಗಳಿಗಿಂತ ಶ್ರೇಷ್ಠವಾದ ವಿಷ್ಣುಲೋಕ ಅಜ್ಞಮಾನವನಿಗೆ ಸಿಗಲಾರದು. ಜ್ಞಾನಿಗಳಿಗೆ ಮಾತ್ರ ಅದು ಲಭ್ಯ ಎಂದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿ ಉಕ್ತವಾಗಿದೆ. ೪೪೮

೯.೩೩ ಪರಮಾತ್ಮ ಸ್ವತಂತ್ರನಾದರೂ ಅಚಿಂತ್ಯಶಕ್ತಿಯಿಂದ ತ್ರಿಗುಣಬದ್ಧನಾಗಿ ಸತ್ಕರ್ಮ ದುಷ್ಕರ್ಮಗಳಿಂದ ಸುಖದುಃಖ ಪಡೆಯಬಹುದೆಂದು ಕೆಲವರು ಭ್ರಮಿಸುತ್ತಾರೆ. ವಸ್ತುತಃ ಪರಮಾತ್ಮ ತ್ರಿಗುಣಬದ್ಧನಾಗುತ್ತಾನೆ ಎನ್ನುವಲ್ಲಿ ಪ್ರಮಾಣವಿಲ್ಲ. ಇರುತ್ತಿದ್ದರೆ ಅದನ್ನು ಅಚಿಂತ್ಯಶಕ್ತಿಯ ಬಲದಿಂದ ಕೂಡಿಸ ಬಹುದಾಗಿತ್ತು. ತ್ರಿನಯನ ಉಗ್ರಮುಂತಾದ ನಾಮಗಳು ಮುಖ್ಯವಾಗಿ ನೃಸಿಂಹ ರೂಪಿಯಾದ ವಿಷ್ಣುವಿನ ನಾಮಗಳೆಂದು ಶಬ್ದನಿರ್ಣಯದಲ್ಲಿ ಹೇಳಿದೆ. ಸರ್ವಜೀವರ ಹೃದಯಾಂತರ್ಗತವಾದ ಸಾಧಾರಣವಿಭೂತಿರೂಪ ಅಸುರ ರಲ್ಲಿಯೂ ಇದೆ. ಅದರಿಂದ ಅವರೂ ವಿಷ್ಣುವಿನ ವಿಭೂತಿಗಳೆನಿಸುತ್ತಾರೆ.೪೫೦

೯.೩೫ ನಿರುಪಕ್ರಮ ಎಂಬುದೊಂದು ಹರಿನಾಮವೆಂದು ಶಬ್ದನಿರ್ಣಯದಲ್ಲಿ ಉಕ್ತವಾಗಿದೆ. ಶ್ರಮದಾಯಕವಾದ ಪ್ರಯತ್ನವಿಲ್ಲದೆಯೆ ಸೃಷ್ಟ್ಯಾದಿಕಾರ್ಯ ಗಳನ್ನು ಮಾಡುವವನೆಂದರ್ಥ. ೪೫೯

೯.೩೯ ದೇವತೆಗಳು ಬಯಸಿದ್ದ ವೃತ್ರಹತ್ಯೆ ಭಗವಂತನಿಗೂ ಇಷ್ಟವೇ ಆಗಿತ್ತು. ಹೀಗೇ ಭಗವಂತನಿಗೆ ಇಷ್ಟವಾದುದನ್ನೇ ದೇವತೆಗಳು ಬಯಸುತ್ತಾರೆ ಹೊರತು ಅವನಿಗೆ ಇಷ್ಟವಲ್ಲದ ನಿಷಿದ್ಧಕಾಮನೆಗಳನ್ನು ದೇವತೆಗಳು ಮಾಡುವುದೇ ಇಲ್ಲ. ಮಾಡಿದರೂ ಅವನ್ನು ಭಗವಂತ ಪೂರೈಸುವುದಿಲ್ಲ. ಏಕೆಂದರೆ ರೋಗಿ ಅಪಥ್ಯವನ್ನು ಬಯಸಿದರೂ ವೈದ್ಯ ಅದನ್ನು ಕೊಡುವುದಿಲ್ಲ. ಹಾಗೇ ಭಗವಂತ ಭಕ್ತರಿಗೆ ವೈದ್ಯನಂತೆ ಹಿತಕಾರಿ ಎಂದು ತಂತ್ರಭಾಗವತದಲ್ಲಿ ಹೇಳಿದೆ. ೪೬೦

೯.೪೧ ವಜ್ರಾಯುಧ ನಿರ್ಮಾಣ ಮಾಡಲು ದಧೀಚ ಮುನಿಯ ಮೈ ಎಲುಬನ್ನು ದೇವತೆಗಳು ಬೇಡುತ್ತಾರೆ. ಹೀಗೆ ಅವರು ಮುನಿಗಳನ್ನು ಬೇಡುವುದು ಅಶಕ್ತಿಯಿಂದಲ್ಲ. ಹರಿಯ ಆಜ್ಞೆಯಿಂದ ಮತ್ತು ಮುನಿಗಳಿಗೆ ಕೀರ್ತಿ ತಂದು ಕೊಡುವ ಉದ್ದೇಶದಿಂದ ಅವರು ಹಾಗೆ ಮಾಡುತ್ತಾರೆ ಎಂದು ತಂತ್ರಭಾಗವತದಲ್ಲಿ ಉಕ್ತವಾಗಿದೆ. ೪೬೨

೧೦.೬ ದಾನಿಯ ಸಂಕಟವನ್ನು ಯಾಚಕ ಅರಿತುಕೊಳ್ಳದಿದ್ದರೂ ಯಾಚಕನ ಸಂಕಟವನ್ನು ದಾನಿ ಅರಿತುಕೊಳ್ಳುತ್ತಾನೆ ಎಂದು ದೇವತೆಗಳು ದೈನ್ಯದಿಂದ ದಧೀಚಮುನಿಯಲ್ಲಿ ಬೇಡುವುದು ತಂದೆ ಮಗುವಿನಲ್ಲಿ ಬೇಡುವಂತೆ. ಅದು ಅವರ ಮಹತ್ವಕ್ಕೆ ಏನೂ ಕುಂದು ತರುವುದಿಲ್ಲ ಎಂದು ತಂತ್ರಮಾಲಾ ಗ್ರಂಥದಲ್ಲಿ ಹೇಳಿದೆ. ೪೬೪

೧೨.೧೧ ಪುರುಷ ಆತ್ಮ ವ್ಯಕ್ತ ಆಶಯಗಳೆಂದರೆ ಬ್ರಹ್ಮ ವಾಯು ಶೇಷ ಇಂದ್ರರು. ಬ್ರಹ್ಮಾದಿಗಳಿಗೆ ಅಂತರ್ಯಾಮಿಯಾದ ಶ್ರೀಹರಿಯನ್ನು ಬ್ರಹ್ಮಾದಿಗಳಂತೆಯೇ ಒಬ್ಬ ಜೀವನೆಂದು ತಿಳಿಯುವ ವ್ಯಕ್ತಿಯ ಮುಖಾವಲೋಕನವೂ ನಿಷಿದ್ಧ. ೪೬೯

೧೨.೩೩ 'ವಜ್ರಾಯುಧ ಮುನ್ನೂರ ಅರವತ್ತು ದಿನಗಳಲ್ಲಿ ವೃತ್ರನ ಶಿರಶ್ಛೇದ ಮಾಡಿತು' ಎಂದರೆ ಇದರ ವಿವರಣೆಯನ್ನು ಅಗ್ನಿಪುರಾಣ ಹೀಗೆ ಹೇಳಿದೆ. 'ಹಸಿಯಾದ ಇಲ್ಲವೆ ಒಣಗಿದ ಪದಾರ್ಥದಿಂದ ನನ್ನನ್ನು ನೀನು ಕೊಲ್ಲಕೂಡದು' ಎಂದು ಮುಂತಾಗಿ ಶರತ್ತಿನ ಮೇಲೆ ವೃತ್ರ ಇಂದ್ರನೊಂದಿಗೆ ಸಂಧಾನಕ್ಕೆ ಒಪ್ಪಿದ. ಕಡಿದುಹೋದ ಎರಡು ತೋಳುಗಳನ್ನು ತಿರುಗಿ ಪಡೆದ. ಒಂದು ವರ್ಷಕಾಲ ಇಂದ್ರನೊಡನೆ ಕೈಕೈ ಹಿಡಿದು ಸ್ನೇಹದಿಂದ ವಿಹಾರ ಮಾಡಿದ. ಬಳಿಕ ಇಂದ್ರ ಒಂದು ದಿನ, ಸಮುದ್ರದ ನೊರೆ ಹಸಿಯೂ ಅಲ್ಲ ಒಣಗಿದ್ದೂ ಅಲ್ಲ ಎಂದು, ಅದರಲ್ಲಿ ವಜ್ರಾಯುಧದ ತೇಜಸ್ಸನ್ನು ಪ್ರವೇಶಗೊಳಿಸಿ, ಆ ನೊರೆಯಿಂದಲೇ ವೃತ್ರನ ಶಿರಶ್ಛೇದ ಮಾಡಿದ' ಎಂದು. ೪೭೧

೧೩.೧೧ ಇಂದ್ರ ಅಪರೋಕ್ಷಜ್ಞಾನಿ. ಅಪರೋಕ್ಷಜ್ಞಾನಿಗಳಿಗೆ ಸ್ವೋತ್ತಮರಲ್ಲಿ ಮಾಡುವ ಅಪರಾಧ ಹೊರತು ವೃತ್ರಹತ್ಯೆಯಂಥ ಪಾಪ ಯಾವುದೂ ಅಂಟುವುದಿಲ್ಲ ಎಂದು ಬ್ರಹ್ಮಸೂತ್ರದಲ್ಲಿ ಸಿದ್ಧಾಂತ ಮಾಡಲಾಗಿದೆ. ಆದರೆ ಪ್ರಾರಬ್ಧಕರ್ಮದಿಂದ ದುಃಖ ಬರುವುದಕ್ಕೆ ಮುನ್ಸೂಚನೆಯಾಗಿ ವೃತ್ರಹತ್ಯೆಯಂಥ ಕರ್ಮ ಘಟಿಸುತ್ತದೆ. ದುಃಖಾನುಭವದಿಂದಲೇ ಪ್ರಾರಬ್ಧನಾಶ. ಪ್ರಾಯಶ್ಚಿತ್ತದಿಂದ ಆ ದುಃಖಾನುಭವ ಕಡಿಮೆಯಾಗಬಹುದು. ೪೭೩

೧೪.೫ ದೇವತೆಗಳು ಒಂಬತ್ತು ಕೋಟಿ, ಋಷಿಗಳು ನೂರು ಕೊಟಿ. ಇವರೆಲ್ಲರೂ ಹರಿಯ ಭಕ್ತರೇ ಆದರೂ ಅವರಲ್ಲಿ ಪರಮಭಕ್ತರು ಅತಿವಿರಳ ಎಂದು ತಂತ್ರಭಾಗವತದಲ್ಲಿ ಹೇಳಿದೆ. ಆದರಿಂದ ರಣರಂಗದ ನಡುವೆಯೂ ವೃತ್ರಾಸುರ ಪರಮಭಕ್ತಿಯನ್ನು ತೋರಿದ್ದು ಆಶ್ಚರ್ಯಕರ. ೪೭೬

೧೪.೫೩-೫೭ ರಾಣಿ ಕೃತದ್ಯುತಿ ಸೃಷ್ಟಿಕರ್ತನಾದ ಬ್ರಹ್ಮನನ್ನು ಮೂರ್ಖನೆಂದು ಹಳಿಯುವುದು ಕೇವಲ ಪುತ್ರಶೋಕ ಪರವಶತೆಯಲ್ಲಿ ಮಾಡುವ ಪ್ರಲಾಪ. ದುಃಖ ಕೋಪ ಅನುರಾಗಗಳ ಆವೇಶದಲ್ಲಿ ಸಜ್ಜನರ ಬಾಯಿಯಿಂದಲೂ ನಿರರ್ಥಕವಾದ ಮಾತು ಹೊರಡಬಹುದು ಎಂದು ಶಬ್ದನಿರ್ಣಯದಲ್ಲಿ ಹೇಳಿದೆ. ೪೭೮

೧೫.೧೫-೧೯ ಭೂಮಿಯ ಮೇಲೆ ಜ್ಞಾನದ ಬೆಳಕನ್ನು ನೀಡುತ್ತ ಸಂಚರಿಸುವ ಋಷಿಗಳಲ್ಲಿ ಕೆಲವರು ಸಿದ್ಧೇಶರು, ಅಂದರೆ ಮುಕ್ತರಿಗೆ ಒಡೆಯರು, ವ್ಯಾಸ ಕಪಿಲ ಪರಶುರಾಮ ಮುಂತಾದವರು. ಉಳಿದವರು ಅವರ ಭಕ್ತರು. ಅದರಲ್ಲಿಯೂ ಕೆಲವರು ಮಾತ್ರ ದುರ್ವಾಸ ಶುಕ ಮುಂತಾದವರು ಹರಿಗೆ ಬಹಳ ಅಂತರಂಗಭಕ್ತರು, ನಾರಾಯಣಪರಾಯಣರು ಎಂದು ತಂತ್ರಭಾಗವತದಲ್ಲಿ ಹೇಳಿದೆ. ೪೮೧

೧೫.೨೫-೨೮ ಹೆಂಡತಿ ಮಕ್ಕಳು ಮುಂತಾದ ವಿಷಯಭೋಗಪ್ರಪಂಚ 'ಮನೋಭವ'ವೆಂದರೆ ಮನಸಿನ ಕಲ್ಪನೆ, ಮಿಥ್ಯಾ, ಅಲ್ಲ ವಿಷಯಾಸೆಗಳನ್ನು ಹೊತ್ತ ಮನಸಿನಿಂದ ಕಾಮ್ಯಕರ್ಮಗಳ ಮೂಲಕ ವಿಷಯಪ್ರಪಂಚ ಉತ್ಪನ್ನವಾಗುವುದರಿಂದ 'ಮನೋಭವ' ಅನಿತ್ಯ ಎಂದು ನಾರದಪುರಾಣದಲ್ಲಿ ಉಕ್ತವಾಗಿದೆ. ೪೮೩

೧೫.೨೯ ಪಂಚಭೂತದ್ರವ್ಯಗಳಿಂದಾಗಿರುವ ಶರೀರ ದ್ರವ್ಯಾತ್ಮಕ. ಜ್ಞಾನವನ್ನು ಉಂಟುಮಾಡುವುದರಿಂದ ಜ್ಞಾನೇಂದ್ರಿಯಗಳು ಜ್ಞಾನಾತ್ಮಕ. ಕರ್ಮವನ್ನು ಉಂಟುಮಾಡುವುದರಿಂದ ಕರ್ಮೇಂದ್ರಿಯಗಳೂ ಕರ್ಮಾತ್ಮಕವೆನಿಸುತ್ತವೆ ಎಂದು ಬ್ರಹ್ಮವೈವರ್ತಪುರಾಣದಲ್ಲಿ ಹೇಳಿದೆ. ಕಾರ್ಯಕಾರಣಗಳನ್ನು ಒಂದೇ ಶಬ್ದದಿಂದ ಹೇಳುವುದುಂಟೆಂದು ಶಬ್ದನಿರ್ಣಯ ಹೇಳಿದೆ. ೪೮೬

೧೫.೩೦ ಜೀವನಿಗೆ ಬರುವ ಶರೀರಾದಿಗಳು ಅವನಿಗೆ ಶಾಶ್ವತವಲ್ಲ. ಏಕೆಂದರೆ ಅವು 'ದ್ವೈತ'ವೆನಿಸಿವೆ. ಹೇಗೆಂದರೆ ಸ್ವತಂತ್ರನಾದ್ದರಿಂದ ಹರಿ 'ಏಕ'ನೆನಿಸುತ್ತಾನೆ. ಪರತಂತ್ರನಾದ್ದರಿಂದ ಜೀವ 'ದ್ವಿ' ಎನಿಸುತ್ತಾನೆ. 'ದ್ವಿ' ಎನಿಸಿದ ಜೀವನು ಸಂಪಾದಿಸಿದ್ದು 'ದ್ವೈತ' ಎಂದು ಶಬ್ದನಿರ್ಣಯದಲ್ಲಿ ಹೇಳಿದೆ. ೪೮೭

೧೫.೩೬ ರುದ್ರಾದಿಗಳು ಶೇಷಾಂತರ್ಗತ ಹರಿಯ ಉಪಾಸನೆಯಿಂದ ಹರಿಯ ಮಹಿಮೆಯನ್ನು ಪಡೆದರೆನ್ನುವುದು ರುದ್ರಾದಿಗಳು ಪಡೆದ ಅವರದೇ ಮಹಿಮೆ ಹರಿಯ ಅಧೀನ ಎನ್ನುವ ಅಭಿಪ್ರಾಯದಿಂದ. ಮತ್ತು ರುದ್ರಾದಿಗಳು ಮೋಕ್ಷದಲ್ಲಿ ಪಡೆದ ಮಹಿಮೆ ಅವರು ಸಂಸಾರದಲ್ಲಿ ಪಡೆದಿದ್ದ ಮಹಿಮೆಗೆ ಹೋಲಿಸಿದರೆ ಅನುಪಮ, ಅನಧಿಕ. ಹರಿಯ ಮಹಿಮೆಗೆ ಹೋಲಿಸಿದರೂ ಅದಕ್ಕೆ ಸದೃಶವೂ ಅಲ್ಲ, ಅಧಿಕವೂ ಅಲ್ಲವಾದ್ದರಿಂದ ಅನುಪಮ,ಅನಧಿಕವೇ ಆಗಿದೆ, ಹೊರತು ಹರಿಯ ಅನುಪಮವಾದ ಮಹಿಮೆ ಅನ್ಯರಿಗೆ ಎಂದೂ ಸಿಗಲಾರದೆಂದು ತಂತ್ರಭಾಗವತದಲ್ಲಿಯೂ ಸ್ಕಂದಪುರಾಣದಲ್ಲಿಯೂ ಉಕ್ತವಾಗಿದೆ. ೪೮೭

೧೬.೪.೭.೯ 'ಏಷ ನಿತ್ಯಃ' ಎಂದರೆ ಪರಮಾತ್ಮ ಜೀವರಿಗೆ ಶಾಶ್ವತವಾಗಿ ತಂದೆ ತಾಯಿ ಬಂಧು ಮಿತ್ರ ಎಲ್ಲವೂ ಆಗಿದ್ದಾನೆ ಎಂದರ್ಥ. ಅವನು ಜೀವರಿಗೆ ಶರೀರಾದಿಗಳನ್ನು ನಿರ್ಮಿಸಿ ಕೊಟ್ಟು ಅವರನ್ನು ಕಾಪಾಡಲು ತಾನೂ ತನ್ನನ್ನು ಅವತಾರ ರೂಪಗಳಿಂದ ಪ್ರಾದುರ್ಭಾವಗೊಳಿಸುತ್ತಾನೆ. ಅದನ್ನೇ 'ಆತ್ಮಾನಂ ಸೃಜತೇ' ಎಂದು ಭಾಗವತ ಹೇಳುತ್ತಿದೆ. ೪೯೨

೧೬.೧೧ 'ನಾದತ್ತ ಆತ್ಮಾ ಹಿ ಗುಣಂ' ಎಂದರೆ, ಪರಮಾತ್ಮ ಜೀವರಿಗೆ ಶರೀರವನ್ನು ಸೃಷ್ಟಿಮಾಡಿದರೂ ಆ ಕರ್ಮದ ಶುಭಫಲವನ್ನು ಮಾತ್ರ ಲೀಲೆಯಿಂದ ಸ್ವೀಕರಿಸುತ್ತಾನೆ. ಹೀಗಾಗಿ ಅವನು ಭೋಕ್ತನೂ ಹೌದು, ಆಗ ಅವನ ಆನಂದದಲ್ಲಿ ವೃದ್ಧಿ ಉಂಟಾಗುವುದಿಲ್ಲವಾದ್ದರಿಂದ ಅಭೋಕ್ತನೂ ಹೌದು. ಇದು ಅವನ ಅಚಿಂತ್ಯಶಕ್ತಿಯ ಮಹಿಮೆ. ೪೯೪

೧೬.೨೧ ಉಪಾಸಕನ ಮನಸ್ಸು ಇಂದ್ರಿಯಗಳು ಉಪರತವಾದಾಗ ಭಗವಂತ ತೋರುತ್ತಾನೆ ಎಂದರೆ ಉಪಾಸಕನ ಜಡವಾದ ಬಾಹ್ಯ ಮನ ಇಂದ್ರಿಯಗಳು ಉಪರತವಾದಾಗ ಅವನ ಸ್ವರೂಪಭೂತ ಚಿನ್ಮಯ ಮನಇಂದ್ರಿಯಗಳಿಗೆ ಭಗವಂತ ತೋರುತ್ತಾನೆ ಎಂದರ್ಥ. ೪೯೫

೧೬.೨೨ 'ಮೃಣ್ಮಯೇಷ್ವಿವ ಮೃಜ್ಜಾತಿಃ' ಎಂಬ ದೃಷ್ಟಾಂತದ ಅಭಿಪ್ರಾಯ ಪರಮಾತ್ಮ ಜಗತ್ತಿಗೆ ಉಪಾದಾನಕಾರಣ ಎಂದಲ್ಲ. ಮೃಣ್ಮಯವಾದ ಬಯಲು ಗುಡ್ಡಗಾಡುಗಳಲ್ಲಿ ಮಣ್ಣಿನಿಂದ ಮರಗಳು ಹುಟ್ಟಿ ಅಲ್ಲಿಯೆ ನಾಶ ಹೊಂದುವಂತೆ ಜಗತ್ತೂ ಪರಮಾತ್ಮನಲ್ಲಿ ಹುಟ್ಟಿ ಬೆಳೆದು ಪರಮಾತ್ಮನಲ್ಲಿಯೆ ನಾಶ ಹೊಂದುತ್ತದೆ, ಪರಮಾತ್ಮ ಜಗತ್ತಿಗೆ ಆಧಾರಮಾತ್ರ ಎಂದರ್ಥ. ೪೯೭

೧೬.೨೯ ಚಿತ್ರಕೇತುರಾಜ ಶೇಷದೇವನಲ್ಲಿ ಭಗವಂತನ ಉಪಾಸನೆ ಮಾಡಿದರೂ ಅವನಿಗೆ ಮೊದಲಿಗೆ ಶೇಷಲೋಕ ಪ್ರಾಪ್ತಿಯಾಯಿತು. ಭಗವಂತನ ಲೋಕವಲ್ಲ. ಏಕೆಂದರೆ ಅನ್ಯದೇವತೆಗಳಲ್ಲಿ ಭಗವಂತನ ಉಪಾಸನೆ ಮಾಡಿದರೆ ಮೊದಲಿಗೆ ಆ ಅನ್ಯದೇವತೆಗಳ ಲೋಕವೇ ಪ್ರಾಪ್ತವಾಗುತ್ತದೆ. ಆ ದೇವತೆಗಳ ಪದವಿಗೆ ಉಪಾಸಕನು ಯೋಗ್ಯನಾಗಿದ್ದರೆ ಆತ ಆ ಪದವಿಯನ್ನೇ ಪಡೆಯುತ್ತಾನೆ ಎಂದು ನಾರದಪುರಾಣದಲ್ಲಿ ಹೇಳಿದೆ. ೪೯೯

೧೬.೩೧ ಶೇಷದೇವನ ಚರಣಸಮೀಪವನ್ನು ಹೊಂದಿದ ಚಿತ್ರಕೇತುರಾಜ, ಪುನಃ ಹಿಂದಿನಂತೆಯೆ ಉಪಾಸನೆ ಮಾಡಿ, ಭಗವಂತನನ್ನೇ ಹೊಂದಿದನೆಂದು ಭಾಗವತಕ್ಕೆ ಅಭಿಪ್ರಾಯ ಹೇಳಬೇಕು. ಏಕೆಂದರೆ ತಂತ್ರಮಾಲಾ ಎಂಬ ಗ್ರಂಥದಲ್ಲಿ ಹಾಗೇ ಹೇಳಿದೆ. ೫೦೦

೧೬.೫೧ ಹರಿ ತಾನು ಸರ್ವಭೂತನಾಗಿದ್ದೇನೆ ಎನ್ನುವುದು ಸರ್ವಭೂತಾಂತರ್ಯಾಮಿಯಾಗಿದ್ದೇನೆ ಎನ್ನುವ ಅಭಿಪ್ರಾಯದಿಂದ ಹೊರತು ಅಭೇದಾಭಿಪ್ರಾಯದಿಂದಲ್ಲ. 'ತತ್ತ್ವಮಸಿ' ಇತ್ಯಾದಿ ವಾಕ್ಯಗಳಲ್ಲಿ ನಾಮಪದ ಕ್ರಿಯಾಪದಗಳೆಲ್ಲವೂ ಮುಖ್ಯವಾಗಿ ಹರಿನಾಮಗಳೇ. ವಿಶೇಷಬಲದಿಂದ ರೂಪವಿಶೇಷಗಳನ್ನೇ ಅವು ಹೇಳುವುದರಿಂದ ಪರ್ಯಾಯ ಪದಗಳೆಂದೆನಿಸುವುದಿಲ್ಲ ಎಂದು ತಂತ್ರಮಾಲಾಗ್ರಂಥದಲ್ಲಿ ಉಕ್ತವಾಗಿದೆ. ೫೦೧

೧೬.೫೨ ಮನಸ್ಸು ಸದಾ ವಿಷಯಪದಾರ್ಥಗಳಲ್ಲಿ ನೆಲೆಸಿರುತ್ತದೆ. ವಿಷಯಪದಾರ್ಥಗಳು ವಾಸನಾರೂಪದಿಂದ ಮನಸಿನಲ್ಲಿ ಸದಾ ಇರುತ್ತವೆ. ಇವೆರಡರಲ್ಲಿಯೂ ನಿಯಾಮಕನಾಗಿ ಭಗವಂತ ನೆಲೆಸಿರುತ್ತಾನೆ ಎಂದು ತಿಳಿಯಬೇಕು. ೫೦೩

೧೬.೫೪ ಜಾಗರದಲ್ಲಿ ನಾವು ಅನುಭವಿಸುವುದೂ ಕೂಡ 'ಮಾಯಾಮಾತ್ರ' ಎಂದರೆ ಮಾಯಾಕಲ್ಪಿತ, ಮಿಥ್ಯೆ ಎಂದರ್ಥವಲ್ಲ. ಪ್ರಕೃತಿನಿರ್ಮಿತವೆಂದರ್ಥ.

೫೦೫

೧೬.೫೬ ಜೀವ ಎಚ್ಚೆತ್ತಿರುವಾಗ ಅವನಲ್ಲಿರುವ ಪರಮಾತ್ಮನೂ ಎಚ್ಚೆತ್ತಿರುತ್ತಾನೆ. ಇದು 'ಅನ್ವೇತಿ' ಎಂದು ಹೇಳಿದ ಅನ್ವಯ. ಜೀವ ಮಲಗಿದಾಗ ಪರಮಾತ್ಮ ನಿದ್ದೆ ಮಾಡುವುದಿಲ್ಲ. ಇದು 'ವ್ಯತಿರಿಚ್ಯೇತ' ಎಂದು ಹೇಳಿದ ವ್ಯತಿರೇಕ. ಅದರಿಂದ ಪರಮಾತ್ಮ 'ಪರಂ ಜ್ಞಾನಂ' ವಿಲಕ್ಷಣ ಜ್ಞಾನಸ್ವರೂಪ. ೫೦೬

೧೬.೫೭ ಪರಮಾತ್ಮ ತನಗಿಂತ ಭಿನ್ನನೆಂದು ಅನುಸಂಧಾನ ಮಾಡದಿದ್ದುದರ ಫಲವೇ ಸಂಸಾರ. ಅಭಿನ್ನನೆಂದು ತಿಳಿದರೆ ತಮಸ್ಸೇ ಉಂಟಾಗುತ್ತದೆ ಎಂದು ತಂತ್ರಮಾಲಾಗ್ರಂಥದಲ್ಲಿ ಉಕ್ತವಾಗಿದೆ. ೫೦೮

೧೭.೧೩ 'ಏಷಾಮನುಧ್ಯೇಯ' ಎಂದರೆ ಶಿವ ಬ್ರಹ್ಮಾದಿಗಳಿಗೆ ಧ್ಯೇಯನೆಂದರ್ಥವಲ್ಲ. ಬ್ರಹ್ಮಾದಿಗಳ ಅಭಿಪ್ರಾಯದಲ್ಲಿ ಶಿವ ಇಂದ್ರಾದಿಗಳಿಗೆ ಧ್ಯೇಯ ಎಂದರ್ಥ. ಏಕೆಂದರೆ ತಂತ್ರಮಾಲಾಗ್ರಂಥದಲ್ಲಿ ಹಾಗೇ ಹೇಳಿದೆ. ೫೧೧

೧೭.೨೨ ಪರಮಾತ್ಮನಿಗೆ ಯಾರೂ ಪ್ರಿಯರಿಲ್ಲ, ವಿರೋಧಿಗಳೂ ಇಲ್ಲ ಎಂದರೆ ಭಕ್ತರು ತಮ್ಮ ಸ್ವರೂಪಕ್ಕೆ ಯೋಗ್ಯವಾದ ಸೇವೆ ಮಾಡದ ಹೊರತು ಅವರು ಪ್ರಿಯರೆನಿಸುವುದಿಲ್ಲ. ದ್ವೇಷಿಗಳೂ ಅವರ ಸ್ವರೂಪಕ್ಕೆ ಯೋಗ್ಯವಾದ ಅಪರಾಧ ಮಾಡದ ಹೊರತು ಅವರು ದ್ವೇಷಿಗಳೆನಿಸುವುದಿಲ್ಲ ಎಂದರ್ಥ. ಇದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿ ಹೇಳಿದೆ. ೫೧೨

೧೭.೨೯ ಜೀವರಿಗೆ ಬರುವ ಸುಖದುಃಖ ವರಶಾಪಾದಿ ದ್ವಂದ್ವಗಳು ಪರಮಾತ್ಮನಿಂದಲೇ ಬಂದಿರುತ್ತವೆ. ಸ್ವಪ್ನದಲ್ಲಿ ಸ್ವಾಪ್ನಪದಾರ್ಥಗಳು ಗೋಚರಿಸುವುದೂ ಪರಮಾತ್ಮನಿಂದಲೆ. ಅದರಿಂದ ಪರಮಾತ್ಮನನ್ನು ತಿಳಿಯಬೇಕೆಂದು ಪ್ರಕಾಶಸಂಹಿತೆಯಲ್ಲಿ ಉಕ್ತವಾಗಿದೆ. ೫೧೫

೧೭.೩೭ ಚಿತ್ರಕೇತುರಾಜನಿಗೆ ದೇವಿ ಪಾರ್ವತಿ ಶಾಪವಿತ್ತಾಗ ಆತ ದೇವಿಗೆ ಪ್ರತಿಯಾಗಿ ಶಾಪ ಕೊಡಲು 'ಅಲಂತಮಃ' ಬಲುಸಮರ್ಥನೇ ಆಗಿದ್ದರೂ ಶಾಪಕೊಡಲಿಲ್ಲ ಎಂದು ಭಾಗವತ ಹೇಳಿದಂತೆ ಕಾಣುತ್ತದೆ. ಆದರೆ ಅಶಕ್ತರೂ ಕೂಡ ಶಕ್ತರಿಗೆ ಶಾಪಕೊಡಲು ಶಕ್ತರೇ ಆಗಿರುತ್ತಾರೆ ಎಂದು ಮಾತ್ರ ಭಾಗವತದ ಅಭಿಪ್ರಾಯ ಗ್ರಹಿಸಬೇಕು. ಏಕೆಂದರೆ ದೇವತೆಗಳೇ ವರಶಾಪಾದಿಗಳನ್ನು ನೀಡಲು ಹೆಚ್ಚು ಶಕ್ತರು. ಅಶಕ್ತರು ಅವರಿಗೆ ಶಾಪ ನೀಡಬಲ್ಲರು ಎನ್ನುವುದು, ನಿಜವೆ. ಆದರೆ ಆ ಶಾಪ ಪೂರ್ತಿಯಾಗಿ ಫಲಿಸುವುದಿಲ್ಲ. ಶಕ್ತರು ಪ್ರಯತ್ನದಿಂದ ಅದನ್ನು ವಿಫಲವಾಗಿಯೂ ಮಾಡಬಲ್ಲರು. ಮತ್ತು ಅಶಕ್ತರು ಶಾಪ ನೀಡಿದಾಗ ಅವರ ಪುಣ್ಯವೇ ನಶಿಸುವುದು. ಬ್ರಹ್ಮವಿಷ್ಣುಗಳಿಗೂ ಅವರ ಪತ್ನಿಯರಿಗೂ ಯಾರಾದರೂ ಶಾಪವಿತ್ತರೆ ಅದು ಸರ್ವಥಾ ಫಲಿಸುವುದಿಲ್ಲ ಎಂದು ಸ್ಕಂದಪುರಾಣದಲ್ಲಿ ಉಕ್ತವಾಗಿದೆ. ೫೧೭

೧೯.೧೧,೧೨,೧೩ ಯಜ್ಞವೆಂದರೆ ಪ್ರಾರಂಭದಿಂದ ಕೊನೆವರೆಗಿನ ಎಲ್ಲ ಯಜ್ಞಕ್ರಿಯೆಗಳ ಸಮೂಹವೆಂದರ್ಥ. ಇಜ್ಯಾ ಎಂದರೆ ಆ ಸಮೂಹದಲ್ಲಿ ಸೇರಿರುವ ಕ್ರಿಯೆಗಳೆಂದರ್ಥ. ಅದರಿಂದ ಎರಡೂ ಒಂದೇ ಅಲ್ಲ. ಯಜ್ಞಕ್ಕೆ ಹರಿ ನಿಯಾಮಕ. ಇಜ್ಯೆಗೆ ಲಕ್ಷ್ಮಿ ನಿಯಾಮಕಳು. ಲಕ್ಷ್ಮಿಗೂ ಹರಿ ನಿಯಾಮಕ. ಹರಿಗೆ ಯಾರೂ ನಿಯಾಮಕರಿಲ್ಲ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೫೨೨

—೦—

ಓಂ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ-
ರಾಮಕೃಷ್ಣವೇದವ್ಯಾಸಾತ್ಮಕ-ಲಕ್ಷ್ಮೀಹಯಗ್ರೀವಾಯ ನಮಃ

ಭಗವದ್ಬಾದರಾಯಣಪ್ರಣೀತಂ

ಶ್ರೀಮದ್ಭಾಗವತಮಹಾಪುರಾಣಮ್

ಪಂಚಮಸ್ಕಂಧಃ

ಅಥ ಪ್ರಥಮೋಽಧ್ಯಾಯಃ

ಓಂ ನಮೋ ಭಗವತೇ ವಾಸುದೇವಾಯ ಓಂ

ಹರಿಃ ಓಂ ॥

ರಾಜೋವಾಚ

ಪ್ರಿಯವ್ರತೋ ಭಾಗವತ ಆತ್ಮಾರಾಮಃ ಕಥಂ ಮುನೇ ।
ಗೃಹೇಽರಮತ ಯನ್ಮೂಲಃ ಕರ್ಮಬಂಧಃ ಪರಾಭವಃ ॥ ೧ ॥

ನ ನೂನಂ ಮುಕ್ತಸಂಗಾನಾಂ ತಾದೃಶಾನಾಂ ಮಹಾಮುನೇ ।
ಗೃಹೇಷ್ವಭಿನಿವೇಶೋಽಯಂ ಪುಂಸಾಂ ಭವಿತುಮರ್ಹತಿ ॥ ೨ ॥

ಮಹತಾಂ ಖಲು ವಿಪ್ರರ್ಷೇ ಉತ್ತಮಶ್ಲೋಕಪಾದಯೋಃ ।
ಛಾಯಾನಿರ್ವೃತಚಿತ್ತಾನಾಂ ನ ಕುಡುಂಬೇ ಸ್ಪೃಹಾ ಮತಿಃ ॥ ೩ ॥

ಸಂಶಯೋಽಯಂ ಮಹಾನ್ ಬ್ರಹ್ಮನ್ ದಾರಾಗಾರಸುತಾದಿಷು ।
ಸಕ್ತಸ್ಯ ಯತ್ ಸಿದ್ಧಿರಭೂತ್ ಕೃಷ್ಣೇ ಚ ಮತಿರಚ್ಯುತಾ ॥ ೪ ॥

ಶ್ರೀಶುಕ ಉವಾಚ–

ಬಾಢಮುಕ್ತಂ ಭಗವತ ಉತ್ತಮಶ್ಲೋಕಸ್ಯ ಶ್ರೀಮಚ್ಚರಣಾರವಿಂದಮಕರಂದರಸ ಆದಿತ ಆವೇಶಿತಚೇತಸೋ ಭಾಗವತ-ಪಾರಮಹಂಸ್ಯದಯಿತಃ ಕಥಂಚಿದಂತರಾಯವಿಹತಾಂ ಸ್ವಾಂ ಶಿವತಮಾಂ ಪದವೀಂ ನ ಪ್ರಾಯೇಣ ಹಿ ಹಿನ್ವನ್ ॥ ೫ ॥

ಯರ್ಹಿ ವಾವ ಸ ರಾಜಪುತ್ರಃ ಪ್ರಿಯವ್ರತಃ ಪರಮಭಾಗವತೋ ನಾರದಸ್ಯ ಚರಣೋಪಸೇವಯಾಽಂಜಸಾವಗತಪರಮಾರ್ಥ ಸತತ್ತ್ವೋ ಬ್ರಹ್ಮಸತ್ರೇಣ ದೀಕ್ಷಿಷ್ಯಮಾಣೋಽವನಿತಳಪರಿಪಾಲನಾ ಯಾಮ್ನಾತಪ್ರವರಗುಣಗಣೈಕಾಂತಭಾಜನತಯಾ ಸ್ವಪಿತ್ರೋ ಪಾಮಂತ್ರಿತೋ ಭಗವತಿ ವಾಸುದೇವ ಏವಾವ್ಯವಧಾನಸಮಾಧಿ ಯೋಗೇನ ಸಮಾವೇಶಿತಸಕಲಕಾರಕಕ್ರಿಯಾಕಲಾಪೋ ನೈವಾ

ಭ್ಯನಂದತ್ । ಯದಪಿ ತದಪ್ರತ್ಯಾಮ್ನಾತವ್ಯಂ ತದಧಿಕರಣ ಆತ್ಮನೋಽನ್ಯಸ್ಮಾದಸತೋ ಯದಾ ಪರಾಭವಮನ್ವೀಕ್ಷಮಾಣಃ ॥ ೬ ॥

ಅಥ ಹ ಭಗವಾನಾದಿದೇವ ಏತಸ್ಯ ಗುಣವಿಸರ್ಗಸ್ಯ ಪರಿಬೃಂಹಣಾನುಧ್ಯಾನೇನ ವ್ಯವಸಿತಸಕಲಜಗದಭಿಪ್ರಾಯ ಆತ್ಮಯೋನಿರಖಿಲ ನಿಗಮನಿಜಜನಪರಿವೇಷ್ಟಿತಃ ಸ್ವಭವನಾದವತತಾರ ॥ ೭ ॥

ತತ್ರತತ್ರ ಗಗನತಳ ಉಡುಪತಿರಿವ ವಿಮಾನಾವಳಿಭಿರನುಪಥಮ-ಮರಪರಿವೃಢೈರಭಿಪೂಜ್ಯಮಾನಃ ಪಥಿಪಥಿ ಚ ವರೂಥಶಃ ಸಿದ್ಧಗಂಧರ್ವಸಾಧ್ಯಚಾರಣಮುನಿಗಣೈರುಪಗೀಯಮಾನೋ ಗಂಧಮಾದನದ್ರೋಣೀಮವಭಾಸಯನ್ನುಪಸಸರ್ಪ ॥ ೮ ॥

ತತ್ರ ಹ ವಾ ಏನಂ ದೇವರ್ಷಿಃ ಹಂಸಯಾನೇ ಪಿತರಂ ಭಗವಂತಂ ಹಿರಣ್ಯಗರ್ಭಮುಪಲಭಮಾನಃ ಸಹಸೈವ ಸಹ ಪಿತಾಪುತ್ರಾಭ್ಯಾಮವಹಿತಾಂಜಲಿರುಪತಸ್ಥೇ ॥ ೯ ॥

ಭಗವಾನಪಿ ಭಾರತ ತದುಪನೀತಾರ್ಹಣಃ ಸೂಕ್ತವಾಕೇನ ನಿತರಾಮುದಿತಗುಣಾವತಾರಸುವಿಜಯಃ ಪ್ರಿಯವ್ರತಮಾದಿ-ಪುರುಷಸ್ತಂ ಸದಯಹಾಸಾವಲೋಕ ಇತಿ ಹೋವಾಚ ॥ ೧೦ ॥

ಶ್ರೀಭಗವಾನುವಾಚ

ನಿಬೋಧ ತಾತೇದಮೃತಂ ಬ್ರವೀಮಿ
ಮಾಽಸೂಯಿತುಂ ದೇವಮರ್ಹಸ್ಯಮೇಯಮ್ ।
ಅಹಂ ಭವಸ್ತೇ ತತ ಏಷ ಮಹರ್ಷಿ-
ರ್ವಹಾಮ ಸರ್ವೇ ವಿವಶಾ ಯಸ್ಯ ದಿಷ್ಟಮ್ ॥ ೧೧ ॥

ನ ತಸ್ಯ ಕಶ್ಚಿತ್ ತಪಸಾ ವಿದ್ಯಯಾ ವಾ
ನ ಯೋಗವೀರ್ಯೇಣ ಮನೀಷಯಾ ವಾ ।
ನೈವಾರ್ಥಧರ್ಮೈಃ ಪರತಃ ಸ್ವತೋ ವಾ
ಕೃತಂ ವಿಹಂತುಂ ತನುಭೃದ್ ವಿಭೂಯಾತ್ ॥ ೧೨ ॥

ಭವಾಯ ನಾಶಾಯ ಚ ಕರ್ಮ ಕರ್ತುಂ
ಜಡವದುಕ್ತ್ಯೈವ ಸ್ತ್ರೀಷು ರಸಃ ಪ್ರಾದುರ್ಭವತಿ, ತದಾ ತಾ ವಶೀಭವಂತೀತಿ ತಾಂ ವಶೀಕರ್ತುಂ ಜಾಡ್ಯಾನುಕರಣಮಾತ್ರಂ ನತು ವಸ್ತುತಸ್ತಥೇತಿ ದ್ಯೋತಯಿತುಂ ವತಿಪ್ರಯೋಗಃ । -ಗಿರಿಧರಃ

ಅಭಿನಯಕೌಶಲವನ್ನು ತೋರುತ್ತಿಲ್ಲ. ತೋರಿದರೆ, ಅದರಿಂದ ಅನುರಾಗ ವ್ಯಕ್ತವಾಗವುದಿಲ್ಲ. 'ತನ್ನನ್ನು ಅಪ್ಸರೆ ಜಡನೆಂದು ತಿಳಿಯಲಿ' ಎಂಬ ಉದ್ದೇಶದಿಂದಲೂ ಅನುಕರಣವಲ್ಲ. ಹಾಗೆ ತಿಳಿಯುವಷ್ಟು ಅವಳು ದಡ್ಡಿಯಲ್ಲ. ಮತ್ತು ಜಡನೆಂದೇ ತಿಳಿದರೆ ಆಕೆ ರಾಜನನ್ನು ಇಷ್ಟಪಡಲಾರಳು. ಅನುರಾಗದಿಂದ ಉನ್ಮತ್ತನಾಗಿ ಜಡನಂತಾದರೇ ಆಗ ಅವಳು ಒಲಿಯುವುದು ಸಹಜ. ಅದರಿಂದ ಈ ಅಸಂಬದ್ಧ ಅರ್ಥಶೂನ್ಯವಾದ ಮಾತು ಜಾಡ್ಯದ ಅನುಕರಣವಲ್ಲ. ತಾತ್ಕಾಲಿಕವಾಗಿ ರಾಜನಲ್ಲಿ ಉಂಟಾಗಿರುವ ಜಾಡ್ಯದಂಥ ಅವಸ್ಥೆಯ ಪ್ರಭಾವವೆನ್ನಬೇಕು.

ಪರಿಹಾಸಪ್ರಲಾಪಾದಿಷ್ವನರ್ಥಾ ವಾಗ್ ಭವೇತ್ ಕ್ವಚಿತ್ ।
ಇತಿ ಶಬ್ದನಿರ್ಣಯೇ ।

ವಿನೋದಕ್ಕಾಗಿ ಅಥವಾ ಪ್ರಲಾಪ ಮಾಡುವಾಗ ಅಥವಾ (ಆದಿಷು) ಕಾಮಾದಿ ಉಪದ್ರವಗಳಲ್ಲಿ ಬುದ್ಧಿಸ್ಥೈರ್ಯ ಕಳೆದು ಕೊಂಡಾಗ ಅರ್ಥಶೂನ್ಯವಾದ ಮಾತುಗಳನ್ನು ಸಜ್ಜನರೂ ಕೆಲವೊಮ್ಮೆ ಆಡುವ ಸಂಭವವಿದೆ ಎಂದು ಶಬ್ದನಿರ್ಣಯದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ದ್ವಿತೀಯೋಽಧ್ಯಾಯಃ ॥

—o—

ಅಧ್ಯಾಯ–೩

ಅಧ್ಯಾಯಸಾರಾಂಶ

ನಾಭಿರಾಜ ಪುತ್ರಕಾಮನೆಯಿಂದ ಯಜ್ಞ ಮಾಡಿದ. ಯಜ್ಞದಲ್ಲಿ ಋತ್ವಿಜರು ಭಗವಂತನನ್ನು ಕರೆದಾಗ ಅವನು ಪ್ರತ್ಯಕ್ಷನಾಗಿ ಬಂದ. ಋತ್ವಿಜರು ಅವನನ್ನು ಸ್ತುತಿಸುತ್ತ 'ಶ್ರೀಹರಿ, ನೀನು ಪೂರ್ಣಕಾಮ. ನಮ್ಮ ಆರಾಧನೆಯಿಂದ ನಿನಗೇನಾಗಬೇಕಾಗಿಲ್ಲ. ಕರುಣೆಯಿಂದಲೇ ಬಂದಿರುವಿ. ನಿನ್ನ ನಾಮ ನಮ್ಮ ನಾಲಿಗೆಗೆ ಬರುವಂತೆ ಅನುಗ್ರಹಿಸು. ಈ ರಾಜರ್ಷಿನಾಭಿ ಪುತ್ರಾರ್ಥಿಯಾಗಿದ್ದಾನೆ. ನಿನ್ನಂತೆ ಇರುವ ಮಗನನ್ನು ಪಡೆಯಲು ಬಯಸಿದ್ದಾನೆ. ಅನುಗ್ರಹಿಸು' ಎಂದರು. ಪರಮಾತ್ಮನೆಂದ 'ನನ್ನಂತೆ ಇರುವ ಮಗನೆಂದರೆ ನಾನೇ ಮಗನಾಗಿ ಅವತರಿಸಬೇಕಷ್ಟೆ. ಏಕೆಂದರೆ ನನಗೆ ಸಮಾನ ಇನ್ನೊಬ್ಬನಿಲ್ಲ. ಬ್ರಾಹ್ಮಣರ ಮಾತು ಹುಸಿಯಾಗ ಬಾರದೆಂದು ನಾನೇ ಈ ರಾಜನಿಗೆ ಮಗನಾಗಿ ಅವತರಿಸುತ್ತೇನೆ' ಹೀಗೆ ಹೇಳಿ ಭಗವಂತ ನಾಭಿರಾಜನ ಪತ್ನಿಯಾದ ಮೇರುದೇವಿಯಲ್ಲಿ ಋಷಭರೂಪದಿಂದ ಅವತರಿಸಿದ. ಜ್ಞಾನಿಗಳಾದ ಊರ್ಧ್ವರೇತಸರಾದ ದಿಗಂಬರ ಸನ್ಯಾಸಿಗಳ ಧರ್ಮವನ್ನು ಲೋಕಕ್ಕೆ ತೋರಿಸುವುದು ಈ ಅವತಾರದ ಉದ್ದೇಶವಾಗಿತ್ತು.

* * *

ನಾಭಿರಾಜ ಪುತ್ರಕಾಮನೆಯಿಂದ ಯಜ್ಞ ಮಾಡಿದ. ಯಜ್ಞದಲ್ಲಿ ಋತ್ವಿಜರು ಭಗವಂತನನ್ನು ಆಹ್ವಾನ ಮಾಡಿದಾಗ ಅವನು ಪ್ರತ್ಯಕ್ಷನಾಗಿ ಬಂದ. ಆಗ ಅವರು ಕೇಳಿಕೊಂಡರು. 'ಈ ರಾಜರ್ಷಿ ಪುತ್ರಾರ್ಥಿಯಾಗಿದ್ದಾನೆ. ನಿನ್ನಂತೆ ಇರುವ ಮಗನನ್ನು ಬಯಸಿದ್ದಾನೆ. ಅನುಗ್ರಹಿಸು' ಎಂದು. ಆಗ ಭಗವಂತ ಹೇಳಿದ ಮಾತು–

ಶ್ರೀಭಗವಾನುವಾಚ–

ಅಹೋ ಬತಾಹಮೃಷಯೋ ಭವದ್ಭಿರವಿತಥಗೀರ್ಭಿರ್ವರಮ-
ಸುಲಭಮಭಿಯಾಚಿತೋ ಯದಮುಷ್ಯ ಆತ್ಮಜೋ ಮಯಾ ಸದೃಶೋ

ಭೂಯಾದಿತಿ ಮಮಾಹಮೇವಾಭಿರೂಪಃ ಕೈವಲ್ಯಾದಥಾಪಿ ಬ್ರಹ್ಮವಾದೋ ನ ಮೃಷಾ ಭವಿತುಮರ್ಹತಿ ಮಮೈವ ಹಿ ಮುಖಂ ಯದ್ ದ್ವಿಜದೇವಕುಲಮ್ ॥ ೧೮ ॥

ಶ್ರೀಭಗವಂತ ನುಡಿದ–

ಅಯ್ಯೋ ಋಷಿಗಳೆ, ಎಂದೂ ಸುಳ್ಳಾಗದ ಮಾತಿನವರು ನೀವು ದುರ್ಲಭವಾದ ವರವನ್ನು ನನ್ನಲ್ಲಿ ಕೇಳಿರುವಿರಿ. 'ಈ ನಾಭಿರಾಜನಿಗೆ ನನಗೆ ಸಮಾನನಾದ ಪುತ್ರ ಜನಿಸಲಿ' ಎಂದು. ನಾನು ಸರ್ವೋತ್ತಮನಾದ್ದರಿಂದ, ಸರ್ವೋತ್ತಮರು ಇಬ್ಬರಿರಲು ಸಾಧ್ಯವಿಲ್ಲದ್ದರಿಂದ, ನನಗೆ ಸಮಾನ ನಾನೆ, ಇನ್ನೊಬ್ಬನಿಲ್ಲ. ಆದರೂ ಬ್ರಾಹ್ಮಣರು ನುಡಿಯುವುದು ಹುಸಿಯಾಗಬಾರದು. ದ್ವಿಜಶ್ರೇಷ್ಠರಾದ ಬ್ರಾಹ್ಮಣರ ಕುಲ ನನ್ನ ಮುಖದಿಂದ ಜನಿಸಿದೆ ತಾನೆ?

ಇಲ್ಲಿ ಋತ್ವಿಜರು ಭಗವಂತನಿಗೆ ಸಮಾನ ಇಲ್ಲ ಎಂದು ತಿಳಿದವರಾಗಿದ್ದರೂ ಭಗವಂತನಿಗೆ ಸಮಾನನಾದ ಮಗನನ್ನು ರಾಜನಿಗೆ ಕರುಣಿಸೆಂದು ಕೇಳಿಕೊಳ್ಳುವುದು ಅಸಂಭವವೆನಿಸುತ್ತದೆ. [೧]ಬೇರೆ ವ್ಯಾಖ್ಯಾನಕಾರರಿಗೆ ಈ ಸಮಸ್ಯೆ ಬರಲಿಲ್ಲ. ಭಗವಂತನಿಗೆ ಸಮಾನನಾದ ಮಗನನ್ನು ಬೇಡುವುದು ರಾಜನ ಧಾರ್ಷ್ಟ್ಯವನ್ನು ತೋರುತ್ತದೆ. ಅದನ್ನು ಕ್ಷಮಿಸೆಂದು ಋತ್ವಿಜರು ಕೇಳಿಕೊಳ್ಳುತ್ತಾರೆ. ಅಂದರೆ, ಭಗವಂತನಿಗೆ ಸಮಾನನಾದ ಮಗನನ್ನು ರಾಜನಿಗೆ ಕೊಡಲಿ ಎಂದು ಕೇಳುವ ಅಭಿಪ್ರಾಯ ಅವರಿಗೆ ಇದೆ ಎಂದಂತಾಯಿತು. ಭಗವಂತನಿಗೆ ಸಮಾನರಿಲ್ಲ ಎನ್ನುವ ಪ್ರಮೇಯ ಅವರಿಗೆ ತಿಳಿದಿಲ್ಲ ಎಂದಂತಾಯಿತು. ಇದು ಸರಿಯಲ್ಲ.

ನಾಸ್ತಿ ವಿಷ್ಣೋಃ ಸಮ ಇತಿ ಜಾನಂತೋಽಪ್ಯೃಷಯಃ ಸದಾ ।
ತಜ್ಜ್ಞಾಪನಾಯ ಲೋಕಾನಾಮನ್ಯೇ ಚ ಪ್ರಾರ್ಥಯನ್ ಸಮಮ್ ॥
ಇತಿ ಬ್ರಹ್ಮಾಂಡೇ ।

ಋತ್ವಿಜರಾದ ಋಷಿಗಳಿಗೆ ವಿಷ್ಣುವಿಗೆ ಸಮಾನನಿಲ್ಲ ಎಂದು ತಿಳಿದಿದ್ದರೂ ಅದನ್ನು ಲೋಕಕ್ಕೆ ತಿಳಿಸಲೆಂದೇ ವಿಷ್ಣುವಿಗೆ ಸಮಾನನಾದ ಪುತ್ರನನ್ನು ವಿಷ್ಣು ರಾಜನಿಗೆ ನೀಡಲೆಂದು ಪ್ರಾರ್ಥಿಸಿದರು. ಹೀಗೇ ಬೇರೆ ಅತ್ರಿ, ಕಶ್ಯಪ ಮುಂತಾದ ಋಷಿಗಳೂ ದಶರಥ ಮುಂತಾದ ರಾಜರೂ ತಮಗೆ ವಿಷ್ಣುಸಮಾನನಾದ ಪುತ್ರ ಲಭಿಸಲೆಂದು ಪ್ರಾರ್ಥಿಸಿದರು ಎಂದು ಬ್ರಹ್ಮಾಂಡಪುರಾಣದಲ್ಲಿ ಉಕ್ತವಾಗಿದೆ.

---

೧. ಪ್ರಜಾಂ ಭವಾದೃಶೀಮಾಶಾಸಾನ ಇತಿ ಧಾರ್ಷ್ಟ್ಯಂ ಚ ಪಶ್ಯೇತಿ ಭಾವಃ
- ವಿಶ್ವನಾಥಃ, ಜೀವಗೋಸ್ವಾಮೀ

ವಿಷ್ಣುವಿಗೆ ಸಮಾನನಾದ ಪುತ್ರನನ್ನು ವಿಷ್ಣು ರಾಜನಿಗೆ ನೀಡಲಿ ಎಂದು ಋತ್ವಿಜರು ಪ್ರಾರ್ಥಿಸಿದಾಗ 'ಅಯ್ಯೋ ಋಷಿಗಳೆ, ದುರ್ಲಭವಾದ ವರವನ್ನು ಕೇಳಿರುವಿರಿ. ನಾನು ಸರ್ವೋತ್ತಮ. ನನಗೆ ಸಮಾನ ಇನ್ನೊಬ್ಬನಿದ್ದರೆ ನಾನು ಸರ್ವೋತ್ತಮ ಹೇಗಾದೇನು? ಅದರಿಂದ ನನಗೆ ಸಮಾನನಿಲ್ಲ. ನೀವು ಕೇಳಿದ ವರ ಸುಳ್ಳಾಗುತ್ತದೆ. ಆದರೆ ಬ್ರಾಹ್ಮಣರ ಮಾತು ಸುಳ್ಳಾಗಬಾರದೆಂದು ನನ್ನ ಸಂಕಲ್ಪ. ಅದರಿಂದ ನನಗೆ ಸಮಾನ ಇನ್ನೊಬ್ಬನಿಲ್ಲದಿದ್ದರೂ ನನಗೆ ನಾನೇ ಸಮಾನನಾದ್ದರಿಂದ ನಾನೇ ರಾಜನಿಗೆ ಮಗನಾಗಿ ಜನಿಸುತ್ತೇನೆ' ಎಂದು ಹೇಳಿ ಭಗವಂತ ನಾಭಿರಾಜನ ಮಗನಾಗಿ ವೃಷಭಾವತಾರ ಮಾಡಿದ. ಇದರಿಂದ ವಿಷ್ಣುವಿಗೆ ಸದೃಶ ವಿಷ್ಣುವೆ ಹೊರತು ಇನ್ನೊಬ್ಬನಿಲ್ಲ ಎನ್ನುವುದು ವಿಷ್ಣು ಹೇಳಿದ ಈ ಮಾತಿನಿಂದಲೂ ಮುಂದೆ ಅವನೆ ಅವತಾರ ಮಾಡುವುದರಿಂದಲೂ ಲೋಕಕ್ಕೆ ತಿಳಿಯುತ್ತದೆ. ಈ ಉದ್ದೇಶದಿಂದಲೆ ಋಷಿಗಳು ಯಾಚನೆ ಮಾಡಿದರು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ತೃತೀಯೋಽಧ್ಯಾಯಃ ॥

—o—

ಅಧ್ಯಾಯ–೪

ಅಧ್ಯಾಯಸಾರಾಂಶ

ಋಷಭದೇವನೊಂದಿಗೆ ಸ್ಪರ್ಧಿಸುತ್ತ ದೇವೇಂದ್ರ ಒಮ್ಮೆ ಅವನ ದೇಶದಲ್ಲಿ ಮಳೆ ಸುರಿಸಲಿಲ್ಲ. ಅದಕ್ಕೆ ಋಷಭ ನಕ್ಕು ತಾನೇ ತನ್ನ ಸಾಮರ್ಥ್ಯದಿಂದ ಮಳೆ ಸುರಿಸಿದ. ಪ್ರಜಾನುರಾಗವನ್ನು ಸಂಪಾದಿಸಿದ ಋಷಭನಿಗೆ ಪಟ್ಟ ಕಟ್ಟಿ ನಾಭಿರಾಜ ರಾಣಿ ಮೇರುದೇವಿಯೊಂದಿಗೆ ಬದರಿಕಾಶ್ರಮದಲ್ಲಿ ನರನಾರಾಯಣರನ್ನು ಆರಾಧಿಸಿ ಮೋಕ್ಷ ಪಡೆದ. ಋಷಭದೇವನಿಗೆ ಇಂದ್ರ ತನ್ನ ಮಗಳಾದ ಜಯಂತಿಯನ್ನು ಮದುವೆ ಮಾಡಿಕೊಟ್ಟ. ಅವಳಲ್ಲಿ ಋಷಭ ಭರತ ಮುಂತಾದ ನೂರು ಮಂದಿ ಪುತ್ರರನ್ನು ಪಡೆದ. ಅಂಜನದಂತೆ ಅಂದರೆ ಕಾಡಿಗೆಯಂತೆ ಋಷಭನ ಮೈಬಣ್ಣವಿದ್ದುದರಿಂದ ಅವನು ಅಂಜನಾಭ. ಅವನು ಆಳಿದ ಭಾರತದೇಶಕ್ಕೆ ಆಗ ಅಂಜನಾಭ ಎಂದು ಹೆಸರಿದ್ದಿತು. ಭರತ ಆಳಿದಾಗ ಭಾರತ ಎನಿಸಿತು. ಭರತನ ಅನಂತರದ ಋಷಭಪುತ್ರರು ಕುಶಾವರ್ತ ಇಳಾವರ್ತ ಬ್ರಹ್ಮಾವರ್ತ ಆರ್ಯಾವರ್ತ ಮಲಯಕೇತು ಭದ್ರಸೇನ ಇಂದ್ರಸ್ಪೃಕ್ ವಿದರ್ಭ ಕೀಕಟ ಎಂಬ ಒಂಬತ್ತು ಮಂದಿ ಪ್ರಧಾನರು. ಕವಿ ಹರಿ ಅಂತರಿಕ್ಷ ಪ್ರಬುದ್ಧ ಪಿಪ್ಪಲಾಯನ ಆವಿರ್ಹೋತ್ರ ದ್ರುಮಿಲ ಚಮಸ ಕರಭಾಜನರೆಂದು ಒಂಬತ್ತು ಮಂದಿ ಮಹಾಭಗವದ್ಭಕ್ತರು. ಇವರ ಬಗ್ಗೆ ಮುಂದೆ ಏಕಾದಶ ಸ್ಕಂಧದ ಜಾಯಂತೇಯೋಪಾಖ್ಯಾನದಲ್ಲಿ ಬರುತ್ತದೆ. ಉಳಿದ ಎಂಬತ್ತೊಂದು ಮಂದಿ ತಪಸ್ಸಿನಿಂದ ವಿಶ್ವಾಮಿತ್ರನಂತೆ ಶ್ರೋತ್ರಿಯ ಬ್ರಾಹ್ಮಣರಾದರು. ಆನಂದಮಯನಾದ ಋಷಭ ಗೃಹಸ್ಥಾಶ್ರಮವನ್ನು ಲೋಕಕ್ಕೆ ತೋರುತ್ತ ನೂರು ಅಶ್ವಮೇಧ ಯಾಗಗಳನ್ನು ನಡೆಸಿದ.

* * *

ಋಷಭದೇವನೊಂದಿಗೆ ಸ್ಪರ್ಧಿಸುತ್ತ ಒಮ್ಮೆ ದೇವೇಂದ್ರ ಅವನ ದೇಶದಲ್ಲಿ ಮಳೆ ಸುರಿಸಲಿಲ್ಲ. ಅದಕ್ಕೆ ಋಷಭ ನಕ್ಕು ತಾನೇ ತನ್ನ ಸಾಮರ್ಥ್ಯದಿಂದ ಮಳೆಯಾಗುವಂತೆ ಮಾಡಿದನೆಂದು ಶುಕಮುನಿ ಪರೀಕ್ಷಿದ್ರಾಜನಿಗೆ ಹೇಳಿದರು–

ಯಸ್ಯ ಹೀಂದ್ರಃ ಸ್ಪರ್ಧಮಾನೋ ಭಗವಾನ್ ವರ್ಷೇ ನ ವವರ್ಷ ತದವಧಾರ್ಯ ಭಗವಾನ್ ಋಷಭದೇವೋ ಯೋಗೇಶ್ವರಃ ಪ್ರಹಸ್ಯಾತ್ಮಯೋಗಮಾಯಯಾ ಸ್ವವರ್ಷಮಾಂಜನಾಭಂ ನಾಮಾಭ್ಯವರ್ಷೀತ್ ॥ ೩ ॥

ಅವನೊಂದಿಗೆ ಸ್ಪರ್ಧಿಸುತ್ತ ಭಗವಾನ್ ಇಂದ್ರ, ಒಮ್ಮೆ ಅವನ ದೇಶದಲ್ಲಿ ಮಳೆ ಸುರಿಸಲಿಲ್ಲ. ಅದನ್ನು ತಿಳಿದು ಯೋಗೇಶ್ವರನಾದ ಭಗವಾನ್ ಋಷಭದೇವ ಚೆನ್ನಾಗಿ ನಕ್ಕು ಸ್ವರೂಪಸಾಮರ್ಥ್ಯದಿಂದ ಅಂಜನಾಭವೆಂಬ ತನ್ನ ದೇಶದಲ್ಲಿ ಚೆನ್ನಾಗಿ ಮಳೆಯಾಗುವಂತೆ ಮಾಡಿದ.

'ಋಷಭದೇವ ಶತಕ್ರತುವೆನಿಸಿದ ದೇವೇಂದ್ರನಿಗೆ ತಾನೇನೂ ಕಡಿಮೆಯವನಲ್ಲ ಎಂದು ಲೋಕಕ್ಕೆ ತೋರುತ್ತ ನೂರು ಅಶ್ವಮೇಧ ಯಾಗ ಮಾಡಿದಾಗ ದೇವೇಂದ್ರನಿಗೆ ಅದನ್ನು ಸಹಿಸಲಾಗಲಿಲ್ಲ. ಅವನು ತಾನೂ ಭಗವಂತನ ಅವತಾರ. ತಾನೇನು ಕಡಿಮೆ ಎಂದು ಅಹಂಕಾರ ಪಟ್ಟು ಭಗವದವತಾರನಾದ ಋಷಭನೊಂದಿಗೆ ಸ್ಪರ್ಧೆಗೆ ಇಳಿದು ಅವನ ರಾಜ್ಯದಲ್ಲಿ ಮಳೆಯಾಗದಂತೆ ಮಾಡಿದ. ಇಂದ್ರ ಭಗವಂತನ ಅವತಾರವೇ ಆಗಿದ್ದರೂ ಅವನು ಮನ್ವಂತರ ರಕ್ಷಣೆಗಾಗಿ ಅವತರಿಸಿದವನಾದ್ದರಿಂದ ಅವನಲ್ಲಿ ಭಗವಂತನ ಕ್ರಿಯಾಶಕ್ತಿಯೂ ಅದಕ್ಕೆ ಆವಶ್ಯಕವಾದಷ್ಟು ಜ್ಞಾನವೂ ವ್ಯಕ್ತವಾಗಿದ್ದರೂ ಹೆಚ್ಚಿನ ಜ್ಞಾನಶಕ್ತಿ ಅಭಿವ್ಯಕ್ತವಾಗಿರಲಿಲ್ಲ. ಅದರಿಂದ ಅಜ್ಞಾನದಿಂದ ಋಷಭದೇವನೊಂದಿಗೆ ಸ್ಪರ್ಧೆಗೆ ಇಳಿದ. ಮತ್ತು ಈ ಋಷಭ ನಿವೃತ್ತಿಮಾರ್ಗವನ್ನು ಲೋಕಕ್ಕೆ ತೋರುವುದಕ್ಕಾಗಿ ಅವತರಿಸಿದ್ದಾನೆ, ಪ್ರವೃತ್ತಿಮಾರ್ಗದ ಬಗ್ಗೆಯೂ ಅವನಿಗೆ ಒಲವಿದೆಯೆ ಇಲ್ಲವೆ? ಲೋಕದಲ್ಲಿ ತನ್ನ ಅಲೌಕಿಕ ಸಾಮರ್ಥ್ಯವನ್ನು ವ್ಯಕ್ತಪಡಿಸುವನೆ ಇಲ್ಲವೆ? ಪ್ರವೃತ್ತಿಮಾರ್ಗವನ್ನು ಅನುಸರಿಸಿ ಅವನು ತನ್ನ ಸಾಮರ್ಥ್ಯವನ್ನು ತೋರುವುದಾದರೆ ನಾನು ಅವನಿಗೆ ಕನ್ಯಾದಾನ ಮಾಡುವೆನೆನ್ನುತ್ತ ಪರೀಕ್ಷೆಗಾಗಿಯೂ ಮಳೆಯಾಗದಂತೆ ಮಾಡಿ ಇಂದ್ರ ಸ್ಪರ್ಧಿಸಿದಂತೆ ತೋರಿಕೊಂಡ' ಎಂದು ವಂಶೀಧರ ಗಿರಿಧರವ್ಯಾಖ್ಯಾನಗಳಲ್ಲಿ ಹೇಳಿದೆ.

ಆದರೆ 'ನಿತ್ಯವ್ಯಕ್ತಾ ಹರೇರ್ಗುಣಾಃ' ಹರಿಯ ಗುಣಗಳು ಎಲ್ಲವೂ ಸದಾ ವ್ಯಕ್ತವೆ. ಅವ್ಯಕ್ತವಾಗಿ ಎಂದೂ ಇರುವುದಿಲ್ಲ. ಅದರಿಂದ ಋಷಭರೂಪದಿಂದ ನೂರು

---

೧. ಇಂದ್ರಸ್ಪರ್ಧಾತು ಶತಯಜ್ಞವಿಧಾಯಿತ್ವಾದೇವ । ಕ್ರತುಭಿಃ ಶತಕೃತ್ವ ಇಯಾಜೇತಿ ವಕ್ಷ್ಯಮಾಣತ್ವಾತ್ । -ವಂಶೀಧರಃ

ಗರ್ವಂ ವಿನಾ ಸ್ಪರ್ಧಯಾ ಪರಾಪಕಾರೇ ಪ್ರವೃತ್ತ್ಯಸಂಭವಾತ್ ಗರ್ವಸ್ಯ ಚ ಸಾಮರ್ಥ್ಯಾಧೀನತ್ವಾತ್ ಸಾಮರ್ಥ್ಯೇ ಹೇತುಂ ಸೂಚಯನ್ ವಿಶಿನಷ್ಟಿ ಭಗ

ಯಾಗ ಮಾಡಿ, ಇಂದ್ರರೂಪದಿಂದ ಅದಕ್ಕೆ ಮತ್ಸರ ಪಡುವುದು, ತನ್ನ ಸಾಮರ್ಥ್ಯಕ್ಕೆ ಅಹಂಕಾರ ಪಡುತ್ತ ತನ್ನೆರಡು ರೂಪಗಳಲ್ಲಿ ಪರಸ್ಪರ ಸ್ಪರ್ಧೆ ಮಾಡುವುದು, ಇಂದ್ರರೂಪಕ್ಕೆ ಋಷಭರೂಪದ ಸಾಮರ್ಥ್ಯದ ಬಗ್ಗೆ ಅಜ್ಞಾನ, ಸಂದೇಹಗಳು, ಒಂದು ರೂಪ ಇನ್ನೊಂದು ರೂಪವನ್ನು ಪರೀಕ್ಷಿಸುವುದು ಇವೆಲ್ಲವೂ ಪ್ರಾದುರ್ಭಾವ ವಿಪರ್ಯಾಸವಾಗುವುದರಿಂದ ಒಪ್ಪಬಾರದು, ಅದು ವಿಷ್ಣುದ್ವೇಷವೆನಿಸುತ್ತದೆ. ಕೇವಲ ದುರ್ಜನಮೋಹಕ್ಕಾಗಿಯೇ ಲೀಲೆಯಿಂದ ಹರಿ ಸ್ಪರ್ಧೆ ಮಾಡುತ್ತಾನೆ ಎಂದು ತಿಳಿಯಬೇಕು. ಇದು ವರಾಹಪುರಾಣೋಕ್ತವಾದ ಸಮಾಧಾನ.

ದುಷ್ಟಾನಾಂ ಮೋಹನಾರ್ಥಾಯ ಯಜ್ಞ ಇಂದ್ರಪದೇ ಸ್ಥಿತಃ ।
ಪಸ್ಪರ್ಧ ವೃಷಭೇಣೈವ ಸ್ವರೂಪೇಣ ಹರಿಃ ಸ್ವಯಮ್ ॥

ಇತಿ ವಾರಾಹೇ ।

ಇಂದ್ರಪದವಿಯನ್ನಾಳುತ್ತಿದ್ದ ಯಜ್ಞನಾಮಕನಾದ ಸಾಕ್ಷಾದ್ ಹರಿ ದುರ್ಜನ ಮೋಹನಕ್ಕಾಗಿ ತನ್ನ ಸ್ವರೂಪವೇ ಆದ ಋಷಭದೇವನೊಂದಿಗೆ ಸ್ಪರ್ಧಿಸಿದಂತೆ ತೋರಿಕೊಂಡನೆಂದು ವರಾಹಪುರಾಣದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ಚತುರ್ಥೋಽಧ್ಯಾಯಃ ॥

—o—

ವಾನಿತಿ । ಭಗವದವತಾರರೂಪೋ ಯಜ್ಞಸ್ತದಾನೀಂತನ ಇಂದ್ರ ಇತ್ಯರ್ಥಃ । ಹಿಶಬ್ದೇನೋಭಯೋರವತಾರತ್ವಪ್ರಸಿದ್ಧೇಸ್ತಯೋಃ ಸಾಮರ್ಥ್ಯೇ ನ ಸಂದೇಹ ಇತಿ ಸೂಚಯತಿ । ನ ಚೇಂದ್ರಸ್ಯಾಪ್ಯವತಾರತ್ವಾನ್ನ ಸ್ಪರ್ಧಾ ಯುಕ್ತೇತಿ ಶಂಕನೀಯಮ್ । ಯಜ್ಞಸ್ಯ ಮನ್ವಂತರರಕ್ಷಾರ್ಥಮವತೀರ್ಣತ್ವೇನ ಕ್ರಿಯಾಶಕ್ತೇರಾವಿರ್ಭಾವೇಽಪಿ ತದುಪಯುಕ್ತಾಧಿಕಜ್ಞಾನಶಕ್ತ್ಯನಾವಿರ್ಭಾವಾತ್ । ನಿವೃತ್ತಿಮಾರ್ಗಪ್ರಾಕಟ್ಯಾರ್ಥಮವತೀರ್ಣಸ್ಯ ಪ್ರವೃತ್ತಿಪರತ್ವಮಪ್ಯಸ್ತಿ ನ ವಾ ಲೋಕೇಽಲೌಕಿಕಂ ಸ್ವವೀರ್ಯಂ ಪ್ರಕಟಯಿಷ್ಯತಿ ನ ವಾ, ಯದಿ ಪ್ರವೃತ್ತಿಪರತ್ವೇನ ಸ್ವವೀರ್ಯಂ ಪ್ರಕಟಯೇತ್ ತದಾಽಸ್ಮೈ ಸ್ವಕನ್ಯಾ ದೇಯೇತಿ ಕನ್ಯಾಂ ದಾತುಂ ಪರೀಕ್ಷಾರ್ಥಮಪಿ ವೃಷ್ಟಿಪ್ರತಿರೋಧಕರಣಸಂಭವಾಚ್ಚ । ನಚ ಪರೀಕ್ಷಾರ್ಥವೃಷ್ಟಿಪ್ರತಿರೋಧೇ ಸ್ಪರ್ಧಮಾನ ಇತ್ಯುಕ್ತಿರನುಪಪನ್ನೇತಿ ಶಂಕನೀಯಂ । ಲೋಕಪ್ರತೀತ್ಯಭಿಪ್ರಾಯೇಣ ತಥೋಕ್ತೇರಪಿ ಸಂಗತತ್ವಾತ್ । - ಗಿರಿಧರಃ

ಅಧ್ಯಾಯ-೫

ಅಧ್ಯಾಯಸಾರಾಂಶ

ಋಷಭದೇವ ಒಂದು ದಿನ ಬ್ರಹ್ಮಾವರ್ತದಲ್ಲಿ ಋಷಿಗಳೂ ಪ್ರಜೆಗಳೂ ಸೇರಿದ್ದ ಸಭೆಯಲ್ಲಿ ತನ್ನ ಮಕ್ಕಳಿಗೆ ಉಪದೇಶ ಮಾಡಿದ. 'ಈ ಮಾನವ ಶರೀರ ಶಾಶ್ವತವಲ್ಲ. ಅದನ್ನು ಅಶಾಶ್ವತವಾದ ವಿಷಯಸುಖಾನುಭವಕ್ಕೆ ಬಳಸಿಕೊಳ್ಳಬಾರದು. ಶಾಶ್ವತವಾದ ಮೋಕ್ಷಕ್ಕೆ ಅದು ಸಾಧನವಾಗಬಲ್ಲುದು. ಜ್ಞಾನಿಗಳ ಒಡನಾಟದಿಂದ ಮೋಕ್ಷ ಮಾರ್ಗ ಲಭಿಸುತ್ತದೆ. ಪರಮಾತ್ಮನ ವಿಷಯ ಬಿಟ್ಟು ವಿಷಯಪದಾರ್ಥಗಳ ಬಗ್ಗೆಯೇ ಮಾತನಾಡುವ ಲೌಕಿಕರ ಸಂಗ ಬಿಡಬೇಕು. ತಾನು ಬದುಕಲು ಎಷ್ಟು ಲೌಕಿಕ ಬೇಕೋ ಅಷ್ಟೇ ಲೌಕಿಕದಲ್ಲಿ ತೊಡಗಬೇಕು. ವಿಷಯಾಸಕ್ತಿಯಿಂದ ಕರ್ಮ ಮಾಡಿದರೆ ಅದು ಬಂಧಕವಾಗುತ್ತದೆ. ಆ ಕರ್ಮದಿಂದ ಶರೀರ ಬರುತ್ತದೆ. ಶರೀರದಿಂದ ತಿರುಗಿ ಕರ್ಮ. ಇದಕ್ಕೆ ಕೊನೆಯಿಲ್ಲ. ಪರಮಾತ್ಮವಿಚಾರ ಮಾಡಿ ಅಪರೋಕ್ಷ ಸಂಪಾದಿಸಿದರೆ ಕರ್ಮಫಲ ಲೇಪವಾಗುವುದಿಲ್ಲ. ಕರ್ಮ ಬಂಧಕವಾಗುವುದಿಲ್ಲ. ಅದಕ್ಕೆ ಜ್ಞಾನಿಗಳ ಸಂಗ ಮಾಡಿ ಶಾಸ್ತ್ರಾಭ್ಯಾಸದಿಂದ ಹರಿಸರ್ವೋತ್ತಮತ್ವಜ್ಞಾನ ಸಂಪಾದಿಸಿ ಧ್ಯಾನ ಮಾಡಬೇಕು. ಅಪರೋಕ್ಷ ಹೊಂದಬೇಕು. ಬಳಿಕ ಧ್ಯಾನಾದಿ ಉಪಾಯದಿಂದ ಅನಾದಿಲಿಂಗಭಂಗ ಮಾಡಿಕೊಂಡು ಭಗವಂತನ ಬಳಿಯಲ್ಲಿ ಸ್ವರೂಪಾನಂದಾವಿರ್ಭಾವರೂಪವಾದ ಮುಕ್ತಿ ಹೊಂದಬೇಕು. ಅದಕ್ಕೆ ತಂದೆ ಮಕ್ಕಳಿಗೂ ಗುರು ಶಿಷ್ಯರಿಗೂ ಈ ಮೋಕ್ಷಸಾಧನವನ್ನು ಉಪದೇಶಿಸಬೇಕು. ಅಜ್ಞಜನರು ವಿಷಯಾಸೆಯಿಂದ ಕಾಮ್ಯಕರ್ಮವನ್ನೇ ಶ್ರೇಯಃಸಾಧನವೆಂದು ಭ್ರಮಿಸಿರುತ್ತಾರೆ. ಕುರುಡನನ್ನು ಹಳ್ಳದಲ್ಲಿ ಬೀಳಿಸುವಂತೆ ಅಜ್ಞಲೋಕವನ್ನು ತಿರುಗಿ ಕಾಮ್ಯಕರ್ಮದಲ್ಲಿ ತೊಡಗಿಸಬಾರದು. ಹಾಗೆ ತೊಡಗಿಸುವವನು ಗುರು ಗುರುವಲ್ಲ, ಬಂಧು ಬಂಧುವಲ್ಲ. ತಂದೆ ತಂದೆಯಲ್ಲ. ಮಕ್ಕಳೆ, ನಿಮಗೆ

ಹಿರಿಯಣ್ಣನಾದ ಭರತನ ಸೇವೆಯೂ ಮೋಕ್ಷಸಾಧನ. ನೀವೆಲ್ಲರೂ ಸಾತ್ವಿಕರು. ನಿಮ್ಮಣ್ಣ ರಾಜನಾದರೆ ನೀವು ಅಸೂಯೆ ಪಡಬಾರದು. ಅವನು ಭಗವದ್ಭಕ್ತ. ಪ್ರಜೆಗಳಿಗೆ ಆಶ್ರಯ ನೀಡುವವ. ನೀವು ಅವನನ್ನು ಸೇವಿಸಿದರೆ ಭಗವಂತನ ಸೇವೆಯಾಗುತ್ತದೆ ಪ್ರಜಾಪಾಲನೆ ಮಾಡಿದಂತಾಗುತ್ತದೆ. ಮೋಕ್ಷಸಾಧನಗೆ ಜೀವತಾರತಮ್ಯಜ್ಞಾನವೂ ಆವಶ್ಯಕ. ಜೀವೋತ್ತಮ ಬ್ರಹ್ಮ, ಬ್ರಹ್ಮನಿಗೆ ಭಗವಂತ ಆರಾಧ್ಯ. ಆ ಭಗವಂತನ್ನು ಆರಾಧಿಸುವವರು ಬ್ರಾಹ್ಮಣರು. ಕ್ಷತ್ರಿಯರಾದ ನೀವು ಆ ಬ್ರಾಹ್ಮಣರನ್ನು ಪೂಜಿಸಬೇಕು. ಬ್ರಾಹ್ಮಣರೇ ಭಗವಂತನ ಪೂಜೆಗೆ ಶ್ರೇಷ್ಠ ಪ್ರತಿಮೆಗಳು. ಹಾಗೇ ಎಲ್ಲ ಸ್ಥಾವರಜಂಗಮಗಳೂ ಭಗವಂತನ ಸನ್ನಿಧಾನಯುಕ್ತವಾಗಿರುವುದರಿಂದ ಎಲ್ಲರಿಗೂ ಯಥಾಯೋಗ್ಯ ಸತ್ಕಾರ ಮಾಡಬೇಕು.' ಬಳಿಕ ಋಷಭದೇವ ಭರತನನ್ನು ರಾಜನನ್ನಾಗಿ ಮಾಡಿ ಪರಮ ವೈರಾಗ್ಯತೋರುತ್ತ ಅವಧೂತವೇಷದಿಂದ ಸಂಚರಿಸತೊಡಗಿದ. ವಿರಕ್ತರಾದ ಪರಮಹಂಸಸನ್ಯಾಸಿಗಳು ಹೇಗಿರಬೇಕೆಂಬುದನ್ನು ತೋರಿದ. ಸ್ವಭಾವತಃ ಅತಿಸುಂದರನಾಗಿದ್ದು ಪುರನಾರಿಯರಿಗೆ ಮೋಹ ಉಂಟುಮಾಡುವಂತಿದ್ದರೂ ಅವಧೂತವೇಷದಿಂದ ಗ್ರಹಾವಿಷ್ಟನಂತೆ ಕಾಣುತ್ತಿದ್ದ. ಅಯೋಗ್ಯರಿಗೆ ಮೋಹ ಉಂಟುಮಾಡುವುದಕ್ಕಾಗಿ ಮಲಧಾರಣ ಮಾಡುತ್ತಿದ್ದ. ಆದರೆ ಮಲವೂ ಸುತ್ತ ಹತ್ತುಯೋಜನ ದೂರಕ್ಕೆ ಸುಗಂಧವನ್ನೇ ಬೀರುತ್ತಿತ್ತು. ಆಕಾಶಸಂಚಾರ ಮನೋವೇಗ ಪರಕಾಯಪ್ರವೇಶ ಮುಂತಾದ ಯೋಗಸಿದ್ಧಿ ಅವನಿಗೆ ಸ್ವಾಭಾವಿಕವಾಗಿದ್ದರೂ ಅವುಗಳನ್ನು ಲೋಕಕ್ಕೆ ಪ್ರದರ್ಶಿಸಲಿಲ್ಲ.

* * *

ಋಷಭದೇವ ಒಂದು ದಿನ ಬ್ರಹ್ಮಾವರ್ತದಲ್ಲಿ ಋಷಿಗಳೂ ಪ್ರಜೆಗಳೂ ಸೇರಿದ್ದ ಸಭೆಯಲ್ಲಿ ತನ್ನ ಮಕ್ಕಳಿಗೆ ಉಪದೇಶ ಮಾಡುತ್ತ ಸಾಧನಶರೀರವಾದ ಮಾನವಜನ್ಮ ಬಂದಾಗ ಅವನು ಭಗವಂತನ ಅಪರೋಕ್ಷವನ್ನು ಸಂಪಾದಿಸಬೇಕು. ಆಗ ಅವನಿಗೆ ಕರ್ಮ ಬಂಧಕವಾಗುವುದಿಲ್ಲ. ಎಂದು ಹೇಳುತ್ತಾನೆ.

ಪರಾಭವಸ್ತಾವದಬೋಧಜಾತೋ
ಯಾವನ್ನ ಜಿಜ್ಞಾಸತ ಆತ್ಮತತ್ತ್ವಮ್ ।
ತಾವತ್ ಕ್ರಿಯಾಸ್ತಾವದಿದಂ ಮನೋ ವೈ
ಕರ್ಮಾತ್ಮಕಂ ಯೇನ ಶರೀರಬಂಧಃ ॥ ೫ ॥

ಪರಮಾತ್ಮತತ್ವವಿಚಾರದಿಂದ ಅಪರೋಕ್ಷಸಂಪಾದನ ಮಾಡದಿರುವವರೆಗೆ ಮಾತ್ರ ಅಸ್ವಾಭಾವಿಕವಾದ ಈ ಶರೀರಬಂಧನ. ಹಾಗೇ ಪಾಪಕರ್ಮಜನ್ಯಫಲಲೇಪವಾಗಲಿ, ಪಾಪಕರ್ಮಜನಕವಾಗಿ ಶರೀಬಂಧನವನ್ನು ತರುವ ಮನಸ್ಸಾಗಲಿ ಜೀವನಿಗೆ ಅವನು ಪರಮಾತ್ಮತತ್ವ ವಿಚಾರ ಮಾಡಿ ಕಾಣದಿರುವವರೆಗೆ ಮಾತ್ರ ಇರುತ್ತದೆ.

[೧]ಇಲ್ಲಿ 'ಯಾವತ್ಕ್ರಿಯಾಸ್ತಾವದಿದಂ ಮನಃ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ. 'ಆತ್ಮಸ್ವರೂಪದ ಯಥಾರ್ಥಜ್ಞಾನವಿಲ್ಲದಷ್ಟು ಕಾಲ ಅಜ್ಞಾನದಿಂದಾಗಿ ಶರೀರಾದಿಗಳಿಂದ ಆತ್ಮಸ್ವರೂಪಕ್ಕೆ ಅಭಿಭವ ಅಂದರೆ ತಿರೋಭಾವ ಉಂಟಾಗುತ್ತದೆ; ಆತ್ಮನನ್ನು ದೇಹಾದಿಗಳಿಂದ ಅಭಿನ್ನನೆಂದು ತಿಳಿಯುತ್ತಾನೆ. ಈ ಅಜ್ಞಾನವಿರುವಷ್ಟು ಕಾಲ ಮಾತ್ರ ಕರ್ಮಗಳುಂಟಾಗುತ್ತಲೇ ಇರುತ್ತವೆ. ಕರ್ಮಗಳುಂಟಾಗುವಷ್ಟು ಕಾಲವೂ ಮನಸ್ಸು ಕರ್ಮಾಸಕ್ತವಾಗಿಯೇ ಇರುತ್ತದೆ, ಜ್ಞಾನದ ಕಡೆಗೆ ಹರಿಯುವುದಿಲ್ಲ. ಅದರಿಂದ ಶರೀರಬಂಧ ಉಂಟಾಗುತ್ತದೆ' ಎಂದು ವಿವರಣೆ. ಇಲ್ಲಿ 'ಅಜ್ಞಾನವಿರುವಷ್ಟು ಕಾಲ ಮಾತ್ರ ಕರ್ಮಗಳು ಉಂಟಾಗುತ್ತಲೇ ಇರುತ್ತವೆ' ಎಂದು ಭಾಗವತ ಶ್ಲೋಕದಲ್ಲಿ ಹೇಳಿಲ್ಲ. ಅದನ್ನು ಅಧ್ಯಾಹಾರ ಮಾಡಿಕೊಳ್ಳುವುದು ದೋಷ. ಮತ್ತು ಅಜ್ಞಾನವಿಲ್ಲದಿದ್ದರೂ ಜ್ಞಾನಿ ವಿಹಿತಕರ್ಮ ಮಾಡುವುದರಿಂದ ಅಜ್ಞಾನವಿರುವಷ್ಟು ಕಾಲ ಮಾತ್ರ ಕರ್ಮಉಂಟಾಗುತ್ತದೆ ಎನ್ನುವುದು ಯುಕ್ತವೂ ಅಲ್ಲ. ಜ್ಞಾನಿಗೆ ಮೋಚಕಕರ್ಮ ವಿಹಿತವೇ ಆಗಿದೆ.

ಬೇರೆ ವ್ಯಾಖ್ಯಾನಕಾರರ ಪಕ್ಷದಲ್ಲಿ ಕರ್ಮದಲ್ಲಿ ಬಂಧಕಕರ್ಮ ಮೋಚಕಕರ್ಮ ಎಂದು ಎರಡು ಬಗೆ ಇಲ್ಲ. ಕರ್ಮವೆಲ್ಲವೂ ಅವರಿಗೆ ಬಂಧಕವೆ. ಅದರಿಂದ 'ಕರ್ಮ ಉಂಟಾಗುವಷ್ಟು ಕಾಲವೂ ಮನಸ್ಸು ಕರ್ಮಾಸಕ್ತವೆ ಆಗಿರುತ್ತದೆ. ಜ್ಞಾನದ ಕಡೆಗೆ ಒಲವು ತೋರುವುದಿಲ್ಲ' ಎಂದು ಹೇಳುತ್ತಾರೆ. ಇದೂ ಸರಿಯಲ್ಲ. ಅಪರೋಕ್ಷಕ್ಕಿಂತ ಪೂರ್ವದಲ್ಲಿ ನಿಷ್ಕಾಮನೆಯಿಂದ ಭಗವತ್ಪೂಜಾರೂಪವಾಗಿ ಪುನಃಪುನಃ ಕರ್ಮ ಉಂಟಾಗುತ್ತಿದ್ದರೆ ಮನಸ್ಸು ಆ ನಿಷ್ಕಾಮಕರ್ಮದಲ್ಲಿ

---

೧. ಯಾವದಾತ್ಮನಃ ಪ್ರಕೃತಿವಿಲಕ್ಷಣಸ್ಯಾತ್ಮನಸ್ತತ್ವಂ ಯಾಥಾತ್ಮ್ಯಂ ಯಾವನ್ನ ಜಿಜ್ಞಾಸತೇ ಜ್ಞಾತುಂ ನೇಚ್ಛತಿ ನ ಜಾನಾತೀತ್ಯರ್ಥಃ । ತಾವದಬೋಧಜಾತಃ ಆತ್ಮಸ್ವರೂಪತಿರೋಭಾವಃ ಆತ್ಮಯಾಥಾತ್ಮ್ಯಜ್ಞಾನನಿಮಿತ್ತಪರಾಭವಃ । ಯಾವಚ್ಚ ಪರಾಭವಸ್ತಾವದಿಂದ್ರಿಯಪ್ರೀತಯೇ ಕ್ರಿಯಾಃ ಪ್ರವರ್ತಂತೇ । ಯಾವಚ್ಚ ಕ್ರಿಯಾಸ್ತಾವದಿದಂ ಮನಃ ಕರ್ಮಾತ್ಮಕಂ ಕರ್ಮಪ್ರವಣಂ । ನ ತು ಜ್ಞಾನಪ್ರವಣಂ ಯೇನ ಕರ್ಮಾತ್ಮಕೇನ ಮನಸಾ ಭೂಯೋಽಪಿ ಶರೀರಬಂಧಃ ।-ವೀರರಾಘವಃ ।

ಯಾವಚ್ಚ ಪರಾಭವಸ್ತಾವದಿಂದ್ರಿಯಪ್ರೀತಯೇ ಕ್ರಿಯಾಃ ಪ್ರವರ್ತಂತ ಇತಿ ಶೇಷಃ । -ಭಗವತ್ಪ್ರಸಾದಃ

ಆಸಕ್ತವಾದರೂ ಭಗವಂತನ ಜ್ಞಾನದ ಕಡೆಗೆ ವಿಶೇಷವಾಗಿ ಒಲವು ತೋರುತ್ತದೆ ಹೊರತು ಜ್ಞಾನದ ಬಗ್ಗೆ ಅನಾಸಕ್ತಿ ತೋರುವುದಿಲ್ಲ. ನಿಷ್ಕಾಮಕರ್ಮ ಬಂಧಕವಲ್ಲದ್ದರಿಂದ,ಮನಸ್ಸಿಗೆ ಶುದ್ಧಿಯನ್ನೇ ತಂದುಕೊಡುವುದರಿಂದ ಮನಸ್ಸು ಇನ್ನಷ್ಟು ನಿಷ್ಕಾಮಕರ್ಮದಲ್ಲಿಯೇ ಆಸಕ್ತವಾಗುತ್ತದೆ. ಅದರಿಂದ ಶರೀರಬಂಧ ಉಂಟಾಗಲು ಕಾರಣವೇ ಇಲ್ಲ. ಶರೀರಬಂಧವಿಮೋಚನೆಯೇ ಉಂಟಾಗುತ್ತದೆ. ಹೀಗಾಗಿ ಬೇರೆ ವ್ಯಾಖ್ಯಾನ ಅತ್ಯಂತ ಅಸಮರ್ಪಕವಾಗಿದೆ.

'ತಾವತ್ಕ್ರಿಯಾಸ್ತಾವದಿದಂ ಮನಃ' ಎಂದೇ ಸರಿಯಾದ ಪಾಠ. 'ಯಾವನ್ನ ಜಿಜ್ಞಾಸತೇ ತಾವತ್ ಕ್ರಿಯಾಃ, ತಾವತ್ ಇದಂ ಮನಃ' ಎಂದು ಅನ್ವಯ. ಎಂದಿನ ವರೆಗೆ ಶ್ರವಣಾದಿಜಿಜ್ಞಾಸಾ ಮಾಡಿ ಅಪರೋಕ್ಷವನ್ನು ಸಂಪಾದಿಸುವುದಿಲ್ಲವೋ ಅಂದಿನವರೆಗೇ ನಿಷಿದ್ಧಕಾಮ್ಯಕರ್ಮಗಳ ಫಲಲೇಪ. ಅಂದಿನವರೆಗೇ ಅಂಥ ಕರ್ಮ ಉಂಟುಮಾಡುವ, ಆ ಕರ್ಮಾಧೀನವಾಗಿ ಫಲ ಉಂಟುಮಾಡುವ ಮನಸ್ಸು ಇರುತ್ತದೆ ಎಂದರ್ಥ. ಅಪರೋಕ್ಷಜ್ಞಾನಿಗೆ ನಿಷಿದ್ಧಕಾಮ್ಯಕರ್ಮಗಳ ಫಲಲೇಪವಿಲ್ಲವೆಂದು 'ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ'(೪.೧.೧೩) ಎಂಬ ಬ್ರಹ್ಮಸೂತ್ರದಲ್ಲಿ ಉಕ್ತವಾಗಿದೆ. ಕಾಮ್ಯನಿಷಿದ್ಧಕರ್ಮಗಳಿಗೆ ಅಂತಃಕರಣವೃತ್ತಿ ರೂಪವಾದ ಸುಖದುಃಖಗಳು ಫಲಗಳು. ಅದರಿಂದ ಕರ್ಮಾಧೀನವಾಗಿ, ಕರ್ಮಾನುಸಾರವಾಗಿ ಮನಸ್ಸು ಸುಖದುಃಖರೂಪಗಳಿಂದ ಪರಿಣಮಿಸುತ್ತದೆ. ಇಂಥ ಕರ್ಮಗಳೂ ಮನಸ್ಸೂ ಜ್ಞಾನಿಗೆ ಇರುವುದಿಲ್ಲ. ಅವನಿಗೆ ನಿಷ್ಕಾಮಕರ್ಮಗಳೂ ಶುದ್ಧ ಅಂತಃಕರಣವೂ ಇರುತ್ತದೆ.

'ತಾವತ್ ಕ್ರಿಯಾಃ' ಎಂದು 'ಕ್ರಿಯಾ'ಶಬ್ದಕ್ಕೆ ಕ್ರಿಯಾಫಲವನ್ನು ಹೇಳುವ ವಿವಕ್ಷೆ ಇದೆ. ಏಕೆಂದರೆ ಅಪರೋಕ್ಷ ಬಂದ ಬಳಿಕವೂ, ನಿಷಿದ್ಧಕಾಮ್ಯಕರ್ಮಗಳನ್ನು ಜ್ಞಾನಿ ಮಾಡುವುದರಿಂದ ಕ್ರಿಯೆ ಇಲ್ಲ ಎನ್ನಲಾಗದು. ಕ್ರಿಯೆ ಇದ್ದರೂ ಅದರ ಫಲಲೇಪವಿಲ್ಲ ಎನ್ನಬೇಕು.

'ಕರ್ಮಾತ್ಮಕಂ ಮನಃ' ಎಂದರೆ 'ಕರ್ಮಾಸಕ್ತವಾದ ಮನಸ್ಸು' ಎಂದರ್ಥವಲ್ಲ. ಕರ್ಮವಿದ್ದರೆ ಕರ್ಮಾಸಕ್ತವಾದ ಮನಸ್ಸಿರುತ್ತದೆ' ಎಂದು ಬೇರೆ ವ್ಯಾಖ್ಯಾನಕಾರರು ಹೇಳುವುದು ತಿರುವುಮುರುವು. ಕರ್ಮಾಸಕ್ತವಾದ ಮನಸ್ಸಿದ್ದರೆ ಕರ್ಮವಿರುತ್ತದೆ ತಾನೆ? ಅದರಿಂದ ಕರ್ಮಾತ್ಮಕ ಎಂದರೆ ಕರ್ಮವು ಆತ್ಮ, ಸ್ವಾಮಿಯಾಗಿ ಉಳ್ಳ ಮನಸ್ಸು, ಮನಸ್ಸು ಕರ್ಮಕ್ಕೆ ಅಧೀನ, ಅಂದರೆ ಕರ್ಮಾಧೀನವಾಗಿಯೇ ಫಲ ಉಂಟುಮಾಡುವಂಥದ್ದು ಎಂದು ಅರ್ಥ ಹೇಳಬೇಕು. ಅದರಿಂದ ಶ್ರೀಮದಾಚಾರ್ಯರು ಹೀಗೆ ವ್ಯಾಖ್ಯಾನಿಸುತ್ತಾರೆ–

ಕ್ರಿಯಾಫಲಂ ತಾವದೇವ । ಕರ್ಮಾತ್ಮಕಂ ಕರ್ಮವಶಮ್ ॥

ಕ್ರಿಯೆ ಎಂದರೆ ಇಲ್ಲಿ ಕರ್ಮಫಲ ವಿವಕ್ಷಿತವಾಗಿದೆ. ಅಪರೋಕ್ಷವಾಗದ ತನಕವೇ ಕರ್ಮಫಲ ಲೇಪ. ಮನಸ್ಸು ಕರ್ಮಾತ್ಮಕವೆಂದರೆ ಕರ್ಮಾಧೀನ, ಕರ್ಮಾನುಸಾರವೆ ಸುಖದುಃಖಫಲವನ್ನು ಉಂಟುಮಾಡುತ್ತದೆ ಎಂದರ್ಥ.

* * *

ಋಷಭದೇವ ಬ್ರಹ್ಮಾವರ್ತದಲ್ಲಿ ಮಕ್ಕಳಿಗೆ ಉಪದೇಶ ನೀಡುತ್ತ ಕರ್ಮದಂತೆ ಅವಿದ್ಯೆಯೂ ಸಂಸಾರಕ್ಕೆ ಮೂಲಕಾರಣ, ಮೋಕ್ಷಕ್ಕೂ ಅಪರೋಕ್ಷದಂತೆ ಭಕ್ತಿಯೂ ಕಾರಣ ಎಂದು ಸ್ಪಷ್ಟಪಡಿಸುತ್ತಾನೆ.

ಏವಂ ಮನಃ ಕರ್ಮವಶಂ ಪ್ರಯುಂಕ್ತೇ
ಅವಿದ್ಯಯಾಽಽತ್ಮನ್ ವ್ಯವಧೀಯಮಾನೇ ।
ಪ್ರೀತಿರ್ನ ಯಾವನ್ಮಯಿ ವಾಸುದೇವೇ
ನ ಮುಚ್ಯತೇ ದೇಹಯೋಗೇನ ತಾವತ್ ॥ ೬ ॥

ಪರಮಾತ್ಮಸ್ವಾತಂತ್ರ್ಯದ ಅಜ್ಞಾನದಿಂದಲೇ ಜೀವ ಮನಸ್ಸನ್ನು ಕರ್ಮವಶವಾಗುವಂತೆ ಸಂಸಾರದಲ್ಲಿ ಆಸಕ್ತಗೊಳಿಸುತ್ತಾನೆ. ಅಂತರ್ಯಾಮಿಯಾಗಿ ಒಳಗೇ ಇದ್ದರೂ ಅವ್ಯಕ್ತವಾಗಿ ದೂರನಾದಂತಿರುವ ವಾಸುದೇವನಾದ ನನ್ನಲ್ಲಿ ಭಕ್ತಿ ಎಂದಿನ ತನಕ ಉಂಟಾಗುವುದಿಲ್ಲವೋ ಅಂದಿನ ತನಕ ದೇಹಬಂಧನದಿಂದ ಜೀವ ಮುಕ್ತನಾಗುವುದಿಲ್ಲ.

[೧]ಇಲ್ಲಿ 'ಅವಿದ್ಯಯಾತ್ಮನ್ನುಪಧೀಯಮಾನೇ' ಎಂದು ಬೇರೆ ವ್ಯಾಖ್ಯಾನಕಾರರು ಪಾಠವಿಟ್ಟುಕೊಂಡು 'ಆತ್ಮನನ್ನು ಅವಿದ್ಯೆಯು ಆಚ್ಛಾದಿಸುತ್ತಿರುವಾಗ ಕರ್ಮವು ಮನಸ್ಸನ್ನು ಕರ್ಮಾಸಕ್ತವಾಗಿ ಮಾಡುತ್ತದೆ' ಎಂದು ಸತಿಸಪ್ತಮೀ ಇಟ್ಟುಕೊಂಡು ಅನ್ವಯಿಸಿದ್ದಾರೆ. ಆದರೆ ಹಿಂದಿನ ಶ್ಲೋಕದಲ್ಲಿ 'ಯಾವನ್ನ ಜಿಜ್ಞಾಸತ ಆತ್ಮತತ್ತ್ವಂ' 'ಆತ್ಮತತ್ತ್ವಜ್ಞಾನವಿಲ್ಲದಿರುವಾಗ ಕರ್ಮವು ಮನಸ್ಸನ್ನು ಕರ್ಮಾಸಕ್ತವನ್ನಾಗಿಸುತ್ತದೆ' ಎಂದು ಹೇಳಿಯಾಗಿರುವುದರಿಂದ ವ್ಯರ್ಥಪುನರುಕ್ತಿ. ಮತ್ತು 'ಉಪಧೀಯಮಾನೇ'

---

೧. ಉಕ್ತಮುಪಸಂಹರತಿ ಏವಂ ಪೂರ್ವಂ ಕೃತಂ ಕರ್ಮ ಕರ್ತೃಭೂತಂ ಮನಃ ಕರ್ಮಭೂತಂ ವಶಂ ಪ್ರಯುಂಕ್ತೇ ಪುನಃ ಕರ್ಮನಿಷ್ಠಂ ಕರೋತೀತಿ । ಜೀವನ್ಮುಕ್ತಕರ್ಮವ್ಯಾವೃತ್ತ್ಯರ್ಥಮಾಹ ಅವಿದ್ಯಯೇತಿ । ಅವಿದ್ಯಯಾ ಆತ್ಮನಿ ಉಪಧೀಯಮಾನೇ ಆಚ್ಛಾದ್ಯಮಾನೇ ಸತಿ । -ಶ್ರೀಧರಃ

ಉಪಸಂಹರನ್ನೇತದೇವಾಹ ಏವಮಿತಿ । -ಭಗವತ್ಪ್ರಸಾದಃ

ಎಂದು ವರ್ತಮಾನಾರ್ಥಕ ಶಾನಚ್ ಪ್ರತ್ಯಯದಿಂದ 'ಅವಿದ್ಯೆಯು ಆತ್ಮನನ್ನು ಆಚ್ಛಾದಿಸುತ್ತಿರುವಾಗ' ಎನ್ನುವುದು ಕೂಡುವುದಿಲ್ಲ. ಅನಾದಿಕಾಲದಿಂದ ಅವಿದ್ಯೆಯಿಂದ ಆತ್ಮ ಆಚ್ಛಾದಿತನೇ ಆಗಿದ್ದಾನೆ. 'ಉಪಹಿತೇ' ಆಚ್ಛಾದಿತನಾಗಿರುವಾಗ ಎನ್ನಬೇಕಾಗಿತ್ತು. ವಸ್ತುತಃ ಆಚ್ಛಾದನವನ್ನು ಇಲ್ಲಿ ಹೇಳುವ ಆವಶ್ಯಕತೆ ಇಲ್ಲ. 'ಆತ್ಮತತ್ವಜ್ಞಾನವಿಲ್ಲದಿರುವಾಗ ಕರ್ಮ ಮನಸ್ಸನ್ನು ಕರ್ಮಾಸಕ್ತವನ್ನಾಗಿ ಮಾಡುತ್ತದೆ' ಎಂದು ಹಿಂದಿನ ಶ್ಲೋಕದಲ್ಲಿ ಹೇಳಿದ್ದನ್ನೇ ಇಲ್ಲಿಯೂ ಹೇಳುತ್ತಿರುವುದರಿಂದ 'ಅವಿದ್ಯಯಾ ಮನಃ ಕರ್ಮವಶಂ ಪ್ರಯುಂಕ್ತೇ' ಎಂದಿಷ್ಟೇ ಸಾಕು. 'ಆತ್ಮನ್ನುಪಧೀಯಮಾನೇ' ಎನ್ನುವುದೇ ವ್ಯರ್ಥ.

ಆದರಿಂದ 'ಆತ್ಮನ್ ವ್ಯವಧೀಯಮಾನೇ' ಎಂಬ ಪಾಠವಿಟ್ಟುಕೊಂಡು 'ವ್ಯವಧೀಯಮಾನೇ ಆತ್ಮನ್' ಎಂಬುದನ್ನು 'ಮಯಿ ವಾಸುದೇವೇ' ಎಂಬಲ್ಲಿಗೆ ವಿಶೇಷಣವಾಗಿ ಅನ್ವಯಿಸಿದಾಗ 'ಆತ್ಮನ್' ಬಿಂಬರೂಪನಾದ, ಅಂದರೆ, ಬಿಂಬರೂಪನಾಗಿ ಸಮೀಪದಲ್ಲಿಯೇ ಇದ್ದರೂ ಅವ್ಯಕ್ತಸ್ವಭಾವದವನಾದ್ದರಿಂದ 'ವ್ಯವಧೀಯಮಾನೇ' ದೂರದಲ್ಲಿರುವವನಂತಿರುವ ವಾಸುದೇವನಾದ ನನ್ನಲ್ಲಿ, ಅಂದರೆ ಋಷಭದೇವನಲ್ಲಿ ಭಕ್ತಿ ಮಾಡದ ತನಕ ಮುಕ್ತಿ ಇಲ್ಲ ಎಂದು ವಿವರಣೆ ನೀಡಬೇಕು. ಈಗ ಪುನರುಕ್ತಿಯೂ ಇಲ್ಲ. ಅಪರೋಕ್ಷಕ್ಕಿಂತ ಪೂರ್ವದಲ್ಲಿ ಬಂಧಕಕರ್ಮವಿರುವುದು ಸಂಸಾರಕ್ಕೆ ಮೂಲಕಾರಣ ಎಂದು ಹಿಂದಿನ ಶ್ಲೋಕದಲ್ಲಿ ಹೇಳಿದೆ. ಇಲ್ಲಿ 'ಅವಿದ್ಯಯಾ ಜೀವಃ ಮನಃ ಕರ್ಮವಶಂ ಪ್ರಯುಂಕ್ತೇ' ಎಂದು ಅವಿದ್ಯೆಯು ಸಂಸಾರಕ್ಕೆ ಇನ್ನೊಂದು ಮೂಲಕಾರಣ ಎಂದು ಹೇಳುತ್ತಿದೆ. 'ಯಾವನ್ನ ಜಿಜ್ಞಾಸತೇ' ಎಂದು ಹಿಂದೆ ಅಪರೋಕ್ಷಜ್ಞಾನವನ್ನೂ ಇಲ್ಲಿ 'ಪ್ರೀತಿರ್ನ ಯಾವತ್' ಎಂದು ಭಕ್ತಿಯನ್ನೂ ಮೋಕ್ಷಕ್ಕೆ ಕಾರಣ ಎನ್ನುತ್ತಿದೆ.

ಅವಿದ್ಯಯಾ ಪ್ರಯುಂಕ್ತೇ

'ಅವಿದ್ಯಯಾ' ಎಂಬುದನ್ನು 'ಪ್ರಯುಂಕ್ತೇ' ಎಂಬುದರೊಡನೆಯೇ ಅನ್ವಯಿಸಬೇಕು.

* * *

ಗೃಹಸ್ಥಾಶ್ರಮದಲ್ಲಿದ್ದರೆ ವಿಷಯಾಸಕ್ತಿ ಹೆಚ್ಚುವುದು. ವಿಷಯಪದಾರ್ಥಗಳಲ್ಲಿ ನಾನು ನನ್ನದೆಂಬ ಮೋಹ ಬೆಳೆಯುವುದು. ಇದು ಮೋಕ್ಷಸಾಧನೆಗೆ ಅಡ್ಡಿಯಾಗುವುದು ಎಂದು ಋಷಭದೇವ ಬ್ರಹ್ಮಾವರ್ತದಲ್ಲಿ ಮಕ್ಕಳಿಗೆ ಉಪದೇಶ ನೀಡುತ್ತಾನೆ.

ಪುಂಸಃ ಸ್ತ್ರಿಯಾ ಮಿಥುನೀಭಾವ ಏಷ
ತಯೋರ್ಮಿಥೋ ಹೃದಯಗ್ರಂಥಿಮಾಹುಃ ।

ಯತೋ ಗೃಹಕ್ಷೇತ್ರಸುತಾಪ್ತವಿತ್ತೈ-
ರ್ಜನಸ್ಯ ಮೋಹೋಽಯಮಹಂಮಮೇತಿ ॥ ೮ ॥

ಪುರುಷನಿಗೆ ಸ್ತ್ರೀಯಿಂದಾಗುವ ಸಮಾಗಮವು ಅವರಿಬ್ಬರಿಗೆ ಪರಸ್ಪರ ಮನಸ್ಸುಗಳನ್ನು ಸೇರಿಸಿ ಒಂದಾಗಿ ಬಂಧಿಸುವ ಪಾಶವಾಗಿರುತ್ತದೆ ಎನ್ನುತ್ತಾರೆ. ಹೀಗೆ ಮನಸ್ಸುಗಳು ಒಂದಾದಾಗ ಮನೆ ಭೂಮಿ ಮಕ್ಕಳು ಬಂಧುಗಳು, ಹಣ ಇವುಗಳಿಂದ ಜೀವನಿಗೆ ನಾನು ನನ್ನದೆಂಬ ಮೋಹ. ಅದರಿಂದ ತಾಪತ್ರಯಗಳು ಉಂಟಾಗುವುವು.

ಇಲ್ಲಿ ಭಾಗವತಕ್ಕೆ ಶ್ರುತಿವಿರೋಧ ಬರುತ್ತದೆ.

'ಕುಟುಂಬೀ ಶುಚೌ ದೇಶೇ ಸ್ವಾಧ್ಯಾಯಮಧೀಯಾನಃ.....
ನಚ ಪುನರಾವರ್ತತೇ ।'

'ಗೃಹಸ್ಥಾಶ್ರಮಿಯು ಶುಚಿಯಾದ ಪ್ರದೇಶದಲ್ಲಿ ವೇದಾಧ್ಯಯನಾದಿ ಕರ್ಮಗಳನ್ನು ಅನುಷ್ಠಾನ ಮಾಡಿ ಪುನರಾವೃತ್ತಿರಹಿತವಾದ ಮೋಕ್ಷವನ್ನು ಹೊಂದುತ್ತಾನೆ.' ಎಂದು ಶ್ರುತಿ ಹೇಳುತ್ತಿದೆ. ಭಾಗವತ ಇಲ್ಲಿ ಗೃಹಸ್ಥಾಶ್ರಮಧರ್ಮವನ್ನು ಮೋಕ್ಷವಿರೋಧಿ ಎನ್ನುತ್ತಿದೆ. ಹಿಂದೆ ಪ್ರಿಯವ್ರತನಿಗೆ ವಿಹಿತವೆಂದಿದೆ. ಬೇರೆ ವ್ಯಾಖ್ಯಾನಕಾರರು ಈ ಪ್ರಶ್ನೆಯನ್ನು ಎತ್ತಿಕೊಳ್ಳುವುದಿಲ್ಲ. ಶ್ರೀಮದಾಚಾರ್ಯರು ಸತ್ಯಸಂಹಿತಾವಚನದ ಆಧಾರದಿಂದ ವಿರೋಧವನ್ನು ಪರಿಹರಿಸಿದ್ದಾರೆ-

ಬ್ರಹ್ಮಾದ್ಯಾ ಯಾಜ್ಞವಲ್ಕ್ಯಾದ್ಯಾ ಮುಚ್ಯಂತೇ ಸ್ತ್ರೀಸಹಾಯಿನಃ ।
ಬಧ್ಯಂತೇ ಕೇಚನೈತೇಷಾಂ ವಿಶೇಷಂ ಚ ವಿದೋ ವಿದುಃ ॥
ಇತಿ ಸತ್ಯಸಂಹಿತಾಯಾಮ್ ॥

'ಬ್ರಹ್ಮಾದಿದೇವತೆಗಳೂ ಯಾಜ್ಞವಲ್ಕ್ಯಾದಿ ಮುನಿಗಳೂ ಪತ್ನೀಸಮೇತರಾಗಿದ್ದೇ ಮೋಕ್ಷಸಾಧನೆ ಮಾಡಿಕೊಳ್ಳುತ್ತಾರೆ. ಪತ್ನಿಯೊಂದಿಗೆ ಮೋಕ್ಷಸಾಧನೆ ಯಾರಿಗೆ ವಿಹಿತ ವಾಗಿಲ್ಲವೋ ಅವರು ಮೋಕ್ಷಯೋಗ್ಯರಾಗಿದ್ದರೆ ಸಪತ್ನೀಕರಾಗಿರುವಷ್ಟು ಕಾಲ ಸತ್ಸಂಗ ದೊರಕದಿರುವುದರಿಂದ ಸಂಸಾರದಲ್ಲಿಯೇ ಇರಬೇಕಾಗುತ್ತದೆ. ಮೋಕ್ಷಕ್ಕೆ ಯೋಗ್ಯರಲ್ಲದಿದ್ದರೆ ಸ್ವಾಭಾವಿಕವಾಗಿಯೇ ಸಂಸಾರಬದ್ಧರಾಗಿರುತ್ತಾರೆ ಈ ಬಗ್ಗೆ ನಿರ್ಣಯ ಸರ್ವಜ್ಞಗುರುಗಳಿಗೇ ಸೇರಿರುತ್ತದೆ.' ಎಂದು ಸತ್ಯಸಂಹಿತೆಯಲ್ಲಿ ಉಕ್ತವಾಗಿದೆ.

* * *

ಲಿಂಗಶರೀರದಿಂದ ಬಿಡುಗಡೆಯಾಗಬೇಕಾದರೆ ಏನೇನು ಸಾಧನೆಗಳನ್ನು ಮಾಡಬೇಕೆನ್ನುವುದನ್ನು ಋಷಭದೇವ ಬ್ರಹ್ಮಾವರ್ತದಲ್ಲಿ ಮಕ್ಕಳಿಗೆ ಉಪದೇಶಿಸುತ್ತಾನೆ.

ಹರೌ ಗುರೌ ಮಯಿ ಭಕ್ತ್ಯಾಽನುವೃತ್ತ್ಯಾ
ವಿತೃಷ್ಣಯಾ ದ್ವಂದ್ವತಿತಿಕ್ಷಯಾ ಚ ।
ಸರ್ವತ್ರ ಜಂತೋರ್ವ್ಯಸನಾವಗತ್ಯಾ
ಜಿಜ್ಞಾಸಯಾ ತಪಸೇಹಾನಿವೃತ್ತ್ಯಾ ॥ ೧೦ ॥

ಲಿಂಗದೇಹದಲ್ಲಿಯೇ ಮನಸ್ಸು ವಿಷಯಾಸಕ್ತಿಯ ಪಾಶದಿಂದ ಬದ್ಧವಾಗಿರುತ್ತದೆ. ಲಿಂಗದೇಹ ದೂರವಾಗಬೇಕಾದರೆ ಮೊದಲಿಗೆ ನೀವು ಗುರುಗಳಲ್ಲಿರುವ ಭಗವಂತನಾದ ನನ್ನಲ್ಲಿ ಭಕ್ತಿ ಇಟ್ಟು ನಿರಂತರ ಸೇವೆ ಮಾಡಬೇಕು. ವಿಷಯಾಸೆ ಬಿಡಬೇಕು. ಸುಖದುಃಖಾದಿ ದ್ವಂದ್ವಗಳನ್ನು ಸಹಿಸಬೇಕು. ಐಹಿಕಆಮುಷ್ಮಿಕ ಸುಖಭೋಗಗಳಲ್ಲಿ ಎಲ್ಲ ಕಡೆ ದುಃಖವಿದ್ದೇ ಇದೆ ಎಂದು ತಿಳಿಯಬೇಕು. ಶಾಸ್ತ್ರವಿಚಾರ ಮಾಡಬೇಕು ವ್ರತಉಪವಾಸಾದಿ ಕಾಯಕ್ಲೇಶರೂಪವಾದ ತಪಸ್ಸು ಮಾಡಬೇಕು. ಕಾಮ್ಯನಿಷಿದ್ಧಕರ್ಮಗಳನ್ನೂ ನಿಷಿದ್ಧಕಾಮನೆಗಳನ್ನೂ ವರ್ಜಿಸಬೇಕು.

ಇಲ್ಲಿ ಈಹಾನಿವೃತ್ತಿ ಎಂದರೆ ಕಾಮ್ಯಕರ್ಮತ್ಯಾಗವೆಂದು ಶ್ರೀಧರ ಮುಂತಾದ ವ್ಯಾಖ್ಯಾನಗಳೂ ವೃಥಾಕಾಂಕ್ಷೆಯ ಪರಿತ್ಯಾಗವೆಂದು ವೀರರಾಘವ ಮುಂತಾದ ವ್ಯಾಖ್ಯಾನಗಳೂ ಹೇಳುತ್ತವೆ. ಕಾಮ್ಯಕರ್ಮವನ್ನು ಮಾತ್ರ ತ್ಯಾಗಮಾಡಿದರಾಯಿತೆ? ನಿಷಿದ್ಧಕರ್ಮ ಮಾಡಬಹುದೇ? ದೇವತೆಗಳು ತಮ್ಮ ಪದವಿಯನ್ನು ಸಂಪಾದಿಸಲು ಕಾಮ್ಯಕರ್ಮ ಮಾಡುತ್ತಾರೆ. ಅದು ತಪ್ಪೆ? ವೃಥಾಕಾಂಕ್ಷೆ ಬಿಡಬೇಕೆಂದಿದ್ದಾರೆ. ಅದೂ ತಪ್ಪೆ? ನಿಷಿದ್ಧಕಾಮನೆಯನ್ನು ಮಾತ್ರ ಬಿಡಬೇಕು ತಾನೆ! ಮತ್ತು ಈ ವ್ಯಾಖ್ಯಾನಕಾರರು ಪ್ರಮಾಣದ ಆಧಾರವೇನೂ ಕೊಟ್ಟಿಲ್ಲ. ಶ್ರೀಮದಾಚಾರ್ಯರು ಸತ್ಯಸಂಹಿತೆಯ ಇನ್ನೊಂದು ವಚನವನ್ನು ಪ್ರಮಾಣವಾಗಿ ಉದಾಹರಿಸಿದ್ದಾರೆ-

ಆತ್ಮನೋ ವಿಹಿತಂ ಕರ್ಮ ವರ್ಜಯಿತ್ವಾನ್ಯಕರ್ಮಣಃ ।
ಕಾಮಸ್ಯ ಚ ಪರಿತ್ಯಾಗೋ ನಿರೀಹೇತ್ಯಾಹುರುತ್ತಮಾಃ । ಇತಿ ಚ ॥

ತನಗೆ ವಿಹಿತವಾದ ಕರ್ಮ ಹೊರತು ಬೇರೆಲ್ಲ ಕರ್ಮವನ್ನು ತ್ಯಜಿಸಬೇಕು. ಕರ್ಮಫಲದ ಆಸೆಯನ್ನೂ ನಿಷಿದ್ಧ ವಿಷಯಕಾಮನೆಯನ್ನೂ ಬಿಡಬೇಕು. ಇದನ್ನು ದೊಡ್ಡವರು 'ನಿರೀಹಾ' ಎಂದು ಕರೆದಿದ್ದಾರೆ ಎಂದೂ ಸತ್ಯಸಂಹಿತೆಯಲ್ಲಿ ಉಕ್ತವಾಗಿದೆ.

'ನಿರೀಹಾ' ಎಂಬಲ್ಲಿ ಈಹಾ ಎಂದರೆ ಚೇಷ್ಟಾರೂಪಕರ್ಮವೆಂದೂ ಇಚ್ಛೆ ಎಂದೂ ಅರ್ಥವಿಟ್ಟುಕೊಳ್ಳಬಹುದು. ಮೊದಲನೆ ಅರ್ಥದಲ್ಲಿ ಸ್ವವಿಹಿತವಾದ ಕರ್ಮ

ಹೊರತು ಬೇರೆ ಎಲ್ಲ ಕರ್ಮಗಳ ತ್ಯಾಗ ನಿರೀಹಾ ಎನಿಸುತ್ತದೆ. ಎರಡನೆ ಅರ್ಥದಲ್ಲಿ ನಿಷಿದ್ಧಕಾಮನೆಯನ್ನೂ ಫಲಕಾಮನೆಯನ್ನೂ ಬಿಡುವುದು ನಿರೀಹಾ ಎನಿಸುತ್ತಾದೆ. ದೇವತೆಗಳಿಗೆ ತಮ್ಮ ಪದವಿಯ ಕಾಮನೆಯೂ, ಪದವಿಗಾಗಿ ಅವರು ಮಾಡುವ ಕಾಮ್ಯಕರ್ಮವೂ ಅವರಿಗೆ ವಿಹಿತವಾಗಿರುವುದರಿಂದ ಅವರು ಅದನ್ನು ಬಿಡಬಾರದು.

* * *

ಸ್ತ್ರೀಪುರುಷರೊಳಗಿನ ಅನ್ಯೋನ್ಯ ಅನುರಾಗದ ಬಂಧನವನ್ನು ಸಡಿಲಗೊಳಿಸಿ ಮೋಕ್ಷಸಾಧನೆ ಮಾಡಿಕೊಳ್ಳಲು ಅನೇಕ ಉಪಾಯಗಳನ್ನು ಋಷಭದೇವ ಬ್ರಹ್ಮಾವರ್ತದಲ್ಲಿ ಮಕ್ಕಳಿಗೆ ಉಪದೇಶಿಸುತ್ತಾನೆ.

ಸರ್ವತ್ರ ಮದ್ಭಾವವಿಚಕ್ಷಣೇನ
ಜ್ಞಾನೇನ ವಿಜ್ಞಾನವಿರಾಜಿತೇನ ।
ಯೋಗೇನ ಧೃತ್ಯುದ್ಯಮಸತ್ತ್ವಯುಕ್ತೋ
ಲಿಂಗಂ ವ್ಯಪೋಹೇತ್ ಕುಶಲೋಽಹಮಾಖ್ಯಮ್ ॥ ೧೩ ॥

ಎಲ್ಲೆಡೆ ನಾನಿರುವೆನೆಂದು ಅನುಸಂಧಾನ ಮಾಡಬೇಕು. ನಾನು ಸರ್ವೋತ್ತಮನೆಂಬ ಜ್ಞಾನ ಬೇಕು. ಜೊತೆಗೆ ನನ್ನ ಯೋಗ್ಯವಿಶೇಷಗುಣಗಳನ್ನೂ ಅರಿಯಬೇಕು. ಧ್ಯಾನ ಮಾಡಬೇಕು. ವೈಷ್ಣವಸಿದ್ಧಾಂತದಿಂದ ದೂರ ಸರಿಯದಿರುವ ಧೈರ್ಯ ಬೇಕು. ಉದ್ಭೂತವಾದ ಸತ್ತ್ವಗುಣದಿಂದ ಯುಕ್ತನಾಗಿರಬೇಕು. ಹೀಗೆ ಅಹಂಕಾರಕಾರ್ಯವಾದ ಇಂದ್ರಿಯಗಳಿಂದ ಕೂಡಿದ ಲಿಂಗಶರೀರವನ್ನು ದೂರ ಮಾಡಿಕೊಳ್ಳಬೇಕು.

[೧]ಇಲ್ಲಿ 'ಜ್ಞಾನೇನ ವಿಜ್ಞಾನವಿರಾಜಿತೇನ' ಎಂಬುದಕ್ಕೆ ಶ್ರೀಧರ ಮುಂತಾದ ವ್ಯಾಖ್ಯಾನಕಾರರ ಪ್ರಕಾರ ವಿವರಣೆ ಹೀಗಿದೆ- 'ವಿಜ್ಞಾನ ಎಂದರೆ ಅನುಭವ. ಅನುಭವಜನಕವಾದ ಜ್ಞಾನ ಮೋಕ್ಷಸಾಧನ. ಅನುಭವದಿಂದ ಜ್ಞಾನವು ವಿರಾಜಿತವಾಗುವುದೆಂದರೆ ಶಾಸ್ತ್ರಜ್ಞಾನದಿಂದ ಅಪರೋಕ್ಷಅನುಭವ ಹುಟ್ಟುವುದೇ ಹೊರತು ಬೇರೇನಲ್ಲ.' ಎಂದು. ಆದರೆ 'ವಿರಾಜಿತ' ಎಂಬಲ್ಲಿ ಭೂತಕಾಲಾರ್ಥದ ಪ್ರತ್ಯಯವಿದೆ. ಅನುಭವ ಹುಟ್ಟಿದ ಬಳಿಕವೆ ಜ್ಞಾನ ಮೋಕ್ಷಕ್ಕೆ ಕಾರಣವಾಗುತ್ತದೆ ಎಂದಂತಾಯಿತು. ವಸ್ತುತಃ ಅನುಭವ ಹುಟ್ಟಿದ ಬಳಿಕ ಜ್ಞಾನವಿರುವುದಿಲ್ಲ. ಅನುಭವ ಹುಟ್ಟುವುದಕ್ಕೆ ಮೊದಲೂ ಜ್ಞಾನದಿಂದ ಮೋಕ್ಷ ಉಂಟಾಗುವುದಿಲ್ಲ. ಹೀಗಾಗಿ ಅನುಭವದ್ವಾರಾ ಜ್ಞಾನ ಮೋಕ್ಷಸಾಧನ ಎನ್ನಬೇಕು. ಅನುಭವ ಜನಕಜ್ಞಾನೇನ

೧. ವಿಜ್ಞಾನವಿರಾಜಿತೇನ ವಿಜ್ಞಾನಜನಕೇನೇತ್ಯರ್ಥಃ । ಅನುಭವಜನಕತ್ವಮೇವ ಜ್ಞಾನಸ್ಯ ವಿರಾಜನಮಿತಿ ಭಾವಃ । - ವಿಶ್ವನಾಥಃ ।

ವಿಜ್ಞಾನವಿರಾಜಿತೇನಾನುಭವಪರ್ಯಂತೇನ ಜ್ಞಾನೇನ । -ಶ್ರೀಧರಃ

ಎಂದೇ ಹೇಳಬೇಕು. ಅನುಭವವನ್ನು ಹುಟ್ಟಿಸಿರುವ ಜ್ಞಾನ, 'ಅನುಭವವಿರಾಜಿತಜ್ಞಾನ' ಎನ್ನುವುದು ಸರಿಯಾಗುವುದಿಲ್ಲ. ವಸ್ತುತಃ ಅದ್ವೈತದಲ್ಲಿ 'ದಶಮಸ್ತ್ವಮಸಿ' ಎಂಬಂತೆ 'ತತ್ವಮಸಿ' ಎಂದರೂ ನೇರವಾಗಿ ಅಪರೋಕ್ಷಾನುಭವವೇ ಬರುವುದರಿಂದ ಜ್ಞಾನ ಅನುಭವಜನಕವಲ್ಲ. [೧]ವೀರರಾಘವ ಭಗವತ್ಪ್ರಸಾದರ ವ್ಯಾಖ್ಯಾನಗಳಲ್ಲಿ 'ವಿಜ್ಞಾನ' ಎಂದರೆ ಶಾಸ್ತ್ರ, ಶಾಸ್ತ್ರದಿಂದ ಉದ್ದೀಪಿತವಾದ ಜ್ಞಾನ ಮೋಕ್ಷಸಾಧನ ಎಂದಿದ್ದಾರೆ. 'ವಿಜ್ಞಾನ' ಶಬ್ದಕ್ಕೆ ಶಾಸ್ತ್ರ ಎಂಬ ಅರ್ಥ ಪ್ರಸಿದ್ಧವಿಲ್ಲ. ಏಕವಿಜ್ಞಾನೇನ ಸರ್ವವಿಜ್ಞಾನವನ್ನು ಹೇಳುವಾಗ ಉಪನಿಷತ್ತಿನಲ್ಲಿ ದೃಷ್ಟಾಂತವಾಗಿ 'ಸರ್ವಂ ಮೃನ್ಮಯಂ ವಿಜ್ಞಾತಂ ಸ್ಯಾತ್' ಎಂದು ಮುಂತಾಗಿ ಲೌಕಿಕಜ್ಞಾನವನ್ನು ವಿಜ್ಞಾನಶಬ್ದದಿಂದ ಹೇಳಿದೆ. ಶ್ರೀಮದಾಚಾರ್ಯರು ಜ್ಞಾನವಿಜ್ಞಾನಗಳಿಗೆ ಸತ್ಯಸಂಹಿತಾವಚನ ಮತ್ತು ಅಧ್ಯಾತ್ಮವಚನಗಳ ಆಧಾರಕೊಟ್ಟು ವಿಶೇಷಾರ್ಥಗಳನ್ನು ತಿಳಿಸಿದ್ದಾರೆ.

ಸರ್ವಸ್ಮಾದುತ್ತಮೋ ವಿಷ್ಣುರಿತಿ ಜ್ಞಾನಮುದಾಹೃತಮ್ ।
ಪ್ರತಿಜೀವಂ ಯೇನ ಮುಕ್ತಿಸ್ತದ್ವಿಜ್ಞಾನಂ ವಿದಾಂ ಮತಮ್ ॥ ಇತಿ ಚ ।

ಜ್ಞಾನಂ ವಿಷ್ಣೋರುತ್ತಮತ್ವೇ ತದೇವ ಪ್ರತಿಪೂರುಷಮ್ ।
ವಿಶೇಷೇಣ ತು ವಿಜ್ಞಾನಂ ತಚ್ಚ ಜಾನಾತಿ ಸರ್ವವಿತ್ ॥

ದ್ವಾತ್ರಿಂಶಲ್ಲಕ್ಷಣೈರ್ಯುಕ್ತಸ್ತೀಕ್ಷ್ಣದಂಷ್ಟ್ರಶ್ಚ ಸೌಮ್ಯರುಕ್ ।
ಘೋರರುಕ್ಚಾಪಿ ಪುರುಷಃ ಸ ಸರ್ವಜ್ಞ ಉದಾಹೃತಃ ॥ ಇತ್ಯಧ್ಯಾತ್ಮೇ ॥

ಷಣ್ಣವತ್ಯಂಗುಲೋ ಯಸ್ತು ನ್ಯಗ್ರೋಧಪರಿಮಂಡಲಃ ।
ಸಪ್ತಪಾದಶ್ಚತುರ್ಹಸ್ತಃ ಸ ದೇವೈರಪಿ ಪೂಜ್ಯತೇ ॥
ಇತಿ ವಾಯುಪ್ರೋಕ್ತೇ ।

ನ್ಯಗ್ರೋಧಮಂಡಲೋ ವ್ಯಾಮೋ ಬಾಹೂ ನ್ಯಗ್ರೋಧ ಉಚ್ಯತೇ ॥
ಇತಿ ಚ ॥

ವಿಷ್ಣುಸರ್ವೋತ್ತಮತ್ವಜ್ಞಾನವು ಜ್ಞಾನವೆನಿಸುತ್ತದೆ. ಯಾವ ಜ್ಞಾನದಿಂದ ಯಾವ ಜೀವನಿಗೆ ಮುಕ್ತಿ ಉಂಟಾಗುವುದೋ ಆ ಜೀವನಿಗೆ ಆ ಜ್ಞಾನವು ವಿಜ್ಞಾನವೆನಿಸುತ್ತದೆ ಎಂದೂ ಸತ್ಯಸಂಹಿತೆಯಲ್ಲಿ ಉಕ್ತವಾಗಿದೆ. ವಿಷ್ಣುಸರ್ವೋತ್ತಮತ್ವಜ್ಞಾನ ಬೇರೆ, ಮೋಕ್ಷಜನಕಜ್ಞಾನ ಬೇರೆ ಎಂದು ಇದರ ಅಭಿಪ್ರಾಯವಲ್ಲ. ಅಧ್ಯಾತ್ಮದಲ್ಲಿ ಇದಕ್ಕೆ

೧. ವಿಜ್ಞಾನಂ ಶಾಸ್ತ್ರಂ ತೇನ ವಿರಾಜಿತೇನ ಉದ್ದೀಪಿತೇನ ಜ್ಞಾನೇನ ಧ್ಯಾನಾತ್ಮಕೇನ ।
-ವೀರರಾಘವಃ

ವಿಜ್ಞಾನಂ ಶಾಸ್ತ್ರಂ ತೇನ ವಿರಾಜಿತಮುದ್ದೀಪಿತಂ ತೇನ ಜ್ಞಾನೇನ । -ಭಗವತ್ಪ್ರಸಾದಃ

ಸ್ಪಷ್ಟೀಕರಣ ನೀಡಲಾಗಿದೆ. 'ವಿಷ್ಣುಸರ್ವೋತ್ತಮತ್ವದ ವಿಷಯದಲ್ಲಿ ಯಾವ ಜ್ಞಾನವಿದೆಯೋ ಅದೇ ಜ್ಞಾನ ಆಯಾ ಜೀವನಿಗೆ ಉಪಾಸನೆಗೆ ಯೋಗ್ಯವಾದ ವಿಶೇಷಗುಣಗಳನ್ನೂ ವಿಷಯೀಕರಿಸುತ್ತಿದ್ದರೆ ಆಯಾ ಜೀವನಿಗೆ ವಿಜ್ಞಾನವೆನಿಸುತ್ತದೆ. ತನ್ನ ಉಪಾಸನೆಗೆ ಯೋಗ್ಯವಾದ ವಿಶೇಷಗುಣವನ್ನು ಜೀವ ಸರ್ವಜ್ಞನಾದ ಗುರುವಿನ ಉಪದೇಶದಿಂದ ತಿಳಿಯಬೇಕು. ಆ ಗುರು ಅದನ್ನು ತಿಳಿದಿರುತ್ತಾನೆ. ಸರ್ವಜ್ಞ ಗುರುವಿನ ಲಕ್ಷಣ ಏನೆಂದರೆ ಅವನು ದ್ವಾತ್ರಿಂಶಲ್ಲಕ್ಷಣಗಳಿಂದ ಯುಕ್ತನಾಗಿರುತ್ತಾನೆ. ಅವನ ಹಲ್ಲುಗಳು ತೀಕ್ಷ್ಣ, ಮೈಕಾಂತಿ ಭಕ್ತರಿಗೆ ಸೌಮ್ಯ, ಅಭಕ್ತರಿಗೆ ಘೋರ. ಇಂಥ ಪುರುಷನು ಸರ್ವಜ್ಞನಿರುತ್ತಾನೆ ಎಂದು ಅಧ್ಯಾತ್ಮದಲ್ಲಿ ಹೇಳಿದೆ.

ಒಬ್ಬನಲ್ಲಿ ದ್ವಾತ್ರಿಂಶಲ್ಲಕ್ಷಣಗಳುಂಟೆ ಇಲ್ಲವೆ ಎನ್ನುವುದನ್ನು ತಿಳಿಯಲು ಇವು ಲಕ್ಷಣಗಳು- 'ಅವನ ಎತ್ತರ, ಅವನ ಬೆರಳುಗಳ ಅಳತೆಯಲ್ಲಿ ತೊಂಬತ್ತಾರು ಅಂಗುಲಗಳಿರಬೇಕು. ಅವನ ಪಾದದ ಅಳತೆಯಲ್ಲಿ ಏಳು ಪಾದಗಳಷ್ಟಿರಬೇಕು. ಅವನ ಕೈಯಳತೆಯಲ್ಲಿ ನಾಲ್ಕು ಹಸ್ತಪ್ರಮಾಣದ್ದಾಗಿರಬೇಕು. ನ್ಯಗ್ರೋಧ ಪರಿಮಂಡಲನಾಗಿರಬೇಕು. ಇಂಥವನು ದ್ವಾತ್ರಿಂಶಲ್ಲಕ್ಷಣಯುಕ್ತನಾಗಿದ್ದು ದೇವತೆಗಳಿಗೂ ಪೂಜ್ಯನೆನಿಸುತ್ತಾನೆ' ಎಂದು ವಾಯುಪ್ರೋಕ್ತದಲ್ಲಿ ಹೇಳಿದೆ. 'ನ್ಯಗ್ರೋಧಪರಿಮಂಡಲ ಎಂದರೆ ಒಂದು ಮಾರು ಎತ್ತರದವನೆಂದರ್ಥ. ಏಕೆಂದರೆ ತೋಳುಗಳೆರಡು ನ್ಯಗ್ರೋಧ ಎನಿಸುತ್ತವೆ ಎಂದೂ ವಾಯುಪ್ರೋಕ್ತದಲ್ಲಿ ಹೇಳಿದೆ.

* * *

ನನ್ನ ಅನಂತರ ನಿಮ್ಮಣ್ಣನಾದ ಭರತ ರಾಜನಾಗಲಿ. ನೀವು ಅವನ ಸೇವೆ ಮಾಡಿರಿ. ಅದರಿಂದ ನೀವೂ ರಾಜ್ಯಭಾರ ಮಾಡಿದಂತೆಯೇ ಆಗುತ್ತದೆ, ಆ ಮೂಲಕ ನನ್ನನ್ನೂ ಸೇವೆ ಮಾಡಿದಂತಾಗುತ್ತದೆ ಎಂದು ಋಷಭದೇವ ತನ್ನ ಮಕ್ಕಳಿಗೆ ಉಪದೇಶ ಮಾಡುತ್ತಾನೆ.

ತಸ್ಮಾದ್ ಭವಂತೋ ಹೃದಯೇನ ಜಾತಾಃ
ಸರ್ವೇ ಮಹೀಯಾಂಸಮಮುಂ ಸುನಾಭಮ್ ।
ಅಕ್ಲಿಷ್ಟಬುದ್ಧ್ಯಾ ಭರತಂ ಭಜಧ್ವಂ
ಶುಶ್ರೂಷಣಂ ತದ್ ಭರಣಂ ಪ್ರಜಾನಾಮ್ ॥ ೨೦ ॥

ನೀವೆಲ್ಲರೂ ನನ್ನಿಂದ ನನ್ನ ಹೃದಯಕ್ಕೆ ಪ್ರೀತಿಪಾತ್ರವಾದ ಸತ್ವಗುಣದಿಂದ ಯುಕ್ತರಾಗಿ ಜನಿಸಿದವರು. ಸತ್ವಗುಣಯುಕ್ತರಾದ್ದರಿಂದ ನಿಮ್ಮಣ್ಣ ಭರತ ರಾಜನಾದಾಗ ನೀವು ಅಸೂಯೆ ಪಡಬಾರದು. ಸರ್ವಲೋಕಾಶ್ರಯನಾದ ನನ್ನನ್ನೇ ಆಶ್ರಯಿಸಿದ್ದು ಸರ್ವಪ್ರಜೆಗಳಿಗೂ ಆಶ್ರಯನಾಗುತ್ತಾನೆ ಭರತ. ಅವನನ್ನು ಸೇವಿಸಿರಿ. ಆಗ ಅವನು ಮಾಡುವ ರಾಜ್ಯಭಾರದಿಂದ ನೀವೂ ರಾಜ್ಯಭಾರ ಮಾಡಿ ನನ್ನ ಸೇವೆ ಮಾಡಿದಂತಾಗುತ್ತದೆ.

ಇಲ್ಲಿ 'ಸುನಾಭಂ' ಎಂದರೆ ಸರ್ವಲೋಕಾಶ್ರಯನಾದ ನನ್ನ ಪುತ್ರನಾಗಿದ್ದು ನನ್ನನ್ನೇ ಆಶ್ರಯಿಸಿರುವ ಭರತನನ್ನು ಎಂದರ್ಥ. ಬೇರೆ ವ್ಯಾಖ್ಯಾನಕಾರರು 'ಸನಾಭಂ' ಎಂದು ಪಾಠವಿಟ್ಟುಕೊಂಡು ಸೋದರನಾದ ಭರತನನ್ನು ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಭರತನಿಗೆ ಸೋದರನೆಂಬ ವಿಶೇಷಣ ವ್ಯರ್ಥ.

'ಸುನಾಭಂ' ಎಂಬ ಪಾಠದಲ್ಲಿ 'ಸುನಾಭ' ಎಂಬ ವಿಶೇಷಣದಿಂದ ಸರ್ವಲೋಕಾಶ್ರಯನಾದ ನನ್ನ ಪುತ್ರನಾದ್ದರಿಂದ ನನ್ನಂತೆ ಸರ್ವಪ್ರಜೆಗಳಿಗೂ ಆಶ್ರಯದಾತನಾಗುತ್ತಾನೆ ಎಂದು ಸೂಚಿತವಾಗುತ್ತದೆ. ಸರ್ವಪ್ರಜೆಗಳಿಗೆ ಆಶ್ರಯನಾಗುವ ಆ ಭರತನನ್ನು ನೀವು ಸೇವಿಸಿದರೆ, ಅಂದರೆ ಅವನಿಗೆ ರಾಜ್ಯಭಾರದಲ್ಲಿ ಸಹಕಾರ ನೀಡಿದರೆ, ನೀವೂ ಪ್ರಜೆಗಳಿಗೆ ಆಶ್ರಯ ನೀಡಿದಂತಾಗಿ ನನ್ನ ಸೇವೆ ಮಾಡಿದಂತಾಗುತ್ತದೆ. ಕ್ಷತ್ರಿಯರಿಗೆ ಪ್ರಜಾಪಾಲನಕಾರ್ಯವೆ ನನ್ನ ಆರಾಧನೆ ಎನಿಸುತ್ತದೆ ಎಂದೂ ತಿಳಿಸಿದಂತಾಗುತ್ತದೆ.

'ಸುನಾಭ' ಎಂದರೆ ಸು ಉತ್ತಮನಾದ ನಾಭಿ, ಅಂದರೆ ಋಷಭದೇವನ ತಂದೆಯಾದ ನಾಭಿರಾಜನೇ ಯಾರಿಗೆ ತಂದೆಯೋ ಅವನು ಭರತ ಎಂದು ಹೇಳುವುದು ಸರಿಯಾಗುವುದಿಲ್ಲ. ಭರತ ನಾಭಿರಾಜನ ಮಗನಲ್ಲ, ಋಷಭದೇವನ ಮಗ. ಮತ್ತು ನಾಭಿರಾಜನಿಗೆ ಸು- ಉತ್ತಮನಾದ ಎಂಬ ವಿಶೇಷಣವೂ ವ್ಯರ್ಥವಾಗುತ್ತದೆ. ಅದರಿಂದ ನಾಭಿಶಬ್ದದಿಂದ ಋಷಭದೇವನನ್ನೇ ಗ್ರಹಿಸಬೇಕು. ಏಕೆಂದರೆ ನಾಭಿ ಎಂದರೆ ಆಶ್ರಯ. ಸರ್ವಲೋಕಾಶ್ರಯನಾದ್ದರಿಂದ ಋಷಭರೂಪಿ ಭಗವಂತ ಸು-ನಾಭಿ ಉತ್ತಮ ಆಶ್ರಯ. ಈಗ ಸುಶಬ್ದ ಸಾರ್ಥಕವಾಗುತ್ತದೆ. ಹೆಸರಿಗೆ ಮಾತ್ರ ನಾಭಿ ಎನಿಸಿದ ನಾಭಿರಾಜನನ್ನು ವ್ಯಾವೃತ್ತಿ ಮಾಡುತ್ತದೆ. ನಾಭಿರಾಜ ತನ್ನ ಪ್ರಜೆಗಳಿಗೆ ಆಶ್ರಯನಾಗಿದ್ದರೂ ಸರ್ವಲೋಕಾಶ್ರಯನಲ್ಲ. ಸುಶಬ್ದದಿಂದ ಸರ್ವಲೋಕಾಶ್ರಯತ್ವ ಉಕ್ತವಾಗುವುದರಿಂದ ನಾಭಿರಾಜನನ್ನು ವ್ಯಾವೃತ್ತಿ ಮಾಡುತ್ತದೆ. ಋಷಭದೇವ ನಾಭಿ, ಸರ್ವಲೋಕಾಶ್ರಯನಾಗಿದ್ದಾನೆ ಮಾತ್ರವಲ್ಲ, ಅವನಿಗೆ, ಅವನು ಭಗವಂತನಾದ್ದರಿಂದ, ನಾಭಿ ಎಂಬ ಹೆಸರೂ ಪ್ರಸಿದ್ಧವಾಗಿದೆ. ಇದಕ್ಕೆ ಕೂರ್ಮಪುರಾಣವಚನ ಪ್ರಮಾಣವಾಗಿದೆ.

'ಶುಶ್ರೂಷಣಂ ತದ್ ಭರಣಂ ಪ್ರಜಾನಾಂ' ಎಂಬಲ್ಲಿ ತತ್ ಶಬ್ದಕ್ಕೆ ಅನ್ವಯ ಕಾಣುವುದಿಲ್ಲ. ಶುಶ್ರೂಷಣವಾಗಲಿ ಪ್ರಜಾಭರಣವಾಗಲಿ ಪೂರ್ವಪ್ರಕೃತವಲ್ಲ. ಅದರಿಂದ ಅಲ್ಲಿ ತತ್ ಶಬ್ದಕ್ಕೆ ಅನ್ವಯವಿಲ್ಲ. 'ಭರತಂ ಭಜಧ್ವಂ' ಎಂದು ಪ್ರಕೃತವಾದ ಭರತನ ಸೇವೆಯನ್ನು ತತ್ ಶಬ್ದದಿಂದ ಹೇಳಿದರೆ ಅದನ್ನೂ ಶುಶ್ರೂಷಣಕ್ಕೆ ಅಥವಾ

ಪ್ರಜಾಭರಣಕ್ಕೆ ಅನ್ವಯಿಸಲು ಶಕ್ಯವಿಲ್ಲ. ಭರತನ ಸೇವೆಯೇ ಪ್ರಜಾಭರಣವಲ್ಲ ತಾನೆ? ಮತ್ತು ಭರತನ ಸೇವೆ ಭರತನ ಶುಶ್ರೂಷಣವಾಗುತ್ತದೆ ಎನ್ನುವುದೂ ಅನರ್ಥಕ. ಭರತನ ಸೇವೆ ನನ್ನ ಸೇವೆ ಎಂದು ಅನ್ವಯಿಸಿದರೆ ಪ್ರಜಾಭರಣ ಅನನ್ವಿತವಾಗಿ ಉಳಿಯುತ್ತದೆ. ಭರತನ ಸೇವೆ ಮಾಡಿದರೆ ಪ್ರಜಾಭರಣ ಮಾಡಿದಂತೆಯೂ ಆಗುತ್ತದೆ. ನನ್ನ ಸೇವೆ ಮಾಡಿದಂತೆಯೂ ಆಗುತ್ತದೆ ಎಂದು ಹೇಳುವ ಅಭಿಪ್ರಾಯದಿಂದ ತತ್ ಶಬ್ದವನ್ನು ಶುಶ್ರೂಷಣ ಪ್ರಜಾಭರಣ ಗಳಿಗೆರಡಕ್ಕೂ ಅನ್ವಯಿಸುವುದೂ ಕೂಡ ಚಕಾರವಿಲ್ಲದ್ದರಿಂದ ಕೂಡುವುದಿಲ್ಲ. ಮತ್ತು ಭರತನ ಸೇವೆ ಮಾಡಿದ ಮಾತ್ರಕ್ಕೆ ಅದು ಋಷಭದೇವನ ಸೇವೆ ಹೇಗಾಗುತ್ತದೆ? ಇಷ್ಟು ಸಮಸ್ಯೆಗಳಿದ್ದರೂ ಬೇರೆ ವ್ಯಾಖ್ಯಾನಕಾರರು ತಚ್ಛಬ್ದವನ್ನು ಶುಶ್ರೂಷಣ ಪ್ರಜಾಭರಣಗಳೆರಡಕ್ಕೂ ಅನ್ವಯಿಸಿದ್ದಾರೆ.೧ ಅದರಿಂದ 'ತತ್' ಎಂಬುದು ಅವ್ಯಯ. 'ತಸ್ಯ' ಎಂದರ್ಥ. 'ತಸ್ಮಾತ್ ಭವಂತೋ ಹೃದಯೇನ ಜಾತಾಃ' ಎಂದು ತತ್ ಶಬ್ದದಿಂದ ಹೇಳಿದ ಋಷಭದೇವನೇ'ತಸ್ಯ' ಎಂಬುದಕ್ಕೂ ಅರ್ಥ. ಭರತ ರಾಜನಾಗಿ ಪ್ರಜಾಭರಣ ಮಾಡಿದರೆ ಅದು ನನ್ನ ಶುಶ್ರೂಷಣೆಯೇ ಆಗುತ್ತದೆ ಎಂದು ಋಷಭದೇವ ಹೇಳುತ್ತಿದ್ದಾನೆ. ಹೀಗೇ ಪ್ರಜಾಭರಣವನ್ನು ನನ್ನ ಶುಶ್ರೂಷಣರೂಪವಾಗಿ ಭರತ ಮಾಡುವಾಗ ನೀವು ಅವನನ್ನು ಸೇವಿಸಿದರೆ ನೀವೂ ಪ್ರಜಾಭರಣ ಮಾಡಿದಂತಾಗಿ ಆ ಮೂಲಕ ನನ್ನ ಶುಶ್ರೂಷಣವನ್ನೇ ಮಾಡಿದಂತಾಗುತ್ತದೆ ಎಂದು ಹೇಳುವ ಅಭಿಪ್ರಾಯ ಕಾಣುತ್ತದೆ.

ನಾಭಿರಿತ್ಯಥ ನಾಮ ಸ್ಯಾದ್ಧರೇಃ ಸರ್ವಾಶ್ರಯೋ ಯತಃ ॥

ಇತಿ ಕೌರ್ಮೇ ।

ತತ್ ತಸ್ಯ ಮಮ ಶುಶ್ರೂಷಣಂ ॥

ನಾಭಿ ಎಂಬುದೂ ಹರಿಯ ನಾಮವೇ ಆಗಿದೆ. ಏಕೆಂದರೆ ಅವನು ಸರ್ವ ಲೋಕಾಶ್ರಯನಾಗಿದ್ದಾನೆ ಎಂದು ಕೂರ್ಮಪುರಾಣದಲ್ಲಿ ಹೇಳಿದೆ.

ತತ್ ಎಂದರೆ ತಸ್ಯ ಎಂದರ್ಥ. ಪೂರ್ವಪ್ರಕೃತನಾದ ಋಷಭದೇವನನ್ನು ಹೇಳುತ್ತದೆ. 'ಶುಶ್ರೂಷಣಂ' ಎಂಬುದರೊಡನೆ ಅನ್ವಯಿಸುತ್ತದೆ. ಪ್ರಜಾಭರಣವು ನನ್ನ, ಅಂದರೆ, ಋಷಭದೇವನ ಶುಶ್ರೂಷಣವಾಗುತ್ತದೆ ಎಂದರ್ಥ.

* * *

೧. ನನು ತ್ವತ್ಪುತ್ರತ್ವಾತ್ ತ್ವಾಂ ವಯಂ ಭಜೇಮ, ರಾಜಪುತ್ರತ್ವಾತ್ ಪ್ರಜಾಶ್ಚ ಪಾಲಯೇಮೇತಿ ಚೇದತ ಆಹ ತದೇವ ಶುಶ್ರೂಷಣಂ ಪ್ರಜಾನಾಂ ಚ ಪಾಲನಂ । ಭರತಾನುವೃತ್ತ್ಯೈವ ಸರ್ವಂ ಕೃತಂ ಸ್ಯಾತ್ ಇತಿ ಭಾವಃ । -ಶ್ರೀಧರಃ

ಮೋಕ್ಷಸಾಧನೆಗೆ ಚೇತನತಾರತಮ್ಯಜ್ಞಾನವೂ ಆವಶ್ಯಕ ಎನ್ನುವ ಅಭಿಪ್ರಾಯದಿಂದ ಋಷಭದೇವ ಬೇರೆ ಚೇತನರ ತಾರತಮ್ಯವನ್ನು ಹಿಂದಿನ ಶ್ಲೋಕದಲ್ಲಿ ಹೇಳಿ ಮುಂದೆ ದೇವತಾತಾರತಮ್ಯವನ್ನು ಹೇಳುತ್ತಿದ್ದಾನೆ.

ದೇವಾ ಸುರೇಭ್ಯೋ ಮಘವಾನ್ ಪ್ರಧಾನೋ
ದಕ್ಷಾದಯೋ ಬ್ರಹ್ಮಸುತಾಶ್ಚತೇಷಾಮ್ ।
ಭವಃ ಪರಃ ಸೋಽಥ ವಿರಿಂಚವೀರ್ಯಃ
ಸ ಮತ್ಪರೋಽಹಂ ದ್ವಿಜದೇವದೇವಃ ॥ ೨೨ ॥

ದೇವಾನುಚರರಿಗಿಂತಲೂ ದೇವತೆಗಳು ಶ್ರೇಷ್ಠರು. ದೇವತೆಗಳಿಗಿಂತಲೂ, ದಕ್ಷ ಪ್ರಜಾಪತಿ ಮುಂತಾದ ಬ್ರಹ್ಮಪುತ್ರರಿಗಿಂತಲೂ ಇಂದ್ರ ಶ್ರೇಷ್ಠ. ಇಂದ್ರನ ಅನಂತರ ರುದ್ರಶ್ರೇಷ್ಠ. ಆ ರುದ್ರನೂ ಬ್ರಹ್ಮಪುತ್ರ. ಅದರಿಂದ ಅವನಿಗಿಂತ ಬ್ರಹ್ಮ ಶ್ರೇಷ್ಠ. ಬ್ರಹ್ಮನಿಗಿಂತ ನಾನು ಶ್ರೇಷ್ಠ. ಬ್ರಾಹ್ಮಣಶ್ರೇಷ್ಠರಿಗೆ ನಾನು ಆರಾಧ್ಯದೇವತೆ. ಹೀಗೆ ಬ್ರಾಹ್ಮಣರು ನನ್ನನ್ನು ಪೂಜಿಸುವುದರಿಂದ ಅವರು ಕ್ಷತ್ರಿಯರಾದ ನಿಮಗೆ ಪೂಜ್ಯರು.

ಇಲ್ಲಿ 'ಅಹಂ ದ್ವಿಜದೇವದೇವಃ' ಎಂದರೆ ದ್ವಿಜಶ್ರೇಷ್ಠರು ನನಗೆ ದೇವರು, ಅಂದರೆ ಪೂಜ್ಯರು ಎಂದು ಬಹುವ್ರೀಹಿ ಸಮಾಸ ಮಾಡಲು ಅವಕಾಶವಿದೆ. ಬೇರೆ ವ್ಯಾಖ್ಯಾನಕಾರರು ಹಾಗೇ ವ್ಯಾಖ್ಯಾನ ಮಾಡಿದ್ದಾರೆ.[೧] ಆದರೆ ರಾಜನಾಗಿದ್ದು ಲೋಕಶಿಕ್ಷಣಕ್ಕಾಗಿ ಮುನಿಗಳನ್ನು ಪೂಜಿಸುವಂತೆ ತೋರಿಕೊಂಡರೂ ವಸ್ತುತಃ ಅವನು ಭಗವಂತನಾದ್ದರಿಂದ ಅವನಿಗೆ ಮುನಿಗಳು ಪೂಜ್ಯರಲ್ಲ. ಮುನಿಗಳಿಗೇ ಅವನು ಪೂಜ್ಯ. ಈ ಶ್ಲೋಕದಲ್ಲಿ ಋಷಭದೇವ ತನ್ನ ಲೋಕವ್ಯವಹಾರವನ್ನು ಹೇಳುತ್ತಿಲ್ಲ. ಪಾರಮಾರ್ಥಿಕವಾದ ಚೇತನ ತಾರತಮ್ಯವನ್ನು ಹೇಳುತ್ತಿದ್ದಾನೆ. ತಾರತಮ್ಯದ ತುತ್ತತುದಿಯಲ್ಲಿರುವವನು ಭಗವಂತನೆ. ಅವನಿಗೆ ಪೂಜ್ಯರು ಯಾರೂ ಇಲ್ಲ. ಮತ್ತು ಇದು 'ಕ್ಷತ್ರಿಯರಾದ ನೀವು ಬ್ರಾಹ್ಮಣರನ್ನು ಪೂಜಿಸಬೇಕು ಏಕೆಂದರೆ ಬ್ರಾಹ್ಮಣರು ನನ್ನನ್ನು ಪೂಜಿಸುವವರು' ಎಂದು ಹೇಳುವ ಸಂದರ್ಭವಾಗಿರುವುದರಿಂದ ದ್ವಿಜದೇವರಿಗೆ ಬ್ರಾಹ್ಮಣಶ್ರೇಷ್ಠರಿಗೆ ನಾನು ದೇವ, ಪೂಜ್ಯ ಎಂದು ಷಷ್ಠೀ ತತ್ಪುರುಷ ಮಾಡುವುದೇ ಉಚಿತ.

---

೧. ಉತ್ಕರ್ಷಕಾಷ್ಠಾಭೂತಾ ದ್ವಿಜದೇವಾ ಇತಿ ಭಾವಃ । - ವೀರರಾಘವಃ ।
ಮಮ ಪೂಜ್ಯತ್ವಾತ್ ಬ್ರಾಹ್ಮಣಾಃ ಮತ್ತೋಽಪಿ ಶ್ರೇಷ್ಠಾ ಇತ್ಯರ್ಥಃ । - ಗಿರಿಧರಃ ।

ದ್ವಿಜದೇವಾನಾಂ ದೇವಃ ।

'ದ್ವಿಜದೇವದೇವಃ' ಎಂಬುದು ಬಹುವ್ರೀಹಿಯಲ್ಲ. ದ್ವಿಜದೇವರಿಗೆ ದೇವನೆಂದು ಷಷ್ಠೀತತ್ಪುರುಷ ಸಮಾಸ.

* * *

ಕ್ಷತ್ರಿಯರು ಬ್ರಾಹ್ಮಣರಿಗೆ ವಿಶೇಷವಾಗಿ ಸತ್ಕಾರ ಮಾಡಬೇಕು, ಜೊತೆಗೆ ಎಲ್ಲ ಚರಾಚರಗಳನ್ನೂ ನನ್ನ ಪ್ರತಿಮೆ, ವಾಸಸ್ಥಾನ, ನನಗಿಂತ ಭಿನ್ನವಾಗಿದೆ ಎಂದು ಭಾವಿಸಿ ಆದರಿಸಬೇಕು ಎಂದು ಋಷಭದೇವ ಮಕ್ಕಳಿಗೆ ಉಪದೇಶಿಸುತ್ತಾನೆ.

ಸರ್ವಾಣಿ ಮದ್ಧಿಷ್ಣ್ಯತಯಾ ಭವದ್ಭಿ-
ಶ್ಚರಾಣಿ ಭೂತಾನಿ ಸುತಾ ಧ್ರುವಾಣಿ ।
ಸಂಭಾವಿತವ್ಯಾನಿ ಪದೇಪದೇ ವೋ
ವಿವಿಕ್ತದೃಷ್ಟಿಸ್ತದುತಾರ್ಹಣಂ ಮೇ ॥ ೨೬ ॥

ಪುತ್ರರೆ, ಎಲ್ಲ ಜಂಗಮ ಹಾಗೂ ಸ್ಥಾವರ ಜೀವಿಗಳನ್ನು ನನ್ನ ವಾಸಸ್ಥಾನಗಳೆಂದು ಯಥಾಯೋಗ್ಯವಾಗಿ ನೀವು ಸತ್ಕರಿಸಬೇಕು, ಕೇವಲ ಬ್ರಾಹ್ಮಣರನ್ನಲ್ಲ. ಏಕೆಂದರೆ ಪ್ರತಿಯೊಂದು ಸ್ಥಾನದಲ್ಲಿಯೂ ಅದು ನನ್ನಿಂದ ಬೇರೆಯಾಗಿದ್ದು ನನಗೆ ವಾಸಸ್ಥಾನವಾಗಿದೆ ಎಂದು ತಿಳಿಯುವುದೇ ನನ್ನ ಆರಾಧನೆಯಾಗಿದೆ.

ಇಲ್ಲಿ 'ವಿವಿಕ್ತದೃಷ್ಟಿಃ' ಎಂದರೆ ಪ್ರತಿಯೊಂದು ಚರಾಚರವೂ ಭಗವಂತನಿಗಿಂತ ಭಿನ್ನವಾಗಿದ್ದೇ ಅವನ ಪ್ರತಿಮೆ ಎನಿಸುತ್ತದೆ ಎಂದು ಭೇದದೃಷ್ಟಿ ವಿವಕ್ಷಿತವಾಗಿದೆ. ಭಗವಂತನಿಗಿಂತ ಭಿನ್ನವಲ್ಲದಿದ್ದರೆ ಅದು ಅವನಿಗೆ ಪ್ರತಿಮೆ, ವಾಸಸ್ಥಾನ ಎನಿಸುವುದು ಹೇಗೆ? ಪ್ರತಿಮೆಯಾಗಿರುವುದರಿಂದ ಮತ್ತು ವಾಸಸ್ಥಾನವಾಗಿರುವುದರಿಂದ ಭಗವಂತನಿಗಿಂತ ಭಿನ್ನವೇ ಆಗಿರಬೇಕು ಎಂದು ಭೇದದೃಷ್ಟಿ ಹೊಂದಿರುವುದೂ ಹಾಗೇ ಪ್ರತಿಪಾದನ ಮಾಡುವುದೂ ಹರಿಗೆ ಅತ್ಯಂತ ಪ್ರೀತಿಕರ. ಆದರೆ ಬೇರೆ ವ್ಯಾಖ್ಯಾನಕಾರರು ವಿವಿಕ್ತ ಎಂದರೆ ಶುದ್ಧವಾದ ಮತ್ಸರಾದಿದೋಷರಹಿತವಾದ ದೃಷ್ಟಿ ಹೊಂದಿರಬೇಕು ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಅವರು 'ವಿವಿಕ್ತದೃಗ್ಭಿಃ' ಎಂದು ಪಾಠವಿಟ್ಟುಕೊಂಡಿದ್ದಾರೆ. ಆ ಪಾಠದಲ್ಲಿ 'ವಿವಿಕ್ತದೃಗ್ಭಿಃ ಸಂಭಾವಿತವ್ಯಾನಿ' ಎಂದು ಅನ್ವಯ. ಮತ್ಸರಾದಿದೋಷರಹಿತದೃಷ್ಟಿಯಿಂದ ಆದರಿಸಬೇಕು ಎಂದರ್ಥ. ಆದರೆ ಅದು ಅಪಪಾಠ. 'ವಿವಿಕ್ತದೃಷ್ಟಿಃ' ಎಂದೇ ಪಾಠ. 'ವಿವಿಕ್ತದೃಷ್ಟಿಃ ಮೇ ಅರ್ಹಣಂ' ಎಂದು ಅನ್ವಯ. ಈಗ ದೋಷರಹಿತವಾದ ದೃಷ್ಟಿಯೇ ನನ್ನ ಪೂಜೆ' ಎಂದು ಹೇಳುವುದಕ್ಕಿಂತ, ದೋಷರಹಿತದೃಷ್ಟಿಯಿಂದ ಚರಾಚರಗಳನ್ನು ಆದರಿಸುವುದೇ

ನನ್ನ ಪೂಜೆ ಎನ್ನಬೇಕು ತಾನೆ? ಆದರಿಂದ 'ವಿವಿಕ್ತದೃಷ್ಟಿಃ' ಎಂಬ ಪಾಠದಲ್ಲಿ 'ದೋಷರಹಿತದೃಷ್ಟಿ' ಎಂದು ಅರ್ಥವಲ್ಲ. 'ಭೇದದೃಷ್ಟಿ' ಎಂದೇ ಅರ್ಥ ಹೇಳಬೇಕು. 'ವಿವಿಕ್ತದೃಗ್ಭಿಃ' ಎಂಬ ಪಾಠದಲ್ಲಿಯೂ 'ಭೇದದೃಷ್ಟಿಯಿಂದ ಆದರಿಸಬೇಕು, ಅದೇ ನನ್ನ ಪೂಜೆ' ಎಂದು ಅರ್ಥೈಸುವುದು ಅಸಂಗತವೇನಲ್ಲ. ವೀರರಾಘವ ವ್ಯಾಖ್ಯಾನ ಭಗವತ್ಪ್ರಸಾದ ವ್ಯಾಖ್ಯಾನಗಳಲ್ಲಿ ಹಾಗೇ ಅರ್ಥೈಸಿದ್ದಾರೆ. ಈ ಅರ್ಥವಿಟ್ಟುಕೊಂಡರೆ ಭಗವಂತನಿಗೆ ಅತಿಪ್ರಿಯವಾದ ಭೇದೋಪಾಸನೆಯನ್ನು ಭಾಗವತದಲ್ಲಿ ಹೇಳಿದಂತಾಗುತ್ತದೆ.

ವಿವಿಕ್ತದೃಷ್ಟಿರ್ಜೀವಾನಾಂ ಧಿಷ್ಣ್ಯತಯಾ ಪರಮೇಶ್ವರಸ್ಯ ಭೇದದೃಷ್ಟಿಃ ॥

ಉಪಪಾದಯೇತ್ ಪರಾತ್ಮಾನಂ ಜೀವೇಭ್ಯೋ ಯಃ ಪದೇಪದೇ ।
ಭೇದೇನೈವ ನ ಚೈತಸ್ಮಾತ್ ಪ್ರಿಯೋ ವಿಷ್ಣೋಸ್ತು ಕಶ್ಚನ ॥
ಇತಿ ಪಾದ್ಮೇ ॥

ಯೋ ಹರೇಶ್ಚೈವ ಜೀವಾನಾಂ ಭೇದವಕ್ತಾ ಹರೇಃ ಪ್ರಿಯಃ ।
ಇತಿ ಚ ।

ಜೀವರು ಪರಮಾತ್ಮನಿಗೆ ಪ್ರತಿಮೆಯಾಗಿರುವುದರಿಂದ ವಾಸಸ್ಥಾನವೂ ಆಗಿರುವುದರಿಂದ ಜೀವರಿಗಿಂತ ಪರಮಾತ್ಮನಿಗೆ, ಪರಮಾತ್ಮನಿಗಿಂತ ಜೀವರಿಗೆ ಭೇದವಿರಲೇಬೇಕೆಂದು ಪ್ರತಿಪಾದನ ಮಾಡುವುದೂ ಹಾಗೇ ಉಪದೇಶಿಸುವುದೂ 'ವಿವಿಕ್ತದೃಷ್ಟಿ'ಶಬ್ದಾರ್ಥ.

ಇದು ಪದ್ಮಪುರಾಣದಲ್ಲಿ ಉಕ್ತವಾಗಿದೆ. 'ಪ್ರತಿಯೊಂದು ಸ್ಥಾನದಲ್ಲಿಯೂ ಪರಮಾತ್ಮ ಜೀವರಿಗಿಂತ ಭಿನ್ನನೇ ಆಗಿರುತ್ತಾನೆ ಎಂದು ಯಾರು ಉಪಪಾದನ ಮಾಡುವನೋ, ಅವನಿಗಿಂತ ಹೆಚ್ಚು ವಿಷ್ಣುವಿಗೆ ಪ್ರಿಯನು ಯಾರೂ ಇಲ್ಲ' ಎಂದು ಅಲ್ಲಿ ಹೇಳಿದೆ. ಮತ್ತು 'ಹರಿಗಿಂತ ಜೀವರು ಭಿನ್ನರೆಂದು ಉಪದೇಶಿಸುವವನು ಹರಿಗೆ ಪ್ರಿಯನೇ ಆಗಿರುತ್ತಾನೆ' ಎಂದೂ ಅಲ್ಲಿಯೇ ಹೇಳಿದೆ.

ಭಾಗವತದಲ್ಲಿ ಬರುವ 'ಪದೇಪದೇ ವಿವಿಕ್ತದೃಷ್ಟಿಃ' ಎನ್ನುವ ಮಾತನ್ನು 'ಪದೇಪದೇ ಭೇದೇನೈವ ಉಪಪಾದಯೇತ್' ಎಂದು ಪದ್ಮಪುರಾಣ ವ್ಯಾಖ್ಯಾನಿಸುತ್ತಿರುವುದು ಸ್ಪಷ್ಟವಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ಪಂಚಮೋಽಧ್ಯಾಯಃ ॥

—o—

ಅಧ್ಯಾಯ-೬

ಅಧ್ಯಾಯಸಾರಾಂಶ

ಯೋಗಸಿದ್ಧಿಗಳನ್ನು ಯೋಗಿಗಳು ಪಡೆದರೂ ಅವನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳಬಾರದು. ಬಳಸಿಕೊಂಡರೆ ಅವರು ಸೌಭರಿಮುನಿಯಂತೆ ವಿಷಯಾಸಕ್ತಿಗೊಳಗಾಗಿ ತಪಃಶಕ್ತಿ ಕಳೆದುಕೊಳ್ಳುವ ಭಯವಿದೆ. ಇದನ್ನು ಯೋಗಿಗಳಿಗೆ ಬೋಧಿಸುವ ಉದ್ದೇಶದಿಂದ ಋಷಭದೇವ ತಾನು ಸ್ವಭಾವಸಿದ್ಧವಾದ ಯೋಗಸಿದ್ಧಿಗಳನ್ನೂ ತೋರಲಿಲ್ಲ. ಯೋಗಿಗಳಿಗೆ ಭಗವಂತನ ಅವತಾರ ಹಾಗೂ ಮೂಲರೂಪಗಳ ಅಭೇದೋಪಾಸನೆಯೂ ಅಗತ್ಯವೆಂದು ತೋರಿಸಲು ಋಷಭ ತಾನು ತನ್ನ ಮೂಲರೂಪದಿಂದ ಅಭಿನ್ನನೆಂದು ಧ್ಯಾನಿಸಿದ. ದಕ್ಷಿಣಕನ್ನಡದ ಕೊಡಚಾದ್ರಿಗೆ ಬಂದು ಅಲ್ಲಿ ಹುಚ್ಚರಂತೆ ಅಲೆದಾಡಿದ. ಯೋಗಿಗಳು ಮೌನ ಮುರಿಯದಂತೆ ಯತ್ನಿಸಬೇಕೆಂದು ತೋರಿಸಲು ಬಾಯೊಳಗೆ ಕಲ್ಲುಗಳನ್ನು ಹಾಕಿಕೊಂಡ. ಕಾಳ್ಗಿಚ್ಚಿನೊಳಗೆ ಪ್ರವೇಶಿಸಿದ. ಅವನ ಆವೇಶದಿಂದ ಕಾಳ್ಗಿಚ್ಚು ಇನ್ನಷ್ಟು ಧಗಧಗಿಸಿ ಕಾಡನ್ನೆಲ್ಲ ಸುಟ್ಟಿತು. ಬಳಿಕ ಆ ಕಿಚ್ಚಿನಿಂದ ಹೊರಗೆ ಬಂದು ತಾನು ವಾಸುದೇವನೆಂದು ಹೇಳಿಕೊಂಡ. ಅದನ್ನು ಅಲ್ಲಿಯ ರಾಜನಾದ ಅರ್ಹಂತ ತಪ್ಪಾಗಿ ತಿಳಿದು ತನ್ನನ್ನೇ ವಾಸುದೇವನೆಂದು ಪೂಜಿಸಲು ಲೋಕಕ್ಕೆ ಉಪದೇಶಿಸಿದ. ಅದರಿಂದ ಲೋಕ ವೈದಿಕಧರ್ಮವನ್ನು ತೊರೆದು ಸ್ನಾನಶೌಚ ಆಚಮನಾದಿಗಳನ್ನೂ ತೊರೆದು ಕಲಿಕಾಲದಲ್ಲಿ ಪಾಷಂಡಿಗಳಾಗಿ ಅಧಃಪತನ ಹೊಂದುತ್ತಾರೆ. ಹೀಗೆ ಜ್ಞಾನಕಾರ್ಯವನ್ನೂ ಮೋಹಕಾರ್ಯವನ್ನೂ ಮಾಡಿದ ಋಷಭನಾಮಕ ಪರಮಾತ್ಮನ ಚರಿತ್ರೆ ಪರಮಮಂಗಳಕರವಾಗಿದೆ. ಕೇಳುವ ಹೇಳುವವರಿಬ್ಬರಿಗೂ ಏಕಾಂತ ಭಕ್ತಿ ಉಂಟು ಮಾಡುತ್ತದೆ. ಭಗವಂತ ಮುಕ್ತಿಯೋಗ್ಯರಿಗೆಲ್ಲರಿಗೂ ಮುಕ್ತಿ ನೀಡುತ್ತಾನೆ. ಆದರೆ ಪೂರ್ಣಭಕ್ತಿಯೋಗವನ್ನು ಮಾತ್ರ ಚತುರ್ಮುಖನಿಗೊಬ್ಬನಿಗೇ ನೀಡುತ್ತಾನೆ.

* * *

ಋಷಭದೇವ ಲೋಕಕ್ಕೆ ವೈರಾಗ್ಯದ ಶಿಕ್ಷಣ ನೀಡುವುದಕ್ಕಾಗಿ ಅವಧೂತವೇಷದಿಂದ ಸಂಚರಿಸತೊಡಗಿದ. ಆಕಾಶಸಂಚಾರ ಮನೋವೇಗ ಪರಕಾಯಪ್ರವೇಶ ಮುಂತಾದ ಯೋಗಸಿದ್ಧಿ ಅವನಿಗೆ ಸ್ವಭಾವಸಿದ್ಧವೇ ಆಗಿದ್ದರೂ ಅವುಗಳನ್ನು ಲೋಕಕ್ಕೆ ಪ್ರದರ್ಶಿಸಲಿಲ್ಲ. ಐದನೆ ಅಧ್ಯಾಯದ ಕೊನೆಯಲ್ಲಿ ಹೀಗೆ ಶುಕಮುನಿ ಹೇಳಿದಾಗ ಈ ಆರನೆ ಅಧ್ಯಾಯದಲ್ಲಿ ಮೊದಲಿಗೆ ಪರೀಕ್ಷಿದ್ರಾಜ ಕೇಳುತ್ತಾನೆ. 'ಮಹಾಯೋಗಿಗಳಿಗೇ ಯೋಗಸಿದ್ಧಿಗಳು ಲಭಿಸುತ್ತವೆ. ಅವರು ಅದನ್ನು ಸ್ವೀಕರಿಸಿದರೂ ಅವರ ಮನಃಸ್ಥೈರ್ಯಕ್ಕೆ ಏನೂ ಅಪಾಯಬರಲಾರದು. ಹೀಗಿರುವಾಗ ಋಷಭದೇವ ಯೋಗಸಿದ್ಧಿಗಳನ್ನು ಯೋಗಿಗಳು ಸ್ವೀಕರಿಸಬಾರದೆಂದು ಏಕೆ ಬೋಧಿಸಿದ' ಎಂದು. ಅದಕ್ಕೆ ಶುಕಮುನಿಗಳು ಹೇಳುತ್ತಾರೆ. ಯೋಗಿಗಳು ಯೋಗಸಿದ್ಧಿಗಳನ್ನು ಸ್ವೀಕರಿಸಿದರೆ ಮನಃಸ್ಥೈರ್ಯ ಹಾಳಾಗುವುದು ವಿಷಯಾಸಕ್ತಿ ಬಂದುಬಿಡುವುದು ಅದರಿಂದ ನಿಷಿದ್ಧಕರ್ಮ ಉಂಟಾಗುವುದು ಅದರ ಫಲವಾಗಿ ಮೋಕ್ಷದಲ್ಲಿ ಆನಂದಾನುಭವ ಕಡಿಮೆಯಾಗುವುದು' ಎಂದು.

ರಾಜೋವಾಚ

ನ ನೂನಂ ಭಗವನ್ನಾತ್ಮರಾಮಾಣಾಂ ಯೋಗಸಮೀರಿತ ಜ್ಞಾನಾವ-
ಭರ್ಜಿತಕರ್ಮಬೀಜಾನಾಮೈಶ್ವರ್ಯಾಣಿ ಪುನಃ ಕ್ಲೇಶದಾನಿ ಭವಿತು-
ಮರ್ಹಂತಿ ಯದೃಚ್ಛಯೋಪಗತಾನಿ ॥ ೧ ॥

ಋಷಿರುವಾಚ

ಸತ್ಯಮುಕ್ತಂ ಕಿಂತ್ವಿಹ ವಾ ಏಕೇ ಮನಸೋ ವಿಸ್ರಂಭಮನವಸ್ಥಾನಸ್ಯ
ಶಠಕಿರಾತ ಇವ ನ ಸಂಗಚ್ಛಂತಿ ॥ ೨ ॥

ತಥಾಚೋಕ್ತಮ್–

ನ ಕುರ್ಯಾತ್ ಕಸ್ಯಚಿತ್ ಸಖ್ಯಂ ಮನಸಿ ಹ್ಯನವಸ್ಥಿತೇ ।
ಯದ್ವಿಸ್ರಂಭಾಚ್ಚಿರಾಚ್ಚೀರ್ಣಂ ಚಸ್ಕಂದ ತಪ ಐಶ್ವರಮ್ ॥ ೩ ॥

ನಿತ್ಯಂ ದದಾತಿ ಕಾಮಸ್ಯ ಛಿದ್ರಂ ತದನು ಯೇऽರಯಃ ।
ಯೋಗಿನಃ ಕೃತಮೈತ್ರಸ್ಯ ಪತ್ಯುರ್ಜಾಯೇವ ಪುಂಶ್ಚಲೀ ॥ ೪ ॥

ಕಾಮೋ ಮನ್ಯುರ್ಮದೋ ಲೋಭಃ
ಶೋಕಮೋಹಭಯಾದಯಃ ।

ಕರ್ಮಬಂಧಶ್ಚ ಯನ್ಮೂಲಃ
ಸ್ವೀಕುರ್ಯಾತ್ ಕೋ ನು ತದ್ ಬುಧಃ ॥ ೫ ॥

ಪರೀಕ್ಷಿದ್ರಾಜ ಕೇಳಿದ–

ಪೂಜ್ಯರೇ, ಪರಮಾತ್ಮಧ್ಯಾನದಲ್ಲೇ ಸುಖ ಕಾಣುವ ಯೋಗಿಗಳು ಹರಿಧ್ಯಾನ ಜನ್ಯವಾದ ಜ್ಞಾನದ ಬಲದಿಂದ ಕರ್ಮಬೀಜವಾದ ರಾಗಾದಿಗಳನ್ನು ಸುಟ್ಟುಕೊಂಡಿರುವವರು. ಅವರಿಗೆ ದೈವೇಚ್ಛೆಯಿಂದ ಯೋಗಸಿದ್ಧಿಗಳು ಬಳಿಗೆ ಬಂದರೆ ಅವು ನಿಶ್ಚಯವಾಗಿಯೂ ಕ್ಲೇಶದಾಯಕವಾಗುವುದಿಲ್ಲ ತಾನೆ?

ಶುಕಮುನಿಗಳು ಹೇಳಿದರು–

ನೀನು ಹೇಳಿದ್ದು ನಿಜ. ಆದರೆ ಕೆಲವು ಜ್ಞಾನಿಗಳು ಮೋಸಗಾರನಾದ ಬೇಡನಲ್ಲಿ ಮೃಗಗಳು ಹೇಗೆ ವಿಶ್ವಾಸವಿಡುವುದಿಲ್ಲವೋ ಹಾಗೆ ಮನಸ್ಸಿನಲ್ಲಿ ರಾಗಾದಿಗಳು ತಿರುಗಿ ಉದಿಸಲಾರವು ಎಂಬ ವಿಷಯದಲ್ಲಿ ವಿಶ್ವಾಸವಿಡುವುದಿಲ್ಲ.

ಇದನ್ನು ಈ ಶ್ಲೋಕಗಳು ಸ್ಪಷ್ಟ ಪಡಿಸುತ್ತವೆ–

ಮನಸ್ಸು ಸ್ಥಿರವಿಲ್ಲದಿರುವುದರಿಂದ ಯಾವುದೇ ವಿಷಯಭೋಗಪದಾರ್ಥದ ಬಗ್ಗೆ ಮನಸ್ಸಿನಲ್ಲಿ ವಿಶ್ವಾಸವಿಡಬಾರದು. ಏಕೆಂದರೆ ಮನಸ್ಸಿನಲ್ಲಿ ವಿಶ್ವಾಸವಿಟ್ಟದ್ದರಿಂದ ಬಹುಕಾಲದಿಂದ ಸಂಪಾದಿಸಿದ್ದ ತಪಃಶಕ್ತಿಯೂ ಸೋರಿ ಹೋಗಿರುವುದು ಸೌಭರಿಮುಂತಾದ ಯೋಗೇಶ್ವರರಲ್ಲಿ ಕಂಡುಬಂದಿದೆ.

ಶೀಲಗೆಟ್ಟ ಹೆಂಡತಿಯಲ್ಲಿ ಪತಿ ವಿಶ್ವಾಸವಿಟ್ಟರೆ ಅವಳು ಪರಪುರುಷರಿಗೆ ಅವಕಾಶ ಮಾಡಿಕೊಟ್ಟು ಪತಿಯನ್ನು ಕೊಲ್ಲಿಸುತ್ತಾಳೆ. ಹಾಗೆ ಅಸ್ಥಿರಮನಸ್ಸಿನಲ್ಲಿ ವಿಶ್ವಾಸವಿಡುವ ಯೋಗಿಗೆ ಮನಸ್ಸು ಯಾವಾಗಲೂ ಕಾಮಕ್ಕೂ ಅದರ ಬೆನ್ನಹಿಂದೆ ಕ್ರೋಧಾದಿ ಶತ್ರುಗಳಿಗೂ ಅವಕಾಶ ಮಾಡಿ ಕೊಡುತ್ತದೆ.

ಕಾಮಕ್ರೋಧ ಮದಲೋಭ ಶೋಕಮೋಹ ಭಯ ಮುಂತಾದುವುಗಳಿಗೂ ಕರ್ಮಬಂಧಕ್ಕೂ ಹತೋಟಿಯಲ್ಲಿಲ್ಲದ ಮನಸ್ಸೇ ಮೂಲಕಾರಣ. ಅಂಥ ಮನಸ್ಸು ತನ್ನ ವಶದಲ್ಲಿಯೇ ಇರುತ್ತದೆ ಎಂದು ಯಾವ ಬುದ್ಧಿವಂತನು ತಾನೆ ಭರವಸೆ ಇಡಲು ಸಾಧ್ಯ?

ಇಲ್ಲಿ 'ಮನಸೋ ವಿಸ್ರಂಭಮನವಸ್ಥಾನಸ್ಯ ನ ಸಂಗಚ್ಛತಿ' ಎಂದರೆ ಚಂಚಲವಾದ ಮನಸ್ಸನ್ನು ಎಂದೂ ನಂಬಿ ಮೋಸ ಹೋಗಬಾರದು. ಅದು ಮನೋನಿಗ್ರಹ ಉಳ್ಳವರಿಗೂ ಸ್ವಲ್ಪ ಎಚ್ಚರ ತಪ್ಪಿದರೂ ಭೋಗಾಸಕ್ತಿ ಉಂಟುಮಾಡಿ ಯೋಗಿಗೆ ಅಧಃಪಾತ ಹೊಂದಲು ಕಾರಣವಾಗಬಹುದು. ಸಂಸಾರಕ್ಕೆ ಕಾರಣವಾಗಿ ಮೋಕ್ಷಕ್ಕೆ ಪ್ರತಿಬಂಧಕ ವಾಗಬಹುದು. ಅದರಿಂದ 'ಪಾಕ್ಷಿಕೋಽಪಿ ದೋಷೋ ವರ್ಜನೀಯಃ'

ದೋಷಪ್ರಸಕ್ತಿಗೂ ಅವಕಾಶ ನೀಡಬಾರದೆಂಬ ಉದ್ದೇಶದಿಂದ ಯೋಗಸಿದ್ಧಿಗಳನ್ನು ತಿರಸ್ಕರಿಸಬೇಕೆಂದು ಋಷಭದೇವ ಯೋಗಿಗಳಿಗೆ ಎಚ್ಚರ ನೀಡುತ್ತಿದ್ದಾನೆ' ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ.[೧]

ವಸ್ತುತಃ ಯೋಗಸಿದ್ಧಿಗಳು ಅಧಃ ಪಾತಕ್ಕೆ ಪುನಃ ಸಂಸಾರಪ್ರಾಪ್ತಿಗೆ ಕಾರಣವಾಗುವುದಿಲ್ಲ. ಮೋಕ್ಷಕ್ಕೆ ಪ್ರತಿಬಂಧಕವೂ ಆಗುವುದಿಲ್ಲ. ಅವು ದೇವತೆಗಳಿಗೆ ಸ್ವಭಾವಿಕವಾಗಿ ಇರುತ್ತವೆ. ದೈತ್ಯರಿಗೆ ವರಬಲದಿಂದ ಬಂದು ಅವರಿಗೆ ಅಧಃಪಾತಕ್ಕೆ ಕಾರಣವಾಗಬಹುದಷ್ಟೆ. ಮನುಷ್ಯರಿಗೆ ಸಾಧನ ಮಾಡಿ ಭಗವಂತನನ್ನು ಅಪರೋಕ್ಷೀಕರಿಸಿದ ಮೇಲೆಯೇ ಆವಾವ ಭಗವದ್ರೂಪಗಳ ಧ್ಯಾನದಿಂದ ಆವಾವ ಸಿದ್ಧಿಗಳು ಭಗವಂತನ ಅನುಗ್ರಹದಿಂದಲೇ ಬರುವುದರಿಂದ ಅವರಿಗೆ ಅವು ಅಧಃಪಾತಕ್ಕೆ ಪುನಃ ಸಂಸಾರಕ್ಕೆ ಕಾರಣವಾಗುವುದಿಲ್ಲ. ಒಮ್ಮೆ ಬಿಂಬಾಪರೋಕ್ಷವಾಯಿತೆಂದರೆ ಮೋಕ್ಷ ಯಾವ ಕಾರಣದಿಂದಲೂ ಇಲ್ಲವೆಂದಾಗುವುದಿಲ್ಲ.

'ನ ಕಶ್ಚಿದ್ ಬ್ರಹ್ಮವಿತ್ ಸೃತಿಮನುಭವತಿ ಮುಕ್ತೋ ಹ್ಯೇವ ಭವತಿ'

ಎಂದು ಅನಿಯಮಾಧಿಕರಣಭಾಷ್ಯೋಕ್ತ ಕೌಂಡಿನ್ಯಶ್ರುತಿ ಸ್ಪಷ್ಟವಾಗಿ ಇದನ್ನು ಹೇಳುತ್ತಿದೆ.

'ಸ ಬ್ರಾಹ್ಮಣಃ ಕೇನ ಸ್ಯಾತ್ ಯೇನ ಸ್ಯಾತ್ ತೇನೇದೃಶ ಏವ'

---

೧. ಮನಃ ಖಲು ಕಾಮಕ್ರೋಧಾದ್ಯನಭಿಭವರೂಪಾಂ ಸ್ವಶುದ್ಧಿಂ ಪ್ರದರ್ಶ್ಯ ಸ್ವನಿರೋಧೇ ಶಿಥಿಲಪ್ರಯತ್ನಂ ಸಾಧಕಮೇಕಸ್ಮಿನ್ ದಿನೇ ಕಾಮಾದ್ಯೈರೇವಾಕಸ್ಮಿಕೈಸ್ತಮಧಃ-ಪಾತಯತಿ । -ವಿಶ್ವನಾಥಃ

ಐಶ್ವರ್ಯಾಂಗೀಕಾರೇಽನವಸ್ಥಿತಂ ಮನಸ್ತತ್ರಾಸಕ್ತಿಂ ಸಂಪಾದ್ಯ ಯೋಗಿನಂ ಪುನಸ್ತದೇವ ಸಂಪಾತಯೇತ್ ಸೌಭರ್ಯಾದಿವತ್ । ಅತ ಆತ್ಮಾರಾಮೈಃ ಸಿದ್ಧೈರ್ಜ್ಞಾನಯೋಗಸಂರಕ್ಷಣಾರ್ಥಂ ಸಾಧಕೈಃ ಪುನಃಸಂಸೃತಿಪ್ರಾಪ್ತಿನಿವೃತ್ತ್ಯರ್ಥಂ ಚ ಸರ್ವಥೈಶ್ವರ್ಯಾಂಗೀಕಾರೋ ನ ವಿಧೇಯ ಇತಿ ನೃಪಪ್ರಶ್ನೋತ್ತರಂ ಸಮಾಸತೋ ಗುಪ್ತಂ ಪ್ರದರ್ಶಿತಮ್ । -ಭಗವತ್ಪ್ರಸಾದಃ ।

ವೈಹಾಯಸಾದೀನಾಂ ಸಂಸೃತಿನಿಮಿತ್ತತ್ವೇನ ಮುಕ್ತಿವಿರೋಧಿತ್ವಾತ್ ನ ಪರಿಗೃಹೀತವಾನಿತ್ಯರ್ಥಃ । -ವೀರರಾಘವಃ

ಪಾಕ್ಷಿಕೋಽಪಿ ದೋಷೋ ವರ್ಜನೀಯಃ ಇತ್ಯುಪದೇಷ್ಟುಂ ನಾಭ್ಯನಂದದಿತಿ ಭಾವಃ । -ಶ್ರೀಧರಃ

ಎಂದು ಕಾಮಚಾರಾಧಿಕರಣಭಾಷ್ಯೋಕ್ತಶ್ರುತಿಯೂ ಜ್ಞಾನಿಗೆ ತನ್ನಿಚ್ಛಾನುಸಾರ ನಡೆಯಲು ಅನುಮತಿ ನೀಡಿದೆ. ಅಂದರೆ, ತಮ್ಮಿಚ್ಛೆಗನುಗುಣವಾಗಿಯೇ ಕರ್ಮಾಚರಣೆ ಮಾಡಬೇಕಾದವರು ಋಜುಗಳು. ಅವರು ನಿಷಿದ್ಧಕರ್ಮ ಮಾಡಿದರೆ ಅವರಿಗೆ ಅದರಿಂದ ಏನೂ ಅನಿಷ್ಟ ಉಂಟಾಗುವುದಿಲ್ಲ. ಉಳಿದವರಿಗೆ ಸ್ವಲ್ಪ ಅನಿಷ್ಟ ಉಂಟಾದರೂ ಅಧಃಪತನ, ಪುನಃಸಂಸಾರಪ್ರಾಪ್ತಿ ಎಂಬುದು ಸರ್ವಥಾ ಇಲ್ಲ. ದುಃಖಪ್ರಾರಬ್ಧವಿರುವ ಪಕ್ಷದಲ್ಲಿ ಅದನ್ನು ಉಣ್ಣುವುದಕ್ಕಾಗಿ ನಿಷಿದ್ಧಕರ್ಮ ಮಾಡಲೇ ಬೇಕಾಗುತ್ತದೆ. ಅದರಿಂದ ಪ್ರಾರಬ್ಧಕ್ಷಯವಾಗುವುದರಿಂದ ಅದು ಮೋಕ್ಷಕ್ಕೆ ಅನುಕೂಲವೇ ಆಗುತ್ತದೆ. ಹಾಗೇ ಸುಖಪ್ರಾರಬ್ಧ ಉಳ್ಳವರು ವಿಷಯಾಸಕ್ತರಾಗಿ ವಿಷಯಸುಖ ಉಂಡು ತೀರಿಸಬೇಕಾಗುವುದರಿಂದ ಅವರಿಗೂ ವಿಷಯಾಸಕ್ತಿ ಮೋಕ್ಷಕ್ಕೆ ಅನುಕೂಲವೆ. ಹೀಗಾಗಿ ವಿಷಯಭೋಗಕ್ಕಾಗಿ ಯೋಗಸಿದ್ಧಿಗಳನ್ನು ಸ್ವೀಕರಿಸಿದರೆ ಯೋಗಿಗೆ ಮಹಾ ಅನರ್ಥ ಎನ್ನುವುದು ಸರಿಯಲ್ಲ. ಅನರ್ಥವೇನಿಲ್ಲ ಎನ್ನುವುದು ಇದರ ಅಭಿಪ್ರಾಯವಲ್ಲ. ಬೇರೆ ಅನರ್ಥವಿದೆ. ಅದರಿಂದಲೇ ಋಷಭದೇವ ಯೋಗಸಿದ್ಧಿಯನ್ನು ಲೋಕಕ್ಕೆ ತೋರಲಿಲ್ಲ ಎಂದು ಶ್ರೀಮದಾಚಾರ್ಯರು ಹೇಳುತ್ತಾರೆ–

ಮಹೈಶ್ವರ್ಯಸ್ವರೂಪೋಽಪಿ ಭಗವಾನೃಷಭೋ ವಿರಾಟ್ ।
ನೈಶ್ವರ್ಯಾಣಿ ಸ್ವಕೀಯಾನಿ ಖ್ಯಾಪಯಾಮಾಸ ಸರ್ವವಿತ್ ॥

ಉತ್ತಮಾನಾಂ ಜ್ಞಾಪನಾರ್ಥಂ ಧರ್ಮತತ್ತ್ವಸ್ಯ ಕೇಶವಃ ।
ತೇಷಾಮೈಶ್ವರ್ಯಭೋಗೇ ಹಿ ಮನಃ ಸಕ್ತಿಂ ವ್ರಜೇದ್ಯದಿ ॥

ಆನಂದೋ ಮುಕ್ತಿಗೋ ಹ್ರಾಸಂ ವಿಕರ್ಮಕರಣಾದ್ ವ್ರಜೇತ್ ।
ಧರ್ಮಾಧರ್ಮವಿಹೀನೋಽಪಿ ಭಗವಾನೃಷಭಸ್ತತಃ ॥

ತೇಷಾಂ ಧರ್ಮಜ್ಞಾಪನಾರ್ಥಂ ನಾವಿಶ್ಚಕ್ರೇ ಪರಾಂ ಸ್ಥಿತಿಮ್ ।
ದೇವಾನಾಂ ನಾಶುಭಾದ್‌ಧ್ರಾಸಃ ಶುಭಾತ್ ಕಾಚಿತ್ ಸುಖೋನ್ನತಿಃ ॥

ಆಧಿಕಾರಿಕಜೀವಾನಾಮೇವಮನ್ಯೇಷು ತು ದ್ವಯಮ್ ।
ಅಲ್ಪಾಧಿಕಾರಿಣಾಂ ತತ್ರ ಹ್ರಾಸೋಽಪಿ ಭವತಿ ಧ್ರುವಮ್ ॥

ಅಶುಭಾಭಾವಜೋನ್ನಾಹೋ ಮಹಾಧಿಕಾರಿಣಾಮಪಿ ।
ಅಶುಭೇ ಕೃತೇ ನ ಭವತಿ ತಾರತಮ್ಯಾಚ್ಚ ಸ ಸ್ಮೃತಃ ॥

ಪ್ರಜಾಪಾಶ್ಚ ತಥಾ ದೇವಾ ಮಹಾಧಿಕಾರಿಣಃ ಸ್ಮೃತಾಃ ।
ಋಷ್ಯಶೀತಿಸ್ತಥಾ ಸಪ್ತ ಪಿತರೋಽಪ್ಸರಸಾಂ ಶತಮ್ ॥
ಗಂಧರ್ವಾಣಾಂ ತಥಾ ರಾಜ್ಞಾಂ ವಿಂಶದನ್ಯಾಸು ಜಾತಿಷು ।
ಅಲ್ಪಾಧಿಕಾರಿಣಃ ಪ್ರೋಕ್ತಾ ಅನಧಿಕಾರಿಣಃ ಪರೇ ॥

ಇತಿ ಬ್ರಹ್ಮಾಂಡೇ ॥

ಭಗವಾನ್ ಋಷಭದೇವ ಮಹಾಯೋಗಸಿದ್ಧಿ ಸ್ವರೂಪನೇ ಆಗಿದ್ದರೂ ಅದನ್ನು ತೋರಿದರೆ ಯೋಗಿಗಳು ಯೋಗಸಿದ್ಧಿಗಳನ್ನು ಸ್ವೀಕರಿಸಿ ಅನರ್ಥಭಾಗಿಗಳಾದಾರೆಂದು ತಿಳಿದು ಸರ್ವಜ್ಞನಾದ ಸರ್ವೇಶ್ವರನಾದ ಆತ ತನ್ನ ಯೋಗಸಿದ್ಧಿಗಳನ್ನು ತೋರಲಿಲ್ಲ. ಜ್ಞಾನಿಗಳು ತಮ್ಮಲ್ಲಿ ಯೋಗಸಿದ್ಧಿಗಳಿದ್ದರೂ ಅವುಗಳನ್ನು ತೋರಿಸಬಾರದೆನ್ನುವ ಧರ್ಮರಹಸ್ಯವನ್ನು ಅವರಿಗೆ ತಿಳಿಸುವುದಕ್ಕಾಗಿ ಹಾಗೆ ಮಾಡಿದ. ಯೋಗ ಸಿದ್ಧಿಯಿಂದ ಸುಖಭೋಗ ಸಂಪಾದಿಸಬಹುದೆಂದು ತೋರಿದರೆ ಯೋಗಿಗಳ ಮನಸ್ಸು ನಿಷಿದ್ಧಕರ್ಮದಲ್ಲಿ ಆಸಕ್ತವಾದೀತು. ಅದರಿಂದ ಆ ನಿಷಿದ್ಧಕರ್ಮದಿಂದ ಅವರಿಗೆ ಮೋಕ್ಷದಲ್ಲಿ ಆನಂದಹ್ರಾಸವಾದೀತು. ಇದು ಅನರ್ಥ. ಆ ಕಾರಣದಿಂದ ಭಗವಾನ್ ಋಷಭದೇವ ತಾನು ಪುಣ್ಯಪಾಪಕರ್ಮಲೇಪರಹಿತನಾಗಿದ್ದರೂ ಜ್ಞಾನಿಗಳಿಗೆ ಧರ್ಮಶಿಕ್ಷಣ ನೀಡುವುದಕ್ಕಾಗಿಯೇ ತನ್ನ ಸ್ವರೂಪಭೂತವಾದ ಯೋಗಸಿದ್ಧಿಗಳನ್ನು ವ್ಯಕ್ತ ಮಾಡಲಿಲ್ಲ.

ದೇವತೆಗಳಿಗೆ ನಿಷಿದ್ಧಕರ್ಮದಿಂದ ಅವರ ಕ್ಲೃಪ್ತಸುಖಕ್ಕೆ ಚ್ಯುತಿ ಬರುವುದಿಲ್ಲ. ಪುಣ್ಯಕರ್ಮದಿಂದ ಮಾತ್ರ ಅವರ ಕ್ಲೃಪ್ತಸುಖ ಪೂರ್ಣವಾಗಿ ಅಭಿವ್ಯಕ್ತಿ ಹೊಂದುತ್ತದೆ. ಹೀಗೇ ಬೇರೆ ಆಧಿಕಾರಿಕ ಜೀವರಿಗೂ ಪುಣ್ಯಪಾಪ ಕರ್ಮಗಳು ಕೃಪ್ತಸುಖದಲ್ಲಿ ವೃದ್ಧಿಹ್ರಾಸಗಳಿಗೆ ಕಾರಣವಾಗುವುದಿಲ್ಲ. ಆಧಿಕಾರಿಕರಲ್ಲದವರಿಗೆ ನಿಷಿದ್ಧಕರ್ಮದಿಂದ ಕ್ಲೃಪ್ತಸುಖದಲ್ಲಿ ಹ್ರಾಸ, ಪುಣ್ಯಕರ್ಮದಿಂದ ಸಮಾನರಾದ ಇತರ ಮುಕ್ತರಿಗಿಂತ ಕ್ಲೃಪ್ತಸುಖದ ಅಭಿವ್ಯಕ್ತಿಯಲ್ಲಿ ಅಧಿಕ್ಯ ಇವೆರಡೂ ಇವೆ. ಆಧಿಕಾರಿಕರಲ್ಲಿ ಅಲ್ಪಾಧಿಕಾರಿಗಳಿಗೂ ಹೀಗೇ ವೃದ್ಧಿಹ್ರಾಸಗಳಿವೆ. ಮಹಾಧಿಕಾರಿಗಳಿಗೆ ಅವು ಇಲ್ಲದಿದ್ದರೂ ನಿಷಿದ್ಧಕರ್ಮದಿಂದ ಅವರ ಸುಖದಲ್ಲಿ, ನಿಷಿದ್ಧಕರ್ಮವಿಲ್ಲದಿದ್ದರೆ ಬರಬಹುದಾದ ಉನ್ನಾಹ, ಸಮುದ್ರತರಂಗದಂತೆ ಉಕ್ಕುವುದು, ಇಲ್ಲವಾಗುತ್ತದೆ. ಇದಕ್ಕೆ ತಾರತಮ್ಯವೇ ಪ್ರಯೋಜಕ.

ಮರೀಚಿ ಮುಂತಾದ ಪ್ರಜಾಪತಿಗಳೂ ದೇವತೆಗಳೂ ಮಹಾಧಿಕಾರಿಗಳು. ಎಂಬತ್ತು ಮಂದಿ ಋಷಿಗಳು ಏಳು ಮಂದಿ ಪಿತೃಗಳು ನೂರು ಮಂದಿ ಅಪ್ಸರೆಯರು ನೂರು ಮಂದಿ ಗಂಧರ್ವರು ನೂರು ಮಂದಿ ಚಕ್ರವರ್ತಿಗಳು ಸಿದ್ಧಚಾರಣ ಮುಂತಾದ ಉಪದೇವಜಾತಿಗಳಲ್ಲಿ ಇಪ್ಪತ್ತು ಇಪ್ಪತ್ತು ಮಂದಿ ಇವರೆಲ್ಲರೂ ಅಲ್ಪಾಧಿಕಾರಿಗಳು. ಬೇರೆ ಯಾರೂ ಆಧಿಕಾರಿಕರಲ್ಲ ಎಂದು ಬ್ರಹ್ಮಾಂಡಪುರಾಣದಲ್ಲಿ ಉಕ್ತವಾಗಿದೆ.

* * *

ಋಷಭದೇವ ಯೋಗಿಗಳಿಗೆ ಮೋಕ್ಷಸಾಧನ ಪ್ರಕಾರವನ್ನು ಕಲಿಸುವುದಕ್ಕಾಗಿ ತನ್ನ ಶರೀರದಂತಿರುವ ಈ ಭೂಲೋಕವನ್ನು ಬಿಡಲು ಇಚ್ಛಿಸಿದ. ಮತ್ತು ಪರಮಾತ್ಮನಿಗೂ ಅವನ ಅವತಾರಗಳಿಗೂ ಭೇದವಿಲ್ಲವೆಂದು ಯೋಗಿಗಳು ಮರಣಕಾಲದಲ್ಲಿ ಚಿಂತಿಸಬೇಕೆಂದು ಕಲಿಸುವುದಕ್ಕಾಗಿ ಅವತಾರವಾದ ತನ್ನನ್ನು ಪರಮಾತ್ಮನಿಂದ ಬೇರೆ ಅಲ್ಲ, ಅಭಿನ್ನನೆಂದೂ ಚಿಂತಿಸಿದ.

ಅಥೈವಮಖಿಲಲೋಕಪಾಲಲಲಾಮೋ ವಿಲಕ್ಷಣೋ ಜಡವದ-
ವಧೂತವೇಷಭಾಷಾಚರಿತ್ರೈರವಿಲಕ್ಷಿತಭಗವತ್ಪ್ರಭಾವೋ
ಯೋಗಿನಾಂ ವಿವಿಧಸಾಂಪರಾಯವಿಧಿಮನುಶಿಕ್ಷಯತ್ ಸ್ವಕಳೇಬರಂ
ಜಿಹಾಸುರಾತ್ಮನ್ಯಾತ್ಮಾನಮಸಂವ್ಯವಹಿತಮನರ್ಥಾಂತರಭಾವೇ-
ನಾನ್ವೀಕ್ಷಮಾಣ ಉಪರತಾನುವೃತ್ತಿರುಪರರಾಮ ॥ ೬ ॥

ಎಲ್ಲ ಲೋಕಪಾಲಕರಿಗೂ ಅಲಂಕಾರಪ್ರಾಯನಾಗಿದ್ದು ಲೋಕವಿಲಕ್ಷಣನಾದರೂ ಋಷಭದೇವ ತನ್ನ ಭಗವತ್ಪ್ರಭಾವವನ್ನು ಜನಗಳಿಗೆ ತೋರಗೊಡಲಿಲ್ಲ. ಮೂಢ ಮಾನವನಂತೆ ತೋರಿಕೊಂಡು ಅವಧೂತರ ವೇಷ ಭಾಷೆ ನಡತೆಗಳಿಂದ ತನ್ನ ಪ್ರಭಾವವನ್ನು ಮರೆಮಾಚಿದ. ಬಳಿಕ ಯೋಗಿಗಳಿಗೆ ಮೋಕ್ಷಸಾಧನಪ್ರಕಾರವನ್ನು ಕಲಿಸುವುದಕ್ಕಾಗಿ ತನ್ನ ಶರೀರದಂತಿರುವ ಈ ಭೂಲೋಕವನ್ನು ಬಿಡಲು ಇಚ್ಛಿಸಿದ. ಅದಕ್ಕೆ ಪರಮಾತ್ಮನಿಗಿಂತ ತಾನು ಬೇರೆ ಅಲ್ಲ ಎಂಬ ಭಾವನೆಯಿಂದ ನಿರಂತರ ಅವನನ್ನು ಕಾಣುತ್ತ ವಿಷಯಾನುಭವವನ್ನು ತೊರೆದು ಅವತಾರರೂಪನಾದ ತಾನು ತನ್ನ ಬಳಿಯೆ ಇರುವ ತನ್ನ ಮೂಲರೂಪವನ್ನು ಧ್ಯಾನಿಸಿದ.

[೧]ಇಲ್ಲಿ ವಿಶ್ವನಾಥ ವ್ಯಾಖ್ಯಾನದಲ್ಲಿ 'ಸ್ವಕಲೇವರಂ ಜಿಹಾಸುಃ' ಎಂದರೆ ಋಷಭದೇವನ ಶರೀರ ಚಿನ್ಮಯವಾದ್ದರಿಂದ ತ್ಯಾಗ ಮಾಡಲಾಗದಿರುವುದರಿಂದ 'ತನ್ನ ಶರೀರವನ್ನು ಮರೆ ಮಾಡಲು ಇಚ್ಛಿಸಿ' ಎಂದು ವ್ಯಾಖ್ಯಾನಿಸಬೇಕು ಎಂದಿದೆ. 'ಕಲೇವರ' ಶಬ್ದದಿಂದ ಕಲೇವರದ ಪ್ರಾಕಟ್ಯವನ್ನು ಗ್ರಹಿಸಬೇಕೆಂದಿದೆ. ಆದರೆ ಇದೇ ವಿಶ್ವನಾಥ ವ್ಯಾಖ್ಯಾನದಲ್ಲಿ ಹಿಂದೆ ಮೂರನೆ ಅಧ್ಯಾಯದ ಕೊನೆಯಲ್ಲಿ ಋಷಭಾವತಾರವರ್ಣನ ಪ್ರಸಂಗದಲ್ಲಿ ಋಷಭನ ಶರೀರ 'ಶುದ್ಧಸತ್ತ್ವರೂಪ' ಎಂದಿದೆ, ಇಲ್ಲಿ ಚಿನ್ಮಯ ಎಂದಿದೆ. ಭೂಲೋಕದಲ್ಲಿ ತನ್ನ ಜಡ ಶರೀರವನ್ನು

೧. ಸ್ವಕಲೇವರಂ ಜಿಹಾಸುಃ ಸ್ವಕಲೇವರಪ್ರಾಕಟ್ಯಂ ತ್ಯಕ್ತುಮಿಚ್ಛುರಿತಿ ವಾಸ್ತವೋಽ-ರ್ಥಃ। ದೇಹತ್ಯಾಗಾನುಕರಣೇನೈವ ಶಿಕ್ಷಯನ್ನಿತ್ಯರ್ಥಃ। ತದ್ದೇಹಸ್ಯ ಚಿನ್ಮಯತ್ವಾತ್.. ಶುಕ್ಲಯಾ ಶುದ್ಧಸತ್ವರೂಪಯಾ ತನುವಾ ತನ್ವಾ। -ವಿಶ್ವನಾಥಃ।

ಅಂತರ್ಧಾನ ಮಾಡಿಕೊಂಡ ಮಾತ್ರಕ್ಕೆ ಅದನ್ನು 'ಶರೀರತ್ಯಾಗ' ಎಂದು ಹೇಳುವುದೂ ಯುಕ್ತವಾಗುವುದಿಲ್ಲ. ಭೂಲೋಕತ್ಯಾಗವೆಂದು ಮಾತ್ರ ಹೇಳಬಹುದು. [೧]ವೀರರಾಘವವ್ಯಾಖ್ಯಾನಪ್ರಕಾರ ಋಷಭದೇವ ಭಗವಂತನ ಅವತಾರವಲ್ಲ. ಅಂಶಾವತಾರನಾದ ಕಪಿಲನೇ ಈ ಋಷಭದೇವ. ಅಂಶಾವತಾರನೆಂದು ಮಾತ್ರ ವಿವಕ್ಷೆಯಿಂದ ಭಗವಂತನೆಂದು ವ್ಯವಹಾರ ಎಂದಿದೆ. ಮತ್ತು 'ಶುಕ್ಲಯಾ ತನುವಾ' ಎಂಬುದಕ್ಕೆ ಋಷಭನ ಶರೀರ ಶುದ್ಧಸತ್ವಾತ್ಮಕವೂ ಅಲ್ಲ, ಹೆಚ್ಚು ಸತ್ವಾಂಶದಿಂದ ಯುಕ್ತವಾಗಿದೆ ಎಂದೂ ವ್ಯಾಖ್ಯಾನಿಸಿದ್ದಾರೆ. ಅದರಿಂದ ಋಷಭ ಶರೀರತ್ಯಾಗವನ್ನೇ ಮಾಡುತ್ತಾನೆ. 'ಉಪರರಾಮ' ಎಂದರೆ ಶರೀರತ್ಯಾಗ ಮಾಡಿದ ಎಂದೇ ಅರ್ಥ. ಆದರೆ ಶರೀರವನ್ನು ಕಾಡ್ಗಿಚ್ಚು ಸುಟ್ಟಿತು ಎಂದಿಲ್ಲ. 'ಸಹ ತೇನ ದದಾಹ' ಎಂಬುದಕ್ಕೆ ವ್ಯಾಖ್ಯಾನಿಸುತ್ತ 'ದಾಹ್ಯವಾದ ಕಾಡಿಗೆ ಶರೀರ ಸಾಹಿತ್ಯವಿವಕ್ಷಿತವಲ್ಲ' ಎಂದು ಹೇಳುತ್ತಾರೆ. ಇದು ವಿರುದ್ಧ. ಭಗವತ್ಪ್ರಸಾದವ್ಯಾಖ್ಯಾನದಲ್ಲಿಯೂ 'ಉಪರರಾಮ' ದೇಹಂ ತ್ಯಕ್ತವಾನ್ ಇತ್ಯರ್ಥಃ' ಎಂದೂ ಹೇಳಿ 'ಸಹ ತೇನ ದದಾಹ' ಎಂಬಲ್ಲಿ ಋಷಭದೇವ ತನ್ನ ಶರೀರವನ್ನು ಅಂತರ್ಧಾನ ಮಾಡಿ ದಿವ್ಯರೂಪ ಕೊಟ್ಟು ಅಗ್ನಿಯೊಳಗೆ ಸೇರಿಸಿ, ಅಗ್ನಿಯೊಂದಿಗೆ ತಾನೂ ಎಲ್ಲವನ್ನೂ ಸುಟ್ಟನೆಂದೂ ಹೇಳಿದೆ. ಗಿರಿಧರವ್ಯಾಖ್ಯಾನದಲ್ಲಿ 'ಆನಂದಮಯವಾದ ಋಷಭದೇವನ ಶರೀರ ಕಾಳ್ಗಿಚ್ಚಿನಲ್ಲಿ

೧. ಶುಕ್ಲಯಾ ಸತ್ವಪ್ರಧಾನಯಾ ತನ್ವಾಽವತತಾರ । ಅಯಮಂಶಾವತಾರಃ ಕಪಿಲಃ ತಾವನ್ಮಾತ್ರಕೃತ ಈಶ್ವರತ್ವವ್ಯಪದೇಶಃ। ... ಉಪರರಾಮ ದೇಹಾದಿತಿ ಶೇಷಃ। ದೇಹಂ ತ್ಯಕ್ತವಾನಿತ್ಯರ್ಥಃ । ...ದಹನಃ ತೇನ ಋಷಭಸ್ಯ ದೇಹೇನ ಸಹ ದದಾಹ । ದಾಹ್ಯಾ ಸಾಹಿತ್ಯಮತ್ರ ವಿವಕ್ಷಿತಮ್ । -ವೀರರಾಘವಃ ।

ಶುಕ್ಲಯಾ ಸತ್ವಪ್ರಧಾನಯಾ ತನುವಾ ತನ್ವಾಽವತತಾರ । ಉಪರರಾಮ ದೇಹಾದಿತಿಶೇಷಃ । ದೇಹಂ ತ್ಯಕ್ತವಾನಿತ್ಯರ್ಥಃ । ...ಅಯಂ ಭಾವಃ । ದಾನವಾನಲಃ ದಾಹ್ಯಾನ್ ವನತರ್ವಾದೀನ್ ಯದಾ ದಗ್ಧುಮಾರಭತ ತದಾ ತೇಷಾಂ ಸ್ಥೂಲದೇಹದಾಹಂ ತತ್ಕೃತಂ ದೃಷ್ಟ್ವಾ ಏತೇಷಾಂ ಸೂಕ್ಷ್ಮದೇಹದಾಹಃ ಕಥಂ ಸ್ಯಾದೇವಂ ವಿಚಾರ್ಯ ತದುಪರಿ ಸಂಜಾತಕರುಣಃ ಸ್ವಮಹಿಮಾನಂ ಪ್ರಕಟಯನ್ ಮನುಜಭಾವೇನ ಪ್ರದರ್ಶಿತಂ ಸ್ವದೇಹಂ ತಿರೋಧಾಯ ದಿವ್ಯತೋಪೇತಂ ಕೃತ್ವಾಽಗ್ನೌ ಸಂಪೃಕ್ತಂ ವಿಧಾಯ ಸರ್ವೇಷಾಂ ದಾಹ್ಯಾನಾಂ ಸ್ಥೂಲಸೂಕ್ಷ್ಮದೇಹದಾಹಮುಭೌ ಚಕ್ರತುರಿತಿ ಬೋಧ್ಯಮ್ । ಅನ್ಯಥಾ ದಾವಾನಲಸ್ತದ್ದೇಹಂ ದದಾಹೇತ್ಯೇವಾವಕ್ಷ್ಯತ್ । -ಭಗವತ್ಪ್ರಸಾದಃ ।

ವಸ್ತುತಸ್ತ್ವಾನಂದಮಯದೇಹಸ್ಯ ದಾಹಾಸಂಭವಾದಗ್ನೌ ತಿರೋಧಾನಮಾತ್ರ-ಮೇವೇತಿ ಜ್ಞೇಯಮ್ । ಶುಕ್ಲಯಾ ಶುದ್ಧಸತ್ವಾತ್ಮಿಕಯಾ ತನುವಾ ಮೂರ್ತ್ಯಾ । -ಗಿರಿಧರಃ

ಸುಟ್ಟುಹೋಗುವುದು ಅಸಂಭಾವಿತವಾದ್ದರಿಂದ ಶರೀರ ಅಂತರ್ಧಾನವಾಯಿತೆಂದೇ ಹೇಳಬೇಕು ಎಂದು ಹೇಳಿದೆ, ನಿಜ, ಆದರೆ ಹಿಂದೆ 'ಶುಕ್ಲಯಾ ತನುವಾ' ಎಂಬಲ್ಲಿ ಶರೀರವನ್ನು ಶುದ್ಧಸತ್ವಾತ್ಮಕ ಎಂದಿದ್ದಾರೆ, ಆನಂದಮಯ ಎಂದಲ್ಲ. ಹೀಗೆ ಬೇರೆ ವ್ಯಾಖ್ಯಾನಕಾರರಲ್ಲಿ ಋಷಭದೇವನ ದೇಹತ್ಯಾಗದ ಬಗ್ಗೆ ಗೊಂದಲವೇ ಇರುವಂತೆ ಕಾಣುತ್ತದೆ. ವಸ್ತುತಃ ಭಗವಂತ ಬೇರೆ ಅಲ್ಲ, ಅವನ ಶರೀರ ಬೇರೆ ಅಲ್ಲವಾದ್ದರಿಂದ ಋಷಭದೇವ ತನ್ನ ಶರೀರವನ್ನು ತ್ಯಾಗ ಮಾಡುವುದೇ ಕೂಡುವುದಿಲ್ಲ. 'ಯಸ್ಯ ಪೃಥಿವೀಶರೀರಂ' ಎಂದು ಶ್ರುತಿ ಹೇಳುವಂತೆ ಭಗವಂತನಿಗೆ ಭೂಲೋಕವು ಶರೀರದಂತೆ. ಅದರಿಂದ ಶರೀರದಂತಿರುವ ಭೂಲೋಕವನ್ನು ಬಿಟ್ಟು ಬಿಡುವುದೇ 'ಶರೀರತ್ಯಾಗ' ಶಬ್ದವ್ಯವಹಾರಕ್ಕೆ ವಿಷಯವಾಗಿದೆ. ಋಷಭದೇವ ಅಗ್ನಿಯೊಳಗೆ ಪ್ರವೇಶಿಸಿ ಕಾಡನ್ನು ಸುಟ್ಟ ಬಳಿಕ ವಾಸುದೇವರೂಪದಿಂದ ಹೊರಗೆ ಬಂದು ಇಂದಿಗೂ ಕುಟಜಾಚಲದ ಉಪವನದಲ್ಲಿ ಕುಳಿತು 'ವಾಸುದೇವೋಽಹಂ' ಎನ್ನುತ್ತಿದ್ದಾನೆ. ಲೋಕದೃಷ್ಟಿಯಿಂದ ಅವನು ಈಗ ಋಷಭನಲ್ಲ, ವಾಸುದೇವ. ಹೀಗಾಗಿ ಋಷಭ ಭೂಲೋಕವನ್ನು ಬಿಟ್ಟಂತಾಯಿತು. ಭಗವಂತ ಭೂಲೋಕವನ್ನು ಬಿಡುವುದೆಂದರೆ ಹೀಗೇ ಹೊರತು, ಅದನ್ನು ಬಿಟ್ಟೇ ಹೋದರೆ ಭೂಲೋಕ ಉಳಿಯಲಾರದು.

[1]'ಆತ್ಮನಾಽತ್ಮಾನಂ ಅನರ್ಥಾಂತರಭಾವೇನ ಅನ್ವೀಕ್ಷಮಾಣಃ' ಅಂದರೆ ಅವತಾರರೂಪನಾದ ಋಷಭದೇವ ತನ್ನ ಮೂಲರೂಪದಿಂದ ತಾನು ಬೇರೆ ಅಲ್ಲ ಎಂದು ಧ್ಯಾನ ಮಾಡಿದ ಎಂದರ್ಥ. ಇಲ್ಲಿ ಶ್ರೀಧರ ಮುಂತಾದ ವ್ಯಾಖ್ಯಾನಕಾರರು 'ಅನರ್ಥಾಂತರಭಾವೇನ ಅಭೇದೇನ' ಎಂದು ವ್ಯಾಖ್ಯಾನಿಸಿದ್ದಾರೆ. 'ಆತ್ಮನಿ ಆತ್ಮಾನಂ' 'ಪರಮಾತ್ಮನಲ್ಲಿ ತನ್ನನ್ನು ಅಭೇದದಿಂದ ಧ್ಯಾನಿಸಿದ' ಎಂದರ್ಥ. ಪರಮಾತ್ಮನಲ್ಲಿ ತನ್ನನ್ನು ಧ್ಯಾನಿಸಿದನೆಂದಿಷ್ಟೆ ಹೇಳಿದರೆ ತನಗೆ ಪರಮಾತ್ಮ ಆಧಾರನೆಂದಂತಾದೀತು. ತಾನೇ ಪರಮಾತ್ಮನಗಿರುವುದರಿಂದ ಅದು ಕೂಡುವುದಿಲ್ಲ. ಅದಕ್ಕೆ ಅಭೇದವನ್ನೇ ಧ್ಯಾನಿಸಿದ, ಆಧಾರತ್ವವನ್ನಲ್ಲ ಎಂದು ತಿಳಿಸಲು 'ಅನರ್ಥಾಂತರಭಾವೇನ' ಎಂದಿದೆ. 'ಅನರ್ಥಾಂತರ' ಎಂದರೆ ಅಭಿನ್ನ. 'ಅನರ್ಥಾಂತರಭಾವ' ಎಂದರೆ

---

೧. ಆತ್ಮನಿ ನಿಜಾಂಶಿನಿ ಶ್ರೀವಾಸುದೇವೇ ಆತ್ಮಾನಂ ತದಂಶಂ ಶ್ರೀಋಷಭದೇವಾಖ್ಯಂ ।
-ಜೀವಗೋಸ್ವಾಮಿ

ಆಧಾರಾಧೇಯಭಾವವ್ಯಾವೃತ್ತ್ಯರ್ಥಮಾಹ ಅನರ್ಥಾಂತರಭಾವೇನಾಭೇದೇನ ।
-ಶ್ರೀಧರಃ

ಅರ್ಥಾಂತರಂ ಸ್ವತಂತ್ರಂ ವಸ್ತು ತಸ್ಯ ಭಾವಸ್ತತೋ ನಞ್ ಸಮಾಸಃ, ಪರಮಾತ್ಮಾ-ಪೃಥಕ್ ಸಿದ್ಧತ್ವೇನಾನ್ವೀಕ್ಷಮಾಣಃ ಸಾಕ್ಷಾತ್ಕುರ್ವಾಣಃ । -ವೀರರಾಘವಃ

ಅನರ್ಥಾಂತರತ್ವ, ಅಭಿನ್ನತ್ವ ಅದೇ ಅಭೇದ ಎಂದು ಈ ವ್ಯಾಖ್ಯಾನಕಾರರ ಅಭಿಪ್ರಾಯ. ಆದರೆ ಈ ವ್ಯಾಖ್ಯಾನಕಾರರ ಅಭಿಪ್ರಾಯದಲ್ಲಿ ಪರಮಾತ್ಮ ಅಂಶಿ. ಅವನ ಅವತಾರ ಅವನ ಅಂಶ. ಅಂಶಿಯಲ್ಲಿ ಅಂಶವಿರುತ್ತದೆ. ಎರಡರೊಳಗೆ ಭೇದಾಭೇದಸಂಬಂಧವಿರುವುದರಿಂದ ಅಭೇದವೂ ಇದೆ, ಅಂಶಕ್ಕೆ ಅಂಶಿ ಆಧಾರವೂ ಆಗಿದೆ. ಹೀಗಾಗಿ ಅಭೇದವನ್ನು ಹೇಳಿದ ಮಾತ್ರಕ್ಕೆ ಆಧಾರತ್ವವನ್ನು ವ್ಯಾವೃತ್ತಿ ಮಾಡಿದಂತಾಗುವುದಿಲ್ಲ. ಅದಕ್ಕೆ ಅಭೇದವನ್ನು ಮಾತ್ರ ಹೇಳಿದರೆ ಸಾಲದು, ಭೇದವಿಲ್ಲವೆಂದೂ ಹೇಳಬೇಕು. 'ಯ ಇಹ ನಾನೇವ ಪಶ್ಯತಿ' ಎಂದು ಶ್ರುತಿಯಲ್ಲಿ ಇವಶಬ್ದದಿಂದ ಭೇದಾಭೇದವನ್ನೂ ಪರಮಾತ್ಮನ ಮೂಲರೂಪಾವತಾರರೂಪಗಳಿಗೆ ನಿಷೇಧಿಸಲಾಗಿದೆ. ಅದರಿಂದಲೂ ಭೇದವನ್ನು ನಿಷೇಧ ಮಾಡಬೇಕು. ಮತ್ತು 'ಅಭೇದೇನ ಅನ್ವೀಕ್ಷಮಾಣಃ' ಅಭೇದದಿಂದ ಧ್ಯಾನಿಸಿದ' ಎಂದರೆ ಧ್ಯಾನದ ಆಕಾರವನ್ನು ಪೂರ್ತಿಯಾಗಿ ಹೇಳಿದಂತೆಯೂ ಆಗುವುದಿಲ್ಲ. 'ಅಹಂ ಅರ್ಥಾಂತರಂ ನಾಸ್ಮಿ'ಇತಿ ಭಾವೇನ' ಎಂದು ಸ್ಪಷ್ಟ ಹೇಳಬೇಕು. ಇದನ್ನೇ ಸಮಾಸ ಮಾಡಿ 'ಅನರ್ಥಾಂತರಭಾವೇನ' ಎಂದು ಹೇಳಿದೆ. ವೀರರಾಘವ ಮತ್ತು ಭಗವತ್ಪ್ರಸಾದವ್ಯಾಖ್ಯಾನಗಳಲ್ಲಿ 'ಅರ್ಥಾಂತರ' ಎಂದರೆ ಭಗವಂತನಿಗೆ ಶರೀರವಾಗದೆ ಸ್ವತಂತ್ರವಾಗಿ ಇರುವ ಬೇರೆ ಪದಾರ್ಥ. ಅಂಥ ಪದಾರ್ಥ ನಾನಲ್ಲ, ನಾನು ಭಗವಂತನಿಗೆ ಶರೀರವಾಗಿದ್ದೇನೆ ಎಂದು ಋಷಭದೇವ ಧ್ಯಾನಿಸುತ್ತಾನೆ. ಏಕೆಂದರೆ ಋಷಭದೇವ ಪರಮಾತ್ಮನಲ್ಲ ಎಂದು ಅವರ ಅಭಿಪ್ರಾಯ. ಇದು ಸರಿಯಲ್ಲ. ಋಷಭದೇವ ಪರಮಾತ್ಮನ ಅವತಾರ.

ವಿಷ್ಣೋಃ ಕಲೇವರತ್ಯಾಗೋ ಭೂತ್ಯಾಗೋಽನ್ಯೋ ನ ವಿದ್ಯತೇ ।
ಕಲೇವರತ್ಯಾಗೋಽನ್ಯೇಷಾಂ ಪಂಚತ್ವಂ ಸಮುದೀರಿತಮ್ ।

ಇತಿ ಕೌರ್ಮೇ ।

ಅನರ್ಥಾಂತರಭಾವೇನ ಅರ್ಥಾಂತರಂ ನಾಸ್ಮೀತಿ ಮನಸಾ ।

ವಿಷ್ಣುವಿನ ಅವತಾರಗಳು ದೇಹತ್ಯಾಗ ಮಾಡಿದುವು ಎಂದು ಹೇಳಿದಲ್ಲೆಲ್ಲ ದೇಹತ್ಯಾಗವೆಂದರೆ ಭೂಲೋಕತ್ಯಾಗವೆಂದೇ ಗ್ರಹಿಸಬೇಕು. ಎಲ್ಲರಂತೆ ಶರೀರತ್ಯಾಗ ಮಾಡಿದ್ದೆಂದು ಗ್ರಹಿಸಿದರೆ ಅದು ಬಾಧಿತವಾಗುತ್ತದೆ. ಮರಣರೂಪವಾದ ಶರೀರತ್ಯಾಗ ವಿಷ್ಣುವಿನ ಅವತಾರಗಳಿಗೆ ಇಲ್ಲ. ಬೇರೆಯವರಿಗೆ ಶರೀರತ್ಯಾಗವನ್ನು ಹೇಳಿದಲ್ಲೆಲ್ಲ ಅದನ್ನು ಮರಣರೂಪವಾದ ಶರೀರತ್ಯಾಗವೆಂದೇ ತಿಳಿಯಬೇಕು. ಅದು ಬಾಧಿತವಲ್ಲ ಎಂದು ಕೂರ್ಮಪುರಾಣದಲ್ಲಿ ಉಕ್ತವಾಗಿದೆ.

'ಅನರ್ಥಾಂತರಭಾವೇನ' ಎಂದರೆ 'ನಾನು ಪರಮಾತ್ಮನಿಗಿಂತ ಬೇರೆಯಾದ ಪದಾರ್ಥವಲ್ಲ' ಎಂದು ಅನುಸಂಧಾನ.

ಋಷಭದೇವನ ಚಿನ್ಮಯಶರೀರ ಬ್ರಹ್ಮಾಂಡದ ಒಳಗೆ ಹೊರಗೆ ಎಲ್ಲ ಕಡೆ ಕಾಣಬಲ್ಲ ಮನಸ್ಸಿನಿಂದ ಸಂಚರಿಸುತ್ತಿತ್ತೆಂದು ಶುಕಮುನಿಗಳು ಪರೀಕ್ಷಿತನಿಗೆ ಹೇಳುತ್ತಾರೆ.

ತಸ್ಯ ಹವಾ ಏವಂ ಮುಕ್ತಲಿಂಗಸ್ಯ ಭಗವತ ಋಷಭಸ್ಯ ಯೋಗ-ಮಾಯಾವಸಾನೋ ದೇಹ ಇಮಾಂ ಜಗತೀಮಭಿಮಾನಾಭಾಸೇನ ಚಂಕ್ರಮಮಾಣಃ ॥ ೭ ॥

ಜಡದೇಹದಿಂದ ನಿತ್ಯಮುಕ್ತನಾಗಿರುವ ಭಗವಾನ್ ಋಷಭದೇವನ ಯೋಗಸಾಮರ್ಥ್ಯಪರಾಕಾಷ್ಠೆಯಿಂದ ಕೂಡಿದ ಚಿನ್ಮಯವಾದ ದೇಹವು ಬ್ರಹ್ಮಾಂಡದ ಒಳ ಹೊರಗೆ ಎಲ್ಲೆಡೆ ಕಾಣುವ ಜ್ಞಾನಪ್ರಕಾಶರೂಪವಾದ ಮನಸ್ಸಿನಿಂದ ಚಲಿಸುತ್ತಿತ್ತು.

ಇಲ್ಲಿ ಋಷಭದೇವನ ಶರೀರ ಸಂಚರಿಸುತ್ತಿದ್ದುದು 'ಅಭಿಮಾನಾಭಾಸ'ದಿಂದ ಎಂದಿದೆ. [೧]ಬೇರೆ ವ್ಯಾಖ್ಯಾನಕಾರರು 'ಅಭಿಮಾನಾಭಾಸ' ಎಂದರೆ ಋಷಭದೇವ ದೇಹಾಭಿಮಾನವನ್ನು ಬಿಟ್ಟಿದ್ದರೂ ಅದರ ಸಂಸ್ಕಾರದಿಂದಲೆ ಅವನ ಶರೀರ ಸಂಚರಿಸುತ್ತಿತ್ತು ಎನ್ನುತ್ತಾರೆ. ಕುಂಬಾರ ಚಕ್ರವನ್ನು ಒಮ್ಮೆ ತಿರುಗಿಸಿ ಹೊರಟು ಹೋದರೂ, ಒಮ್ಮೆ ತಿರುಗಿದುದರ ಸಂಸ್ಕಾರದಿಂದಲೇ, ಪುನಃ ತಿರುಗಿಸದಿದ್ದರೂ, ಸ್ವಲ್ಪಕಾಲ ತಿರುಗುತ್ತದೆ. ಹಾಗೇ ಅಭಿಮಾನವಿಲ್ಲದಿದ್ದರೂ ಅದರ ಸಂಸ್ಕಾರದಿಂದ ದೇಹ ಸಂಚರಿಸುತ್ತದೆ. ಜೀವನ್ಮುಕ್ತರಲ್ಲಿ ಅವಿದ್ಯಾಸಂಸ್ಕಾರ. ಪ್ರಕೃತ ಭಗವಂತನ ಅವತಾರಗಳಲ್ಲಿ ಮಾಯೆಯ ಸಂಸ್ಕಾರವೇ ಅಭಿಮಾನಸಂಸ್ಕಾರ ಎನ್ನುತ್ತಾರೆ. ಮಾಯೆಯ ಸಂಸ್ಕಾರವೆಂದರೆ 'ಲೀಲೇಚ್ಛಾಸಂಸ್ಕಾರ' ಎಂದು ಜೀವಗೋಸ್ವಾಮಿ

---

೧. ಮನಸಾ ಸ್ವಯಂ ತ್ಯಕ್ತೇಽಪ್ಯಭಿಮಾನೇ ಕೇನಾಪಿ ಸಂಸ್ಕಾರೇಣ ದೇಹಃ ಪ್ರಚಲತಿ । ಯಥಾ ಕುಲಾಲಚಕ್ರಂ । ಸೋಽಯಮಭಿಮಾನಾಭಾಸಸ್ತೇನ । ಸಚ ಜೀವನ್ಮುಕ್ತಾನಾಮವಿದ್ಯಾವಾಸನಯಾ ಭವತೀತಿ ತತೋ ವಿಶೇಷಮಾಹ ಯೋಗ ಮಾಯಾವಸಾನಯೇತಿ । -ಶ್ರೀಧರಃ ।

ಮಾಯಾಯಾಸ್ತೀರ್ಣತ್ವೇಽಪಿ ತದ್ವಾಸನಾಮಾತ್ರಾನುವೃತ್ಯಾಯಃ ಅಭಿಮಾನಾಭಾಸಃ ದೇಹೇ ಆತ್ಮೀಯಾಭಿಮಾನಾಭಾಸಸ್ತೇನ । -ವೀರರಾಘವಃ ।

ಯೋಗಮಾಯಾವಸಾನಯಾ ಲೀಲೇಚ್ಛಾಸಂಸ್ಕಾರೇಣ । -ಜೀವಗೋಸ್ವಾಮಿ ।

ಸೋಽಭಿಮಾನಾಭಾಸಃ ಜೀವನ್ಮುಕ್ತಾನಾಂ ಜೀವಾನಾಮವಿದ್ಯಾವಾಸನಯಾ ಭವತಿ । ಅಸ್ಯ ತು ಭಗವದವತಾರತ್ವಾತ್ ಯೋಗಮಾಯಾವಸಾನಯಾ ಲೀಲೇಚ್ಛಾ-ಸಂಸ್ಕಾರೇಣೇತಿ ವಿಶೇಷಃ । -ಗಿರಿಧರಃ ।

ಗಿರಿಧರ ಮತ್ತು ವಿಶ್ವನಾಥರ ವ್ಯಾಖ್ಯಾನಗಳು ಹೇಳುತ್ತವೆ. ಇವೆಲ್ಲವೂ ಬರಿ ಕಲ್ಪನೆಗಳು. 'ಯೋಗಮಾಯಾವಸಾನಯಾ' ಎಂದು ಪಾಠವಿಟ್ಟುಕೊಂಡು ಹೀಗೆ ಕಲ್ಪನೆ ಮಾಡಿದ್ದಾರೆ. ವಸ್ತುತಃ 'ಯೋಗಮಾಯಾವಸಾನಃ' ಎಂದು ಪಾಠ. 'ಯೋಗಮಾಯೆ' ಎಂದರೆ ಯೋಗಸಾಮರ್ಥ್ಯ. ಅದರ 'ಅವಸಾನ' ಎಂದರೆ ಪರಾ ಕಾಷ್ಠೆ. ಅಂಥ ಯೋಗಸಾಮರ್ಥ್ಯಉಳ್ಳಶರೀರ ಸಂಚರಿಸಿತು. ಯೋಗಸಾಮರ್ಥ್ಯ ಉಳ್ಳವನು ಋಷಭದೇವನಾದರೂ ಅವನು ಬೇರೆ ಅಲ್ಲ. ಅವನ ಶರೀರ ಬೇರೆ ಅಲ್ಲ. ಅದರಿಂದ ಚಿನ್ಮಯವಾದ ದೇಹಕ್ಕೂ ಯೋಗಸಾಮರ್ಥ್ಯವಿದೆ. ಹಾಗೇ ಅವನ ಮನಸ್ಸೂ ಜಡವಲ್ಲ. ಅವನಿಗಿಂತ ಅಭಿನ್ನ. 'ಅಭಿಮಾನಾಭಾಸ'ದಿಂದ ಯುಕ್ತವಾಗಿದೆ. 'ಅಭಿ' ಬ್ರಹ್ಮಾಂಡದ ಒಳಗೆ ಹೊರಗೆ ಎಲ್ಲೆಡೆ 'ಮಾನ' ಜ್ಞಾನದ 'ಆಭಾಸ' ಪ್ರಕಾಶಸ್ವರೂಪವಾಗಿದೆ. ಅದರಿಂದ ಯುಕ್ತವಾಗಿದೆ. ಇಂಥ ಮನಸ್ಸಿನಿಂದ ಶರೀರ ಸಂಚರಿಸುತ್ತಿತ್ತು.

ಅಭಿಮಾನಾಭಾಸೇನ ಅಭಿತೋ ಜ್ಞಾನಪ್ರಕಾಶೇನ ।

'ಅಭಿಮಾನಾಭಾಸೇನ' ಎಂದರೆ ಎಲ್ಲೆಡೆ ಕಾಣಬಲ್ಲ ಜ್ಞಾನಪ್ರಕಾಶಸ್ವರೂಪವಾದ ಮನಸ್ಸಿನಿಂದ ಎಂದರ್ಥ.

* * *

ಋಷಭದೇವ ಕುಟಚಾದ್ರಿಯಲ್ಲಿ ಕಾಳ್ಗಿಚ್ಚಿನಲ್ಲಿ ಪ್ರವೇಶಿಸಿದ. ಅವನಿಂದ ಆವಿಷ್ಟವಾದ ಅಗ್ನಿ ಕಾಡನ್ನು ಸುಟ್ಟಿತು. ಬಳಿಕ ಋಷಭದೇವ ಅಗ್ನಿಯಿಂದ ಹೊರಗೆ ಬಂದು ತಾನು ವಾಸುದೇವನೆಂದು ಹೇಳಿಕೊಂಡ. ಅದನ್ನು ಕಂಡು ಕರ್ಣಾಟಕದ ಅಂದಿನ ದೊರೆ ಅರ್ಹರಾಜ ತನ್ನನ್ನೆ ತಾನು ವಾಸುದೇವನೆಂದು ಹೇಳಿಕೊಂಡ. ಕಲಿಯುಗದಲ್ಲಿ ಮನುಷ್ಯಾಧಮರೆಲ್ಲರೂ ಈ ಪಾಷಂಡಮತವನ್ನು ಅಂಗೀಕರಿಸಿ ಸ್ನಾನಸಂಧ್ಯಾದಿಗಳನ್ನು ವರ್ಜಿಸಿ ಅಂಧಂತಮಸ್ಸಿಗೆ ಭಾಗಿಗಳಾದರು.

ಏಕದಾ ತು ಕಾಂಕಟಕರ್ಣಾಟಕಾದ್ ದಕ್ಷಿಣಕರ್ಣಾಟಕಾನ್ ದೇಶಾನ್ ಯದೃಚ್ಛಯೋಪಗತಃ ಕುಟಚಾಚಲೋಪವನೇ ಆಸ್ಯ ಕೃತಾಶ್ಮಕಬಳ ಉನ್ಮಾದ ಇವ ಮುಕ್ತಮೂರ್ಧಜೋಽಸಂವೀತ ಏವ ವಿಚಚಾರ ॥ ೮ ॥

ಅಥ ಸಮೀರವೇಗವಿಧುತವೇಣುನಿಕಷಜಾತೋ ದವಾನಲಸ್ತದ್ವನ-ಮಾಲೇಲಿಹಾನಃ ಸಮಂತಾತ್ ಸಹ ತೇನ ದದಾಹ ॥ ೯ ॥

ಯಸ್ಯ ಕಿಲಾನುಚರಿತಮುಪಾಕರ್ಣ್ಯ ಕಾಂಕಟಕರ್ಣಾಟಕಾನಾಂ ದಕ್ಷಿಣಕರ್ಣಾಟಕಾನಾಂ ರಾಜಾಽರ್ಹತನಾಮೋಪಶಿಕ್ಷ್ಯ ಕಲಾವಧರ್ಮ ಉತ್ಕೃಷ್ಯಮಾಣೇ ಭವಿತವ್ಯೇನ ವಿಮೋಹಿತಃ ಸ್ವಧರ್ಮಪಥಮಕುತೋಭಯಮಪಹಾಯ ಕುಪಥಂ ಪಾಷಂಡಮಸಮಂಜಸಂ ನಿಜಮನೀಷಯಾ ಮಂದಃ ಸಂಪ್ರವರ್ತಯಿಷ್ಯತೇ ॥ ೧೦ ॥

ಯೇನ ಹವಾ ಕಲೌ ಮನುಜಾಪಸದಾ ದೇವಮಾಯಾ ವಿಮೋಹಿತಾಃ ಸ್ವವಿಧಿನಿಯೋಗಶೌಚಚಾರಿತ್ರವಿಹೀನಾ ದೇಹಹೇಡನಾದೀನ್ಯಪವ್ರತಾನಿ ನಿಜೇಚ್ಛಯಾ ಗೃಹ್ಣಾನಾ ಅಸ್ನಾನಾನಾಚಮನಾಶೌಚಕೇಶೋಲ್ಲುಂಚನಾದೀನಿ ಕಲಿನಾಽಧರ್ಮ ಬಹುಳೇನೋಪಹತಧಿಯೋ ಬ್ರಹ್ಮಬ್ರಾಹ್ಮಣಯಜ್ಞಪುರುಷ ಲೋಕವಿದೂಷಕಾಃ ಪ್ರಾಯೇಣ ಭವಿಷ್ಯಂತಿ ॥ ೧೧ ॥

ತೈರಪಿ ಹ್ಯವಾರ್ಕ್ತನಯಾ ನಿಜಲೋಕಯಾತ್ರಯಾಽಂಧ ಪರಂಪರಯಾ ತ ಏವಾನಾಶ್ವಸ್ತಾಸ್ತಮಸ್ಯಂಧೇ ಸ್ವಯಮೇವ ಪ್ರಪತಿಷ್ಯಂತಿ ॥ ೧೨ ॥

ಋಷಭದೇವ ಕಾಂಕಟಕರ್ಣಾಟಕದಿಂದ (ಭೀಮರಥೀನದೀತೀರದಿಂದ) ದಕ್ಷಿಣ ಕರ್ಣಾಟಕದೇಶಗಳಿಗೆ ಹೋಗಿ ಅಲ್ಲಿ ಕುಟಚಗಿರಿಯ ಉಪವನದಲ್ಲಿ ಮೌನಭಂಗ 'ವಾಗದಿರಲೆಂದು ಬಾಯೊಳಗೆ ಕಲ್ಲು ಹಾಕಿಕೊಂಡು ಹುಟ್ಟಿನಲ್ಲಿ ಹೇಗೋ ಹಾಗೆ ದಿಗಂಬರನಾಗಿ ತಲೆಗೂದಲು ಕೆದರಿಕೊಂಡು ಸಂಚರಿಸಿದ.

ಒಂದು ದಿನ ಗಾಳಿಯವೇಗಕ್ಕೆ ಸಿಲುಕಿದ ಬಿದಿರುಗಳ ತಿಕ್ಕಾಟದಿಂದ ಉಂಟಾದ ಕಾಳ್ಗಿಚ್ಚಿನಲ್ಲಿ ಋಷಭದೇವ ಪ್ರವೇಶಿಸಿದ. ಕಾಳ್ಗಿಚ್ಚು ಭುಗಿಲೆದ್ದು, ತನ್ನಲ್ಲಿ ಪ್ರವೇಶಿಸಿದ ಋಷಭದೇವನೊಂದಿಗೆ ಕೂಡಿಯೇ ಆ ಕಾಡನ್ನು ಸುಟ್ಟಿತು.

ಬಳಿಕ ಕಾಳ್ಗಿಚ್ಚಿನಿಂದ ಹೊರಗೆ ಬಂದ ಋಷಭದೇವ. ಆದರೆ ತಾನು ಋಷಭದೇವನೆಂಬುದನ್ನು ಮುಚ್ಚಿಟ್ಟು ವಾಸುದೇವನೆಂದು ಹೇಳತೊಡಗಿದ. ಇದನ್ನು ಕೇಳಿ ತಿಳಿದ ಕಾಂಕಟಕರ್ಣಾಟಕ ಮತ್ತು ದಕ್ಷಿಣಕರ್ನಾಟಕಗಳ ರಾಜನಾದ ಮಂದಮತಿಯಾದ ಅರ್ಹನು ಜನರಿಗೆ ಉಪದೇಶಿಸುತ್ತ ಕಲಿಯುಗದಲ್ಲಿ ಅಧರ್ಮ ಹೆಚ್ಚಬೇಕಾಗಿರುವುದರಿಂದ ಅಸುರಜನರ ಪಾಪಫಲದಾಯಕನಾದ ಆ ಹರಿಯ ಮೋಹಕಶಕ್ತಿಗೆ ಈಡಾಗಿ, ಏನೂ ಸಂಸಾರ ಭಯವೇ ಇಲ್ಲದಂತೆ ಮಾಡುವ

ಸ್ವಧರ್ಮವನ್ನು ಪರಿತ್ಯಜಿಸಿ, ಅಸಮಂಜಸವಾದ ದುರ್ಮಾರ್ಗವಾದವೆರಡು ಬಗೆಯ ಪಾಷಂಡಮತವನ್ನು ತನ್ನದೇ ಆದ ಕಲ್ಪನೆಯಿಂದ ಪ್ರಸಾರ ಮಾಡುತ್ತಾನೆ. ಹೊರತು ಆ ದುರ್ಮತ ಋಷಭದೇವನ ಮತವಲ್ಲ.

ಆ ಮತದ ಪ್ರಭಾವದಿಂದ ಕಲಿಯುಗದಲ್ಲಿ ದೇವಮಾಯೆಯಿಂದ ಮೋಹಿತರಾದ ಮನುಷ್ಯಾಧಮರು ಸ್ವಧರ್ಮಬೋಧಕವಾದ ವೇದದಲ್ಲಿಯೇ ವಿಹಿತವಾದ ಶೌಚಾಚಾರಗಳನ್ನು ತೊರೆದು ದೇವತೆಗಳಿಗೆ ಅಪಚಾರಗೈವ ಅವೈದಿಕವ್ರತಗಳನ್ನು ಪ್ರಮಾಣವಿಲ್ಲದೆ ಸ್ವೇಚ್ಛೆಯಿಂದ ಪರಿಗ್ರಹಿಸುತ್ತಾರೆ. ಸ್ನಾನ ಆಚಮನ ಶೌಚಗಳನ್ನು ತೊರೆದು ಕೇಶೋಲ್ಲುಂಚನಾದಿಗಳನ್ನು ಮಾಡುತ್ತ ಅಧರ್ಮಮಯವಾದ ಕಲಿ ಕಾಲದಿಂದ ಬುದ್ಧಿಗೆಟ್ಟು ವೇದ ಬ್ರಾಹ್ಮಣ ಯಜ್ಞಪುರುಷರನ್ನೂ ಸಜ್ಜನರನ್ನೂ ನಿಂದಿಸುತ್ತಾರೆ.

ಆರ್ಹತ ಅದ್ವೈತಮತಗಳ ಮೂಲಕ ಸನಾತನ ವೇದಮೂಲಕವಲ್ಲದ ಅಂಧ ಪರಂಪರೆಯಲ್ಲಿ ತಮ್ಮವರನ್ನು ತೊಡಗಿಸಿ ಅವರೊಂದಿಗೆ ತಾವೂ ತಮ್ಮ ಬುದ್ಧಿದೋಷದಿಂದಲೆ ಅಂಧಂತಮಸ್ಸಿನಲ್ಲಿ ಬೀಳುತ್ತಾರೆ. ಅವರಿಗೆ ಸಚ್ಛಾಸ್ತ್ರಗಳಲ್ಲಿ ನಿಷ್ಠೆ ಇರುವುದಿಲ್ಲ.

ಇಲ್ಲಿ 'ದಾವಾನಲಸ್ತದ್ವನಮಾಲೇಲಿಹಾನಃ ಸಹ ತೇನ ದದಾಹ' ಎಂದರೆ 'ಋಷಭದೇವನಿಂದ ಕೂಡಿ, ಅವನಿಂದಾವಿಷ್ಟವಾಗಿ, ಕಾಳ್ಗಿಚ್ಚು ಕಾಡನ್ನು ಸುಟ್ಟಿತು' ಎಂದು ವ್ಯಾಖ್ಯಾನಿಸುವುದು ಪ್ರಾಯಃ ಎಲ್ಲ ಬೇರೆ ವ್ಯಾಖ್ಯಾನಕಾರರಿಗೂ ಸಮ್ಮತವಿದೆ. ಗಿರಿಧರವ್ಯಾಖ್ಯಾನ ಮಾತ್ರ ಕಾಳ್ಗಿಚ್ಚು ವೃಷಭದೇವನನ್ನು ಸುಟ್ಟಿತು ಎನ್ನುತ್ತಿದೆ. ಆದರೆ ಆನಂದಮಯವಾದ ಅವನ ಶರೀರವನ್ನು ಅಗ್ನಿ ಸುಡುವುದು ಅಸಂಭವವಾದ್ದರಿಂದ ಶರೀರ ಅಗ್ನಿಯನ್ನು ಪ್ರವೇಶಿಸಿ ಅಂತರ್ಧಾನವಾಯಿತೆಂದಿಟ್ಟುಕೊಳ್ಳಬೇಕು. ಅದರಿಂದ ಸುಟ್ಟಂತೆ ಆಯಿತು ಎಂದು ಅಭಿಪ್ರಾಯ ಹೇಳಿದೆ. ವಸ್ತುತಃ ಅಗ್ನಿಯನ್ನು ಪ್ರವೇಶಿಸಿ ಅಂತರ್ಧಾನ ಹೊಂದಿದ್ದು ಮಾತ್ರವಲ್ಲ ತಿರುಗಿ ಹೊರಗೆ ಪ್ರಕಟಗೊಂಡಿದನ್ನು ಬ್ರಹ್ಮಪುರಾಣ ಹೇಳುತ್ತದೆ.

ಕಲಿಯುಗದಲ್ಲಿ ಮನುಷ್ಯಾಧಮರು ಋಷಭದೇವನ ಅವಧೂತಚರ್ಯೆಯನ್ನು ಅನುಕರಣ ಮಾಡಿ ವೈದಿಕಶೌಚಾಚಾರಹೀನರಾಗಿ ಪಾಷಂಡಿಗಳಾಗಿ ಅಂಧಂತಮಸ್ಸನ್ನು ಸೇರುತ್ತಾರೆ ಎಂದು ಭಾಗವತ ಹೇಳಿದ್ದನ್ನು ಬೇರೆ ವ್ಯಾಖ್ಯಾನಕಾರರು ಹಾಗೇ ಗ್ರಹಿಸಿದ್ದಾರೆ. ಆದರೆ ಭಾಗವತದಲ್ಲಿ ಇಲ್ಲಿಯೇ ಮುಂದೆ ಇಪ್ಪತ್ತನಾಲ್ಕನೇ ಅಧ್ಯಾಯದಲ್ಲಿ ನರಕವರ್ಣನೆ ಮಾಡುವಾಗ ವೇದಮಾರ್ಗವನ್ನು ತೊರೆದು ಪಾಷಂಡಿಗಳಾದರೆ ಅಸಿಪತ್ರವನ ಎಂಬ ನರಕ ಉಕ್ತವಾಗಿದೆ. ಅಂಧಂತಮಸ್ಸಿಗೆ, ಇನ್ನೊಬ್ಬರ ಹತ್ಯೆಮಾಡಿ ಅವರ ಸಂಪತ್ತು ಹೆಂಡತಿ ಮಕ್ಕಳನ್ನು ಉಪಭೋಗಿಸುವುದು ಕಾರಣ ಎಂದಿದೆ. ವಸ್ತುತಃ ಹತ್ಯೆ ಎಂದರೆ 'ಯೇ ಕೇಚಾತ್ಮಹನೋ ಜನಾಃ' ಎಂದು

ಈಶಾವಾಸ್ಯೋಪನಿಷತ್ತು ಹೇಳುವಂತೆ ಆತ್ಮನ ಅಂದರೆ ಪರಮಾತ್ಮನ ಹತ್ಯೆ, ಅವನ ಸಂಪತ್ತನ್ನು ತಾನು ಅನುಭವಿಸುವುದು ಅಂಧಂತಮಸ್ಸಿಗೆ ಕಾರಣ. 'ಪರಮಾತ್ಮನ ಹತ್ಯೆ' ಎಂದರೆ ನನ್ನಿಂದ ಬೇರೆ ಇನ್ನೊಬ್ಬ ಪರಮಾತ್ಮನಿಲ್ಲ, ನಾನೇ ಪರಮಾತ್ಮ ಎನ್ನುವುದು. 'ಅವನ ಸಂಪತ್ತನ್ನು ಅನುಭವಿಸುವುದೆ'ಂದರೆ ನಾನೇ ಸ್ವತಂತ್ರನಾಗಿ ಈ ಸಂಪತ್ತಿಗೆ ಒಡೆಯ, ನಾನೇ ಅನುಭವಿಸುತ್ತೇನೆ ಎನ್ನುವುದು. ಇದೂ ಅಂಧಂತಮಸ್ಸಿಗೆ ಕಾರಣ. ಭಾಗವತದಲ್ಲಿ ಈ ಅಧ್ಯಾಯದಲ್ಲಿ ಶೌಚಾಚಾರವನ್ನು ಬಿಟ್ಟ ಮಾತ್ರಕ್ಕೆ ಅಂಧಂತಮಸ್ಸು ಲಭಿಸುತ್ತದೆ ಎಂದು ಹೇಳಿದಂತೆ ಕಾಣುತ್ತದೆ. ಆದರೆ ಬ್ರಹ್ಮಪುರಾಣದಲ್ಲಿ ಋಷಭದೇವ ಅಗ್ನಿಪ್ರವೇಶ ಮಾಡಿ ಹೊರಗೆ ಬಂದು ವಾಸುದೇವೋಽಹಂ ಎನ್ನುತ್ತ ಮನುಷ್ಯಾಧಮರಿಗೆ ಅಂಧಂತಮಸ್ಸಿಗೆ ಕಾರಣವಾಗಬಲ್ಲ 'ಆತ್ಮಹತ್ಯೆ'ಯನ್ನು ಪ್ರಚುರಗೊಳಿಸಿದ ಅಂಶ ಸ್ಪಷ್ಟವಿದೆ. ಭಾಗವತಕ್ಕೆ ಅದು ವಿವಕ್ಷಿತವಾಗಿದೆ. ಇಲ್ಲದಿದ್ದರೆ ಮುಂದಿನ ನರಕವರ್ಣನೆಗೆ ಇದು ವಿರುದ್ಧವಾದೀತು.

ಜ್ಞಾನಾನಂದಾತ್ಮಕೋ ದೇಹ ಋಷಭಸ್ಯ ಮಹಾತ್ಮನಃ ।
ತಾದೃಶೇನೈವ ಮನಸಾ ಕ್ರಮಂಸ್ತು ಕುಟಚಾಚಲೇ ॥

ದಾವಾಗ್ನಿಮನುವಿಶ್ಯಾಥ ತತ್ರಸ್ಥಃ ಪ್ರಾದಹಜ್ಜಗತ್ ।
ಏವಮಗ್ನೇರಭಿವ್ಯಕ್ತಸ್ತತ್ಸ್ಥೋ ವಿಷ್ಣುಃ ಸನಾತನಃ ॥

ಋಷಭತ್ವೇನ ಸಂಗೋಪ್ಯ ಧರ್ಮಾನದ್ಯಾಪಿ ತತ್ರಗಃ ।
ಆಸ್ತೇ ಸ ವಾಸುದೇವಾತ್ಮಾ ವಾಸುದೇವೋಽಹಮಿತ್ಯಜಃ ॥

ಸದಾಸ್ಥಿತಃ ಸ್ಥಿತಿಂ ತಾಂ ತು ಶುಶ್ರಾವಾರ್ಹೋ ದುರಾತ್ಮವಾನ್ ।
ಪೂರ್ವಂ ತು ಪೌಂಡ್ರಕೋ ನಾಮ ವಾಸುದೇವಃ ಸುದುರ್ಮತಿಃ ॥

ಜಾತಿಸ್ಮರೋ ದ್ವಿಧಾ ಶಾಸ್ತ್ರಂ ಪಾಷಂಡಂ ನಿರ್ಮಮೇ ನೃಪಃ ।
ಏಕಂ ತು ವಾಸುದೇವಾಖ್ಯಂ ವಾಸುದೇವೋಽಹಮಿತ್ಯಪಿ ॥

ಕುತ್ಸಿತಂ ವಾಸುದೇವತ್ವಪ್ರತಿಪಾದಕಮಾತ್ಮನಃ ।
ಲೋಕಾರ್ಥಂ ಚಾಪರಮಪಿ ಚಕಾರಾರ್ಹತನಾಮಕಮ್ ॥

ತತ್ಪ್ರಶಿಷ್ಯಃ ಕ್ರಮುರ್ನಾಮ ನ ಜಾನಂಸ್ತನ್ಮತಂ ಪರಮ್ ।
ವಾಸುದೇವಾತ್ಮತಾಂ ಸರ್ವಜೀವಾನಾಮವದತ್ ಕುಧೀಃ ॥

ಕ್ರಮ್ವಾಖ್ಯಂ ಶಾಸ್ತ್ರಮಕರೋದಭೇದಪ್ರತಿಪಾದಕಮ್ ।
ಕುಶಾಸ್ತ್ರಂ ಸರ್ವವೇದಾನಾಂ ವಿರುದ್ಧಂ ತಾಮಸಾಲಯಮ್ ॥

ತದ್‌ದೃಷ್ಟ್ವಾಽದ್ಯಾಪಿ ವರ್ತಂತೇ ವರ್ತಿಷ್ಯಂತಿ ಕಲೌ ತಥಾ ।
ಅಶೌಚಾ ಅವ್ರತಾಚಾರಾ ವಾಸುದೇವೋಽಹಮಿತ್ಯಪಿ ॥

ಇತಿ ಬ್ರಾಹ್ಮೇ ॥

ಮಹಾತ್ಮರಾದ ವೃಷಭದೇವನ ಜ್ಞಾನಾನಂದಾತ್ಮಕವಾದ ದೇಹವು ಅದೇ ರೀತಿ ಜ್ಞಾನಾನಂದಾತ್ಮಕವಾದ ಮನಸ್ಸಿನಿಂದ ಕುಟಚಾದ್ರಿಯಲ್ಲಿ ಸಂಚರಿಸುತ್ತ ದಾವಾಗ್ನಿಯಲ್ಲಿ ಪ್ರವೇಶಿಸಿ ಆ ಅಗ್ನಿಯಲ್ಲಿದ್ದು ಆ ಕಾಡಿನಲ್ಲಿರುವ ಎಲ್ಲ ಚರಾಚರಗಳನ್ನು ಸುಟ್ಟಿತು. ಹೀಗೇ ಅಗ್ನಿಯಲ್ಲಿದ್ದ ಸನಾತನನಾದ ವಿಷ್ಣು ಬಳಿಕ ಅಗ್ನಿಯಿಂದ ಹೊರಗೆ ಅಭಿವ್ಯಕ್ತನಾಗಿ ತಾನು ಋಷಭನೆಂಬುದನ್ನು ಮರೆಮಾಚಿ ಇಂದಿಗೂ ಆ ಕುಟಚಾದ್ರಿಯ ಉಪವನದಲ್ಲಿ ಧರ್ಮಾಚರಣ ಮಾಡುತ್ತಿದ್ದಾನೆ. ತಾನು ವಾಸುದೇವನೇ ಆಗಿರುವುದರಿಂದ 'ನಾನು ವಾಸುದೇವ' ಎಂಬ ನಿರ್ದುಷ್ಟವಾದ ಮತವನ್ನು ಪ್ರತಿಪಾದಿಸುತ್ತಿದ್ದಾನೆ. (ಸತ್-ನಿರ್ದುಷ್ಟವಾದ ಮತವನ್ನು ಆಸ್ಥಿತಃ-ಪ್ರತಿಪಾದಿಸುತ್ತಿದ್ದಾನೆ) 'ಯಾರೋ ದಿವ್ಯಪುರುಷ ಅಗ್ನಿಯಿಂದ ಅಭಿವ್ಯಕ್ತನಾಗಿ ಬಂದು 'ನಾನೇ ವಾಸುದೇವ' ಎನ್ನುತ್ತಿದ್ದಾನೆ' ಎನ್ನುವ ಆ ವರ್ತಮಾನವನ್ನು (ತಾಂ ಸ್ಥಿತಿಂ) ಅರ್ಹನೆಂಬ ದುರಾತ್ಮನಾದ ರಾಜ ಕೇಳಿ ತಿಳಿದ. ಈತ ಹಿಂದೆ ಬಲು ದುಷ್ಟಬುದ್ಧಿಯ ಪೌಂಡ್ರಕನೆಂಬ ವಸುದೇವಪುತ್ರನಾಗಿದ್ದ. ಪೂರ್ವಜನ್ಮಸ್ಮರಣೆ ಇದ್ದುದರಿಂದ ಆ ರಾಜ ಎರಡು ಪಾಷಂಡ ಮತಗಳನ್ನು ಸ್ಥಾಪಿಸಿದ. ಒಂದು ವಾಸುದೇವ ಎಂಬ ಹೆಸರಿನ ದುಷ್ಟಮತ. 'ನಾನೇ ವಾಸುದೇವ' ಎಂದು ತನಗೆ ವಾಸುದೇವತ್ವವನ್ನು ಪ್ರತಿಪಾದಿಸುವ ಮತ. ಅದು ತನಗಾಗಿ. ಲೋಕಕ್ಕೆ ಆರ್ಹತ ಎಂಬ ಹೆಸರಿನ ಇನ್ನೊಂದು ಮತವನ್ನು ಸ್ಥಾಪಿಸಿದ. ಅವನ ಶಿಷ್ಯನ ಶಿಷ್ಯ ಕ್ರಮು ಎಂಬುವನು ದರ್ಬುದ್ಧಿ. ತಾನೊಬ್ಬನೆ ವಾಸುದೇವನೆಂದು ಹೇಳುವ ಅರ್ಹತನ ಮತ ಸರಿಯಲ್ಲವೆಂದು ಬಗೆದು ಎಲ್ಲ ಜೀವರಿಗೂ ವಾಸುದೇವಸ್ವರೂಪತ್ವವನ್ನು ಹೇಳ ತೊಡಗಿದ. ಸರ್ವವೇದ ವಿರುದ್ಧವಾದ, ತಾಮಸರಲ್ಲಿ ಮನೆ ಮಾಡುವ , ಅದ್ವೈತಪ್ರತಿಪಾದಕವಾದ, ಕ್ರಮು ಎಂಬ ಹೆಸರಿನ ದುಷ್ಟಶಾಸ್ತ್ರವನ್ನು ರಚಿಸಿದ. ಅದನ್ನು ಕಂಡು ಇಂದಿಗೂ ಕಲಿಯುಗದಲ್ಲಿ ಅಜ್ಞಜನರು ಶೌಚ ವ್ರತಾಚಾರಗಳಿಲ್ಲದ ಆರ್ಹತಮತವನ್ನೂ ನಾನು ಭಗವಂತನೆನ್ನುವ ಅದ್ವೈತಮತವನ್ನೂ ಅನುಸರಿಸುತ್ತಾರೆ ಮತ್ತು ಪ್ರಚಾರ ಮಾಡುತ್ತಾರೆ ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

'ಕ್ರಮುರಿವ ಮಣಿಮಾನ್ ದುಷ್ಕೃತೀ ನಿಷ್ಕ್ರಿಯಾರ್ಥಂ' ಎಂದು ಪಾಠವಿದ್ದರೆ ಹರಿವಾಯುಸ್ತುತಿ ಈ ಬ್ರಹ್ಮಪುರಾಣದ ವಚನವನ್ನೇ ಅನುಸರಿಸಿದಂತಾಗುತ್ತದೆ.

ಭಾಗವತಲ್ಲಿ 'ಕುಪಥಂ ಪಾಷಂಡಂ' ಎಂದರೆ ತಾನು ವಾಸುದೇವನೆನ್ನುವ ಅಭೇದಮತ ಮತ್ತು ಶೌಚಾಚಾರರಹಿತವಾದ ವೇದನಿಂದಕ ಆರ್ಹತಮತ ಎಂದು ಎರಡೂ ಬಗೆಯ ಪಾಷಂಡಮತ ವಿವಕ್ಷಿತವಾಗಿದೆ. 'ತೈರಪಿ ತಮಸ್ಯಂಧೇ ಪ್ರಪತಿಷ್ಯಂತಿ' ಎಂಬಲ್ಲಿ ತೈಃ ಎಂದರೆ ಆರ್ಹತಮತದ ದೇವದ್ರೋಹ ವೇದನಿಂದೆ

ಮುಂತಾದವುಗಳಿಂದ ಮತ್ತು 'ಅಪಿ' ಶಬ್ದದಿಂದ 'ವಾಸುದೇವೋಽಹಂ' ಎಂಬ ಅದ್ವೈತ ಉಪಾಸನೆಯಿಂದ, ತಮಸ್ಸುಂಟಾಗುತ್ತದೆ ಎಂದರ್ಥ.

* * *

ಭಾರತಭೂಮಿಯ ವೈಶಿಷ್ಟ್ಯವೇನೆಂದರೆ ಇಲ್ಲಿ ಪುಣ್ಯಕರ್ಮಕ್ಕೆ ಅಧಿಕಪುಣ್ಯ. ಪಾಪಕರ್ಮಕ್ಕೆ ಹಾಗೇ ಅಧಿಕ ಪಾಪಫಲ. ಬೇರೆ ಖಂಡಗಳಲ್ಲಿ ಮಾಡಿದ ಕರ್ಮಗಳಿಗೆ ಪುಣ್ಯವೂ ಅಲ್ಪ, ಪಾಪವೂ ಅಲ್ಪ.

ಅಹೋ ಭುವಃ ಸಪ್ತಸಮುದ್ರವತ್ಯಾ
ದ್ವೀಪೇಷು ವರ್ಷೇಷ್ವಧಿಪುಣ್ಯಮೇತತ್ ।
ಗಾಯಂತಿ ಯತ್ರತ್ಯಜನಾ ಮುರಾರೇಃ
ಕರ್ಮಾಣಿ ಭದ್ರಾಣ್ಯವತಾರಯಂತಿ ॥ ೧೪ ॥

ಆಹಾ, ಏಳು ಸಮುದ್ರಗಳಿಂದ ಯುಕ್ತವಾದ ಭೂಮಿಯ ಎಲ್ಲ ದ್ವೀಪಗಳಲ್ಲಿಯೂ ಎಲ್ಲ ವರ್ಷಗಳಲ್ಲಿಯೂ ಈ ಭಾರತವರ್ಷವೇ ಅಧಿಕಪುಣ್ಯ ಮಾಡುವುದಕ್ಕೂ ಹಾಗೇ ಅಧಿಕ ಪಾಪ ಮಾಡುವುದಕ್ಕೂ ಪ್ರಶಸ್ತವಾದ ಭೂಮಿಯಾಗಿದೆ. ಇಲ್ಲಿಯ ಜನರು ಹರಿಯ ಋಷಭಾದಿ ಅವತಾರಗಳಿಂದ ಯುಕ್ತವಾದ ಮಂಗಳ ಚರಿತ್ರೆಗಳನ್ನು ಕೆಲವರು ಹಾಡುತ್ತಾರೆ, ಕೆಲವರು ಹಾಗೇ ನಿಂದಿಸುತ್ತಾರೆ.

ಇಲ್ಲಿ 'ಅಧಿಪುಣ್ಯಂ' ಎಂದು ಭಾಗವತ ಪುಣ್ಯಕರ್ಮಕ್ಕೆ ಭಾರತದಲ್ಲಿ ಅಧಿಕಪುಣ್ಯಫಲವನ್ನು ಮಾತ್ರ ಹೇಳುತ್ತಿದೆ. ಆದರೆ ಭಾರತ ಕರ್ಮ ಭೂಮಿಯಾಗಿರುವುದರಿಂದ ಇಲ್ಲಿ ಪಾಪಕರ್ಮಕ್ಕೆ ಅಷ್ಟೇ ಅಧಿಕ ಪಾಪಫಲವೂ ಇದೆ ಎಂಬುದನ್ನು ಸ್ಪಷ್ಟ ಹೇಳಿಲ್ಲ. ಬ್ರಹ್ಮಾಂಡಪುರಾಣ ವಚನಾನುಸಾರ ಅದನ್ನೂ ಉಪಲಕ್ಷಣವಾಗಿ ಭಾಗವತಕ್ಕೆ ವಿವಕ್ಷಿತ ಎನ್ನಬೇಕು. ಬೇರೆ ವ್ಯಾಖ್ಯಾನಕಾರರು ಯಾರೂ ಈ ಬಗ್ಗೆ ಗಮನ ಹರಿಸಿಲ್ಲ.

ವಿಶೇಷಾದ್ ಭಾರತೇ ಪುಣ್ಯಂ ಚರೇಯುಃ ಪಾಪಮಪ್ಯಥ ।
ತಥೈವ ಭಗವದ್ಭಕ್ತಿಂ ಪೃಥಿವ್ಯಾಂ ನಾನ್ಯವರ್ಷಗಾಃ ॥

ಇತಿ ಬ್ರಹ್ಮಾಂಡೇ ।

ಈ ಭೂಲೋಕದಲ್ಲಿ ವಿಶೇಷವಾಗಿ ಭಾರತವರ್ಷದಲ್ಲಿಯೇ ಜನರು ಅಧಿಕಪುಣ್ಯವನ್ನೂ ಅಧಿಕಪಾಪವನ್ನೂ ಹಾಗೆಯೇ ಅಧಿಕಭಗವದ್ಭಕ್ತಿಯನ್ನೂ ಸಂಪಾದಿಸುತ್ತಾರೆ. ಬೇರೆ ವರ್ಷಗಳಲ್ಲಿ ಹೀಗೆ ಇಲ್ಲ ಎಂದು ಬ್ರಹ್ಮಾಂಡಪುರಾಣದಲ್ಲಿ ಉಕ್ತವಾಗಿದೆ.

* * *

ಋಷಭದೇವ ಅಣಿಮಾದಿ ಯೋಗಸಿದ್ಧಿಗಳನ್ನು ಬಯಸಲಿಲ್ಲ. ತಾವಾಗಿ ಬಂದವುಗಳನ್ನೂ ಸ್ವೀಕರಿಸಲಿಲ್ಲ. ಬೇರೆ ಎಲ್ಲ ಯೋಗಿಗಳು ಯೋಗಸಿದ್ಧಿಗಳಿಗಾಗಿ ಪ್ರಯತ್ನಿಸುತ್ತಾರೆ. ಅದರಿಂದ ಋಷಭದೇವನ ಯೋಗದ ಎತ್ತರವನ್ನು ಏರಲು ಬೇರೆ ಯೋಗಿಗಳು ಮನಸ್ಸಿನಲ್ಲಿಯೂ ಆಲೋಚಿಸಲಾರರು.

ಕೋ ನ್ವಸ್ಯ ಕಾಷ್ಠಾಮಪರೋಽನುಗಚ್ಛೇ-
ನ್ಮನೋರಥೇನಾಪ್ಯಭವಾಯ ಯೋಗೀ ।
ಯದ್ಯೋಗಮಾಯಾಂ ಸ್ಪೃಹಯಂತ್ಯುದಸ್ತಾಂ
ಮಹತ್ತಮಾ ಯೇನ ಕೃತಪ್ರಯತ್ನಾಃ ॥ ೧೬ ॥

ಮುಕ್ತಿಗಾಗಿ ಯತ್ನಿಸುವ ಬೇರೆ ಯಾವ ಯೋಗಿ ತಾನೆ ಋಷಭದೇವನ ಯೋಗದ ಎತ್ತರವನ್ನೇರಲು ಮನಸಿನಲ್ಲಾದರೂ ಯತ್ನಿಸಿಯಾನು? ಏಕೆಂದರೆ ಬಾಹ್ಯಯೋಗಶಕ್ತಿಯಿಂದ ಸಾಧಿಸಬಹುದಾದ ಅಣಿಮಾದಿ ಬಾಹ್ಯಸಿದ್ಧಿಗಳನ್ನು ಋಷಭದೇವ ನಿತ್ಯ ತನ್ನಿಂದ ದೂರವಿರಿಸಿದ್ದಾನೆ. ಆದರೆ ಶ್ರವಣಾದಿ ಮೋಕ್ಷಸಾಧನಗಳನ್ನು ನಡೆಸುವ ಮಹಾಮಹಾಯೋಗಿಗಳೂ ಕೂಡ ಆ ಸಿದ್ಧಿಗಳನ್ನು ಬಯಸುತ್ತಾರೆ.

ಇಲ್ಲಿ ವೀರರಾಘವ ವ್ಯಾಖ್ಯಾನಪ್ರಕಾರ ಋಷಭದೇವ ಯೋಗಸಿದ್ಧಿಗಳನ್ನು ಸ್ವೀಕರಿಸದಿರುವುದಕ್ಕೆ ಅವು ಮುಕ್ತಿಗೆ ಪ್ರತಿಬಂಧಕಗಳಾಗಿರುವುದೇ ಕಾರಣ. ಆದರೆ 'ಅಭವಾಯ' ಮೋಕ್ಷಸಾಧನೆಗಾಗಿ ಯಾವ ಯೋಗಿ ಋಷಭದೇವನಿಗೆ ಸಮನಾಗಿ ಪ್ರಯತ್ನಮಾಡಬಲ್ಲ?' ಎಂದು ಮುಮುಕ್ಷುವಾದ ಯೋಗಿಯ ಬಗ್ಗೆಯೆ ಇಲ್ಲಿ ಹೇಳಲಾಗಿದೆ. ಮುಮುಕ್ಷುವು ಮೋಕ್ಷಪ್ರತಿಬಂಧಕವಾದ ಯೋಗಸಿದ್ಧಿಯನ್ನು ಬಯಸುವನೆ?

ಯದ್ಯಪಿ ಬೇರೆ ವ್ಯಾಖ್ಯಾನಕಾರರೆಲ್ಲರೂ 'ಅಭವಸ್ಯ' ಎಂದು ಪಾಠ ಪರಿಗ್ರಹಿಸಿದ್ದಾರೆ. 'ಅಭವಾಯ' ಎಂದಲ್ಲ. ಆದರೆ 'ಅಭವಸ್ಯ' ಎಂದು ಋಷಭದೇವನಿಗೆ ವಿಶೇಷಣವಾಗಿ ವೀರರಾಘವವ್ಯಾಖ್ಯಾನದಲ್ಲಿ ಅನ್ವಯಿಸುವಂತಿಲ್ಲ. ಆ ವ್ಯಾಖ್ಯಾನದ ಪ್ರಕಾರ ಋಷಭದೇವ ಭಗವಂತನಲ್ಲ. ಅವನಿಗೂ ಭವ, ಅಂದರೆ ಉತ್ಪತ್ತಿ ಅಥವಾ ಸಂಸಾರವಿದ್ದೇ ಇದೆ, ಅಭವನಾಗಲಾರ.

ಅದರಿಂದ ಮುಕ್ತಿಗೆ ಪ್ರತಿಬಂಧಕವಾಗುತ್ತದೆ ಎಂಬ ಅಭಿಪ್ರಾಯದಿಂದ ಋಷಭದೇವ ಯೋಗಸಿದ್ಧಿಗಳನ್ನು ದೂರವಿರಿಸಿದ್ದಲ್ಲ. ಅವು ತನ್ನ ಸ್ವರೂಪಭೂತವಲ್ಲದ್ದರಿಂದ, ಸ್ವರೂಪಭೂತವಲ್ಲದ್ದನ್ನು ಯಾವುದನ್ನೂ ಭಗವಂತ ಸ್ವೀಕರಿಸದಿರುವುದರಿಂದ ದೂರವಿರಿಸಿದ್ದಾನೆ. ಅದನ್ನೇ 'ವ್ಯುದಸ್ತಾಂ' ಎಂದು ಭಾಗವತ

ಹೇಳುತ್ತಿದೆ. ಹೊರತು ಅವನ ಸ್ವರೂಪಭೂತವಾದ ಯೋಗಸಿದ್ಧಿಗಳನ್ನು ಎಂದೂ ದೂರವಿರಿಸುವುದಿಲ್ಲ. ಹಿಂದೆ 'ಯೋಗಮಾಯಾವಸಾನೋ ದೇಹಃ' ಯೋಗಸಾಮರ್ಥ್ಯದ ಪರಕಾಷ್ಠೆ ಅವನ ಶರೀರವಾಗಿದೆ' ಎಂದು ಹೇಳಿದೆ. ಅಂಥ ಸ್ವರೂಪಭೂತವಾದ ಯೋಗಸಾಮರ್ಥ್ಯಸಿದ್ಧಿಗಳನ್ನು ದೂರವಿರಿಸಲು ಶಕ್ಯವಿಲ್ಲ. ಅದಕ್ಕೆ ಪದ್ಮಪುರಾಣ ಹೀಗೆ ವಿವೇಚನೆ ಮಾಡಿದೆ. ಅದಕ್ಕೆ ಅನುಗುಣವಾಗಿ ಭಾಗವತದ ಅಭಿಪ್ರಾಯವನ್ನು ಹೇಳಬೇಕು–

ಯೋಗಮಾಯಾಂ ಯೋಗಮಾಯಾಫಲಮ್ ।

ನಿತ್ಯೋದಸ್ತಾ ಯೋಗಶಕ್ತಿರನಪೇಕ್ಷ್ಯಂ ಫಲಂ ಯತಃ ।
ನಿತ್ಯಸ್ವರೂಪಭೂತಾಽಪಿ ಬಹಿಃಫಲವಿವರ್ಜನಾತ್ ।
ಅಕರ್ಮೇತ್ಯುಚ್ಯತೇ ಯದ್ವನ್ಮೋಕ್ಷಃ ಫಲವಿವರ್ಜನಾತ್ ॥

ಇತಿ ಪಾದ್ಮೇ ॥

'ಯೋಗಮಾಯೆಯನ್ನು' ಎಂದರೆ, ಯೋಗ ಮಾಯೆಯ ಫಲವಾದ, ಭಗವಂತನ ಸ್ವರೂಪಭೂತವಲ್ಲದ ಅಣಿಮಾದಿ ಯೋಗಸಿದ್ಧಿಯನ್ನು, ಋಷಭದೇವ ಎಂದೂ ಸ್ವೀಕರಿಸುವುದಿಲ್ಲ. ಎಂದರ್ಥ ಹೊರತು ಸ್ವರೂಪಭೂತವಾದ ಅಣಿಮಾದಿ ಸಿದ್ಧಿಗಳನ್ನು ಅವನು ಬಿಟ್ಟುಬಿಡುವುದಿಲ್ಲ.

'ಯೋಗಶಕ್ತಿ ಋಷಭದೇವನಿಗೆ ನಿತ್ಯಸ್ವರೂಪಭೂತವಾಗಿದೆ. ಆದರೂ ನಿತ್ಯಪರಿತ್ಯಕ್ತವಾಗಿದೆ ಎನ್ನುವುದುಂಟು. ಏಕೆಂದರೆ ಸ್ವರೂಪಭೂತವಲ್ಲದ ಫಲವನ್ನು ಅವನು ಪರಿತ್ಯಜಿಸಿದ್ದಾನೆ. ನಿವೃತ್ತಕರ್ಮಫಲವಾಗಿ ಮೋಕ್ಷ ಲಭಿಸುತ್ತಿದ್ದರೂ ಕಾಮ್ಯಕರ್ಮಫಲವಾಗಿ ಅದು ಸಿಗದಿರುವುದರಿಂದ 'ಅಕರ್ಮ' ಎನಿಸುತ್ತದೆ. ಹಾಗೇ ಇದು.' ಎಂದು ಪದ್ಮಪುರಾಣದಲ್ಲಿ ಹೇಳಿದೆ.

* * *

ಏಕಾಂತಭಕ್ತರು ಮೋಕ್ಷವನ್ನು ಅಪೇಕ್ಷಿಸುವುದಿಲ್ಲ. ಅದರ ಫಲವಾಗಿ ಅವರಿಗೆ ಮೋಕ್ಷದಲ್ಲಿ ಪೂರ್ಣಸ್ವರೂಪಸುಖ ಅಭಿವ್ಯಕ್ತವಾಗುತ್ತದೆ.

ಯಸ್ಯಾಮೇವ ಕವಯ ಆತ್ಮಾನಮವಿರತವಿವಿಧ ವೃಜಿನಸಂಸಾರ ಪರಿತಾಪೋಪತಪ್ಯಮಾನಮನುಸವನಂ ಸ್ನಾಪಯಂತಸ್ತಯೈವ ಪರಯಾ ನಿರ್ವೃತ್ಯಾ ಹ್ಯಾಪವರ್ಗಿಕಮಾತ್ಯಂತಿಕಂ ಪರಮ-ಪುರುಷಾರ್ಥಮಪಿ ಸ್ವಯಮಾಸಾದಿತಂ ನೋ ಏವಾದ್ರಿಯಂತೇ ಭಾಗವತತ್ವೇನೈವ ಪರಿಸಮಾಪ್ತಸರ್ವಾರ್ಥಾಃ ॥ ೧೮ ॥

ನಿರಂತರವಾಗಿ ಬರುವ ನಾನಾ ಪಾಪಜನ್ಯವಾದ ಸಂಸಾರತಾಪತ್ರಯದಿಂದ ಬೇಯುವ ಮನಸ್ಸನ್ನು ಆ ಏಕಾಂತಭಕ್ತಿರಸದಲ್ಲಿ ಮುಳುಗಿಸುತ್ತ ಆ ಭಕ್ತಿಯಿಂದಲೇ ಅಭಿವ್ಯಕ್ತವಾಗುವ ಅತ್ಯುತ್ಕೃಷ್ಟವಾದ ಸ್ವರೂಪಸುಖವನ್ನು ಅನುಭವಿಸುವ ಜ್ಞಾನಿಗಳಿಗೆ ಕೊನೆಯಲ್ಲಿ ಮೋಕ್ಷಸುಖ ಬೇಡವೆಂದರೂ ಬರುತ್ತದೆ. ಅವರು ಅದರಲ್ಲಿ ಆದರ ತೋರುವುದಿಲ್ಲ. ಏಕೆಂದರೆ ಭಗವದ್ಭಕ್ತಿಯಿಂದಲೇ ಅವರಿಗೆ ಆ ಸ್ವಯೋಗ್ಯ ಪೂರ್ಣ ಸ್ವರೂಪಸುಖ ಮುಕ್ತಿಯಲ್ಲಿ ವ್ಯಕ್ತವಾಗುತ್ತದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಭಕ್ತಿಯನ್ನೇ ಪರಮಪುರುಷಾರ್ಥವೆನ್ನುತ್ತ ಅದರ ಮುಂದೆ ಮೋಕ್ಷವನ್ನು ಗೌಣವೆನ್ನುತ್ತಾರೆ. ಅದರಿಂದಲೇ ಭಕ್ತರಿಗೆ ಮೋಕ್ಷದಲ್ಲಿ ಅನಾದರವೆನ್ನುತ್ತಾರೆ. ಆದರೆ ಮೋಕ್ಷಸಾಧನಾನುಷ್ಠಾನಕ್ಕೆ ತೊಡಗಿ, ಮೋಕ್ಷಸಾಧನಗಳಲ್ಲೆಲ್ಲ ಶ್ರೇಷ್ಠವಾದ ಭಕ್ತಿಯನ್ನು ಸಂಪಾದಿಸಿ ಮೋಕ್ಷವನ್ನು ಬೇಡವೆನ್ನುವುದು ಅಸಂಭಾವಿತ. ಆದರೂ ಪ್ರಯತ್ನಪಟ್ಟು ಮೋಕ್ಷದ ಬಯಕೆಯನ್ನು ಹತ್ತಿಕ್ಕಿಕೊಂಡು ಅದನ್ನು ಅನಾದರದಿಂದ ಕಾಣಬೇಕಾದರೆ ಅದಕ್ಕೆ ಏನಾದರೂ ವಿಶೇಷಫಲವಿರಲೇ ಬೇಕು. ಇದರ ಬಗ್ಗೆ ಬೇರೆ ವ್ಯಾಖ್ಯಾನಕಾರರು ವಿಚಾರ ಮಾಡುವುದಿಲ್ಲ. ವ್ಯೋಮಸಂಹಿತಾವಚನ ಆ ಫಲವನ್ನು ತಿಳಿಸುತ್ತಿದೆ.

ನಾದ್ರಿಯಂತೇ ತು ಯೇ ಮೋಕ್ಷಂ
ಪೂರ್ವಂ ತೇಷಾಂ ಪರಂ ಸುಖಮ್ ।
ಸ್ವಯೋಗ್ಯಂ ವ್ಯಜ್ಯತೇ ಮುಕ್ತೌ
ತಚ್ಚೋಕ್ತಂ ತಾರತಮ್ಯಯುಕ್ ॥

ಇತಿ ವ್ಯೋಮಸಂಹಿತಾಯಾಮ್ ॥

ಸಾಧನಾನುಷ್ಠಾನ ಕಾಲದಲ್ಲಿ ಮೋಕ್ಷವನ್ನು ಆದರಿಸದೇ ಇರುವವರಿಗೆ ಸ್ವಯೋಗ್ಯಸ್ವರೂಪಾನಂದ ಮುಕ್ತಿಯಲ್ಲಿ ಅಧಿಕವಾಗಿ ಅಭಿವ್ಯಕ್ತಿ ಹೊಂದುತ್ತದೆ. ಅದು ತಾರತಮ್ಯದಿಂದಲೆ ಇರುತ್ತದೆ ಎಂದು ಶ್ರುತಿಸ್ಮೃತಿಗಳಲ್ಲಿ ಉಕ್ತವಾಗಿದೆ ಎಂದು ವ್ಯೋಮಸಂಹಿತೆಯಲ್ಲಿ ಹೇಳಿದೆ.

* * *

ಪಾಂಡವರು ಶ್ರೀಕೃಷ್ಣನಲ್ಲಿ ಭಕ್ತಿ ಮಾಡಿದಾಗ ಶ್ರೀಕೃಷ್ಣ ಅವರಿಗೆ ಆಪ್ತಬಂಧುವಾದ, ದೂತನೂ ಆದ. ಅದಿರಲಿ, ಭಜಿಸುವ ಎಲ್ಲ ಮುಕ್ತಿಯೋಗ್ಯರಿಗೂ ಮುಕ್ತಿಯನ್ನೂ ಕೊಡುತ್ತಾನೆ. ಆದರೆ ಪೂರ್ಣಭಕ್ತಿಯನ್ನು ಯಾರಿಗೂ ಕೊಡುವುದಿಲ್ಲ. ಅದು ಪರಮದುರ್ಲಭ ಎಂದು ಶುಕಮುನಿ ಪರೀಕ್ಷಿದ್ರಾಜನಿಗೆ ಹೇಳುತ್ತಾರೆ.

ರಾಜನ್ ಪತಿರ್ಗುರುರಲಂ ಭವತಾಂ ಯದೂನಾಂ
ದೇವಃ ಪ್ರಿಯಃ ಕುಲಪತಿಃ ಕ್ವಚ ಕಿಂಕರೋ ವಃ ।
ಅಸ್ತ್ವೇವಮಂಗ ಭಗವಾನ್ ಭಜತಾಂ ಮುಕುಂದೋ
ಮುಕ್ತಿಂ ದದಾತಿ ಕರ್ಹಿಚಿತ್ ಸ್ಮ ನ ಭಕ್ತಿಯೋಗಮ್ ॥ ೧೮ ॥

ಪರೀಕ್ಷಿದ್ರಾಜ, ಭಗವಾನ್ ಶ್ರೀಕೃಷ್ಣ ನಿಮಗೆ ಪಾಂಡವರಿಗೆ ಮತ್ತು ಯಾದವರಿಗೆ ಪಾಲಕನಾಗಿದ್ದ, ಗುರುವಾಗಿದ್ದ, ಬಹಳ ಪ್ರೀತಿಯ ಗೆಳೆಯನಾಗಿದ್ದ. ಕುಲಪತಿಯಾಗಿದ್ದ ಕೆಲವೊಮ್ಮೆ ನಿಮಗೆ ಸೇವಕನೂ ಆಗಿದ್ದ. ಅದೆಲ್ಲ ಇರಲಿ. ಅವನು ಭಜಿಸುವವರಿಗೆ ಮುಕ್ತಿಯನ್ನೂ ಕೂಡ ನೀಡುತ್ತಾನೆ. ಪೂರ್ಣಭಕ್ತಿಯೋಗವನ್ನು ಮಾತ್ರ ಚತುರ್ಮುಖನಿಗೊಬ್ಬನಿಗೆ ಹೊರತಾಗಿ ಇನ್ನಾರಿಗೂ ಕೊಡುವುದಿಲ್ಲ.

[1]ಇಲ್ಲಿ ಪಾಂಡವರು ಭಜಿಸದಿದ್ದರೂ ಅವರಿಗೆ ಶ್ರೀಕೃಷ್ಣ ಪರಮಪ್ರೀತಿಯನ್ನು ತೋರಿದ, ದೂತನೂ ಆದ ಎಂದ ಮೇಲೆ ಇಷ್ಟು ಹೇಳಿದರೆ ಸಾಕು. ಹೆಚ್ಚಿಗೆ ಹೇಳಬೇಕಾಗಿಲ್ಲ. ಬೇರೆಯವರು ಭಜಿಸಿದರೂ ಅವರಿಗೆ ಭಾವಪೂರ್ಣವಾದ ಭಕ್ತಿಯನ್ನು ನೀಡುವುದಿಲ್ಲ. ಕೆಲವೊಮ್ಮೆ ಅದಕ್ಕಿಂತ ಅತಿ ನಿಕೃಷ್ಟವಾದ ಮುಕ್ತಿಯನ್ನೇ ನೀಡುತ್ತಾನೆ ಹೊರತು ಭಕ್ತಿಯನ್ನು ನೀಡುವುದಿಲ್ಲ. 'ಕೆಲವೊಮ್ಮೆ ಭಕ್ತಿಯನ್ನು ನೀಡುವುದಿಲ್ಲ' ಎಂದರೆ ಮುಕ್ತಿಯನ್ನು ಬಯಸದಿರುವ ಶುದ್ಧಭಕ್ತರಿಗೆ ಭಕ್ತಿಯನ್ನೇ ನೀಡುತ್ತಾನೆ ಎಂದು ವಿಶ್ವನಾಥವ್ಯಾಖ್ಯಾನ ಹೇಳುತ್ತದೆ. ಆದರೆ ಪಾಂಡವರು ಕೃಷ್ಣನಲ್ಲಿ ಸಖ್ಯಭಕ್ತಿಯನ್ನು ಮಾಡಿರುವುದು ಪ್ರಸಿದ್ಧವಿದೆ. ಮತ್ತು ಅವರಲ್ಲಿ ಶ್ರೀಕೃಷ್ಣ ಪರಮಪ್ರೀತಿಯನ್ನು ತೋರಿದನೆಂದರೆ ಭಕ್ತಾಸ್ತೇಽತೀವ ಮೇ ಪ್ರಿಯಾಃ (ಗೀ.೧೨.೨೦) ಎಂದು ಭಗವದ್ಗೀತೆ ಹೇಳುವಂತೆ ಅವರು ಭಕ್ತಿಯಿಂದ ಭಜಿಸಿರಲೇಬೇಕು. ಭಜಿಸುವವರಿಗೆ ಭಕ್ತಿ ನೀಡುವುದಿಲ್ಲ, ಮುಕ್ತಿ ನೀಡುತ್ತಾನೆ ಎನ್ನುವುದೂ ವ್ಯಾಹತ. ಭಕ್ತಿ ಮುಕ್ತಿಗೆ ಸಾಧನವಾಗಿರುವುದರಿಂದ ಮೊದಲಿಗೆ ಭಕ್ತಿಯನ್ನು ನೀಡಿಯೇ ಅದರ ಫಲವಾಗಿ ಮುಕ್ತಿ ನೀಡುತ್ತಾನೆ. ಅದರಿಂದ 'ಕೆಲವೊಮ್ಮೆ ಮುಕ್ತಿಯನ್ನೇ ನೀಡುತ್ತಾನೆ ಭಕ್ತಿಯನ್ನು ನೀಡುವುದಿಲ್ಲ' ಎಂಬುದು ಶ್ಲೋಕದ ಅಭಿಪ್ರಾಯವಲ್ಲ. 'ಕರ್ಹಿಚಿದಪಿ' ಎಂದು ಅಪಿಶಬ್ದವಿಲ್ಲದಿದ್ದರೂ ಅದು ವಿವಕ್ಷಿತ. 'ಮುಕ್ತಿಯನ್ನು ನೀಡುತ್ತಾನೆ ಹೊರತು ಚತುರ್ಮುಖಬ್ರಹ್ಮನಲ್ಲಿ ಮಾತ್ರ ಕಂಡು

೧. ಭವದ್ಭ್ಯೋ ಹ್ಯಭಜದ್ಭ್ಯೋಽಪಿ ಪರಮಪ್ರೇಮಾಧಿಕ್ಯದಾನಸ್ಯ ವಾರ್ತಾ ಕಿಯತೀ ವಕ್ತವ್ಯಾ? ಸಾ ಸರ್ವೋಪರಿ ವಿರಾಜಿತಾ । ಅನ್ಯೇಭ್ಯೋ ಭಜದ್ಭ್ಯೋಽಪಿ ಭಕ್ತಿಯೋಗಂ ಭಾವಭಕ್ತಿಮಪಿ ಪ್ರಾಯೋ ನ ದದಾತಿ । ಕಿಂತು ತತೋಽಪ್ಯತಿನಿಕೃಷ್ಟಾಂ ಮುಕ್ತಿಮೇವೇತ್ಯಾಹ ಅಸ್ತ್ವೇವಮಿತಿ । ಭಜತಾಂ ಭಜದ್ಭ್ಯಃ । ಅತ್ರ ಕರ್ಹಿಚಿದಪೀತ್ಯನುಕ್ತೇರ್ಮುಕ್ತಿಮನಿಚ್ಛದ್ಭ್ಯಃ ಶುದ್ಧಭಕ್ತೇಭ್ಯಸ್ತು ಭಕ್ತಿಮೇವ ದದಾತೀತ್ಯರ್ಥೋ ಲಭ್ಯತೇ । -ವಿಶ್ವನಾಥಃ ।

ಬರುವಂಥ ಪೂರ್ಣಭಕ್ತಿಯನ್ನು ಬೇರೆ ಯಾರಿಗೂ ಎಂದೂ ನೀಡುವುದಿಲ್ಲ' ಎಂದೇ ಶ್ಲೋಕಾಭಿಪ್ರಾಯ ಹೇಳಬೇಕು.

[೧]ಶುಕದೇವವ್ಯಾಖ್ಯಾನದಲ್ಲಿ 'ಅಸ್ತ್ವೇವಂ' ಎಂದರೆ 'ಭಕ್ತಿಗೆ ಮುಕ್ತಿಗಿಂತ ಹೆಚ್ಚಿನ ಪ್ರಾಶಸ್ತ್ಯವೇ ಇದೆ' ಎಂದರ್ಥ. ಏಕೆ ಪ್ರಾಶಸ್ತ್ಯವೆಂದರೆ ಭಕ್ತರಾದ ಪಾಂಡವರಿಗೆ ಕೃಷ್ಣ ದೂತನಾದ. ಮುಕ್ತರಿಗೆ ಈ ಭಾಗ್ಯವಿಲ್ಲ ಎಂದಿದೆ. ಆದರೆ 'ಅಸ್ತು' ಎಂಬುದನ್ನು 'ಅಸ್ತಿ' ಎಂದು ಗ್ರಹಿಸಿದರೆ ಶ್ಲೋಕದ ಅಭಿಪ್ರಾಯವನ್ನೇ ತಿರುಚಿದಂತಾಗುತ್ತದೆ. ಮತ್ತು ಮುಕ್ತರಿಗೆ ಆನಂದ ನೀಡುವುದಕ್ಕಾಗಿ ಭಗವಂತ ಕುದುರೆಯಂತೆ ಕಣ್ಣಿಗೆ ಗೋಚರನಾಗಿ ಕುಣಿಯುತ್ತಾನೆ.

ಕುದುರೆಯಂತೆ ಕುಣಿವ ಕಣ್ಗೆ ಗೋಚರನಾಗಿ
ಒದಗಿಸಿ ಕೊಡುವ ಸುಖಂಗಳನು'

ಎಂದು ವಾದಿರಾಜರು ವೈಕುಂಠವರ್ಣನೆಯಲ್ಲಿ ಹೇಳುವುದನ್ನು ನೋಡಿದರೆ ಮುಕ್ತರಿಗೆ ಸುಖ ನೀಡಲು ಹರಿ ಅವರು ಬಯಸಿದಂತೆ ಕುಣಿಯುತ್ತಾನೆ ಎನ್ನುವುದು ಸ್ಪಷ್ಟವಾಗುತ್ತದೆ. ಆದರಿಂದ ಮುಕ್ತಿ ಭಕ್ತಿಗಿಂತ ಅತಿ ನಿಕೃಷ್ಟ ಎನ್ನುವುದು ತಪ್ಪು ಚತುರ್ಮುಖನ ಪೂರ್ಣಭಕ್ತಿಗೆ ಹೋಲಿಸಿದರೆ ಮಾತ್ರ ಉಳಿದವರ ಮುಕ್ತಿ ನಿಕೃಷ್ಟ ಎಂದೇ ಹೇಳಬೇಕು. ಇದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ಬ್ರಹ್ಮಣೋಽನ್ಯಸ್ಯ ನೋ ಪೂರ್ಣಾಂ ದದ್ಯಾದ್ ಭಕ್ತಿಂ ಜನಾರ್ದನಃ ।
ಮುಕ್ತಿಂ ದದಾತಿ ಸರ್ವೇಷಾಮುಚ್ಚಾನಾಂ ಕೋ ಹ್ಯಧೀಶಿತಾ ॥
ಇತಿ ಬ್ರಹ್ಮತರ್ಕೇ ।

ಪೂರ್ಣಭಕ್ತಿಯನ್ನು ಜನಾರ್ದನ ಬ್ರಹ್ಮನಿಗೆ ಹೊರತು ಬೇರಯವರಿಗೆ ಕೊಡುವುದಿಲ್ಲ. ಮುಕ್ತಿಯನ್ನು ಯೋಗ್ಯರಾದವರಿಗೆ ಎಲ್ಲರಿಗೂ ಕೊಡುತ್ತಾನೆ. ಬ್ರಹ್ಮನೊಬ್ಬನೆ ಪೂರ್ಣಭಕ್ತಿಗೆ ಯೋಗ್ಯ ಏಕೆಂದರೆ ಉತ್ತಮಾಧಿಕಾರಿಗಳಿಗೆ ಎಲ್ಲರಿಗಿಂತ ಹೆಚ್ಚು ವಿಶೇಷವಾಗಿ ಭಕ್ತಿ ಪ್ರೇರಕನು ಅವನೇ ಎಂದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ಷಷ್ಠೋಽಧ್ಯಾಯಃ ॥

---

೧. ಭಜತಾಂ ಭಕ್ತಾನಾಂ ಕರ್ಹಿಚಿತ್ ವರಪ್ರದಾನಕಾಲೇ ಮುಕುಂದೋ ಮುಕ್ತಿಂ ದದಾತಿ । ನಪುನರಿಹ ಲೋಕೇ ಭಕ್ತಿಂ । ಹೇ ರಾಜನ್ ಏವಂ ಮದುಕ್ತಂ ಭಕ್ತೇರ್ಮುಕ್ತಿತಃ ಶ್ರೈಷ್ಠ್ಯಮಸ್ತು । ನ ಹಿ ಮುಕ್ತೌ ಕಿಂಕರತ್ವಂ ಭಗವತೋಽತೋ ಮುಕ್ತೇ-ರ್ಭಕ್ತಿರ್ಗರೀಯಸೀತಿ । -ಶುಕದೇವಃ

ಅಧ್ಯಾಯ-೭

ಅಧ್ಯಾಯಸಾರಾಂಶ

ಋಷಭದೇವನ ಅನಂತರ ಭರತ ಚಕ್ರವರ್ತಿಯಾದ. ಅವನಿಂದಲೇ ಅಂಜನಾಭಖಂಡ ಭಾರತಖಂಡವೆನಿಸಿತು. ಅವನು ವಿಶ್ವರೂಪನ ಮಗಳಾದ ಪಂಚಜನಿಯನ್ನು ವಿವಾಹವಾಗಿ ಅವಳಲ್ಲಿ ಸುಮತಿ ರಾಷ್ಟ್ರಭೃತ್ ಸುದರ್ಶನ ಆವರಣ ಧೂಮ್ರಕೇತು ಎಂಬ ಐದು ಮಂದಿ ಪುತ್ರರನ್ನು ಪಡೆದ. ಪ್ರಜೆಗಳನ್ನು ವಾತ್ಸಲ್ಯದಿಂದ ಕಾಪಾಡುತ್ತ ಯಜ್ಞಗಳಿಂದ ಆಯಾ ಕಾಲದಲ್ಲಿ ತಪ್ಪದೆ ಯಜ್ಞಪುರುಷನನ್ನು ಆರಾಧಿಸಿದ. ಯಜ್ಞಗಳಲ್ಲಿ ಆಯಾ ದೇವತೆಗಳನ್ನು ಸ್ವತಂತ್ರವಾಗಿ ಆರಾಧಿಸಿದರೆ ತಪ್ಪಾಗುತ್ತದೆ. ದೇವತೆಗಳು ಅದನ್ನು ಸ್ವೀಕರಿಸುವುದಿಲ್ಲ. ಅದರಿಂದ ಭರತ ಆ ದೇವತೆಗಳನ್ನು ಯಜ್ಞಪುರುಷನಾದ ಭಗವಂತನ ಅಂಗಗಳಲ್ಲಿ ಆಶ್ರಯಿಸಿಕೊಂಡವರೆಂದೂ ಆ ದೇವತೆಗಳೊಳಗಿದ್ದ ಭಗವಂತನೇ ಆಹುತಿಯನ್ನು ಸ್ವೀಕರಿಸುವನೆಂದೂ ತಿಳಿದು ಯಜ್ಞ ಮಾಡಿ ಯಜ್ಞಫಲವನ್ನು ಭಗವಂತನಿಗೇ ಅರ್ಪಿಸುತ್ತಿದ್ದ. ಒಂದು ಕೋಟಿ ವರ್ಷಕಾಲ ಹೀಗೆ ರಾಜ್ಯಭಾರ ಮಾಡಿ ಭರತ ತನ್ನ ರಾಜ್ಯಭೋಗಪ್ರಾರಬ್ಧ ಕಳೆಯಿತೆಂದು ತಿಳಿದು ವಿರಕ್ತನಾಗಿ ರಾಜ್ಯವನ್ನು ಮಕ್ಕಳಿಗೆ ಹಂಚಿಕೊಟ್ಟು ಸನ್ಯಾಸಿಯಾಗಿ ಪುಲಹಮುನಿಗಳ ಆಶ್ರಮವಿರುವ ಸಾಲಗ್ರಾಮಕ್ಷೇತ್ರದಲ್ಲಿ ಗಂಡಕೀ ನದೀತೀರದಲ್ಲಿ ತಪಸ್ಸಿಗೆ ಕುಳಿತ. ಹೃದಯದಲ್ಲಿ ಭಗವಂತನನ್ನು ಸಾಕ್ಷಾತ್ಕಾರದಿಂದ ಕಂಡು ಸೂರ್ಯಮಂಡಲದಲ್ಲಿಯೂ ಹಿರಣ್ಮಯಪುರುಷನನ್ನು ಸಾಕ್ಷಾತ್ಕಾರದಿಂದ ಕಂಡು ಸ್ತುತಿಸಿದ.

* * *

ಭರತಚಕ್ರವರ್ತಿ ಕೋಟಿವರ್ಷಕಾಲ ರಾಜಭಾರ ಮಾಡಿ ಕೊನೆಗೆ ಸನ್ಯಾಸಿಯಾಗಿ ಸಾಲಗ್ರಾಮಕ್ಷೇತ್ರದಲ್ಲಿ ಭಗವಂತನ ಆರಾಧನೆ ಮಾಡಿದ. ಸೂರ್ಯಾಂತರ್ಗತನನ್ನು ಹೀಗೆ ಸ್ತೋತ್ರ ಮಾಡಿದ.

ಪರೋರಜಾಃ ಸವಿತರ್ಜಾತವೇದೋ
ವೇದಸ್ಯ ಗರ್ಭೋರ್ ಮನಸೇದಂ ಜಜಾನ ।

ಸ್ವರೇತಸಾಽದಃ ಪುನರಾವಿಶ್ಯ ಚಷ್ಟೇ
ಹಂಸಂ ಗೃಧ್ರಾಣಾಮೃಷಭಂ ಸಂಗೃಣೀಮಃ ॥ ೧೩ ॥

ದೋಷರಹಿತನಾದ ಸೃಷ್ಟಿಕರ್ತನಾದ ಸರ್ವಜ್ಞನಾದ ಸೂರ್ಯಾಂತರ್ಗತ ನಾರಾಯಣನೆ, ನೀನು ವೇದಮಾತೆಯ ಗರ್ಭದಲ್ಲಿ ಉದಿಸುವವನು. ಇಚ್ಛಾಮಾತ್ರದಿಂದ ಜಗತ್ತನ್ನು ನಿನ್ನ ವೀರ್ಯದಿಂದ ಸೃಜಿಸಿರುವಿ. ದುಃಖಲೇಪರಹಿತನಾಗಿ ಜಗತ್ತನ್ನು ಪುನಃ ಪ್ರವೇಶಿಸಿ ರಕ್ಷಿಸುವಿ. ವಿಷಯಾಕಾಂಕ್ಷಿಗಳಾದ ಜೀವರಿಗೆ ಒಡೆಯನಾಗಿರುವಿ. ಇಂಥ ನಿನ್ನನ್ನು ನಾವು ಸ್ತುತಿಸುತ್ತೇವೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ ಹೀಗಿದೆ-

ಪರೋರಜಃ ಸವಿತುರ್ಜಾತವೇದೋ
ದೇವಸ್ಯ ಭರ್ಗೋ ಮನಸೇದಂ ಜಜಾನ ।
ಸುರೇತಸಾದಃ ಪುನರಾವಿಶ್ಯ ಚಷ್ಟೇ
ಹಂಸಂ ಗೃಧ್ರಾಣಂ ನೃಷದ್ರಿಂಗಿರಾಮಿಮಃ ।

ಇದಕ್ಕೆ ಹಿಂದಿನ ಗದ್ಯದಲ್ಲಿ 'ಸೂರ್ಯರ್ಚಾ ಭಗವಂತಂ' ಎಂದು ಪಾಠವಿಟ್ಟುಕೊಂಡು ಈ 'ಪರೋರಜಃ' ಎಂಬ ಪದ್ಯವನ್ನು ಸೂರ್ಯಾಂತರ್ಗತನಾರಾಯಣನನ್ನು ಹೊಗಳುವ ವೇದಮಂತ್ರವೆಂದು ಪರಿಗ್ರಹಿಸಿದ್ದಾರೆ. ಗಾಯತ್ರೀಮಂತ್ರಾರ್ಥಗರ್ಭಿತವಾದ್ದರಿಂದ ಗಾಯತ್ರೀಸೋದರ ಮಂತ್ರ ಎಂದೂ ಜೀವಗೋಸ್ವಾಮಿವ್ಯಾಖ್ಯಾನದಲ್ಲಿ ಉಕ್ತವಾಗಿದೆ. ಆದರೆ 'ಸೂರ್ಯರ್ಚಾ ಭಗವಂತಮುಪತಿಷ್ಠನ್ನೇತದು ಹೋವಾಚ' ಎಂದು ಗದ್ಯವಿದೆ. 'ಸೂರ್ಯ ಋಚೆಯಿಂದ ಸ್ತೋತ್ರಮಾಡುತ್ತ ಈ ಮಾತನ್ನು ನುಡಿದ' ಎಂದರ್ಥ. ಇಲ್ಲಿ 'ಏತದ್' ಎಂದು ನಪುಂಸಕಲಿಂಗವನ್ನು ಕೂಡಿಸಲು 'ಏತದ್ ಋಗಾತ್ಮಕಂ ವಾಕ್ಯಂ' ಎಂದು ಅಧ್ಯಾಹಾರ ಮಾಡಿದ್ದಾರೆ. ವಸ್ತುತಃ 'ಪರೋರಜಃ' ಎಂಬುದು ಮಂತ್ರವಲ್ಲ. ಮಂತ್ರಾರ್ಥಸಂಗ್ರಾಹಕವಾದ ಪದ್ಯ ಎಂದು ಪರಿಗ್ರಹಿಸುವುದೇ ಸೂಕ್ತ. ವೇದಮಂತ್ರವಲ್ಲದಿರುವುದರಿಂದಲೇ ಪಾಠದಲ್ಲಿ ಇಷ್ಟು ವ್ಯತ್ಯಾಸ ಬರುವುದೂ ಸಂಭಾವಿತ. ಅದರಿಂದ ಬೇರೆ ವ್ಯಾಖ್ಯಾನಕಾರರ ಪಾಠವನ್ನು ಸ್ವೀಕರಿಸಬೇಕಾಗಿಲ್ಲ. ಮತ್ತು ಅವರು ತಮ್ಮ ವ್ಯಾಖ್ಯಾನಗಳಿಗೆ ತಕ್ಕ ಸ್ಮೃತಿವಾಕ್ಯಗಳ ಆಧಾರವನ್ನೂ ಕೊಟ್ಟಿಲ್ಲ. 'ಇತಿ ಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್' ಎಂದು ವಿಧಿ ಇರುವುದರಿಂದ ಸ್ಮೃತಿಗನುಗುಣವಾಗಿ ಶ್ರುತಿಯನ್ನು ವ್ಯಾಖ್ಯಾನಿಸಬೇಕು.

ಪರೋರಜಾಽರಜಸ್ಕತ್ವಾತ್ ತ್ರಯೀಡ್ಯತ್ವಾತ್ ತ್ರಯೀಸುತಃ ।
ಗುಣಾತ್ಯಯಾತ್ ತುರೀಯಶ್ಚ ಜಾತವೇದಾಶ್ಚ ಸರ್ವವಿತ್ ॥

ಹಂಸೋ ದುಃಖಾದಿಹಾನೇನ ಜೀವೇಶತ್ವಾಚ್ಚ ಗೃಧ್ರರಾಟ್ ।
ಕಾಲಃ ಸರ್ವನಿಯಂತೃತ್ವಾತ್ ಪರಮಾತ್ಮಾ ಪ್ರಕೀರ್ತಿತಃ ॥
ಇತಿ ತಂತ್ರನಿರುಕ್ತೇ ॥

ಪರಮಾತ್ಮ ನಿರ್ದೋಷನಾದ್ದರಿಂದ ಪರೋರಜನೆನಿಸುತ್ತಾನೆ. ವೇದವೇದ್ಯನಾದ್ದರಿಂದ ವೇದಗರ್ಭ. ಗುಣತ್ರಯರಹಿತನಾದ್ದರಿಂದ ತುರೀಯ. ಸರ್ವಜ್ಞನಾದ್ದರಿಂದ ಜಾತವೇದ. ದುಃಖಾದಿವರ್ಜಿತನಾದ್ದರಿಂದ ಹಂಸ. ಜೀವರಿಗೆ ನಿಯಾಮಕನಾದ್ದರಿಂದ 'ಗೃಧ್ರಾಣಾಂ ಋಷಭ'ನೆನಿಸುತ್ತಾನೆ. ಸರ್ವನಿಯಾಮಕನಾದ್ದರಿಂದ ಕಾಲನೆನಿಸುತ್ತಾನೆ ಎಂದು ತಂತ್ರನಿರುಕ್ತದಲ್ಲಿ ಉಕ್ತವಾಗಿದೆ.

ಇಲ್ಲಿ ತುರೀಯ ಕಾಲಶಬ್ದಗಳಿಗೆ ವಿವರಣೆ ಪ್ರಕೃತಶ್ಲೋಕಕ್ಕೆ ಸಂಬಂಧಿಸಿದ್ದಲ್ಲ. ಬೇರೆ ಎಲ್ಲಿಯಾದರೂ ಆ ಶಬ್ದಗಳು ಬಂದರೆ ಹೀಗೆ ಅರ್ಥ ಎಂದು ಅಭಿಪ್ರಾಯ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ಸಪ್ತಮೋಽಧ್ಯಾಯಃ ॥

—o—

ಅಧ್ಯಾಯ-೮

ಅಧ್ಯಾಯಸಾರಾಂಶ

ಒಂದು ದಿನ ಭರತಮುನಿ ಗಂಡಕೀನದಿಯಲ್ಲಿ ಸ್ನಾನ ಮಾಡಿ ನಿತ್ಯನೈಮಿತ್ತಿಕ ಕರ್ಮಗಳನ್ನು ಪೂರೈಸಿ ಮೂರು ಮುಹೂರ್ತಕಾಲ ಗಾಯತ್ರೀ ಮುಂತಾದ ಮಂತ್ರಗಳನ್ನು ಜಪಿಸುತ್ತ ಕುಳಿತಿದ್ದ. ಆಗ ಒಂದು ಗರ್ಭಿಣಿಯಾದ ಜಿಂಕೆ ನೀರು ಕುಡಿಯಲು ಬಂದಿತು. ಅದು ನೀರು ಕುಡಿಯುತ್ತಿದ್ದಾಗ ಸಿಂಹಗರ್ಜನೆಯನ್ನು ಕೇಳಿ ಗಾಬರಿಯಿಂದ ಮೇಲೆ ಹಾರಿತು. ಆಗ ಗರ್ಭಸ್ರಾವವಾಗಿ ಮರಿ ಪ್ರವಾಹದಲ್ಲಿ ಬಿದ್ದಿತು. ತಾಯಿ ಭಯದಿಂದ ಓಡಿಓಡಿ ಒಂದು ಗುಹೆಯಲ್ಲಿ ಬಿದ್ದು ಸತ್ತಿತು. ಅನಾಥವಾದ ಮರಿಯನ್ನು ಭರತ ಕಂಡು ಪ್ರವಾಹದಿಂದೆತ್ತಿ ತನ್ನಾಶ್ರಮಕ್ಕೆ ತಂದು ಸಾಕಿದ. ಅದರಲ್ಲಿ ಮಿತಿಮೀರಿದ ಮೋಹದಿಂದ ಅದಕ್ಕೆ ಬೇರೆ ಮೃಗಗಳಿಂದ ಅಪಾಯ ಬಾರದಂತೆ ದರ್ಭೆ ತುಲಸಿ ಪುಷ್ಪ ತರಲು ಹೋಗುವಾಗಲೂ ಜೊತೆಗೇ ಕರೆದುಕೊಂಡು ಹೋಗತೊಡಗಿದ. ಆಶ್ರಮದಲ್ಲಿ ಅದನ್ನು ತೊಡೆಯ ಮೇಲಿರಿಸಿಕೊಳ್ಳುವುದು ತಬ್ಬಿಕೊಂಡು ಮುದ್ದಾಡುವುದು, ಅದು ಕಣ್ಣಿಗೆ ಬೀಳದಿದ್ದರೆ ಉದ್ವೇಗಗೊಂಡು ಶೋಕಿಸುವುದು ಕರುಣಾಜನಕವಾಗಿ ಗೋಳಿಡುವುದು, ಹೀಗೆ ಮಿತಿಮೀರಿದ ವ್ಯಾಮೋಹಕ್ಕೆ ಬಲಿಯಾದ. ಅದರಿಂದ ಪರಮಾತ್ಮನನ್ನು ಮರೆತ. ತನ್ನ ಅಂತ್ಯಕಾಲ ದಲ್ಲಿಯೂ ತನ್ನ ಬಳಿ ನಿಂತು ಬಂಧುವಿನಂತೆ ಶೋಕಿಸುತ್ತಿದ್ದ ಆ ಜಿಂಕೆಮರಿಯನ್ನೇ ನೋಡುತ್ತ ಅದರಲ್ಲಿಯೆ ಮನಸ್ಸಿಟ್ಟು ಶರೀರತ್ಯಾಗ ಮಾಡಿದ. ಬಳಿಕ ಜಿಂಕೆಯಾಗಿಯೇ ಹುಟ್ಟಿದ. ಆದರೆ ಪೂರ್ವಜನ್ಮ ಸ್ಮರಣೆ ಇದ್ದಿತು. ಅಯ್ಯೋ ಕಷ್ಟವೆ, ಸರ್ವಸಂಗಪರಿತ್ಯಾಗ ಮಾಡಿ ಏಕಾಂತವಾದ ಪುಣ್ಯಾರಣ್ಯದಲ್ಲಿ ತಪಸ್ಸು ಮಾಡುತ್ತ ಭಗವಂತನಲ್ಲಿಯೇ ನೆಲೆಗೊಳಿಸಿದ್ದ ನನ್ನ ಮನಸ್ಸು ಒಂದು ಜಿಂಕೆಮರಿಯ ಬೆನ್ನುಹತ್ತಿ ಹೊರಟೇ ಹೋಯಿತಲ್ಲ!' ಎಂದು ಪಶ್ಚಾತ್ತಾಪ ಪಟ್ಟ. ಇನ್ನು ಮೇಲಾದರೂ ಇಂಥ ಮೋಹವನ್ನು ಗೆಲ್ಲುವೆನೆಂದು ತಾಯಿ ಜಿಂಕೆಯನ್ನು ತೊರೆದು ತಾನು ಜನಿಸಿದ ಕಾಲಂಜರಪರ್ವತದಿಂದ ಸಾಲಗ್ರಾಮಕ್ಷೇತ್ರಕ್ಕೆ ನಡೆದ. ಅಲ್ಲಿ ಅಂತ್ಯಕಾಲ ಬಂದಾಗ ಗಂಡಕೀ ನದಿಯ ಪವಿತ್ರಜಲದಲ್ಲಿ ಶರೀರತ್ಯಾಗ ಮಾಡಿದ.

ಅಧ್ಯಾಯ-೯

ಅಧ್ಯಾಯಸಾರಾಂಶ

ಆಂಗಿರಸಗೋತ್ರದ ಒಬ್ಬ ಬ್ರಾಹ್ಮಣಶ್ರೇಷ್ಠನಿಗೆ ಮೊದಲನೆ ಹೆಂಡತಿಯಲ್ಲಿ ಒಂಬತ್ತು ಮಂದಿ ಪುತ್ರರು. ಎರಡನೆ ಹೆಂಡತಿಯಲ್ಲಿ ಹೆಣ್ಣು ಗಂಡು ಅವಳಿಮಕ್ಕಳು ಜನಿಸಿದರು. ಆ ಗಂಡುಮಗುವೇ ಭರತ. ಈ ಜನ್ಮದಲ್ಲಿಯೂ ಅವನಿಗೆ ಪೂರ್ವಜನ್ಮ ಸ್ಮರಣೆ ಇದ್ದಿತು. ಜನರೊಂದಿಗೆ ಬೆರೆಯದೆ ಏಕಾಂತದಲ್ಲಿ ಭಗವಂತನ ಧ್ಯಾನ ಮಾಡಲು ಬಯಸಿ ಜಡನಂತೆ ಮೂಕನಂತೆ ವರ್ತಿಸಿದ. ತಂದೆ ಪ್ರೀತಿಯಿಂದ ಉಪನಯನ ಮಾಡಿ ಗಾಯತ್ರೀಮಂತ್ರವನ್ನು ಉಪದೇಶಿಸಿದರೆ ಅದನ್ನೂ ಸರಿಯಾಗಿ ಉಚ್ಚರಿಸಲಿಲ್ಲ. ತಂದೆಯ ಮರಣಾನಂತರ ತಾಯಿ ಸಹಗಮನ ಮಾಡಿದಳು. ಅಣ್ಣಂದಿರೂ ಅವನನ್ನು ಹುಚ್ಚ ಬೆಪ್ಪನೆಂದು ಭಾವಿಸಿ ಬಿಟ್ಟು ಬಿಟ್ಟರು. ಅವನು ದೇಹಧಾರಣೆಗಾಗಿ ಭಿಕ್ಷಾಟನೆಯಿಂದ ಅಥವಾ ಕೂಲಿಕೆಲಸದಿಂದ ಸಿಕ್ಕಿದ ಅನ್ನವನ್ನು ಅದು ಒಳ್ಳೆಯದಿರಲಿ ಕೆಟ್ಟದಿರಲಿ ಗಮನಿಸದೆ ಉಣ್ಣುತ್ತಿದ್ದ. ದೇಹಾಭಿಮಾನವನ್ನು ಪೂರ್ತಿ ಬಿಟ್ಟಿದ್ದ. ಭಗವಂತನ ಧ್ಯಾನದಲ್ಲಿಯೆ ಸುಖ ಕಾಣುತ್ತಿದ್ದ. ಶೀತಉಷ್ಣ ಗಾಳಿ ಮಳೆಗಳಲ್ಲಿ ಬರಿ ಮೈಯಲ್ಲಿಯೆ ಓಡಾಡುತ್ತಿದ್ದ. ಪುಷ್ಟನಾಗಿ ದೃಢಕಾಯನಾಗಿದ್ದು ಒಳ್ಳೆಯ ಬ್ರಹ್ಮವರ್ಚಸ್ಸನ್ನು ಹೊಂದಿದ್ದರೂ ಮೈಯೆಲ್ಲ ಕೊಳೆ, ನಡುವಿಗೆ ಚಿಂದಿಬಟ್ಟೆ ಉಟ್ಟಿದ್ದ. ಕೆಸರಲ್ಲಿ ಬಿದ್ದ ಮಹಾರತ್ನದಂತೆ ಜನರಿಗೆ ಅವನ ಮಹಿಮೆ ತಿಳಿಯಲಿಲ್ಲ. ಕೊಳೆಯಾದ ಜನಿವಾರವನ್ನು ಕಂಡು ಹುಟ್ಟಿನಿಂದ ಬ್ರಾಹ್ಮಣ, ಆದರೆ ಕರ್ಮಭ್ರಷ್ಟನೆಂದುಕೊಂಡರು.

ಒಮ್ಮೆ ಒಬ್ಬ ಶೂದ್ರರಾಜ ಸಂತತಿಯ ಬಯಕೆಯಿಂದ ಕಾಳಿಗೆ ನರಬಲಿ ಕೊಡಲು ಹೊರಟ. ಆದರೆ ಬಲಿಯಾಗಬೇಕಾಗಿದ್ದ ಮನುಷ್ಯ ತಪ್ಪಿಸಿಕೊಂಡ. ಬಳಿಕ ಅವನ ಭಟರು ಜಡಭರತನನ್ನು ಕಂಡರು. ಆತ ಬಿಟ್ಟಿಯಾಗಿಯೋ ಕೂಲಿಗಾಗಿಯೋ ಅರ್ಧರಾತ್ರಿಸಮಯದಲ್ಲಿ ಬತ್ತದ ಗದ್ದೆಯನ್ನು ಕಾಯುತ್ತ ಕುಳಿತಿದ್ದ. ಭಟರು ದೃಢಕಾಯನಾದ ಅವನನ್ನೇ ಹಿಡಿದು ತಂದರು. ಕಾಳಿಯ ಮುಂದೆ ಕೂಡಿಸಿ ಕೊಲ್ಲಲು ಕತ್ತಿಯನ್ನೆತ್ತಿದ್ದಾನೆ ಶೂದ್ರರಾಜನ ಪುರೋಹಿತ. ಕಾಳಿ ಕುಪಿತಳಾದಳು. ದುರ್ಮಾರ್ಗದಲ್ಲಿ ಮನ ಬಂದಂತೆ ವಿಹರಿಸುತ್ತ ಹಿಂಸೆಯನ್ನು ಆಟವೆಂದು ತಿಳಿದಿದ್ದ ಆ ಶೂದ್ರರಾಜ ಮತ್ತು ಪರಿವಾರ ಈಗ ಬಲು ಘೋರಕರ್ಮ ಮಾಡಲು

ಹೊರಟಿದ್ದಾರೆ. ಭರತ ಸಾಕ್ಷಾತ್ ಪರಬ್ರಹ್ಮನಲ್ಲಿ ಮನಸಿಟ್ಟ ಬ್ರಹ್ಮರ್ಷಿಕುಮಾರ. ಎಲ್ಲ ಜೀವಿಗಳನ್ನೂ ಪ್ರೀತಿಯಿಂದ ಕಾಣುವವ. ಅವನನ್ನು ಬಲಿಯಾಗಿ ಯಾವ ದೇವತೆಯೂ ಸ್ವೀಕರಿಸುವುದಿಲ್ಲ. ಕಾಳಿಗೆ ಆಗ ಬ್ರಾಹ್ಮಣನ ಬ್ರಹ್ಮವರ್ಚಸ್ಸು ಮೈಯೆಲ್ಲ ಸುಡಲು ಪ್ರಾರಂಭಿಸಿತು. ಅವಳು ಕೂಡಲೆ ಪ್ರತಿಮೆಯಿಂದ ಹೊರಗೆ ಬಂದು ಭಯಾನಕವಾಗಿ ಗರ್ಜಿಸುತ್ತ ಹಾರಿ ಬಂದು ಕತ್ತಿಯನ್ನು ಕಿತ್ತುಕೊಂಡು ಅದರಿಂದಲೆ ಆ ಎಲ್ಲ ಪಾಪಿಗಳ ತಲೆ ಕಡಿದಳು. ಸುರಿವ ಬಿಸಿ ನೆತ್ತರನ್ನು ಕುಡಿದು ತನ್ನ ಪರಿವಾರದೊಡನೆ ತಲೆಬುರುಡೆಗಳನ್ನೂ ಚೆಂಡಾಡಿದಳು ಹಾಡಿದಳು ಕುಣಿದಳು. ಜಡಭರತ ಮಾತ್ರ ತನ್ನ ಮೇಲೆ ಕತ್ತಿ ಬೀಸುತ್ತಿದ್ದರೂ ಗಾಬರಿಯಾಗದೆ ನಿರ್ಭಯನಾಗಿ ಹರಿಯ ಪಾದವನ್ನೆ ಧ್ಯಾನಿಸುತ್ತಿದ್ದ. ಅಂತಹವರಲ್ಲಿ ಮಾಡುವ ಅತಿಕ್ರಮ ಮಾಡುವವರ ಮೇಲೆಯೆ ತಿರುಗಿ ಬೀಳುತ್ತದೆ.

—o—

ಅಧ್ಯಾಯ-೧೦

ಅಧ್ಯಾಯಸಾರಾಂಶ

ರಹೂಗಣ ರಾಜ ಕಪಿಲಮುನಿಯ ದರ್ಶನಕ್ಕಾಗಿ ಪಲ್ಲಕ್ಕಿಯನ್ನೇರಿ ಹೊರಟಿದ್ದ. ಆದರೆ ಪಲ್ಲಕ್ಕಿ ಹೊರಲು ಒಬ್ಬ ಆಳು ಕಡಿಮೆಯಾದಾಗ ರಾಜಭಟರು ಹುಡುಕಿ ಭರತನನ್ನು ಕಂಡರು. ಪಲ್ಲಕ್ಕಿಯ ಭಾರ ಹೊರಬಲ್ಲ ದೃಢಾಂಗನೆಂದು ಅವನನ್ನು ಎಳೆ ತಂದರು. ಆತ ಪಲ್ಲಕ್ಕಿಗೆ ಹೆಗಲು ಕೊಟ್ಟು ಹೆಜ್ಜೆ ಹಾಕುವಾಗ ಕಾಲ ಕೆಳಗೆ ಇರುವೆ ಮುಂತಾದ ಪ್ರಾಣಿಗಳಿಗೆ ಹಿಂಸೆಯಾಗದಿರಲೆಂದು ಎರಡೆರಡು ಹೆಜ್ಜೆಯಷ್ಟು ದೂರಕ್ಕೆ ನಿಧಾನವಾಗಿ ಅಡಿ ಇಟ್ಟ. ಪಲ್ಲಕ್ಕಿಯ ಗತಿಯಲ್ಲಿ ಏರು ಪೇರಾಯಿತು. ರಾಜನಿಗೆ ಕೋಪ ಬಂದಿತು. ಅವನು ಜ್ಞಾನಿಗಳ ಸೇವೆ ಮಾಡಿದ ಸಾತ್ವಿಕ ಚೇತನನೆ. ಆದರೂ ಕ್ಷತ್ರಿಯ ಜಾತಿಸ್ವಭಾವಕ್ಕೆ ವಶನಾಗಿದ್ದ. ಮತ್ತು ಭರತನ ಬ್ರಹ್ಮತೇಜಸ್ಸೂ ಹೊರಗೆ ಸ್ಪಷ್ಟ ಕಾಣಿಸುತ್ತಿರಲಿಲ್ಲ. ಅಯ್ಯಾ ನಿನಗೆ ತುಂಬಾ ಆಯಾಸವಾಗಿದೆ ಬಹಳ ಹೊತ್ತಿಂದ ಒಬ್ಬನೆ ಪಲ್ಲಕ್ಕಿಯನ್ನು ಹೊರುತ್ತಿರುವೆ. ಕೃಶಾಂಗನಾಗಿರುವೆ ಮುಪ್ಪು ಬೇರೆ ಆವರಿಸಿದೆ' ಎಂದು ಮುಂತಾಗಿ ವ್ಯಂಗ್ಯವಾಗಿ ಆಕ್ಷೇಪಿಸಿದ. ಭರತ ಮೌನವಾಗಿದ್ದ. ರಾಜನಿಗೆ ಸಿಟ್ಟು ನೆತ್ತಿಗೇರಿತು. 'ಜೀವನ್ಮೃತನಾಗಿರುವೆಯ? ಮೈ ಮೇಲೆ ಜ್ಞಾನವಿಲ್ಲದೆ ರಾಜಾಜ್ಞೆ ಉಲ್ಲಂಘಿಸುವ ನಿನಗೆ ತಕ್ಕ ಶಿಕ್ಷೆ ವಿಧಿಸುತ್ತೇನೆ. ಆಗ ನೀನು ಸರಿಯಾಗುವೆ' ಎಂದ.

ಭರತನೆಂದ, ರಾಜನೆ, 'ಬಹು ಹೊತ್ತಿಂದ ಪಲ್ಲಕ್ಕಿ ಹೊತ್ತಿರುವೆ' ಎನ್ನುವ ನಿನ್ನ ವ್ಯಂಗ್ಯ ನುಡಿಯ ಅರ್ಥ 'ನಾನು ಪಲ್ಲಕ್ಕಿಯ ಭಾರ ಹೊತ್ತು ನಡೆಯಲ್ಲಿಲ್ಲ' ಎಂದು ಆಕ್ಷೇಪ ತಾನೆ? ಆದರೆ ಭಾರ ಹೊತ್ತವನೂ ನಡೆಯುತ್ತಿರುವವನೂ ನಾನಾಗಿದ್ದರೆ ತಾನೆ ಈ ಆಕ್ಷೇಪ? ನಾನು ಅಸ್ವತಂತ್ರ. ಸ್ವತಂತ್ರನಾಗಿ ಏನೂ ಮಾಡುತ್ತಿಲ್ಲ. 'ಕೃಶಾಂಗನಾಗಿರುವೆ' ಎಂಬ ಮಾತಿನಿಂದ ದಢೂತಿ ಆಸಾಮಿ ಎಂದು ಲೇವಡಿ ಮಾಡುತ್ತಿರುವೆ. ಆದರೆ ನಾನು ದಢೂತಿಯಲ್ಲ, ನನ್ನ ಮೈ ದಪ್ಪನಾಗಿದೆಯಷ್ಟೆ, 'ರಾಜಾಜ್ಞೆ' ಎಂದಿರುವಿ. ಆದರೆ ಆಜ್ಞೆ ಮಾಡಬಲ್ಲವ ಭಗವಂತ ಹೊರತು ನೀನಲ್ಲ. ಕರ್ಮವಶದಿಂದ ನೀನು ರಾಜ ನಿಜ, ಅದಕ್ಕೆ ನಿನ್ನಾಜ್ಞೆಯನ್ನು ಯಥಾಶಕ್ತಿ

ಪಾಲಿಸುತ್ತಿದ್ದೇನೆ. ಆದರೆ ನೀನು ಶಿಕ್ಷೆ ಮಾಡಿದರೆ ಫಲವಿಲ್ಲ. ನಾನು ದೇಹಾಭಿಮಾನ ಬಿಟ್ಟಿರುವುದರಿಂದ ಶಿಕ್ಷೆ ನನಗೆ ತಾಕುವುದಿಲ್ಲ.'

ಈ ಮಾತುಗಳನ್ನು ಕೇಳಿ ರಾಜ ಭಯಗೊಂಡು ಪಲ್ಲಕ್ಕಿಯಿಂದ ಕೆಳಗಿಳಿದು ಭರತನ ಕಾಲಿಗೆ ಬಿದ್ದು ಕ್ಷಮೆ ಬೇಡಿದ. 'ಮಹಾತ್ಮ, ನೀನಾರು' ಎಂದ. ತನ್ನ ಸಂಶಯಗಳನ್ನು ಅವನ ಮುಂದೆ ಕೇಳಿಕೊಂಡ. 'ಎಲ್ಲವನ್ನೂ ಪರಮಾತ್ಮನೆ ಮಾಡುತ್ತಾನೆ ಎಂದರೆ ಜೀವನಿಗೆ ಕರ್ತೃತ್ವವಿಲ್ಲವೆ? ನೀನು ಪಲ್ಲಕ್ಕಿ ಹೊರುವಾಗ ನಡೆಯುವಾಗ ಶ್ರಮವಾಗುತ್ತಿದೆ ಎಂದ ಮೇಲೆ ನಿನಗೆ ಕರ್ತೃತ್ವವಿರಬೇಕು ತಾನೆ? ಮತ್ತು ಜೀವನಿಗೆ ಕರ್ತೃತ್ವವಿಲ್ಲದಿದ್ದರೆ ವೇದದ ವಿಧಿನಿಷೇಧಗಳು ಯಾರಿಗಾಗಿ ಇವೆ? ಒಲೆಯ ಮೇಲಿಟ್ಟ ಪಾತ್ರೆ ಬಿಸಿಯಾಗಿ ನೀರು ಕುದಿದಾಗ ಅಕ್ಕಿ ಬೇಯಲೇ ಬೇಕು. ಹಾಗೇ ಶರೀರೇಂದ್ರಿಯಗಳಿಗೆ ತಾಪವಾದಾಗ ಜೀವನಿಗೆ ತಾಪವಾಗಬೇಕು ತಾನೆ?'

* * *

ರಹೂಗಣರಾಜ ಸಾತ್ವಿಕನಾಗಿದ್ದರೂ ಯೋಗೇಶ್ವರರ ಚರ್ಯೆಯ ಪರಿಚಯ ಅವನಿಗೆ ಸಾಕಷ್ಟಿರಲಿಲ್ಲ. ಜಡಭರತ ಹಿಂದೆ ಭರತಚಕ್ರವರ್ತಿಯಾಗಿದ್ದಾಗ ಭಗವದ್ಭಕ್ತರಾದ ಎಲ್ಲ ಮಾನವರಿಗೂ ಆಶ್ರಯದಾತನಾದ ರಾಜನಾಗಿದ್ದ. ಅಂಥ ಜಡಭರತನನ್ನು ರಹೂಗಣರಾಜ ಅಜ್ಞಾನದಿಂದ ಅಹಂಕಾರದಿಂದ ಆಕ್ಷೇಪಿಸಿ ಅಪಚಾರಗೈದ.

ಏವಂ ಬಹ್ವಬದ್ಧಮಭಿಭಾಷ್ಯಮಾಣೋ ನರದೇವಮಾನಿನಂ ರಜಸಾ ತಮಸಾಽನುವಿದ್ಧೇನ ಮದೇನ ತಿರಸ್ಕೃತಾಶೇಷಭಗವತ್ಪ್ರಿಯನಿಕೇತಂ ಪಂಡಿತಾಭಿಮಾನಿನಂ ಸ ಭಗವಾನ್ ಬ್ರಾಹ್ಮಣೋ ಬ್ರಹ್ಮಭೂತಃ ಸರ್ವಭೂತಸುಹೃದಾತ್ಮಾ ಯೋಗೇಶ್ವರಚರ್ಯಾಯಾಂ ನಾತಿ-ವ್ಯುತ್ಪನ್ನಮತಿಂ ಸ್ಮಯಮಾನ ಇವ ವಿಗತಸ್ಮಯ ಇದಮಾಹ ॥ ೯ ॥

ಹೀಗೆ ತಾನು ರಾಜನೆಂಬ ದುರಭಿಮಾನದಿಂದ ಬಹು ಅಸಂಬದ್ಧವಾಗಿ ಮಾತನಾಡಿದ ರಾಜ. ಏಕೆಂದರೆ ಅವನು ರಜೋಗುಣತಮೋಗುಣಗಳಿಂದ ಆವೃತನಾಗಿದ್ದ. ಯೋಗೇಶ್ವರರು ಅಭಿಮಾನತ್ಯಾಗ ಮಾಡಿ ಹೇಗೆ ನಡೆದುಕೊಳ್ಳುತ್ತಾರೆ ಎಂಬುದರ ಪರಿಚಯ ಅವನಿಗೆ ಸಾಕಷ್ಟಿರಲಿಲ್ಲ. ಅದರಿಂದ ಅಹಂಕಾರಪಟ್ಟು ಭಗವಂತನಿಗೆ ಪ್ರಿಯರಾದ ಎಲ್ಲ ಮಾನವರಿಗೂ ಹಿಂದಿನ ಜನ್ಮದಲ್ಲಿ ಆಶ್ರಯನಾಗಿದ್ದ ಭರತನನ್ನು ತಿರಸ್ಕಾರಭಾವನೆಯಿಂದ ಕಂಡ. ತಾನೆ ಎಲ್ಲ ತಿಳಿದವನೆಂದು ತಿಳಿದುಕೊಂಡ. ಭರತ

ಎಲ್ಲ ಅಹಂಕಾರವನ್ನು ತೊರೆದವನು. ಪರಬ್ರಹ್ಮನಲ್ಲಿ ಅನಸ್ಸಿಟ್ಟು ಎಲ್ಲ ಜೀವಿಗಳಲ್ಲಿಯೂ ಸೌಹಾರ್ದ ತುಂಬಿದ ಅಂತಃಕರಣದವನು. ಅಜ್ಞಾನದಿಂದ ಅಪರಾಧ ಮಾಡಿದ ಕ್ಷತ್ರಿಯನಾದ ರಾಜನಿಗೆ ನಗುತ್ತ ನುಡಿದ.

ಇಲ್ಲಿ 'ಅಶೇಷಭಗವತ್ಪ್ರಿಯನಿಕೇತ' 'ಭಗವಂತನಿಗೆ ಪ್ರಿಯರಾದವರೆಲ್ಲರಿಗೂ ಜಡಭರತ ಆಶ್ರಯದಾತನಾಗಿದ್ದ' ಎನ್ನುವುದು ಹೇಗೆ? ಬೇರೆ ವ್ಯಾಖ್ಯಾನಕಾರರು 'ತಿರಸ್ಕೃತಾಶೇಷಭಗವತ್ಪ್ರಿಯನಿಕೇತ' ಎಂಬ ಶಬ್ದವನ್ನು ಬೇರೆ ಅನೇಕ ರೀತಿಗಳಿಂದ ವಿವರಿಸಿದ್ದಾರೆ. ಶ್ರೀಧರವ್ಯಾಖ್ಯಾನದಲ್ಲಿ ಭಗವಂತನಿಗೆ ಪ್ರಿಯವೆನಿಸಿದ ಸಂಪೂರ್ಣ ಆಶ್ರಯ ಭರತ ಅಥವಾ ಎಲ್ಲ ಭಗವತ್ಪ್ರಿಯರಿಗೂ ಆಶ್ರಯನು ಭರತ' ಎಂದು ಎರಡು ರೀತಿಯಿಂದ ವಿವರಣೆ ಇದೆ. ಮೊದಲನೆ ವಿವರಣೆಯಲ್ಲಿ 'ಸಂಪೂರ್ಣಆಶ್ರಯ' ಎಂಬುದಕ್ಕೆ ವಿವರಣೆ ಬೇಕಾಗುತ್ತದೆ. ಎರಡನೆ ವಿವರಣೆಯಲ್ಲಿ ಜಡಭರತನೊಬ್ಬ ದರಿದ್ರಬ್ರಾಹ್ಮಣ. ಅವನು ಎಲ್ಲ ಭಗವತ್ಪ್ರಿಯರಿಗೂ ಆಶ್ರಯನಾಗಿರುವುದು ಹೇಗೆ? ವೀರರಾಘವವ್ಯಾಖ್ಯಾನದಲ್ಲಿ ಭಗವಂತನಿಗೆ ಪ್ರಿಯವಾದ ಆಶ್ರಯ ಎಂದರೆ ಭಗವದ್ಭಕ್ತ. ಭರತ ಅಂಥ ಭಗವದ್ಭಕ್ತ. ಅವನೊಬ್ಬನನ್ನು ರಹೂಗಣರಾಜ ತಿರಸ್ಕರಿಸಿದರೆ ಎಲ್ಲ ಭಕ್ತರನ್ನೂ ತಿರಸ್ಕರಿಸಿದಂತೆಯೆ ಅದರಿಂದ 'ತಿರಸ್ಕೃತಾಶೇಷಭಗವತ್ಪ್ರಿಯನೀಕೇತ'ನೆನಿಸಿದ್ದಾನೆ ರಾಜ ಎಂದು ವಿವರಣೆ ನೀಡಿದೆ. ಆದರೆ ಭಗವಂತ ಭಕ್ತನಿಗೆ ಆಶ್ರಯ ಹೊರತು ಭಕ್ತ ಭಗವಂತನಿಗೆ ಆಶ್ರಯನಲ್ಲ. ನಿಕೇತ ಎಂದರೆ ವಾಸಸ್ಥಾನ ಎಂದು ಮಾತ್ರ ವಿವಕ್ಷೆ ಮಾಡಿದರೂ ಒಬ್ಬ ಭಕ್ತನನ್ನು ತಿರಸ್ಕರಿಸಿದರೆ ಎಲ್ಲ ಭಕ್ತರನ್ನೂ ತಿರಸ್ಕರಿಸಿದಂತಾಗುತ್ತದೆ ಎನ್ನುವುದಕ್ಕೆ ವಿವರಣೆ ಬೇಕು. ಒಬ್ಬ ಬ್ರಾಹ್ಮಣನನ್ನು ಹತ್ಯೆ ಮಾಡಿದರೆ ಎಲ್ಲ ಬ್ರಾಹ್ಮಣರನ್ನೂ ಹತ್ಯೆ ಮಾಡಿದಂತಾಗುವುದೆ? ಅದರಿಂದ ಶ್ರೀಮದಾಚಾರ್ಯರು ಗರುಡ ಪುರಾಣಾನುಸಾರವಾಗಿ ಸುಂದರವಾದ ವಿವರಣೆ ನೀಡುತ್ತಾರೆ.

ಅಶೇಷಭಗವತ್ಪ್ರಿಯಾಣಾಂ ನಿಕೇತಃ ಸ ಏವ ಭರತೋ
ಮಾನುಷಾಪೇಕ್ಷಯಾ ।
ತತ್ಕಾಲಸ್ಥಿತಭಕ್ತೇಷು ಮಾನುಷೇಷ್ವೃಷಭಾತ್ಮಜಃ ।
ವರೋಽಪಿ ಧಿಕ್ಕೃತೋ ರಾಜ್ಞಾ ಸುಹೃದಾ ವೈಷ್ಣವೇಷ್ವಪಿ ॥

ಇತಿ ಗಾರುಡೇ ।

ಎಲ್ಲ ಭಗವತ್ಪ್ರಿಯರಿಗೂ, ಅಂದರೆ ಭಗವತ್ಪ್ರಿಯರಾದ ಎಲ್ಲ ಮಾನವರಿಗೂ ಜಡಭರತ ಹಿಂದೆ ಭರತಚಕ್ರವರ್ತಿಯಾಗಿದ್ದಾಗ ಆಶ್ರಯದಾತನಾದ ರಾಜನಾಗಿದ್ದ. 'ಭರತಚಕ್ರವರ್ತಿ ಅವನ ಕಾಲದ ಎಲ್ಲ ಭಗವತ್ಪ್ರಿಯಮಾನವರಿಗೆ ಅಧಿಪತಿಯಾಗಿದ್ದ. ಅವನೇ ಜಡಭರತನಾಗಿ ಹುಟ್ಟಿದಾಗ ರಹೂಗಣರಾಜ, ಸ್ವತಃ ವಿಷ್ಣುಭಕ್ತರಲ್ಲಿ

ಪ್ರೀತಿಉಳ್ಳವನೇ ಆದರೂ ಅಜ್ಞಾನದಿಂದ, ಧಿಕ್ಕರಿಸಿದನೆಂದು ಗರುಡಪುರಾಣದಲ್ಲಿ ಹೇಳಿದೆ.

* * *

ರಹೂಗಣರಾಜ ಜಡಭರತನನ್ನು 'ನೀನೇನೂ ಒಬ್ಬನೇ ಪಲ್ಲಕ್ಕಿಯ ಭಾರ ಹೊರುತ್ತಿಲ್ಲ' ಎಂದು ಆಕ್ಷೇಪಿಸಿದಾಗ, ಜಡಭರತ 'ನೀನು ಹೇಳುವುದು ನಿಜ, ನಾನು ಭಾರ ಹೊರುತ್ತಿಲ್ಲ, ಭಗವಂತನೇ ಹೊರುತ್ತಿರುವವನು' ಎಂದ.

ಬ್ರಾಹ್ಮಣ ಉವಾಚ–

ತ್ವಯೋದಿತಂ ವ್ಯಕ್ತಮವಿಪ್ರಲಬ್ಧಂ
ಭರ್ತುಃ ಸ ಮೇ ಸ್ಯಾದ್ ಯದಿ ವೀರ ಭಾರಃ ।
ಗಂತುರ್ಯದಿ ಸ್ಯಾದಧಿಗಮ್ಯಮಧ್ವಾ
ಪೀವೇತಿ ಚಾಸೌ ನ ವಿದಾಂ ಪ್ರವಾದಃ ॥ ೧೦ ॥

ಬ್ರಾಹ್ಮಣ ನುಡಿದ– 'ತಮ್ಮ, ನೀನೊಬ್ಬನೆ ಬಹುದೂರ ಬಹುಕಾಲ ಪಲ್ಲಕ್ಕಿಯನ್ನು ಹೊತ್ತಿರುವೆ' ಎಂದು ವ್ಯಂಗ್ಯವಾಗಿ ನೀನು ಹೇಳಿದ್ದರ ಅಭಿಪ್ರಾಯ 'ನಾನು ಪಲ್ಲಕ್ಕಿಯ ಭಾರ ಹೊತ್ತು ನಡೆಯಲಿಲ್ಲ.' ಎಂದು ತಾನೆ? ವೀರ, ನೀನು ಹಾಗೆ ಹೇಳಿದ್ದು ಸ್ಪಷ್ಟವಾಗಿ ಯಥಾರ್ಥವೆ ಆಗಿದೆ. ಏಕೆಂದರೆ ಭಾರ ಹೊರುವವನು ನಾನಾಗಿದ್ದರೆ, ದಾರಿ ನಡೆಯುವವನೂ ನಾನೇ ಆಗಿದ್ದರೆ, ನೀನು ಹೇಳಿದ್ದು ಅಯಥಾರ್ಥವಾಗುತ್ತಿತ್ತು. ವಸ್ತುತಃ ಸ್ವತಂತ್ರನಾದ ಹರಿಯೇ ಸ್ವತಂತ್ರವಾಗಿ ಭಾರ ಹೊರುವವನು ಮತ್ತು ದಾರಿ ನಡೆಯುವವನು. ನಾನು ಅಸ್ವತಂತ್ರ. ನಾನು ದಢೂತಿ ಆಸಾಮಿ ಎಂದು ನೀನು ಹೇಳುವುದು ಮಾತ್ರ ಸರಿಯಲ್ಲ. ನನ್ನ ಶರೀರ ದಢೂತಿಯಾಗಿರಬಹುದು, ನಾನಲ್ಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ-'ಭಾರವನ್ನು ಹೊರುತ್ತಿರುವುದು ದೇಹ. ದೇಹ ನಾನಲ್ಲ. ಅದರಿಂದ ನಾನು ಭಾರ ಹೊರುತ್ತಿಲ್ಲ' ಎನ್ನುವುದು ಜಡಭರತನ ವಾದ. ಆದರೆ, ದೇಹ ನಾನಲ್ಲ, ನಿಜ. ಆದರೂ 'ನಾನು ದೇಹದಿಂದ ಭಾರ ಹೊರುತ್ತೇನೆ' ಎಂದು ಅನುಭವವಿದೆ. ಅದನ್ನು ಅಪಲಾಪ ಮಾಡುವುದು ಸರಿಯಲ್ಲ. ಅದರಿಂದ ಇಲ್ಲಿಯೂ ಗರುಡಪುರಾಣ ನೀಡಿರುವ ವಿವರಣೆಯನ್ನೇ ಸ್ವೀಕರಿಸಬೇಕು.

ಭರಣಾದಿಕೃದ್ಧರಿರಿತಿ ಚಿಂತಯನ್ ನೃಪಮಬ್ರವೀತ್ । ಇತಿ ಚ ।

'ಭಾರ ಹೊರುವುದು ದಾರಿ ನಡೆಯುವುದು ಮುಂತಾದವುಗಳಿಗೆ ಹರಿಯೆ ಸ್ವತಂತ್ರಕರ್ತ, ನಾನಲ್ಲ ಎಂಬ ಭಾವನೆಯಿಂದ ಜಡಭರತ ರಹೂಗಣರಾಜನಿಗೆ 'ನಾನು ಭಾರ ಹೊರುತ್ತಿಲ್ಲ' ಎಂದು ಮುಂತಾಗಿ ಹೇಳಿದನೆಂ'ದೂ ಗರುಡ ಪುರಾಣದಲ್ಲಿ ಉಕ್ತವಾಗಿದೆ.

ಶರೀರದಲ್ಲಿ ದಪ್ಪವಾಗಿರುವುದು ತೆಳ್ಳಗಿರುವುದು ಹಸಿವು ಬಾಯಾರಿಕೆ ಮುಂತಾದುವು ದೇಹಾಭಿಮಾನ ಉಳ್ಳವರಿಗೆ ಹೊರತು ನನಗೆ ಅವು ಒಂದೂ ಇಲ್ಲ ಎಂದು ಜಡಭರತ ರಹೂಗಣ ರಾಜನಿಗೆ ಹೇಳುತ್ತಾನೆ.

ಸ್ಥೌಲ್ಯಂ ಕಾರ್ಶ್ಯಂ ವ್ಯಾಧಯ ಆಧಯಶ್ಚ
ಕ್ಷುತ್ ತೃಡ್ ಭಯಂ ಕಲಿರಿಚ್ಛಾ ಜರಾ ಚ ।
ನಿದ್ರಾऽರತಿರ್ಮನ್ಯುರಹಮ್ಮದಶ್ಚ
ದೇಹೇನ ಜಾತಸ್ಯ ಹಿ ಮೇ ನ ಸಂತಿ ॥ ೧೧ ॥

ಶರೀರದಿಂದ ದಪ್ಪವಾಗಿರುವುದು, ತೆಳ್ಳಗಿರುವುದು ದೈಹಿಕಮಾನಸಿಕ ರೋಗಗಳು ಹಸಿವು ಬಾಯಾರಿಕೆ ಭಯ ಕಲಹ ಇಚ್ಛೆ ಮುಪ್ಪು ನಿದ್ರೆ, ದುಃಖ ಕೋಪ ಅಹಂಕಾರ ಮದ ಇವೆಲ್ಲವೂ ದೇಹಾಭಿಮಾನ ಉಳ್ಳವರಿಗೆ ಹೊರತು ನನಗೆ ಅಲ್ಲ.

ಇಲ್ಲಿ 'ದೇಹೇನ ಜಾತಸ್ಯ' ದೇಹಾಭಿಮಾನದಿಂದ ಹುಟ್ಟಿದವನಿಗೆ ದೇಹದ ಸ್ಥೌಲ್ಯಕಾರ್ಶ್ಯಾದಿಗಳು ಇರುತ್ತವೆ. ನನಗೆ ದೇಹಾಭಿಮಾನವಿಲ್ಲ, ಅದರಿಂದ ಸ್ಥೌಲ್ಯಾದಿಗಳು ನನ್ನಲ್ಲಿಲ್ಲ ಎಂದು ಜಡಭರತ ಹೇಳುತ್ತಿದ್ದಾನೆ. ಬೇರೆ ವ್ಯಾಖ್ಯಾನಕಾರರೆಲ್ಲರೂ ಹಾಗೇ ವ್ಯಾಖ್ಯಾನ ಮಾಡಿದ್ದಾರೆ. ಆದರೆ ದೇಹಾಭಿಮಾನದಿಂದ ಹುಟ್ಟಿದ ಮಾತ್ರಕ್ಕೆ ದೇಹದ ಸ್ಥೌಲ್ಯಾದಿಗಳು ಆತ್ಮನಿಗೆ ಬರಬೇಕೆಂದಿಲ್ಲ. ಹಾಗೆ ಹೇಳಿದರೆ ಎಲ್ಲ ಜೀವರೂ ಹುಟ್ಟುವುದು ದೇಹಾಭಿಮಾನದಿಂದಲೇ ತಾನೆ? ಜಡಭರತನೂ ಹುಟ್ಟಿದ್ದು ದೇಹಾಭಿಮಾನ ದಿಂದಲೇ. ಆದರೂ ನನಗೆ ದೇಹದ ಸ್ಥೌಲ್ಯಾದಿಗಳಿಲ್ಲ ಎನ್ನುತ್ತಾನೆ. ಇದು ಹೇಗೆ? ದೇಹಾಭಿಮಾನದಿಂದ ಹುಟ್ಟಿದ ಬಳಿಕ ತತ್ತ್ವಜ್ಞಾನ ಸಂಪಾದಿಸಿ ದೇಹಾಭಿಮಾನವನ್ನು ತ್ಯಾಗ ಮಾಡಿದರೂ ಆಗ ಆತ್ಮನಿಗೆ ಸ್ಥೌಲ್ಯಾದಿಗಳು ಇಲ್ಲ, ಹಿಂದೆ ಇದ್ದುವು ಎನ್ನುವುದಕ್ಕೆ ಏನರ್ಥ? ಸ್ಥೌಲ್ಯಾದಿಗಳಿರುವುದು ದೇಹದಲ್ಲಿಯೇ ಆದರೂ ದೇಹಾತ್ಮೈಕ್ಯಭ್ರಮರೂಪವಾದ ಅಭಿಮಾನದಿಂದ ಆತ್ಮನಲ್ಲಿ ಅವು ಆರೋಪಿತವಾಗುತ್ತದೆ ಎಂದು. ಅದರಿಂದಲೆ ಶುಕದೇವ ವ್ಯಾಖ್ಯಾನದಲ್ಲಿ 'ದೇಹೇನ ಸಹ ಜಾತಸ್ಯ ದೇಹಾತ್ಮಾಭಿಮಾನವತಃ' 'ದೇಹದೊಂದಿಗೆ ಹುಟ್ಟಿ ದೇಹವನ್ನು ಆತ್ಮನಲ್ಲಿ ಆರೋಪಿಸಿಕೊಂಡ ಜೀವನಿಗೆ ಸ್ಥೌಲ್ಯಾದಿಗಳಿರುತ್ತವೆ' ಎಂದಿದೆ. ವಸ್ತುತಃ ದೇಹಾತ್ಮೈಕ್ಯಭ್ರಮವೇ ಅಪ್ರಾಮಾಣಿಕ. ಎಲ್ಲರಿಗೂ ನನ್ನ ದೇಹವೆಂದೇ ಅಭಿಮಾನ, ನನ್ನ ಮನೆ, ನನ್ನ ಸಂಪತ್ತು ಎಂಬ ಅಭಿಮಾನದಂತೆ. ಹೊರತು, ನಾನೇ ದೇಹ. ಎಂದು ಭ್ರಮೆ ಯಾರಿಗೂ ಇರುವುದಿಲ್ಲ. ದೇಹದ ಸ್ಥೌಲ್ಯಾದಿಗಳೂ ಆತ್ಮನಲ್ಲಿ ಯಾವ ರೀತಿಯಿಂದಲೂ, ಆರೋಪದಿಂದಲೂ ಬರುವುದಿಲ್ಲ. ದೇಹದಲ್ಲಿಯೇ ಇರುತ್ತವೆ. ಅದನ್ನು ಬೇರೆಯವರು ಎತ್ತಿ ತೋರಿಸಿ ಗೇಲಿ ಮಾಡಿದಾಗ ಆತ್ಮನಿಗೆ

ಚಿತ್ತಕ್ಷೋಭ ಮಾತ್ರವಾಗುತ್ತದೆ. ಈ ಅಭಿಪ್ರಾಯದಿಂದಲೇ ಭಾಗವತದಲ್ಲಿ ದೇಹಾಭಿಮಾನ ಉಳ್ಳವನಿಗೆ ದೇಹವಿಕಾರವಾದ ಸ್ಥೌಲ್ಯಾದಿಗಳಿರುತ್ತವೆ ಎಂದಿದೆ. ಅದರಿಂದ ಭಾಗವತದಲ್ಲಿ ದೇಹಾಭಿಮಾನದಿಂದ 'ಹುಟ್ಟಿದವನಿಗೆ' 'ದೇಹೇನ ಜಾತಸ್ಯ' ಎಂದು ಹೇಳಿದ್ದನ್ನು 'ದೇಹದ ಜನ್ಮವೇ ತಾನು ದೇಹಾಭಿನ್ನನೆಂದು ಭ್ರಮಿಸಿರುವ ಆತ್ಮನ ಜನ್ಮ' ಎಂದು ಅರ್ಥೈಸಬಾರದು.

ಶ್ರೀಧರವ್ಯಾಖ್ಯಾನದಲ್ಲಿ 'ಯದ್ವಾ' ಎಂದು ಇನ್ನೊಂದು ರೀತಿಯಲ್ಲಿ ವ್ಯಾಖ್ಯಾನಿಸುತ್ತ 'ದೇಹೇ ನ ಜಾತಸ್ಯ' ಎಂದು ಪದವಿಭಾಗ ಮಾಡಿ 'ಮೇ'ಎಂಬುದಕ್ಕೆ ವಿಶೇಷಣವಾಗಿ ಅನ್ವಯಿಸಿ, 'ದೇಹಹುಟ್ಟಿದರೂ ನಾನು ಹುಟ್ಟಿಲ್ಲ, ಅದರಿಂದ ದೇಹದ ಸ್ಥೌಲ್ಯಾದಿಗಳು ನನಗಿಲ್ಲ' 'ದೇಹೇ ಜಾತೇ ಯೋ ಜಾತಸ್ತಸ್ಯೈವ ತಾನಿ, ಮಮ ತು ತತ್ರ ನಜಾತಸ್ಯ ನ ಸಂತಿ' ಎಂದಿದ್ದಾರೆ. ಇಲ್ಲಿಯೂ ದೇಹಾತ್ಮೈಕ್ಯಭ್ರಮಾಭಿಪ್ರಾಯವೇ ಕಾಣುತ್ತದೆ. 'ಜಾತ' ಎಂದರೆ ಜಾತವಾದ ದೇಹದ ಅಭೇದಭ್ರಮ ಉಳ್ಳವನೆಂದರ್ಥ. ಹೀಗಾಗಿ ಜಾತಶಬ್ದ ಅವರಿಗೆ ಬಹಳ ಅರ್ಥಪೂರ್ಣವಾಗುತ್ತದೆ. ವಸ್ತುತಃ ಆತ್ಮನಿಗೆ ದೇಹಪ್ರಾಪ್ತಿಯೆ ಜನನ. ಹೀಗೆ ಜನನ ಹೊಂದಿದರೂ ತತ್ವಜ್ಞಾನದ ಬಲದಿಂದ 'ನನ್ನ ದೇಹ' ಎಂಬ ಅಭಿಮಾನವನ್ನು ತೊರೆದಾಗ ದೇಹವಿಕಾರವಾದ ಸ್ಥೌಲ್ಯಾದಿಗಳಿಂದ ಚಿತ್ತಕ್ಷೋಭವಾಗುವುದಿಲ್ಲ. ಅಭಿಮಾನದಿಂದಲೆ ಚಿತ್ತಕ್ಷೋಭ. ಹೀಗಾಗಿ ದೇಹದಿಂದ ಜನನ ಇಲ್ಲಿ ಅವಿವಕ್ಷಿತ. 'ದೇಹಜಾತ'ಶಬ್ದಕ್ಕೇ ದೇಹಾಭಿಮಾನ ಉಳ್ಳವನೆಂದು ಅರ್ಥ ಮಾಡಬೇಕು. ಇದು ಅಮುಖ್ಯಾರ್ಥವಲ್ಲ. ಗರುಡಪುರಾಣದಲ್ಲಿ ಈ ಅರ್ಥವನ್ನು ಹೇಳಿರುವುದರಿಂದ ಮುಖ್ಯಾರ್ಥವೇ ಆಗಿದೆ.

ದೇಹೇನ ಜಾತಸ್ಯ ದೇಹಾಭಿಮಾನಿನಃ ।

ದೇಹಮಾನೀ ದೇಹಜಾತೋ ವಿದೇಹೋ ಮಾನವರ್ಜಿತಃ ।

ಇತಿ ಚ ।

'ದೇಹೇನ ಜಾತಃ' ಎಂಬುದಕ್ಕೆ ದೇಹಾಭಿಮಾನ ಉಳ್ಳವನೆಂದರ್ಥ.

'ದೇಹಜಾತಶಬ್ದಕ್ಕೆ ದೇಹಾಭಿಮಾನಿ ಎಂದೂ ವಿದೇಹಶಬ್ದಕ್ಕೆ ದೇಹಾಭಿಮಾನ ರಹಿತನೆಂದೂ ಅರ್ಥ' ಎಂದೂ ಗರುಡಪುರಾಣದಲ್ಲಿ ಉಕ್ತವಾಗಿದೆ.

* * *

ನನ್ನನ್ನು ಜೀವನ್ಮೃತನೆಂದು ನಿಂದಿಸುತ್ತಿರುವೆ. ಆದರೆ ನನ್ನ ಶರೀರ ಜೀವನ್ಮೃತ. ನಿನ್ನ ಶರೀರವೂ ಜೀವನ್ಮೃತ. ಆತ್ಮನಿಗೆ ಜನನ ಮರಣಗಳಿಲ್ಲ. ನಿನ್ನನ್ನು ನೀನು 'ಸ್ವಾಮಿ' ಎಂದುಕೊಂಡು ನನಗೆ ಆಜ್ಞೆ ಮಾಡುತ್ತಿರುವೆ. ಆದರೆ ಆ ಅಚ್ಯುತನೇ

ಸ್ವಾಮಿ. ಅವನೇ ಆಜ್ಞೆ ಮಾಡಬೇಕು, ನೀನಲ್ಲ ಎಂದು ಜಡಭರತ ರಹೂಗಣರಾಜನಿಗೆ ಹೇಳುತ್ತಾನೆ.

ಜೀವನ್ಮೃತತ್ವಂ ನಿಯಮೇನ ರಾಜ-
ನ್ನಾದ್ಯಂತವದ್ ಯದ್ ವಿಕೃತಸ್ಯ ದೃಷ್ಟಮ್ ।
ಸ್ವಸ್ವಾಮಿಭಾವೋ ಧ್ರುವ ಏಷ ಯತ್ರ
ತರ್ಹ್ಯಚ್ಯುತೇಽಸಾವಿತಿ ಕೃತ್ಯಯೋಗಃ ॥ ೧೨ ॥

ವಿಶೇಷಬುದ್ಧೇರ್ವಿವರಂ ಮನಾಕ್ ಚ
ಪಶ್ಯಾಮಿ ಯನ್ನ ವ್ಯವಹಾರತೋಽನ್ಯತ್ ।
ಕ ಈಶ್ವರಸ್ತತ್ರ ಕಿಮೀಶಿತವ್ಯ-
ಮಥಾಪಿ ರಾಜನ್ ಕರವಾಮ ಕಿಂ ತೇ ॥ ೧೩ ॥

ರಾಜನೆ, ನಾನು ಬದುಕಿದ್ದೂ ಸತ್ತಿರುವವನು ಎನ್ನುತ್ತಿರುವೆ. ಆದರೆ ಬದುಕೂ ಸಾವೂ ನನಗೆ ಚೇತನನಿಗೆ ಇಲ್ಲ. ನನ್ನ ಶರೀರಕ್ಕೆ ಪ್ರಾಣವಿರುವವರೆಗೆ ಬದುಕು. ಅಸಹನೀಯವಾದ ದುಃಖ ಬಂದರೆ ಅದೇ ಸಾವು. ಆದರೆ ಇದು ಜೀವಂತವಾಗಿರುವ ಎಲ್ಲ ಶರೀರಕ್ಕೂ ಸಮಾನ. ನನ್ನ ಶರೀರಕ್ಕೆ ಏನು ವಿಶೇಷವಾಗಿ ಹೇಳುತ್ತಿರುವೆ? ರಾಜಾಜ್ಞೆಯನ್ನು ಉಲ್ಲಂಘಿಸಿದ್ದೇನೆ ಎಂದೂ ನೀನು ನನ್ನನ್ನು ಆಕ್ಷೇಪಿಸಿರುವಿ. ಆದರೆ ಯಾರು ಈ ಆಜ್ಞೆ ಮಾಡುವ ರಾಜ? ನೀನಲ್ಲ. ಮುಖ್ಯವಾಗಿ ಆಜ್ಞೆ ಮಾಡುವವನು ಸರ್ವೇಶನಾದ ಹರಿ. ಅವನಿಗೆ ಅಧೀನರಾಗಿ ಆಜ್ಞೆ ಮಾಡುವವರು ದೇವತೆಗಳು. ಅದರಿಂದ ನಿನ್ನಂಥ ರಾಜರಲ್ಲಿ ನಮ್ಮ ಮೇಲೆ ಆಜ್ಞೆ ಮಾಡುವ ಯೋಗ್ಯತೆ ಇಲ್ಲ.

ಈ ದೇಶಕ್ಕೆ ಇವನು ರಾಜ ಎಂದು ವಿಶೇಷವಾಗಿ ಮನುಷ್ಯರಲ್ಲಿ ಹೇಳುವುದಕ್ಕೆ ಕಾರಣ ವ್ಯವಹಾರ ಹೊರತು ಬೇರೇನನ್ನೂ ಸ್ವಲ್ಪವೂ ಎಲ್ಲಿಯೂ ನಾ ಕಾಣೆ. ಏಕೆಂದರೆ ಸ್ವಾಭಾವಿಕವಾಗಿ ಯಾರು ರಾಜರಾಗಿದ್ದಾರೆ? ಯಾರು ಪ್ರಜೆಗಳಾಗಿದ್ದಾರೆ? ಸ್ವಾಭಾವಿಕವಾಗಿ ಅಲ್ಲದಿದ್ದರೂ ಕರ್ಮವಶದಿಂದ ನೀನು ರಾಜನಾಗಿರುವಿ. ಎಂದು ನೀನು ಹೇಳಬಹುದು. ಅದನ್ನು ನಾನು ಒಪ್ಪುತ್ತೇನೆ. ಅದಕ್ಕೆ ನಿನ್ನಾಜ್ಞೆಯನ್ನು ನಾನು ಯಥಾಶಕ್ತಿ ಪಾಲಿಸುತ್ತಿದ್ದೇನೆ. ಆದರೆ ಕರ್ಮವಶದಿಂದ ನಾನು ರಾಜನಾದಾಗ ನೀನು ನನ್ನಾಜ್ಞೆಯನ್ನು ಪಾಲಿಸಬೇಕಾಗುವುದು.

ಇಲ್ಲಿ 'ಜೀವನ್ಮೃತ' ಎಂದರೇನು? ಸ್ವಲ್ಪಕಾಲ ಬದುಕಿ ಬಳಿಕ ಸಾಯುವವನನ್ನು ಯಾರೂ ಜೀವನ್ಮೃತನೆನ್ನುವುದಿಲ್ಲ. ಬಾಲ್ಯ ಯೌವನ ವೃದ್ಧಾಪ್ಯಗಳಲ್ಲಿ ಬಾಲ್ಯದ ಶರೀರನಾಶವಾಗಿ ಯೌವನದ ಶರೀರ ಬಂದಾಗ, ಯೌವನದ ಶರೀರ ನಾಶವಾಗಿ ವೃದ್ಧಾಪ್ಯಶರೀರ ಬಂದಾಗ ಯಾರೂ ಜೀವನ್ಮೃತ ಎನ್ನುವುದಿಲ್ಲ. ಆ ಶಬ್ದಕ್ಕೆ ಹಾಗೆ

ಅರ್ಥವಲ್ಲ. ಬೇರೆ ವ್ಯಾಖ್ಯಾನಕಾರರೆಲ್ಲರೂ ಹಾಗೇ ಅರ್ಥ ಹೇಳಿದ್ದಾರೆ. 'ಜೀವತ್ವಂ ಶ್ವಾಸವತ್ತ್ವಂ ಮೃತತ್ವಂ ಚೈತನ್ಯಶೂನ್ಯತ್ವಂ' ಉಸಿರಾಟವೆ ಜೀವತ್ವ, ಚೈತನ್ಯ ಹೊರಟು ಹೋಗುವುದೇ ಮೃತತ್ವ ಎಂದು ವೀರರಾಘವವ್ಯಾಖ್ಯಾನವಿದೆ. ಆದರೆ ಈ ಅರ್ಥದಲ್ಲಿ ಎಲ್ಲರೂ ಜೀವನ್ಮೃತರೆ. ಒಬ್ಬನನ್ನು ನಿಂದೆ ಮಾಡಲು ಅದನ್ನು ಹೇಳಲು ಕಾರಣವಿಲ್ಲ. ಅದರಿಂದ ಜೀವಿಸುತ್ತಿದ್ದಾಗಲೆ ಸಾಯುತ್ತಿರುವವನು ಜೀವನ್ಮೃತ ಎನ್ನಬೇಕು. ಸಾವು ಎಂದರೆ ಚೈತನ್ಯ ಹೊರಟುಹೋಗುವುದೆಂಬ ಮುಖ್ಯಾರ್ಥವಿಟ್ಟುಕೊಂಡರೆ, ಉಸಿರಾಟ ಅದರ ಜೊತಗಿರಲಾರದು. ಅದರಿಂದ ಅಮುಖ್ಯಾರ್ಥ ಮಾಡಿ ಸಾಯುವಾಗ ಹೇಗೆ ಸಂಕಟದುಃಖ ಅನುಭವಿಸುವನೋ ಹಾಗೆ ಬಹಳ ದುಃಖ ಅನುಭವಿಸುವವನು ಬದುಕಿದ್ದೂ ಸತ್ತಂತೆ ಎಂಬ ಅಭಿಪ್ರಾಯ ಹೇಳಬೇಕು. 'ನನಗೆ ದಾರಿದ್ರ್ಯದುಃಖವಿದೆ, ಅದರಿಂದ ನಾನು ಬದುಕಿದ್ದೂ ಸತ್ತಂತೆ ಎಂದು ನೀನು ನನ್ನನ್ನು ಗೇಲಿ ಮಾಡುವಿಯಾದರೆ, ನೀನು ರಾಜನಾದರೂ ಶತ್ರುಪೀಡೆಯಂಥ ದುಃಖ ನಿನಗೂ ಇದೆ. ಹಾಗಿರುವಾಗ ನನ್ನನ್ನೇ ಏಕೆ ಜೀವನ್ಮೃತನೆನ್ನುತ್ತಿರುವೆ?' ಎಂದು ಜಡಭರತ ಕೇಳುತ್ತಿದ್ದಾನೆ. ಈ ರೀತಿ ಜೀವನ್ಮೃತ ಶಬ್ದಕ್ಕೆ ಅರ್ಥ ಹೇಳುವುದೂ ಗರುಡಪುರಾಣಾನುಗುಣವೇ ಆಗಿದೆ. 'ಪ್ರಾಣಯುಕ್ತೇರರತ್ಯಾ ಚ' ಉಸಿರಾಟ ಮತ್ತು ದುಃಖ ಎರಡೂ ಜೊತೆ ಇರುವುದನ್ನೇ ಜೀವನ್ಮೃತ ಶಬ್ದದಿಂದ ವ್ಯವಹರಿಸುತ್ತಾರೆ ಎಂದು ಗರುಡಪುರಾಣ ಹೇಳುತ್ತಿದೆ.

'ಸ್ವಸ್ವಾಮಿಭಾವ' ಸ್ವಾಮಿ-ಭೃತ್ಯನೆಂಬ ಭೇದ ಶಾಶ್ವತವಲ್ಲ, ಶಾಶ್ವತವಾಗಿದ್ದರೆ ನೀನು ಸ್ವಾಮಿ ನಾನು ಭೃತ್ಯ ಎಂದು ವ್ಯವಹಾರ ಮಾಡಬಹುದಿತ್ತು. ನನಗೆ ನೀನು ಆಜ್ಞೆ ಮಾಡಬಹುದಿತ್ತು.' ಎಂದು ಜಡಭರತ ಹೇಳುತ್ತಿದ್ದಾನೆ ಎನ್ನುತ್ತಾರೆ ಬೇರೆ ವ್ಯಾಖ್ಯಾನಕಾರರು. ಆದರೆ ವ್ಯವಹಾರ ಮಾಡಬೇಕಾದರೆ ಶಾಶ್ವತವಾದ ಸ್ವಾಮಿಭೃತ್ಯಭೇದವಿರಬೇಕೆನ್ನುವುದು ವ್ಯಾಹತವಾಗುತ್ತದೆ. ಅನುಭವವಿರುದ್ಧವೂ ಆಗುತ್ತದೆ. ಶಾಶ್ವತವಾದ ಸ್ವಾಮಿಭೃತ್ಯಭಾವ ಎಲ್ಲಿ ಕಂಡಿದೆ? ಅದರಿಂದ ಶಾಶ್ವತವಲ್ಲದಿದ್ದರೂ ವ್ಯವಹಾರಕ್ಕೆ ಅದೇ ಬೇಕು. ಐಶ್ವರ್ಯ ದಾರಿದ್ರ್ಯಗಳು ಶಾಶ್ವತವಲ್ಲದಿದ್ದರೂ ಇವನು ಧನಿಕ ಇವನು ದರಿದ್ರ ಎಂದು ವ್ಯವಹಾರ ಮಾಡುತ್ತೇವೆ. ಅದರಿಂದ ಒಬ್ಬನು ಶಾಶ್ವತವಾಗಿ ಸ್ವಾಮಿಯಲ್ಲದಿದ್ದರೂ ತತ್ಕಾಲದಲ್ಲಿ ಸ್ವಾಮಿಯಾಗಿರುವಾಗ ಸ್ವಾಮಿ ಎಂದು ವ್ಯವಹರಿಸಲು ಏನು ಬಾಧಕವಿದೆ? ಈ ಪ್ರಶ್ನೆಗೆ ಬೇರೆ ವ್ಯಾಖ್ಯಾನಕಾರರು ಸ್ವಾಮಿ ಭೃತ್ಯ ಎಂಬ ಭೇದವೇ ಕಲ್ಪಿತ, ವಾಸ್ತವವಲ್ಲ. ಅದರಿಂದ ವ್ಯವಹಾರ ಮಾಡುವುದು ಉಚಿತವಲ್ಲ ಎಂದು ಸಮಾಧಾನವನ್ನು ಭಾಗವತದಲ್ಲಿ 'ತರ್ಹ್ಯುಚ್ಯತೇಽಸೌ ವಿಧಿಕೃತ್ಯಯೋಗಃ' ಎಂಬ ಅಪಪಾಠವನ್ನಾಧರಿಸಿ ಹೇಳುತ್ತಾರೆ. 'ಉಚ್ಯತೇ' ಎಂದರೆ 'ಉಚ ಸಮವಾಯೇ' ಧಾತುವಿನಿಂದ ಉಚಿತವಾಗುತ್ತದೆ ಎಂದರ್ಥ ಎನ್ನುತ್ತಾರೆ. ಗಿರಿಧರ ವ್ಯಾಖ್ಯಾನದಲ್ಲಿ 'ಭೇದೋ

ದುರ್ನಿರೂಪ್ಯಃ' ಭೇದದ ಸ್ವರೂಪ ಏನೆಂದೇ ಹೇಳಲಾಗದು ಎಂದು ವಿಸ್ತಾರವಾಗಿ ಭೇದ ನಿರಾಕರಣೆ ಮಾಡಿದ್ದಾರೆ. ಆದರೆ ಈ ನಿರಾಕರಣೆ ಅಭೇದದ ವಿಷಯ ದಲ್ಲಿಯೂ ಬರುವುದರಿಂದ ಸ್ವವ್ಯಾಹತವಾಗಿದೆ. ಮತ್ತು ಭೇದ ಕಲ್ಪಿತವಾದರೂ ವ್ಯಾವಹಾರಿಕವಾದ್ದರಿಂದ ವ್ಯವಹಾರ ಮಾಡುವುದು ಉಚಿತವೆ. ಅದರಿಂದ ಹೀಗೆ ಸಮಾಧಾನ ಹೇಳಬೇಕು-

ತರ್ಹ್ಯಚ್ಯುತೇಽಸಾವಿತಿ ಕೃತ್ಯಯೋಗಃ' ಎಂದೇ ಪಾಠವಿಟ್ಟುಕೊಳ್ಳಬೇಕು. ಶಾಶ್ವತಸ್ವಾಮಿತ್ವ ಅಚ್ಯುತನಲ್ಲಿ ಕಂಡಿದೆ. ಶಾಶ್ವತ ಭೃತ್ಯತ್ವ ನಮ್ಮಲ್ಲಿ ಕಂಡಿದೆ. ಅದರಿಂದ ಸ್ವಾಮಿಭೃತ್ಯವ್ಯವಹಾರಕ್ಕೆ ಅದನ್ನೇ ವಿಷಯವಾಗಿಟ್ಟುಕೊಳ್ಳಬೇಕು. ಅಶಾಶ್ವತವಾದ ಲೋಕದಲ್ಲಿ ಕಂಡಿರುವ ಸ್ವಾಮಿಭೃತ್ಯತ್ವಗಳನ್ನಲ್ಲ. ಯದ್ಯಪಿ ಅವುಗಳನ್ನೇ ಮನಸ್ಸಿನಲ್ಲಿಟ್ಟುಕೊಂಡು ನಾವು ವ್ಯವಹಾರ ಮಾಡುತ್ತಿದ್ದೇವೆ. ಆದರೆ ಅದು ವ್ಯವಹಾರ ಮಾತ್ರ. ಅದರಿಂದ ಅಂಥ ವ್ಯವಹಾರವನ್ನು ನೀನು ಮಾಡಬೇಡ ಎಂದು ಜಡಭರತ ರಹೂಗಣರಾಜನಿಗೆ ಉಪದೇಶಿಸುತ್ತಿದ್ದಾನೆ. 'ತರ್ಹ್ಯಚ್ಯುತೇಽಸಾವಿತಿ' ಎಂಬ ಪಾಠವೇ ಸರಿ ಎಂಬುದೂ ಗರುಡಪುರಾಣದಿಂದಲೇ ಸ್ಪಷ್ಟವಾಗುತ್ತದೆ. 'ಸ್ವಾಮಿತ್ವಂ ತು ಹರೇರೇವ ಮುಖ್ಯಂ' ಎಂದು ಅಲ್ಲಿ ಈ ಪಾಠವನ್ನು ಹಿಡಿದೇ ಭಾಗವತಕ್ಕೆ ವ್ಯಾಖ್ಯಾನ ಮಾಡಲಾಗಿದೆ. ಸ್ವಾಮಿತ್ವ ಹರಿಯಲ್ಲಿ ಶಾಶ್ವತವಾಗಿ ಸ್ವತಂತ್ರವಾಗಿ ಇದೆ. ಅದೇ ರೀತಿ ಸ್ವತಂತ್ರವಾಗಿ ಅಲ್ಲದಿದ್ದರೂ ಶಾಶ್ವತವಾಗಿ ತತ್ತ್ವಾಭಿಮಾನಿದೇವತೆಗಳಲ್ಲಿಯೂ ಸ್ವಾಮಿತ್ವವಿದೆ. ಎಂಬ ಅಂಶವನ್ನೂ ಗರುಡಪುರಾಣ ಹೇಳುತ್ತ ಭಾಗವತದಲ್ಲಿ ಅದೂ ವಿವಕ್ಷಿತವಾಗಿದೆ ಎಂದು ಸೂಚಿಸುತ್ತದೆ.

ಪ್ರಾಣಯುಕ್ತೇರರತ್ಯಾ ಚ ಜಡಂ ಜೀವನ್ಮೃತಂ ಸ್ಮೃತಮ್ ॥
ಇತಿ ಚ ।

ಸ್ವಾಮಿತ್ವಂ ತು ಹರೇರೇವ ಮುಖ್ಯಮನ್ಯತ್ರ ಭೃತ್ಯತಾ ।
ದೇವೇಷು ತನ್ನಿಯತ್ಯಾ ಚ ತ್ವದಾದೇರ್ವ್ಯಾವಹಾರಿಕಮ್ ॥

ಮಾನುಷೇಷು ವಿಶೇಷಃ ಕೋ ವ್ಯವಹಾರಮೃತೇ ವದ ।
ವ್ಯತ್ಯಾಸಾನ್ನಹಿ ದೇವೇಷು ವ್ಯತ್ಯಾಸಃ ಸ್ವಾಮಿತಾಗತಃ ॥
ಇತಿ ಚ ।

ಜಡಶರೀರ ಉಸಿರಾಡುವುದರಿಂದ ಜೀವಂತವಾಗಿರುತ್ತದೆ. ಅದೇ ಸಮಯದಲ್ಲಿ ಸಾವಿನಲ್ಲಿರುವಂತೆ ಬಲು ದುಃಖವೂ ಅದರಲ್ಲಿ ಇರುವುದರಿಂದ ಮೃತ ಎಂದೂ ವ್ಯವಹಾರವಿದೆ. ಅದರಿಂದ ಜೀವನ್ಮೃತ ಎಂದು ಎನಿಸುತ್ತದೆ ಎಂದೂ ಗರುಡಪುರಾಣದಲ್ಲಿ ಹೇಳಿದೆ.

ಸ್ವಾಮಿತ್ವವು ಮುಖ್ಯವಾಗಿ ಸ್ವತಂತ್ರವಾಗಿ ಶಾಶ್ವತವಾಗಿ ಹರಿಯಲ್ಲಿಯೇ ಇರುತ್ತದೆ. ಜೀವರಲ್ಲಿ ಭೃತ್ಯತ್ವವೇ ಮುಖ್ಯವಾಗಿರುತ್ತದೆ. ದೇವತೆಗಳಲ್ಲಿ ಹರಿಯ ಅಧೀನವಾಗಿಯೇ ಅಮುಖ್ಯವಾಗಿ ಸ್ವಾಮಿತ್ವವಿರುತ್ತದೆ. ರಾಜನೆ, ನಿನ್ನಂಥವರಲ್ಲಿ ಸ್ವಾಮಿತ್ವವೆಂಬುದು ಕೇವಲ ವ್ಯಾವಹಾರಿಕ. ಮಾನವರಾದ ರಾಜರಲ್ಲಿ ಸ್ವಾಮಿತ್ವವ್ಯವಹಾರವನ್ನು ಬಿಟ್ಟು ಬೇರೆ ಮುಖ್ಯವಾಗಲಿ ಅಮುಖ್ಯವಾಗಲಿ ಸ್ವಾಮಿತ್ವವೇನಿದೆ, ಹೇಳು. ಏನಿಲ್ಲ ಏಕೆಂದರೆ ಕರ್ಮವಶದಿಂದ ಇಂದು ಸ್ವಾಮಿಯಾಗಿರುವವನು ನಾಳೆ ಭೃತ್ಯನಾಗಬಹುದು. ಇಂಥ ವ್ಯತ್ಯಾಸ ದೇವತೆಗಳ ಸ್ವಾಮಿತ್ವದಲ್ಲಿ ಬರುವುದಿಲ್ಲ.' ಎಂದೂ ಗರುಡಪುರಾಣದಲ್ಲಿ ಹೇಳಿದೆ.

* * *

ರಹೂಗಣ ರಾಜ ಜಡಭರತನಲ್ಲಿ ಕ್ಷಮೆ ಕೇಳುತ್ತಾನೆ 'ದೊಡ್ಡವರನ್ನು ಅಪಮಾನಿಸಿದರೆ ಅವರು ಅದನ್ನು ಗಣನೆ ಮಾಡದಿರಬಹುದು. ಆದರೆ ಸಣ್ಣವರಿಗೆ ಅದರಿಂದ ಅನರ್ಥ ನಿಶ್ಚಿತ' ಎಂದು ಹೇಳುತ್ತಾನೆ.

ನ ವಿಕ್ರಿಯಾ ವಿಶ್ವಸುಹೃತ್ಸಖಸ್ಯ
ಸಾಮ್ಯೇನ ವೀತಾಭಿಮತೇಸ್ತವಾಪಿ ।
ಮಹದ್ವಿಮಾನಾತ್ ಸ್ವಕೃತಾದ್ಧಿ ಮಾದೃಗ್
ಧಕ್ಷ್ಯತ್ಯದೂರಾದಪಿ ಶೂಲಪಾಣಿಃ ॥ ೨೬ ॥

ವಿಶ್ವಬಂಧುವಾದ ಶ್ರೀಹರಿ ನಿಮ್ಮಂಥವರಿಗೆ ಸಖನಾಗಿರುವುದರಿಂದ, ನೀನು ಮಾನಾಪಮಾನಗಳನ್ನು ಸಮನಾಗಿ ಕಾಣುತ್ತ ಅಭಿಮಾನವನ್ನು ತೊರೆದವನಾದ್ದರಿಂದ, ನಾನು ಮಾಡಿದ ಅಪಚಾರದಿಂದ ನಿನ್ನ ಮನಸ್ಸಿನಲ್ಲಿ ಯಾವುದೇ ವಿಕಾರ ಉಂಟಾಗದಿರಬಹುದು. ಆದರೂ ದೊಡ್ಡವರಿಗೆ ಅಪಮಾನಮಾಡುವ ನನ್ನಂಥವನು ಮಾತ್ರ ತಾನು ಮಾಡಿದ ಪಾಪದಿಂದ ತಾನೇ ಸುಟ್ಟುಹೋಗುವುದು ನಿಶ್ಚಯ. ಸಾಕ್ಷಾತ್ ಶೂಲಪಾಣಿಯಾದ ರುದ್ರನಾದರೂ ಸರಿಯೆ, ತನಗಿಂತ ಉತ್ತಮರಾದವರನ್ನು ಅಪಮಾನಿಸಿದರೆ ಒಡನೆ ಸುಟ್ಟುಹೋದಾನು.

ಇಲ್ಲಿ 'ಧಕ್ಷ್ಯತ್ಯದೂರಾದಪಿ ಶೂಲಪಾಣಿಃ' 'ಸ್ವೋತ್ತಮರಲ್ಲಿ ಅಪಚಾರ ಮಾಡಿದರೆ ರುದ್ರನೂ ಆ ಪಾಪದಿಂದ ತನ್ನನ್ನು ತಾನು ಸುಟ್ಟುಕೊಂಡಾನು' ಎನ್ನುವುದನ್ನು ಬೇರೆ ವ್ಯಾಖ್ಯಾನಕಾರರು ಸಹಿಸಲಿಲ್ಲ. ರುದ್ರ ಎಂದರೆ ರುದ್ರನಂತೆ ಅತಿಸಮರ್ಥ ಎಂದು ಗೌಣಾರ್ಥ ಮಾಡಿದ್ದಾರೆ. ವಸ್ತುತಃ ರುದ್ರ ಬ್ರಹ್ಮನ ಪಂಚಮ ಮುಖಚ್ಛೇದದಿಂದ ಬ್ರಹ್ಮಹತ್ಯೆಗೊಳಗಾಗಿ ಬೇಯುತ್ತ ಅದರ ಪರಿಹಾರಕ್ಕಾಗಿ ರಾಮೇಶ್ವರದಲ್ಲಿ ನೆಲೆಸಿ ಸೇತುದರ್ಶನ ಮಾಡುತ್ತಿದ್ದಾನೆ. ಅದರಿಂದ ಶೂಲಪಾಣಿಶಬ್ದಕ್ಕೆ ರುದ್ರನಂತೆ ಅತಿಸಮರ್ಥನೆಂದು ಗೌಣಾರ್ಥ ಮಾಡಬೇಕಾಗಿಲ್ಲ. ಏಕೆಂದರೆ

ಮುಖ್ಯಾರ್ಥದಲ್ಲಿ ಬಾಧವಿಲ್ಲ. ಮತ್ತು ಗರುಡಪುರಾಣದಲ್ಲಿ ಮುಖ್ಯಾರ್ಥವಿವಕ್ಷೆಯೆ ಉಕ್ತವಾಗಿದೆ.

ಸ್ವತೋ ಮಹದವಜ್ಞಾನಾದ್‌ರುದ್ರೋऽಪ್ಯಾತ್ಮಾನಮಾದಹೇತ್ ।
ಇತಿ ಚ ।

ತನಗಿಂತ ಉತ್ತಮರಾದವರನ್ನು ಅಪಮಾನಿಸಿದರೆ ರುದ್ರನೂ ತನ್ನನ್ನು ಆ ಪಾಪದಿಂದ ಸುಟ್ಟುಕೊಂಡಾನು ಎಂದೂ ಗರುಡಪುರಾಣದಲ್ಲಿ ಹೇಳಿದೆ.

ಬೇರೆ ವ್ಯಾಖ್ಯಾನಕಾರರು 'ನಂಕ್ಷ್ಯತ್ಯದೂರಾದಪಿ' ಎಂದು ಪಾಠವಿಟ್ಟು ಕೊಂಡಿದ್ದಾರೆ. ಉತ್ತಮರಲ್ಲಿ ಅಪಚಾರ ಮಾಡುವವನು ನಾಶ ಹೊಂದುತ್ತಾನೆ ಎಂದು ಅರ್ಥ. ನಾಶವೆಂಥರೇನು ಆತ್ಮನಿಗೆ ನಾಶವಿಲ್ಲ ತಾನೆ ಎಂದರೆ ಸ್ಥಾವರ ಜನ್ಮ ಬರುತ್ತದೆ ಎಂದರ್ಥ ಎಂದು ವೀರರಾಘವವ್ಯಾಖ್ಯಾನ ಭಗವತ್ಪ್ರಸಾದವ್ಯಾಖ್ಯಾನಗಳು ಹೇಳಿವೆ. ಆದರೆ ಗರುಡಪುರಾಣ 'ಆದಹೇತ್' ಎನ್ನುತ್ತ 'ಧಕ್ಷ್ಯತಿ' ಎಂಬ ಪಾಠವೆ ಮೂಲಪಾಠವೆಂದು ಸೂಚಿಸುತ್ತಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ದಶಮೋऽಧ್ಯಾಯಃ ॥

—o—

ಅಧ್ಯಾಯ-೧೧

ಅಧ್ಯಾಯಸಾರಾಂಶ

ರಹೂಗಣರಾಜ ಕೇಳಿದ ಪ್ರಶ್ನೆಗಳಿಗೆ ಜಡಭರತ ಉತ್ತರಿಸುತ್ತಾನೆ-'ಜೀವನಿಗೆ ಕರ್ತೃತ್ವವಿಲ್ಲ. ಏಕೆಂದರೆ ಅವನ ಮನಸ್ಸಿನಲ್ಲಿ ಸತ್ವಾದಿಗುಣಗಳ ಪ್ರಭಾವದಿಂದ ಆಲೋಚನೆಗಳುಂಟಾಗುತ್ತವೆ. ಇವು ಜೀವನ ವಶದಲ್ಲಿಲ್ಲ. ಅವನ ಇಚ್ಛಾನುಸಾರ ಮನಸ್ಸು ಆಲೋಚಿಸುತ್ತದೆ ಎಂದಿಲ್ಲ. ಆದರಿಂದ ಮನಸ್ಸಿನ ಆಲೋಚನೆಗಳಿಗೆ ಭಗವಂತನೇ ಸ್ವತಂತ್ರಕರ್ತ. ಆದರಿಂದ ಭಗವಂತನ ಅಧೀನವಾಗಿಯೇ ಆಲೋಚನೆ ಮಾಡುವ ಜೀವ 'ನಾನು ಆಲೋಚನೆ ಮಾಡಿ ಕೆಲಸ ಮಾಡುತ್ತೇನೆ' ಎಂದು ಹೇಳಿಕೊಳ್ಳಬಾರದು. ವೇದದ ವಿಧಿನಿಷೇಧಗಳೂ ಜೀವಕರ್ತೃತ್ವದ ಅಭಿಪ್ರಾಯದಿಂದ ಹೊರಟಿಲ್ಲ. ವಿಷಯಭೋಗ ಸ್ವಪ್ನಸುಖದಂತೆ ಅಲ್ಪ ಅಸ್ಥಿರವೆಂದು ಮನಗಂಡು, ವಿಷಯಾಸೆಯಿಂದ ಕರ್ಮ ಮಾಡುವುದನ್ನು ನಿಲ್ಲಿಸಬೇಕು. ವಿಷಯಸುಖಫಲಕ್ಕಾಗಿ ಜೀವ ಕರ್ಮ ಮಾಡಬೇಕೆಂದು ವೇದ ವಿಧಿಸುತ್ತಿಲ್ಲ. ಭಗವಂತನ ಪ್ರೀತ್ಯರ್ಥವಾಗಿ ಭಗವಂತನೇ ಜೀವನಲ್ಲಿ ನಿಂತು ಕರ್ಮ ಮಾಡಿಸುತ್ತಾನೆ. ಅವನಿತ್ತ ಫಲ ಉಣ್ಣುತ್ತಾನೆ ಎಂದಿಷ್ಟೇ ಹೇಳುತ್ತಿದೆ. ಶರೀರಕ್ಕೆ ತಾಪವಾದಾಗ ಜೀವನಿಗೆ ತಾಪವಾಗಲು ಮನಸ್ಸಿನಲ್ಲಿರುವ ದೇಹಾಭಿಮಾನವೆಂಬ ದೋಷ ಕಾರಣ. ಮನಸ್ಸು ಸತ್ವಾದಿಗುಣಗಳಿಗೆ ವಶವಾಗಿ ಬಂಧಕಕರ್ಮಗಳನ್ನು ಮಾಡಿ ಸುಖದುಃಖಗಳನ್ನು ನೀಡುತ್ತ ದೇಹಾಭಿಮಾನವನ್ನು ಹುಟ್ಟಿಸುತ್ತದೆ. ವಿಷಯಪದಾರ್ಥಗಳನ್ನೇ ಆಲೋಚಿಸುತ್ತದೆ. ಭಗವಂತನನ್ನು ಮರೆಯುತ್ತದೆ. ಈ ವಿಷಯಾಭಿಮಾನವೇ ಸಂಸಾರಕ್ಕೆ ಮುಖ್ಯಕಾರಣ. ಶಾಸ್ತ್ರಜ್ಞಾನದ ಬಲದಿಂದ ಅದನ್ನು ದೂರಮಾಡಿಕೊಂಡು ಭಗವಂತನ ಸಾಕ್ಷಾತ್ಕಾರದಿಂದ ಮೋಕ್ಷ ಪಡೆಯಬೇಕು.

* * *

ಹರಿಯ ಸ್ವತಂತ್ರಕರ್ತೃತ್ವದ ಮುಂದೆ ಜೀವನ ಪರಾಧೀನಕರ್ತೃತ್ವ ಇದ್ದೂ ಇಲ್ಲದಂತೆ. ಈ ಸತ್ಯ ಕರ್ಮವಿಧಾಯಕವಾಕ್ಯಗಳಲ್ಲಿ ಸಾಮಾನ್ಯರಿಗೆ ಗೋಚರವಾಗುವುದಿಲ್ಲ. ಜ್ಞಾನಿಗಳಿಗೆ ಮಾತ್ರ ಗೋಚರವಾಗುತ್ತದೆ ಎಂದು ಜಡಭರತ ರಹೂಗಣರಾಜನಿಗೆ ಉಪದೇಶಿಸುತ್ತಾನೆ.

ತಥೈವ ರಾಜನ್ನುರುಗಾರ್ಹಮೇಧ
ವಿತಾನವಿದ್ಯೋರುವಿಜೃಂಭಿತೇಷು ।
ನ ವೇದವಾದೇಷು ಹಿ ತತ್ವವಾದಃ
ಪ್ರಾಯೇಣ ಶುದ್ಧೋ ನು ಚಕಾಸ್ತಿ ಸಾಧು ॥ ೨ ॥

ಗೃಹಸ್ಥಾಶ್ರಮದಲ್ಲಿ ನಡೆಸುವ ದೊಡ್ಡದೊಡ್ಡ ಯಾಗಗಳನ್ನು ವಿಸ್ತಾರವಾಗಿ ವರ್ಣಿಸುವ ಕಲ್ಪಸೂತ್ರಾದಿಗ್ರಂಥಗಳು ಕರ್ಮಕಾಂಡವನ್ನು ಕೇವಲ ಕರ್ಮಪರವೆಂದು ತಿಳಿಸುತ್ತಿರಬಹುದು. ಆದರೆ ಅದು ಮೇಲುನೋಟಕ್ಕೆ ಮಾತ್ರ ಕರ್ಮಪರವಾಗಿದೆ. 'ಪರಮಾತ್ಮನೆ ಪ್ರೇರಕನಾಗಿ ಯಜ್ಞ ಮಾಡಿಸುವವನು ಅವನೆ ಫಲಭೋಕ್ತೃ, ಜೀವನು ಅವನಿತ್ತ ಫಲ ಉಣ್ಣುವವನು. ಅವನ ಪ್ರೀತ್ಯರ್ಥವಾಗಿ ಕರ್ಮವಿಧಿ' ಎಂಬ ರಹಸ್ಯ ಪ್ರಮೇಯ ಕರ್ಮಕಾಂಡದಲ್ಲಿ ಮೇಲುನೋಟಕ್ಕೆ ಎಲ್ಲರಿಗೂ ಕಾಣುವುದಿಲ್ಲ. ಸಂಪ್ರದಾಯ ಬಲ್ಲ ಗುರುಗಳ ಉಪದೇಶವಿದ್ದವರಿಗೆ ಮಾತ್ರ ಕಾಣುತ್ತದೆ. ಅದರಿಂದ ಶ್ರುತಿವಿಹಿತಕರ್ಮವನ್ನು ಜೀವ ಮಾಡುತ್ತಿಲ್ಲ, ಪರಮಾತ್ಮ ಮಾಡಿಸುತ್ತಾನಷ್ಟೆ. ಅದರಿಂದ ಜೀವನಿಗೆ ಕರ್ತೃತ್ವವಿಲ್ಲ.

[೧]ಇಲ್ಲಿ 'ವೇದವಾದಗಳಲ್ಲಿ ತತ್ವವಾದ ಬೆಳಗುವುದಿಲ್ಲ' 'ನ ವೇದವಾದೇಷು ಹಿ ತತ್ವವಾದಃ ಚಕಾಸ್ತಿ' ಎನ್ನುವುದನ್ನು, ವೈದಿಕ ಯಾಗಾದಿವ್ಯವಹಾರಗಳೂ ಲೌಕಿಕ ಸ್ವಾಮಿಭೃತ್ಯಾದಿವ್ಯವಹಾರಗಳಂತೆ ಅಸತ್ಯವಾದ್ದರಿಂದ, 'ನೇಹ ನಾನಾಸ್ತಿ ಕಿಂಚನ' ಎಂದು ಶ್ರುತಿ ಹಾಗೇ ಹೇಳುವುದರಿಂದ, ತತ್ವಾವೇದಕ ವೇದಭಾಗದೊಂದಿಗೆ ಅವುಗಳಿಗೆ ಹೊಂದಿಕೆಯಾಗುವುದಿಲ್ಲ ಎಂದು ಶ್ರೀಧರವ್ಯಾಖ್ಯಾನ ವಿವರಿಸಿದೆ. ಆದರೆ 'ನೇಹ ನಾನಾಸ್ತಿ ಕಿಂಚನ' ಶ್ರುತಿಗೆ ಬೇರೆಯೇ ಅಭಿಪ್ರಾಯವಿರುವುದರಿಂದ

---

೧. ಯಂ ಸ್ವಾಮಿಭೃತ್ಯಾದಿಲೌಕಿಕವ್ಯವಹಾರಂ ತ್ವಂ ಸತ್ಯಮಾತ್ಥ ಏನಂ ಸೂರಯಸ್ತತ್ವವಿಚಾರೇಣ ಸಹ ನ ವದಂತಿ । ಕಿಂತ್ವವಿಚಾರಸುಂದರಂ ವದಂತಿ । ಅತೋ ನ ಸತ್ಯಃ । ವೈದಿಕೋಽಪಿ ಕರ್ಮವ್ಯವಹಾರೋ ನ ಸತ್ಯ ಇತ್ಯಾಹ ತಥೈವೇತಿ । ಉರವೋ ಗಾರ್ಹಾ ಗೃಹಸಂಬಂಧಿನೋ ಮೇಧಾ ಯಜ್ಞಾಸ್ತೇಷಾಂ ವಿತಾನೋ ವಿಸ್ತಾರಸ್ತದ್ವಿಷಯಾಸು ವಿದ್ಯಾಸು ಉರು ಅಧಿಕಂ ವಿಜೃಂಭಿತೇಷು (ವೇದವಾದೇಷು) ತತ್ವವಾದೋ ನ ಚಕಾಸ್ತಿ ನ ಪ್ರಕಾಶತೇ । ತಥಾ ಚ ಶ್ರುತಿಃ- ನೇಹ ನಾನಾಸ್ತಿ ಕಿಂಚನೇತ್ಯಾದಿ । -ಶ್ರೀಧರಃ

ಕರ್ಮಕಾಂಡ ಜ್ಞಾನಕಾಂಡಗಳಿಗೆ ಪರಸ್ಪರ ವಿರೋಧಕ್ಕೇ ಅವಕಾಶವಿಲ್ಲ, ಹೊಂದಿಕೆಯ ಪ್ರಶ್ನೆ ಬರುವುದಿಲ್ಲ. [1]ವೀರರಾಘವವ್ಯಾಖ್ಯಾನದಲ್ಲಿ ಕರ್ಮಕಾಂಡ ಹೇಳುವುದೆಲ್ಲ ದೇಹಾತ್ಮಭ್ರಮಮೂಲಕವಾದ ಯಾಗಾದಿ ವ್ಯವಹಾರಗಳು. ಆ ವ್ಯವಹಾರಗಳಲ್ಲಿಯೇ ರುಚಿ ಉಳ್ಳವರು ವೇದವಾದಿಗಳು, ಅವರಿಗೆ ಜ್ಞಾನಕಾಂಡದ ತತ್ತ್ವವಾದದಲ್ಲಿ ರುಚಿ ಉಂಟಾಗುವುದಿಲ್ಲ ಎಂದು ವಿವರಣೆ ನೀಡಿದ್ದಾರೆ. ದೇಹಾತ್ಮಭ್ರಮ ಎಂಬುದೇ ಅಪ್ರಾಮಾಣಿಕವಾಗಿರುವುದರಿಂದ ಈ ವಿವರಣೆಯೂ ಗ್ರಾಹ್ಯವಾಗುವುದಿಲ್ಲ. ಸರಿಯಾದ ವಿವರಣೆ ಗರುಡಪುರಾಣದಲ್ಲಿಯೇ ಇದೆ.

ನ ವೇದೇಷ್ವಲ್ಪಬುದ್ಧೀನಾಂ ಬ್ರಹ್ಮತತ್ತ್ವಂ ಸಮೀಕ್ಷ್ಯತೇ ।
ಮಹಾಬುದ್ಧಿಸ್ತು ವೇದೇಷು ಪಶ್ಯೇದ್ ಬ್ರಹ್ಮೈವ ಕೇವಲಂ ॥

ಇತಿ ಚ ।

ಸತ್ಸಂಪ್ರದಾಯದ ಅರಿವಿಲ್ಲದ ಅಲ್ಪಜ್ಞರಿಗೆ 'ಸ್ವರ್ಗಕಾಮೋ ಯಜೇತ' ಇತ್ಯಾದಿ ವೇದವಚನಗಳಲ್ಲಿ ಸರ್ವಯಜ್ಞಭೋಕ್ತನಾದ ಹರಿಯ ಆರಾಧನ ರೂಪವಾಗಿ ಹರಿಯ ಪ್ರೇರಣೆಯಿಂದ ಯಜ್ಞ ಮಾಡಬೇಕೆನ್ನುವ ತತ್ತ್ವ ಮೇಲು ನೋಟಕ್ಕೆ ಕಾಣುವುದಿಲ್ಲ. ಸಂಪ್ರದಾಯದ ಅರಿವುಳ್ಳವನು ಮಾತ್ರ ವಾಕ್ಯಸಮನ್ವಯ, ಪದಸಮನ್ವಯಗಳಿಂದ ಅದನ್ನು ಕಂಡುಕೊಳ್ಳಬಲ್ಲ ಎಂದೂ ಗರುಡಪುರಾಣದಲ್ಲಿ ಉಕ್ತವಾಗಿದೆ.

* * *

ಸಾಂಸಾರಿಕಸುಖಭೋಗವೇನಿದ್ದರೂ ಹೇಯ. ಏಕೆಂದರೆ ಸಂಸಾರದಲ್ಲಿ ಪ್ರಕೃತಿಜನ್ಯವಾದ ಮನಸ್ಸು ವಿಷಯಾಸಕ್ತಿ ಉಂಟುಮಾಡಿ ಪುಣ್ಯಪಾಪ ಕರ್ಮ ಮಾಡಿಸಿ ನಾನಾಯೋನಿಗಳಲ್ಲಿ ಜನಿಸುವಂತೆ ಮಾಡಿ ಜೀವನಿಗೆ ಸ್ವಪ್ನಜಾಗರಗಳಲ್ಲಿ ಸುಖದುಃಖಗಳನ್ನು ನೀಡುತ್ತ ನಿರಂತರ ಅವನನ್ನು ಕಾಡುತ್ತದೆ ಎಂದು ಜಡಭರತ ರಹೂಗಣ ರಾಜನಿಗೆ ಉಪದೇಶಿಸುತ್ತಾನೆ.

ಸ ವಾಸನಾತ್ಮಾ ವಿಷಯೋಪರಕ್ತೋ
ಗುಣಪ್ರವಾಹೋ ವಿಕೃತಃ ಷೋಡಶಾತ್ಮಾ ।

---

೧. ನಿರಂತರಮಧ್ಯಾತ್ಮಶಾಸ್ತ್ರಪರಿಶೀಲನವತಾಮಸ್ಮಿನ್ ದೇಹಾತ್ಮಭ್ರಾಂತ್ಯಾದಿಮೂಲೇ ವ್ಯವಹಾರೇಽಪಾರಮಾರ್ಥ್ಯಜ್ಞಾನಂ । ತದ್ವಿಪರೀತಾನಾಂ ತ್ವಸ್ಮಿನ್ ಪಾರಮಾರ್ಥ್ಯಾಭಿಮಾನಶ್ಚೇತಿ ಸೂಚಿತಂ । ಪೂರ್ವಭಾಗವತ್ತದರ್ಥವಾದಿಷು ಉತ್ತರಭಾಗಾರ್ಥವಾದೀ ನ ಸಮ್ಯಕ್ ಪ್ರಕಾಶತ ಇತ್ಯರ್ಥಃ । ಕರ್ಮಸ್ವೇವ ರುಚಿಮತೋ ಜ್ಞಾನೇ ರುಚಿಂ ನೋತ್ಪಾದಯಿತುಂ ಶಕ್ನುಯಾದಿತಿ ಭಾವಃ ।

-ವೀರರಾಘವಃ

ಚಿತ್ರಂ ಪೃಥಙ್ನಾಮಭೀ ರೂಪಭೇದ-
ಮಂತರ್ಬಹಿಷ್ಟ್ವಃ ಸ್ವಪುರೈಸ್ತನೋತಿ ॥ ೫ ॥

ದುಃಖಂ ಸುಖಂ ವ್ಯತಿಮಿಶ್ರಂ ಚ ತೀವ್ರಂ
ಕಾಲೋಪಪನ್ನಂ ಫಲಮಾವ್ಯನಕ್ತಿ ।
ಆಲಿಂಗ್ಯ ಮಾಯಾರಚಿತಾಂತರಾತ್ಮಾ
ಸ್ವದೇಹಿನಂ ಸಂಸೃತಿಚಕ್ರಕೂಟಮ್ ॥ ೬ ॥

ಸತ್ವಾದಿ ಗುಣಗಳಿಂದಾಗಿರುವ ಮನಸ್ಸು ಆ ಗುಣಗಳ ಕಾರ್ಯಗಳಿಗೆ ಆಶ್ರಯವಾಗಿದೆ. ಷೋಡಶಕಲೆಗಳುಳ್ಳ ಲಿಂಗಶರೀರದಲ್ಲಿ ಪ್ರಧಾನವಾದ ಒಂದು ಅಂಶ ಈ ಮನಸ್ಸೇ ಆಗಿದೆ. ಅದು ತನ್ನಲ್ಲಿರುವ ಸಂಸ್ಕಾರಗಳಿಂದ ಸ್ವಪ್ನದಲ್ಲಿ ಜೀವನಿಗೆ ನಾನಾ ಹೆಸರಿನ ನಾನಾ ಆಕಾರದ ದೇವ ಅಸುರ ಮನುಷ್ಯಾದಿ ಶರೀರಗಳನ್ನು ಜೀವನ ಪುಣ್ಯಪಾಪಕರ್ಮಗಳಿಗೆ ಅನುಸಾರವಾಗಿ ಮಾಡಿಕೊಡುತ್ತದೆ. ಹಾಗೇ ಜಾಗರದಲ್ಲಿಯೂ ಇಂದ್ರಿಯಗಳ ಮೂಲಕ ವಿಷಯದಲ್ಲಿ ಆಸಕ್ತವಾಗಿ ಪುಣ್ಯಪಾಪಕರ್ಮ ಮಾಡಿಸಿ ಆ ಮೂಲಕ ಜೀವನಿಗೆ ನಾನಾ ಹೆಸರಿನ ನಾನಾ ಆಕಾರದ ದೇವಾಸುರಮನುಷ್ಯಾದಿ ಶರೀರಗಳನ್ನು ಸೃಷ್ಟಿಮಾಡಿಕೊಡುತ್ತದೆ.

ಪರಮಾತ್ಮನ ಇಚ್ಛೆಯಿಂದಲೂ ಪ್ರಕೃತಿಯಿಂದಲೂ ನಿರ್ಮಿತವಾದ ಈ ಮನಸ್ಸು ಲಿಂಗಶರೀರದಲ್ಲಿದ್ದು ಶರೀರಿಯಾದ ಜೀವನನ್ನು ಆಲಿಂಗಿಸುತ್ತದೆ. ಯಾರಿಗೂ ತಡೆಯಲಾಗದ ಕಾಲದ ಪ್ರಭಾವದಿಂದ ಬರುವ ಸುಖದುಃಖಗಳನ್ನಾಗಲಿ ಅವುಗಳ ಮಿಶ್ರಣವನ್ನಾಗಲಿ ಉಂಟುಮಾಡುತ್ತದೆ. ಅದರಿಂದ ಸಂಸಾರದ ಸುಖ ದುಃಖಸಮೂಹಗಳು ಚಕ್ರದಂತೆ ಪುನಃಪುನಃ ಜೀವನನ್ನು ಕಾಡುತ್ತವೆ.

[೧]ಇಲ್ಲಿ ಐದನೇ ಶ್ಲೋಕದ ಉತ್ತರಾರ್ಧದ ಪಾಠ ಬೇರೆ ವ್ಯಾಖ್ಯಾನಗಳಲ್ಲಿ ಹೀಗಿದೆ-

ಬಿಭ್ರತ್ ಪೃಥಙ್ನಾಮಭೀರೂಪಭೇದ-
ಮಂತರ್ಬಹಿಷ್ಟ್ವಂ ಚ ಪುರೈಸ್ತನೋತಿ ॥

೧. ತತಶ್ಚ ಧರ್ಮಾಧರ್ಮವಾಸನಾಯುಕ್ತಂ ತದೇವಾನೇಕದೇಹಾದಿವೈಚಿತ್ರ್ಯಂ ಕರೋತೀತ್ಯಾಹ ಸ ಇತಿ । ಪುಂಸ್ತ್ವಮಾತ್ಮಶಬ್ದವಿಶೇಷಣತ್ವೇನ । ತನ್ಮನ ಇತ್ಯರ್ಥಃ । ವಾಸನಾಯುಕ್ತಂ ಆತ್ಮೋಪಾಧಿತ್ವಾದಾತ್ಮಾ । ಪೃಥಙ್ ನಾಮಭಿಃ ಸಹ ಪೃಥಗ್ರೂಪಭೇದಂ ದೇವತಿರ್ಯಗಾದಿರೂಪಂ ಬಿಭ್ರತ್ । ಅಂತರ್ಬಹಿಷ್ಟ್ವಂ ಉತ್ಕೃಷ್ಟತ್ವಂ ನಿಕೃಷ್ಟತ್ವಂ ಚ ಪುರೈಸ್ತೈರೇವ ದೇಹೈರ್ಹೇತುಭೂತೈಸ್ತನೋತಿ । -ಶ್ರೀಧರಃ

ಮತ್ತು 'ಸ ವಾಸನಾತ್ಮಾ' ಎಂದರೆ ಪುಣ್ಯಪಾಪರೂಪವಾದ ವಾಸನಾದಿಂದ ಯುಕ್ತವಾದ ಆ ಮನಸ್ಸು ದೇವಮನುಷ್ಯಾದಿ ನಾಮರೂಪಭೇದಗಳನ್ನು ಧರಿಸಿ ಆತ್ಮನಿಗೆ ಅಂತರ್ಬಹಿಷ್ಟ್ವವನ್ನು ಅಂದರೆ ಉತ್ಕೃಷ್ಟತ್ವ ನಿಕೃಷ್ಟತ್ವವನ್ನು ಉಂಟುಮಾಡುತ್ತದೆ ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ 'ಅಂತರ್ಬಹಿಷ್ಟ್ವ' ವೆಂದರೆ ಒಳಗಿರುವುದೆಲ್ಲ ಉತ್ಕೃಷ್ಟ, ಹೊರಗಿನದೆಲ್ಲ ನಿಕೃಷ್ಟ ಎನ್ನಬಹುದೆ'? ಒಳಗೂ ಕಾಮಕ್ರೋಧಾದಿ ನಿಕೃಷ್ಟಪದಾರ್ಥಗಳಿವೆ, ಹೊರಗೂ ತೀರ್ಥಕ್ಷೇತ್ರಗಳು ದೇವಾಲಯಗಳು ಮುಂತಾದ ಉತ್ಕೃಷ್ಟಪದಾರ್ಥಗಳಿವೆ. ಮತ್ತು ಮನಸ್ಸು ದೇವಮನುಷ್ಯಾದಿ ನಾಮಯುಕ್ತವಾದ ದೇವಮನುಷ್ಯಾದಿ ಶರೀರವನ್ನು 'ಬಿಭ್ರತ್' ಧರಿಸುತ್ತದೆ ಎನ್ನುವುದೂ ಕೂಡುವುದಿಲ್ಲ. ಮನಸ್ಸು ಶರೀರಧಾರಣ ಮಾಡುವುದಿಲ್ಲ. ಪುಣ್ಯಪಾಪರೂಪವಾಸನಾ ಮನಸ್ಸಿನಲ್ಲಿ ಕಾಮಕ್ರೋಧಾದಿಗಳಂತೆ ಮೂಡುವ ವಿಕಾರವೂ ಅಲ್ಲ.

ಅದರಿಂದ 'ವಾಸನಾತ್ಮಾ' ಎಂದರೆ ಅನುಭವಗಳ ಸಂಸ್ಕಾರದಿಂದ ಕೂಡಿದ ಮನಸ್ಸು 'ಅಂತಃ'ಸ್ವಪ್ನದಲ್ಲಿ ದೇವಮನುಷ್ಯಾದಿಶರೀರಗಳನ್ನು ಜೀವನಿಗೆ ಉಂಟುಮಾಡುತ್ತದೆ ಎಂದೇ ಹೇಳಬೇಕು. 'ಬಹಿಃ' ಹೊರಗೆ ಇದ್ದು, ಅಂದರೆ ಜಾಗರದಲ್ಲಿ ವಿಷಯಾಸಕ್ತವಾಗಿದ್ದು ಪುಣ್ಯಪಾಪಗಳನ್ನು ಮಾಡಿಸಿ ದೇವಮನುಷ್ಯಾದಿಶರೀರಗಳನ್ನು ಜೀವನಿಗೆ ಉಂಟುಮಾಡುತ್ತದೆ ಎಂದೇ ಅನ್ವಯಿಸಬೇಕು. ಅದರಿಂದ 'ಅಂತರ್ಬಹಿಷ್ಠಃ' ಎಂಬುದೇ ಸರಿಯಾದ ಪಾಠ.

ಹೀಗಾಗಿ ಮನಸ್ಸು ವಾಸನಾರೂಪದಿಂದ ಒಳಗೂ ವಿಷಯಾಸಕ್ತವಾಗಿ ಹೊರಗೂ ಇದ್ದು ಜೀವನಿಗೆ ಸ್ವಪ್ನಜಾಗರಗಳಲ್ಲಿ ಸುಖದುಃಖಗಳನ್ನು ಉಂಟುಮಾಡುತ್ತದೆ ಎಂದು ಅನ್ವಯ ಆವಶ್ಯಕವಿರುವುದರಿಂದ 'ಸಃ' ಎಂದು ಉಕ್ತವಾದ ಮನಸ್ಸಿಗೆ 'ವಾಸನಾತ್ಮಾ''ವಿಷಯೋಪರಕ್ತಃ' ಎಂದು ಎರಡು ವಿಶೇಷಣಗಳು. ಬೇರೆ ವ್ಯಾಖ್ಯಾನಕಾರರು ತಿರುವು ಮುರುವಾಗಿ 'ಸಃ' ಎಂಬುದು 'ವಾಸನಾತ್ಮಾ ಎಂಬುದಕ್ಕೆ ವಿಶೇಷಣವೆಂದಿದ್ದಾರೆ.

[೧]ವೀರರಾಘವವ್ಯಾಖ್ಯಾನದಲ್ಲಿ 'ಯಾವನ್ಮನೋ ರಜಸಾ ಪೂರುಷಸ್ಯ' ಎಂದು ಹಿಂದಿನ ಶ್ಲೋಕದಲ್ಲಿ ಉಕ್ತನಾದ ಪುರುಷನನ್ನು ಈ ಶ್ಲೋಕದಲ್ಲಿರುವ 'ಸಃ' ಎಂಬ ಶಬ್ದ ಪರಾಮರ್ಶ ಮಾಡುತ್ತದೆ ಎಂದಿದ್ದಾರೆ. ಆದರೆ ಈ ಪಕ್ಷದಲ್ಲಿ ವಾಸನಾತ್ಮಾ ಮುಂತಾದ ಐದು ವಿಶೇಷಣಗಳು ಸಾಕ್ಷಾತ್ ಮನಸ್ಸಿಗೆ ಸಂಬಂಧಿಸಿದವುಗಳಾದರೂ

---

೧. ಅಯಂ ಸ್ವತೋಽಧಿಕೃತೋಽಪಿ ಪುರುಷಃ ಸ ವಾಸನಾಧೀನ ಸ್ವರೂಪಾಂತಃಕರಣಯುಕ್ತಃ। -ವೀರರಾಘವಃ

ಅಂಥ ಮನಸ್ಸುಳ್ಳವನು ಪುರುಷ ಎಂದು ಪರಂಪರಾಸಂಬಂಧವನ್ನು ಹೇಳಬೇಕಾಗುತ್ತದೆ ಮತ್ತು ಮುಂದಿನ ಶ್ಲೋಕದಲ್ಲಿ 'ಮಾಯಾರಚಿತಾಂತರಾತ್ಮಾ' ಎಂಬಲ್ಲಿ 'ಅಂತರಾತ್ಮ' ಎಂದರೆ ಮನಸ್ಸು, ಅದನ್ನೇ 'ಸಃ' ಎಂದು ಏಕೆ ಪರಾಮರ್ಶ ಮಾಡಬಾರದು? ಶ್ರೀಮದಾಚಾರ್ಯರು ಹಾಗೇ ಹೇಳಿದ್ದಾರೆ. ಅದನ್ನು ಬಿಟ್ಟು ಹಿಂದಿನ ಶ್ಲೋಕದಲ್ಲಿ ಪ್ರಸಕ್ತನಾದ ಪುರುಷನನ್ನು ಪರಾಮರ್ಶ ಮಾಡಿ ಕಷ್ಟದಿಂದ ಐದುವಿಶೇಷಣಗಳನ್ನು ಏಕೆ ಕೂಡಿಸಬೇಕು?

ಮನಸ್ಸು ಹಿಂದಿನ ಶ್ಲೋಕದಲ್ಲಿಯೂ ಪ್ರಸಕ್ತವಾಗಿದೆ. 'ಯಾವನ್ಮನಃ' ಎಂದು. ಆದರೆ 'ಮನಃ' ಶಬ್ದ ನಪುಂಸಕಲಿಂಗದಲ್ಲಿದೆ. 'ಸಃ' ಎಂಬ ಪುಲ್ಲಿಂಗಶಬ್ದ ಕೂಡಬೇಕಾದರೆ ಮುಂದಿನಶ್ಲೋಕದ 'ಅಂತರಾತ್ಮ'ವನ್ನೇ ಅದು ಪರಾಮರ್ಶ ಮಾಡಬೇಕು.

'ಮಾಯಾರಚಿತಾಂತರಾತ್ಮಾ' ಎಂಬಲ್ಲಿ ಬಹುವ್ರೀಹಿಸಮಾಸ ಮಾಡಿ ಪ್ರಕೃತಿ ಪರಿಣಾಮರೂಪವಾದ ಮನಸ್ಸುಳ್ಳ ಪುರುಷ 'ಪ್ರಕೃತಿ ಪರಿಣಾಮ ರೂಪಾಂತಃಕರಣವಾನ್' ಎಂದು ವೀರರಾಘವವ್ಯಾಖ್ಯಾನದಲ್ಲಿ ಹೇಳಿದೆ. ಆದರೆ ಅಂಥ ಪುರುಷ 'ಸ್ವದೇಹಿನಂ ಆಲಿಂಗ್ಯ' 'ತನ್ನ ಆತ್ಮನಾಗಿರುವ ಭಗವಂತನನ್ನು ಆಲಿಂಗಿಸಿ' ಎಂದು ಆ ವ್ಯಾಖ್ಯಾನದಲ್ಲಿ ಅನ್ವಯವನ್ನು ತೋರಿಸಲಾಗಿದೆ. ಆದರೆ 'ಜೀವನು ಭಗವಂತನಿಗೆ ಶರೀರ, ಭಗವಂತ ಜೀವಶರೀರಿ' ಎಂಬ ಅಭಿಪ್ರಾಯವೇ ಸರಿಯಲ್ಲ. ಭಗವಂತನಿಗೆ ತನಗೆ ತಾನೇ ಶರೀರ ಹೊರತು ಬೇರೆ ಶರೀರವಿಲ್ಲ. ಅದರಿಂದ 'ಮಾಯಾರಚಿತಃ ಅಂತರಾತ್ಮಾ' ಎಂದು ಕರ್ಮಧಾರಯಸಮಾಸವನ್ನೇ ಮಾಡಬೇಕು. ಪ್ರಕೃತಿನಿರ್ಮಿತವಾದ ಮನಸ್ಸು ಪುಣ್ಯಪಾಪಗಳ ಮೂಲಕ ತಾನು ಉಂಟುಮಾಡುವ ಶರೀರವನ್ನು ಧರಿಸುವ ಜೀವನಿಗೆ ತಾನು ಲಿಂಗಶರೀರರೂಪದಿಂದ ಆಲಿಂಗನ ನೀಡುತ್ತದೆ ಅನಾದಿಕಾಲದಿಂದ ಜೀವನನ್ನು ಆವರಿಸಿರುತ್ತದೆ ಎಂದರ್ಥ. ಹೀಗೆ ಎರಡು ಶ್ಲೋಕಗಳನ್ನು ಒಂದು ಮಾತಿನಿಂದ ಶ್ರೀಮದಾಚಾರ್ಯರು ವ್ಯಾಖ್ಯಾನಿಸುತ್ತಾರೆ-

ಸಃ ಮಾಯಾರಚಿತಃ ಅಂತರಾತ್ಮಾ । ಮನಃ ।

ಐದನೇ ಶ್ಲೋಕದಲ್ಲಿರುವ 'ಸಃ' ಎಂಬುದು ಆರನೇ ಶ್ಲೋಕದಲ್ಲಿರುವ 'ಮಾಯಾರಚಿತಾಂತರಾತ್ಮಾ' ಎಂಬುದನ್ನು ಪರಾಮರ್ಶಿಸುವುದರಿಂದ ಪುಲ್ಲಿಂಗ ಕೂಡುತ್ತದೆ. ಮತ್ತು 'ಮಾಯಾರಚಿತಃ ಅಂತರಾತ್ಮಾ' ಎಂದು ಕರ್ಮಧಾರಯಸಮಾಸ. ಮನಸ್ಸು ಎಂದರ್ಥ.

* * *

ಮನಸ್ಸಿನಲ್ಲಿ ರಜೋಗುಣಾದಿದೋಷವಿರುವಷ್ಟೂ ಕಾಲ ವಿಷಯಸುಖವೂ ಒಳ್ಳೆಯದೆನ್ನುವ ಅಭಿಮಾನವನ್ನು ಹರಿವಾಯುಗಳು ಜೀವನಿಗೆ ಉಂಟುಮಾಡುತ್ತಲೆ ಇರುತ್ತಾರೆ ಎಂದು ಜಡಭರತ ರಹೂಗಣರಾಜನಿಗೆ ಉಪದೇಶಿಸುತ್ತಾನೆ.

ತಾವಾನಯಂ ವ್ಯವಹಾರಃ ಸದಾ ವೈ
ಕ್ಷೇತ್ರಜ್ಞಸಾಕ್ಷ್ಯೋರ್ಭವತಿ ಸ್ಥೂಲಸೂಕ್ಷ್ಮಃ ।
ತಸ್ಮಾನ್ಮನೋ ಲಿಂಗಮದೋ ವದಂತಿ
ಗುಣಾಗುಣಸ್ಯಾಸ್ಯ ಪರಾವರಸ್ಯ ॥ ೭ ॥

ಹೀಗೆ ಮನಸ್ಸು ತನ್ನ ದೋಷದಿಂದ ಎಂದಿನವರೆಗೆ ಸುಖದುಃಖಗಳನ್ನು ಉಂಟುಮಾಡುವುದೋ ಅಂದಿನವರೆಗೆ ಹರಿವಾಯುಗಳು ಜಾಗ್ರತ್ಸ್ವಪ್ನಗಳಲ್ಲಿ ಸ್ಥೂಲ ಸೂಕ್ಷ್ಮವಾದ ವಿಷಯಾಭಿಮಾನವನ್ನು ಜೀವನಿಗೆ ಉಂಟುಮಾಡುತ್ತಾರೆ. ಹೀಗೆ ಮನಸ್ಸು ಹರಿವಾಯುಗಳಿಗೆ ಅಧೀನವಾಗಿರುವುದರಿಂದ ಉತ್ತಮರು. ಅನುತ್ತಮರು ಎಂದು ಎರಡೂ ಬಗೆಯ ಜೀವರಿಗೂ ಸಂಸಾರ ಮೋಕ್ಷ ಎಂಬ ಎರಡೂ ಬಗೆಯ ಗತಿಗೆ ಕಾರಣವೆನ್ನುತ್ತಾರೆ.

ಇಲ್ಲಿ 'ತಾವಾನಯಂ ವ್ಯವಹಾರಃ ಸದಾಽಽವಿಃ ಕ್ಷೇತ್ರಜ್ಞಸಾಕ್ಷ್ಯೋ ಭವತಿ ಸ್ಥೂಲಸೂಕ್ಷ್ಮಃ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ.

ಮನಸ್ಸಿನಿಂದ ಉಂಟಾಗುವ ಸಂಸಾರ ಸದಾ 'ಆವಿಃ'ಅನುಭವಗೋಚರವಾಗಿದ್ದು 'ಕ್ಷೇತ್ರಜ್ಞ'ನಿಗೆ ಅಂದರೆ ಜೀವನಿಗೆ 'ಸಾಕ್ಷ್ಯಃ' ಅನುಭವಗೋಚರವಾಗುತ್ತದೆ ಎಂದು ಪುನರುಕ್ತಿ ಸ್ಪಷ್ಟವೇ ಇದೆ. ಅದಕ್ಕೆ ವೀರರಾಘವವ್ಯಾಖ್ಯಾನದಲ್ಲಿ 'ಮನುಷ್ಯನಾಗಿದ್ದೇನೆ' ಎಂದು ಮುಂತಾದ ವ್ಯವಹಾರ ಸದಾ ಪ್ರತ್ಯಕ್ಷಗೋಚರನಾದ ಆತ್ಮನ ವಿಷಯದಲ್ಲಿ ಉಂಟಾಗುತ್ತದೆ ಎಂದಿದ್ದಾರೆ. 'ಸದಾವಿಃಕ್ಷೇತ್ರಜ್ಞಸಾಕ್ಷ್ಯಃ' ಎಂದು ಒಂದು ಪದ. ಸದಾ ಆವಿರ್ಭೂತನಾಗಿರುವ ಜೀವನ ವಿಷಯದಲ್ಲಿ ಉಂಟಾಗುವಂಥದ್ದು ಎಂದು ಬಹುವ್ರೀಹಿಸಮಾಸ. ಇಲ್ಲಿ 'ಸದಾವಿಃ' ಎಂಬ ವಿಶೇಷಣ ವ್ಯರ್ಥ. ದೇಹಾತ್ಮೈಕ್ಯಭ್ರಮವಿಲ್ಲದಿರುವುದರಿಂದಲೂ ಈ ವ್ಯಾಖ್ಯಾನ ಅಸಮರ್ಪಕ.

ವಸ್ತುತಃ 'ಸದಾ ವೈ ಕ್ಷೇತ್ರಜ್ಞಸಾಕ್ಷ್ಯೋರ್ಭವತಿ' ಎಂದೇ ಸರಿಯಾದ ಪಾಠ. 'ಕ್ಷೇತ್ರಜ್ಞ ಸಾಕ್ಷ್ಯೋಃ' ಎಂದು ಷಷ್ಠೀ ದ್ವಿವಚನವನ್ನು 'ಸಕಾಶಾತ್' ಎಂದು ಪದಾಧ್ಯಾಹಾರ ಮಾಡಿಕೊಂಡು ಕ್ಷೇತ್ರಜ್ಞ ಮತ್ತು ಸಾಕ್ಷಿಗಳಿಂದ, ಅಂದರೆ ಹರಿವಾಯುಗಳಿಂದ ಜೀವನಿಗೆ ವಿಷಯಸುಖದಲ್ಲಿ ಅಭಿಮಾನ ಉತ್ಪನ್ನವಾಗುತ್ತದೆ ಎಂದರ್ಥ.

ಕ್ಷೇತ್ರವಿತ್ತು ಹರಿಃ ಪ್ರಾಣಃ ಸಾಕ್ಷೀ ತಾಭ್ಯಾಂ ಪುಮಾನ್ ಸರೇತ್ ॥

ಇತಿ ಚ ।

'ಕ್ಷೇತ್ರಜ್ಞನೆಂದರೆ ಹರಿಯೇ. ಸಾಕ್ಷಿ ಎಂದರೆ ವಾಯು. ಹರಿವಾಯುಗಳ ಪ್ರೇರಣೆಯಿಂದ ಜೀವ ಜಾಗರಸ್ವಪ್ನಗಳಲ್ಲಿ ವಿಷಯಪದಾರ್ಥಗಳಲ್ಲಿ ಅಭಿಮಾನ ಹೊಂದುತ್ತಾನೆ' ಎಂದೂ ಹೇಳಿದೆ.

* * *

ಮಲಿನವಾದ ಮನಸ್ಸು ಬಾಹ್ಯವಿಷಯಾಸಕ್ತವಾಗುತ್ತದೆ. ನಿರ್ಮಲವಾದ ಮನಸ್ಸು ಭಗವಂತನಲ್ಲಿ ನೆಲೆನಿಲ್ಲುತ್ತದೆ ಎಂದು ಜಡಭರತ ರಹೂಗಣರಾಜನಿಗೆ ಉಪದೇಶಿಸುತ್ತಾನೆ.

ಗುಣಾನುರಕ್ತಂ ವ್ಯಸನಾಯ ಜಂತೋಃ
ಕ್ಷೇಮಾಯ ನೈರ್ಗುಣ್ಯಮಥೋ ಮನಃ ಸ್ಯಾತ್ ।
ಯಥಾ ಪ್ರದೀಪೋ ಘೃತವರ್ತಿಮಾಸ್ಥಿತಃ
ಸ್ಥಿತಿಂ ಸಧೂಮಾಂ ಭಜತಿ ಹ್ಯನ್ಯದಾ ಸ್ವಮ್ ।
ಪದಂ ತಥಾ ಗುಣಕರ್ಮಾನುಬದ್ಧಂ
ಬಹಿರ್ಮನಃ ಶ್ರಯತೇಽನ್ಯತ್ರ ತತ್ವಮ್ ॥ ೮ ॥

ಮನಸ್ಸು ಶಬ್ದಾದಿವಿಷಯಾಸಕ್ತವಾದಾಗ ಸಂಸಾರದುಃಖಕ್ಕೆ ಕಾರಣವಾಗುತ್ತದೆ. ಭಗವಂತನಲ್ಲಿ ಆಸಕ್ತವಾದಾಗ ಮೋಕ್ಷಕ್ಕೆ ಕಾರಣವಾಗುತ್ತದೆ. ದೀಪ ತುಪ್ಪದ ಬತ್ತಿಯಲ್ಲಿ ಉರಿಯುವಾಗ ಹೊಗೆಯೊಂದಿಗೆ ಜ್ವಾಲೆಯನ್ನು ಉಗುಳುತ್ತದೆ. ತುಪ್ಪದ ಬತ್ತಿ ಮುಂತಾದುವು ಇಲ್ಲದಿದ್ದಾಗ, ಅಂದರೆ ಕೆಂಪಗೆ ಕಾದ ಕಬ್ಬಿಣದಂಥ ಲೋಹಗಳಲ್ಲಿ ಬೆಂಕಿ ಸ್ವಸ್ವರೂಪದಿಂದಲೇ ಹೊಳೆಯುತ್ತದೆ. ಹಾಗೇ ತ್ರಿಗುಣಗಳ ಕರ್ಮಗಳ ಪ್ರಯುಕ್ತವಾದ ಕಾಮಾದಿಗಳಿಂದ ಮನಸ್ಸು ದೂಷಿತವಾದಾಗ ಹೊರಗೆ ವಿಷಯಪದಾರ್ಥಗಳ ಬಗ್ಗೆಯೇ ಆಲೋಚಿಸುತ್ತದೆ. ರಾಗಾದಿ ದೋಷಗಳಿಲ್ಲದಾಗ ಪರತತ್ವವನ್ನೇ ಆಲೋಚಿಸುತ್ತದೆ.

ಇಲ್ಲಿ 'ವೃತ್ತೀರ್ಮನಃ ಶ್ರಯತೇಽನ್ಯತ್ರ ತತ್ವಂ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ. ಮನಸ್ಸು ಮಲಿನವಾದಾಗ ವೃತ್ತಿಗಳನ್ನು ಪಡೆಯುತ್ತದೆ. ನಿರ್ಮಲವಾದಾಗಿ ನಿಜಸ್ವರೂಪದಲ್ಲಿರುತ್ತದೆ, ಅಥವಾ ಭಗವಂತನ ಬಗ್ಗೆ ಆಲೋಚಿಸುತ್ತದೆ ಎಂದು ಎರಡು ರೀತಿ ವ್ಯಾಖ್ಯಾನಗಳಿವೆ. ಆದರೆ ಭಗವಂತನ ಬಗ್ಗೆ ಆಲೋಚಿಸುವುದೂ ಮನಸ್ಸಿನ ವೃತ್ತಿಯೇ. ಅದರಿಂದ ದೋಷವಿರುವಾಗ ವಿಷಯಪದಾರ್ಥದ ಬಗ್ಗೆ ಆಲೋಚಿಸುತ್ತದೆ. ದೋಷವಿಲ್ಲದಿದ್ದಾಗ ಭಗವಂತನ ಬಗ್ಗೆ ಆಲೋಚಿಸುತ್ತದೆ. ಭಗವಂತನ ಬಗ್ಗೆ ಆಲೋಚಿಸುವುದು ಮನಸ್ಸಿನ ಸ್ವಭಾವ. ವಿಷಯಚಿಂತನೆ ದೋಷದ ಅಧೀನ ಎಂದೇ ಹೇಳಬೇಕು. ಹೊರತು 'ವೃತ್ತಿಗಳನ್ನು ಹೊಂದುವುದು ದೋಷದ

ಅಧೀನ'ವೆನ್ನಬಾರದು. ಅದರಿಂದ 'ಬಹಿರ್ಮನಃ ಶ್ರಯತೇಽನ್ಯತ್ರ ತತ್ವಂ' ಎಂಬುದೇ ಸರಿಯಾದ ಪಾಠ. 'ಬಹಿಃ' ಎಂಬುದನ್ನು 'ಪದಂ' ಎಂಬುದರೊಡನೆ ಅನ್ವಯಿಸಿ 'ಬಾಹ್ಯವಿಷಯಪದಾರ್ಥವನ್ನು ಮನಸ್ಸು ಆಲೋಚಿಸುತ್ತದೆ' ಎಂದು ವ್ಯಾಖ್ಯಾನಿಸಬೇಕು.

ಪದಂ ವಿಷಯಮ್ ।

'ಪದ' ಎಂದರೆ ವಿಷಯ, ಬಾಹ್ಯವಿಷಯಪದಾರ್ಥ.

* * *

ಮನಸ್ಸು ವಿಷಯಾಸಕ್ತವಾದಾಗ ಇಂದ್ರಿಯದ್ವಾರಾ ಅದು ಮಾಡುವ ಕಾರ್ಯಗಳು ಹನ್ನೊಂದು. ಸ್ವತಃ ಮಾಡುವ ಕಾರ್ಯಗಳೂ ಹನ್ನೊಂದು, ಇಂದ್ರಿಯಗಳಿಗೆ ವಿಷಯಗಳೂ ಹನ್ನೊಂದು, ಆಶ್ರಯಗಳೂ ಹನ್ನೊಂದು ಎಂದು ಜಡಭರತ ರಹೂಗಣರಾಜನಿಗೆ ಉಪದೇಶಿಸುತ್ತಾನೆ.

ಏಕಾದಶಾಸನ್ ಮನಸೋಽಸ್ಯ ವೃತ್ತೀ-
ರಾಕೂತಯಃ ಪಂಚ ಧಿಯೋಽಭಿಮಾನಾಃ ।
ಮಾತ್ರಾಣಿ ಕರ್ಮಾಣಿ ಪುರಂ ಚ ತಾಸಾಂ
ವದಂತಿ ಹ್ಯೈಕಾದಶ ವೀರ ಭೂಮಿಮ್ ॥ ೯ ॥

ಹೊರಗೆ ವಿಷಯಪದಾರ್ಥಗಳಲ್ಲಿ ಮನಸ್ಸು ಇಂದ್ರಿಯಮೂಲಕ ಹನ್ನೊಂದು ಕಾರ್ಯಗಳನ್ನು ನಡೆಸುತ್ತದೆ. ಸ್ವತಃ ಶಬ್ದಾದಿ ವಿಷಯಗಳಲ್ಲಿ ಐದು ಬಗೆಯ ಅಭಿಮಾನಗಳು, ಐದು ಬಗೆಯ ಇಚ್ಛೆಗಳು, ಅವುಗಳೊಂದಿಗೆ ಮನಸ್ಸಿನ ವಿಷಯವಾದ ಪದಾರ್ಥಗಳಲ್ಲಿ ಮನಸ್ಸಿಗೆ ಇರುವ ಅಭಿಮಾನ ಎಂದು ಹನ್ನೊಂದು ಬಗೆಯ ಕಾರ್ಯಗಳೂ ಇವೆ. ಇಂದ್ರಿಯಗಳ ಮೂಲಕ ಮನಸ್ಸಿಗೆ ಹನ್ನೊಂದು ಆಲೋಚನೆಗಳೆಂದರೆ ಮನಸ್ಸು ಹತ್ತು ಇಂದ್ರಿಯಗಳನ್ನು ಪ್ರವೇಶಿಸಿ ಆ ಮೂಲಕ ಆ ಹತ್ತು ಇಂದ್ರಿಯಗಳ ವಿಷಯಗಳಲ್ಲಿ ಅಭಿಮಾನ ಪಡುತ್ತದೆ. ಮತ್ತು ತನ್ನ ವಿಷಯದಲ್ಲಿಯೂ ಅಭಿಮಾನ ಪಡುತ್ತದೆ. ಇಂದ್ರಿಯಗಳಿಗೆ ವಿಷಯಗಳೂ ಶಬ್ದಾದಿ ಐದು, ಉಚ್ಚಾರಣ ಮುಂತಾದುದರ ಕರ್ಮಗಳು ಐದು ಮತ್ತು ಅಭಿಮಾನಾಸ್ಪದವಾದ ಶರೀರ ಒಂದು –ಹೀಗೆ ಹನ್ನೊಂದು ಎಂದು ಬಲ್ಲವರು ಹೇಳುತ್ತಾರೆ. ಹನ್ನೊಂದು ಇಂದ್ರಿಯಗೋಲಕಗಳನ್ನು ಹನ್ನೊಂದು ಆಶ್ರಯಗಳೆಂದೂ ಹೇಳುತ್ತಾರೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ 'ಮನಸ್ಸಿನಲ್ಲಿ ಹನ್ನೊಂದು ಕಾರ್ಯಗಳಾಗುತ್ತವೆ' ಎನ್ನುವುದು 'ಏಕಾದಶಾಸನ್ ಮನಸೋಽಸ್ಯವೃತ್ತೀಃ' ಎಂದುದರ ಅರ್ಥ. ಆ ಹನ್ನೊಂದು ಕಾರ್ಯಗಳು ಯಾವುವು ಎಂಬುದಕ್ಕೆ

ವಿವರಣೆ-'ಆಕೂತಯಃ ಪಂಚ ಧಿಯೋಽಭಿಮಾನಾಃ' ಐದು ಕರ್ಮೇಂದ್ರಿಯ ವ್ಯಾಪಾರರೂಪವಾದ ಕಾರ್ಯಗಳು. ಐದು ಜ್ಞಾನೇಂದ್ರಿಯ ವ್ಯಾಪಾರ ರೂಪಕಾರ್ಯಗಳು. ನಾನಾವಿಧಅಭಿಮಾನಗಳ ಸಮೂಹ ಒಂದು ಹೀಗೆ ಹನ್ನೊಂದು ಎನ್ನುತ್ತಾರೆ. ಆಕೂತಿ ಎಂದರೆ ಇಚ್ಛಾ ಎಂಬ ಪ್ರಸಿದ್ಧ ಅರ್ಥವನ್ನು ಬಿಟ್ಟು ಕರ್ಮೇಂದ್ರಿಯವ್ಯಾಪಾರವೆಂದು ವ್ಯಾಖ್ಯಾನಿಸುತ್ತಾರೆ. ಮತ್ತು ಮನಸ್ಸಿಗೆ ಇಂದ್ರಿಯದ್ವಾರಾ ಹನ್ನೊಂದು ಕಾರ್ಯಗಳು, ಸ್ವತಃ ಹನ್ನೊಂದು ಕಾರ್ಯಗಳೆಂದು ಎರಡು ಬಗೆ ಇರುವುದು ಇವರ ಗಮನಕ್ಕೆ ಬಂದಿಲ್ಲ. ಅದರಿಂದ 'ಏಕಾದಶಾಸನ್ ಮನಸೋಽಸ್ಯ ವೃತ್ತೀಃ' ಎಂಬುದು ಇಂದ್ರಿಯದ್ವಾರಾ ಮನಸಿನಿಂದಾಗುವ ಹನ್ನೊಂದು ಕಾರ್ಯಗಳನ್ನು ಹೇಳುತ್ತದೆ. 'ಆಕೂತಯಃ ಪಂಚ ಧಿಯೋಽಭಿಮಾನಾಃ' ಎನ್ನುವುದು ಮನಸ್ಸಿನಲ್ಲಿ ಸ್ವತಃ ಉಂಟಾಗುವ ಕಾರ್ಯಗಳನ್ನು ಹೇಳುತ್ತವೆ ಎಂದು ಶ್ರೀಮದಾಚಾರ್ಯರು ಪ್ರಮಾಣಪುರಃಸರವಾಗಿ ವ್ಯಾಖ್ಯಾನಿಸುತ್ತಾರೆ.

ಏಕಾದಶೇಂದ್ರಿಯದ್ವಾರಾ ಸ್ಯುರೇಕಾದಶವೃತ್ತಯಃ ।
ಶಬ್ದಾದ್ಯಾಸ್ತದಭೀಮಾನಾಸ್ತದಿಚ್ಛಾಶ್ಚೈವ ಪಂಚಶಃ । ।

ಸ್ಪರ್ಶಾಂತರ್ಭಾವತಃ ಕರ್ಮಖಾನಾಂ ನೈವ ಪೃಥಗ್ಗತಿಃ ।
ಏಕಾದಶೈವ ಚೇಷ್ಟಾಃ ಸ್ಯುರಿಂದ್ರಿಯಾಣಾಂ ಪೃಥಕ್‌ಪೃಥಕ್ ।
ಗೋಲಕಾಸ್ತದಧಿಷ್ಠಾನಂ ಚೈಕಾದಶ ನಿಗದ್ಯತೇ ॥

ಮನಸ್ಸು ಜ್ಞಾನೇಂದ್ರಿಯಗಳನ್ನು ಪ್ರವೇಶಿಸಿ ಅವುಗಳ ದ್ವಾರಾ ಐದು ಬಗೆಯ ಜ್ಞಾನರೂಪಕಾರ್ಯವನ್ನು, ಕರ್ಮೇಂದ್ರಿಯಗಳನ್ನು ಪ್ರವೇಶಿಸಿ ಅವುಗಳ ದ್ವಾರಾ ಐದು ಬಗೆಯ ಕರ್ಮರೂಪಕಾರ್ಯವನ್ನು, ಸ್ವತಃ ತಾನು ಅವುಗಳಲ್ಲೆಲ್ಲ ಅಭಿಮಾನಪಡುವ ಕಾರ್ಯವನ್ನು– ಹೀಗೆ ಹನ್ನೊಂದು ಕಾರ್ಯಗಳನ್ನು ಮಾಡುತ್ತದೆ. ಮನಸ್ಸಿಗೆ ಬೇರೆ ಇಂದ್ರಿಯಗಳು ದ್ವಾರವಾದರೂ ತಾನು ತನಗೆ ದ್ವಾರವಲ್ಲ. ಆದರೂ ಛತ್ರಿನ್ಯಾಯದಿಂದ ಹನ್ನೊಂದು ಇಂದ್ರಿಯಗಳೂ ಮನಸ್ಸಿಗೆ ದ್ವಾರವೆಂದು ವ್ಯವಹಾರ. ಮನಸ್ಸು ಸ್ವತಃ ಹನ್ನೊಂದು ಕಾರ್ಯಗಳನ್ನೂ ಮಾಡುತ್ತದೆ. ಐದು ಬಗೆಯಾಗಿ ಶಬ್ದಾದಿಗಳಲ್ಲಿ ಐದು ಬಗೆ ಅಭಿಮಾನಗಳು. ಅನಂತರ ಅವುಗಳ ವಿಷಯದಲ್ಲಿ ಉಂಟಾಗುವ ಐದು ಬಗೆಯ ಇಚ್ಛೆಗಳು. ಮತ್ತು ಮನೋವಿಷಯದಲ್ಲಿ ಉಂಟಾಗುವ ಅಭಿಮಾನ ಇಚ್ಛೆಗಳು. ಹೀಗೆ ಹನ್ನೊಂದು ಕಾರ್ಯಗಳು ಮನಸ್ಸಿನಲ್ಲಿ ಸ್ವತಃ ಉಂಟಾಗುವುವು. ಕರ್ಮೇಂದ್ರಿಯಗಳ ಐದು ವಿಷಯಗಳಲ್ಲಿ ಉಂಟಾಗುವ ಅಭಿಮಾನ ಇಚ್ಛೆಗಳನ್ನು ಪ್ರತ್ಯೇಕ ಪರಿಗಣಿಸಲಿಲ್ಲ. ಏಕೆಂದರೆ ಕರ್ಮೇಂದ್ರಿಯಗಳಿಗೆ ತ್ವಗಿಂದ್ರಿಯದ ಗೋಲಕವಾದ ಚರ್ಮವೇ ಗೋಲಕವಾಗಿರುವುದರಿಂದ ತ್ವಗಿಂದ್ರಿಯವನ್ನು ಮಾತ್ರ ಪರಿಗಣಿಸಲಾಗಿದೆ. ಹನ್ನೊಂದು ಇಂದ್ರಿಯಗಳಿಗೆ ಪ್ರತ್ಯೇಕವಾಗಿ ಹನ್ನೊಂದು ಗೋಲಕಗಳಿವೆ. ಕಣ್ಣು ಕಿವಿ ಮುಂತಾದ ಹತ್ತು

ಗೋಲಕಗಳೊಂದಿಗೆ ಮನಸಿಗೆ ಅಧಿಷ್ಠಾನವಾದ ಹೃದಯಾದಿ ಗೋಲಕ ಸೇರಿದರೆ ಹನ್ನೊಂದಾಗುತ್ತವೆ.

* * *

ಸಂಸಾರಕ್ಕೆ ಕಾರಣವಾದ ಅಭಿಮಾನಗಳು ಹನ್ನೆರಡಿವೆ ಎಂದು ಜಡಭರತ ರಹೂಗಣರಾಜನಿಗೆ ಉಪದೇಶಿಸುತ್ತಾನೆ.

ಗಂಧಾಕೃತಿಸ್ಪರ್ಶರಸಶ್ರವಾಂಸಿ
ವಿಸರ್ಗಗತ್ಯತ್ಯಭಿಜಲ್ಪಶಿಲ್ಪಾಃ ।
ಏಕಾದಶಂ ಸ್ವೀಕರಣಂ ಮಮೇತಿ
ಮಾಯಾಮಹಂ ದ್ವಾದಶಮೇಕಮಾಹುಃ ॥ ೧೦ ॥

ಗಂಧ ಘ್ರಾಣೇಂದ್ರಿಯಕ್ಕೆ ವಿಷಯ. ರೂಪ ಚಕ್ಷುರಿಂದ್ರಿಯವಿಷಯ. ಸ್ಪರ್ಶ ತ್ವಗಿಂದ್ರಿಯವಿಷಯ. ರಸರಸನೇಂದ್ರಿಯವಿಷಯ. ಶಬ್ದ ಶ್ರೋತ್ರೇಂದ್ರಿಯ ವಿಷಯ ವಿಸರ್ಜನ ಪಾಯುಇಂದ್ರಿಯವಿಷಯ, ಗಮನ ಪಾದೇಂದ್ರಿಯವಿಷಯ ಸುಖಾನುಭವ ಉಪಸ್ಥೇಂದ್ರಿಯವಿಷಯ. ಶಬ್ದೋಚ್ಚಾರಣ ವಾಗಿಂದ್ರಿಯವಿಷಯ. ಕೆಲಸ ಹಸ್ತೇಂದ್ರಿಯವಿಷಯ. ಇವು ಹತ್ತು ನನ್ನದೆಂದು ಅಭಿಮಾನಪಡುವುದು ಮನಸ್ಸಿನ ವಿಷಯ. ಇದು ಹನ್ನೊಂದನೆಯದು. ನಾನೇ ಕರ್ತನೆಂದು ಅಭಿಮಾನಪಡುವುದೂ ಮನಸ್ಸಿನ ವಿಷಯ. ಇದು ಹನ್ನೆರಡನೆಯದು. ಹೀಗೆ ಸಂಸಾರಕ್ಕೆ ಕಾರಣಗಳು ಹನ್ನೆರಡು ಎಂದು ಹೇಳುತ್ತಾರೆ. ಹತ್ತು ಇಂದ್ರಿಯ ವಿಷಯಗಳೂ ಕೂಡ ಅಭಿಮಾನವಿದ್ದರೆ ಮಾತ್ರ ಸಂಸಾರಕ್ಕೆ ಕಾರಣವಾಗುವುದರಿಂದ ಎರಡು ಬಗೆಯ ಅಭಿಮಾನಗಳೇ ಸಂಸಾರಕ್ಕೆ ಮುಖ್ಯಕಾರಣ ಎಂದು ಕೆಲವರು ಹೇಳುತ್ತಾರೆ. ನನ್ನದೆಂಬ ಅಭಿಮಾನವೂ ನಾನೇ ಸ್ವತಂತ್ರಕರ್ತನೆಂಬ ಅಭಿಮಾನದಲ್ಲಿಯೇ ಸೇರುವುದರಿಂದ ನಾನೆಂಬ ಅಭಿಮಾನ ಒಂದೇ ಮುಖ್ಯವಾಗಿ ಸಂಸಾರಕ್ಕೆ ಕಾರಣವೆಂದೂ ಕೆಲವರು ಹೇಳುತ್ತಾರೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ದ್ವಾದಶಮೇಕ ಆಹುಃ' ಎಂದು ಪಾಠವಿಟ್ಟುಕೊಂಡು ಹತ್ತು, ಇಂದ್ರಿಯ ವಿಷಯಗಳು ಮತ್ತು ಒಂದು, ಶರೀರ ನನ್ನದೆನ್ನುವ ಅಭಿಮಾನ -ಹೀಗೆ ಹನ್ನೊಂದು ಸಂಸಾರಕ್ಕೆ ಮೂಲಕಾರಣ. ಆದರೆ ಕೆಲವರ ಅಭಿಪ್ರಾಯದಲ್ಲಿ ನನ್ನದೆನ್ನುವ ಅಭಿಮಾನ ವಿವೇಕಿಗಳಿಗೆ ಮಾತ್ರ. ಮೂಢರಿಗೆ ಶರೀರದಲ್ಲಿ ನಾನೇ ಎಂಬ ಅಭಿಮಾನವಿದೆ. ಇದು ಹನ್ನೆರಡನೆಯದು. ಅದರಿಂದ ಸಂಸಾರಕ್ಕೆ ಈ ಹನ್ನೆರಡು ಮೂಲಕಾರಣವೆನ್ನುತ್ತಾರೆ.

ವಸ್ತುತಃ ಸಂಸಾರಕ್ಕೆ ಮೂಲಕಾರಣ ಸಂಖ್ಯೆಯ ವಿಷಯದಲ್ಲಿ ಹನ್ನೊಂದು ಹನ್ನೆರಡೆಂಬ ಮತಭೇದವಿಲ್ಲ. ಏಕೆಂದರೆ ಶರೀರವು ನಾನೇ ಎಂಬ ಅಭಿಮಾನ

ಮೂಢರಿಗೂ ಇರುವುದಿಲ್ಲ. ಹನ್ನೆರಡು ಎರಡು ಅಥವಾ ಒಂದು ಎಂದು ಮತ ಭೇದವಿದೆ. 'ದ್ವಾದಶಮೇಕಮಾಹುಃ' ಎಂಬ ಪಾಠವೇ ಸರಿಯಾದ ಪಾಠ. ಈ ಪಾಠದಲ್ಲಿ 'ದ್ವಾದಶಮಾಹುಃ' ಎಂದು ಹನ್ನೆರಡರ ಪಕ್ಷವನ್ನು ಹೇಳಿ. 'ಏಕಮಾಹುಃ' ಎಂದು ಒಂದರ ಪಕ್ಷವನ್ನೂ ಶ್ಲೋಕ ಸ್ಪಷ್ಟ ಹೇಳುತ್ತಿದೆ. ಎರಡರ ಪಕ್ಷವನ್ನು ಹೇಳಿಲ್ಲ. ಅದನ್ನು ಉಪಲಕ್ಷಣವಾಗಿ ಇಟ್ಟುಕೊಳ್ಳಬೇಕು. ಏಕೆಂದರೆ ಗರುಡಪುರಾಣವಚನ ಹಾಗೇ ಹೇಳುತ್ತದೆ-

ಏಷ ಸಂಸೃತಿಸಂಭಾರೋ ದ್ವಾದಶೈವಾಥವಾ ಭವೇತ್ ।
ದಶಕಂ ವಿಷಯಾಣಾಂ ಚ ಮಮಾಹಮಿತಿ ಚ ದ್ವಯಮ್ ।
ದ್ವಯಮೇವ ಮಮಾಹಂ ವಾ ಸಂಸೃತಿಸ್ತ್ವಹಮೇವ ವಾ ॥

ಇತಿ ಚ ।

ಅತ್ತಿರುಪಸ್ಥವಿಷಯಃ ।

'ಸಂಸಾರಕ್ಕೆ ಮುಖ್ಯಕಾರಣ ಹನ್ನೆರಡೆ ಎನ್ನಬಹುದು. ಹತ್ತು ವಿಷಯಗಳು ಮತ್ತು ಮಮಕಾರ ಅಹಂಕಾರಗಳೆರಡು ಎಂದು. ಅಥವಾ ವಿಷಯಪದಾರ್ಥಗಳು ಬಂಧಕವಾಗಲು ಎರಡು ಅಭಿಮಾನಗಳೇ ಕಾರಣವಾದ್ದರಿಂದ ಅವೆರಡೇ ಮುಖ್ಯಕಾರಣವೆನ್ನಬಹುದು. ಅಥವಾ ಆ ಎರಡು ಅಭಿಮಾನಗಳಲ್ಲಿಯೂ ಮಮಕಾರ ಅಹಂಕಾರದಲ್ಲಿಯೇ ಸೇರುವುದರಿಂದ ಅಹಂಕಾರ ಒಂದೇ ಮೂಲಕಾರಣ. ಅಂದರೆ ನಾನೊಬ್ಬನೆ ಸ್ವತಂತ್ರಕರ್ತಾ ಎಂಬ ಅಭಿಮಾನ ಒಂದೇ ಸಂಸಾರಕ್ಕೆ ವಿಶೇಷವಾಗಿ ಮೂಲ ಕಾರಣವೆಂದೂ ಕೆಲವರು ಹೇಳುತ್ತಾರೆ' ಎಂದೂ ಗರುಡಪುರಾಣದಲ್ಲಿ ಉಕ್ತವಾಗಿದೆ.

'ವಿಸರ್ಗಗತ್ಯತ್ಯಭಿಜಲ್ಪಶಿಲ್ಪಾಃ' ಎಂಬಲ್ಲಿ 'ಅತ್ತಿ' ಎಂದರೆ ಸುಖಾದನ, ಸುಖಾನುಭವ ಗುಹ್ಯೇಂದ್ರಿಯದ ವಿಷಯ.

* * *

ಮನಸ್ಸಿನ ಹನ್ನೊಂದು ಕಾರ್ಯಗಳು ಶರೀರ ಇಂದ್ರಿಯ ಜೀವಯೋಗ್ಯತೆ ಪುಣ್ಯಪಾಪಗಳು ಕಾಲ ಇವೆಲ್ಲವುಗಳಿಂದಾಗುತ್ತದೆ. ಎಲ್ಲಕ್ಕೂ ಕರ್ತ ಭಗವಂತನೆ. ಜೀವನಲ್ಲ. ಜೀವನ ಇಚ್ಛಾನುಸಾರ ಮನಸ್ಸು ಆಲೋಚಿಸುವುದೆಂದಿಲ್ಲ ಎಂದು ಜಡಭರತ ರಹೂಗಣರಾಜನಿಗೆ ಉಪದೇಶಿಸುತ್ತಾನೆ.

ದ್ರವ್ಯಸ್ವಭಾವಾಶಯಕರ್ಮಕಾಲೈ-
ರೇಕಾದಶಾಮೀ ಮನಸೋ ವಿಕಾರಾಃ ।

ಸಹಸ್ರಶಃ ಶತಶಃ ಕೋಟಿಶಶ್ಚ
ಕ್ಷೇತ್ರಜ್ಞತೋ ನ ಮಿಥೋ ನ ಸ್ವತಃ ಸ್ಯುಃ ॥ ೧೧ ॥

ಹನ್ನೊಂದು ಬಗೆಯ ಮನಸ್ಸಿನ ಚಟುವಟಿಕೆಗಳು ದೇಹಇಂದ್ರಿಯಾದಿ ದ್ರವ್ಯಗಳಿಂದಲೂ ಜೀವಯೋಗ್ಯತೆಯಿಂದಲೂ ಅಂತಃಕರಣದಿಂದಲೂ ಪುಣ್ಯಪಾಪ ಕರ್ಮಗಳಿಂದಲೂ ಆಯಾ ಕಾಲದಿಂದಲೂ ಉಂಟಾಗುತ್ತವೆ. ಅವುಗಳಲ್ಲಿ ಅಂತಃಕರಣ ಉಪಾದಾನಕಾರಣ. ಉಳಿದವು ನಿಮಿತ್ತ ಕಾರಣಗಳು. ಈ ಮನಸ್ಸಿನ ಹನ್ನೊಂದು ಬಗೆಯ ಚಟುವಟಿಕೆಗಳೂ ನೂರಾರು ಸಾವಿರಾರು ಕೊಟ್ಯಂತರ ಮತ್ತು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಉಂಟಾಗುತ್ತವೆ. ಎಲ್ಲಕ್ಕೂ ಕರ್ತ ಭಗವಂತನೆ. ಏಕೆಂದರೆ ಅಸ್ವತಂತ್ರರಾದ್ದರಿಂದ ಜೀವರು ಕರ್ತರಲ್ಲ. ಅವರ ಇಚ್ಛಾನುಸಾರವೇ ಮನಸ್ಸು ಆಲೋಚಿಸುವುದೆಂದಿಲ್ಲ. ಮನಸ್ಸಿನ ಆಲೋಚನೆಗಳಿಗೆ ಅವುಗಳೇ ಪರಸ್ಪರ ಕರ್ತೃಗಳೆಂದಾಗಲಿ, ತಮಗೆ ತಾವೇ ಕರ್ತೃಗಳೆಂದಾಗಲಿ ಹೇಳುವುದಂತೂ ಯುಕ್ತಿಯುಕ್ತವಲ್ಲ.

ಇಲ್ಲಿ ದ್ರವ್ಯವೆಂದರೆ ವಿಷಯಪದಾರ್ಥಗಳು. ಸ್ವಭಾವವೆಂದರೆ ಮನಸ್ಸಿನಲ್ಲಿರುವ ಪರಿಣಾಮಸ್ವಭಾವವೆಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ವಿಷಯಪದಾರ್ಥವಿಲ್ಲದಿದ್ದರೂ ಮನಸ್ಸಿನಲ್ಲಿ ಹಗಲುಗನಸು ರಾತ್ರಿಕನಸುಗಳಲ್ಲಿ ವಿಕಾರವಾಗುವುದು ಕಂಡಿದೆ. ಸ್ವಭಾವವೆಂದರೆ ಮನಸ್ಸಿನ ಪರಿಣಾಮಸ್ವಭಾವ ಒಂದನ್ನೇ ಇಟ್ಟುಕೊಳ್ಳಲೂ ಕಾರಣವಿಲ್ಲ. ದ್ರವ್ಯ ಮುಂತಾದವುಗಳ ಸ್ವಭಾವವನ್ನೂ ಮನಸ್ಸಿನ ಪರಿಣಾಮಕ್ಕೆ ಕಾರಣವೆನ್ನಬಹುದು. ಅದರಿಂದ ಮನಸ್ಸಿನಲ್ಲಾಗುವ ಪರಿಣಾಮಗಳಿಗೆ ದೇಹ ಇಂದ್ರಿಯಗಳು ಕಾರಣವಾಗುವುದರಿಂದ ದ್ರವ್ಯಶಬ್ದದಿಂದ ಅವುಗಳನ್ನು ವಿವಕ್ಷೆ ಮಾಡಬೇಕು. ಮತ್ತು ಸ್ವಭಾವವೆಂದರೆ ಜೀವಯೋಗ್ಯತೆ ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ ಜೀವನಿಗೆ ಉಂಟಾಗುವ ಮನೋವಿಕಾರಗಳಿಗೆ ಪರಮಾತ್ಮ ಕಾರಣನಾಗಿರುವುದರಿಂದ ಅವನು ಜೀವಯೋಗ್ಯತೆಗನುಸಾರ ಪ್ರವೃತ್ತಿಮಾಡದೆ ಇದ್ದರೆ ಅವನಲ್ಲಿ ವೈಷಮ್ಯನೈರ್ಘೃಣ್ಯದೋಷಗಳಿಗೆ ಆಸ್ಪದವಾಗುತ್ತದೆ.

'ಕ್ಷೇತ್ರಜ್ಞತೋ ನ ಮಿಥೋ ನ ಸ್ವತಃ ಸ್ಯುಃ' ಎಂಬಲ್ಲಿ ಶ್ರೀಧರವ್ಯಾಖ್ಯಾನ ಮೂರು ರೀತಿಯ ವಿವರಣೆ ನೀಡಿದೆ. ಕ್ಷೇತ್ರಜ್ಞನೆಂದರೆ ಪರಮಾತ್ಮ. ಅನಂತಶಕ್ತಿ ಉಳ್ಳ ಪರಮಾತ್ಮನಿಂದ ಮನಸ್ಸಿನಲ್ಲಿ ಅನಂತ ಪರಿಣಾಮಗಳಾಗುತ್ತವೆ ಎಂದು ಒಂದು ವಿವರಣೆ. ವಿಶ್ವನಾಥಗಿರಿಧರ ವ್ಯಾಖ್ಯಾನಗಳು ಹಾಗೇ ಹೇಳುತ್ತವೆ. ಕ್ಷೇತ್ರಜ್ಞನೆಂದರೆ ಚೈತನ್ಯ. ಚೈತನ್ಯದ ಸತ್ತೆಯಿಂದಲೆ ಮನೋವೃತ್ತಿಗಳಿಗೆ ಸತ್ತೆ. ಪ್ರತ್ಯೇಕ ಅಸ್ತಿತ್ವವಿಲ್ಲ. ಅದರಿಂದ ಮಿಥ್ಯೆ ಎಂದು ಎರಡನೆ ವಿವರಣೆ. ಆದರೆ ಶುಕ್ತಿಗಿಂತ ಪ್ರತ್ಯೇಕ ಅಸ್ತಿತ್ವವಿಲ್ಲದ ರಜತದಂತೆ ಮನೋವೃತ್ತಿಯೂ ಚೈತನ್ಯಕ್ಕಿಂತ ಪ್ರತ್ಯೇಕ ಅಸ್ತಿತ್ವವಿಲ್ಲದ್ದು ಎಂದು

ಭಾಗವತ ಹೇಳುತ್ತಿಲ್ಲ. ಚೈತನ್ಯದಿಂದ ಮನೋವೃತ್ತಿಗಳಿಗೆ ಅಸ್ತಿತ್ವ ಬರುತ್ತದೆ ಎಂದರೆ ಕುಂಬಾರನಿಂದ ಗಡಿಗೆಗೆ ಅಸ್ತಿತ್ವ ಬರುವಂತೆ ಉತ್ಪತ್ತಿಯೇ ಆದೀತು. ಸತ್ಯವೆಂದೇ ಹೇಳಿದಂತಾದೀತು. 'ನಕಾರವನ್ನು ಆವೃತ್ತಿ ಮಾಡಿ ಕ್ಷೇತ್ರಜ್ಞನಿಂದ ಮನೋವೃತ್ತಿಗಳು ಉಂಟಾಗುವುದಿಲ್ಲ. ಅವು ಪರಸ್ಪರವಾಗಿಯೂ ಒಂದರಿಂದ ಇನ್ನೊಂದು ಹುಟ್ಟುವುದಿಲ್ಲ. ತಮ್ಮಿಂದ ತಾವೇ ಹುಟ್ಟಿಕೊಳ್ಳುವುದೂ ಇಲ್ಲ. ಏಕೆಂದರೆ ಕ್ಷೇತ್ರಜ್ಞ ನಿರ್ವಿಕಾರ. ಅವನಲ್ಲಿ ಕರ್ತೃತ್ವವಿಲ್ಲ. ಮನೋವೃತ್ತಿಗಳು ಒಂದರಿಂದ ಇನ್ನೊಂದು ಪರಸ್ಪರ ಹುಟ್ಟುತ್ತವೆ ಎಂದರೆ ಅನ್ಯೋನ್ಯಾಶ್ರಯ. ತಮಗೆ ತಾವೇ ಕಾರಣವೆಂದರೆ ಆತ್ಮಾಶ್ರಯ. ಹೀಗಾಗಿ ಯಾವ ರೀತಿಯಿಂದಲೂ ಉತ್ಪತ್ತಿಯನ್ನು ಹೇಳಲು ಬಾರದಿರುವುದರಿಂದ ನಿತ್ಯವೂ ಅಲ್ಲದ್ದರಿಂದ ಅನಿರ್ವಚನೀಯ, ಮಿಥ್ಯಾ' ಎಂದು ಇನ್ನೊಂದು ವಿವರಣೆ. ಆದರೆ ಮೊದಲನೆ ವಿವರಣೆಯಲ್ಲಿ ಪರಮಾತ್ಮನಿಂದಲೇ ಉತ್ಪತ್ತಿಯನ್ನು ಹೇಳಿದ್ದಾರೆ. ಅದರಿಂದ ಈ ಎರಡನೇ ವಿವರಣೆ ಸ್ವವ್ಯಾಹತ.

ವೀರರಾಘವವ್ಯಾಖ್ಯಾನದಲ್ಲಿ ಕ್ಷೇತ್ರಜ್ಞನೆಂದರೆ ಜೀವ. ಜೀವನ ಸಂಪರ್ಕ ಬಂದರೆ ಮಾತ್ರ ಮನಸ್ಸಿನಲ್ಲಿ ಪರಿಣಾಮವಾಗುತ್ತದೆ. ಅದರಿಂದ ಜೀವನ ಸಂಪರ್ಕದಲ್ಲಿ ಮನಸ್ಸಿನಲ್ಲಿ ಪರಿಣಾಮ. ಇದನ್ನು ತಿರುವುಮುರುವು ಮಾಡಿ ಮನಸಿನ ಸಂಪರ್ಕದಲ್ಲಿ ಜೀವನಲ್ಲಿ ಪರಿಣಾಮ ಎನ್ನುವಂತಿಲ್ಲ. ಜೀವನಸಂಪರ್ಕ ಉಳ್ಳ ಮನಸ್ಸೂ ಕೂಡ ಸ್ವತಃ ಪರಿಣಾಮಕಾರಣವಾಗುವುದಿಲ್ಲ. ಅದೃಷ್ಟದ ಸಹಾಯ ಬೇಕಾಗುತ್ತದೆ ಎಂದು ವಿವರಣೆ ಇದೆ. ಆದರೆ ಒಂದು ಕಾರ್ಯಕ್ಕೆ 'ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವಚ' ಎಂದು ಐದೂ ಕಾರಣವೆ. ಅದನ್ನು ಭಾಗವತ ಹೇಳಲು ಹೊರಟಿಲ್ಲ. ಜೀವನಿಗೆ ಸ್ವತಃ ಕಾಲಕರ್ಮಾದಿಗಳ ಸಹಾಯದಿಂದ ಮನಸಿನಲ್ಲಿ ಪರಿಣಾಮ ಉಂಟು ಮಾಡಲು ತಕ್ಕಸಾಮರ್ಥ್ಯ ಉಂಟೆ? ಇಲ್ಲ. ಅವನು ಅಸ್ವತಂತ್ರ, ಅಲ್ಪಶಕ್ತ. ಅವನ ಇಚ್ಛೆಯಿಂದಲೆ ಮನಸಿನಲ್ಲಿ ಆಲೋಚನೆಗಳು ಮೂಡುವುದೆಂದಿಲ್ಲ. ಭಗವಂತನೇ ಜೀವನ ಯೋಗ್ಯತೆ ಪೂರ್ವಕರ್ಮಾನುಸಾರ ಮನಸ್ಸಿನಲ್ಲಿ ಆಲೋಚನೆಗಳನ್ನು ಉಂಟುಮಾಡುತ್ತಾನೆ ಎಂದು ಜಡಭರತ ರಹೂಗಣನಿಗೆ ಉಪದೇಶಿಸುವ ಸಂದರ್ಭವಿದು. ಅದರಿಂದ ಜೀವನ ಕರ್ತೃತ್ವವನ್ನು ಪ್ರತಿಪಾದಿಸುವ ಉದ್ದೇಶ ಭಾಗವತಕ್ಕೆ ಇಲ್ಲ. ಅದನ್ನು ಪ್ರತಿಪಾದಿಸಿದರೆ ವ್ಯರ್ಥ ಸಿದ್ಧಸಾಧನವಾಗುತ್ತದೆ ಎಂಬ ಅಭಿಪ್ರಾಯದಿಂದ ಶ್ರೀಮದಾಚಾರ್ಯರು ಜೀವನಿಗೆ ಕ್ಷೇತ್ರಜ್ಞಪರಮಾತ್ಮನಿಂದಲೇ ಮನೋವೃತ್ತಿಗಳುಂಟಾಗುತ್ತವೆ, ಬೇರೆ ಜೀವರೂ ತತ್ವಾಭಿಮಾನಿಗಳೂ ಕೂಡ ಅಸ್ವತಂತ್ರರು. ಮನೋವೃತ್ತಿಗಳೆ ಪರಸ್ಪರ ಕಾರಣವಾಗುವುದಾಗಲಿ ತಮಗೆ ತಾವೇ ಕಾರಣವಾಗುವುದಾಗಲಿ ಶಕ್ಯವಿಲ್ಲ ಎಂದು ವಿವರಣೆ ನೀಡುತ್ತಾರೆ.

ದ್ರವ್ಯಂ ದೇಹಾದಿ । ಸ್ವಭಾವೋ ಯೋಗ್ಯತಾ । ಜೀವಸ್ಯ ಕ್ಷೇತ್ರಜ್ಞತಃ ಸ್ಯುಃ । ಮಿಥಃ ಸ್ವತಶ್ಚ ನ ಸ್ಯುಃ ।

ದ್ರವ್ಯವೆಂದರೆ ದೇಹೇಂದ್ರಿಯಗಳು ವಿವಕ್ಷಿತವಾಗಿವೆ. ಸ್ವಭಾವವೆಂದರೆ ಜೀವಯೋಗ್ಯತೆ ವಿವಕ್ಷಿತವಾಗಿದೆ. ಜೀವಸ್ಯ ಎಂದು ಶೇಷಪೂರಣ ಮಾಡಬೇಕು. ಕ್ಷೇತ್ರಜ್ಞತಃ ಎಂಬುದನ್ನು ನಕಾರಕ್ಕೆ ಅನ್ವಯಿಸದೆ 'ಸ್ಯುಃ' ಎಂಬುದಕ್ಕೆ ಅನ್ವಯಿಸಬೇಕು. ಜೀವನಿಗೆ ಪರಮಾತ್ಮನಿಂದಲೇ ಮನೋವೃತ್ತಿಗಳುಂಟಾಗುತ್ತವೆ ಎಂದರ್ಥ. ಮಿಥಃ ಎಂಬುದನ್ನು ಒಂದು ನಕಾರದೊಂದಿಗೆ, ಸ್ವತಃ ಎಂಬುದನ್ನು ಇನ್ನೊಂದು ನಕಾರದೊಂದಿಗೆ ಅನ್ವಯಿಸಬೇಕು. ಮನೋವೃತ್ತಿಗಳು ಪರಸ್ಪರವಾಗಿಯೂ ಕಾರಣವಲ್ಲ, ತಮಗೆ ತಾವೇ ಕಾರಣವೂ ಅಲ್ಲ ಎಂದರ್ಥ.

* * *

ಜೀವಾಂತರ್ಯಾಮಿಯಾದ ಪರಮಾತ್ಮ ಸ್ವೇಚ್ಛೆಯಿಂದಲೇ ಜೀವರೊಳಗಿದ್ದಾನೆ ಜೀವರಿಗೆ ಕಾಣದಂತಿದ್ದಾನೆ ಎಂದು ಜಡಭರತ ರಹೂಗಣರಾಜನಿಗೆ ಉಪದೇಶಿಸುತ್ತಾನೆ.

ಕ್ಷೇತ್ರಜ್ಞ ಆತ್ಮಾ ಪುರುಷಃ ಪುರಾಣಃ
ಸಾಕ್ಷಾತ್ ಸ್ವಯಂಜ್ಯೋತಿರಜಃ ಪರೇಶಃ ।
ನಾರಾಯಣೋ ಭಗವಾನ್ ವಾಸುದೇವಃ
ಸ್ವಮಾಯಯಾಽಽತ್ಮನ್ ವ್ಯವಧೀಯಮಾನಃ ॥ ೧೩ ॥

ಹರಿ ಜೀವ ವಿಲಕ್ಷಣ. ಏಕೆಂದರೆ ಅವನು ಜೀವನಿಗೆ ಅಂತರ್ಯಾಮಿ. ಜೀವನ ಶರೀರದಲ್ಲಿರುತ್ತಾನೆ. ಜೀವನಂತೆ ಅಜ್ಞನಲ್ಲ, ಸ್ವತಂತ್ರವಾಗಿ ಜೀವಶರೀರವನ್ನು ತಿಳಿಯುತ್ತಾನೆ. ಸಾಕ್ಷಾತ್ ಪುರಾಣನೆನಿಸುತ್ತಾನೆ. ಸ್ವಪ್ರಕಾಶ, ಜನನ ರಹಿತ, ಪುರುಷೋತ್ತಮ, ನಾರಾಯಣನೆನಿಸಿದ ಈ ಭಗವಾನ್ ವಾಸುದೇವನೆ ಶುದ್ಧ ಪರತತ್ವ ಹೊರತು ಬೇರೆ ನಿರ್ಗುಣನಿರಾಕಾರವಲ್ಲ. ಈ ನಾರಾಯಣ ಜೀವನಲ್ಲಿದ್ದರೂ ಜೀವನನ್ನು ಆಶ್ರಯಿಸಿದವನಲ್ಲ. ಸ್ವೇಚ್ಛೆಯಿಂದಲೇ ಜೀವನಲ್ಲಿ ಇದ್ದಾನೆ. ತನ್ನನ್ನೇ ತಾನು ಆಶ್ರಯಿಸಿದ್ದಾನೆ. ಜೀವನಿಗೆ ಕಾಣದಂತಿದ್ದಾನೆ.

ಇಲ್ಲಿ ಸ್ವಮಾಯಯಾಽಽತ್ಮನ್ಯವಧೀಯಮಾನಃ' ಎಂದು ಪಾಠವಿಟ್ಟುಕೊಂಡು ಶ್ರೀಧರೀಯದಲ್ಲಿ ಸ್ವಾಧೀನವಾದ ಮಾಯೆಯಿಂದ ಪರಮಾತ್ಮ ಜೀವನಲ್ಲಿ ಅಂತರ್ಯಾಮಿಯಾಗಿದ್ದಾನೆ ಎಂದು ವಿವರಣೆ ನೀಡುತ್ತಾರೆ. 'ಸ್ವಮಾಯಯಾತ್ಮನ್ ವ್ಯವಧೀಯಮಾನಃ' ಎಂದೇ ಪಾಠವಿಟ್ಟುಕೊಂಡು ವೀರರಾಘವವ್ಯಾಖ್ಯಾನದಲ್ಲಿ 'ಸ್ವಾಧೀನಮಾಯೆಯಿಂದ ಜೀವನಲ್ಲಿ ಅದೃಶ್ಯನಾಗಿ ಇದ್ದಾನೆ' ಎಂದು ವಿವರಣೆ

ನೀಡುತ್ತಾರೆ. ಈ ಎರಡೂ ವ್ಯಾಖ್ಯಾನಗಳು ಸರಿಯಲ್ಲ. ಪರಮಾತ್ಮ ಸ್ವೇಚ್ಛೆಯಿಂದಲೇ ಬೇಕಾದಲ್ಲಿ ಇರಬಹುದು ಸ್ವೇಚ್ಛೆಯಿಂದಲೆ ಅದೃಶ್ಯನಾಗಿರಬಹುದು. ಅವನು ಸ್ವತಂತ್ರ. ಗರುಡಪುರಾಣದಲ್ಲಿ ಹಾಗೇ ಹೇಳಿದೆ. ಸ್ವಾಧೀನವಾದ ಮಾಯೆಯಿಂದ ಅವನೇನು ಮಾಡಿದರೂ ಅವನ ಸ್ವಾತಂತ್ರ್ಯಕ್ಕೆ ಚ್ಯುತಿ ಬರುವುದಿಲ್ಲ ನಿಜ. ಆದರೂ ಅವನು ಹಾಗೆ ಮಾಡುವುದಿಲ್ಲ, ಸ್ವೇಚ್ಛಯೈವ, ತನ್ನಿಚ್ಛೆಯಿಂದಲೇ ಎಂದು ಗರುಡಪುರಾಣ ಹೇಳುತ್ತಿದೆ. 'ಆತ್ಮನಿ' ಎಂದರೆ ಸ್ವರೂಪದಲ್ಲಿ ಎಂದು ಅರ್ಥಮಾಡಿ 'ಮಾಯಿಕೇ' ಎಂದು ಅಧ್ಯಾಹಾರ ಮಾಡಿ ಮಾಯಿಕಪದಾರ್ಥದಲ್ಲಿ ಅವಧೀಯಮಾನಃ ಒಳಗೆ ಪ್ರವಿಷ್ಟನಾಗಿದ್ದರೂ ಸ್ವರೂಪದಲ್ಲಿಯೇ ಇರುತ್ತಾನೆ ಅಂದರೆ ಮಾಯಿಕ ಪದಾರ್ಥದ ಲೇಪ ಅವನಿಗಾಗುವುದಿಲ್ಲ ಎಂದು ಕ್ಲೇಶದಿಂದ ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ ವಿವರಣೆ ನೀಡಲಾಗಿದೆ. ಶ್ರೀಮದಾಚಾರ್ಯರ ವ್ಯಾಖ್ಯಾನ ಸರಳವಾಗಿದೆ. ಪುರಾಣೋಕ್ತವಾಗಿದೆ. 'ಆತ್ಮನ್ ವ್ಯವಧೀಯಮಾನಃ' ಎನ್ನುವುದೇ ಸರಿಯಾದ ಪಾಠವೆಂದು ಗರುಡಪುರಾಣದ 'ಜೀವದೃಷ್ಟೇಸ್ತಿರೋಹಿತಃ' ಎಂಬ ಅಂಶದಲ್ಲಿ ಸ್ಪಷ್ಟವಿದೆ.

ಸ್ವಮಾಯಯಾಽಽತ್ಮನ್ ವ್ಯವಧೀಯಮಾನಃ ಸ್ವೇಚ್ಛಯಾ ಸ್ವಸ್ಮಿನ್ನೇವ ತಿರೋಹಿತತ್ವೇನ ಸ್ಥಿತಃ ।

ಸ್ವಾತ್ಮಾಧಾರಃ ಸ್ವೇಚ್ಛಯೈವ ಜೀವದೃಷ್ಟೇಸ್ತಿರೋಹಿತಃ ।
ಕ್ಷೇತ್ರಜ್ಞೇತ್ಯುಚ್ಯತೇ ವಿಷ್ಣುರ್ಜೀವಸ್ಥಃ ಪುರುಷೋತ್ತಮಃ ॥ ಇತಿ ಚ ।

ಸ್ವಮಾಯಯಾತ್ಮನ್ ವ್ಯವಧೀಯಮಾನಃ ಎಂದರೆ ಗರುಡಪುರಾಣ ಹೇಳುವಂತೆ ಶ್ರೀಹರಿ ಸ್ವೇಚ್ಛೆಯಿಂದಲೇ ತನ್ನಲ್ಲಿಯೇ ತಾನು ಆಶ್ರಯಿಸಿಕೊಂಡಿದ್ದು ಜೀವನಿಗೆ ಕಾಣದಂತಿದ್ದಾನೆ ಎಂದರ್ಥ.

ಸ್ವೇಚ್ಛೆಯಿಂದಲೆ ತನ್ನಲ್ಲಿಯೆ ಆಶ್ರಯಿಸಿಕೊಂಡಿರುವ, ಜೀವನಿಗೆ ಕಾಣದಂತಿರುವ ವಿಷ್ಣು ಜೀವಾಂತರ್ಯಾಮಿಯಾಗಿದ್ದಾನೆ. (ಅದು ಭಾಗವತದಲ್ಲಿ 'ಆತ್ಮಾ' ಎಂಬುದರ ಅರ್ಥ.) ಪುರುಷೋತ್ತಮನಾಗಿದ್ದಾನೆ. (ಇದು ಪರೇಶಶಬ್ದಾರ್ಥ) ಕ್ಷೇತ್ರಜ್ಞನೆನಿಸಿದ್ದಾನೆ (ಇದು ಕ್ಷೇತ್ರಜ್ಞಶಬ್ದಾರ್ಥ) ಎಂದು ಗರುಡಪುರಾಣದಲ್ಲಿ ಉಕ್ತವಾಗಿದೆ.

* * *

ನಾನು ನನ್ನದೆಂಬ ಅಭಿಮಾನ ದೇಹಿಯಾದ ಜೀವನಿಗೆ ಸ್ವಾಭಾವಿಕ. ಅದನ್ನು ಉಪೇಕ್ಷೆ ಮಾಡಿಬಿಡಬಾರದು. ಹರಿಗುರುಗಳ ಸೇವೆಯಿಂದ ಅದನ್ನು ನಾಶ ಮಾಡಿಕೊಳ್ಳಬೇಕು. ಆಗಲೆ ಮುಕ್ತಿ ಎಂದು ಜಡಭರತ ರಹೂಗಣರಾಜನಿಗೆ ಬೋಧಿಸುತ್ತಾನೆ.

ಭ್ರಾತೃವ್ಯಮೇನಂ ತ್ವಮದಭ್ರವೀರ್ಯ-
ಮುಪೇಕ್ಷಯಾಽಪ್ಯೇಧಿತಮಪ್ರಮತ್ತಃ ।
ಗುರೋರ್ಹರೇಶ್ಚರಣೋಪಾಸನಾಸ್ತ್ರೋ
ಜಹಿ ವ್ಯಲೀಕಂ ಸ್ವಯಮಾತ್ಮಮೋಹಮ್ ॥ ೧೭ ॥

ನಾನು ನನ್ನದೆಂಬ ಈ ಅಭಿಮಾನ ಜೀವನಿಗೆ ಶತ್ರು. ಅದರ ಸಾಮರ್ಥ್ಯ ದೊಡ್ಡದು. ಅದನ್ನು ಸುಮ್ಮನೆ ಉಪೇಕ್ಷೆ ಮಾಡಿಬಿಟ್ಟರೆ ಸಾಕು, ಚೆನ್ನಾಗಿ ಬೆಳೆಯುತ್ತದೆ. ಸುಳ್ಳಾದ ಈ ಅಭಿಮಾನವನ್ನು ಹರಿಗುರುಗಳ ಪಾದಸೇವೆ ಎಂಬ ಅಸ್ತ್ರದಿಂದ ಬಲು ಜಾಗರೂಕತೆಯಿಂದ ನಾಶಗೊಳಿಸು.

ಇಲ್ಲಿ 'ಆತ್ಮಮೋಹ' ಎಂದರೆ ತನ್ನ ಮೋಹ, ತನ್ನಲ್ಲಿರುವ ನಾನು ನನ್ನದೆಂಬ ಅಭಿಮಾನ. ಅದನ್ನು ಕಳೆದುಕೊಳ್ಳಬೇಕೆಂದು ಜಡಭರತ ಉಪದೇಶಿಸುತ್ತಿದ್ದಾನೆ. ನಾನು ಶರೀರಧಾರಿಯಾಗಿ ಜನಿಸಿದವನೇ ಆದರೂ ಶರೀರಪ್ರಯುಕ್ತವಾದ ಯಾವುದೇ ದುಃಖ ನನಗೆ ಅಂಟುವುದಿಲ್ಲ ಎಂದು ಆತ ಮೊದಲಿಗೆ ಹೇಳಿದ್ದ. ರಾಜ 'ಅದು ಹೇಗೆ ಸಾಧ್ಯ? ದೇಹದ ಸಂಬಂಧವಿದೆ ಎಂದ ಮೇಲೆ ದೇಹಪ್ರಯುಕ್ತದುಃಖ ಬರಲೇಬೇಕು' ಎಂದ. ಅದಕ್ಕೆ ಉತ್ತರವಾಗಿ ಈ ಇಡೀ ಅಧ್ಯಾಯ ಹೊರಟಿದೆ. ಅದರಲ್ಲಿ ಎಲ್ಲ ಭಗವಂತನೇ ಸ್ವತಂತ್ರಕರ್ತ. ಜೀವರು ಅಸ್ವತಂತ್ರರು ಎಂದು ಪ್ರತಿಪಾದಿಸಿ, ಜೀವ ತಾನೇ ಸ್ವತಂತ್ರಕರ್ತ, ದೇಹಾದಿಗಳೆಲ್ಲ ತನ್ನವು ಎನ್ನುವ 'ನಾನು ನನ್ನದೆಂ'ಬ ಅಭಿಮಾನದ ಫಲವಾಗಿ ದೇಹಾದಿಸಂಬಂಧಿಯಾದ ದುಃಖಕ್ಕೆ ಭಾಗಿಯಾಗುತ್ತಾನೆ ಎಂದು ವರ್ಣಿಸಲಾಗಿದೆ. ಉಪಸಂಹಾರರೂಪವಾಗಿ 'ಆತ್ಮಮೋಹಂ ಜಹಿ' ಎಂದು ಉಪದೇಶವಿದೆ.

ಬೇರೆ ವ್ಯಾಖ್ಯಾನಕಾರರ ಪ್ರಕಾರ 'ದೇಹಾದಿಗಳೆಲ್ಲ ಮಿಥ್ಯೆ, ಅಥವಾ ದೇಹಾದಿಗಳನ್ನು ನಾನು ನನ್ನವೆಂದು ತಿಳಿಯುವುದು ಮಿಥ್ಯೆ. ಇದು ನನಗೆ ತಿಳಿದಿರುವುದರಿಂದ ನನಗೆ ದೇಹಪ್ರಯುಕ್ತ ದುಃಖ ಉಂಟಾಗುವುದಿಲ್ಲ' ಎಂದು ಜಡಭರತನ ಉತ್ತರ. ಆದರೆ ಇಡೀ ಅಧ್ಯಾಯದಲ್ಲಿ ಪ್ರಪಂಚಮಿಥ್ಯಾತ್ವವನ್ನು ಎಲ್ಲಿಯೂ ಹೇಳಿಲ್ಲ. 'ನಾನು ನನ್ನದೆಂ'ಬ ಅಭಿಮಾನವೆಂದರೆ 'ದೇಹಾದಿಗಳು ನಾನೆ ನನ್ನವೇ' ಎಂಬ ಅಭಿಮಾನವೆಂದೂ ಎಲ್ಲಿಯೂ ಹೇಳಿಲ್ಲ. ನಾನು ನನ್ನದೆಂಬ ಅಭಿಮಾನ 'ನಾನೇ ಸ್ವತಂತ್ರಕರ್ತ ದೇಹಾದಿಗಳೆಲ್ಲಕ್ಕೂ ನಾನೇ ಒಡೆಯ'ನೆನ್ನುವ ಅಭಿಮಾನವೇ ಆಗಿರುತ್ತದೆ. ಇದೇ ಆತ್ಮಮೋಹ, ತನ್ನಲ್ಲಿರುವ ಮೋಹ ಎಂದು ಹೇಳಿದೆ. ಬೇರೆ ವ್ಯಾಖ್ಯಾನಕಾರರು 'ಆತ್ಮಮೋಷಂ' ಜೀವನನ್ನು ಮನಸ್ಸು ಅಪಹರಿಸುತ್ತದೆ ಅಂದರೆ ಜೀವನ ಸಹಜಸ್ವಭಾವವನ್ನು ಮುಚ್ಚಿಹಾಗುತ್ತದೆ ಎಂದು ಪಾಠವಿಟ್ಟುಕೊಂಡು ಅಧ್ಯಾಯದ ಉಪಸಂಹಾರದಲ್ಲಿ ಮನೋನಿಗ್ರಹದ

ಉಪದೇಶವನ್ನು ಹೇಳುತ್ತಾರೆ. ಇಲ್ಲಿ ಮನೋನಿಗ್ರಹಕ್ಕೆ ಹರಿಗುರುಗಳ ಪಾದಸೇವೆಯೇ ಸಾಧನವೆಂದೂ ಭಾಗವತ ಹೇಳುತ್ತದೆ. ಸ್ವತಂತ್ರಕರ್ತನಾದ ಹರಿ, ಆತ ಸ್ವತಂತ್ರನೆಂದು ಬೋಧಿಸುವ ಗುರು ಇವರಿಬ್ಬರ ಅನುಗ್ರಹದಿಂದ ಆಗುವ ಮನೋನಿಗ್ರಹವೆಂದರೆ ಮನಸ್ಸಿನಲ್ಲಿರುವ 'ನಾನು ಕರ್ತ ಎಲ್ಲವೂ ನನ್ನವು' ಎಂಬ ಅಭಿಮಾನದಿಂದ ಬಿಡುಗಡೆಯೇ ಆಗಿದೆ.

ಅಭಿಮಾನಾದೇವ ಸಂಸಾರೋಽನ್ಯಥಾ ನೇತಿ ಪರಿಹಾರಃ ।

'ದೇಹೇನ ಜಾತಸ್ಯ ಹಿ ಮೇ ನ ಸಂತಿ' ಎಂದು ಜಡಭರತ ಹೇಳಿದ ವಾಕ್ಯದ ಮೇಲೆ ರಾಜ ಅದು ಹೇಗೆಂದು ಕೇಳಿದ ಪ್ರಶ್ನೆಗೆ 'ಅಭಿಮಾನದಿಂದಲೇ ಸಂಸಾರದುಃಖಲೇಪ, ಅಭಿಮಾನವಿಲ್ಲದಿದ್ದರೆ ಅದಿಲ್ಲ' ಎನ್ನುವುದೇ ನನ್ನ ಮಾತಿನ ಅಭಿಪ್ರಾಯವೆನ್ನುತ್ತ ಈ ಅಧ್ಯಾಯದಲ್ಲಿ ಜಡಭರತ ಪರಿಹಾರ ನೀಡಿದ್ದಾನೆ.

✻ ✻ ✻

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ಏಕಾದಶೋಽಧ್ಯಾಯಃ ॥

—o—

ಅಧ್ಯಾಯ-೧೨

ಅಧ್ಯಾಯಸಾರಾಂಶ

ಜೀವ ಕರ್ಮ ಮಾಡುತ್ತಾನೆ ಅವನಿಗೆ ಅದರಿಂದ ಶ್ರಮವಾಗುತ್ತದೆ. ಫಲವೂ ಸಿಗುತ್ತದೆ ಎಂದ ಮೇಲೆ ಅವನಿಗೆ ಕರ್ತೃತ್ವವಂತೂ ಇದೆ. ಆದರೂ ಅವನು ಅಸ್ವತಂತ್ರನಾದ್ದರಿಂದ ಕರ್ತನೆಂದು ಹೇಳಬಾರದು ಎನ್ನುವುದೇಕೆ? ಎಂಬ ರಾಜನ ಪ್ರಶ್ನೆಗ ಉತ್ತರವಾಗಿ ಜಡಭರತ ಹೇಳುತ್ತಾನೆ. 'ಕರ್ತೃತ್ವವಿದೆ ಎಂದ ಮಾತ್ರಕ್ಕೆ ವ್ಯವಹಾರ ಮಾಡುವುದು ಸರಿಯಲ್ಲ. ನೆಲದ ಮೇಲೆ ನಾನು ನಡೆಯುತ್ತೇನೆ. ಆದರೆ ನೆಲದ ಮೇಲೆ ನನ್ನ ಪಾದಗಳಿವೆ. ಪಾದಗಳ ಮೇಲೆ, ಮೇಲೆ, ಮಂಡಿ, ತೊಡೆ, ಸೊಂಟ, ಎದೆ ಮುಂತಾದುವು ಇವೆ. ಆದರೂ ನೆಲದ ಮೇಲೆ ನಡೆಯುತ್ತೇನೆ ಎನ್ನುವಂತೆ ಪಾದಗಳ ಮೇಲೆ ಮಂಡಿಗಳ ಮೇಲೆ ಎಂದು ಮುಂತಾಗಿ ಏಕೆ ಹೇಳುವುದಿಲ್ಲ. ನೆಲ ಮುಖ್ಯವಾಗಿ ಆಶ್ರಯ. ಅದನ್ನೇ ಹೇಳಬೇಕು ಎನ್ನುವುದಾದರೆ ಮುಖ್ಯವಾಗಿ ಕರ್ತ ಭಗವಂತ. ಅವನನ್ನೇ ಕರ್ತನೆಂದು ಹೇಳಬೇಕು. ರಾಜ, ನೀನೂ ನೆಲದ ಮೇಲೇ ಬರುತ್ತಿದ್ದೀಯೆ? ಅಥವಾ ಪಲ್ಲಕ್ಕಿ ಹೊರುವ ಬೋಯಿಗಳ ಹೆಗಲ ಮೇಲೆ ಬರುತ್ತಿದ್ದೀಯೆ? ಹೇಳು. ನೆಲವೇ ಮುಖ್ಯ ಆಶ್ರಯ. ನೆಲದ ಮೇಲೆ ಬರುತ್ತಿದ್ದೇನೆ ಎನ್ನುವುದಾದರೆ ನೆಲಕ್ಕಿಂತಲೂ ಪರಮಾತ್ಮನೆ ಮುಖ್ಯ ಆಶ್ರಯ ಎನ್ನಬೇಕು. ಹಾಗಾದರೆ ನೆಲದ ಮೇಲೆ ಎನ್ನಬಾರದೆ? ಎಂದರೆ, ಅದರಲ್ಲಿ ತಪ್ಪಿಲ್ಲ. ಎಲ್ಲ ಶಬ್ದಗಳಿಗೂ ಪರಮಾತ್ಮನೇ ಮುಖ್ಯವಾಚ್ಯನಾದ್ದರಿಂದ ನೆಲವನ್ನು ಆಶ್ರಯವೆಂದು ಹೇಳಿದರೆ ಪರಮಾತ್ಮನನ್ನೇ ಮುಖ್ಯ ಆಶ್ರಯವೆಂದಂತಾಗುವುದು. ಜ್ಞಾನಿಗಳು ಪರಮಾತ್ಮ ಎಂಬ ಅರ್ಥದಲ್ಲಿಯೇ 'ನೆಲ' ಎಂಬ ಶಬ್ದವನ್ನು ಪ್ರಯೋಗಿಸುತ್ತಾರೆ. ಅದನ್ನು ತಿಳಿಯದೆ ಅಜ್ಞಾನಿಗಳು ಜಡವಾದ ನೆಲವನ್ನೇ ಕುರಿತು ವ್ಯವಹಾರ ಮಾಡುತ್ತಾರೆ. ಅದು ಬರಿ ವ್ಯವಹಾರ ಮಾತ್ರ. ಪರಮಾತ್ಮನೆ ಮುಖ್ಯಕರ್ತ, ಮುಖ್ಯ ಆಶ್ರಯ. ಎನ್ನುವ ಈ ಸತ್ಯಾಂಶವನ್ನು ತಿಳಿಯಬೇಕಾದರೆ, ಮಹಾತ್ಮರ ಪಾದಧೂಳಿಯನ್ನು ಸೇವಿಸಬೇಕು. ಇನ್ನು ನಾನು ಯಾರೆಂಬುದನ್ನು ಹೇಳುತ್ತೇನೆ. ನಾನು ಹಿಂದಿನ ಜನ್ಮದಲ್ಲಿ

ಭರತನೆಂಬ ರಾಜನಾಗಿದ್ದೆ. ಕೊನೆಗೆ ಸರ್ವಸಂಗಪರಿತ್ಯಾಗ ಮಾಡಿ ಭಗವಂತನ ಆರಾಧನೆ ಮಾಡುತ್ತಿದ್ದಂತೆ ಒಂದು ಜಿಂಕೆಯ ಮೇಲಿನ ವ್ಯಾಮೋಹದಿಂದ ಯೋಗಭ್ರಷ್ಟನಾದೆ. ಜಿಂಕೆಯಾಗಿ ಹುಟ್ಟಿದೆ. ಬಳಿಕ ಈಗ ಬ್ರಾಹ್ಮಣನಾಗಿ ಹುಟ್ಟಿದ್ದೇನೆ. ತಿರುಗಿ ಯೋಗಭ್ರಷ್ಟನಾಗ ಬಾರದೆಂದು ಅಭಿಮಾನವನ್ನು ತೊರೆದು ಅವಧೂತವೇಷದಿಂದ ಸಂಚರಿಸುತ್ತಿದ್ದೇನೆ.

* * *

ನಮ್ಮೆಲ್ಲ ಕ್ರಿಯೆಗಳಿಗೂ ಪರಮಾತ್ಮನೆ ಮುಖ್ಯಕರ್ತನಾಗಿರುವಾಗ ಮುಖ್ಯಕರ್ತೃತ್ವ ವಿವಕ್ಷೆ ಮಾಡದೆ ನಾನು ಕರ್ತನೆನ್ನುವುದು ಲೋಕವ್ಯವಹಾರಕ್ಕೆ ಅನುಗುಣವಲ್ಲ ಎಂದು ಜಡಭರತ ರಹೂಗಣರಾಜನಿಗೆ ಉಪದೇಶಿಸುತ್ತಾನೆ.

ಬ್ರಾಹ್ಮಣ ಉವಾಚ–

ಅಯಂ ಜನೋ ನಾಮ ಚಲನ್ ಪೃಥಿವ್ಯಾಂ
ಯಃ ಪಾರ್ಥಿವಃ ಪಾರ್ಥಿವ ಕಸ್ಯ ಹೇತೋಃ ।
ತಸ್ಯಾಪಿ ಚಾಂಘ್ರ್ಯೋರಧಿ ಗುಲ್ಫಜಂಘಾ-
ಜಾನೂರುಮಧ್ಯೋರಶಿರೋಧರಾಂಸಾಃ ॥ ೫ ॥

ಅಂಸೇ ಚ ದಾರ್ವೀ ಶಿಬಿಕಾ ಚ ಯಸ್ಯಾಂ
ಸೌವೀರರಾಜೇತ್ಯಪದೇಶ ಆಸ್ತೇ ।
ಯಸ್ಮಿನ್ ಭವಾನ್ ರೂಢನಿಜಾಭಿಮಾನೋ
ರಾಜಾಽಸ್ಮಿ ಸಿಂಧುಷ್ವಿತಿ ದುರ್ಮದಾಂಧಃ ॥ ೬ ॥

ಭರತಮುನಿ ನುಡಿದ–

ಪರಮಾತ್ಮನೆ ಮುಖ್ಯವಾಗಿ ಕರ್ತ. ಆ ಮುಖ್ಯಕರ್ತೃತ್ವ ವಿವಕ್ಷೆಯಿಲ್ಲದೆ ನಾನೂ ಕರ್ತನೆನ್ನುವುದು ಸರಿಯಲ್ಲ. ಮುಖ್ಯವಿವಕ್ಷೆ ಮಾಡದಿದ್ದರೆ ನಾನು ನೆಲದ ಮೇಲೆ ನಡೆಯುತ್ತಿದ್ದೇನೆ ಎನ್ನುವುದಾದರೂ ಹೇಗೆ? ಅದು ಕೂಡಲಾರದು. ಏಕೆಂದರೆ ನೆಲದ ಮೇಲೆ ನನ್ನ ಎರಡು ಪಾದಗಳಿವೆ. ಪಾದಗಳ ಮೇಲೆ ಹಿಮ್ಮಡಿಗಳು ಅವುಗಳ ಮೇಲೆ ಮೇಗಾಲು ಮಂಡಿಗಳು ಅವುಗಳಿಗೂ ಮೇಲೆ ತೊಡೆಗಳು ಸೊಂಟ ಎದೆ ಕುತ್ತಿಗೆ ಹೆಗಲುಗಳೂ ಇವೆ. ನಾನು ನೆಲದಲ್ಲಿ ನಡೆಯುತ್ತೇನೆ ಎನ್ನುವಂತೆ ಪಾದಗಳ ಮೇಲೆ ನಡೆಯುತ್ತೇನೆ ಹಿಮ್ಮಡಿಗಳ ಮೇಲೆ ನಡೆಯುತ್ತೇನೆ. ಮೇಗಾಲು ಮಂಡಿಗಳ ಮೇಲೆ ನಡೆಯುತ್ತೇನೆ ಎಂದು ಮುಂತಾಗಿ ಏಕೆ ಹೇಳುವುದಿಲ್ಲ? ನನಗೆ ಪಾದ

ಹಿಮ್ಮಡಿ ಮುಂತಾದುವು ಮುಖ್ಯ ಆಶ್ರಯಗಳಲ್ಲ ನೆಲವೇ ಮುಖ್ಯಾಶ್ರಯ ಎನ್ನುವುದಾದರೆ ನೆಲಕ್ಕಿಂತಲೂ ಮುಖ್ಯ ಆಶ್ರಯ ಅಂತರ್ಯಾಮಿಪರಮಾತ್ಮ. ಅವನನ್ನೇ ಆಶ್ರಯನೆನ್ನಬೇಕು.

ಹೀಗೇ ನೆಲದ ಮೇಲೆ ರಾಜಾ ರಹೂಗಣ ಬರುತ್ತಿದ್ದಾನೆ ಎನ್ನುವುದನ್ನೂ ಮೂಲಾಶ್ರಯ ವಿವಕ್ಷೆಯಿಂದಲೇ ಕೂಡಿಸಬೇಕು. ಏಕೆಂದರೆ ಬೋಯಿಗಳಾದ ನಮ್ಮ ಹೆಗಲ ಮೇಲೆ ಮರದ ಪಲ್ಲಕ್ಕಿ ಇದೆ. ಅದರಲ್ಲಿ ಸೌವೀರರಾಜನೆಂದು ಹೆಸರಿಗೆ ಮಾತ್ರ ಕರೆಸುವ ನಿನ್ನ ದೇಹವಿದೆ. ಆ ದೇಹದಲ್ಲಿ ನೀನು 'ನನ್ನ ದೇಹ' ಎಂದು ಅಭಿಮಾನವನ್ನು ಬೇರೂರಿಸಿಕೊಂಡಿರುವೆ. ಸಿಂಧುದೇಶದ ರಾಜನೆಂಬ ದುರಹಂಕಾರದಿಂದ ಅಂಧನಾಗಿರುವೆ. ಬೋಯಿಗಳ ಹೆಗಲಲ್ಲಿ ರಾಜ ಬರುತ್ತಿದ್ದಾನೆ ಎಂದು ಮುಂತಾಗಿ ಏಕೆ ಹೇಳುವುದಿಲ್ಲ? ನೆಲವೇ ಮುಖ್ಯಆಶ್ರಯ ಎನ್ನುವುದಾದರೆ ನೆಲಕ್ಕಿಂತಲೂ ಪರಮಾತ್ಮನೇ ಮುಖ್ಯ ಆಶ್ರಯ. ಹಾಗೇ ವ್ಯವಹರಿಸಬೇಕು. ಅದರಂತೆ ಜೀವನಿಗೆ ಅಮುಖ್ಯಕರ್ತೃತ್ವವಿದ್ದರೂ ವ್ಯವಹಾರಕ್ಕೆ ಅದು ಯೋಗ್ಯವಲ್ಲ. ಪರಮಾತ್ಮ ಕರ್ತನೆಂದೇ ವ್ಯವಹರಿಸಬೇಕು. ಅದರಿಂದ ನಾನು ಪಲ್ಲಕ್ಕಿ ಹೊರುತ್ತಿಲ್ಲ, ನಡೆಯುತ್ತಿಲ್ಲ.

[1]ಬೇರೆ ವ್ಯಾಖ್ಯಾನಕಾರರು ಇಲ್ಲಿ 'ಕಸ್ಯ ಹೇತೋಃ' ಎಂಬುದನ್ನು 'ಕಸ್ಯಚಿದ್ ಹೇತೋಃ' 'ಯಾವುದೋ ಒಂದು ಕಾರಣದಿಂದ' ಎಂದು ವ್ಯಾಖ್ಯಾನಿಸಿ 'ರಾಜನೆ, ನೀನು ನನಗೆ ಶ್ರಮ ಎಂದೆಯಲ್ಲ? ಅದು ಸುಳ್ಳು. ನನ್ನ ಶರೀರ ಯಾವುದೋ ಒಂದು ಕಾರಣದಿಂದ ಚಲಿಸುತ್ತಿದ್ದರೂ ಅದು ಜಡ. ಚಲಿಸದ ಕಲ್ಲು ಮಣ್ಣುಗಳಂತೆಯೆ. ಅದರಿಂದ ಶ್ರಮ ಕೂಡುವುದಿಲ್ಲ. ಮತ್ತು ಕಾಲು ತೊಡೆ ಸೊಂಟ ಮುಂತಾದ ಅವಯವಗಳಿಗೆ ಅವು ತೊಡೆ ಸೊಂಟ ಮುಂತಾದುವನ್ನು ಹೊರುತ್ತಿದ್ದರೂ ಶ್ರಮವೆಂದು ನೀನು ಹೇಳುವುದಿಲ್ಲ. ಈ ಅವಯವಗಳಿಗೆ ಹೊರತಾಗಿ ಬೇರೆ ಶರೀರವೆಂಬುದಿಲ್ಲ ಎಂದ ಮೇಲೆ ಯಾರಿಗೆ ಶ್ರಮ? ಭಾರ ಹೊರುವವರಿಗೆ ಶ್ರಮ

೧. ಅಯಂ ಜನೋ ಭಾರವಾಹಕಃ ನಾಮ ಪ್ರಸಿದ್ಧಃ ಪಾರ್ಥಿವಃ ಪೃಥಿವ್ಯಾವಿಕಾರಃ ಕಸ್ಯಾಪಿ ಹೇತೋಶ್ಚಲನ್ ಭವತಿ । ಯಸ್ತು ನ ಚಲತಿ ಸ ತು ಪಾಷಾಣಾದಿರಿತ್ಯೇತಾವಾನೇವ ಭೇದಃ' ಅತ್ರ ಪೃಥಿವ್ಯಾದೀನಾಂ ಶಿಬಿಕಾಂತಾನಾಂ ಭಾರವಾಹನಾತ್ ಕಿಂ ಸರ್ವೇಷಾಂ ಶ್ರಮ ಉತ ಕಸ್ಯಚಿತ್ ಕಸ್ಯಚಿತ್ ? ನ ತಾವತ್ ಸರ್ವೇಷಾಂ । ಪೃಥಿವ್ಯಾಃ ಶಿಬಿಕಾಯಾಶ್ಚ ಶ್ರಮಾದರ್ಶನಾತ್ । ಅಂಘ್ರ್ಯಾದೀನಾಂ ಶ್ರಮ ಉಪಲಭ್ಯತೇ ಇತಿ ಚೇನ್ನ ಶಿಬಿಕಾಯಾ ಅಭಾವೇ ಗುಲ್ಫಾದಿಭಾರವಾಹಿನಾಮಪಿ ತೇಷಾಂ ಶ್ರಮಾನುಪಲಬ್ಧೇಃ । ಅಂಘ್ರ್ಯಾದ್ಯವಯವಿನಃ ಶಿಬಿಕಾವಹನಾತ್ ಶ್ರಮ ಇತಿ ಚೇತ್ ಅವಯವೇಭ್ಯಃ ಪೃಥಗವಯವಿನಃ ಶ್ರಮಾಶ್ರಯಸ್ಯಾನಿರೂಪಣಾತ್ । ನನ್ವಸ್ತು ಮಾಸ್ತು ವಾ ಅವಯವೀ । ಭಾರವಾಹಿನಃ ಶ್ರಮದುಃಖಮನುಭೂಯತ ಏವೇತಿ ಚೇದೇತದಪಿ ನೈಕಾಂತಿಕಂ । ಅಭಿಮಾನವಿಶೇಷೇಣೈವ ದುಃಖಂಸುಖಂ ಚ । ಯಥಾ ರಾಜಾಸ್ಮೀತಿ ದುರ್ಮದೇನ ತವ ಸುಖಂ । -ವಿಶ್ವನಾಥಃ ।

ಅನುಭವಸಿದ್ಧ, ನಿಜ. ಆದರೆ ಅದು ನಿನ್ನಂಥ ದೇಹಾಭಿಮಾನಿಗೆ. ನೀನು ತಾನು ರಾಜನೆಂದು ಅಭಿಮಾನ ಪಟ್ಟು ಸುಖಪಡುವೆ. ನಾನು ಅಭಿಮಾನವಿಲ್ಲದವನಾದ್ದರಿಂದ ಸುಖದುಃಖಗಳು ನನಗಿಲ್ಲ.' ಎಂದು ಜಡಭರತ ಹೇಳುತ್ತಿದ್ದಾನೆ ಎನ್ನುತ್ತಾರೆ.

ಇಲ್ಲಿ ಚಲಿಸದ ಮಣ್ಣುಕಲ್ಲುಗಳಂತೆ ಚಲಿಸುವ ಕಾಲು ತೊಡೆ ಮುಂತಾದುವೂ ಜಡವಾದ್ದರಿಂದ ಶ್ರಮವಿಲ್ಲ ಎನ್ನುವುದು ಅರ್ಥಶೂನ್ಯ. ಶರೀರಾವಯವಗಳಲ್ಲಿ ಶ್ರಮವಾಗುವುದು ಅನುಭವಸಿದ್ಧ. ಕಾಲಿಗೆ ತೊಡೆ ಮುಂತಾದುವನ್ನು ಹೊರುವಾಗ ಶ್ರಮವಾಗುವುದಿಲ್ಲ. ನಿಜ. ಏಕೆಂದರೆ ಕಾಲಿಗೆ ಶಕ್ತಿ ಇದೆ. ಶಕ್ತಿ ಇಲ್ಲದಿದ್ದರೆ ಶ್ರಮ ಕಂಡಿದೆ. ಅವಯವಗಳಿಗೆ ಹೊರತಾಗಿ ಬೇರೆ ಶರೀರವೆಂಬುದಿಲ್ಲ ನಿಜ. ಆದರೂ ಅವಯವ ಅವಯವಿಗಳಿಗೆ ಭೇದಾಭೇದವಿರುವುದರಿಂದ ಶರೀರಕ್ಕೆ ಶ್ರಮವೆಂದರೂ ತಪ್ಪಿಲ್ಲ. ನನಗೆ ದೇಹಾಭಿಮಾನವಿಲ್ಲದ್ದರಿಂದ ಸುಖದುಃಖಗಳಿಲ್ಲ ಎನ್ನುವುದು ಈ ಶ್ಲೋಕದಲ್ಲಿ ಕಾಣುವುದಿಲ್ಲ. ಅದರಿಂದ ಶ್ಲೋಕಕ್ಕೆ ಹೀಗೆ ವ್ಯಾಖ್ಯಾನ ಮಾಡಬೇಕು-

ಯಸ್ಮಾನ್ಮೂಲಕಾರಣಭೂತೋ ವಿಷ್ಣುರೇವ ಅತೋ ಮುಖ್ಯಂ ಸರ್ವಕಾರಣತ್ವಂ ತಸ್ಯೈವ । ಮೂಲಾಶ್ರಯ ವಿವಕ್ಷಾ ಯದಿ ನ ಸ್ಯಾತ್, ಕುತಃ ಪೃಥಿವ್ಯಾಂ ಚಲತೀತಿ ವ್ಯವಹಾರಃ? ಯತೋಽವಾಂತರಾಶ್ರಯಾ ಬಹವಃ ಸಂತ್ಯಂಘ್ರ್ಯಾದ್ಯಾಃ ।

ಎಲ್ಲಕ್ಕೂ ಕಾರಣವಾದ ಪ್ರಕೃತಿಗೂ ಮೂಲಕಾರಣ ಹರಿಯೇ. ಅದರಿಂದ ಭಾರ ಹೊರುವುದು ಚಲಿಸುವುದು ಮುಂತಾದ ಎಲ್ಲ ಕ್ರಿಯೆಗಳಿಗೂ ಅವನೇ ಮುಖ್ಯಕರ್ತ ಎಂಬುದು ಈ ಶ್ಲೋಕದ ಅಭಿಪ್ರಾಯ. ಅದರಿಂದ ಹೀಗೆ ಅರ್ಥ. ಕರ್ತೃತ್ವವ್ಯವಹಾರಕ್ಕೆ ಮುಖ್ಯಕರ್ತೃತ್ವವಿವಕ್ಷೆ ಇಲ್ಲದಿದ್ದರೆ 'ಈತ ನೆಲದಲ್ಲಿ ನಡೆಯುತ್ತಾನೆ' ಎಂಬ ವ್ಯವಹಾರ ಹೇಗೆ ಕೂಡುತ್ತದೆ? ಏಕೆಂದರೆ ನೆಲಕ್ಕಿಂತಲೂ ಮೊದಲಿಗೆ ಆಶ್ರಯವಾಗಿ ಕಾಲು ತೊಡೆ ಸೊಂಟ ಮುಂತಾಗಿ ಅನೇಕ ಅವಯವಗಳಿವೆ.

ಕಾಲು ಮುಂತಾದುವು ಮುಖ್ಯ ಆಶ್ರಯವಲ್ಲ. ನೆಲವೇ ಮುಖ್ಯ ಆಶ್ರಯ ಎಂಬ ಅಭಿಪ್ರಾಯದಿಂದ 'ನೆಲದಲ್ಲಿ ನಡೆಯುತ್ತಾನೆ' ಎಂದು ಲೋಕವ್ಯವಹಾರ. ಅದರಂತೆ ಭಾರಹೊರುವ ಕ್ರಿಯೆಗೂ ನಾವು ಕರ್ತೃಗಳಾಗಿದ್ದರೂ ಮುಖ್ಯಕರ್ತ ಹರಿಯೇ ಆದ್ದರಿಂದ ಹರಿಯೆ ಕರ್ತನೆನ್ನಬೇಕು. 'ನಾನು ಕರ್ತ' ಎನ್ನುವುದಾದರೆ ಅದರಂತೆ ಕಾಲಿನಲ್ಲಿ ನಡೆಯುತ್ತೇನೆ ಸೊಂಟದಲ್ಲಿ ನಡೆಯುತ್ತೇನೆ ಎಂದು ಮುಂತಾಗಿಯೂ ವ್ಯವಹಾರ ಉಂಟಾಗಬೇಕಾದೀತು. ಅದರಿಂದ ನಾನು ಭಾರ ಹೊರುತ್ತಿಲ್ಲ ಎಂದು ಜಡಭರತ ಹೇಳುತ್ತಿದ್ದಾನೆ.

* * *

ಭಾರ ಹೊರುವುದು ನಡೆಯುವುದು ಮಂತಾದ ನಮ್ಮ ಕ್ರಿಯೆಗಳಿಗೆ ಹೇಗೆ ಹರಿಯೇ ಮುಖ್ಯಕರ್ತನೋ ಹಾಗೇ ನಮ್ಮನ್ನು ಆಳುವುದು. ರಾಜನೆಂದು ಮೆರೆಯುವುದು ಮುಂತಾದ ನಿನ್ನ ಕ್ರಿಯೆಗಳಿಗೂ ಹರಿಯೇ ಮುಖ್ಯಕರ್ತನೆಂದು ಜಡಭರತ ರಹೂಗಣರಾಜನಿಗೆ ಹೇಳುತ್ತಾನೆ.

ಶೋಚ್ಯಾನಿಮಾಂಸ್ತ್ವಾನಧಿಕಸ್ತವಾಧಿ-
ರ್ವಿಷ್ಟ್ಯಾ ನಿಗೃಹ್ಣನ್ ನಿರನುಗ್ರಹೋಽಸಿ ।
ಜನಸ್ಯ ಗೋಪ್ತೇತಿ ವಿಕತ್ಥಮಾನೋ
ನ ಶೋಭಸೇ ವೃದ್ಧಸಭಾಸು ದುಷ್ಟಃ ॥ ೭ ॥

ರಾಜನೆಂಬ ದುರಹಂಕಾರದಿಂದ ನೀನು ಈ ಬಡಪಾಯಿಗಳನ್ನು ಹಿಡಿದು ಬಲಾತ್ಕಾರವಾಗಿ ಬಿಟ್ಟಿ ಕೆಲಸ ಮಾಡಿಸುತ್ತಿರುವಿ. ಹೀಗೆ ಮಾಡಿದರೆ ನಿನಗೇ ಹೆಚ್ಚಿನ ದುಃಖ ಬಂದೊದಗುತ್ತದೆ. ಆದರೂ ತಾನು ಪ್ರಜೆಗಳ ರಕ್ಷಕನೆಂದು ರಾಜನೆಂದು ಬಡಾಯಿ ಕೊಚ್ಚಿಕೊಳ್ಳುವಿ. ದುಷ್ಟ ನೀನು ಜ್ಞಾನಿಗಳ ಸಭೆಗಳಲ್ಲಿ ಶೋಭಿಸುವುದಿಲ್ಲ. ನೀನು ರಕ್ಷಕನಲ್ಲ, ರಾಜನಲ್ಲ, ನಿನ್ನೊಳಗೆ ಅಂತರ್ಯಾಮಿಯಾಗಿರುವ ವಿಷ್ಣುವೇ ರಕ್ಷಕ. ವಿಷ್ಣುವೇ ರಾಜ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ನೀನು ಬಲಾತ್ಕಾರವಾಗಿ ನಮ್ಮಿಂದ ದುಡಿಸಿಕೊಳ್ಳುವಿ, ನಿಷ್ಕರುಣಿ. ಆದರೂ ರಾಜಶರೀರವನ್ನೆ ತಾನೆಂದು ಅಭಿಮಾನಪಟ್ಟು ತಾನು ರಾಜನೆಂದು ಹೇಳಿಕೊಳ್ಳುವಿ' ಎಂದು ಶ್ಲೋಕಾಭಿಪ್ರಾಯವನ್ನು ಹೇಳುತ್ತಾರೆ. ಏಕೆಂದರೆ,

'ಶೋಚ್ಯಾನಿಮಾನ್ ತ್ವಮಧಿಕಷ್ಟದೀನಾನ್'

ಎಂದು ಅವರ ಪಾಠ. 'ಅಧಿಕಕಷ್ಟವನ್ನು ಅನುಭವಿಸುತ್ತಿರುವ ದೀನರಾದ ಬೋಯಿಗಳಿಂದ ಬಲಾತ್ಕಾರವಾಗಿ ಮೇನೆಯನ್ನು ಹೊರಿಸುವಿ, ಅದರಿಂದ ನೀನು ರಾಜನಲ್ಲ. ಮತ್ತು ಸ್ವಭಾವತಃ ನೀನು ರಾಜನಲ್ಲ, ರಾಜಶರೀರ ಬಂದಿದೆ, ಅದರಲ್ಲಿ ಆತ್ಮೈಕ್ಯಾಭಿಮಾನ ಉಂಟಾಗಿದೆ. ಹೀಗಾಗಿ ರಾಜನೆಂದು ಹೇಳಿಕೊಳ್ಳುವೆ' ಎನ್ನುತ್ತಾರೆ. ಆದರೆ ದೀನರಿಂದ ಬಲಾತ್ಕಾರವಾಗಿ ದುಡಿಸಿಕೊಂಡ ಮಾತ್ರಕ್ಕೆ ರಾಜನಲ್ಲವೆನ್ನಲಾಗದು. ರಾಜನಿಗೆ ಅದರಿಂದ ಪಾಪ ಬರಬಹುದು. ಮತ್ತು ರಾಜಶರೀರದಲ್ಲಿ ತಾದಾತ್ಮ್ಯಾಭಿಮಾನ ರಹೂಗಣನಿಗೆ ಇತ್ತೆಂದು ಶ್ಲೋಕದಲ್ಲಿ ಹೇಳಿಲ್ಲ. ಹಿಂದಿನ ಶ್ಲೋಕದಲ್ಲಿ,

'ಯಸ್ಮಿನ್ ಭವಾನ್ ರೂಢ ನಿಜಾಭಿಮಾನಃ'

ಎಂದು ಅಭಿಮಾನವನ್ನು ಹೇಳಿದ್ದರೂ 'ನಿಜಾಭಿಮಾನ' 'ಈ ಶರೀರ ನನ್ನದೆಂಬ ಅಭಿಮಾನ' ಎಂದಿದೆ ಹೊರತು ನಾನೇ ಎಂಬ ಅಭಿಮಾನವೆಂದಿಲ್ಲ. ವಸ್ತುತಃ 'ಈ ರಾಜಶರೀರಕ್ಕೆ ಹರಿಯೇ ಮುಖ್ಯಸ್ವಾಮಿ ಹೊರತು ನಾನಲ್ಲ, ಎಂದು ನೀನು ತಿಳಿಯಬೇಕಾಗಿತ್ತು ಮತ್ತು ರಾಜ್ಯವಾಳುವ ಕ್ರಿಯೆಗೂ ಹರಿಯೆ ಮುಖ್ಯಕರ್ತನೆನ್ನ ಬೇಕಾಗಿತ್ತು ಎರಡನ್ನೂ ನೀನು ಮಾಡುತ್ತಿಲ್ಲ' ಎಂದು ಜಡಭರತ ಆಕ್ಷೇಪಿಸುತ್ತಿದ್ದಾನೆ. ಅದರಿಂದ ಹೀಗೆ ಹೇಳಬೇಕು-

ಏವಂ ಮೂಲಗೋಪ್ತೃತ್ವಂ ಚ ವಿಷ್ಣೋರೇವ ।

ಭಾರ ಹೊರುವ ನಡೆಯುವ ನಮ್ಮ ಕ್ರಿಯೆಗಳಿಗೆ ಮುಖ್ಯಕರ್ತನಾಗಿದ್ದು ಮುಖ್ಯವಾಗಿ ಹೊರುವವನು ನಡೆಯುವವನು ಎನ್ನಿಸುವವನು ನಮ್ಮ ಅಂತರ್ಯಾಮಿ ಹರಿಯೇ ಹೇಗೋ ಹಾಗೇ ರಾಜನೆಂದೂ ರಕ್ಷಕನೆಂದೂ ಮುಖ್ಯವಾಗಿ ಕರೆಸಿ ಕೊಳ್ಳುವವನು ನೀನಲ್ಲ, ನಿನ್ನ ಅಂತರ್ಯಾಮಿ ಹರಿಯೇ.

* * *

ನಡೆಯುವುದು ಮುಂತಾದ ಕ್ರಿಯೆಗಳಿಗೆ ಮುಖ್ಯಾಶ್ರಯವನ್ನೇ ಆಶ್ರಯವೆಂದು ವ್ಯವಹರಿಸುವುದಾದರೆ 'ನೆಲದಲ್ಲಿ ನಡೆಯುತ್ತಾನೆ' ಎನ್ನದೆ 'ಹರಿಯಲ್ಲಿ ನಡೆಯುತ್ತಾನೆ' ಎನ್ನಬೇಕಾದೀತು ಎಂಬ ಆಕ್ಷೇಪ ಬಂದರೆ ಜಡಭರತ ಹೇಳುತ್ತಾನೆ, 'ಜ್ಞಾನಿಗಳು ಹಾಗೇ ಎನ್ನುತ್ತಾರೆ, ನೆಲ, ಪೃಥಿವಿ, ಕ್ಷಿತಿ ಮುಂತಾದ ಶಬ್ದಗಳೂ ಜ್ಞಾನಿಗಳ ದೃಷ್ಟಿಯಲ್ಲಿ ಮುಖ್ಯವಾಗಿ ಹರಿಯನ್ನೇ ಹೇಳುತ್ತವೆ' ಎಂದು.

ಯದಿ ಕ್ಷಿತಾವೇವ ಚರಾಚರಸ್ಯ
ವಿದಾಮ ನಿಷ್ಠಾಂ ಪ್ರಭವಂ ಚ ನಿತ್ಯಮ್ ।
ತನ್ನಾಮತೋಽನ್ಯದ್ ವ್ಯವಹಾರಮಾತ್ರಂ
ನಿರೂಪ್ಯತಾಂ ಸತ್ಕ್ರಿಯಯಾಽನು ಮೇಯಮ್ ॥ ೮ ॥

ಎಲ್ಲ ಕಡೆ ಮುಖ್ಯ ಆಶ್ರಯ, ಮುಖ್ಯಕರ್ತನ ವಿವಕ್ಷೆಯಿಂದಲೇ ವ್ಯವಹಾರ ಮಾಡಬೇಕೆಂದರೆ ನೆಲಕ್ಕಿಂತಲೂ ಮುಖ್ಯ ಆಶ್ರಯ ಪರಮಾತ್ಮನಾದ್ದರಿಂದ ನೆಲದ ಮೇಲೆ ನಡೆಯುತ್ತೇನೆ ಎನ್ನಬಾರದು ಎಂಬ ಆಕ್ಷೇಪಕ್ಕೆ ಎಡೆಯಿದೆ ನಿಜ. ಆದರೆ ನೆಲ ಪೃಥಿವಿ ಕ್ಷಿತಿ ಎಂದು ಮುಂತಾಗಿ ಎಲ್ಲ ಶಬ್ದಗಳೂ ಮುಖ್ಯವಾಗಿ ಪರಮಾತ್ಮನನ್ನೇ ಹೇಳುತ್ತವೆ. ಜಡವಾದ ನೆಲದ ವಿಷಯದಲ್ಲಿ ಅಜ್ಞರ ರೂಢಿಯಿಂದ ಕೇವಲ ವ್ಯವಹಾರ ಮಾತ್ರವಿದೆ. ಆ ಶಬ್ದ ಹೇಳುವ ಗುಣ ಅದರಲ್ಲಿಲ್ಲ. ಪರಮಾತ್ಮನಲ್ಲಿ ಅಜ್ಞರಿಗೆ ಆ ಶಬ್ದದ ರೂಢಿ ಇಲ್ಲದಿದ್ದರೂ ಜ್ಞಾನಿಗಳಿಗೆ ಇದೆ. ಮತ್ತು ನಿರ್ವಚನಕ್ರಿಯೆಯಿಂದ ಅಂದರೆ ಯೋಗದಿಂದ, ಮಹಾಯೋಗದಿಂದ, ಆ ಶಬ್ದ

ಪರಮಾತ್ಮನನ್ನು ಹೇಳುತ್ತಿದೆ. ಅದರಿಂದ ಚರಾಚರಗಳಿಗೆ ಮೂಲ ಆಶ್ರಯ, ಮೂಲಕಾರಣ, ಪೃಥಿವಿಯೇ ಎಂಬ ವ್ಯವಹಾರ 'ಪೃಥಿವಿ'ಶಬ್ದದ ಮುಖ್ಯವಾಚ್ಯನಾದ ಪರಮಾತ್ಮನ ವಿವಕ್ಷೆಯಲ್ಲಿ ಕೂಡುತ್ತದೆ. ಅಜ್ಞರು ಅದನ್ನು ತಿಳಿಯದೆ ಜಡವಾದ ನೆಲದ ವಿವಕ್ಷೆಯಿಂದಲೇ ವ್ಯವಹಾರ ಮಾಡುತ್ತಾರೆ, ಅದು ಬರಿ ವ್ಯವಹಾರ ಮಾತ್ರ.

ಇಲ್ಲಿ ಮೇನೆ ಹೆಗಲಿಗೆ ಭಾರ, ಹೆಗಲು ಎದೆಗೆ ಭಾರ ಹೀಗೆ ಎಲ್ಲ ಅವಯವಗಳಿಗೂ ಭಾರವಿದೆ ಶ್ರಮವಿದೆ ಎನ್ನುವುದಾದರೆ ಅವೆಲ್ಲಕ್ಕೂ ಉತ್ಪತ್ತಿ ಲಯಗಳು ಕಂಡಿರುವುದರಿಂದ ವಿಕಾರಗಳಾಗಿದ್ದು ಅವೆಲ್ಲವೂ ಹೆಸರಿಗೆ ಮಾತ್ರ ಇವೆ, ಸತ್ಯವಲ್ಲ ಎಂದು 'ವಾಚಾರಂಭಣಂ ವಿಕಾರೋ ನಾಮಧೇಯಂ' ಎಂಬ ಶ್ರುತಿ ಹೇಳುತ್ತಿದೆ ಎನ್ನುತ್ತಾನೆ ಜಡಭರತ ಎಂದು ಬೇರೆ ವ್ಯಾಖ್ಯಾನಕಾರರ ಅಭಿಪ್ರಾಯವಿದೆ. ಹೆಗಲು ಎದೆ ಮುಂತಾದುವನ್ನು ಸತ್ಯವೆಂದು ಅಥವಾ ನಿತ್ಯವೆಂದು ತಿಳಿಯುವುದು ದೇಹಾತ್ಮೈಕ್ಯಭ್ರಮಮೂಲಕವೆಂದೂ ಅವರು ಹೇಳುತ್ತಾರೆ. ಆದರೆ ಹೆಗಲು ಎದೆ ಮುಂತಾದುವೆಲ್ಲವೂ ಪೃಥಿವಿಯ ವಿಕಾರವಾದ ಮಾತ್ರಕ್ಕೆ ಅವು ಅಸತ್ಯವಾಗಲಾರವು, ಹೆಸರಿಗೆ ಮಾತ್ರ ಇವೆ ಎನ್ನಲಾಗದು. ವಿಕಾರಗಳಿಗೆ ಉಪಾದಾನದಿಂದ ಭೇದಾಭೇದವಿರುವುದರಿಂದ ಅವು ಸತ್ಯವೆ. ಮಿಥ್ಯೆಯಾದರೂ ಮೊಲದ ಕೊಂಬಿನಂತೆ ಅಸತ್ತಲ್ಲವೆಂದ ಮೇಲೆ ಭಾರವೆನಿಸುವುದೂ ಶ್ರಮ ಉಂಟುಮಾಡುವುದೂ ಇದ್ದೇ ಇದೆ. ಇಲ್ಲವೆನ್ನುವಂತಿಲ್ಲ. ವಿಕಾರಗಳಿಗೆ ಉಪಾದಾನದಿಂದ ಅತ್ಯಂತ ಅಭೇದವೆನ್ನುವ ಸತ್ಕಾರ್ಯವಾದದಲ್ಲಿಯೂ ವಿಕಾರವು ಉಪಾದಾನದಂತೆ ಸತ್ಯವೂ ಸ್ಥಿರವೂ ಆಗಿರುತ್ತದೆ. ವಿಕಾರವು ಉಪಾದಾನದಲ್ಲಿ ಆರೋಪಿತವಾಗಿರುತ್ತದೆ ಎನ್ನುವ ವಾದದಲ್ಲಿಯೂ ವಿಕಾರವು ವ್ಯಾವಹಾರಿಕವಾಗಿ ಸತ್ಯ, ಸ್ಥಿರ ಎನ್ನಲೇ ಬೇಕು. ಏಕೆಂದರೆ ಮಣ್ಣಿನ ವಿಕಾರವಾದ ಮಣ್ಣಿನ ಪಾತ್ರೆಯಲ್ಲಿ ನೀರು ತರಲು ಶಕ್ಯವಿದೆ ಹೀಗಾಗಿ ಶ್ಲೋಕಕ್ಕೆ ಹೀಗೆ ಅರ್ಥ ಹೇಳಬೇಕು.

ಆಶ್ರಯತ್ವಾತ್ ಕ್ಷಿತಿರಿತಿ ನಿರ್ವಚನೇ ಕ್ಷಿತಿಶಬ್ದೋಽಪಿ ತಸ್ಮಿನ್ನೇವ ।

ಕ್ಷಿತಿಶಬ್ದವು 'ಕ್ಷಿ ನಿವಾಸಗತ್ಯೋಃ' ಎಂಬ ಧಾತುನಿಷ್ಪನ್ನವಾದ್ದರಿಂದ 'ಆಶ್ರಯವಾದ್ದರಿಂದ ಕ್ಷಿತಿ ಎನಿಸುತ್ತದೆ' ಎಂದು ವ್ಯಾಖ್ಯಾನಮಾಡಿದಾಗ ಕ್ಷಿತಿಶಬ್ದವೂ ಹರಿಯಲ್ಲಿಯೇ ಮುಖ್ಯವಾಗಿ ಕೂಡುತ್ತದೆ.

ಐದನೇ ಶ್ಲೋಕದಲ್ಲಿ 'ಪೃಥಿವ್ಯಾಂ ಚಲನ್' ಎಂದಿದೆ. ಈ ಶ್ಲೋಕದಲ್ಲಿ 'ಕ್ಷಿತಾವೇವ' ಎಂದು ಕ್ಷಿತಿಶಬ್ದವಿದೆ. ಲೋಕದಲ್ಲಿ ಎಲ್ಲ ಕ್ರಿಯೆಗಳಿಗೂ ಮುಖ್ಯಾಶ್ರಯವಾದ ನೆಲವನ್ನು ಪೃಥಿವೀ ಕ್ಷಿತಿ ಎಂದು ಮುಂತಾಗಿ ಯಾವಶಬ್ದದಿಂದ ಕರೆದರೂ ಆ ಶಬ್ದಕ್ಕೆ ಮುಖ್ಯಾರ್ಥ ಹರಿಯೆ, ನೆಲವು ಅಮುಖ್ಯಾರ್ಥ. ಅಜ್ಞಾನಿಗಳು ಇದನ್ನು ತಿಳಿಯದೆ ನೆಲವನ್ನು ಮುಖ್ಯಾಶ್ರಯವೆಂದು ವ್ಯವಹರಿಸುತ್ತಾರೆ. ಜ್ಞಾನಿಗಳು ಪೃಥಿವಿ ಕ್ಷಿತಿ

ಮುಂತಾದಶಬ್ದಗಳಿಂದಲೂ ಹರಿಯನ್ನೇ ಕ್ರಿಯೆಗಳಿಗೆ ಮುಖ್ಯಾಶ್ರಯವೆಂದು ವ್ಯವಹರಿಸುತ್ತಾರೆ. ಅದರಿಂದ ಮುಖ್ಯಾಶ್ರಯತ್ವ ಮುಖ್ಯಕರ್ತೃತ್ವವಿವಕ್ಷೆಗಳಲ್ಲಿ ಹರಿಯನ್ನೇ ಆಶ್ರಯ, ಕರ್ತ ಎಂದು ವ್ಯವಹರಿಸಬೇಕು.

* * *

ನೆಲವೂ ನೆಲದ ಪರಮಾಣುಗಳಿಂದಾಗಿರುವುದರಿಂದ ಮೂಲಾಶ್ರಯ ವಿವಕ್ಷೆಯಿಂದ ವ್ಯವಹಾರ ಮಾಡಬೇಕೆಂದರೆ ನೆಲದ ಪರಮಾಣುಗಳ ಆಶ್ರಯದಲ್ಲಿ ನಡೆಯುತ್ತಾನೆ ಎನ್ನಬೇಕಾದೀತು ಹರಿಯ ಆಶ್ರಯದಲ್ಲಿ ನಡೆಯುತ್ತಾನೆ ಎಂದಲ್ಲ ಎಂಬ ಆಕ್ಷೇಪಕ್ಕೆ ಉತ್ತರವನ್ನು ಜಡಭರತ ನೀಡುತ್ತಾನೆ.

ಏವಂ ನಿರುಕ್ತಂ ಕ್ಷಿತಿಶಬ್ದವೃತ್ತ-
ಮಸನ್ನಿಧಾನಂ ಪರಮಾಣವೋ ಯೇ ।
ಅವಿದ್ಯಯಾ ಮನಸಾ ಕಲ್ಪಿತಾಸ್ತೇ
ಯೇಷಾಂ ಸಮೂಹೇನ ಕೃತೋ ವಿಶೇಷಃ ॥ ೯ ॥

'ನೆಲದ ಮೇಲೆ ನಡೆಯುತ್ತಾನೆ' ಎನ್ನುವ ವ್ಯವಹಾರವು ಮೂಲಾಶ್ರಯ ವಿವಕ್ಷೆಯಿಂದಲೇ ಎನ್ನುವುದಾದರೆ ನೆಲಕ್ಕೂ ಮೂಲಾಶ್ರಯ ನೆಲದ ಪರಮಾಣುಗಳು. ವಿಷ್ಣುವಲ್ಲ ಎಂಬ ಆಕ್ಷೇಪಕ್ಕೆ ಹೀಗೆ ಸಮಾಧಾನ– 'ಕ್ಷಿತಿ' ಎಂದರೆ, 'ಕ್ಷಿ ನಿವಾಸಗತ್ಯೋಃ' ಎಂಬ ಧಾತುವಿನ ಬಲದಿಂದ ನಿರ್ವಚನ ಮಾಡಿದರೆ ಮೂಲಾಶ್ರಯ ಎಂಬ ಅರ್ಥಸಿಗುತ್ತದೆ. ಪರಮಾಣು ಮಾತ್ರವೆ ಇದ್ದು ಅದರಿಂದ ಪೃಥಿವಿ ಎಂದೂ ಉಂಟಾಗದಿದ್ದರೆ, ಪರಮಾಣುಗಳ ಸಮೂಹವೆ ಪ್ರಪಂಚವೆನ್ನುವುದಾದರೆ, ಪರಮಾಣುಸಮೂಹ ತನ್ನಿಂದ ತಾನೇ ಹುಟ್ಟಲಾರದು. ಬೇರೆಬೇರೆಯಾಗಿರುವ ಪರಮಾಣುಗಳಿಂದ ಅವುಗಳ ಸಮೂಹ ಹುಟ್ಟಬೇಕು. ಆದರೆ ಬೇರೆಬೇರೆಯಾಗಿ ಪರಮಾಣುಗಳು ಸದಾ ಇರುವುದರಿಂದ ಸಮೂಹ ಸದಾ ಇರಬೇಕಾದೀತು. ಅದಕ್ಕೆ ನಾಶವಿಲ್ಲವೆಂದಾದೀತೆಂದು ಬ್ರಹ್ಮ ಸೂತ್ರ(೨-೨-೧೯) ದಲ್ಲಿ ಹೇಳಿದೆ. ಆದರಿಂದ ಪರಮಾಣು ಸಮೂಹ ಮೂಲಾಶ್ರಯವೆನ್ನುವಂತಿಲ್ಲ. ಪರಮಾಣುಗಳಿಂದ ಪೃಥಿವಿ ಉಂಟಾಗುವ ಪಕ್ಷದಲ್ಲಿ ಪರಮಾಣುಗಳನ್ನು ಮೂಲಾಶ್ರಯವೆಂದು ಒಪ್ಪಿದರೂ ಅವು ಆಶ್ರಯವೆನಿಸುವುದು ಅವಿದ್ಯೆಯಿಂದ, ಅಂದರೆ 'ಅ'ನಾಮಕ ಪರಮಾತ್ಮನ 'ವಿದ್ಯೆ'ಯಿಂದ ಜ್ಞಾನದಿಂದ ಅವನ ಇಚ್ಛಾಮಾತ್ರದಿಂದ, ಕಲ್ಪಿತವಾಗಿವೆ. ಸಂಕಲ್ಪಿತ ವಾಗಿವೆ. ಹಾಗೆ ಪರಮಾತ್ಮನ ಸಂಕಲ್ಪವಿದೆ. ಪರಮಾಣುಗಳಿಗೆ ಮೂಲಾಶ್ರಯತ್ವ ಹರಿಯ ಸಂಕಲ್ಪಕ್ಕೆ ಅಧೀನವಾದ್ದರಿಂದ ವಸ್ತುತಃ ಮೂಲಾಶ್ರಯ ಹರಿಯೇ.

ಇಲ್ಲಿ ಪರಮಾಣುಗಳು ಅನಿರ್ವಚನೀಯವಾದ ಅವಿದ್ಯೆಯಿಂದ ಕಲ್ಪಿತವಾದ್ದರಿಂದ ಮಿಥ್ಯೆ, ಅನಿತ್ಯ. ಮಿಥ್ಯೆಯಾದ ಪರಮಾಣುವಿನ ವಿಕಾರವಾದ್ದರಿಂದ ಪೃಥಿವಿಯೂ

ಮಿಥ್ಯೆ ಅಥವಾ ಅನಿತ್ಯ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ಪರಮಾಣುವಿನಂತೆ ಪೃಥಿವಿಯೂ ಅವಿದ್ಯಾಕಲ್ಪಿತವಾದ್ದರಿಂದಲೇ ಮಿಥ್ಯೆ ಎನ್ನಲು ಬರುವಾಗ ಪರಮಾಣುವಿನವರೆಗೆ ಹೋಗಬೇಕಾಗಿರಲಿಲ್ಲ. ಮತ್ತು ಪೃಥಿವಿ ಮಿಥ್ಯೆಯಾಗಲಿ ಅನಿತ್ಯವಾಗಲಿ, ಅದರಿಂದೇನು? ಶರೀರಕ್ಕೆ ಮೇನೆ ಭಾರವಾಗುವುದು ಅದರಿಂದ ಶ್ರಮ ಉಂಟಾಗುವುದು ತಪ್ಪುವುದಿಲ್ಲ. ಶ್ರಮವನ್ನೇ ಅವಿದ್ಯಾಕಲ್ಪಿತ. ಮಿಥ್ಯೆ ಎಂದೇಕೆ ಹೇಳಬಾರದು?

ವೀರರಾಘವವ್ಯಾಖ್ಯಾನದಲ್ಲಿ 'ಅವಿದ್ಯೆ ಎಂದರೆ ಪ್ರಕೃತಿ, ಪ್ರಕೃತಿ ಪರಿಣಾಮ ರೂಪವಾದ ಪರಮಾಣುವೆಂದರೆ ಭೂತಸೂಕ್ಷ್ಮ. ಅದರಿಂದ ಪೃಥಿವಿಯಾದುದರಿಂದ ಅದು ಅನಿತ್ಯ' ಎಂದಿದೆ. ಆದರೆ ಪ್ರಕೃತಿ ನಿತ್ಯತಾನೆ? ಪೃಥಿವಿ ನಿತ್ಯವಾಗದಿದ್ದರೇನು? ಪ್ರಕೃತಿನಿತ್ಯವಾದ್ದರಿಂದ ಪ್ರಕೃತಿಪರಿಣಾಮವಾದ ಶರೀರಕ್ಕೂ ನಿತ್ಯತ್ವವನ್ನು ಸತ್ಕಾರ್ಯವಾದಿಗಳು ಹೇಳಬೇಕು. ಅವರ ವಾದದಲ್ಲಿ ಕಾರ್ಯಕಾರಣಗಳಿಗೆ ಅತ್ಯಂತ ಅಭೇದವೇ ಇದೆ. ಹೀಗಾಗಿ ದೇಹಾತ್ಮವಿವೇಕ ಶಕ್ಯವಾಗುವುದಿಲ್ಲ. ದೇಹಾತ್ಮವಿವೇಕವನ್ನು ಹೇಳುವುದೇ ಜಡಭರತನ ಉದ್ದೇಶವೆಂದು ಇವರು ಹೇಳುತ್ತಿದ್ದಾರೆ.

ಶ್ರೀಮದಾಚಾರ್ಯರು ಹೇಳುತ್ತಾರೆ, ಇಲ್ಲಿ ಅವಿದ್ಯೆ ಎಂದರೆ ಅನಿರ್ವಚನೀಯ ಅವಿದ್ಯೆಯೂ ಅಲ್ಲ, ಪ್ರಕೃತಿಯೂ ಅಲ್ಲ. 'ಅ-ವಿದ್ಯೆ' 'ಅ'ನಾಮಕನಾದ ಪರಮಾತ್ಮನ ಜ್ಞಾನ. ಪರಮಾಣುಪುಂಜವಾದವನ್ನು ಬ್ರಹ್ಮಸೂತ್ರದಲ್ಲಿ ನಿರಾಕರಿಸಿರುವುದರಿಂದ ಪರಮಾಣುವಿನಿಂದ ಪೃಥಿವಿ ಉತ್ಪನ್ನವಾಗಿದೆ ಎನ್ನಬೇಕು. ಆಗ ಪೃಥಿವಿಗೂ ಮೂಲ ಆಶ್ರಯ ಪರಮಾಣು. ಅದೇ ಎಲ್ಲ ಕ್ರಿಯೆಗಳು ನಡೆಯಲೂ ಮೂಲಾಶ್ರಯ. ವಿಷ್ಣುವಲ್ಲ ಎಂಬ ಆಕ್ಷೇಪಕ್ಕೆ ಉತ್ತರ, 'ಅವಿದ್ಯಯಾ ಮನಸಾ ಕಲ್ಪಿತಃ' ಎಂದು. ಅವಿದ್ಯೆ ಎಂದರೆ ಪರಮಾತ್ಮನ ಜ್ಞಾನ. ಮನಸ್ಸೆಂದರೆ ಅವನ ಇಚ್ಛೆ. ಕಲ್ಪಿತ ಎಂದರೆ ಸಂಕಲ್ಪಿತ. ಪರಮಾತ್ಮನ ಜ್ಞಾನದಿಂದ ಅವನ ಇಚ್ಛೆಯಿಂದ ಪರಮಾಣುಗಳು ಮೂಲಕಾರಣ ಮೂಲ ಆಶ್ರಯವಾಗಿರಲಿ ಎಂದು ಸಂಕಲ್ಪಿತವಾಗಿದೆ. ಅದರಿಂದ ಅವು ಮೂಲಾಶ್ರಯ, ಹೊರತು ಸ್ವತಃ ಅಲ್ಲ. ಹೀಗಾಗಿ ಈ ಮೂಲಾಶ್ರಯತ್ವಪರಮಾತ್ಮನ ಇಚ್ಛಾಧೀನವಾಗಿರುವುದರಿಂದ ಪರಮಾತ್ಮನೇ ಮೂಲಾಶ್ರಯ' ಎಂದು.

ಪರಮಾಣುಮಾತ್ರಾಯಾಃ ಪೃಥಿವ್ಯಾ ಅಯುಕ್ತತ್ವಾತ್ ಪರಮಾಣವೋಽ-
ಪ್ಯಸ್ಯ ವಿದ್ಯಯೈವಾಧಾರತ್ವೇನ ಕಲ್ಪಿತಾಃ ॥

ಪರಮಾಣು ಸಮೂಹವೇ ಪೃಥಿವಿ ಎನ್ನುವುದು ಅಯುಕ್ತವಾದ್ದರಿಂದ ಪರಮಾಣುಗಳಿಂದ ಪೃಥಿವಿ ಉತ್ಪನ್ನವಾಯಿತೆನ್ನಬೇಕು. ಆಗ ಪರಮಾಣುಗಳು

ಮೂಲಾಶ್ರಯವೆನಿಸಿದರೂ ಆ ಪರಮಾಣಗಳೂ ಪರಮಾತ್ಮನ ಜ್ಞಾನದಿಂದಲೇ 'ಮೂಲಾಶ್ರಯವಾಗಿರಲಿ' ಎಂದು ಸಂಕಲ್ಪಿತವಾಗಿವೆ. ಹೀಗಾಗಿ ಪರಮಾತ್ಮನೇ ಮೂಲಾಶ್ರಯ.

* * *

ದ್ರವ್ಯ ಸ್ವಭಾವ ಅಂತಃಕರಣ ಕಾಲ ಕರ್ಮ ಎಂದು ಎಲ್ಲ ಹೆಸರುಗಳಿಂದಲೂ ಕರೆಸಿಕೊಳ್ಳುವ ಚೇತನಪ್ರಕೃತಿಯೂ ಪರಮಾತ್ಮನ ಅಧೀನಳಾದ್ದರಿಂದ ಪರಮಾತ್ಮನೇ ಮೂಲಕಾರಣ ಎಂದು ಜಡಭರತ ರಹೂಗಣರಾಜನಿಗೆ ಉಪದೇಶಿಸುತ್ತಾನೆ.

ಏವಂ ಕೃಶಸ್ಥೂಲಮಣುರ್ಬೃಹದ್ ಯದ್
ಅಸಚ್ಚ ಸಜ್ಜೀವಮಜೀವಮನ್ಯತ್ ।
ದ್ರವ್ಯಸ್ವಭಾವಾಶಯಕಾಲಕರ್ಮ
ನಾಮ್ನಾऽಜಯಾऽವೈಹಿ ಕೃತಂ ದ್ವಿತೀಯಮ್ ॥ ೧೦ ॥

ಜ್ಞಾನಂ ವಿಶುದ್ಧಂ ಪರಮಾರ್ಥಮೇಕ-
ಮನಂತರಂ ನಬಹಿರ್ಬ್ರಹ್ಮ ಸತ್ಯಮ್ ।
ಪ್ರತ್ಯಕ್ ಪ್ರಶಾಂತಂ ಭಗವಚ್ಛಬ್ದವಾಚ್ಯಂ
ಯದ್ ವಾಸುದೇವಂ ಕವಯೋ ವದಂತಿ ॥ ೧೧ ॥

ಹೀಗೆ ಕೃಶ ಸ್ಥೂಲ ಅಣು ಮಹತ್ತು ಅಮೂರ್ತ ಮೂರ್ತ ಚೇತನ ಜಡ ಮುಂತಾಗಿ ವಿಷ್ಣುವಿಗಿಂತ ಅನ್ಯವಾದ ವಸ್ತುವೆಲ್ಲವೂ ದ್ರವ್ಯ ಸ್ವಭಾವ ಅಂತಃಕರಣ ಕಾಲ ಕರ್ಮಗಳಿಗೆ ಅಭಿಮಾನಿನಿಯಾಗಿದ್ದು ಅವುಗಳ ಹೆಸರಿನಿಂದ ಕರೆಸುವ, ಭಗವಂತನ ಅಧೀನಳಾದ ಚೇತನಪ್ರಕೃತಿಯಿಂದಲೇ ಉತ್ಪನ್ನವಾಗಿವೆ, ಅಸ್ವತಂತ್ರವಾಗಿವೆ. ಸೃಷ್ಟಿಕರ್ತನಾದ ಬ್ರಹ್ಮನೂ ಹೀಗೇ ಪ್ರಕೃತಿಯಿಂದ ಹುಟ್ಟಿದ್ದಾನೆ. ಪ್ರಕೃತಿ ಹರಿಯ ಅಧೀನ ಎಂದ ಮೇಲೆ ಮೂಲಕಾರಣ ಹರಿಯೆ.

ಹರಿ ಯಾರಿಗೂ ಅಧೀನನಲ್ಲ. 'ಭಗವಾನ್' ಎಂಬ ಶಬ್ದದಿಂದ ಕರೆಸಿಕೊಳ್ಳುವ ಆ ವಾಸುದೇವ ಶುದ್ಧಜ್ಞಾನಶರೀರಿ. ಜಡಶರೀರ ಅವನಿಗಿಲ್ಲ. ಸರ್ವೋತ್ತಮ. ಅವನಿಗೆ ಸಮಾನರಿಲ್ಲ. ಸ್ವಗತಭೇದವರ್ಜಿತ. ಎಲ್ಲರ ಶರೀರದಲ್ಲಿ ಅಂತರ್ಗತ. ಎಲ್ಲರಿಗೆ ಹೊರಗೂ ಇದ್ದಾನೆ 'ಸತ್ ತಿ ಯಂ' 'ಸತ್ಯಂ' ಮುಕ್ತಾಮುಕ್ತನಿಯಾಮಕ. ಸರ್ವ ಜೀವರ ಒಳಗಿದ್ದಾನೆ. ಉತ್ಕೃಷ್ಟಸುಖಪೂರ್ಣನಾಗಿದ್ದಾನೆ ಎಂದು ಜ್ಞಾನಿಗಳು ಹೇಳುತ್ತಾರೆ. ಇಂಥ ಪರಮಾತ್ಮ ಅನ್ಯರಿಗೆ ಅಧೀನನೆನಿಸುವುದು ಅಸಂಭಾವಿತ.

ಇಲ್ಲಿ ಬೇರೆ ವ್ಯಾಖ್ಯಾನಗಳ ಪ್ರಕಾರ ಜಡಭರತ 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ಎನ್ನುತ್ತಿದ್ದಾನೆ. ವೀರರಾಘವವ್ಯಾಖ್ಯಾನದಲ್ಲಿ 'ಕೃಶತ್ವಸ್ಥೂಲತ್ವಾದಿಗಳು ದೇಹದ

ಗುಣಧರ್ಮಗಳು. ಆತ್ಮ ಜ್ಞಾನಸ್ವರೂಪ. ಅವನಿಗೂ ಆತ್ಮ ಪರಮಾತ್ಮ' ಎಂದಿದ್ದಾರೆ. ಈ ಎರಡೂ ವ್ಯಾಖ್ಯಾನಗಳು ದೇಹಾತ್ಮವಿವೇಕವನ್ನು ಹೇಳಲು ಹೊರಟಿವೆ. ಇದು ಪ್ರಕೃತದಲ್ಲಿ ಅನುಪಯುಕ್ತ. ಏಕೆಂದರೆ ಹಿಂದಿನ ಅಧ್ಯಾಯ ಪ್ರಾರಂಭದಲ್ಲಿ,

'ನ ಸೂರಯೋ ಹಿ ವ್ಯವಹಾರಮೇನಂ ತತ್ತ್ವಾವಮರ್ಶೇನ ಸಹಾಮನಂತಿ'

'ತತ್ತ್ವವಿಮರ್ಶೆಯಿಂದ ಸಿದ್ಧವಾಗಿರುವ ಹರಿಯ ಸ್ವತಂತ್ರಕರ್ತೃತ್ವದೊಂದಿಗೆ ಅದಕ್ಕೆ ಸಮಾನವಾಗಿ ಜೀವನ ಪರಾಧೀನಕರ್ತೃತ್ವವನ್ನೂ ವ್ಯವಹರಿಸಲು ಜ್ಞಾನಿಗಳು ಒಪ್ಪುವುದಿಲ್ಲ ಎಂದು ಜಡಭರತ ಹೇಳಿದ್ದಕ್ಕೆ ರಹೂಗಣರಾಜ 'ಜೀವಕರ್ತೃತ್ವವೂ ಅಬಾಧಿತವಾಗಿರುವಾಗ ಏಕೆ ವ್ಯವಹಾರ ಕೂಡದು? 'ದೃಶ್ಯಮಾನಂ ಕ್ರಿಯಾಫಲಂ ಸದ್ ವ್ಯವಹಾರಮೂಲಂ'(೫.೧೨.೪) ಎನ್ನುತ್ತಾನೆ. ಅದಕ್ಕೆ ಉತ್ತರವಾಗಿ ಜೀವಕರ್ತೃತ್ವವನ್ನು ಅಬಾಧಿತವೆಂದೇ ಒಪ್ಪಿಕೊಂಡು 'ಪರಮಾತ್ಮಕರ್ತೃತ್ವದಂತೆ ಸ್ವತಂತ್ರವಲ್ಲ' ವೆಂದೇ ಪರಿಹಾರ ನೀಡಲು ಬರುವಾಗ ಜೀವಕರ್ತೃತ್ವವನ್ನು ಬಾಧಿತವೆಂದು ಮಿಥ್ಯೆ ಎಂದು ಹೇಳುವ ಆವಶ್ಯಕತೆ ಇಲ್ಲ. ವೀರರಾಘವವ್ಯಾಖ್ಯಾನದಲ್ಲಿ ಅದನ್ನು ಅಬಾಧಿತವೆಂದೇ ಒಪ್ಪಿ 'ಸ್ವಾಭಾವಿಕವಲ್ಲ, ದೇಹಾತ್ಮೈಕ್ಯಾಧ್ಯಾಸ ಪ್ರಯುಕ್ತವಾಗಿದೆ' ಎಂದಿದ್ದಾರೆ. ಅದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ, ಸೃಷ್ಟಿಕರ್ತನೆಂದು ಪ್ರಸಿದ್ಧನಾದ ಚತುರ್ಮುಖ ಬ್ರಹ್ಮನಾಗಲಿ, ಅವನಿಗೂ ಜನನಿಯಾದ ಚೇತನ ಪ್ರಕೃತಿಯಾಗಲಿ ಸ್ವತಂತ್ರರಲ್ಲ. ಸ್ವತಂತ್ರ ಹರಿಯೊಬ್ಬನೆ ಅದರಿಂದ ಅವನೆ ಮೂಲಕಾರಣ, ಮೂಲಾಶ್ರಯ ಎಂದು.

ಏವಂ ಸರ್ವಂ ತಥಾ ಪ್ರಕೃತ್ಯೈವ ಕಲ್ಪಿತಂ ವಿಷ್ಣೋರನ್ಯತ್ ।
ಏವಂ ಪ್ರಕೃತ್ಯಾಧಾರಃ ಸ್ವಯಮನನ್ಯಾಧಾರೋ ವಿಷ್ಣುರೇವ ।
ಅತಃ ಸರ್ವಶಬ್ದಾಶ್ಚ ತಸ್ಮಿನ್ನೇವ ।

ರಾಜಾ ಗೋಪ್ತಾಽಽಶ್ರಯೋ ಭೂಮಿಃ ಶರಣಂ ಚೇತಿ ಲೌಕಿಕಃ ।
ವ್ಯವಹಾರೋ ನ ತತ್ಸತ್ಯಂ ತಯೋರ್ಬಾಹ್ಯಾಽಽಶ್ರಯೋ ವಿಭುಃ ॥

ಗೋಪ್ತಾ ಚ ತಸ್ಯ ಪ್ರಕೃತಿಸ್ತಸ್ಯಾ ವಿಷ್ಣುಃ ಸ್ವಯಂ ಪ್ರಭುಃ ।
ತವ ಗೋಪ್ತ್ರೀ ತು ಪೃಥಿವೀ ನ ತ್ವಂ ಗೋಪ್ತಾ ಕ್ಷಿತೇಃ ಸ್ಮೃತಃ ॥

ಅತಃ ಸರ್ವಾಶ್ರಯಶ್ಚೈವ ಗೋಪ್ತಾ ಚ ಹರರೀಶ್ವರಃ ।
ಸರ್ವಶಬ್ದಾಭಿಧೇಯಶ್ಚ ಶಬ್ದವೃತ್ತೇರ್ಹಿ ಕಾರಣಮ್ ॥

ಸರ್ವಾಂತರಃ ಸರ್ವಬಹಿರೇಕ ಏವ ಜನಾರ್ದನಃ ।
ಶಿರಆಧಾರತಾ ಯದ್ವದ್ ಗ್ರೀವಾಯಾಸ್ತದ್ವದೇವ ತು ।
ಆಶ್ರಯತ್ವಂ ಚ ಗೋಪ್ತೃತ್ವಂ ಅನ್ಯೇಷಾಮುಪಚಾರತಃ ॥ ಇತಿ ಚ ।

'ಏವಂ' ಎಂದರೆ ಪರಮಾಣುಗಳಿಗೆ ಮೂಲಕಾರಣತ್ವವು ಹೇಗೆ ಹರಿಯ ಅಧೀನವೋ ಹಾಗೇ ವಿಷ್ಣುವಿಗಿಂತ ಬೇರೆಯಾದವು ಕೃಶ ಸ್ಥೂಲ ಮುಂತಾದುವೆಲ್ಲವೂ ಉಂಟಾಗುವುದು ಚತುರ್ಮುಖನಿಂದ ಮತ್ತು ಚೇತನಪ್ರಕೃತಿಯಿಂದಲೇ ಎನ್ನುವುದು ಮೊದಲನೇ ಶ್ಲೋಕದ ಅರ್ಥ. ಎರಡನೇ ಶ್ಲೋಕದಲ್ಲಿ 'ಯದ್ ವಾಸುದೇವಂ ವದಂತಿ ತೇನ ಕೃತಾಮಜಾಮವೈಹಿ' ಎಂದು ಅಧ್ಯಾಹಾರ ಮಾಡಿ ಅನ್ವಯಿಸಬೇಕು. ಅದರಿಂದ ವಿಷ್ಣು ಪ್ರಕೃತಿಗೂ ಆಧಾರ ಎಂದಂತಾಯಿತು. 'ಪರಮಾರ್ಥಮೇಕಂ' ಎಂದರೆ ಸ್ವತಃ ಇನ್ನೊಬ್ಬರನ್ನು ಆಶ್ರಯಿಸದವನು ವಾಸುದೇವನೊಬ್ಬನೆ. ಆದರಿಂದ ಮೂಲಾಶ್ರಯ ವಿವಕ್ಷಿ ಆವಶ್ಯಕವೆಂದು ಸಮರ್ಥಿಸಿದ್ದರಿಂದ ರಾಜ ರಕ್ಷಕ ಪೃಥೀ ಆಶ್ರಯ ಮುಂತಾದ ಶಬ್ದಗಳೆಲ್ಲವನ್ನೂ ಮೂಲಾಶ್ರಯ ವಿವಕ್ಷೆಯಿಂದ ವಿಷ್ಣುವಿನಲ್ಲಿಯೇ ಜ್ಞಾನಿಗಳು ಪ್ರಯೋಗಿಸುತ್ತಾರೆ ಎನ್ನುವುದು ಸಿದ್ಧವಾಗುತ್ತದೆ ಎಂದು ಎರಡನೇ ಶ್ಲೋಕದ ಕೊನೆಯಲ್ಲಿ ಒಂದು ವಾಕ್ಯವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು.

'ರಾಜನು ರಕ್ಷಕ, ಆಶ್ರಯ, ಭೂಮಿಯು ವಾಸಸ್ಥಾನ ಎಂದು ಮುಂತಾಗಿ ಲೌಕಿಕವ್ಯವಹಾರವಿದೆ. ಅದಕ್ಕೆ ಮುಖ್ಯವಾಚ್ಯವಿಲ್ಲ. ಏಕೆಂದರೆ ರಾಜ ಮತ್ತು ಭೂಮಿಗಳಿಗೂ ಚತುರ್ಮುಖನು ರಕ್ಷಕನೂ ಆಶ್ರಯನೂ ಆಗಿದ್ದಾನೆ. ಅವನಿಗೂ ಮಹಾಲಕ್ಷ್ಮಿ ರಕ್ಷಕಳು ಮತ್ತು ಆಶ್ರಯಳು. ಅವಳಿಗೂ ರಕ್ಷಕ ಆಶ್ರಯ ಸಾಕ್ಷಾತ್ ವಿಷ್ಣು. ರಾಜನೆ, ನಿನಗೆ ರಕ್ಷಕಳು ಆಶ್ರಯಳು ಪೃಥಿವಿ ಹೊರತು ನೀನು ಪೃಥಿವಿಗೆ ರಕ್ಷಕ ಆಶ್ರಯನಲ್ಲ. ಅದರಿಂದ ಎಲ್ಲರಿಗೂ ಆಶ್ರಯ ರಕ್ಷಕನೆನಿಸಿರುವ ಸರ್ವೇಶ್ವರನಾದ ಹರಿಯೇ ರಾಜ ಪೃಥಿವಿ ಮುಂತಾದ ಎಲ್ಲ ಶಬ್ದಗಳಿಗೂ ಮುಖ್ಯವಾಚ್ಯ. ಮತ್ತು ರಾಜ ಪೃಥಿವಿ ಮುಂತಾದವರಲ್ಲಿ ಶಬ್ದಪ್ರವೃತ್ತಿನಿಮಿತ್ತವಾದ ರಾಜತ್ವ ಪೃಥಿವೀತ್ವ ಮುಂತಾದವು ಇರಲು ಕಾರಣನೂ ಹರಿಯೇ ಆದ್ದರಿಂದ ರಾಜ ಪೃಥಿವೀ ಮುಂತಾದಶಬ್ದಗಳಿಗೆ ಅವನೇ ಮುಖ್ಯವಾಚ್ಯ. 'ನಬಹಿಃ' ಎಂದರೆ ಎಲ್ಲರೊಳಗೆ ಎಲ್ಲರಿಗಿಂತಲೂ ಒಳಗೆ ನಿಯಾಮಕನಾಗಿರುವವನು, ಹರಿ. 'ಬ್ರಹ್ಮ' ಎಂದರೆ ಎಲ್ಲಕ್ಕಿಂತಲೂ ಹೊರಗೆ ಇರುವ ಅಪರಿಮಿತ ಪರಿಮಾಣಉಳ್ಳವನು, ಆ ಜನಾರ್ದನನೊಬ್ಬನೆ. ಬೇರೆ ಕಡೆ ಆಶ್ರಯ ಮುಂತಾದ ಶಬ್ದವ್ಯವಹಾರ ಮುಖ್ಯವಲ್ಲ ಏಕೆಂದರೆ ತಲೆಗೆ ಕುತ್ತಿಗೆ ಆಧಾರ ಎನ್ನುವುದು ಹೇಗೋ ಹಾಗೇ ಆಶ್ರಯತ್ವ ರಕ್ಷಕತ್ವಗಳು ಬೇರೆಯವರಲ್ಲಿ ಔಪಚಾರಿಕವಾಗಿ ಅಮುಖ್ಯವಾಗಿರುತ್ತದೆ' ಎಂದೂ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ದ್ವಾದಶೋಽಧ್ಯಾಯಃ ॥

ಅಧ್ಯಾಯ-೧೩

ಅಧ್ಯಾಯಸಾರಾಂಶ

ಧನಸಂಪಾದನೆಯಲ್ಲಿಯೇ ಆಸಕ್ತರಾದ ವರ್ತಕರು ದಾರಿ ತಪ್ಪಿ ಅರಣ್ಯಮಾರ್ಗದಲ್ಲಿ ನಡೆಯುವಾಗ, ಅವರಿಗೆ ಸಮರ್ಥನಾದ ನಾಯಕನಿಲ್ಲದಿದ್ದರೆ ದರೋಡೆಕೋರರು ಬಂದು ಹಣ ದೋಚುತ್ತಾರೆ. ಆಡುಕುರಿಗಳನ್ನು ನರಿತೋಳಗಳು ಒಯ್ಯುತ್ತವೆ. ಬಳ್ಳಿಹುಲ್ಲುಪೊದೆಗಳಿಂದ ಮಾರ್ಗವೂ ದುರ್ಗಮ. ರಕ್ತ ಹೀರುವ ಕಾಡುಸೊಳ್ಳೆಗಳ ಕಾಟ. ಮೇಲೆ ಆಕಾಶದಲ್ಲಿ ಕ್ಷಣಿಕವಾಗಿ ಗಂಧರ್ವನಗರಗಳು ಕಂಡು ಬರುತ್ತವೆ. ರಾತ್ರಿಯ ಕಗ್ಗತ್ತಲಲ್ಲಿ ಕೊಳ್ಳಿ ಪಿಶಾಚಿಗಳು ಓಡಾಡುತ್ತವೆ. ಸುಂಟರಗಾಳಿಯಿಂದ ಧೂಳೆದ್ದು ಏನೂ ಕಾಣಿಸದಂತಾಗುತ್ತದೆ. ಕಣ್ಣಿಗೆ ಕಾಣಿಸದ ಜೀರುಂಡೆಗಳ ಕರ್ಕಶಶಬ್ದ. ಗೂಬೆಗಳ ಭಯಂಕರ ಶಬ್ದ. ಹಸಿವಾದಾಗ ಹಣ್ಣು ಬೇಕೆಂದರೆ ಸಿಗುವುದು ಬರಿ ಪಾಪವೃಕ್ಷಗಳು. ನೀರು ಬೇಕೆಂದರೆ ಮರು ಮರೀಚಿಕೆಯೇ ನೀರಿಲ್ಲದ ನದೀಯೇ ಕಾಣುತ್ತದೆ. ಉಣಲು ಅನ್ನವಿಲ್ಲದೆ ತಂದೆ ಮಗನನ್ನು ಮಗ ತಂದೆಯನ್ನು ಪೀಡಿಸುತ್ತಾನೆ. ಕಾಳ್ಗಿಚ್ಚನ್ನು ಪ್ರವೇಶಿಸುತ್ತಾನೆ. ಯಕ್ಷರು ಬಂದು ಪ್ರಾಣವನ್ನೇ ಕಿತ್ತುಕೊಳ್ಳುತ್ತಾರೆ. ಮುಳ್ಳು ಕಲ್ಲುಗಳಿಂದ ದುರ್ಗಮವಾದ ದಾರಿಯಿಂದ ಗುಡ್ಡವೇರಲಾಗದೆ ಆತ ಹತಾಶನಾಗುತ್ತಾನೆ. ಹೆಬ್ಬಾವಿನ ಬಾಯೊಳಗೆ ಸೇರಿ ತಾನು ಎಲ್ಲಿದ್ದೇನೆಂಬುದನ್ನೇ ಮರೆತು ಜ್ಞಾನಶೂನ್ಯನಾಗುತ್ತಾನೆ. ವಿಷದ ಹಾವು ಕಚ್ಚಿದರೆ ಕಣ್ಣು ಮಂಜಾಗಿ ದಾರಿಗಾಣದೆ ಕತ್ತಲೆ ಬಾವಿಯಲ್ಲಿ ಬೀಳುತ್ತಾನೆ. ಜೇನಿನಾಸೆಯಿಂದ ಜೇನುಗೂಡಿಗೆ ಕೈಹಾಕಿ ಹುಳುಗಳಿಂದ ಕಚ್ಚಿಸಿ ಕೊಳ್ಳುತ್ತಾನೆ. ಕಷ್ಟದಿಂದ ಸಂಗ್ರಹಿಸಿದ ಜೇನನ್ನು ಇನ್ನೊಬ್ಬ ಅಪಹರಿಸುತ್ತಾನೆ. ಕೆಲವೊಮ್ಮೆ ಎಲ್ಲ ದುಃಖ ಮರೆತು ಬಳ್ಳಿಗಳ ಹಾಸಿಗೆ ಮೇಲೆ ಮಲಗಿ ಹಕ್ಕಿಗಳ ಧ್ವನಿಕೇಳಿ ಮೈಮರೆಯುತ್ತಾನೆ. ವನ್ಯಮೃಗಗಳನ್ನು ಹಿಡಿಯಲು ಬಯಸಿ ಸಿಂಹಗಳನ್ನು ಹಿಡಿಯಲು ಧೈರ್ಯ ಸಾಲದೆ. ಬಕಪಕ್ಷಿ ಗಿಡುಗ ಮುಂತಾದುವನ್ನು ಹಿಡಿದು ಸಾಕುತ್ತಾನೆ. ಒಂದು ದಿನ ಅವು ಹಾರಿ ಹೋಗುತ್ತವೆ. ಹಂಸಗಳನ್ನು ಸಾಕುವುದೆಂದರೆ ಅದು ಆಕರ್ಷಕ

ವೆನಿಸುವುದಿಲ್ಲ. ಕಪಿಚೇಷ್ಟೆಯಿಂದ ಆಕರ್ಷಿತನಾಗಿ ಕಪಿಗಳನ್ನು ಸಾಕುತ್ತಾನೆ. ಅವುಗಳೊಂದಿಗೆ ಆಟದಲ್ಲಿ ತಲ್ಲೀನನಾಗುತ್ತಾನೆ. ಕಪಿಗಳು ಮಿತಿಮೀರಿದ ಸ್ತ್ರೀಸಂಗದಿಂದ ಬಲಗುಂದಿ ಪ್ರಪಾತದಲ್ಲಿ ಬೀಳುತ್ತವೆ. ಆನೆಗಳ ಭಯದಿಂದ ಮರದ ಬೀಳಲುಗಳನ್ನು ಹಿಡಿದು ಹೇಗೋ ಮೇಲೆ ಬರುತ್ತವೆ. ತಮ್ಮ ಗುಂಪಿನ ಬೇರೆ ಕಪಿಗಳೊಂದಿಗೆ ಸೇರುತ್ತವೆ. ವರ್ತಕನು ಇನ್ನೊಬ್ಬನೊಡನೆ ಹಣದ ವ್ಯವಹಾರದಲ್ಲಿ ವೈಮನಸ್ಯ ಹೊಂದಿದ್ದರೂ ವ್ಯವಹಾರ ಮುಂದುವರಿಸುತ್ತ ನಾನಾ ಬಾಧೆಗೊಳಗಾಗಿ ಮೃತಪ್ರಾಯನಾಗಿರುತ್ತಾನೆ. ಕಳ್ಳಕಾಕರು ಹಣವನ್ನು ಅಪಹರಿಸಿದರೆ ಅದನ್ನು ಹಾಗೇ ಬಿಟ್ಟು ಬೇರೆ ಹಣಗಳಿಸುತ್ತಾನೆ. ಇಷ್ಟು ಕಷ್ಟದ ಕಾಡು ದಾರಿಯ ಕೊನೆ ಮುಟ್ಟಲು ಉಪಾಯವನ್ನು ಅವನು ಕಂಡುಕೊಳ್ಳುವುದಿಲ್ಲ.

ಸಂಸಾರದ ಗೊಂಡಾರಣ್ಯದಲ್ಲಿ ಸುತ್ತುವ ಜೀವನ ಪಾಡೂ ಹೀಗೆಯೆ. ವಿಷಯಭೋಗಸಂಪಾದನೆಯಲ್ಲಿಯೇ ಅವನಿಗೆ ಆಸಕ್ತಿ. ಮೋಕ್ಷಮಾರ್ಗವನ್ನು ತುಳಿಯದೆ ದಾರಿತಪ್ಪಿ ಸಂಸಾರದಲ್ಲೇ ಸುತ್ತುತ್ತಾನೆ. ಸರಿಯಾದ ಗುರುವಿನ ಅನುಗ್ರಹವಿಲ್ಲದಿದ್ದರೆ ಆರು ಇಂದ್ರಿಯಗಳೆಂಬ ದರೊಡೆಕೋರರು ಜೀವ ಸಂಪಾದಿಸುವ ಪುಣ್ಯವನ್ನು ಕಸಿದುಕೊಳ್ಳುತ್ತಾರೆ. ವಿಷಯಭೋಗದಲ್ಲಿ ವ್ಯಯಮಾಡುತ್ತಾರೆ. ನರಿಗಳಂತೆ ಉಪಾಯವಾಗಿ ಬಂಧುಬಾಂಧವರು ಬಳಿಗೆ ಬಂದು ತೋಳಗಳಂತೆ ಸಂಪತ್ತನ್ನು ಒಯ್ಯುತ್ತಾ ಕಾಡುದಾರಿಯಲ್ಲಿ ಬಳ್ಳಿ ಹುಲ್ಲು ಪೊದೆಗಳಂತೆ ಗೃಹಸ್ಥಾಶ್ರಮದಲ್ಲಿ ಕಾಮ್ಯಕರ್ಮಗಳ ಒತ್ತಡ. ರಕ್ತಹೀರುವ ಸೊಳ್ಳೆಗಳಂತೆ ಹಣವನ್ನು ಕದಿಯುವ ಕಳ್ಳರು. ಗಂಧರ್ವನಗರದಂತೆ ಕಾಣುವ ವಿಚಿತ್ರಮೋಡಗಳಂತೆ ಕರ್ಮಜನ್ಯವಾದ ನಾನಾ ಶರೀರಗಳು ಜೀವನಿಗೆ ಬಂದು ಹೋಗುತ್ತವೆ. ಬೆಂಕಿಗಾಗಿ ಕೊಳ್ಳಿಪಿಶಾಚಿಗಳ ಬಳಿಗೆ ಹೋದರೆ ಅವು ಪ್ರಾಣ ತೆಗೆಯುವಂತೆ ಹಣಕ್ಕಾಗಿ ದುಷ್ಟಧನಿಕರ ಬಳಿಗೆ ಹೋದರೆ ಅವರು ಸರ್ವಸ್ವವನ್ನೇ ಅಪಹರಿಸುತ್ತಾರೆ. ದುಷ್ಟವೇಶ್ಯಾಸ್ತ್ರೀಯರು ಸುಂಟರಗಾಳಿಯಂತೆ ಬಂದು ರಾಗ ದ್ವೇಷಾದಿಗಳನ್ನು ಹುಟ್ಟಿಸಿ. ಕರ್ಮಸಾಕ್ಷಿಗಳಾದ ದಿಗ್ದೇವತೆಗಳನ್ನು ಕಣ್ಣಿಗೆ ಕಾಣಿಸದಂತೆ ಮಾಡಿದಾಗ ಈತ ನಿಃಸಂಕೋಚವಾಗಿ ದುಷ್ಕರ್ಮಮಾಡಿ ಹಾಳಾಗುತ್ತಾನೆ. ಶ್ರೀಮಂತಿಕೆ ಇದ್ದಾಗ ಪ್ರಶಂಸೆ. ಬಡತನ ಬಂದಾಗ ಹಿಂದಿಂದ ಆಡಿಕೊಳ್ಳುವವರ ನಿಂದೆ ಜೀರುಂಡೆ ಧ್ವನಿ. ಇದಿರಿಗೆ ಬೈಯುವುದು ಗೂಬೆಯ ಧ್ವನಿ. ಹಸಿವಿನಿಂದ ಪಾಪವೃಕ್ಷಗಳಂತಹ ಶ್ರೀಮಂತರನ್ನು ಆಶ್ರಯಿಸಬೇಕು. ಮರುಮರೀಚಿಕೆಯಂಥ ವಿಷಯಸುಖದ ಬೆನ್ನು ಹತ್ತಬೇಕು. ನೀರಿಲ್ಲದ

ನದಿಯಂತೆ ಪಾಷಂಡಮತ. ಅದರ ಬಳಿಗೋಡುವುದು ಕೇವಲ ಶ್ರಮ. ಉಣಲು ಅನ್ನವಿಲ್ಲದಿದ್ದರೆ ಮನೆಯೊಳಗೆ ತಂದೆ ಮಕ್ಕಳೊಳಗೆ ನಿತ್ಯಜಗಳ. ಮನೆ ಕಾಳ್ಗಿಚ್ಚಿನಂತಿರುತ್ತದೆ. ಕಾಡಿನ ಯಕ್ಷರಂತೆ ನಾಡಿನ ರಾಜಭಟರು. ಪ್ರಾಣಕ್ಕೆ ಸಮವಾದ ಹಣವನ್ನು ಕಸಿಯುತ್ತಾರೆ. ಕುಟುಂಬ ದೊಡ್ಡದಾದಾಗ ಅದನ್ನು ನಿಭಾಯಿಸುವುದು ಗುಡ್ಡವೇರಿದಂತೆ ಶ್ರಮ. ಹೆಬ್ಬಾವು ನುಂಗುವಂತೆ ನಿದ್ರೆ ಆವರಿಸುತ್ತದೆ. ಹಾವುಗಳಂಥ ದುರ್ಜನ ಬಂಧುಗಳಿಂದ ಕಚ್ಚಿಸಿ ಕೊಂಡು ದುಃಖದ ಬಾವಿಯಲ್ಲಿ ಬೀಳುತ್ತಾನೆ. ಇನ್ನೊಬ್ಬ ಸಂಗ್ರಹಿಸಿದ ಹಣ ಈತನಿಗೆ ಜೇನಿನಂತೆ ಆಕರ್ಷಕ ಆ ಗೂಡಿಗೆ ಕೈ ಹಾಕಿ ಸಿಕ್ಕಿಬಿದ್ದು ಅಪಮಾನಿತವಾಗಿ ಏಟು ತಿಂದು ಏನೋ ಒಂದಿಷ್ಟನ್ನು ತನ್ನದಾಗಿಸಿಕೊಂಡರೂ ಅದನ್ನು ಇನ್ನೊಬ್ಬ ಅಪಹರಿಸುತ್ತಾನೆ. ತಾನು ಮಾತ್ರ ಆ ಪಾಪದ ಫಲವಾಗಿ ನರಕದಲ್ಲಿ ಬೀಳುತ್ತಾನೆ. ಕೆಲವೊಮ್ಮೆ ಬಳ್ಳಿಯಂಥ ಕೋಮಲವಾದ ಹೆಣ್ಣಿನ ತೋಳ ಮೇಲೆ ತಲೆಯಿಟ್ಟು ಮಲಗಿ ಹಕ್ಕಿಗಳಂಥ ಮಕ್ಕಳ ಮುದ್ದುಮಾತನ್ನಾಲಿಸಿ ಪರಮಾತ್ಮನ ವಿಚಾರವನ್ನೇ ಮರೆತು ನರಕ ಭಾಗಿಯಾಗುತ್ತಾನೆ. ಆಯುಸ್ಸನ್ನು ಅಪಹರಿಸುವ ಕಾಲ ಸಿಂಹದಂತೆ ಭಯಂಕರ. ಅದನ್ನು ನಿಯಂತ್ರಿಸಲು ಯಾರಿಗೂ ಧೈರ್ಯವಿಲ್ಲ. ಇದ್ದಷ್ಟು ಆಯುಷ್ಯವನ್ನು ಸುಖವಾಗಿ ಕಳೆಯಬೇಕೆಂದು ಬಕಗಿಡುಗಗಳಂಥ ತಾಮಸ ಕ್ಷುದ್ರದೇವತೆಗಳನ್ನು ಆರಾಧಿಸುತ್ತಾನೆ. ಆ ಆರಾಧನೆಯಲ್ಲಿ ಸ್ವಲ್ಪ ಪ್ರಮಾದವಾದರೂ ಆ ದೇವತೆಗಳು ಕ್ಷಮಿಸುವುದಿಲ್ಲ. ವಿಪರೀತ ಫಲ ನೀಡುತ್ತವೆ. ಹಂಸದಂಥ ಬ್ರಾಹ್ಮಣರ ಸೇವೆ ಮಾಡಬೇಕೆಂದರೆ ಅವರ ಶೀಲ ಆಚಾರ ಈತನಿಗೆ ಹಿಡಿಸುವುದಿಲ್ಲ. ಕಪಿಗಳಂತೆ ಮನಬಂದ ಹಾಗೆ ವಿಹರಿಸುವ ಶೂದ್ರರ ರೀತಿನೀತಿಗಳೇ ಆಕರ್ಷಕವಾಗುತ್ತದೆ. ಆದರೆ ಕಪಿಗಳಂತೆ ಆ ಶೂದ್ರರೂ ನರಕದ ಪ್ರಪಾತದಲ್ಲಿ ಬಿದ್ದು ಕರ್ಮಶೇಷದಿಂದ ಹೇಗೋ ಎದ್ದು ಬಂದು ತಿರುಗಿ ಶೂದ್ರರಾಗಿ ಜನಿಸಿ ತಮ್ಮ ಜಾತಿಯವರೊಂದಿಗೆ ಸೇರಿಕೊಳ್ಳುತ್ತಾರೆ. ಇತ್ತ ಈತ ಹಣದ ವ್ಯವಹಾರದಲ್ಲಿ ಇನ್ನೊಬ್ಬರೊಡನೆ ವೈಮನಸ್ಯ ಹೊಂದಿದ್ದರೂ ಬೇರೆ ಉಪಾಯವಿಲ್ಲದೆ ಅವರೊಂದಿಗೇ ವ್ಯವಹಾರ ಮಾಡುತ್ತಾನೆ. ಕಳ್ಳಕಾಕರು ಅಪಹರಿಸಿದ ಸೊತ್ತನ್ನು ವರ್ತಕ ಹಾಗೇ ಬಿಟ್ಟು ಬೇರೆ ಸೊತ್ತನ್ನು ಸಂಪಾದಿಸುವಂತೆ ಈತ ರೋಗಾದಿಗಳಿಗೆ ತುತ್ತಾದ ಶರೀರವನ್ನು ತೊರೆದು ಬೇರೆ ಶರೀರ ಸಂಪಾದಿಸುತ್ತಾನೆ. ಹೀಗೆ ಸಂಸಾರದ ಕಾಡುದಾರಿ ಬಲು ಕಷ್ಟಕರವಾದರೂ ದಾರಿ ತೋರುವ ಭಗವಂತನ ಬಳಿಗೆ ಈತ ಹೋಗುವುದಿಲ್ಲ.' ಹೀಗೆ ಜಡಭರತ ರಹೂಗಣರಾಜನಿಗೆ ಸಂಸಾರದ ಸ್ಥಿತಿಯನ್ನು ಉಪದೇಶಿಸಿ

ಇಂಥ ಜೀವಕರ್ತೃತ್ವದಿಂದ ಜೀವನಿಗೇನು ಲಾಭ? ಅದನ್ನು ಮರೆತು ಭಗವಂತನ ಕರ್ತೃತ್ವವನ್ನೆ ಉಪಾಸನೆ ಮಾಡೆನ್ನುತ್ತಾನೆ.

* * *

'ಭರತನಿಗೆ ಸಮಾನನಾದ ರಾಜನಿನ್ನೊಬ್ಬನಿಲ್ಲ' ಎಂದು ದೇವತೆಗಳು ಅವನ ಗುಣಗಾನ ಮಾಡುತ್ತಾರೆ. ಪರೀಕ್ಷಿದ್ರಾಜನಿಗೆ ಶುಕಮುನಿ ಆ ಗುಣಗಾನದ ಶ್ಲೋಕವನ್ನು ಹೇಳುತ್ತಾರೆ.

ತಸ್ಯೇಮಾನ್ ಶ್ಲೋಕಾನ್ ಗಾಯಂತಿ—

ಆರ್ಷಭಸ್ಯೇಹ ರಾಜರ್ಷೇರ್ಮನಸಾಽಪಿ ಮಹಾತ್ಮನಃ ।
ನಾನುವರ್ತ್ಮಾರ್ಹತಿ ನೃಪೋ ಮಕ್ಷಿಕೇವ ಗರುತ್ಮತಃ ॥ ೨೬ ॥

ಭರತಮುನಿಯ ಬಗ್ಗೆ ಹೀಗೆ ಶ್ಲೋಕಗಳನ್ನು ಹಾಡುತ್ತಾರೆ.

ಮಹಾತ್ಮನಾದ ಋಷಭಪುತ್ರ, ಭರತನೆಂಬ ರಾಜರ್ಷಿ ಹಿಡಿದಂಥ ರೀತಿಯ ಲ್ಲಿ ಮೋಕ್ಷ ಮಾರ್ಗವನ್ನು ಯಾವ ರಾಜನೂ ಮನಸ್ಸಿನಲ್ಲೂ ತುಳಿಯಲಾರ. ನೊಣ ಗರುಡಪಕ್ಷಿಯಂತೆ ಹಾರೀತೆ?

ಇಲ್ಲಿ ಭರತನಿಗೆ ಸಮಾನ ರಾಜರಿಲ್ಲ ಎನ್ನುವುದು ಸರಿಯಲ್ಲ. ಕಾರ್ತವೀರ್ಯಾರ್ಜುನ ಪೃಥು ಪ್ರಿಯವ್ರತ ಮುಂತಾದವರು ಕರ್ಮಜದೇವತೆಗಳಿಗೆ ಸಮಾನಯೋಗ್ಯತೆ ಉಳ್ಳ ಚಕ್ರವರ್ತಿಗಳು ಭರತನಿಗೆ ಸಮಾನರಿದ್ದಾರೆ. ಅದರಿಂದ ಹೀಗೆ ಹೇಳಬೇಕು-

ಋತೇ ಹೈಹಯವೈನ್ಯಾದೀನ್ ಆರ್ಷಭಸ್ಯೇಹ ಕಃ ಸಮಃ ?
ಯಸ್ಯೋಪದೇಶಾತ್ ಸಿಂಧ್ವೀಶೋ ದದರ್ಶ ಕಪಿಲಂ ಪ್ರಭುಮ್ ॥
ಇತಿ ಚ ।

'ಕಾರ್ತವೀರ್ಯಾರ್ಜುನ ಪೃಥು ಮುಂತಾದವರನ್ನು ಹೊರತು ಪಡಿಸಿ ಬೇರೆ ಯಾವ ರಾಜ ಭರತನಿಗೆ ಸಮಾನ? ಏಕೆಂದರೆ ಭರತನ ಉಪದೇಶದಿಂದ ರಹೂಗಣರಾಜ ಪ್ರಭು ಕಪಿಲಮುನಿಯ ದರ್ಶನ ಪಡೆದ' ಎಂದೂ ಹೇಳಿದೆ.

ಬೇರೆ ವ್ಯಾಖ್ಯಾನಕಾರರು ಯಾರೂ ಈ ಬಗ್ಗೆ ವಿಚಾರಮಾಡಿಲ್ಲ.

* * *

ಜಿಂಕೆಯ ಜನ್ಮದಲ್ಲಿಯೂ ಭರತನು ಭಗವಂತನ ಗುಣಗಾನ ಮಾಡುತ್ತಿದ್ದನೆಂದು ಪರೀಕ್ಷಿದ್ರಾಜನಿಗೆ ಶುಕಮುನಿ ಹೇಳುತ್ತಾರೆ.

ಯಜ್ಞಾಯ ಧರ್ಮಪತಯೇ ವಿಧಿನೈಪುಣಾಯ
ಯೋಗಾಯ ಸಾಂಖ್ಯಶಿರಸೇ ಪ್ರಕೃತೀಶ್ವರಾಯ ।
ನಾರಾಯಣಾಯ ಹರಯೇ ನಮ ಇತ್ಯುದಾರಂ
ಗಾಯನ್ ಮೃಗತ್ವಮಪಿ ಯಃ ಸಮುದಾಜಹಾರ ॥ ೨೯ ॥

'ಯಜ್ಞಗಳಲ್ಲಿ ಆರಾಧ್ಯ, ಪುಣ್ಯಗಳಿಗೆ ಒಡೆಯ, ವಿಹಿತಕರ್ಮಾನುಷ್ಠಾನದಲ್ಲಿ ನೈಪುಣ್ಯವನ್ನು ನೀಡುವವನು, ಇಂದ್ರಿಯಗಳನ್ನು ತಮ್ಮ ತಮ್ಮ ವಿಷಯಗಳಲ್ಲಿ ತೊಡಗಿಸುವವನು, ಉತ್ತಮಜ್ಞಾನಸ್ವರೂಪ, ಪ್ರಕೃತಿಗೆ ಒಡೆಯ, ಪಾಪಪರಿಹಾರಕ ಇಂಥ ಹರಿಗೆ ನಮಸ್ಕಾರ' ಎಂದು ಉತ್ಕೃಷ್ಟವಾಗಿ ಗಾನ ಮಾಡುತ್ತ ಮೃಗ ಜನ್ಮವನ್ನೂ ಕೂಡ ಭರತಚಕ್ರವರ್ತಿ ಉತ್ತಮವೆಂದು ಸ್ವೀಕರಿಸಿದ.

ಇಲ್ಲಿ 'ಯೋಗಾಯ' ಎಂದರೆ ಭಗವಂತ ಅಷ್ಟಾಂಗಯೋಗಸ್ವರೂಪನೆಂದು ಶ್ರೀಧರವ್ಯಾಖ್ಯಾನ. ಅದು ಬಾಧಿತ. ವಿವೇಕ ವಿಮೋಕ ಅಭ್ಯಾಸ ಕ್ರಿಯಾ ಕಲ್ಯಾಣ ಅನವಸಾದ ಅನುದ್ಧರ್ಷ ಎಂಬ ಏಳು ಸಾಧನಗಳಿಂದ ಕೂಡಿದ ಭಕ್ತಿಯೋಗಗಮ್ಯ ಭಗವಂತ, ಯೋಗಶಬ್ದ ಯೋಗಗಮ್ಯನಲ್ಲಿ ಔಪಚಾರಿಕವಾಗಿ ಪ್ರಯುಕ್ತವಾಗಿದೆ ಎಂದು ಭಗವತ್ಪ್ರಸಾದಾಚಾರ್ಯ ವೀರರಾಘವವ್ಯಾಖ್ಯಾನಗಳು ಹೇಳುತ್ತವೆ. ಶಬ್ದಗಳಿಗೆ ಭಗವಂತ ಮುಖ್ಯವಾಚ್ಯನೇ ಆಗಬೇಕು ಔಪಚಾರಿಕ ಎನ್ನುವುದು ಸರಿಯಲ್ಲ. ಭಕ್ತರು ಭಗವಂತನನ್ನು ಒಲಿಸಿಕೊಳ್ಳುತ್ತಾರೆ. 'ಯುಜ್ಯತೇ ಭಕ್ತೈಃ ಸ್ವಾನುಕೂಲ್ಯೇ ಪ್ರವರ್ತ್ಯತೇ' ಎಂದು ಶುಕದೇವವ್ಯಾಖ್ಯಾನ. ಈ ವ್ಯಾಖ್ಯಾನ ಕ್ಲಿಷ್ಟ. ಅಷ್ಟಾಂಗ ಯೋಗಲಭ್ಯ ಎಂದು ಗಿರಿಧರವ್ಯಾಖ್ಯಾನವೂ ಶಬ್ದಕ್ಕೆ ಅಮುಖ್ಯಾರ್ಥವನ್ನು ಹೇಳುತ್ತದೆ. ಆದರಿಂದ ಯೋಗ ಎಂದರೆ ಯೋಜನ ಮಾಡುವವನು ಇದು ವಿಶಾಲವಾದ ಅರ್ಥ. ಇಂದ್ರಿಯಗಳನ್ನು ವಿಷಯಗಳೊಂದಿಗೆ ಯೋಜನ ಮಾಡುವವನು, ಸೇರಿಸುವವನು, ಅರ್ಥಾತ್ ಇಂದ್ರಿಯ ಪ್ರೇರಕ ಎಂದು ಅರ್ಥವನ್ನು ಗ್ರಹಿಸಬಹುದು.

'ಸಾಂಖ್ಯಶಿರಸೇ' ಎಂದರೆ ಯಾವ ಪರಮಾತ್ಮನ ಜ್ಞಾನ ಪ್ರಧಾನಫಲವೋ ಅವನು ಎಂದು ಶ್ರೀಧರವ್ಯಾಖ್ಯಾನ ಕ್ಲಿಷ್ಟ. ಸಾಂಖ್ಯವೆಂದರೆ ಆತ್ಮಾನಾತ್ಮ ವಿವೇಕರೂಪವಾದ ಧ್ಯಾನಯೋಗವು ಶಿರಸ್ಸಿನಂತೆ ಪ್ರಧಾನವಾದ ಅಂಗ ಯಾರದೋ ಅವನು 'ಸಾಂಖ್ಯಶಿರಸ್' ಎಂದು ವೀರರಾಘವ ಮತ್ತು ಭಗವತ್ಪ್ರಸಾದಾಚಾರ್ಯ ವ್ಯಾಖ್ಯಾನಗಳು ವ್ಯಾಖ್ಯಾನಸಾಪೇಕ್ಷವಾಗಿವೆ. ಸಂಖ್ಯಾ ಎಂದರೆ ಅಧ್ಯಾತ್ಮ ವಿದ್ಯೆ. ಅದರಿಂದ ತಿಳಿದು ಬರುವ ಜೀವ ಜಡ ಪರಬ್ರಹ್ಮ ಈ ಮೂವರಲ್ಲಿ ಶಿರಸ್ಸಿನಂತೆ ಪ್ರಧಾನವಾದ ಪರಬ್ರಹ್ಮ ಎಂದು ಶುಕದೇವ ವ್ಯಾಖ್ಯಾನ. ಆದರೆ 'ಶುದ್ಧಾತ್ಮ ತತ್ವವಿಜ್ಞಾನಂ ಸಾಂಖ್ಯಮಿತ್ಯಭಿಧೀಯತೇ' ಎಂಬಂತೆ ಸಾಂಖ್ಯಶಬ್ದದ ಮುಖ್ಯಾರ್ಥ ಪರಮಾತ್ಮತತ್ವಜ್ಞಾನ. ತತ್ಸ್ವರೂಪತ್ವವನ್ನೇ ಭಗವಂತನಲ್ಲಿ ಹೇಳಲು ಬರುವಾಗ

ಜೀವಜಡ ಜ್ಞಾನವನ್ನೂ ಸಾಂಖ್ಯ ಅಥವಾ ಅಧ್ಯಾತ್ಮವಿದ್ಯೆ ಎಂದು ಪರಿಗಣಿಸುವುದು ಉಚಿತವಾಗುವುದಿಲ್ಲ. ಅಧ್ಯಾತ್ಮವಿದ್ಯೆ ಎಂದರೆ ಅಧಿಕ ಆತ್ಮನಾದ ಪರಮಾತ್ಮನ ವಿದ್ಯೆ.

ಯುಜ್ಯತೇ ಅನೇನೇತಿ ಯೋಗೋ ಹರಿಃ ।
ಸಾಂಖ್ಯಶಿರಸೇ ಉತ್ತಮಜ್ಞಾನ ಸ್ವರೂಪಾಯ ।

ಜೀವರ ಇಂದ್ರಿಯಗಳನ್ನು ವಿಷಯಗಳಲ್ಲಿ ಸೇರಿಸುವವನು ಹರಿ 'ಯೋಗ' ಎನಿಸುತ್ತಾನೆ. ಸಾಂಖ್ಯವೆಂದರೆ ಜ್ಞಾನ. ಶಿರಸ್ ಎಂದರೆ ಉತ್ತಮ. ಕರ್ಮಧಾರಯ ಸಮಾಸ ಮಾಡಿದಾಗ ಶಿರಃಶಬ್ದಕ್ಕೆ ಪರನಿಪಾತ. ಉತ್ತಮಜ್ಞಾನರೂಪನಾಗಿದ್ದಾನೆ ಹರಿ ಎಂದರ್ಥ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ತ್ರಯೋದಶೋಽಧ್ಯಾಯಃ ॥

—o—

ಅಧ್ಯಾಯ-೧೪

ಅಧ್ಯಾಯಸಾರಾಂಶ

ಸಂಸಾರವೆಂಬ ಅರಣ್ಯದಲ್ಲಿ ಸುತ್ತಿ ಬಳಲುವ ಜೀವನಿಗೆ ಎಲ್ಲ ದುಃಖಗಳ ಪರಿಹಾರವಾಗಬೇಕೆಂದರೆ ಹರಿಗುರುಗಳ ಪಾದಕಮಲಗಳಲ್ಲಿ ದುಂಬಿಗಳಂತಿರುವ ಜ್ಞಾನಿಗಳ ಸೇವೆ ಮಾಡಬೇಕೆನ್ನುತ್ತ ಸಂಸಾರ ಎಂಬುದು ಹೇಗೆ ಅರಣ್ಯದಂತಿದೆ ಎಂಬುದನ್ನು ಸ್ಪಷ್ಟವಾಗಿ ಶುಕಮುನಿಗಳು ಪರೀಕ್ಷಿತನಿಗೆ ಉಪದೇಶಿಸುತ್ತಾರೆ.

* * *

ಅಧ್ಯಾಯ-೧೫

ಅಧ್ಯಾಯಸಾರಾಂಶ

ಭರತನ ವಂಶದಲ್ಲಿ ಗಯನೆಂಬ ರಾಜ ಭಗವಾನ್ ವಿಷ್ಣುವಿನ ಅಂಶಾವೇಶಯುಕ್ತನಾಗಿದ್ದು ಧರ್ಮದಿಂದ ರಾಜ್ಯಭಾರಮಾಡಿ ಭಗವಂತನಿಗೆ ಪ್ರಿಯನೆನಿಸಿದ. ಮುಂದೆ ಆ ವಂಶದಲ್ಲಿ ವಿರಜನೆಂಬ ರಾಜ ಪ್ರಸಿದ್ಧನಾದ.

ಭರತನ ವಂಶದಲ್ಲಿ ಜನಿಸಿದ ಗಯಮಹಾರಾಜ ಭಗವಂತನ ಅಂಶಾವೇಶ ಯುಕ್ತನಾಗಿದ್ದ. ಎಣೆಯಿಲ್ಲದ ಅರಸನಾಗಿದ್ದನೆಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ.

ತಸ್ಯೇಮಾಂ ಗಾಥಾಂ ಪಾಂಡವೇಯ ಪುರಾವಿದ ಉಪಗಾಯಂತಿ–

ಗಯಂ ನೃಪಂ ಕಃ ಪ್ರತಿಯಾತಿ ಕರ್ಮಭಿ-
ರ್ಯಜ್ವಾಽಭಿಮಾನೀ ಬಹುವಿದ್ ಧರ್ಮಗೋಪ್ತಾ ।
ಸದಾಗತಶ್ರೀಃ ಸದಸಸ್ಪತಿಃ ಸತಾಂ
ಸತ್ಸೇವಕೋಽನ್ಯೋ ಭಗವತ್ಕಲಾಮೃತೇ ॥ ೭ ॥

ಪರೀಕ್ಷಿದ್ರಾಜ, ಪ್ರಾಚೀನ ಇತಿಹಾಸಜ್ಞರು ಗಯಮಹಾರಾಜನ ಬಗ್ಗೆ ಹೀಗೆ ಶ್ಲೋಕಗಳನ್ನು ಹಾಡುತ್ತಾರೆ.

ಬೇರೆ ರಾಜರು ಕೂಡ ಯಜ್ಞ ಮಾಡಬಹುದು, ಎಲ್ಲೆಡೆ ಸನ್ಮಾನಿತರಾಗಬಹುದು. ಬಹು ಜ್ಞಾನಿಗಳಾಗಿರಬಹುದು, ಧರ್ಮರಕ್ಷಕರಾಗಿರಬಹುದು, ಸದಾ ಸಂಪದ್ಭರಿತರಾಗಿರಬಹುದು. ಸಜ್ಜನರ ಸಭೆಗಳಿಗೆ ಅಧಿಪತಿಯಾಗಿರಬಹುದು. ಸಜ್ಜನರ ಸೇವಕರೂ ಆಗಿರಬುದು. ಆದರೇನು? ಭಗವಂತನ ಅವತಾರಭೂತರಾದ ಅಥವಾ ದೇವಾಂಶಸಂಭೂತರಾದ ರಾಜರು ಹೊರತು ಇನ್ನಾರೂ ಗಯಮಹಾರಾಜನಿಗೆ ಎಣೆಯಾಗಲಾರರು.

ಗಯನಿಗೆ ಸಮಾನ ಪ್ರಿಯವ್ರತನಿದ್ದ, ಕರ್ಮಜದೇವತೆಗಳೂ ಅವನಿಗೆ ಸಮಾನರು. ಅವನಿಗೆ ಸಮಾನರಿಲ್ಲ ಎನ್ನುವುದು ಹೇಗೆ? ಈ ಪ್ರಶ್ನೆಯನ್ನು ಬೇರೆ ವ್ಯಾಖ್ಯಾನಕಾರರು ಎತ್ತಿಕೊಳ್ಳುವುದಿಲ್ಲ.

ಪ್ರಿಯವ್ರತೋ ಗಯಶ್ಚೈವ ಕರ್ಮದೇವಸಮೋ ಗುಣೈಃ ॥
ಇತಿ ಷಾಡ್ಗುಣ್ಯೇ ।

ಪ್ರಿಯವ್ರತರಾಜನೂ ಗಯರಾಜನೂ ಗುಣಗಳಿಂದ ಕರ್ಮಜದೇವತೆಗಳಿಗೆ ಸಮಾನರು ಎಂದು ಷಾಡ್ಗುಣ್ಯಗ್ರಂಥದಲ್ಲಿ ಉಕ್ತವಾಗಿದೆ.

ಹೀಗಾಗಿ 'ಗಯನಿಗೆ ಸಮಾನರಾದ ರಾಜರೆ ಇಲ್ಲ' ಎಂದರೆ ಭಗವಂತನ ಅವತಾರರಾದ ರಾಜರು ಬ್ರಹ್ಮಾದಿದೇವತೆಗಳು ಕರ್ಮಜದೇವತೆಗಳು ಪ್ರಿಯವ್ರತರಾಜ ಇವರೆಲ್ಲರನ್ನೂ ಹೊರತು ಬೇರೆ ಯಾರೂ ರಾಜರು ಗಯನಿಗೆ ಸಮಾನರಿಲ್ಲ ಎಂದೇ ಭಾಗವತದ ಅಭಿಪ್ರಾಯ ಹೇಳಬೇಕು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ಪಂಚದಶೋಽಧ್ಯಾಯಃ ॥

—o—

ಅಧ್ಯಾಯ-೧೬

ಅಧ್ಯಾಯಸಾರಾಂಶ

ಶುಕಮುನಿಗಳು ಪರೀಕ್ಷಿತನಿಗೆ ಪ್ರಿಯವ್ರತನ ರಥಚಕ್ರ ಚಲನೆಯಿಂದಾದ ಏಳು ಸಮುದ್ರಗಳ ಏಳು ದ್ವೀಪಗಳ ವಿಸ್ತಾರ ಮುಂತಾದುವನ್ನು ವರ್ಣಿಸುತ್ತಾರೆ. ಭೂಮಂಡಲದ ನಡುವಿನ ದ್ವೀಪ ಜಂಬೂದ್ವೀಪ. ಅದರಲ್ಲಿ ಎಂಟು ಮರ್ಯಾದಾಪರ್ವತಗಳಿಂದ ಒಂಬತ್ತು ವರ್ಷಗಳಾಗಿವೆ. ಅವುಗಳಲ್ಲಿ ನಡುವಿನದು ಇಳಾವೃತವರ್ಷ. ಆ ವರ್ಷದ ನಡುವೆ ಮೇರು ಪರ್ವತ. ಇಡೀ ಭೂಮಂಡಲವೆಂಬ ಕಮಲಕ್ಕೆ ಕರ್ಣಿಕೆಯಂತಿದೆ. ಇಳಾವೃತಖಂಡದ ಉತ್ತರದಲ್ಲಿ ಕ್ರಮವಾಗಿ ನೀಲ ಶ್ವೇತ ಶೃಂಗವಂತ. ದಕ್ಷಿಣದಲ್ಲಿ ನಿಷಧ ಹೇಮಕೂಟ ಹಿಮಾಲಯ, ಪೂರ್ವದಲ್ಲಿ ಗಂಧಮಾದನ, ಪಶ್ಚಿಮದಲ್ಲಿ ಮಾಲ್ಯವಂತ ಎಂದು ಮರ್ಯಾದಾಪರ್ವತಗಳು. ಮೇರು ಪರ್ವತಕ್ಕೆ ನಾಲ್ಕೂ ಕಡೆಗಳಲ್ಲಿ ಮಂದರ ಮೇರುಮಂದರ ಸುಪಾರ್ಶ್ವ ಕುಮುದ ಎಂದು ಬೇರೆ ಅವಷ್ಟಂಭಪರ್ವತಗಳಿವೆ. ಅವುಗಳಲ್ಲಿ ದಿವ್ಯ ಉದ್ಯಾನಗಳಿವೆ ನದಿಗಳಿವೆ. ಮೇರುವಿನ ಬುಡದಲ್ಲಿ ಕಮಲದ ಕೇಸರಗಳಂತೆ ಕುರಂಗ ಕುರರ ಮುಂತಾದ ಕೇಸರ ಪರ್ವತಗಳಿವೆ. ಮೇರುವಿನ ಪೂರ್ವಕ್ಕೆ ಮಂದರದಿಂದಾಚೆ ಜಠರ, ದೇವಕೂಟ ಪರ್ವತಗಳು. ಪಶ್ಚಿಮಕ್ಕೆ ಪವನ ಪಾರಿಯಾತ್ರಪರ್ವತಗಳು ದಕ್ಷಿಣಕ್ಕೆ ಮೇರುಮಂದರದ ಹೊರಭಾಗದಲ್ಲಿ ಕೈಲಾಸ ಕರವೀರ ಪರ್ವತಗಳು, ಉತ್ತರದಲ್ಲಿ ಕುಮುದಕ್ಕಿಂತ ಆಚೆ ಶೃಂಗ ಮಕರ ಪರ್ವತಗಳು. ಸುತ್ತಲೂ ದರ್ಭೆಯ ಪರಿಸ್ತರಣ ಹಾಕಿದ ಅಗ್ನಿಯಂತೆ ನಡುವೆ ಬಂಗಾರದ ಮೇರುಪರ್ವತ ಬೆಳಗುತ್ತದೆ. ಮೇರು ಪರ್ವತದ ತುದಿಯಲ್ಲಿ ಶತಕೋಟಿ ಎಂಬ ಚತುರ್ಮುಖನ ಬಂಗಾರದ ಪಟ್ಟಣವೂ ಅದರ ಸುತ್ತಲೂ ಅಷ್ಟದಿಕ್ಪಾಲಕರ ಪಟ್ಟಣಗಳೂ ಇವೆ.

* * *

ಪಂಚಮಸ್ಕಂಧದ ಪ್ರಥಮಾಧ್ಯಾಯದಲ್ಲಿ ಪ್ರಿಯವ್ರತರಾಜನ ಚರಿತ್ರೆಯನ್ನು ಹೇಳುವಾಗ ಸಪ್ತದ್ವೀಪ ಸಪ್ತಸಾಗರಗಳ ವೃತ್ತಾಂತ ಪ್ರಸ್ತುತವಾಗಿತ್ತು. ಹದಿನಾರನೆ ಅಧ್ಯಾಯದಲ್ಲಿ ಪರೀಕ್ಷಿದ್ರಾಜ ಶುಕಮುನಿಗಳಲ್ಲಿ ಭೂಗೋಲ ವರ್ಣನೆಯನ್ನು ವಿಸ್ತಾರವಾಗಿ ಹೇಳಲು ಕೇಳಿಕೊಂಡಾಗ ಶುಕಮುನಿಗಳು ಇಪ್ಪತ್ತನೆ ಅಧ್ಯಾಯದ ವರೆಗೂ ವಿಸ್ತಾರವಾಗಿ ಹೇಳುತ್ತಾರೆ. ಅಲ್ಲಿಂದ ಮುಂದೆ ಖಗೋಲ ನಿರೂಪಣೆ. ಬಳಿಕ ಇಪ್ಪತ್ತಮೂರನೆ ಅಧ್ಯಾಯದಲ್ಲಿ ಪಾತಾಳಲೋಕಗಳ ವರ್ಣನೆ. ಇಪ್ಪತ್ತನಾಲ್ಕನೆ ಅಧ್ಯಾಯದಲ್ಲಿ ನರಕಲೋಕಗಳ ವರ್ಣನೆ ಇದೆ. ಇತರ ಪುರಾಣಗಳಲ್ಲಿ ಭಾಗವತಕ್ಕಿಂತ ಸ್ವಲ್ಪ ವ್ಯತ್ಯಾಸವಾಗಿ ಅಲ್ಲಲ್ಲಿ ಭೂಗೋಲ ಖಗೋಲ ವರ್ಣನೆಗಳು ಕಾಣುತ್ತವೆ. ಭಾಗವತಶ್ಲೋಕಗಳಿಗೆ ಇಷ್ಟರವರೆಗೆ ಅನೇಕಕಡೆ ಭಾರತಪುರಾಣಾದಿಗಳಿಗೆ ಅನುಸಾರವಾಗಿ ಬೇರೆ ಅರ್ಥ ಮಾಡಿದ್ದುಂಟು. ಅದರಂತೆ ಭೂಗೋಲ ಖಗೋಲವರ್ಣನೆಗಳಿಗೂ ಬೇರೆ ಅರ್ಥ ಮಾಡಬೇಕೆ ಎಂಬ ಸಂದೇಹ ಬರುತ್ತದೆ. ಅದಕ್ಕೆ ಶ್ರೀಮದಾಚಾರ್ಯರು ನಿರ್ಣಯವನ್ನು ಹೇಳುತ್ತಾರೆ-

ಯಥಾ ಭಾಗವತೇ ತೂಕ್ತಂ ಭೌವನಂಕೋಶಲಕ್ಷಣಮ್ ।
ತಸ್ಯಾವಿರೋಧತೋ ಯೋಜ್ಯಂ ಸರ್ವಗ್ರಂಥಾಂತರಸ್ಥಿತಮ್ ॥

ಬ್ರಹ್ಮಾಂಡದೊಳಗಿನ ಲೋಕಗಳ ಲಕ್ಷಣ ಪರಿಮಾಣಗಳ ವಿಷಯದಲ್ಲಿ ಭಾಗವತದಲ್ಲಿ ಹೇಗೆ ಹೇಳಿದೆಯೋ ಹಾಗೇ ಅದಕ್ಕೆ ವಿರೋಧಬಾರದಂತೆ ಬೇರೆ ಎಲ್ಲ ಗ್ರಂಥಗಳಲ್ಲಿ ಹೇಳುವುದನ್ನು ಅರ್ಥೈಸಬೇಕು ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

ಭುವನಕೋಶವೆಂದರೆ ಲೋಕಗಳನ್ನು ತನ್ನೊಳಗೆ ತುಂಬಿಕೊಂಡಿರುವ ಬ್ರಹ್ಮಾಂಡ. ಅದರೊಳಗಿನ ಲೋಕಗಳು ಭೌವನಕೋಶಗಳು. 'ಭೌವನಂ' ಎಂದು ಕೊನೆಯಲ್ಲಿ ಮಕಾರ ಬಂದಿರುವುದು ಆರ್ಷಪ್ರಯೋಗವಾದ್ದರಿಂದ ಸಾಧು. 'ಭೌವನಂಕೋಶ'ಗಳ ಲಕ್ಷಣದೊಂದಿಗೆ ಉಪಲಕ್ಷಣವಾಗಿ ಪರಿಮಾಣವನ್ನೂ ಇಟ್ಟುಕೊಳ್ಳಬೇಕು. 'ಭಾಗವತೇ ತೂಕ್ತಂ' ಎಂಬಲ್ಲಿ 'ತು'ಶಬ್ದದಿಂದ ಭಾಗವತದಲ್ಲಿ ಹೇಳಿದ್ದು ನಿರವಕಾಶ, ಅದನ್ನು ವ್ಯತ್ಯಾಸ ಮಾಡಲಾಗದು ಎಂದು ಹೇಳಲಾಗಿದೆ.

ಆದರೆ ಭಾಗವತದಲ್ಲಿ ಕೆಲವೆಡೆ ಪ್ರಮೇಯ ವ್ಯತ್ಯಾಸವಾಗಿದೆ. ಲವಣ-ಇಕ್ಷು-ಸುರಾ-ಸರ್ಪಿ- ದಧಿ- ಕ್ಷೀರ- ಶುದ್ಧೋದಸಮುದ್ರಗಳೆಂದು ಏಳು ಸಮುದ್ರಗಳಿವೆ. ಅವು ಕ್ರಮವಾಗಿ ಜಂಬು ಪ್ಲಕ್ಷ ಶಾಲ್ಮಲಿ ಕುಶ ಕ್ರೌಂಚ ಶಾಕ ಪುಷ್ಕರ ಎಂಬ ಏಳು ದ್ವೀಪಗಳನ್ನು ಸುತ್ತುವರಿದಿರುತ್ತವೆ ಮತ್ತು ಆ ದ್ವೀಪಗಳಷ್ಟೇ ವಿಸ್ತಾರವಾಗಿರುತ್ತವೆ. ದ್ವೀಪಗಳ ವಿಸ್ತಾರ ಕ್ರಮವಾಗಿ ಒಂದು ಎರಡು ನಾಲ್ಕು ಎಂಟು ಹದಿನಾರು ಮೂವತ್ತೆರಡು ಅರವತ್ತನಾಲ್ಕು ಲಕ್ಷಯೋಜನಗಳು. ಆದರೆ ಭಾಗವತ (೫.೧.೩೩-೫.೨೦.೨೪)ದಲ್ಲಿ ದಧಿಸಮುದ್ರ ಕ್ಷೀರಸಮುದ್ರಗಳ ಕ್ರಮವ್ಯತ್ಯಾಸ ಮಾಡಿ

ಮೊದಲಿಗೆ ಕ್ಷೀರಸಮುದ್ರ, ಅನಂತರ ದಧಿಸಮುದ್ರ ಎಂದಿದೆ. ಈ ಸಮುದ್ರಗಳಿಂದ ಸುತ್ತುವರಿಯಲ್ಪಟ್ಟ ಕ್ರೌಂಚದ್ವೀಪ ಶಾಕದ್ವೀಪಗಳ ಕ್ರಮ ಹಾಗೇ ಉಕ್ತವಾಗಿದೆ. ಇದರಿಂದ ಸಮುದ್ರಗಳ ಸ್ಥಾನ ವ್ಯತ್ಯಾಸ, ಮಾತ್ರವಲ್ಲದೆ ವಿಸ್ತಾರದಲ್ಲಿಯೂ ವ್ಯತ್ಯಾಸವಾಗುತ್ತದೆ. ದಧಿ ಸಮುದ್ರ ಹದಿನಾರು ಲಕ್ಷ ಯೋಜನ, ಕ್ಷೀರಸಮುದ್ರ ಮೂವತ್ತೆರಡು ಲಕ್ಷಯೋಜನವಿರಬೇಕು. ಈಗ ಸ್ಥಾನ ವ್ಯತ್ಯಾಸ ಮಾಡಿದ್ದರಿಂದ ಕ್ಷೀರಸಮುದ್ರ ಹದಿನಾರುಲಕ್ಷಯೋಜನ, ದಧಿಸಮುದ್ರ ಮೂವತ್ತೆರಡು ಲಕ್ಷಯೋಜನ ವಿಸ್ತಾರವೆಂದಂತಾಗುವುದು. ಈ ಎರಡು ಸಮುದ್ರಗಳ ವ್ಯತ್ಯಾಸಗಳು ಮಾತ್ರವಲ್ಲದೆ ಇನ್ನೊಂದು ಖಗೋಲ ವ್ಯತ್ಯಾಸವೂ ಇದೆ. ಅದು ಹೀಗೆ- ಸೂರ್ಯಮಂಡಲ, ಚಂದ್ರಮಂಡಲ, ರಾಹುಮಂಡಲಗಳು ಕ್ರಮವಾಗಿ ೧೦,೨೦,೪೦ ಸಾವಿರ ಯೋಜನವಿಸ್ತಾರವಾಗಿದ್ದರೂ ಭಾಗವತ (೫.೨೩.೨೮)ದಲ್ಲಿ ೧೦,೧೨,೧೩ ಸಾವಿರ ಯೋಜನ ವಿಸ್ತಾರವೆಂದು ಉಕ್ತವಾಗಿದೆ. ಈ ಮೂರೂ ವ್ಯತ್ಯಾಸಗಳು ಪ್ರಮಾಣವಿರುದ್ಧವಾಗುವುದರಿಂದ ಭಾಗವತದಲ್ಲಿ ಹೇಳಿದಂತೆಯೆ ಬೇರೆ ಕಡೆ ಹೇಳಿದ್ದನ್ನು ಅರ್ಥೈಸಿಕೊಳ್ಳಬೇಕು ಎನ್ನುವುದು ಹೇಗೆ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಅದೇ ಬ್ರಹ್ಮಾಂಡಪುರಾಣ ವಚನ ನಿರ್ಣಯವನ್ನು ಹೇಳುತ್ತದೆ-

---

ಮಂಡೋದೇ ಪೂರಣಂ ಚೈವ ವ್ಯತ್ಯಾಸಂ ಕ್ಷೀರಸಾಗರೇ ।
ರಾಹುಸೋಮರವೀಣಾಂ ಚ ಮಂಡಲಾದ್ವಿಗುಣೋಕ್ತಿತಾಮ್ ।
ವಿನೈವ ಸರ್ವಮುನ್ನೇಯಂ ಯೋಜನಾಭೇದತೋಽತ್ರ ತು ॥
ಇತಿ ಬ್ರಹ್ಮಾಂಡೇ ॥

‘ಶುದ್ಧೋದಸಮುದ್ರ ಹೊರತಾಗಿ ಉಳಿದ ಆರು ಸಮುದ್ರಗಳಲ್ಲಿ ಆರನೇ ಸ್ಥಾನವನ್ನು ತುಂಬುವುದು ದಧಿಸಮುದ್ರ’ ಎಂದು ಭಾಗವತ ಹೇಳುವುದನ್ನೂ, ಆರನೆಯದಾದ ಕ್ಷೀರಸಮುದ್ರದ ವಿಷಯದಲ್ಲಿ ಅದು ಐದನೆಯದೆಂದು ಭಾಗವತವ್ಯತ್ಯಾಸ ಮಾಡಿ ಹೇಳುವುದನ್ನೂ, ರಾಹುಚಂದ್ರಸೂರ್ಯರ ಮಂಡಲಗಳು ಕ್ರಮವಾಗಿ ಎರಡೆರಡು ಪಾಲು ಕಡಿಮೆವಿಸ್ತಾರದವುಗಳಾಗಿದ್ದರೂ ಅದಕ್ಕೆ ವ್ಯತಿರಿಕ್ತವಾಗಿ ಭಾಗವತ ಹೇಳುವುದನ್ನೂ ಈ ಮೂರನ್ನು ಹೊರತು ಪಡಿಸಿ ಬೇರೆ ಎಲ್ಲ ವಿಷಯಗಳಲ್ಲಿಯೂ ಬೇರೆ ಗ್ರಂಥಗಳಲ್ಲಿ ಬೇರೆ ರೀತಿಯ ನಿರೂಪಣೆ ಇದ್ದರೆ ಭಾಗವತಕ್ಕೆ ಅನುಸಾರವಾಗಿಯೆ ಅವುಗಳನ್ನು ಅರ್ಥೈಸಬೇಕು. ಮೇಲೆ ಹೇಳಿದ ಮೂರು ವಿಷಯಗಳಲ್ಲಿ ಮಾತ್ರ ಭಾಗವತ ಹೇಳುವುದನ್ನು ಬೇರೆ ಗ್ರಂಥಗಳಿಗನುಸಾರ ಬೇರೆಯೇ ವಿವರಣೆ ನೀಡಿ ಕೂಡಿಸಬೇಕು ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

ಮೂರು ವಿಷಯಗಳಲ್ಲಿ ಭಾಗವತಕ್ಕೆ ಬೇರೆ ವಿವರಣೆಗಳೆಂದರೆ ಅದು ಹೀಗೆ- ಐದನೇ ದ್ವೀಪವಾದ ಕ್ರೌಂಚವನ್ನು ಸುತ್ತುವರಿದು ಐದನೆಯ ಸಮುದ್ರವಾಗಿ

ಕ್ಷೀರಸಮುದ್ರವಿದೆ ಎಂದು ಭಾಗವತ ಹೇಳಿದರೂ ಅಲ್ಲಿ 'ಕ್ಷೀರ' ಎಂದರೆ ಸಿಹಿ ಮೊಸರು ಎಂದು ಅರ್ಥವಿಟ್ಟುಕೊಳ್ಳಬೇಕು. ಸಿಹಿ ಮೊಸರಿಗೆ ಕ್ಷೀರ ಎಂದೇ ಗೌಣವಾದ ಹೆಸರಿದೆ. ಹಾಗೇ ಆರನೆಯದಾದ ಶಾಕದ್ವೀಪದ ಸುತ್ತಲೂ ಆರನೆ ಸಮುದ್ರವಾಗಿ ದಧಿಸಮುದ್ರವಿದೆ ಎಂದು ಭಾಗವತ ಹೇಳಿದರೂ ಅಲ್ಲಿ 'ದಧಿ' ಎಂದರೆ ಗಟ್ಟಿ ಹಾಲು ಎಂದು ಅರ್ಥವಿಟ್ಟುಕೊಳ್ಳಬೇಕು. ಗಟ್ಟಿಹಾಲಿಗೆ ದಧಿ ಎಂದು ಗೌಣವಾದ ಹೆಸರಿದೆ. ಎಂದು ಶ್ರೀಮದಾಚಾರ್ಯರೇ ಮುಂದೆ (೫.೨೦.೨೪) ಶಬ್ದನಿರ್ಣಯದ ಆಧಾರ ಕೊಟ್ಟು ನಿರ್ಣಯಿಸಿದ್ದಾರೆ. ಚಂದ್ರಮಂಡಲ ಹನ್ನೆರಡುಸಾವಿರ ಯೋಜನ ವಿಸ್ತಾರವಾಗಿದೆ ಎಂದು ಭಾಗವತ(೫.೨೩.೨)ದಲ್ಲಿ ಹೇಳಿದರೂ ಅಲ್ಲಿ 'ದ್ವಾದಶ' ಎಂದರೆ ದ್ವಿದಶ, ಇಪ್ಪತ್ತು ಸಾವಿರಯೋಜನವೆಂಬ ಅಭಿಪ್ರಾಯವಿಟ್ಟುಕೊಳ್ಳಬೇಕು. ರಾಹುಮಂಡಲ ಹದಿಮೂರು ಸಾವಿರ ಯೋಜನವಿಸ್ತಾರವಾಗಿದೆ ಎಂದು ಭಾಗವತ ಅಲ್ಲಿಯೆ ಹೇಳುತ್ತಿದ್ದರೂ ಅಲ್ಲಿ 'ತ್ರಯೋದಶ' ಎಂದರ 'ತ್ರಿ' 'ದಶ',ಮೂವತ್ತು ಅದರ ಮೇಲೆ ಇನ್ನೊಂದು 'ದಶ'ವನ್ನು ಆವೃತ್ತಿಯಿಂದ ಇಟ್ಟುಕೊಂಡು ಒಟ್ಟು ನಲವತ್ತು ಸಾವಿರ ಯೋಜನವಿಸ್ತಾರವೆಂದು ಹೇಳಿ ಭಾಗವತ ವಾಕ್ಯಪ್ರಾಮಾಣ್ಯವನ್ನು ಸಮರ್ಥಿಸಿ ಕೊಳ್ಳಬೇಕು ಎನ್ನುವುದು ಬ್ರಹ್ಮಾಂಡಪುರಾಣದ ಅಭಿಪ್ರಾಯ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ಷೋಡಶೋಽಧ್ಯಾಯಃ ॥

—o—

ಅಧ್ಯಾಯ-೧೭

ಅಧ್ಯಾಯಸಾರಾಂಶ

ವಾಮನ ಬಲಿಚಕ್ರವರ್ತಿಯಲ್ಲಿ ಭೂದಾನ ಬೇಡಿ ತ್ರಿವಿಕ್ರಮನಾಗಿ ಬಲಗಾಲಿಂದ ಭೂಮಿಯನ್ನಳೆದು ಎಡಗಾಲೆತ್ತಿದಾಗ ಬ್ರಹ್ಮಾಂಡದ ಕಟಾಹಕ್ಕೆ ಹೆಬ್ಬೆರಳಿನ ಉಗುರು ತಾಕಿ ಬಿರುಕುಂಟಾಗಿ ಬಾಹ್ಯಜಲಾವರಣದ ನೀರು ಒಳಗೆ ನುಗ್ಗಿದಾಗ ಬ್ರಹ್ಮದೇವರು ಅದನ್ನು ಕಮಂಡಲುವಿನಲ್ಲಿ ಸಂಗ್ರಹಿಸಿ ತ್ರಿವಿಕ್ರಮನ ಪಾದವನ್ನು ಆ ನೀರಿನಿಂದ ತೊಳೆದರು. ಆ ನೀರು ಗಂಗೆಯಾಗಿ ಹರಿದು ಶಿಂಶುಮಾರ ಲೋಕದಲ್ಲಿ ಪ್ರಕಟವಾಯಿತು. ಧ್ರುವ ಅದನ್ನು ತಲೆಯಲ್ಲಿ ಧರಿಸಿದ್ದಾನೆ. ಬಳಿಕ ನದಿ ಸಪ್ತರ್ಷಿಮಂಡಲದಲ್ಲಿ ಪ್ರಕಟವಾಗಿ ಸಪ್ತರ್ಷಿಗಳ ಜಟಾಜೂಟವನ್ನು ಅಲಂಕರಿಸಿ ಚಂದ್ರಮಂಡಲಮಾರ್ಗವಾಗಿ ಮೇರುವಿನ ತುದಿಯಲ್ಲಿರುವ ಶತಕೋಟಿ ಎಂಬ ಬ್ರಹ್ಮನ ಪಟ್ಟಣದಲ್ಲಿ ಸೀತಾ ಅಲಕನಂದಾ ಚಕ್ಷು ಭದ್ರಾ ಎಂದು ನಾಲ್ಕಾಗಿ ಕವಲೊಡೆದು ನಾಲ್ಕು ದಿಕ್ಕುಗಳಲ್ಲಿ ಹರಿದು ಲವಣಸಮುದ್ರವನ್ನು ಸೇರುವುದು. ಈ ಜಂಬೂದ್ವೀಪದಲ್ಲಿ ಭಾರತವರ್ಷವೆ ಕರ್ಮಭೂಮಿ. ಬೇರೆಲ್ಲವೂ ಸ್ವರ್ಗವಾಸಿಗಳು ಸ್ವರ್ಗದಲ್ಲಿ ಭೋಗಗಳನ್ನು ಅನುಭವಿಸಿದ ಬಳಿಕ ಉಳಿದ ಪುಣ್ಯದ ಫಲವನ್ನು ಅನುಭವಿಸಲು ಇರುವ ಭೋಗಭೂಮಿಗಳು, ಭೂಲೋಕದ ಸ್ವರ್ಗಗಳು. ಆದರೂ ಅಲ್ಲಿಯ ಜನರು ಕೇವಲ ವಿಷಯಭೋಗಗಳಲ್ಲಿ ನಿರತರಾಗುವುದಿಲ್ಲ. ಭಗವಂತನನ್ನು ಆರಾಧಿಸುತ್ತಾರೆ. ಅವರಿಗಾಗಿ ಭಗವಂತ ಬೇರೆಬೇರೆ ರೂಪಗಳಿಂದ ಅಲ್ಲಿ ನೆಲೆಸಿದ್ದಾನೆ. ಇಳಾವೃತಖಂಡದಲ್ಲಿ ಶಿವನೊಬ್ಬನೆ ಪುರುಷ. ಬೇರೆ ಎಲ್ಲರೂ ಸ್ತ್ರೀಯರು. ಪಾರ್ವತಿಯ ಶಾಪದಿಂದ ಅಲ್ಲಿಗೆ ಪುರುಷರು ಪ್ರವೇಶಿಸುವಂತಿಲ್ಲ. ಪ್ರವೇಶಿಸಿದರೆ ಅವರು ಸ್ತ್ರೀಯರಾಗುತ್ತಾರೆ. ಶಿವ ಶೇಷಾಂತರ್ಗತನಾದ ಸಂಕರ್ಷಣಮೂರ್ತಿಯನ್ನು ಆರಾಧಿಸುತ್ತಾನೆ.

* * *

ಬಲಿಯಿಂದ ಭೂಮಿದಾನ ಬೇಡಿ ಪಡೆದ ವಾಮನ ತ್ರಿವಿಕ್ರಮನಾಗಿ ಬೆಳೆದು ಬಲಗಾಲಿಂದ ಕೆಳಗಿನ ಲೋಕಗಳನ್ನು ಅಳೆದು ನಿಂತು ಎಡಗಾಲಿಂದ ಊರ್ಧ್ವಲೋಕಗಳನ್ನು ಅಳೆದ. ಆಗ ಆ ಎಡಗಾಲಿನ ಹೆಬ್ಬೆರಳ ಉಗುರಿನಿಂದ ಬ್ರಹ್ಮಾಂಡ ಕಟಾಹ ಬಿರುಕುಗೊಂಡು ಬಾಹ್ಯಜಲಾವರಣದ ನೀರು ಒಳಗೆ ಬಂದಿತು ಎಂದು ಶುಕಮುನಿ ಗಂಗೋದ್ಭವವನ್ನು ವರ್ಣಿಸುತ್ತಾರೆ.

ತತ್ರ ಭಗವತಃ ಸಾಕ್ಷಾದ್ ಯಜ್ಞಲಿಂಗಸ್ಯ ವಿಷ್ಣೋರ್ವಿಕ್ರಮತೋ ವಾಮಪಾದಾಂಗುಷ್ಠನಖನಿರ್ಭಿನ್ನೋರ್ಧ್ವಾಂಡಕಟಾಹ ವಿವರೇಣಾಂತಃಪ್ರವಿಷ್ಟಾ ಯಾ ಬಾಹ್ಯಜಲಧಾರಾ ತಚ್ಚರಣ ಪಂಕಜಾವನೇಜನಾರುಣಕಿಂಜಲ್ಕೋಪರಂಜಿತಾಖಿಲಜಗದಘ ಮಲಾಪಹೋಪಸ್ಪರ್ಶನಾಮಲಾ ಸಾಕ್ಷಾದ್ ಭಗವತ್ಪದೀತ್ಯನು ಪಲಕ್ಷಿತವಚೋಭಿರಭಿಧೀಯಮಾನಾऽತಿಮಹತಾ ಕಾಲೇನ ಯುಗ ಸಹಸ್ರೋಪಲಕ್ಷಣೇನ ದಿವೋ ಮೂರ್ಧನ್ಯವತತಾರ ಯತ್ತದ್ವಿಷ್ಣುಪದಮಾಹುಃ ॥೧॥

ಯಜ್ಞಮೂರ್ತಿಯಾದ ಸಾಕ್ಷಾದ್ ಭಗವಾನ್ ವಿಷ್ಣು ಬಲಿಚಕ್ರವರ್ತಿಯ ಯಜ್ಞದಲ್ಲಿ ವಾಮನರೂಪದಿಂದ ಕಾಣಿಸಿಕೊಂಡು ತ್ರಿವಿಕ್ರಮನಾಗಿ ಬಲಪಾದದಿಂದ ಭೂಮಿಯನ್ನಳೆದು ನಿಂತು ಎಡಗಾಲೆತ್ತಿದಾಗ ಹೆಬ್ಬೆರಳಿನ ಉಗುರು ಬ್ರಹ್ಮಾಂಡಕಟಾಹಕ್ಕೆ ತಗುಲಿತು. ಕಟಾಹದಲ್ಲಿ ಬಿರುಕುಂಟಾಯಿತು. ಬಾಹ್ಯಜಲಾವರಣದ ನೀರು ಒಳಗೆ ನುಗ್ಗಿ ತ್ರಿವಿಕ್ರಮನ ಪಾದವನ್ನು ತೊಳೆಯಿತು. ಕೆಂಪಾದ ಪಾದಕಮಲ ಪರಾಗಧೂಳಿಯ ಸಂಪರ್ಕದಿಂದ ನೀರು ಕೆಂಪಾಗಿ ಅದನ್ನು ಆಚಮನ ಮಾಡುವವರ ಒಳಗಿನ ಪಾಪವನ್ನೂ ಹೊರಗಿನ ಮಲವನ್ನೂ ನೀಗಲು ಸಮರ್ಥವಾಯಿತು. ಪರರ ಮಲವನ್ನು ತೊಳೆದರೂ ತಾನು ನಿರ್ಮಲವೇ ಆಯಿತು. ಮುಂದೆ ಮುಂದೆ ಹರಿಯುತ್ತಿದ್ದಂತೆ ಜಹ್ನುಮುನಿ ಭಗೀರಥರಾಜ ಮುಂತಾದವರ ಸಂಬಂಧದಿಂದ ಜಾಹ್ನವೀ ಭಾಗೀರಥೀ ಮುಂತಾದ ಹೆಸರುಗಳು ಬಂದರೂ, ಇದೀಗ ಅಂಥ ಯಾವ ನಿಮಿತ್ತವೂ ಇಲ್ಲದೆ, ಸಾಕ್ಷಾದ್ ಭಗವಂತನ ಪಾದತೀರ್ಥವೆಂಬ ಕಾರಣದಿಂದ ಭಗವತ್ಪದೀ ವಿಷ್ಣುಪದೀ ಎಂದೇ ಕರೆಸಿಕೊಂಡಿತು. ಹೊರತು ಭಗವಂತನ ಪ್ರತಿಮಾಪಾದತೀರ್ಥವೆಂಬ ಗೌಣನಿಮಿತ್ತದಿಂದ ಅಲ್ಲ. ಸಾವಿರಾರು ಯುಗಗಳಷ್ಟು ದೀರ್ಘಕಾಲದ ಬಳಿಕ ವಿಷ್ಣುಪದಿಯು ಅಂತರಿಕ್ಷದ ತುತ್ತತುದಿಯಲ್ಲಿರುವ ಶಿಂಶುಮಾರಲೋಕದಲ್ಲಿ ಪ್ರಕಟವಾಯಿತು. ಈ ಲೋಕವು ಶಿಂಶುಮಾರ ಮೂರ್ತಿಯಾದ ವಿಷ್ಣುವಿನ ನಿವಾಸಸ್ಥಾನವಾದ್ದರಿಂದ ಇದನ್ನು ವಿಷ್ಣುಪದ ಎಂದು ಕರೆಯುತ್ತಾರೆ.

ಇಲ್ಲಿ ಎಡಗಾಲ ಹೆಬ್ಬೆರಳ ಉಗುರು ಬ್ರಹ್ಮಾಂಡಕಟಾಹದಲ್ಲಿ ಬಿರುಕು ಉಂಟುಮಾಡಿತೆಂದು ಹೇಳುವಲ್ಲಿ ಒಂದು ವಿಶೇಷ ಸೂಚನೆ ಇದೆ ಎಂದು ಶ್ರೀಮದಾಚಾರ್ಯರು ಹೇಳುತ್ತಾರೆ

ವಾರಾಹೇ ವಾಮಪಾದಂ ತು ತದನ್ಯೇಷು ತು ದಕ್ಷಿಣಮ್ ।
ಪಾದಂ ಕಲ್ಪೇಷು ಭಗವಾನ್ ಉಜ್ಜಹಾರ ತ್ರಿವಿಕ್ರಮಃ ॥

ಇತಿ ಚ ।

ವಾರಾಹಕಲ್ಪದಲ್ಲಿ ಮಾತ್ರ ಭಗವಾನ್ ತ್ರಿವಿಕ್ರಮ ಬಲಗಾಲಿಂದ ಭೂಮಿಯನ್ನಳೆದು ಎಡಗಾಲನ್ನೆತ್ತಿದ. ಬೇರೆ ದಿನಕಲ್ಪಗಳಲ್ಲಿ ಎಡಗಾಲಿಂದ ಭೂಮಿಯನ್ನಳೆದು ಬಲಗಾಲನ್ನೇ ಮೇಲಕ್ಕೆತ್ತಿದ ಎಂದೂ ಹೇಳಿದೆ.

'ಪಾದಾಂಗುಷ್ಠನಖನಿರ್ಭಿಣ್ಣಃ' ಎಂದಿಷ್ಟೇ ಹೇಳದೆ ವಾಮಪಾದಾಂಗುಷ್ಠವೆಂದು 'ವಾಮ' ಪದವನ್ನು ಸೇರಿಸಿದ್ದು ಈ ತ್ರಿವಿಕ್ರಮವಿಕ್ರಮ ಪ್ರತಿಕಲ್ಪಗಳಲ್ಲಿಯೂ ನಡೆಯುತ್ತದೆ, ಅವುಗಳಲ್ಲಿ ವಾರಾಹಕಲ್ಪದಲ್ಲಿ ಮಾತ್ರ ಎಡಗಾಲನ್ನೆತ್ತುತ್ತಾನೆ. ಬೇರೆ ಕಲ್ಪಗಳಲ್ಲಿ ಬಲಗಾಲನ್ನೆತ್ತುತ್ತಾನೆ ಎಂದು ಸೂಚಿಸುವುದಕ್ಕಾಗಿ.

---

* * *

ಇಳಾವೃತಖಂಡದಲ್ಲಿ ಶಿವ ಶೇಷನನ್ನೂ ಶೇಷಾಂತರ್ಗತಸಂಕರ್ಷಣನನ್ನೂ ಆರಾಧಿಸುತ್ತಾನೆ ಎಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ.

ಭವಾನೀನಾಥೈಃ ಸ್ತ್ರೀಗಣಾರ್ಬುದಸಹಸ್ರೈರವರುಧ್ಯಮಾನೋ ಭಗವತಶ್ಚತುರ್ಮೂರ್ತೇರ್ಮಹಾಪುರುಷಸ್ಯ ತುರೀಯಾಂ ತಾಮಸೀಂ ಮೂರ್ತಿಂ ಪ್ರಕೃತಿಮಾತ್ಮನಃ ಸಂಕರ್ಷಣಸಂಜ್ಞಾಮಾತ್ಮ ಸಮಾಧಿರೂಪೇಣ ಸನ್ನಿಧಾಪ್ಯೈತದಭಿಗೃಣನ್ ಭವ ಉಪಧಾವತಿ ॥ ೧೫ ॥

ಭವ ಉವಾಚ

ಓಂ ನಮೋ ಭಗವತೇ ಮಹಾಪುರುಷಾಯ ಸರ್ವಗುಣ-
ಸಂಖ್ಯಾತಾಯಾನಂತಾಯಾವ್ಯಕ್ತಾಯ ನಮ ಇತಿ ॥ ೧೬ ॥

ಅಲ್ಲಿ ಶಿವನನ್ನು ಸೇವಿಸಲು ಸಾವಿರಾರು ಕೋಟಿ ಸ್ತ್ರೀಯರ ಸಮೂಹಗಳೇ ಇವೆ. ಅವರೆಲ್ಲರಿಗೂ ಪಾರ್ವತಿ ಯಜಮಾನಿ. ಅವರ ಸೇವೆಯನ್ನು ಕೈಗೊಳ್ಳುತ್ತ ಶಿವ ತನ್ನ ಜನಕನಾದ ಸಂಕರ್ಷಣಮೂರ್ತಿಯನ್ನು ಆರಾಧಿಸುತ್ತಾನೆ. ಈ ಮೂರ್ತಿ

ಪರಮಪುರುಷನಾದ ವಾಸುದೇವಾದಿ ಚತುರ್ಮೂರ್ತಿಯುಳ್ಳ ಭಗವಂತನ ನಾಲ್ಕನೆಯ ಮೂರ್ತಿ. ಸಂಸಾರಕಾರಣವಾದ ತಮೋಗುಣಕ್ಕೆ ಈತ ಪ್ರವರ್ತಕ. ಇಂಥ ಸಂಕರ್ಷಣ ಮೂರ್ತಿಯನ್ನು ಮನಸ್ಸಿನ ಏಕಾಗ್ರತೆಯಿಂದ ಹೃದಯದಲ್ಲಿ ಇರಿಸಿಕೊಂಡು ಈ ಮಂತ್ರಸ್ತೋತ್ರಗಳನ್ನು ಜಪಿಸುತ್ತ ಆರಾಧಿಸುತ್ತಾನೆ, ಶಿವ–

ಶಿವನು ನುಡಿದ– ಸಕಲಗುಣಶಾಲಿ ಎಂದು ಪ್ರಸಿದ್ಧನಾದ ಶ್ರೇಷ್ಠಪುರುಷ ಭಗವಾನ್ ಶೇಷದೇವ. ಅವನು ತಾನು ಒಲಿಯದೆ ಇನ್ನೊಬ್ಬರಿಗೆ ಮೈದೋರುವುದಿಲ್ಲ. ಅವನೊಳಗಿರುವ ಸಂಕರ್ಷಣಮೂರ್ತಿ ಭಗವಾನ್ ಶ್ರೀಹರಿ ಪರಮಪುರುಷ. ಸಕಲಗುಣಸ್ವರೂಪನೆಂದು ಸಮಸ್ತವೇದ ಪ್ರತಿಪಾದ್ಯನಾಗಿದ್ದಾನೆ. ದೇಶಕಾಲಗುಣಗಳ ಎಲ್ಲೆಯನ್ನು ಮೀರಿದ್ದಾನೆ. ಒಲಿಯದೆ ಯಾರಿಗೂ ಮೈದೋರುವವನಲ್ಲ. ಅಂಥ ಪ್ರಣವ ಪ್ರತಿಪಾದ್ಯನಾದ ಭಗವಂತನಿಗೆ ನಮಸ್ಕಾರ.

ಇಲ್ಲಿ 'ತುರೀಯಾಂ ತಾಮಸೀಂ ಮೂರ್ತಿಂ ಸಂಕರ್ಷಣಸಂಜ್ಞಾಂ' ಹರಿಯ 'ಸಂಕರ್ಷಣ' ಎಂಬ ನಾಲ್ಕನೇ ಮೂರ್ತಿಯನ್ನು ಶಿವ ಆರಾಧಿಸುತ್ತಾನೆ ಎಂದಿದೆ. ಆದರೆ ಮುಂದೆ ೧೯ನೇ ಶ್ಲೋಕದಲ್ಲಿ ಶಿವ ಸಂಕರ್ಷಣನನ್ನು ನಾಗಕನ್ನಿಕೆಯರಿಂದ ಸೇವಿತನೆಂದು ಸ್ತುತಿಸುತ್ತಾನೆ. ಇದು ಶೇಷನಿಗೆ ಅನ್ವಯಿಸುವಂಥದ್ದು. ಎನ್ನುವ ಸಮಸ್ಯೆ ಬರುತ್ತದೆ. ಅದಕ್ಕೆ ನಾಗಕನ್ನಿಕೆಯರಿಂದ ಸೇವಿತನಾದ ಶೇಷನನ್ನೂ ಅವನ ಅಂತರ್ಗತನಾದ ಸಂಕರ್ಷಣನನ್ನೂ ಸೇರಿಸಿ ಜೊತೆಯಾಗಿಯೇ ಮಿಶ್ರಸ್ತುತಿ ಮಾಡುತ್ತಿದ್ದಾನೆ ಶಿವ ಎಂದು ಸಮಾಧಾನ–

ಅನಂತಾಂತಃಸ್ಥಿತೋ ವಿಷ್ಣುರನಂತಶ್ಚ ಸಹಾಮುನಾ ।
ಪೂಜ್ಯತೇ ಗಿರಿಶೇನೇಶ ಇಲಾವೃತಗತೇನ ತು ॥ ಇತಿ ಚ ।

ಜೀವವ್ಯಪೇಕ್ಷಯಾ ಚೈವ ತಥಾಂತರ್ಯಾಮ್ಯಪೇಕ್ಷಯಾ ।
ಮಿಶ್ರಾಸ್ತು ಸ್ತುತಯೋ ಜ್ಞೇಯಾ ವಿಷ್ಣೋರನ್ಯತ್ರ ಕೇವಲಮ್ ॥
ಇತಿ ಚ ॥

ಶೇಷಾಂತರ್ಗತನಾದ ಸಂಕರ್ಷಣನನ್ನೂ ಅವನ ಜೊತೆಗೆ ಅವನಿಗೆ ಅಧಿಷ್ಠಾನ ರೂಪವಾಗಿ ಶೇಷನನ್ನೂ ಇಲಾವೃತಖಂಡದಲ್ಲಿರುವ ಶಿವ ಪೂಜಿಸುತ್ತಾನೆ ಎಂದೂ ಹೇಳಿದೆ.

ಮಿಶ್ರಸ್ತುತಿಗಳನ್ನು ಜೀವ ವಿವಕ್ಷೆಯಿಂದಲೂ ಜೀವಾಂತರ್ಯಾಮಿಯ ವಿವಕ್ಷೆಯಿಂದಲೂ ಕೂಡಿಸಬೇಕು. ಜೀವನಲ್ಲಿ ಅಮುಖ್ಯವೃತ್ತಿ, ಅಂತರ್ಯಾಮಿಯಲ್ಲಿ ಮುಖ್ಯವೃತ್ತಿಯನ್ನಿಟ್ಟುಕೊಳ್ಳಬೇಕು. ಬೇರೆ ಸ್ತುತಿಗಳನ್ನು ಮಾತ್ರ ಕೇವಲ ಪರಮಾತ್ಮ ವಿವಕ್ಷೆಯಿಂದಲೇ ಕೂಡಿಸಬೇಕು ಎಂದೂ ಹೇಳಿದೆ.

ಪ್ರಕೃತದಲ್ಲಿ ಶಿವ ಮಾಡಿದ ಸ್ತುತಿ ಮಿಶ್ರಸ್ತುತಿಯಾದುದರಿಂದ ಭಗವಂತನ ಮಹಿಮೆಯನ್ನು ಹೇಳುವ ಶಬ್ದಗಳನ್ನು ಕೂಡ ಅಮುಖ್ಯವೃತ್ತಿಯಿಂದ ಶೇಷನಲ್ಲಿಯೂ ಕೂಡಿಸಬೇಕು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ಸಪ್ತದಶೋಽಧ್ಯಾಯಃ ॥

—o—

ಅಧ್ಯಾಯ-೧೮

ಅಧ್ಯಾಯಸಾರಾಂಶ

ಭದ್ರಾಶ್ವಖಂಡದಲ್ಲಿ ಭದ್ರಶ್ರವನೆಂಬ ಧರ್ಮಪುತ್ರ ಭಗವಂತನ ಹಯವದನ ರೂಪವನ್ನು ಉಪಾಸನ ಮಾಡುತ್ತಾನೆ. ಹರಿವರ್ಷಖಂಡದಲ್ಲಿ ಪ್ರಹ್ಲಾದ ನರಸಿಂಹನನ್ನು ಭಜಿಸುತ್ತಾನೆ. ಕೇತುಮಾಲದಲ್ಲಿ ರತಿದೇವಿ ಕಾಮನನ್ನು, ರತಿಯ ಅಂತರ್ಗತಳಾಗಿ ಲಕ್ಷ್ಮೀದೇವಿ ಕಾಮಾಂತರ್ಗತನಾದ ಪ್ರದ್ಯುಮ್ನನನ್ನು ಆರಾಧಿಸುತ್ತಾರೆ. ಮತ್ತು ಮೂವತ್ತಾರು ಸಾವಿರ ಮಂದಿ ಹಗಲಿನ ಅಭಿಮಾನಿದೇವತೆಗಳೂ ಮೂವತ್ತಾರು ಸಾವಿರ ಮಂದಿ ರಾತ್ರಿಯ ಅಭಿಮಾನಿದೇವತಾಸ್ತ್ರೀಯರೂ ಇಲ್ಲಿ ಹಯವದನನ್ನು ಸೇವಿಸುತ್ತಾರೆ. ರಮ್ಯಕಖಂಡದಲ್ಲಿ ವೈವಸ್ವತಮನು ಮತ್ಸ್ಯಮೂರ್ತಿಯನ್ನು ಆರಾಧಿಸುತ್ತಾನೆ. ಹಿರಣ್ಮಯಖಂಡದಲ್ಲಿ ಪಿತೃಗಣಾಧಿಪತಿಯಾದ ಅರ್ಯಮನು ಕೂರ್ಮಮೂರ್ತಿಯನ್ನು ಆರಾಧಿಸುತ್ತಾನೆ. ಉತ್ತರ ಕುರುಖಂಡದಲ್ಲಿ ಭೂದೇವಿ ವರಾಹನನ್ನು ಆರಾಧಿಸುತ್ತಾಳೆ.

* * *

ಶ್ರೀಹರಿ ಸರ್ವಶಕ್ತನಾಗಿದ್ದು ಅನಾಯಾಸದಿಂದಲೇ ಎಲ್ಲವನ್ನೂ ಮಾಡುವುದರಿಂದ ಅಕರ್ತನೆನಿಸಿದ್ದಾನೆ ಎಂದು ಭದ್ರಾಶ್ವಖಂಡದಲ್ಲಿ ಭದ್ರಶ್ರವ ಹಯವದನನನ್ನು ಸ್ತುತಿಸುತ್ತಾನೆ.

ವಿಶ್ವೋದ್ಭವಸ್ಥಾನನಿರೋಧಕರ್ಮ ತೇ
ಹ್ಯಕರ್ತುರಂಗೀಕೃತಮಪ್ಯಪಾವೃತಮ್ ।
ಯುಕ್ತಂ ನ ಚಿತ್ರಂ ತ್ವಯಿ ಕಾರ್ಯಕಾರಣೇ
ಸರ್ವಾತ್ಮನಿ ವ್ಯತಿರಿಕ್ತೇ ಚ ವಸ್ತುನಿ ॥ ೫ ॥

ಜಗಜ್ಜನ್ಮಾದಿಕರ್ತೃತ್ವಧರ್ಮ ನಿನ್ನಲ್ಲಿ ಹೇಗೆ? ನೀನು ಅಕರ್ತ ತಾನೆ? ಮತ್ತು ಜಗತ್ತಿನ ಸೃಷ್ಟಿಸ್ಥಿತಿಲಯಕಾರ್ಯಗಳು ಪರಸ್ಪರ ವಿರುದ್ಧವಾಗಿರುವುದರಿಂದ ಒಬ್ಬನಲ್ಲೇ ಆ ಮೂರು ಧರ್ಮಗಳು ಹೇಗೆ ಜೊತೆಗಿರಬಲ್ಲುವು? ಎಂಬ ಆಕ್ಷೇಪ ಸರಿಯಲ್ಲ.

ಸರ್ವಶಕ್ತನಾದ ನೀನು ಅನಾಯಾಸವಾಗಿಯೇ ಜಗಜ್ಜನ್ಮಾದಿಕಾರ್ಯಗಳನ್ನು ನಡೆಸುವುದರಿಂದ ನಿನ್ನನ್ನು ವೇದಗಳು ಅಕರ್ತನೆನ್ನುತ್ತಿವೆಯಷ್ಟೆ, ಅದರಿಂದ ಜ್ಞಾನಿಗಳು ನಿನ್ನನ್ನು ಜನ್ಮಾದಿಕರ್ತನೆಂದೇ ಸ್ಪಷ್ಟವಾಗಿ ಪ್ರತಿಪಾದಿಸುತ್ತಾರೆ. ಮತ್ತು ವಿಚಿತ್ರ ಅನೇಕಕಾರ್ಯಕರ್ತನಾದ, ಪ್ರಕೃತ್ಯಾದಿ ಸರ್ವಕಾರಣಗಳ ಅಸ್ತಿತ್ವವನ್ನು ನಿಯಂತ್ರಿಸುವ ನೀನು ಲೋಕವಿಲಕ್ಷಣನಾದ್ದರಿಂದ ವಿರುದ್ಧಕಾರ್ಯಕರ್ತೃತ್ವವು ನಿನ್ನಲ್ಲಿ ಅಸಂಭಾವಿತವಲ್ಲ, ಯುಕ್ತವೆ.

[೧]ಇಲ್ಲಿ ಸರ್ವಕರ್ತನಾದ ಪರಮಾತ್ಮ ಅಕರ್ತನೆನಿಸುವುದು ಹೇಗೆ ಎಂಬ ಪ್ರಶ್ನೆಗೆ ಶ್ರೀಧರ ವಿಶ್ವನಾಥ ವ್ಯಾಖ್ಯಾನಗಳಲ್ಲಿ 'ಗುಣಗಳೇ ಕರ್ತೃಗಳಾದ್ದರಿಂದ ಪರಮಾತ್ಮ ಅಕರ್ತೃ. ಅವನನ್ನು ಕರ್ತನೆನ್ನುವುದು ಕೇವಲ ಔಪಚಾರಿಕ.' ಎಂದಿದ್ದಾರೆ. ಆದರೆ ಜಡವಾದ ಗುಣಗಳ ಮೂಲಕ ಚೇತನನಾದ ಪರಮಾತ್ಮನೆ ಸೃಷ್ಟ್ಯಾದಿಗಳನ್ನು ಮಾಡುವುದರಿಂದ 'ಗುಣಗಳು ಉಪಾದಾನ, ಪರಮಾತ್ಮನು ಕರ್ತ'ನೆಂದೇ ಹೇಳಬೇಕು. ವೀರರಾಘವವ್ಯಾಖ್ಯಾನದಲ್ಲಿ 'ಪರಮಾತ್ಮ ಸಾಧಾರಣ ಕಾರಣ. ಜೀವರು ದೇವದಾನವಾದಿ ಶರೀರ ಹೊಂದಲು ಅವರ ಕರ್ಮವೇ ಕಾರಣ. ಅದರಿಂದ ಪರಮಾತ್ಮ ಕರ್ತನಲ್ಲ' ಎಂದಿದ್ದಾರೆ. ಆದರೆ ಕರ್ಮವೂ ಜಡವಾದ್ದರಿಂದ ಕರ್ಮಕ್ಕೆ ಅನುಸಾರವಾಗಿ ಪರಮಾತ್ಮನೇ ದೇವದಾನವಾದಿ ನಾನಾಶರೀರವನ್ನು ಜೀವರಿಗೆ ನಿರ್ಮಿಸಿ ಕೊಡುತ್ತಾನೆ, ಅವನೇ ಕರ್ತನೆನ್ನಬೇಕು. ಭಗವತ್ಪ್ರಸಾದವ್ಯಾಖ್ಯಾನದಲ್ಲಿ

---

೧. ಮಾಯಯಾ ಸರ್ವಾತ್ಮನಿ ಕಾರ್ಯಸ್ಯ ಕಾರಣೇ ಸ್ರಷ್ಟರಿ ಕರ್ಮಯುಕ್ತಂ । ವಸ್ತುತಃ ಸರ್ವವ್ಯತಿರಿಕ್ತೇ ನಿರುಪಾಧೌ ಅನಾವೃತತ್ವಮಕರ್ತೃತ್ವಂ ಚ ಯುಕ್ತಮ್ ।-ಶ್ರೀಧರಃ

ಅಕರ್ತುರಿತಿ ಗುಣಾನಾಮೇವ ಕರ್ತೃತ್ವಾದಿತಿ ಭಾವಃ। ಅಂಗೀಕೃತಮುಕ್ತಂ ವೇದೇನೇತಿ ತ್ವಯ್ಯುಪಚಾರಾದಿತಿ ಭಾವಃ। -ವಿಶ್ವನಾಥಃ

ಅತಿವಿಚಿತ್ರಜಗತ್ಸೃಷ್ಟ್ಯಾದಿ ಕರ್ತೃತ್ವೇಽಪಿ ತತ್ತತ್ಕರ್ಮಾಯತ್ತದೇವಾದಿವೈಚಿತ್ರ್ಯಾದ್ ಅಕರ್ತುಃ। -ವೀರರಾಘವಃ।

ಪ್ರಕೃತಿಪುರುಷದ್ವಾರಾ ಜಗದ್ ವಿಧಾತುಸ್ತವಾಕರ್ತೃತ್ವಮೇವ । ತತ್ಕಾರಣತ್ವೇನ ಪ್ರಯೋಜಕತ್ವೇನ ತತ್ಕರ್ತೃತ್ವಮಪಿ ಯುಕ್ತಮ್ । -ಭಗವತ್ಪ್ರಸಾದಾಚಾರ್ಯಃ

ನನು ಕಥಮಕರ್ತುರಸಂಗಸ್ಯ ಕರ್ಮ ಸಂಭವತೀತ್ಯಾಶಂಕ್ಯ ವಸ್ತುತೋ ವ್ಯತಿರಿಕ್ತತ್ವೇಽಪಿ ಅನಂತಾಚಿಂತ್ಯಶಕ್ತಿತ್ವೇನ ಸರ್ವಕಾರ್ಯಕಾರಣತ್ವಾತ್ ಸರ್ವಾತ್ಮಕತ್ವಾಚ್ಚೇತ್ಯಾಹುಃ । -ಗಿರಿಧರಃ।

ಅಕರ್ತುಃ ನಾಸ್ತಿಕರ್ತಾ ಯಸ್ಯ ಸ ತಥಾಸ್ಯ । ಯದ್ವಾ ಸಂಕಲ್ಪಮಾತ್ರೇಣ ವಿಶ್ವಜನ್ಮಾದಿಹೇತುತ್ವಾತ್ ಭೋಗಾರ್ಥಕರ್ತೃತ್ವಶೂನ್ಯತ್ವಾತ್ ಅಕರ್ತುರಿತಿ । –ಶುಕದೇವಃ

'ಪ್ರಕೃತಿಪುರುಷದ್ವಾರಾ ಜಗತ್ತನ್ನು ನಿರ್ಮಿಸುವುದರಿಂದ ಅಕರ್ತ. ಅವರಿಗೆ ಪ್ರೇರಕನಾದ್ದರಿಂದ ಕರ್ತ' ಎಂದಿದ್ದಾರೆ. ಆದರೆ ಪರಮಾತ್ಮ ಕೇವಲ ಪ್ರೇರಕನಲ್ಲ. ತಾನೂ ಒಳಗೆ ನಿಂತು ಬಿಂಬರೂಪನಾಗಿ ಆಯಾ ಕಾರ್ಯ ಮಾಡುತ್ತಾನೆ, ಅದರಿಂದ ಅಕರ್ತನೆನಿಸಲು ಶಕ್ಯವಿಲ್ಲ. ಗಿರಿಧರವ್ಯಾಖ್ಯಾನದಲ್ಲಿ 'ಪರಮಾತ್ಮ ಅಸಂಗನಾದ್ದರಿಂದ ಅಕರ್ತ, ಅಚಿಂತ್ಯಶಕ್ತಿಯಿಂದ ಕರ್ತನೂ ಉಪಾದಾನನೂ ಆಗುತ್ತಾನೆ' ಎಂದಿದ್ದಾರೆ. ಆದರೆ ಅಸಂಗನೆಂದರೆ ಪುಣ್ಯಪಾಪಲೇಪರಹಿತ, ದೋಷರಹಿತ ಎಂದರ್ಥ ಹೊರತು ಅಕರ್ತನೆಂದರ್ಥವಲ್ಲ. ಅದರಿಂದ ಅಕರ್ತೃತ್ವ ಪ್ರಮಾಣಸಿದ್ಧವಲ್ಲವೆಂದ ಮೇಲೆ ಕರ್ತೃತ್ವ ಅಕರ್ತೃತ್ವಗಳೆಂಬ ವಿರುದ್ಧ ಧರ್ಮವನ್ನು ಕೂಡಿಸುವ ಅಚಿಂತ್ಯಶಕ್ತಿ ಒಪ್ಪಲೇ ಬೇಕಾಗಿಲ್ಲ. ಅಣುತ್ವಮಹತ್ವಾದಿ ವಿರುದ್ಧಧರ್ಮವನ್ನು ಕೂಡಿಸಲು ಮಾತ್ರ ಅಚಿಂತ್ಯಶಕ್ತಿ ಒಪ್ಪಬೇಕು.

ಅದರಿಂದ ಅನಾಯಾಸವಾಗಿ ಎಲ್ಲವನ್ನೂ ಮಾಡುವುದರಿಂದ ಪರಮಾತ್ಮ ಅಕರ್ತನೆಂದೇ ಹೇಳಬೇಕು. 'ಸಂಕಲ್ಪಮಾತ್ರದಿಂದ ಎಲ್ಲವನ್ನೂ ಮಾಡುವುದರಿಂದ, ತನ್ನ ಸುಖಭೋಗಕ್ಕಾಗಿ ಮಾಡದಿರುವುದರಿಂದ, ತನಗೂ ಒಬ್ಬ ಕರ್ತ ನಿಲ್ಲದಿರುವುದರಿಂದ ಅಕರ್ತನೆಂ'ದು ಶುಕದೇವವ್ಯಾಖ್ಯಾನದಲ್ಲಿ ಹೇಳಿದ್ದಾರೆ. ಅದನ್ನು ಒಪ್ಪುವುದರಲ್ಲಿ ಬಾಧಕವಿಲ್ಲ. ಶ್ರೀಮದಾಚಾರ್ಯರ ವಾಕ್ಯದಲ್ಲಿ ಅದನ್ನೂ ಉಪಲಕ್ಷಣವಾಗಿ ತೆಗೆದುಕೊಳ್ಳಬಹುದು.

ಅಪ್ರಯಾಸೇನ ಕರ್ತೃತ್ವಮಕರ್ತೃತ್ವಮಿಹೋಚ್ಯತೇ ।
ಮಹಾಶಕ್ತಿತ್ವತಸ್ತಚ್ಚ ಯುಜ್ಯತೇ ಪರಮಸ್ಯ ತು । ಇತಿ ತಂತ್ರಸಾರೇ ।

ಅನಾಯಾಸದಿಂದ ಎಲ್ಲವನ್ನೂ ಮಾಡುವುದೇ ಅಕರ್ತೃತ್ವವೆಂದು ವೇದಾದಿಗಳಲ್ಲಿ ವಿವಕ್ಷಿತವಾಗಿದೆ. ಒಬ್ಬನೇ ಪರಮಾತ್ಮ ಅನಾಯಾಸವಾಗಿ ಎಲ್ಲವನ್ನೂ ಮಾಡುವುದು ಅಸಂಭಾವಿತವಾಗಿ ಕಂಡರೂ ಮಹಾಶಕ್ತಿ ಉಳ್ಳವನಾಗಿದ್ದು ಲೋಕವಿಲಕ್ಷಣನಾದ್ದರಿಂದ ಕೂಡುತ್ತದೆ ಎಂದು ತಂತ್ರಸಾರದಲ್ಲಿ ಹೇಳಿದೆ.

* * *

ಕೇತುಮಾಲಖಂಡದಲ್ಲಿ ರತಿದೇವಿಯ ಅಂತರ್ಗತಳಾದ ರಮಾದೇವಿ ಕಾಮದೇವಾಂತರ್ಗತನಾದ ಭಗವಂತನನ್ನು ಉಪಾಸನೆ ಮಾಡುತ್ತಾಳೆ.

ಕೇತುಮಾಲೇ ಭಗವಾನ್ ಕಾಮದೇವಸ್ವರೂಪೇಣಾಸ್ತೇ ಲಕ್ಷ್ಮ್ಯಾಃ ಪ್ರಿಯಚಿಕೀರ್ಷಯಾ । ಪ್ರಜಾಪತೇರ್ದುಹಿತೄಣಾಂ ತದ್ವರ್ಷ-ಪತೀನಾಂ ಪುರುಷಾಯುಷಾಽಹೋರಾತ್ರ ಪರಿಸಂಖ್ಯಾನಾನಾಂ

ಯಾಸಾಂ ಗರ್ಭಾ ಮಹಾಪುರುಷಮಹಾಸ್ತ್ರತೇಜಸೋದ್ವೇಜಿತ-ಮನಸಾಂ ವಿಧ್ವಸ್ತಾ ವ್ಯಸವಃ ಸಂವತ್ಸರಾಂತೇ ನಿಪತಂತಿ ॥ ೧೫ ॥

ತದ್ ಭಗವತೋ ಮಾಯಾಮಯಂ ರೂಪಂ ಪರಮಸಮಾಧಿ-ಯೋಗೇನ ರಮಾದೇವೀ ಸಂವತ್ಸರಸ್ಯ ರಾತ್ರಿಷು ಪ್ರಜಾಪತೇ-ರ್ದುಹಿತೃಭಿರುಪೇತಾಽಹಸ್ಸು ತದ್ಭರ್ತೃಭಿರುಪೇತೋಪಾಸ್ತೇ । ಇದಂ ಚೋದಾಹರತಿ ॥ ೧೬ ॥

ಕೇತುಮಾಲ ಖಂಡದಲ್ಲಿ ಕಾಮದೇವನಿದ್ದಾನೆ. ಅವನಲ್ಲಿ ಪ್ರದ್ಯುಮ್ನ ಸ್ವರೂಪದಿಂದ ಭಗವಂತ ಆವಿಷ್ಟನಾಗಿದ್ದಾನೆ. ಇದು ರತಿಯಲ್ಲಿ ಆವಿಷ್ಟಳಾದ ಲಕ್ಷ್ಮೀದೇವಿಗೆ ಪ್ರಿಯ ಉಂಟುಮಾಡುವ ಇಚ್ಛೆಯಿಂದ. ಮತ್ತು ಪ್ರಜಾಪತಿಯಾದ ಚತುರ್ಮುಖ ಬ್ರಹ್ಮನ ಮಕ್ಕಳಾದ ಹಗಲುರಾತ್ರಿಗಳ ಅಭಿಮಾನಿದೇವತೆಗಳೂ ಕೇತುಮಾಲಖಂಡದಲ್ಲಿ ಇದ್ದಾರೆ. ಅವರಿಗೂ ಪ್ರಿಯ ಉಂಟುಮಾಡುವ ಇಚ್ಛೆಯಿಂದ ಶ್ರೀಹರಿ ಪ್ರದ್ಯುಮ್ನರೂಪದಿಂದ ಮನ್ಮಥನಲ್ಲಿ ಆವಿಷ್ಟನಾಗಿ ಅವರಿಂದ ಪೂಜಿತನಾಗುತ್ತಾನೆ. ಹಗಲಿನ ಅಭಿಮಾನಿದೇವತೆಗಳು ಕೇತುಮಾಲಖಂಡದ ಅಧಿಪತಿಗಳು. ಅವರು ಸಂಖ್ಯೆಯಲ್ಲಿ ಪುರುಷಾಯುಷ್ಯದ ಹಗಲುಗಳಷ್ಟು ಅಂದರೆ ಮೂವತ್ತಾರು ಸಾವಿರ. ರಾತ್ರಿಯ ಅಭಿಮಾನಿಗಳಾದ ದೇವತಾಸ್ತ್ರೀಯರೂ ಅಷ್ಟೇ, ಅಂದರೆ ಮೂವತ್ತಾರು ಸಾವಿರ ಇದ್ದಾರೆ. ಪ್ರತಿಯೊಂದು ವರ್ಷದ ಕೊನೆಯಲ್ಲಿ ಶ್ರೀಪರಮಪುರುಷ ನಾರಾಯಣನ ಮಹಾ ಅಸ್ತ್ರವಾದ ಸುದರ್ಶನ ಚಕ್ರದ ತೇಜಸ್ಸಿನಿಂದ ಮನಸ್ಸಿನಲ್ಲಿ ಉದ್ವೇಗಗೊಳ್ಳುವ ರಾತ್ರ್ಯಭಿಮಾನಿ ದೇವತಾಸ್ತ್ರೀಯರ ಗರ್ಭಗಳು ಧ್ವಂಸವಾಗಿ ಶವವಾಗಿ ಬೀಳುತ್ತವೆ.

ಭಗವಂತನ ಜ್ಞಾನೇಚ್ಛಾರೂಪವಾದ ಪ್ರದ್ಯುಮ್ನರೂಪವನ್ನು ರಮಾದೇವಿಯೂ ಭಗವಂತನ ಪ್ರಾಕೃತ ಪ್ರತಿಮಾರೂಪನಾದ ಕಾಮದೇವನನ್ನು ರಮಾದೇವಿಯ ಪ್ರತಿಮಾರೂಪಳಾದ ರತಿದೇವಿಯೂ ಉತ್ತಮಧ್ಯಾನಯೋಗದಿಂದ ರಾತ್ರಿಗಳಲ್ಲಿ ಬ್ರಹ್ಮನ ಕುಮಾರಿಯರೊಂದಿಗೂ ಹಗಲುಗಳಲ್ಲಿ ಅವರ ಪತಿಗಳೊಂದಿಗೂ ಸೇವಿಸುತ್ತಾಳೆ. ಈ ಮಂತ್ರವನ್ನೂ ಸ್ತೋತ್ರಗಳನ್ನೂ ಜಪಿಸುತ್ತಾಳೆ—

ಇಲ್ಲಿ ಬೇರೆ ವ್ಯಾಖ್ಯಾನಕಾರರು ಭಗವಂತ ಕಾಮದೇವರೂಪದಿಂದ ಕೇತುಮಾಲಖಂಡದಲ್ಲಿರುತ್ತಾನೆ ಎಂದು ಮೇಲು ನೋಟಕ್ಕೆ ಕಾಣುವ ಅರ್ಥವನ್ನೇ ಇಟ್ಟುಕೊಂಡಿದ್ದಾರೆ. ಗಿರಿಧರ ವ್ಯಾಖ್ಯಾನದಲ್ಲಿ 'ಪ್ರದ್ಯುಮ್ನನಾಮಕ ಭಗವಂತ ಕಾಮದೇವರೂಪದಿಂದಿದ್ದಾನೆ' ಎಂದಿದ್ದಾರೆ. ಆದರೆ ಲಕ್ಷ್ಮಿ ರತಿರೂಪದಿಂದಿರುತ್ತಾಳೆ ಎನ್ನಲಿಲ್ಲ. ಹೀಗಾಗಿ ಸಾಕ್ಷಾತ್ ಲಕ್ಷ್ಮಿ ಎಂದೇ ಗ್ರಹಿಸಬೇಕು. ಆಗ ಸಾಕ್ಷಾತ್ ಲಕ್ಷ್ಮಿ ಹರಿಯ ಆವೇಶಾವತಾರಕ್ಕೆ ಪತ್ನಿಯಾಗುವುದಿಲ್ಲ ಎಂಬ ನಿಯಮಕ್ಕೆ ಭಂಗ ಬರುತ್ತದೆ.

ವೀರರಾಘವ ಭಗವತ್ಪ್ರಸಾದವ್ಯಾಖ್ಯಾನಗಳಲ್ಲಿ 'ಕಾಮದೇವಸ್ವರೂಪ' ಎಂದರೆ ಪ್ರದ್ಯುಮ್ನ ರೂಪ ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಶ್ರೀಮದಾಚಾರ್ಯರು ಉದಾಹರಿಸುವ ಬ್ರಹ್ಮಾಂಡಪುರಾಣವಚನಾನುಸಾರ 'ಕಾಮದೇವಸ್ವರೂಪ'ವೆಂದರೆ ಕಾಮದೇವನೊಳಗಿರುವ ಭಗವಂತನ ಸ್ವರೂಪವೆಂದೇ ಹೇಳಬೇಕು.

'ಮಾಯಾಮಯಂ ರೂಪಂ' ಎಂದರೆ 'ರಾಜಸ ರೂಪ' ಎಂದು ಗಿರಿಧರವ್ಯಾಖ್ಯಾನವಿದೆ. ತ್ರಿಗುಣವರ್ಜಿತನಾದ ಭಗವಂತನಿಗೆ ರಜೋಗುಣ ಮಯವಾದ ರೂಪವನ್ನು ಒಪ್ಪಲಾಗದು. 'ತನ್ನ ಸಂಕಲ್ಪದಿಂದ ಸ್ವೀಕೃತವಾದ ರೂಪ' ಎಂದು ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳಿವೆ. ಶುದ್ಧಸತ್ವಾತ್ಮಕವಾದ ಜಡಶರೀರವನ್ನು ಭಗವಂತ ಸ್ವೀಕರಿಸುತ್ತಾನೆ ಎಂದು ಅವರ ಅಭಿಪ್ರಾಯ. ಆದರೆ ಭಗವಂತನಿಗೆ ಜಡಶರೀರವಿಲ್ಲ. ಅದರಿಂದ 'ಮಾಯಾಮಯರೂಪ'ವೆಂದರೆ 'ಶುದ್ಧಜ್ಞಾನೇಚ್ಛಾತ್ಮಕವಾದ ಸ್ವರೂಪಶರೀರ' ಎಂದೇ ಅರ್ಥ.

ಕಾಮದೇವೇ ಸ್ಥಿತಂ ವಿಷ್ಣುಮುಪಾಸ್ತೇ ಶ್ರೀ ರತಿಸ್ಥಿತಾ ।
ಕಾಮದೇವಂ ರತಿಶ್ಚಾಪಿ ವಿಷ್ಣೋಸ್ತು ಪ್ರಾಕೃತಾಂ ತನುಮ್ ॥
ಇತಿ ಬ್ರಹ್ಮಾಂಡೇ ।

ರತಿಯಲ್ಲಿ ಅಂತರ್ಗತಳಾದ ಶ್ರೀದೇವಿ ಕಾಮದೇವಾಂತರ್ಗತನಾದ ಜ್ಞಾನೇಚ್ಛಾ ಸ್ವರೂಪನಾದ ವಿಷ್ಣುವನ್ನು ಉಪಾಸನ ಮಾಡುತ್ತಾಳೆ. ರತಿಯೂ ಕೂಡ ವಿಷ್ಣುವಿನ ಪ್ರಾಕೃತಪ್ರತಿಮೆಯಂತಿರುವ ಕಾಮದೇವನನ್ನು ಉಪಾಸನೆ ಮಾಡುತ್ತಾಳೆ ಎಂದು ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ.

'ರತಿಶ್ಚಾಪಿ' ಎಂಬಲ್ಲಿರುವ ಚಕಾರದಿಂದ ಅಪ್ರಾಕೃತ ಜ್ಞಾನೇಚ್ಛಾರೂಪವಾದ ವಿಷ್ಣುರೂಪವನ್ನು ಶ್ರೀದೇವಿಯ ಉಪಾಸನೆ ಮಾಡುತ್ತಾಳೆ ಎಂದೂ ಸಮುಚ್ಚಯ ಮಾಡಬೇಕು. ಕಾಮದೇವನು ವಿಷ್ಣುವಿನ ಚೇತನಪ್ರತಿಮೆಯಾದರೂ ಅಚೇತನ ಪ್ರತಿಮೆಯಂತೆಯೆ, ವಿಷ್ಣುವಿನ ಪ್ರೇರಣೆ ಇಲ್ಲದಿದ್ದರೆ ಚೇತನವೂ ಅಚೇತನದಂತೆಯೇ ಆಗುತ್ತದೆ ಎಂದು ಅಭಿಪ್ರಾಯದಿಂದ 'ವಿಷ್ಣೋಸ್ತು ಪ್ರಾಕೃತಾಂ ತನುಂ' ಎಂದಿದೆ.

* * *

'ಇಂದ್ರಾದಿಲೋಕಪಾಲಕರು ಭಗವಂತನ ಅನುಗ್ರಹವಿಲ್ಲದೆ ಲೋಕರಕ್ಷಣೆ ಮಾಡಲಾರರು. ಇದು ಅವರಿಗೆ ಗೊತ್ತು. ಆದರೂ ಒಮ್ಮೆ ತಾವೇ ಲೋಕರಕ್ಷಣೆ ಮಾಡುವೆವೆಂದು ಸ್ಪರ್ಧಿಸಿ ಸೋತರು, ಎಂದು ವೈವಸ್ವತಮನು ರಮ್ಯಕಖಂಡದಲ್ಲಿ ಭಗವಾನ್ ಮತ್ಸ್ಯಮೂರ್ತಿಯನ್ನು ಸ್ತುತಿಸುತ್ತಾನೆ.

ಯಂ ಲೋಕಪಾಲಾಃ ಕಿಲ ಮತ್ಸರಜ್ವರಾ
ಹಿತ್ವಾ ಯತಂತೋಽಪಿ ಪೃಥಕ್ ಸಮೇತ್ಯ ಚ ।
ಪಾತುಂ ನ ಶೇಕುರ್ದ್ವಿಪದಶ್ಚತುಷ್ಪದಃ
ಸರೀಸೃಪಸ್ಥಾಸ್ನು ಯದತ್ರ ದೃಶ್ಯತೇ ॥ ೨೭ ॥

ಒಮ್ಮೆ ಇಂದ್ರಾದಿಲೋಕಪಾಲಕರು ತಾವೇ ಲೋಕರಕ್ಷಕರೆಂದುಕೊಂಡು ನಿನ್ನ ಮೇಲಿನ ಅಸೂಯೆಯಿಂದ ಬೇಯುತ್ತ ನಿನ್ನನ್ನು ಬಿಟ್ಟು ಎಷ್ಟೇ ಪ್ರಯತ್ನಪಟ್ಟರೂ ಒಬ್ಬೊಬ್ಬರಾಗಿಯಾಗಲಿ ಜೊತೆಸೇರಿಕೊಂಡಾಗಲಿ ಮನುಷ್ಯ ಪಶು ಸರೀಸೃಪ ಸ್ಥಾವರಗಳನ್ನು ಮತ್ತು ಬ್ರಹ್ಮಾಂಡದಲ್ಲಿ ಇನ್ನೇನೇನು ಕಂಡು ಬರುವುವೋ ಅವಾವುದನ್ನೂ ರಕ್ಷಿಸಲಾಗದೆಹೋದರು.

ಇಂದ್ರಾದಿಲೋಕಪಾಲಕರು ಮಹಾಭಗವದ್ಭಕ್ತರು. ಭಗವಂತನ ಅನುಗ್ರಹವಿಲ್ಲದೆ ತಾವೇನೂ ಮಾಡಲಾರೆವೆಂದು ಸದಾ ತಿಳಿಯುವವರು. ಅವರು ಹೇಗೆ ಭಗವಂತನೊಡನೆ ಸ್ಪರ್ಧಿಸುತ್ತಾರೆ? ಇದು ಸಂಭವನೀಯವೆ? ಎಂಬ ಪ್ರಶ್ನೆ ಬಂದರೆ ಹರೀಚ್ಛೆಯಿಂದ ಅಥವಾ ಅಸುರಾವೇಶ ಪ್ರಯುಕ್ತವಾಗಿ ಸಂಭವನೀಯವೆ ಎಂದು ಸಮಾಧಾನ.

ಸ್ಪರ್ಧಂತ ಇವ ದೇವಾಸ್ತು ಹರಿಣಾ ಯತ್ರಕುತ್ರಚಿತ್ ।
ಹರೇರೇವಾಜ್ಞಯಾ ಕ್ವಾಪಿ ದೈತ್ಯಾವೇಶಾದಥಾಪಿ ವಾ ॥ ಇತಿ ಚ ।

ಕೆಲವು ಸಂದರ್ಭಗಳಲ್ಲಿ ದೇವತೆಗಳು ಹರಿಯೊಡನೆ ಸ್ವಾಭಾವಿಕವಾಗಿ ಸ್ಪರ್ಧಿಸುವಂತೆ ಕಾಣುತ್ತಾರೆ. ಆದರೆ ಅವರು ಸ್ವಾಭಾವಿಕವಾಗಿ ಸ್ಪರ್ಧಿಸುವುದಿಲ್ಲ. ಕೇವಲ ಹರೀಚ್ಛೆಯಿಂದ ಅಥವಾ ಅಸುರಾವೇಶದಿಂದ ಹಾಗೆ ಮಾಡುತ್ತಾರೆ ಎಂದೂ ಹೇಳಿದೆ.

* * *

ಈ ಜಗತ್ತು ಇಂದು ಕಂಡಂತೆ ನಾಳೆ ಇರುವುದಿಲ್ಲ. ಸದಾ ಪರಿವರ್ತನ ಹೊಂದುತ್ತದೆ ಅದಕ್ಕೆ ನೀನು ಅಂತರ್ಯಾಮಿಯಾಗಿರುವಿ ಎಂದು ಹಿರಣ್ಮಯ ಖಂಡದಲ್ಲಿ ಪಿತೃಗಣಾಧಿಪತಿ ಅರ್ಯಮನು ಕೂರ್ಮಮೂರ್ತಿಯನ್ನು ಸ್ತುತಿಸುತ್ತಾನೆ.

ಯದ್ರೂಪಮೇತನ್ನಿಜಮಾಯಯಾಽರ್ಪಿತ-
ಮರ್ಥಸ್ವರೂಪಂ ಬಹುರೂಪರೂಪಿತಮ್ ।
ಸಂಖ್ಯಾ ನ ಯಸ್ಯಾಸ್ತ್ಯಯಥೋಪಲಂಭನಾತ್
ತಸ್ಮೈ ನಮಸ್ತೇಽವ್ಯಪದೇಶ್ಯರೂಪಿಣೇ ॥ ೩೦ ॥

ನೀನು ಜಗತ್ತಿಗೆ ಆಧಾರ. ಸ್ವೇಚ್ಛೆಯಿಂದ ಅದನ್ನು ನಿನ್ನಲ್ಲಿ ಇರಿಸಿಕೊಂಡಿರುವೆ. ಈ ಜಗತ್ತು ಜರಾಯುಜ ಉದ್ಭಿಜ ಮುಂತಾದ ಬಹುರೂಪಗಳಲ್ಲಿ ಅನುಭವಸಿದ್ಧವಾಗಿದೆ. ಪರಮಾಣುವಿನಷ್ಟು ಚಿಕ್ಕ ಪ್ರದೇಶದಲ್ಲಿಯೂ ಅನಂತ ಪ್ರಾಣಿಸಮೂಹಗಳೇ ಇರುವುದರಿಂದ ಈ ಪ್ರಾಣಿಪ್ರಪಂಚಕ್ಕೆ ಸಂಖ್ಯೆಯೇ ಇಲ್ಲ. ಮತ್ತು ಈಗ ಕಂಡಂತೆ ನಾಳೆ ಇರುವುದಿಲ್ಲ. ಸದಾ ಪರಿವರ್ತನವೇ ಆಗುತ್ತಿರುತ್ತದೆ. ಇಂಥ ಜಗತ್ತಿಗೆ ಅಂತರ್ಯಾಮಿಯಾದ ನಿನ್ನನ್ನು ಪೂರ್ತಿಯಾಗಿ ವರ್ಣಿಸಬೇಕೆಂದರೆ ಶಬ್ದಕ್ಕೆ ನಿಲುಕುವವನಲ್ಲ. ಅಂಥ ಕೂರ್ಮಮೂರ್ತಿಗೆ ನಮಸ್ಕಾರ.

ಇಲ್ಲಿ 'ಅಯಥೋಪಲಂಭನಾತ್' ಎಂದರೆ ಪೂರ್ತಿ ತಿಳಿಯಲು ಶಕ್ಯವಿಲ್ಲದ್ದರಿಂದ ಪ್ರಪಂಚದಲ್ಲಿರುವ ಎಲ್ಲ ವಸ್ತುಗಳ ಸಂಖ್ಯೆಗೆ ಮಿತಿ ಇಲ್ಲ ಎಂದು ಪ್ರಾಯಃ ಬೇರೆ ಎಲ್ಲ ವ್ಯಾಖ್ಯಾನಕಾರರೂ ಹೇಳುತ್ತಾರೆ. ಆದರೆ ಸರ್ವಜ್ಞರಾದ ರಮಾಬ್ರಹ್ಮಾದಿಗಳಿಗೆ ಪ್ರಪಂಚವನ್ನು ಕರತಲಾಮಲಕವಾಗಿ ಪೂರ್ತಿ ತಿಳಿಯುವ ಸಾಮರ್ಥ್ಯವಿದೆ. ಗಿರಿಧರವ್ಯಾಖ್ಯಾನದಲ್ಲಿ 'ಭಗವದವತಾರಗಳಲ್ಲಿ ಜನರಿಗೆ ಕಾಣುವ ಭೌತಿಕತ್ವದುಃಖಾದಿದೋಷಗಳು ಸತ್ಯವಲ್ಲ. 'ಅಯಥೋಪಲಂಭನಾತ್' ಸತ್ಯವೆಂದು ಭ್ರಾಂತಿಯಲ್ಲಿ ಕಾಣುವುದರಿಂದ' ಎಂದಿದ್ದಾರೆ. ಪಂಚಮೀವಿಭಕ್ತಿಯ ಅನ್ವಯಕ್ಕಾಗಿ ಒಂದು ವಾಕ್ಯವನ್ನೇ ಅಧ್ಯಾಹಾರ ಮಾಡಿದ್ದಾರೆ. [1]ಶ್ರೀಧರವ್ಯಾಖ್ಯಾನದಲ್ಲಿ 'ಪ್ರಪಂಚವು ಮಿಥ್ಯೆಯಾಗಿದ್ದೇ ಅನುಭವಗೋಚರವಾಗುವುದರಿಂದ ಸಂಖ್ಯಾಮಿತಿ ಇಲ್ಲ. ಮರುಮರೀಚಿಜಲವನ್ನು ಇಷ್ಟೆಂದು ಗಣನೆ ಮಾಡಲುಶಕ್ಯವಿಲ್ಲ ಹೇಗೋ ಹಾಗೆ' ಎಂದಿದ್ದಾರೆ.

ಆದರೆ ಭಾಗವತದಲ್ಲಿ 'ಸಂಖ್ಯಾ ನ ಯಸ್ಯಾಸ್ತಿ' ಎಂದರೆ ಸಂಖ್ಯೆಯೆ ಇಲ್ಲವೆಂದರ್ಥವಲ್ಲ. ಸಂಖ್ಯಾಮಿತಿ ಇಲ್ಲ ಎಂದರ್ಥ. ಅದರಿಂದ ಮರುಮರೀಚಿಕೆಯ ದೃಷ್ಟಾಂತ ಕೂಡುವುದಿಲ್ಲ. ಮರುಮರೀಚಿಕೆ ಅಸತ್ ಆಗಿರುವುದರಿಂದ ಅದರಲ್ಲಿ ಸಂಖ್ಯೆಯೇ ಇಲ್ಲ. ಅದನ್ನು ಅದ್ವೈತಿಗಳು ಪ್ರಾತಿಭಾಸಿಕಸತ್ಯವೆಂದರೂ ಅದರಲ್ಲಿ ವ್ಯಾವಹಾರಿಕವಾದ ಸಂಖ್ಯೆ ಇಲ್ಲ. ಅದರಿಂದ ಸಂಖ್ಯೆ ಇದ್ದರೂ ಸಂಖ್ಯಾಮಿತಿ ಇಲ್ಲದುದಕ್ಕೆ ಮರುಮರೀಚಿಕೆ ದೃಷ್ಟಾಂತವಾಗುವುದಿಲ್ಲ. ಹೀಗಾಗಿ 'ಮರುಮರೀಚಿಕೆಯಂತೆ ಕೇವಲ ಭ್ರಮಕ್ಕೇ ಗೋಚರವಾಗುವುದರಿಂದ ಪ್ರಪಂಚದ ವಸ್ತುಗಳಲ್ಲಿ ಸಂಖ್ಯಾಮಿತಿ ಇಲ್ಲ' ಎಂದು ಹೇಳುವುದು ತಪ್ಪಾಗುತ್ತದೆ. 'ಸಂಖ್ಯೆಯೇ ಇಲ್ಲ' ಎಂದು ಭಾಗವತದಲ್ಲಿ ವಿವಕ್ಷಿತವಾಗಿದೆ ಎನ್ನುವುದಾದರೆ 'ಇಷ್ಟೇ ಎಂದು ಗಣನೆ ಮಾಡಲು ಶಕ್ಯವಿಲ್ಲ 'ಏತಾವದಿತಿ ಸಂಖ್ಯಾತುಂ ನ ಶಕ್ಯತೇ' ಎನ್ನುವುದು

---

೧. ಅಯಥಾ ಮಿಥ್ಯೈವ ಉಪಲಂಭನಾತ್ । ನಹಿ ಮರೀಚಿಜಲಮೇತಾವದಿತಿ ಸಂಖ್ಯಾತುಂ ಶಕ್ಯತೇ । -ಶ್ರೀಧರಃ

ಕೊಡುವುದಿಲ್ಲ. ಸಂಖ್ಯೆ ಅನುಭವಸಿದ್ಧವಾಗಿರುವುದರಿಂದ ಅದನ್ನು ಅಪಲಾಪ ಮಾಡುವುದು ಶಕ್ಯವೂ ಇಲ್ಲ. ಅದರಿಂದ 'ಅಯಥೋಪಲಂಭನಾತ್' ಎಂಬಲ್ಲಿ ಪಂಚಮೀವಿಭಕ್ತಿಯನ್ನು 'ಇಂದು ಕಣ್ಣಿಗೆ ಕಾಣುವ ಪ್ರಕಾರಕ್ಕಿಂತ ಬೇರೆಯೇ ಆಗಿ ನಾಳೆ ಕಾಣುತ್ತದೆ' ಎಂದು 'ಅಯಥಾ, ಅನ್ಯಥಾ' ಎಂಬಲ್ಲಿಗೆ ಅನ್ವಯಿಸಬೇಕು. ಹೊರತು ಅದು ಒಂದು ಸಮಸ್ತಪದವಲ್ಲ.

ಉಪಲಂಭನಾದಯಥಾ । ಯಥಾ ದೃಷ್ಟಂ ತಥಾ ನ ತಿಷ್ಠತಿ ಅನ್ಯಥಾ ಭವತೀತ್ಯರ್ಥಃ ।

'ಅಯಥೋಪಲಂಭನಾತ್' ಎಂಬಲ್ಲಿ 'ಉಪಲಂಭನಾತ್ ಅಯಥಾ' ಎಂದು ಅನ್ವಯವಿಟ್ಟುಕೊಳ್ಳಬೇಕು. ಇಂದು ಕಂಡಂತೆ ನಾಳೆ ಇರುವುದಿಲ್ಲ ಪರಿವರ್ತನೆ ಹೊಂದುತ್ತಲೇ ಇರುತ್ತದೆ ಎಂದರ್ಥ.

* * *

ಸರ್ವಾಂತರ್ಯಾಮಿಯಾದ್ದರಿಂದ ಸರ್ವಶಬ್ದಗಳಿಗೂ ಮುಖ್ಯವಾಚ್ಯನು ಹರಿಯೇ ಎಂದು ಹಿರಣ್ಮಯಖಂಡದಲ್ಲಿ ಅರ್ಯಮನು ಕೂರ್ಮಮೂರ್ತಿಯನ್ನು ಸ್ತುತಿಸುತ್ತಾನೆ.

ಜರಾಯುಜಂ ಸ್ವೇದಜಮಂಡಜೋದ್ಭಿಜಂ
ಚರಾಚರಂ ದೇವರ್ಷಿಪಿತೃಭೂತಭೇದಮ್ ।
ದ್ಯೌಃ ಖಂ ಕ್ಷಿತಿಃ ಶೈಲಸರಿತ್ಸಮುದ್ರ-
ದ್ವೀಪಗ್ರಹರ್ಕ್ಷೇತ್ಯಭಿಧೇಯ ಏಕಃ ॥ ೩೨ ॥

ನೀನು ಜಗದಂತರ್ಯಾಮಿ. ಅದರಿಂದಲೇ ಜರಾಯುಜ ಸ್ವೇದಜ ಅಂಡಜ ಉದ್ಭಿಜ ದೇವ ಋಷಿ ಪಿತೃ ಭೂತ ಎಂದು ನಾನಾಪ್ರಕಾರವಾದ ಚರ ಅಚರ ಸ್ವರ್ಗ ಅಂತರಿಕ್ಷ ಭೂಮಿ ಪರ್ವತ ನದಿ ಸಮುದ್ರ ದ್ವೀಪ ಗ್ರಹ ನಕ್ಷತ್ರ ಎಂದು ಮುಂತಾದುವನ್ನು ಹೇಳುವ ಶಬ್ದಗಳಿಂದ ಮುಖ್ಯವಾಗಿ ಕರೆಸಿಕೊಳ್ಳುವವನು ಆ ಜರಾಯುಜಾದಿಗಳ ಅಂತರ್ಯಾಮಿಯಾದ ನೀನು ಒಬ್ಬನೆ. ಜರಾಯುಜದಲ್ಲಿ ಜರಾಯುಜತ್ವವಿರುವುದು ನಿನ್ನ ಅಧೀನವಾದ್ದರಿಂದ ನೀನೇ ಮುಖ್ಯವಾಗಿ ಜರಾಯುಜಶಬ್ದವಾಚ್ಯ. ಅಮುಖ್ಯವಾಗಿ ಜರಾಯುಜವೆನಿಸುವುದು ಜರಾಯುಜತ್ವವುಳ್ಳ ಪ್ರಾಣಿ. ಅಜ್ಞಲೋಕ ಅಮುಖ್ಯ ವ್ಯವಹಾರ ಮಾಡಿದರೂ ಜ್ಞಾನಿಗಳು ಮುಖ್ಯವ್ಯವಹಾರವನ್ನೇ ಮಾಡುತ್ತಾರೆ.

ಶ್ರೀಧರವ್ಯಾಖ್ಯಾನದಲ್ಲಿ 'ಸರ್ವಂ ಖಲ್ವಿದಂ ಬ್ರಹ್ಮ' ಎನ್ನುವಂತೆ ಬ್ರಹ್ಮನಿಗಿಂತ ಬೇರೆಯಾಗಿ ಏನೂ ಇಲ್ಲದಿರುವುದರಿಂದ ಸರ್ವಶಬ್ದಗಳಿಂದಲೂ ವಾಚ್ಯ ಬ್ರಹ್ಮನೆ' ಎಂದಿದ್ದಾರೆ. ಆದರೆ ಎಲ್ಲ ಶಬ್ದಗಳೂ ಲಕ್ಷಣಾವೃತ್ತಿಯಿಂದಲೇ ಬ್ರಹ್ಮನನ್ನು ತಿಳಿಸುವುದೆಂದು ಹೇಳುವ ಅದ್ವೈತಕ್ಕೆ ಇದು ವ್ಯತಿರಿಕ್ತವಾಗಿದೆ. ವೀರರಾಘವ

ವ್ಯಾಖ್ಯಾನದಲ್ಲಿ ಎಲ್ಲವೂ ಭಗವಂತನ ಶರೀರವಾಗಿರುವುದರಿಂದ ಶರೀರವಾಚಕಶಬ್ದವೆಲ್ಲವೂ ಶರೀರಿಯನ್ನೇ ಹೇಳುವುದರಿಂದ ಎಲ್ಲ ಶಬ್ದಗಳೂ ಭಗವಂತನನ್ನೇ ಹೇಳುತ್ತವೆ ಎಂದಿದ್ದಾರೆ. ಆದರೆ ಶರೀರವಾಚಕವೆಂದು ಒಪ್ಪಿರುವ ಶಬ್ದಗಳು ಶರೀರವನ್ನು ಹೇಳುವುದಿಲ್ಲ, ಶರೀರಿಯನ್ನೇ ಹೇಳುತ್ತವೆ ಎನ್ನುವುದು ವ್ಯಾಹತ.

ಗಿರಿಧರವ್ಯಾಖ್ಯಾನದಲ್ಲಿ ಭಗವಂತ ಸರ್ವಾತ್ಮಕನಾದ್ದರಿಂದ ಸರ್ವಶಬ್ದಗಳೂ ಭಗವಂತನನ್ನೇ ಹೇಳುತ್ತವೆ, ಏಕೆಂದರೆ ಅವನಿಗಿಂತ ಬೇರೆ ಏನೂ ಇಲ್ಲ ಎನ್ನುತ್ತಾರೆ. ಆದರೆ ಭಗವಂತ ಜಗದುಪಾದಾನವಾದ್ದರಿಂದ ಸರ್ವಾತ್ಮಕ ಎಂದು ಅವರ ಅಭಿಪ್ರಾಯ. ಉಪಾದಾನ ಉಪಾದೇಯಗಳಿಗೆ ಅತ್ಯಂತಾಭೇದವಿಲ್ಲದ್ದರಿಂದ ಭೇದವೂ ಇದೆ ಎನ್ನಬೇಕು ಹೀಗಾಗಿ ಭಗವಂತನಿಗಿಂತ ಬೇರೆ ಏನೂ ಇಲ್ಲ ಎನ್ನಲಾಗದು. ಉಪಾದಾನ ಉಪಾದೇಯಗಳಿಗೆ ಅಭೇದವಿದ್ದರೂ ಹೆಸರುಗಳು ಬೇರೆಬೇರೇಯೇ ಇರುತ್ತವೆ. 'ಮಣ್ಣು ತಾ' ಎಂದರೆ ಗಡಿಗೆಯನ್ನು ತರುವುದಿಲ್ಲ. 'ಗಡಿಗೆ ತಾ' ಎಂದರೆ ಮಣ್ಣು ತರುವುದಿಲ್ಲ. ಅದರಿಂದ ಎಲ್ಲ ವಸ್ತುಗಳ ಹೆಸರು ಭಗವಂತನಿಗೆ ಸಲ್ಲದು.

ಅದರಿಂದ ಸರ್ವಾಂತರ್ಯಾಮಿಯಾದ್ದರಿಂದ ಸರ್ವಶಬ್ದವಾಚ್ಯ ಶ್ರೀಹರಿ.

ಆದರೆ ಇಲ್ಲಿ ಹಿಂದಿನ ಶ್ಲೋಕದಲ್ಲಿ 'ಯದ್ರೂಪಮೇತತ್' 'ಈ ಜಗತ್ತು ಭಗವಂತನದೇ ಒಂದು ರೂಪ' ಎಂದು ಹೇಳಿರುವುದರಿಂದ ಜಗತ್ತಿನ ಅಂತರ್ಯಾಮಿ ಹರಿ ಎನ್ನುವುದು ಹೇಗೆ? ಎಂದು ಪ್ರಶ್ನೆ ಬರುತ್ತದೆ. ಜಗತ್ತು ಹರಿಯ ರೂಪವೇ ಆಗಿರುವುದರಿಂದ 'ದ್ವೇ ವಾವ ಬ್ರಹ್ಮಣೋ ರೂಪೇ' ಎಂದು ಶ್ರುತಿಯೂ ಹೇಳುತ್ತದೆ ತಾನೆ? ಈ ಪ್ರಶ್ನೆಗೆ ಹೀಗೆ ಸಮಾಧಾನ. ಜಗತ್ತು ಬ್ರಹ್ಮನ ರೂಪವೆಂದರೆ ಹರಿಯ ಪ್ರತಿಮೆ. ಅದು ಅವನ ರೂಪದಂತಿರುವುದರಿಂದ ಗೌಣವೃತ್ತಿಯಿಂದ ರೂಪ ಎನಿಸುತ್ತದೆ. ಅದಕ್ಕೆ ಅಂತರ್ಯಾಮಿ ಹರಿ ಎನ್ನಲು ಏನೂ ಬಾಧಕವಿಲ್ಲ.

ಸರ್ವಾಂತರ್ಯಾಮಕತ್ವಾತ್ತು ಸರ್ವನಾಮಾ ಹರಿಃ ಸ್ವಯಮ್ ।
ನ ತು ಸರ್ವಸ್ವರೂಪತ್ವಾತ್ ರೂಪತ್ವಮುಪಚಾರತಃ ॥ ಇತಿ ಚ ।

ಹರಿಯು ಸರ್ವಾಂತರ್ಯಾಮಿಯಾದ್ದರಿಂದಲೇ ಸ್ವತಃ ಸರ್ವಶಬ್ದಗಳಿಗೂ ಮುಖ್ಯವಾಚ್ಯನಾಗಿದ್ದಾನೆ ಹೊರತು ಸರ್ವಸ್ವರೂಪನೆಂದಲ್ಲ, ಜಗತ್ತು ಅವನ ರೂಪವೆನ್ನುವುದು ಗೌಣವೃತ್ತಿಯಿಂದ ಎಂದೂ ಹೇಳಿದೆ.

ಎಲ್ಲ ಚೇತನರಿಗೆ ಅಂತರ್ಯಾಮಿ ಹರಿ ಎನ್ನಬೇಕು ಹೊರತು ಎಲ್ಲ ಚೇತನರೂ ಪರಸ್ಪರವಾಗಿ ಮತ್ತು ಹರಿಯಿಂದ ಅಭಿನ್ನರೆನ್ನಲಾಗದು. ವಿಶಿಷ್ಟಚೇತನರಿಗೆ ಅಭೇದವನ್ನು

ಅದ್ವೈತ ಒಪ್ಪುವುದಿಲ್ಲ. ಶುದ್ಧಚೇತನ ಜಗತ್‌ಶಬ್ದಕ್ಕೆ ವಾಚ್ಯವಲ್ಲ. ಲಕ್ಷಣಾ ಮಾಡಿ ಶುದ್ಧಚೇತನೈಕ್ಯವನ್ನು ಹೇಳುವ ಆವಶ್ಯಕತೆಯಿಲ್ಲ. ಲಕ್ಷಣಾ ಮಾಡದೆಯೇ ವಿಶಿಷ್ಟಚೇತನಗಳ ಅಂತರ್ಯಾಮಿಯೆಂದು ವಾಚ್ಯತ್ವವನ್ನು ಹೇಳಲು ಬರುತ್ತದೆ. ಲಕ್ಷಣಾ ಮಾಡಿದರೂ ಶುದ್ಧಚೇತನಕ್ಕೆ ವಾಚ್ಯತ್ವವನ್ನು ಹೇಳಲಾಗುವುದಿಲ್ಲ.

ಶಿವನಲ್ಲಿ ಪ್ರಸಿದ್ಧವಾದ ವಾಚಕವಾದ ಶಿವ ಎಂಬ ನಾಮ ಶಿವನ ಅಂತರ್ಯಾಮಿಯಲ್ಲಿ ಮುಖ್ಯವೃತ್ತಿಯಿಂದ ಹೇಗೆ ಕೂಡುತ್ತದೆ? ಅದೂ ಲಕ್ಷಣಾವೃತ್ತಿಯೇ ಆಗುತ್ತದೆ ತಾನೆ? ಎಂದರೆ ಶಿವನಾಮದ ಪ್ರವೃತ್ತಿನಿಮಿತ್ತ ಶಿವತ್ವ ಶಿವನಲ್ಲಿ ಇರುವುದರಿಂದ ಅವನಲ್ಲಿ ಮುಖ್ಯವೃತ್ತಿ ಹೇಗೋ ಹಾಗೇ ಅದೇ ಶಿವತ್ವಸ್ವಾಮಿತ್ವ ಹರಿಯಲ್ಲಿರುವುದರಿಂದ ಅವನಲ್ಲಿಯೂ ಮುಖ್ಯವೃತ್ತಿಯನ್ನೇ ಹೇಳಬೇಕು ಹೊರತು ಲಕ್ಷಣಾವೃತ್ತಿಯನ್ನಲ್ಲ. ಶಿವನಲ್ಲಿ ಶಿವತ್ವವಿರುವುದು ಹರಿಯ ಅಧೀನ. ಅದರಿಂದ ಶಿವತ್ವಸ್ವಾಮಿತ್ವ ಹರಿಯಲ್ಲಿ ಇದೆ. ಇದು ಮುಖ್ಯವೃತ್ತಿಗಿಂತಲೂ ಹೆಚ್ಚಿನದಾದ ಪರಮಮುಖ್ಯವೃತ್ತಿ ಎನಿಸುತ್ತದೆ ಹೊರತು ಅಮುಖ್ಯವಾದ ಲಕ್ಷಣಾವೃತ್ತಿ ಎನಿಸುವುದಿಲ್ಲ. ಶಿವತ್ವ ಶಿವನಲ್ಲಿರುವುದು ಹರಿಯ ಅಧೀನ ಏಕೆಂದರೆ ಹರಿ ಶಿವನ ಅಂತರ್ಯಾಮಿ. ಅವನ ಇಚ್ಛೆಯಿಂದಲೇ ಶಿವನಲ್ಲಿ ಶಿವತ್ವವಿದೆ. ಹೀಗಾಗಿ ಸರ್ವಾಂತರ್ಯಾಮಿಯಾದ ಹರಿಯಲ್ಲಿ ಸರ್ವಶಬ್ದಗಳೂ ಪರಮಮುಖ್ಯವೃತ್ತಿಯಿಂದ ವಾಚಕವಾಗುತ್ತವೆ.

* * *

ನಿನಗೆ ಅಸಂಖ್ಯರೂಪಗಳಿರುವುದರಿಂದ ದಶಾವತಾರ ದ್ವಾದಶಮೂರ್ತಿ ಚತುರ್ವಿಂಶತಿಮೂರ್ತಿ ಎಂದು ಮುಂತಾಗಿ ಎಲ್ಲ ಸಂಖ್ಯಾವಾಚಕಶಬ್ದಗಳೂ ಕೂಡುತ್ತವೆ ಎಂದು ಹಿರಣ್ಮಯಖಂಡದಲ್ಲಿ ಅರ್ಯಮನು ಕೂರ್ಮಮೂರ್ತಿಯನ್ನು ಸ್ತುತಿಸುತ್ತಾನೆ.

ಯಸ್ಮಿನ್ನಸಂಖ್ಯೇಯವಿಶೇಷನಾಮ-
ರೂಪಾಕೃತೌ ಕವಿಭಿಃ ಕಲ್ಪಿತೇಯಮ್ ।
ಸಂಖ್ಯಾ ಯಯಾ ತತ್ವದೃಶಾ ವಿನೀಯತೇ
ತಸ್ಮೈ ನಮಃ ಸಾಂಖ್ಯನಿದರ್ಶನಾಯ ತೇ ಇತಿ ॥ ೩೩ ॥

ನಿನ್ನಲ್ಲಿ ಅಸಂಖ್ಯವಾದ ಗುಣಗಳು ನಾಮಗಳು ವರ್ಣಗಳು ಆಕೃತಿಗಳು ಇದ್ದರೂ ಜ್ಞಾನಿಗಳು ದಶಾವತಾರ ಚತುರ್ವಿಂಶತಿಮೂರ್ತಿಗಳೆಂದು ಮುಂತಾಗಿ ಸಂಖ್ಯಾ ಶಬ್ದಗಳನ್ನು ಕಲ್ಪನ ಮಾಡುತ್ತಾರೆ, ಅಂದರೆ, ಸಮರ್ಥನ ಮಾಡುತ್ತಾರೆ. ಹೇಗೆಂದರೆ ದಶ ಚತುರ್ವಿಂಶತಿ ಮುಂತಾದ ಸಂಖ್ಯಾಶಬ್ದಗಳೂ ಅನಂತ ವಾಚಕವಾದ್ದರಿಂದ 'ಅವತಾರಗಳು ದಶ, ಚತುರ್ವಿಂಶತಿ' ಎಂದು ತಿಳಿದರೆ ಅದು ತತ್ವಜ್ಞಾನವೇ ಆಗುತ್ತದೆ. ಅಂಥ ತತ್ವಜ್ಞಾನಸ್ವರೂಪನು ನೀನು. ಏಕೆಂದರೆ ಲೋಕಕ್ಕೆ ಇಂಥ ತತ್ವಜ್ಞಾನ

ಸಾಂಖ್ಯಶಾಸ್ತ್ರದಿಂದಲೆ ಬರಬೇಕಾಗಿದ್ದರೂ ನಿನ್ನ ಸ್ವರೂಪಭೂತ ತತ್ವಜ್ಞಾನ ಸಾಂಖ್ಯಶಾಸ್ತ್ರ ಮೂಲಕವಲ್ಲ, ಸಾಂಖ್ಯಶಾಸ್ತ್ರಕ್ಕೇ ಮೂಲ. ಅಂಥ ನಿನಗೆ ನಮಸ್ಕಾರ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ,

'ಸಂಖ್ಯಾ ಯಯಾ ತತ್ವದೃಶಾಽಪನೀಯತೇ ।'

ಎಂದು ಅಪಪಾಠವಿಟ್ಟುಕೊಂಡಿದ್ದಾರೆ. ಶ್ರೀಧರ ವ್ಯಾಖ್ಯಾನದಲ್ಲಿ 'ಅಸಂಖ್ಯವಾದ ನಾಮರೂಪ ಆಕೃತಿಗಳುಳ್ಳ ಪರಮಾತ್ಮನಲ್ಲಿ ಕಪಿಲಾದಿ ಜ್ಞಾನಿಗಳು ಚತುರ್ವಿಂಶತಿ ಮುಂತಾದ ಸಂಖ್ಯೆಗಳನ್ನು ಕಲ್ಪಿಸಿದ್ದಾರೆ. ಅದು ತತ್ವಜ್ಞಾನ ಬಂದಾಗ ತೊಲಗುತ್ತದೆ. ಅಂಥ ಸಾಂಖ್ಯಸಿದ್ಧಾಂತ ಸ್ವರೂಪನು ಭಗವಂತ' ಎಂದಿದ್ದಾರೆ. ಚತುರ್ವಿಂಶತಿ ಪ್ರಕೃತಿಮಹದಾದಿತತ್ವಗರ್ಭಿತವಾದ ಪ್ರಪಂಚವು ಪರಮಾತ್ಮಸ್ವರೂಪವಾದ್ದರಿಂದ ಪರಮಾತ್ಮನಲ್ಲಿ ಚತುರ್ವಿಂಶತ್ಯಾದಿ ಸಂಖ್ಯೆಗಳಿವೆ. ತತ್ವಜ್ಞಾನ ಬಂದಾಗ ಈ ಸಂಖ್ಯೆ ಬಾಧಿತವಾಗುತ್ತದೆ ಎಂದು ಅವರ ಅಭಿಪ್ರಾಯ. ಆದರೆ ತತ್ವಜ್ಞಾನ ಬಂದಾಗ ಬಾಧಿತವಾಗಿ ತೊಲಗುವ ಸಂಖ್ಯಾಕಲ್ಪನೆ ಭ್ರಮವೇ ಆಗ ಬೇಕಾಗುತ್ತದೆ. ಕಪಿಲಾದಿ ಜ್ಞಾನಿಗಳಿಗೆ ಅಂಥ ಭ್ರಮ ಬರುತ್ತದೆ ಎಂದರೆ ಇದು ವ್ಯಾಹತವಾಗುತ್ತದೆ. ಸಾಂಖ್ಯಸಿದ್ಧಾಂತಸ್ವರೂಪನೆನಿಸಿದ ಪರಮಾತ್ಮನಲ್ಲಿ ಸಾಂಖ್ಯಾಚಾರ್ಯರಾದ ಕಪಿಲಾದಿಗಳು ಇಲ್ಲದ ಸಂಖ್ಯೆಯನ್ನು ಕಲ್ಪಿಸಿದರೆಂದರೆ ಸಾಂಖ್ಯಸಿದ್ಧಾಂತವೂ ಭ್ರಮ, ಅದರಿಂದ ಅಭಿನ್ನನಾದ ಪರಮಾತ್ಮನೂ ಭ್ರಮಸ್ವರೂಪ ಎಂದಂತಾಯಿತು.

[೨]ವೀರರಾಘವ ಮುಂತಾದವರ ವ್ಯಾಖ್ಯಾನದಲ್ಲಿ 'ಅನಂತಸಂಖ್ಯಾಕ ಪ್ರಪಂಚಾತ್ಮಕನಾದ ಪರಮಾತ್ಮನನ್ನು ಸಾಮಾನ್ಯಜನರಿಗೆ ತಿಳಿಸಿಕೊಡುವ ಉದ್ದೇಶದಿಂದ

---

೧. ಸಪ್ರಪಂಚತಾಮನೂದ್ಯ ತನ್ನಿರಾಸೇನ ಪ್ರಣಮತಿ ಯಸ್ಮಿನ್ನಿತಿ । ಅಸಂಖ್ಯೇಯಾ ಅನಂತಾ ವಿಶೇಷಾ ಯೇಷಾಂ ತಾನಿ ನಾಮಾನಿ ರೂಪಾಣ್ಯಾಕೃತಯಶ್ಚ ತಸ್ಯ ತಾದೃಶೇ ಯಸ್ಮಿಂಸ್ತ್ವಯಿ ಕವಿಭಿಃ ಕಪಿಲಾದಿಭಿರಿಯಂ ಚತುರ್ವಿಂಶತ್ಯಾದಿ ಸಂಖ್ಯಾ ಕಲ್ಪಿತಾ ಸತೀ ಯಯಾ ತತ್ತ್ವದೃಶಾ ಯೇನ ತತ್ತ್ವಜ್ಞಾನೇನಾಪನೀಯತೇ ತಸ್ಮೈ ತೇ ಸಾಂಖ್ಯಸಿದ್ಧಾಂತರೂಪಾಯ ನಮಃ । -ಶ್ರೀಧರಃ

೨. ಪ್ರಕೃತಿಪುರುಷಕಾಲಶರೀರಕೇಽಸಂಖ್ಯೇಯವೈಭವೇ ತ್ವಯಿ ಇಯಂ ಚತುರ್ವಿಂಶತಿಃ ಪಂಚವಿಂಶತಿರಿತ್ಯಾದಿರೂಪಾ ಸಂಖ್ಯಾ ಕವಿಭಿಃ ಕಪಿಲಾದಿಭಿಃ ಪೃಥಿವ್ಯಾದಿತತ್ತ್ವ ಯಾಥಾತ್ಮ್ಯವಿದ್ಭಿಃ ಕಲ್ಪಿತಾ ಮಂದಬುದ್ಧೀನಾಂ ಸುಖಗ್ರಹಣಾಯ ಸಂಕಲ್ಪ್ಯ ಸಂಗೃಹ್ಯ ಪ್ರದರ್ಶಿತಾ । ವಸ್ತುತಃ ಪೃಥಿವ್ಯಾದೀನಾಮಾನಂತ್ಯಾದಸಂಖ್ಯೇಯತ್ವಮೇವೇತಿ ಭಾವಃ । ಏವಂ ಕಲ್ಪಿತಾ ಸಂಖ್ಯಾ ಯಯಾ ತತ್ವದೃಶಾ ತಾತ್ವಿಕಬುದ್ಧ್ಯಾಽನಂತವೈಭವತ್ವ ಯಾಥಾತ್ಮ್ಯಬುದ್ಧ್ಯಾಽಪನೀಯತೇಽಪನುದ್ಯತೇಽಸಂಖ್ಯಾತವಿಭೂತಿತ್ವಾತ್ ತಸ್ಮೈ ಸಾಂಖ್ಯಜ್ಞಾನಗಮ್ಯಾಯ ನಮಃ । -ವೀರರಾಘವಃ

ಚತುರ್ವಿಂಶತ್ಯಾದಿ ಸಂಖ್ಯೆಯನ್ನು ಕಲ್ಪಿಸಿದ್ದಾರೆ. ಅನಂತವೈಭವವುಳ್ಳವನು ಪರಮಾತ್ಮ ಎಂದು ತತ್ತ್ವಜ್ಞಾನ ಬಂದಾಗ ಹಿಂದೆ ಕಲ್ಪಿಸಿದ್ದ ಸಂಖ್ಯೆಗಳು ಇಲ್ಲವಾಗುತ್ತವೆ' ಎಂದಿದ್ದಾರೆ. ಪರಮಾತ್ಮನ ಅನಂತ ವೈಭವವನ್ನು ತಿಳಿಸಲೆಂದೇ ಸಾಮಾನ್ಯಜನರಿಗೆ ಸುಲಭವಾಗಿ ತಿಳಿಯುವಂತೆ ಪ್ರಪಂಚದ ಅನಂತ ವಸ್ತುಗಳನ್ನು ಇಪ್ಪತ್ತುನಾಲ್ಕು ವಿಧವಾಗಿ ವಿಭಾಗಮಾಡಿ ತಿಳಿಸುತ್ತಾರೆ. ತತ್ತ್ವಗಳು ಅನಂತವಾದರೂ ಅವು ಇಪ್ಪತ್ತನಾಲ್ಕು ಬಗೆಯಾಗಿವೆ ಎಂದು ವರ್ಣಿಸುತ್ತಾರೆ. ಉದಾ: ಪಂಚಜ್ಞಾನೇಂದ್ರಿಯಗಳು ಎನ್ನುವಾಗ ಪ್ರಪಂಚದಲ್ಲಿ ಐದೇ ಜ್ಞಾನೇಂದ್ರಿಯಗಳಿವೆ ಎಂದರ್ಥವಲ್ಲ. ಪ್ರತಿಯೊಬ್ಬವ್ಯಕ್ತಿಯಲ್ಲಿ ಐದು ಜ್ಞಾನೇಂದ್ರಿಯಗಳಿವೆ. ಅನಂತವ್ಯಕ್ತಿಗಳಲ್ಲಿ ಅನಂತ ಜ್ಞಾನೇಂದ್ರಿಯಗಳಿದ್ದರೂ ಅವು ಐದು ಬಗೆಯಾಗಿವೆ. ಕಣ್ಣು ಕಿವಿ ಮೂಗು ಮುಂತಾಗಿ ಐದು ಬಗೆಗಳು ಹೊರತು ಇಂದ್ರಿಯಗಳೇ ಐದು ಎಂದರ್ಥವಲ್ಲ. ಹೀಗಾಗಿ ಪದಾರ್ಥಗಳು ಅನಂತವಾಗಿದ್ದರೂ ಅವು ಕೇವಲ ಇಪ್ಪತ್ತನಾಲ್ಕು ಬಗೆಯವುಗಳು. ಇದು ಸಂಖ್ಯಾಕಲ್ಪನೆ. ಇದು ಭ್ರಮವಲ್ಲ. ಪದಾರ್ಥಗಳು ಅನಂತ ಎಂಬ ತತ್ತ್ವಜ್ಞಾನದಿಂದ ಈ ಸಂಖ್ಯೆ ಬಾಧಿತವಾಗುವುದಿಲ್ಲ. ಏಕೆಂದರೆ ಪದಾರ್ಥಗಳು ಅನಂತವಾಗಿರುವುದಕ್ಕೂ ಅವು ಇಪ್ಪತ್ತನಾಲ್ಕು ಬಗೆಯವುಗಳಾಗಿರುವುದಕ್ಕೂ ವಿರೋಧವಿಲ್ಲ. ಹೀಗಾಗಿ ಶ್ಲೋಕಪಾಠವೂ ಸರಿಯಿಲ್ಲ, ವ್ಯಾಖ್ಯಾನವೂ ಸರಿಯಿಲ್ಲ. 'ತತ್ತ್ವದೃಶಾ ವಿನೀಯತೇ' ಎಂದೇ ಸರಿಯಾದ ಪಾಠ. ಅದಕ್ಕೆ ಹೀಗೆ ವ್ಯಾಖ್ಯಾನ-

ದಶಾವತಾರ ಇತ್ಯಾದಿಸಂಖ್ಯಾ ವಿನೀಯತೇ ವಿಶೇಷೇಣ ನೀಯತೇ
ತಜ್ಜ್ಞಾನಂ ತದ್ರೂಪಮೇವ ಹಿ ॥

ದಶಾವತಾರಗಳು ಪಂಚಮೂರ್ತಿಗಳು ದ್ವಾದಶಮೂರ್ತಿಗಳೆಂದು ಮುಂತಾಗಿ ಶ್ರುತ್ಯಾದಿಗಳಲ್ಲಿ ಸಿದ್ಧವಾದ ಸಂಖ್ಯೆಯು ಪರಮಾತ್ಮತತ್ತ್ವಜ್ಞಾನದ ಬಲದಿಂದ ಅನಂತತ್ವವೆಂದೇ ತಿಳಿದು ಬರುತ್ತದೆ. ಏಕೆಂದರೆ ದಶ ಪಂಚಾದಿಶಬ್ದವೆಲ್ಲವೂ ಅನಂತತ್ವವನ್ನು ಹೇಳುತ್ತದೆ. ಹಾಗೆ ತಿಳಿಯುವುದು ತತ್ತ್ವಜ್ಞಾನ. ಏಕೆಂದರೆ ಈ ಜ್ಞಾನ ನಿರ್ದೋಷನಾದ ಭಗವಂತನ ಸ್ವರೂಪವಾಗಿದೆ. 'ವಿಜ್ಞಾನಮಾನಂದಂ ಬ್ರಹ್ಮ' ಎಂದು ಮುಂತಾಗಿ ಶ್ರುತಿಯಲ್ಲಿ ಇದು ಪ್ರಸಿದ್ಧವೇ ಇದೆ. ಈ ಅಭಿಪ್ರಾಯದಿಂದ 'ಯಸ್ಮಿನ್ ಕಲ್ಪಿತಾ ಸಂಖ್ಯಾ ಯಯಾ ತತ್ತ್ವದೃಶಾ ವಿನೀಯತೇ ತಸ್ಮೈ ನಮಃ' ಎಂದು ತತ್ತ್ವಜ್ಞಾನಕ್ಕೆ ಭಗವಂತನ ಅಭೇದವನ್ನು ಭಾಗವತ ಹೇಳುತ್ತಿದೆ.

* * *

ಯಾಗದೇವತಾವಾಚಕವಾದ ಇಂದ್ರಾದಿಶಬ್ದಗಳಿಂದ ಮುಖ್ಯವಾಗಿ ಕರೆಸಿಕೊಳ್ಳುವವನು ಶ್ರೀಹರಿಯೆ ಎಂದು ಉತ್ತರ ಕುರುಖಂಡದಲ್ಲಿ ಭೂದೇವಿ ಶ್ರೀವರಾಹನನ್ನು ಸ್ತುತಿಸುತ್ತಾಳೆ ಎಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ.

ಯಸ್ಯ ಸ್ವರೂಪಂ ಕವಯೋ ವಿಪಶ್ಚಿತೋ
ಗುಣೇಷು ಯೋನಿಷ್ವಿವ ಜಾತವೇದಸಮ್ ।
ಮಥ್ನಂತಿ ಮಥ್ನಾ ಮನಸಾ ದಿದೃಕ್ಷವೋ
ಗೂಢಂ ಕ್ರಿಯಾರ್ಥೈರ್ನಮ ಈರಿತಾತ್ಮನೇ ॥ ೩೬ ॥

ವಿಚಾರಪರರಾದ ಜ್ಞಾನಿಗಳು ನಿನ್ನ ಸ್ವರೂಪವನ್ನು ವೇದಗಳಲ್ಲಿ ಮನಸ್ಸೆಂಬ ಕಡಗೋಲಿನಿಂದ ಮಥನ ಮಾಡಿ ತಿಳಿಯುತ್ತಾರೆ. ಏಕೆಂದರೆ ದೇಹೇಂದ್ರಿಯಾದಿಗಳಲ್ಲಿ ನೀನಿದ್ದರೂ ನಿಗೂಢವಾಗಿರುತ್ತಿ. ಅದರಿಂದ ಅರಣಿಕಾಷ್ಠದಲ್ಲಿ ಅಗ್ನಿಯಂತೆ ಅವ್ಯಕ್ತವಾಗಿರುವ ನಿನ್ನನ್ನು ವೇದಗಳಲ್ಲಿ ಉಪಕ್ರಮಾದಿ ಲಿಂಗಗಳಿಂದ ಚೆನ್ನಾಗಿ ವಿಚಾರಮಾಡಿ ತಿಳಿಯುತ್ತಾರೆ. ಉಪನಿಷತ್ತುಗಳಲ್ಲಿ ಮಾತ್ರವಲ್ಲದೆ ಕರ್ಮಕಾಂಡದಲ್ಲಿಯೂ ಯಜ್ಞಕ್ರಿಯೆಗಳಿಗೆ ಆವಶ್ಯಕವಾದ ಇಂದ್ರಾದಿನಾಮಗಳಲ್ಲಿ ನೀನೇ ಮುಖ್ಯ ವಾಚ್ಯನಾಗಿದ್ದು ಆ ನಾಮಗಳಿಂದ ಕರೆಯಲ್ಪಡುವವನೂ ನೀನೆ, ಅಂಥ ನಿನಗೆ ನಮಸ್ಕಾರ.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ 'ಕ್ರಿಯಾರ್ಥೈಃ ಗೂಢಂ' ಎಂದು ಅನ್ವಯಿಸಿ ಯಾಗಾದಿ ಕರ್ಮಗಳಿಂದ ಮತ್ತು ಅವುಗಳ ಫಲವಾದ ವಿಷಯಭೋಗಗಳಿಂದ ಜೀವರ ಹೃದಯದಲ್ಲಿ ಪರಮಾತ್ಮಸ್ವರೂಪ ಮುಚ್ಚಿ ಹೋಗಿರುತ್ತದೆ. ಮನಸಿನಿಂದ ಮಂಥನ ಮಾಡಿದಾಗ ಅದು ವ್ಯಕ್ತವಾಗುತ್ತದೆ' ಎನ್ನುತ್ತಾರೆ. ಆದರೆ ಇದು ಭೂದೇವಿ ಯಜ್ಞವರಾಹನನ್ನು ಸ್ತುತಿಸುವಾಗ ಆಡಿದ ಮಾತು. ಯಜ್ಞವನ್ನು ಹೀಗೆ ನಿಂದಿಸಿದರೆ ಅದು ಯಜ್ಞವರಾಹನ ನಿಂದೆಯಾಗುತ್ತದೆ. ವಸ್ತುತಃ ಕಾಮ್ಯಕರ್ಮಗಳು, ತತ್ರಾಪಿ ಅವೈದಿಕವಾದ ತಾಮಸಕರ್ಮಗಳು ಪರಮಾತ್ಮತತ್ತ್ವಜ್ಞಾನಕ್ಕೆ ಪ್ರತಿಬಂಧಕವಾದರೂ ವೇದವಿಹಿತವಾದ ನಿಷ್ಕಾಮಕರ್ಮಗಳು ಅಂತಃಕರಣಶುದ್ಧಿದ್ವಾರಾ ಪರಮಾತ್ಮಾಪರೋಕ್ಷಕ್ಕೂ ಮೋಕ್ಷದಲ್ಲಿ ಅಧಿಕಾನಂದಾವಿರ್ಭಾವಕ್ಕೂ ಕಾರಣವಾಗಿವೆ. ಅದರಿಂದ 'ಕ್ರಿಯಾರ್ಥೈಃ ಈರಿತಾತ್ಮನೇ' ಎಂದು ಅನ್ವಯಿಸಬೇಕು. ಇಂದ್ರಾದಿ ಯಾಗದೇವತಾನಾಮಗಳು ಕ್ರಿಯಾರ್ಥಗಳಾಗಿವೆ. ಅಂದರೆ 'ಇಂದ್ರಾಯ ಸ್ವಾಹಾ' ಎಂದು ಮುಂತಾಗಿ ಇಂದ್ರಾದಿನಾಮೋಚ್ಚಾರಣಪೂರ್ವಕವಾಗಿ ಹವಿಸ್ಸನ್ನು ಅರ್ಪಿಸಿದರೆ ಅದು ಯಾಗವಾಗುತ್ತದೆ. ಯಾಗಕ್ರಿಯೆ ನಡೆಯಬೇಕಾದರೆ ಇಂದ್ರಾದಿನಾಮಗಳು ಆವಶ್ಯಕ. ಹೀಗೆ ಯಾಗ ಕ್ರಿಯಾರ್ಥಗಳಾಗಿರುವ ಆ ಇಂದ್ರಾದಿ ನಾಮಗಳು ಮುಖ್ಯವೃತ್ತಿಯಿಂದ ಇಂದ್ರಾದಿಗಳನ್ನು ಹೇಳಿದರೂ ಪರಮ ಮುಖ್ಯವೃತ್ತಿಯಿಂದ ಆ ಇಂದ್ರಾದಿಗಳಲ್ಲಿ ಅಂತರ್ಯಾಮಿಯಾಗಿರುವ ಯಜ್ಞ ಪುರುಷನಾದ ಶ್ರೀವರಾಹನನ್ನೇ ಹೇಳುತ್ತವೆ ಎನ್ನುತ್ತಿದ್ದಾಳೆ ಭೂದೇವಿ. ಅದರಿಂದ ಇದು ಯಜ್ಞವರಾಹನ ಸ್ತುತಿಯಾಗುತ್ತದೆ.

ಕ್ರಿಯಾರ್ಥೈರ್ಯಜ್ಞಾರ್ಥೈರಿಂದ್ರಾದಿನಾಮಭಿರೀರಿತಾತ್ಮನೇ ।

ಕ್ರಿಯಾರ್ಥೈಃ ಎಂದರೆ ಯಜ್ಞಕ್ರಿಯೆ ನಡೆಯಲು ಆವಶ್ಯಕವಾಗಿ ಬೇಕಾಗಿರುವ ಇಂದ್ರಾದಿನಾಮಗಳಿಂದ ಪರಮುಖ್ಯವೃತ್ತಿಯಿಂದ ಹೇಳಲ್ಪಡುವ ಯಜ್ಞವರಾಹನಿಗೆ ನಮಸ್ಕಾರ ಎಂದು ಭೂದೇವಿ ನಮಿಸುತ್ತಾಳೆ.

* * *

ಸೃಷ್ಟಿಕರ್ತರಾದ ಬ್ರಹ್ಮಾದಿದೇವತೆಗಳೂ ಕೂಡ ನಿನ್ನಿಚ್ಛೆಗನುಸಾರವಾಗಿ ನಡೆಯುವವರು. ಅವರೇ ಅಪ್ರಾಕೃತ ಶರೀರಿಯಾದ ನಿನ್ನನ್ನು ಸರಿಯಾಗಿ ತಿಳಿದು ಕೊಳ್ಳಬಲ್ಲರು ಎಂದು ಭೂದೇವಿ ಉತ್ತರಕುರುಖಂಡದಲ್ಲಿ ಶ್ರೀವರಾಹನನ್ನು ಸ್ತುತಿಸುತ್ತಾಳೆ.

ದ್ರವ್ಯಕ್ರಿಯಾಹೇತ್ವಯನೇಶಕರ್ತೃಭಿ-
ರ್ಮಾಯಾಗುಣೈರ್ವಸ್ತುನಿರೀಕ್ಷಿತಾತ್ಮನೇ ।
ತದ್ವೈವ ತತ್ರಾತಿಶಯಾತ್ಮಬುದ್ಧಿಭಿ-
ರ್ನಿರಸ್ತಮಾಯಾಕೃತಯೇ ನಮೋನಮಃ ॥ ೩೭ ॥

ಜ್ಞಾನಿಗಳಲ್ಲಿ ಶ್ರೇಷ್ಠರು ಬ್ರಹ್ಮರುದ್ರಾದಿಗಳು. ದ್ರವ್ಯೇಶ ರುದ್ರ, ಕ್ರಿಯೇಶ ಗರುಡ ಕಾರಣೇಶ ಬ್ರಹ್ಮ, ಅಯನೇಶ ವಾಯು– ಇವರೆಲ್ಲರೂ ಜಗತ್ತಿಗೆ ಸೃಷ್ಟಿಕರ್ತರು. ಆದರೆ ಅಸ್ವತಂತ್ರರಾಗಿದ್ದು ಸ್ವತಂತ್ರನಾದ ನಿನ್ನ ಇಚ್ಛೆಗೇ ಅನುಸಾರವಾಗಿ ವರ್ತಿಸುವವರು, ಮಾಯಾಗುಣರು. ಅವರು ಮಾಯಾನಿರ್ಮಿತವಾದ ಪ್ರಾಕೃತವಾದ ಶರೀರವಿಲ್ಲದಿರುವ ನಿನ್ನ ಸ್ವರೂಪಶರೀರವನ್ನು ಯಥಾರ್ಥವಾಗಿ ಪ್ರತ್ಯಕ್ಷ ಕಂಡುಕೊಳ್ಳುತ್ತಾರೆ. ಏಕೆಂದರೆ ಅವರು ಪರಮಾತ್ಮನಾದ ನಿನ್ನಲ್ಲಿಯೇ ಗಾಢವಾಗಿ ಮನಸ್ಸನ್ನಿಟ್ಟವರು. ಅಂಥ ನಿನಗೆ ನಮೋನಮಃ.

ಇಲ್ಲಿ ಶ್ರೀಧರವ್ಯಾಖ್ಯಾನದಲ್ಲಿ ದೇಹೇಂದ್ರಿಯವಿಷಯಾದಿರೂಪವಾದ ಮಾಯಾಕಾರ್ಯಗಳಿಂದ ಮಾಯಿಕಶರೀರರಹಿತನಾದ ನಿನ್ನನ್ನು ವಿಚಾರದಿಂದ ತಿಳಿದುಕೊಳ್ಳುತ್ತಾರೆ ಎಂದು ವ್ಯಾಖ್ಯಾನವಿದೆ.

ಆದರೆ ವರಾಹನು ಮಾಯಿಕಶರೀರಿ ಎಂದು ಅದ್ವೈತಮತ. ಮಾಯಿಕ ಶರೀರರಹಿತನೆಂದು ಅವನನ್ನು ಸ್ತುತಿಸುವುದು ತಪ್ಪು. 'ಯೇನಾಶ್ರುತಂ ಶ್ರುತಂ' ಎಂಬ ಶ್ರುತಿಯಲ್ಲಿ ಅದ್ವೈತಿಗಳ ಪ್ರಕಾರ ಬ್ರಹ್ಮಜ್ಞಾನದಿಂದ ಸರ್ವಪ್ರಪಂಚಜ್ಞಾನ ಉಂಟಾಗುತ್ತದೆ ಎಂದಿದೆ. ಪ್ರಕೃತದಲ್ಲಿ ಮಾಯಾಕಾರ್ಯವಾದ ಪ್ರಪಂಚದ ಜ್ಞಾನದಿಂದ ಬ್ರಹ್ಮಜ್ಞಾನವೆಂದು ತಿರುವುಮುರುವಾಗಿದೆ. ಈಶಾವಾಸ್ಯ ಎಂದು ಹೇಳಿದಂತೆ ಜಗತ್ತಿನ ಜ್ಞಾನದಿಂದ ಬ್ರಹ್ಮ ಮರೆಯಾಗುತ್ತಾನೆ ಎನ್ನಬೇಕು. ಅದಕ್ಕೆ ವಿಪರೀತವಾಗಿ ಬ್ರಹ್ಮಜ್ಞಾನ ಉಂಟಾಗುತ್ತದೆ ಎಂದು ಹೇಳುತ್ತಿದ್ದಾರೆ.

ವೀರರಾಘವವ್ಯಾಖ್ಯಾನದಲ್ಲಿ 'ಸಕರ್ತೃಕೈಃ ಮಾಯಾಗುಣೈಃ ಸಹ ವಿವಿಚ್ಯ ವಸ್ತು ನಿರೀಕ್ಷಿತಾತ್ಮ'ನಾಗಿದ್ದಾನೆ ವರಾಹ, ಅಂದರ ಜೀವಸಹಿತವಾದ ಪ್ರಕೃತಿಗುಣಗಳೊಂದಿಗೆ ಪರಮಾತ್ಮ ಬೇರೆಯಾಗಿ ತಿಳಿಯಲ್ಪಡುತ್ತಾನೆ ಎಂದಿದ್ದಾರೆ. ಆದರೆ 'ವಿವಿಚ್ಯ' ಬೇರೆಯಾಗಿ ಎಂದು ಶ್ಲೋಕದಲ್ಲಿ ಇಲ್ಲ. 'ವಸ್ತುನಿರೀಕ್ಷಿತ' ಅಂದರೆ ವಸ್ತುತ್ವೇನ ಘಟಪಟಾದಿಗಳಂತೆ ಒಂದು ವಸ್ತು ಎಂದು ಮಾತ್ರ ತಿಳಯಲ್ಪಡುತ್ತಾನೆ ಎಂದಿದೆ. ಇದು ವರಾಹಸ್ತುತಿಯಾಗುವುದಿಲ್ಲ. ಗುಣಪೂರ್ಣತ್ವೇನ ತಿಳಿದರೆ ಮಾತ್ರ ಅದು ಸ್ತುತಿಯಾದೀತು. ಈ ಎರಡೂ ವ್ಯಾಖ್ಯಾನಗಳಲ್ಲಿ ದ್ರವ್ಯಕ್ರಿಯಾ ಮುಂತಾದ ಪದಗಳಿಗೆ ವಿಷಯ ಇಂದ್ರಿಯ ಎಂದು ಮುಂತಾಗಿ ಅರ್ಥಗಳನ್ನು ಕಲ್ಪಿಸಿದ್ದಾರೆ. ಅದು ಬ್ರಹ್ಮತರ್ಕವಚನಕ್ಕೆ ಅನುಗುಣವಾಗಿಲ್ಲ. ಮತ್ತು ದ್ರವ್ಯಕ್ರಿಯಾ ಮುಂತಾದ ಆ ಶಬ್ದಗಳೂ ವ್ಯರ್ಥ. ಅದರಿಂದ ಹೀಗೆ ವ್ಯಾಖ್ಯಾನ ಮಾಡಬೇಕು-

ಮಾಯಾಗುಣೈಸ್ತದಿಚ್ಛಾನುಸಾರಿಭಿಃ ।

ದ್ರವ್ಯೇಶಃ ಶಂಕರಃ ಪ್ರೋಕ್ತಃ ಕ್ರಿಯೇಶೋ ಗರುಡಃ ಸ್ಮೃತಃ ।
ಕಾರಣೇಶಸ್ತಥಾ ಬ್ರಹ್ಮಾ ವಾಯುರಾಧಾರಪಃ ಸ್ಮೃತಃ ॥

ಇತಿ ಬ್ರಹ್ಮತರ್ಕೇ ।

'ಮಯಾಗುಣೈಃ' ಎಂದರೆ ಭಗವಂತನ ಇಚ್ಛೆಗೆ ಅಧೀನರಾದ, ಇಚ್ಛೆಗೆ ಅನುಸಾರವಾಗಿಯೇ ನಡೆಯುವ ಬ್ರಹ್ಮಾದಿದೇವತೆಗಳಿಂದ ಎಂದರ್ಥ.

ದ್ರವ್ಯಾಭಿಮಾನಿ ಶಿವ, ಕರ್ಮಾಭಿಮಾನಿ ಗರುಡ, ಕಾರಣಾಭಿಮಾನಿ ಬ್ರಹ್ಮ, ಆಧಾರಾಭಿಮಾನಿ ವಾಯು ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ದ್ರವ್ಯಕ್ರಿಯಾ ಹೇತು ಅಯನಗಳಿಗೆ ಈಶರು ಎಂದು ಸಮಾಸ ಮಾಡಿದಾಗ 'ದ್ರವ್ಯಕ್ರಿಯಾಹೇತ್ವಯನೇಶ'ರು ದ್ರವ್ಯಾದಿಗಳಿಗೆ ಈಶರು ಅಂದರೆ ಅಭಿಮಾನಿಗಳು ಶಿವಾದಿಗಳೆಂದು ಹೇಳಿದಂತಾಗುತ್ತಿದೆ. ಈ ಶಿವಾದಿಗಳು ಕರ್ತರು, ಅಂದರೆ ಸೃಷ್ಟ್ಯಾದಿಕರ್ತರು. ಆದರೂ ಅವರು ಅಸ್ವತಂತ್ರಕರ್ತರು. ಭಗವಂತನ ಇಚ್ಛಾನುಸಾರ ಎಲ್ಲವನ್ನೂ ಮಾಡುವವರು. ಇವರಿಂದ 'ಯಥಾ ವಸ್ತು ತಥೈವ' ನಿರೀಕ್ಷಿತನಾಗುತ್ತಾನೆ ಭಗವಂತ. ತಥಾಶಬ್ದವಿರುವುದರಿಂದ ಯಥಾಶಬ್ದವಿಟ್ಟುಕೊಳ್ಳಬೇಕು. ವಸ್ತು ಪರಮಾತ್ಮ ಎಂಬ ವಸ್ತು ಹೇಗಿದೆಯೋ ಹಾಗೆ, ಅಂದರೆ ಗುಣಪೂರ್ಣತ್ವೇನ ತಿಳಿಯಲ್ಪಡುತ್ತಾನೆ ಎಂದು ಸ್ತುತಿ ಮಾಡುತ್ತಾಳೆ ಭೂದೇವಿ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ಅಷ್ಟಾದಶೋಽಧ್ಯಾಯಃ ॥

ಅಧ್ಯಾಯ-೧೯

ಅಧ್ಯಾಯಸಾರಾಂಶ

ಕಿಂಪುರುಷಖಂಡದಲ್ಲಿ ಹನುಮಂತ ಶ್ರೀರಾಮನನ್ನು ಸೇವಿಸುತ್ತಾನೆ. ಭಾರತಖಂಡದಲ್ಲಿ ನಾರದರು ನರನಾರಾಯಣರನ್ನು ಪೂಜಿಸುತ್ತಾರೆ. ಇಲ್ಲಿ ನಾನಾ ಪರ್ವತಗಳೂ ನದಿಗಳೂ ಇವೆ. ಈ ಭಾರತಭೂಮಿಯಲ್ಲಿ ಮಾನವರಾಗಿ ಜನಿಸಿದವರು ವಾಸುದೇವನಲ್ಲಿ ಭಕ್ತಿ ಮಾಡುತ್ತ ವರ್ಣಾಶ್ರಮ ಧರ್ಮಾನುಷ್ಠಾನ ಮಾಡಿದರೆ ಮುಕ್ತಿ ಸುಲಭವೆಂದು ದೇವತೆಗಳು ಹಾಡಿ ಹೊಗಳುತ್ತಾರೆ. ಹರಿಕಥಾಮೃತದ ನದಿ ಹರಿಯದಿದ್ದರೆ ಹರಿಕಥೆಯಾಲಿಸುವ ಭಗವದ್ಭಕ್ತರಿಲ್ಲದಿದ್ದರೆ ಸಂಗೀತನೃತ್ಯಾದಿ ಉತ್ಸವಸಮೇತವಾಗಿ ವೈಷ್ಣವಯಾಗಗಳು ನಡೆಯದಿದ್ದರೆ ದೇವಲೋಕವೂ ವಾಸಕ್ಕೆ ಯೋಗ್ಯವೆನಿಸದು.

ಸಗರಪುತ್ರರು ಯಜ್ಞಾಶ್ವವನ್ನು ಅನ್ವೇಷಣ ಮಾಡುತ್ತ ಭೂಮಿಯನ್ನು ಅಗೆದುದರಿಂದ ಜಂಬೂದ್ವೀಪದಲ್ಲಿ ಎಂಟು ಉಪದ್ವೀಪಗಳಾದುವು- ಸ್ವರ್ಣಪ್ರಸ್ಥ, ಚಂದ್ರಶುಕ್ಲ, ಆವರ್ತನ, ರಮಣಕ, ಮಂದಹಾರ, ಪಾಂಚಜನ್ಯ, ಸಿಂಹಳ ಲಂಕಾ ಎಂದು.

✻ ✻ ✻

ಅಜ್ಞಾನಿ ದೇಹಾಭಿಮಾನದಿಂದಾಗಿ ಮರಣಕ್ಕೆ ಭಯಪಡುತ್ತಾನೆ ಹಾಗೇ ಜ್ಞಾನಿಯೂ ಭಯಪಡುವುದಾದರೆ ಆ ಜ್ಞಾನದಿಂದೇನು? ಅದರಿಂದ ನನಗೆ ದೇಹಾಭಿಮಾನವಿಲ್ಲದಂತೆ ಮಾಡೆಂದು ಭಾರತವರ್ಷದಲ್ಲಿ ನಾರದರು ನರನಾರಾಯಣರನ್ನು ಪ್ರಾರ್ಥಿಸುತ್ತಾರೆ.

ಯಥೈಹಿಕಾಮುಷ್ಮಿಕಕಾಮಲಂಪಟಃ
ಸುತೇಷು ದಾರೇಷು ಧನೇಷು ಚಿಂತಯನ್ ।
ಶಂಕೇತ ವಿದ್ವಾನ್ ಕುಕಳೇಬರಾತ್ಯಯಾದ್
ಯಸ್ತಸ್ಯ ಯತ್ನಃ ಶ್ರಮ ಏವ ಕೇವಲಮ್ ॥ ೧೪ ॥

ತನ್ನಃ ಪ್ರಭೋ ತ್ವಂ ಕುಕಳೇಬರಾರ್ಪಿತಾಂ
ತ್ವನ್ಮಾಯಯಾಽಹಂಮಮತಾಮಧೋಕ್ಷಜ ।
ಭಿಂದ್ಯಾಮ ಯೇನಾಶು ವಯಂ ಸುದುರ್ಭಿದಾಂ
ವಿಧೇಹಿ ಯೋಗಂ ತ್ವಯಿ ನಃ ಸುಭಾವಿತಮಿತಿ ॥ ೧೫ ॥

ಐಹಿಕ ಆಮುಷ್ಮಿಕ ಸುಖಭೋಗಗಳಲ್ಲಿ ಆಸಕ್ತನಾದ ಮನುಷ್ಯ ಸಾಯುವಾಗ ಹೆಂಡತಿ ಮಕ್ಕಳ ಧನಸಂಪತ್ತುಗಳ ಯೋಗಕ್ಷೇಮದ ಬಗ್ಗೆ ಆಲೋಚಿಸುತ್ತ ಶರೀರತ್ಯಾಗಕ್ಕೆ ಭಯಪಡುವಂತೆ ಜ್ಞಾನಿಯೂ ಭಯ ಪಡುವುದಾದರೆ ಅವನು ಧ್ಯಾನಾಭ್ಯಾಸಗಳಲ್ಲಿ ಮಾಡಿದ ಯತ್ನವೆಲ್ಲವೂ ಕೇವಲ ಶ್ರಮವೆ ಸರಿ.

ಹೇ ಅಧೋಕ್ಷಜ, ಪ್ರಭು, ನಿನ್ನ ಬಂಧಕಶಕ್ತಿಯಿಂದ ನಮಗೆ ನಮ್ಮ ದುಷ್ಟಶರೀರದಲ್ಲಿ ಎಂದಾದರೂ ಉಂಟಾಗಬಹುದಾದ ನಾನು ನನ್ನದೆಂಬ ಅಭಿಮಾನವು ದುರ್ಭೇದ್ಯವಾಗಿರುತ್ತದೆ. ಅದನ್ನು ನಾವು ಬೇಗನೆ ಭೇದಿಸುವಂತಾಗಬೇಕು. ಅದಕ್ಕೆ ನಿನ್ನ ಭಕ್ತಿಜ್ಞಾನಾದಿಗಳಿಂದ ದೃಢವಾಗಿ ವರ್ಧಿಸುವಂಥ ಯೋಗವನ್ನು ನಮಗೆ ನೀಡು.

ಇಲ್ಲಿ ಅಪರೋಕ್ಷಜ್ಞಾನಿಗಳಾದ ನಾರದರಿಗೆ ದೇಹಾಭಿಮಾನವಿರುವುದಿಲ್ಲ. ಇಲ್ಲದಿರುವ ದೇಹಾಭಿಮಾನವನ್ನು ಕಳೆಯಲು ಪ್ರಾರ್ಥಿಸುವುದು ಅರ್ಥವಿಲ್ಲದ್ದು ಎಂಬ ಸಂದೇಹ ಬರಬಹುದು. ಬೇರೆ ವ್ಯಾಖ್ಯಾನಕಾರರು ಇದರ ಬಗ್ಗೆ ವಿಚಾರ ಮಾಡುವುದಿಲ್ಲ. ಗಿರಿಧರ ವ್ಯಾಖ್ಯಾನದಲ್ಲಿ ಮಾತ್ರ ನಾರದರು ತಮ್ಮ ಶರೀರವನ್ನು 'ಕು-ಕಲೇವರ' ಕೆಟ್ಟಶರೀರ ಎಂದುದು ಅವರಿಗೆ ಸರಿ ಕಾಣಲಿಲ್ಲ. ಪ್ರಥಮಸ್ಕಂಧದಲ್ಲಿ ಪ್ರಾರಬ್ಧಕರ್ಮನಿರ್ವಾಣೋ ನ್ಯಪತದ್ ಪಾಂಚಭೌತಿಕಃ'(೬.೩೦ಶ್ಲೋ) ಎಂದು ಪಾಂಚಭೌತಿಕಶರೀರತ್ಯಾಗವನ್ನು ಹೇಳಿದೆ ಎಂದ ಮೇಲೆ ಈಗಿನ ಶರೀರ ಅಭೌತಿಕ, ಶುದ್ಧಸತ್ವಾತ್ಮಕ. ಅದನ್ನು ಕುಕಲೇವರ ಎನ್ನಲಾಗದು. ಆದರೆ 'ನಃ ಸುಭಾವಿತಂ' ಎಂದು ಬಹುವಚನವಿರುವುದರಿಂದ ಬೇರೆ ಭಕ್ತರ ಶರೀರ ಕುಕಲೇವರವೆಂಬ ಅಭಿಪ್ರಾಯ ಎಂದಿದ್ದಾರೆ. ಆದರೆ ಇದು ಸರಿಯಲ್ಲ. ಶುದ್ಧಸತ್ವಾತ್ಮಕ ಶರೀರವು ಲಿಂಗಭಂಗಾನಂತರ ಮೋಕ್ಷದಲ್ಲಿ ಬರುತ್ತದೆ. ನಾರದರಿನ್ನೂ ಮುಕ್ತರಾಗಿಲ್ಲ. ಅದರಿಂದ ಅವರ ಶರೀರ ಪಾಂಚಭೌತಿಕವಾಗಿದ್ದು ಕು ಕಲೇವರವೇ ಆಗಿದೆ. ಅದರಿಂದ ಇಲ್ಲಿ ಬರಬಹುದಾದ ಸಂದೇಹ, ನಾರದರಿಗೂ ದೇಹಾಭಿಮಾನ ಉಂಟೇ? ಎಂದೇ ಸಂದೇಹ.

ನಾರದರಿಗೆ ಇಲ್ಲ, ಬೇರೆ ಅಜ್ಞಾನಿಗಳಿಗೆ ದೇಹಾಭಿಮಾನವಿರುತ್ತದೆ. ಅದು ಅವರಿಗೆ ಮೋಕ್ಷಕ್ಕೆ ಪ್ರತಿಬಂಧಕವಾಗುತ್ತದೆ. ಅಪರೋಕ್ಷಜ್ಞಾನವನ್ನು ನೀಡುವ ಮೂಲಕ ಅದನ್ನು ಕಳೆ. ತನಗೂ ಪ್ರಾರಬ್ಧವಶಾತ್ ದೇಹಾಭಿಮಾನ ಬರಬಹುದು,

ಅದನ್ನೂ ಕಳೆ ಎಂದು ಪ್ರಾರ್ಥಿಸುತ್ತಾರೆ, ನಾರದರು. ಅದರಿಂದ ನಃ ಎಂಬ ಬಹುವಚನ ಅರ್ಥಪೂರ್ಣವಾಗಿದೆ.

ಯಸ್ಯ ಸಮ್ಯಗ್ ಭಗವತಿ ಜ್ಞಾನಂ ಭಕ್ತಿಸ್ತಥೈವ ಚ ।
ನಿಶ್ಚಿತಸ್ತಸ್ಯ ಮೋಕ್ಷಃ ಸ್ಯಾತ್ ಸರ್ವಪಾಪಕೃತೋಽಪಿ ತು ।
ಯೋ ಮಮತ್ವಾದಿನಾ ದೋಷಃ ಸ ತ್ವನ್ಯವಿಷಯಃ ಸ್ಮೃತಃ ॥
ಇತಿ ಚ ।

ಯಾರಿಗೆ ಅಪರೋಕ್ಷಜ್ಞಾನ ಭಕ್ತಿಗಳುಂಟಾಗಿರುತ್ತವೋ ಅವನು ಪ್ರಾರಬ್ಧಕರ್ಮನಿಮಿತ್ತಕವಾಗಿ ದೇಹಾಭಿಮಾನ ಹೊಂದಿ, ಎಲ್ಲ ವಿಧದ ಪಾಪ ಮಾಡಿದರೂ ಮೋಕ್ಷ ಅವನಿಗೆ ನಿಶ್ಚಿತವಾಗಿ ಆಗುತ್ತದೆ. ದೇಹಾಭಿಮಾನ ಪ್ರಯುಕ್ತ ಮೋಕ್ಷಕ್ಕೆ ಪ್ರತಿಬಂಧ ಉಂಟಾಗುವುದು ಅಜ್ಞಾನಿಗೆ ಮಾತ್ರ. (ನಾರದರಿಗೆ ಪ್ರಾರಬ್ಧವಶದಿಂದ ದೇಹಾಭಿಮಾನ ಬಂದರೂ ಅದು ಮೋಕ್ಷಕ್ಕೆ ಪ್ರತಿಬಂಧಕವಲ್ಲ. ಆದರೂ ಅದನ್ನು ದೂರ ಮಾಡಿಕೊಳ್ಳಲು ಭಕ್ತಿಯೋಗ ಬೇಕೆಂದು ಬಯಸುತ್ತಿದ್ದಾರೆ.) ಎಂದೂ ಹೇಳಿದೆ.

---

* * *

ಸ್ವರ್ಗಸುಖ ಅನುಭವಿಸಿದ ಬಳಿಕ ಸ್ವಲ್ಪ ಪುಣ್ಯ ಉಳಿದಿದ್ದರೆ ಅದರಿಂದ ನಮಗೆ ಭಾರತಭೂಮಿಯಲ್ಲಿ ಮಾನವಜನ್ಮ ನೀಡೆಂದು ದೇವತೆಗಳು ಭಗವಂತನನ್ನು ಪ್ರಾರ್ಥಿಸುತ್ತಾರೆ.

ಯದ್ಯತ್ರ ನಃ ಸ್ವರ್ಗಸುಖಾವಶೇಷಿತಂ
ಸ್ವಿಷ್ಟಸ್ಯ ದತ್ತಸ್ಯ ಕೃತಸ್ಯ ಶೋಭನಮ್ ।
ತೇನಾಬ್ಜನಾಭಸ್ಮೃತಿ ಜನ್ಮ ನಃ ಸ್ಯಾದ್
ವರ್ಷೇ ಹರಿರ್ಭಜತಾಂ ಶಂ ತನೋತಿ ॥ ೨೮ ॥

ನಾವು ಯಜ್ಞ ದಾನ ಅಥವಾ ಬೇರೆ ಕರ್ಮಗಳಿಂದ ಗಳಿಸಿದ ಪುಣ್ಯದಲ್ಲಿ ಸ್ವರ್ಗಸುಖ ಉಂಡಬಳಿಕ ಏನಾದರೂ ಉಳಿದಿದ್ದರೆ ಅದರಿಂದ ನಮಗೆ ಭಾರತವರ್ಷದಲ್ಲಿ ಜನ್ಮ ದೊರಕಲಿ. ಏಕೆಂದರೆ ಅದು ಪದ್ಮನಾಭನ ಸ್ಮರಣೆಯನ್ನು ನೀಡುತ್ತದೆ. ಭಾರತವರ್ಷದಲ್ಲಿ ತನ್ನನ್ನು ಭಜಿಸುವವರಿಗೆ ಹರಿ ಮೋಕ್ಷಸುಖ ನೀಡುತ್ತಾನೆ.

ಇಲ್ಲಿ ದೇವತೆಗಳು ಅಪರೋಕ್ಷಜ್ಞಾನಿಗಳಾಗಿರುವುದರಿಂದ ಅವರಿಗೆ ಮೋಕ್ಷ ಸಿಗುವುದು ನಿಶ್ಚಿತ. ಬೇರೆ ಪುರುಷಾರ್ಥ ಅವರಿಗೆ ಇಷ್ಟವಿಲ್ಲ. ಭಾರತಭೂಮಿಯಲ್ಲಿ ಜನ್ಮ ತಳೆಯಲು ಅವರು ಏಕೆ ಬಯಸುತ್ತಾರೆ ಎಂಬ ಪ್ರಶ್ನೆ ಬರುತ್ತದೆ. ಬೇರೆ

ವ್ಯಾಖ್ಯಾನಕಾರರು ಈ ಪ್ರಶ್ನೆಯನ್ನು ಎತ್ತಿಕೊಳ್ಳುವುದಿಲ್ಲ. ಮಾನವರಂತೆಯೇ ದೇವತೆಗಳೂ ಪುಣ್ಯಕರ್ಮ ಮಾಡಿ ಸ್ವರ್ಗಕ್ಕೆ ಹೋಗಿರುತ್ತಾರೆ. ಪುಣ್ಯತೀರಿದ ಮೇಲೆ ತಿರುಗಿ ಪುಣ್ಯಕರ್ಮ ಮಾಡಲು ಭೂಮಿಗೆ ಬರಲೇಬೇಕು ಎಂದು ಅವರ ಅಭಿಪ್ರಾಯ. ವೀರರಾಘವವ್ಯಾಖ್ಯಾನದಲ್ಲಿ 'ತದುಪರ್ಯಪಿ ಬಾದರಾಯಣಃ ಸಂಭವಾತ್' ಎಂದು ಬ್ರಹ್ಮಸೂತ್ರದಲ್ಲಿ ಹೇಳಿದಂತೆ ಊರ್ಧ್ವಲೋಕದಲ್ಲಿಯೂ ರಮ್ಯಕ ಮುಂತಾದಖಂಡದಲ್ಲಿಯೂ ಕರ್ಮ ಮಾಡಬಹುದು ಆದರೂ ಅಲ್ಲಿ ವಿಷಯಭೋಗ ಅಧಿಕವಿರುವುದರಿಂದ ಹರಿಸ್ಮೃತಿ ಮರೆಯಾಗುತ್ತದೆ. ಅದಕ್ಕೆ ಭಾರತಭೂಮಿಯೇ ಕರ್ಮ ಮಾಡಲು ಪ್ರಶಸ್ತ' ಎಂದಿದ್ದಾರೆ. ಆದರೆ ವಿಷಯಭೋಗದಿಂದ ಹರಿಸ್ಮರಣೆ ಮರೆಯಾಗುವುದು ಮಾನವರಿಗೇ ಹೊರತು ದೇವತೆಗಳಿಗಲ್ಲ. ಅದರಿಂದ ದೇವತೆಗಳು ಭೂಮಿಗೆ ಏಕೆ ಬರಬೇಕು? ಈ ಪ್ರಶ್ನೆಗೆ ಕೂರ್ಮಪುರಾಣವಚನದಲ್ಲಿ ಸಮಾಧಾನವಿದೆ-

ಅನಧೀಕಾರಿಣೋ ದೇವಾಃ ಸ್ವರ್ಗಸ್ಥಾ ಭಾರತೋದ್ಭವಮ್ ।
ವಾಂಛಂತ್ಯಾತ್ಮವಿಮೋಕ್ಷಾರ್ಥಂ ಉದ್ರೇಕಾರ್ಥೇಽಧಿಕಾರಿಣಃ ॥
ಇತಿ ಕೌರ್ಮೇ ।

ಆಧಿಕಾರಿಕದೇವತೆಗಳಾದ ಬ್ರಹ್ಮಾದಿಗಳಿಗಿಂತ ಬೇರೆ ದೇವತ್ವಯೋಗ್ಯರಾದ ಮನುಷ್ಯರು ಪುಣ್ಯಕರ್ಮದಿಂದ ಸ್ವರ್ಗವನ್ನು ಸೇರಿದವರು ಪುಣ್ಯಕರ್ಮ ತೀರಿದಾಗ ತಿರುಗಿ ಮೋಕ್ಷಕ್ಕಾಗಿ ಪುಣ್ಯಕರ್ಮ ಮಾಡಲು ಭಾರತಭೂಮಿಯಲ್ಲಿ ಜನ್ಮ ತಳೆಯಲು ಬಯಸುತ್ತಾರೆ. ಆಧಿಕಾರಿಕ ದೇವತೆಗಳು ಮೋಕ್ಷದಲ್ಲಿ ಆನಂದವೃದ್ಧಿಗಾಗಿ ಹಾಗೆಯೇ ಮಾಡುತ್ತಾರೆ ಎಂದು ಕೂರ್ಮಪುರಾಣದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ಏಕೋನವಿಂಶೋಽಧ್ಯಾಯಃ ॥

—o—

ಅಧ್ಯಾಯ-೨೦

ಅಧ್ಯಾಯಸಾರಾಂಶ

ಜಂಬೂದ್ವೀಪದ ಸುತ್ತಲೂ ಒಂದು ಲಕ್ಷಯೋಜನ ವಿಸ್ತಾರದ ಲವಣಸಮುದ್ರವಿದೆ. ಅದರಾಚೆ ಎರಡು ಲಕ್ಷಯೋಜನ ವಿಸ್ತಾರದ ಪ್ಲಕ್ಷದ್ವೀಪವಿದೆ. ಅದರ ಸುತ್ತಲೂ ಎರಡುಲಕ್ಷಯೋಜನ ವಿಸ್ತಾರದ ಇಕ್ಷುರಸ ಸಮುದ್ರವಿದೆ. ಹೀಗೇ ಮುಂದೆ ಕ್ರಮವಾಗಿ ಎರಡೆರಡರಷ್ಟು ಹೆಚ್ಚು ವಿಸ್ತಾರದ ದ್ವೀಪ ಹಾಗೂ ಸಮುದ್ರಗಳಿವೆ. ಪ್ಲಕ್ಷದ್ವೀಪದಲ್ಲಿ ಸೂರ್ಯಾಂತರ್ಗತನಾದ ಭಗವಂತನನ್ನೂ ಶಾಲ್ಮಲಿದ್ವೀಪದಲ್ಲಿ ಚಂದ್ರಾಂತರ್ಗತನಾದ ಭಗವಂತನನ್ನೂ ಕುಶದ್ವೀಪದಲ್ಲಿ ಅಗ್ನ್ಯಂತರ್ಗತನಾದ ಭಗವಂತನನ್ನೂ ಕ್ರೌಂಚದ್ವೀಪದಲ್ಲಿ ಜಲಾಂತರ್ಯಾಮಿಯನ್ನೂ ಶಾಕದ್ವೀಪದಲ್ಲಿ ವಾಯ್ವಂತರ್ಗತನನ್ನೂ ಪುಷ್ಕರದ್ವೀಪದಲ್ಲಿ ಬ್ರಹ್ಮಾಂತರ್ಗತನಾದ ಭಗವಂತನನ್ನು ಜನರು ಉಪಾಸನೆ ಮಾಡುತ್ತಾರೆ. ಪ್ಲಕ್ಷದಿಂದ ತೊಡಗಿ ಶಾಕದ್ವೀಪಗಳವರೆಗೆ ಎಲ್ಲ ದ್ವೀಪಗಳಲ್ಲಿಯೂ ಏಳು ಖಂಡಗಳು ಏಳು ಪರ್ವತಗಳು ಇರುತ್ತವೆ. ಪುಷ್ಕರದಲ್ಲಿ ಬೆಂಕಿಯಂತೆ ಹೊಳೆಯುವ ಬಂಗಾರದ ಕಮಲವಿದೆ. ಅದು ಬ್ರಹ್ಮದೇವರ ಆಸನ. ಮಾನಸೋತ್ತರವೆಂಬ ಒಂದೇ ಪರ್ವತ ದ್ವೀಪವನ್ನು ಎರಡಾಗಿ ವಿಭಾಗಿಸಿದೆ. ಅದರಿಂದ ಎರಡು ಖಂಡಗಳು. ಹತ್ತು ಸಾವಿರ ಯೋಜನ ಎತ್ತರದ ಮಾನಸೋತ್ತರ ಪರ್ವತ ಮೇರು ಪರ್ವತಕ್ಕೆ ಸುತ್ತು ಬರುವ ಸೂರ್ಯನ ರಥಕ್ಕೆ ಮಾರ್ಗವಾಗಿದೆ. ಅದರಲ್ಲಿ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದಿಕ್ಪಾಲಕರ ಪಟ್ಟಣಗಳಿವೆ. ಪುಷ್ಕರದ್ವೀಪ ಅದರಷ್ಟೇ ವಿಸ್ತಾರದ ಅಂದರೆ ಅರವತ್ತನಾಲ್ಕುಲಕ್ಷಯೋಜನದಷ್ಟಿರುವ ಶುದ್ಧೋದಕ ಸಮುದ್ರದಿಂದ ಸುತ್ತುವರಿಯಲ್ಪಟ್ಟಿದೆ. ಅದರಾಚೆ ಮನುಷ್ಯರಿಗೆ ಅಗಮ್ಯವಾದ ಬಂಗಾರದ ಭೂಮಿ. ಅದರಾಚೆ ಲೋಕಾಲೋಕ ಪರ್ವತ. ಈ ಪರ್ವತದ ಮೇಲೆ ನಾಲ್ಕು ದಿಗ್ಗಜಗಳಿವೆ. ಈ ಪರ್ವತದ ಈಚೆ ಮಾತ್ರ ಸೂರ್ಯಪ್ರಕಾಶ ಮೂಲೋಕವನ್ನು ಬೆಳಗುತ್ತದೆ. ಆಚೆ ಇಲ್ಲ. ಅಲ್ಲಿ

ಭಗವಂತನನ್ನು ದ್ವೇಷಿಸುವ ದೈತ್ಯರು ಇರುವ ಅಂಧಂತಮಸ್ಸು ಇದೆ. ಅದರಾಚೆ ಘನೋದಕ ಸಮುದ್ರ. ಅದರಾಚೆ ಬ್ರಹ್ಮಾಂಡ ಕಟಾಹ. ಬ್ರಹ್ಮಾಂಡದ ಮಧ್ಯದಲ್ಲಿ ಸೂರ್ಯ ಬೆಳಗುತ್ತಾನೆ. ಅದರಿಂದಲೇ ಅವನಿಗೆ ಮಾರ್ತಾಂಡ ಎಂದು ಹೆಸರು ಅನ್ವರ್ಥಕವಾಗಿದೆ.

* * *

ಇಪ್ಪತ್ತನೆ ಅಧ್ಯಾಯದಲ್ಲಿ 'ಭಗವಂತಂ ತ್ರಯೀಮಯಂ ಸೂರ್ಯಮಾತ್ಮಾನಂ ಯಜಂತೇ' 'ಭಗವಂತಂ ವೇದಮಯಂ ಸೋಮಮಾತ್ಮಾನಂ ವೇದೇನ ಯಜಂತೇ' ಎಂದು ಮುಂತಾಗಿ ಸೂರ್ಯ ಸೋಮ ಅಗ್ನಿ ಅಂಬು ವಾಯು ಬ್ರಹ್ಮರನ್ನು ಪ್ಲಕ್ಷ ಮುಂತಾದ ಆರು ದ್ವೀಪಗಳಲ್ಲಿ ಜನರು ಉಪಾಸನ ಮಾಡುತ್ತಾರೆ ಎಂದಿದೆ.

ಶ್ರೀಬಾದರಾಯಣಿರುವಾಚ

ಪ್ರತ್ನಸ್ಯ ವಿಷ್ಣೋ ರೂಪಂ ಯತ್ ಸತ್ಯರ್ತಸ್ಯ ಬ್ರಹ್ಮಣಃ ।
ಅಮೃತಸ್ಯ ಚ ಮೃತ್ಯೋಶ್ಚ ಸೂರ್ಯಮಾತ್ಮಾನಮೀಮಹೀತಿ ॥ ೫ ॥

ಸ್ವಗೋಭಿಃ ಪಿತೃದೇವೇಭ್ಯೋ
ವಿಭಜನ್ ಶುಕ್ಲಕೃಷ್ಣಯೋಃ ।
ಅಂಧಃ ಪ್ರಜಾನಾಂ ಸರ್ವಾಸಾಂ
ರಾಜಾ ನಃ ಸೋಮಮಸ್ತ್ವಿತಿ ॥ ೧೨ ॥

ಪರಸ್ಯ ಬ್ರಹ್ಮಣಃ ಸಾಕ್ಷಾ-
ಜ್ಜಾತವೇದೋಽಸಿ ಹವ್ಯವಾಟ್ ।
ದೇವಾನಾಂ ಪುರುಷಾಂಗಾನಾಂ
ಯಜ್ಞೇನ ಪುರುಷಂ ಯಜೇತಿ ॥ ೧೭ ॥

ಆಪಃ ಪುರುಷವೀರ್ಯಾಃ ಸ್ಥ
ಪುನಂತೀರ್ಭೂರ್ಭುವಃ ಸುವಃ ।
ತಾ ನಃ ಪುನೀತಾಮೀವಘ್ನೀಃ
ಸ್ಪೃಶತಾತ್ಮನಾಽಭವೇ ಇತಿ ॥ ೨೨ ॥

ಅಂತಃಪ್ರವಿಶ್ಯ ಭೂತಾನಿ
ಯೋ ಬಿಭರ್ತ್ಯಾತ್ಮಕೇತುಭಿಃ ।
ಅಂತರ್ಯಾಮೀಶ್ವರಃ ಸಾಕ್ಷಾತ್
ಪಾತು ನೋ ಯದ್ವಶೇ ಇದಮಿತಿ ॥ ೨೯ ॥

ಯತ್ತೇ ಕರ್ಮಮಯಂ ಲಿಂಗಂ ಬ್ರಹ್ಮಲಿಂಗಂ ಜನೋಽರ್ಚತಿ ।
ಭೇದೇನೈಕಾಂತಮದ್ವೈತಂ ತಸ್ಮೈ ಭಗವತೇ ನಮ ಇತಿ ॥ ೩೩ ॥

'ಪುರಾತನ, ಮುಕ್ತಾಮುಕ್ತನಿಯಾಮಕ, ನಿರ್ವಿಕಾರ, ಗುಣಪೂರ್ಣ, ನಿತ್ಯಮುಕ್ತ ಮತ್ತು ಲಯಕಾರಕನಾದ ವಿಷ್ಣುವಿನ ಸೂರ್ಯಾಂತರ್ಗತ ಸೂರ್ಯನಾಮಕವಾದ ಜಗತ್ಸ್ವಾಮಿಯಾದ ರೂಪವನ್ನು ಭಜಿಸುವೆವು'

ಶುಕ್ಲ ಕೃಷ್ಣ ಪಕ್ಷಗಳಲ್ಲಿ ಕ್ರಮವಾಗಿ ಪಿತೃಗಳಿಗೆ ದೇವತೆಗಳಿಗೆ ತನ್ನ ಕಿರಣಗಳಿಂದ ಸೋಮರಸವೆಂಬ ಅನ್ನವನ್ನು ಹಂಚಿಕೊಡುವ ಚಂದ್ರಾಂತರ್ಗತನಾದ ಭಗವಂತ ಪ್ರಜೆಗಳಾದ ನಮ್ಮೆಲ್ಲರಿಗೂ ಉಲ್ಲಾಸನೀಡಲಿ.

ಹೇ ಅಗ್ನಿದೇವ, ನೀನು ಮುಖ್ಯವಾಗಿ ಪರಬ್ರಹ್ಮ ನಾರಾಯಣನ ಸನ್ನಿಧಾನ ಪಾತ್ರನಾಗಿರುವಿ. ಯಜ್ಞಪುರುಷನಾದ ಆ ಭಗವಂತನ ಶರೀರದಂತಿರುವ ಇಂದ್ರಾದಿದೇವತೆಗಳಿಗೆ ಹವಿರ್ಭಾಗವನ್ನು ಒಯ್ದು ಕೊಡುವವನು ನೀನೆ. ನಾವು ಮಾಡುವ ಯಜ್ಞದಿಂದ ನೀನು ಯಜ್ಞಪುರುಷನನ್ನು ಆರಾಧಿಸು. ನಾವು ಅರ್ಪಿಸುವ ಆಹುತಿಗಳನ್ನು ಯಜ್ಞಪುರುಷನಿಗೆ ನೀಡು.

ನೀರು ತನ್ನೊಳಗಿರುವ ಪರಮಾತ್ಮನ ಶಕ್ತಿಯಿಂದ ಭೂಃ ಭುವಃ ಸ್ವಃ ಎಂಬ ಮೂರು ಲೋಕಗಳನ್ನೂ ಪವಿತ್ರೀಕರಿಸಬಲ್ಲುದು. ಪಾಪಗಳನ್ನು ಕಳೆಯಬಲ್ಲುದು. ಮೋಕ್ಷವನ್ನು ಬಯಸುವವನೂ ತನ್ನ ಶರೀರದಿಂದ ಜಲವನ್ನು ಸ್ಪರ್ಶಿಸಬೇಕು. ಅಂಥ ನೀರು ನಮ್ಮನ್ನು ಪವಿತ್ರೀಕರಿಸಲಿ.

ಪ್ರಾಣಿಶರೀರಗಳನ್ನು ಪ್ರವೇಶಿಸಿ ಪ್ರಾಣಾಪಾನಾದಿ ನಿಯಾಮಕ ರೂಪಗಳಿಂದ ಅಂತರ್ಯಾಮಿಯಾದ ಸರ್ವಶಕ್ತನಾದ ಸಾಕ್ಷಾತ್ ವಾಯು ಕಾಪಾಡುತ್ತಾನೆ. ಈ ಜಗತ್ತೆಲ್ಲ ಅವನ ವಶದಲ್ಲಿದೆ. ಅವನು ನಮ್ಮನ್ನು ಕಾಪಾಡಲಿ.

'ಸಕಲಕರ್ಮಗಳಿಂದಲೂ ಮುಖ್ಯವಾಗಿ ಆರಾಧ್ಯನೆನಿಸಿದುದು ಬ್ರಹ್ಮಾಂತರ್ಗತವಾದ ನಿನ್ನ ಸ್ವರೂಪ. ಅದನ್ನೇ ಸರ್ವಥಾ ಸರ್ವವಿಲಕ್ಷಣವೆಂದೂ ಸ್ವಗತಭೇದವರ್ಜಿತವೆಂದೂ ಜ್ಞಾನಿಗಳ ಉಪಾಸನೆ ಮಾಡುತ್ತಾರೆ. ಅಂಥ ಭಗವಂತನಿಗೆ ನಮಸ್ಕಾರ' ಎಂದು.

ಇಲ್ಲಿ ಸೂರ್ಯ ಸೋಮ ಮುಂತಾದ ಶಬ್ದಗಳಿಂದ ಭಗವಂತನನ್ನು ಬಿಟ್ಟು ಸೂರ್ಯಚಂದ್ರಮುಂತಾದ ದೇವತೆಗಳನ್ನೇ ಇಟ್ಟುಕೊಂಡರೆ 'ಪ್ರತ್ನಸ್ಯ ವಿಷ್ಣೋ ರೂಪಂ ಯತ್' ಎಂದು ಮುಂತಾದ ವಿಷ್ಣುಮಂತ್ರಗಳನ್ನು ಹೇಳುವುದು ಕೂಡುವುದಿಲ್ಲ ಎಂಬ ಸಮಸ್ಯೆ ಬರುತ್ತದೆ. ಅದರಿಂದ ಸೂರ್ಯ ಸೋಮ ಮುಂತಾದ ಪದಗಳಿಂದ ವಿಷ್ಣುವನ್ನೇ ಗ್ರಹಿಸಬೇಕು.

ಸೂರ್ಯಸೋಮಾಗ್ನಿವಾರೀರವಿಧಾತೃಷು ಯಥಾಕ್ರಮಮ್ ।
ಪ್ಲಕ್ಷಾದಿದ್ವೀಪಸಂಸ್ಥಾಸ್ತು ಸ್ಥಿತಂ ಹರಿಮುಪಾಸತೇ ॥ ಇತಿ ಚ ।

ಪ್ಲಕ್ಷ ಮುಂತಾದ ದ್ವೀಪವಾಸಿಗಳು ಸೂರ್ಯ ಸೋಮ ಅಗ್ನಿ ಅಂಬು ವಾಯು ಬ್ರಹ್ಮರಲ್ಲಿ ಕ್ರಮವಾಗಿ ಸೂರ್ಯಾದಿನಾಮಕನಾಗಿ ನೆಲೆಸಿರುವ ಹರಿಯನ್ನು ಉಪಾಸನ ಮಾಡುತ್ತಾರೆ ಎಂದೂ ಹೇಳಿದೆ.

ಅದರಿಂದ ಸೂರ್ಯಮಾತ್ಮಾನಂ ಯಜಂತೇ' ಎಂದರೆ ಸೂರ್ಯಾಂತರ್ಗತ ಸೂರ್ಯನಾಮಕ ಭಗವಂತನನ್ನು ಉಪಾಸನ ಮಾಡುತ್ತಾರೆ ಎಂದು ಮುಂತಾಗಿ ಅರ್ಥ ಗ್ರಹಿಸಬೇಕು.

* * *

ದಧಿಸಮುದ್ರದ ಸುತ್ತಲೂ ಶಾಕದ್ವೀಪ, ಅದರ ಸುತ್ತಲೂ ಕ್ಷೀರಸಮುದ್ರವಿದೆ ಎಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ.

ಏವಂ ಪರಸ್ತಾತ್ ಕ್ಷೀರೋದಾತ್ ಪರಿತ ಉಪವೇಶಿತಃ ಶಾಕದ್ವೀಪೋ ದ್ವಾತ್ರಿಂಶಲ್ಲಕ್ಷಯೋಜನಾಯಾಮಃ ಸಮಾನೇನ ದಧಿಮಂಡೋದೇನ ಪರಿತ ಉಪಕ್ಲೃಪ್ತೋ ಯಸ್ಮಿನ್ ಶಾಕೋ ನಾಮ ಮಹೀರುಹಃ ಸ್ವಕ್ಷೇತ್ರವ್ಯಪದೇಶಕರೋ ಯಸ್ಯ ಹ ಮಹಾನ್ ಸುರಭಿಗಂಧಸ್ತಂ ದ್ವೀಪಮನುವಾಸಯತಿ ॥ ೨೪ ॥

ಹೀಗೆ ದಧಿಸಮುದ್ರದಿಂದ ಹೊರಗೆ ಸುತ್ತಲೂ ಮೂವತ್ತೆರಡು ಲಕ್ಷಯೋಜನವಿಸ್ತಾರದ ಶಾಕದ್ವೀಪವಿದೆ. ಅದು ತನ್ನಷ್ಟೇ ವಿಸ್ತಾರದ ಕ್ಷೀರಸಮುದ್ರದಿಂದ ಸುತ್ತುವರಿಯಲ್ಪಟ್ಟಿದೆ. ಈ ಶಾಕದ್ವೀಪದಲ್ಲಿ ಶಾಕವೆಂಬ ವೃಕ್ಷವಿದೆ. ಅದರ ಹೆಸರಿನಿಂದ ಈ ದ್ವೀಪವೂ ಶಾಕವೆಂದು ಕರೆಸಿಕೊಳ್ಳುತ್ತದೆ. ಈ ವೃಕ್ಷದ ಸುಗಂಧ ಇಡೀ ದ್ವೀಪವನ್ನು ಪರಿಮಳಗೊಳಿಸುತ್ತದೆ.

ಇಲ್ಲಿ 'ಕ್ಷೀರಸಮುದ್ರದ ಸುತ್ತಲೂ ಶಾಕದ್ವೀಪ, ಅದರ ಸುತ್ತಲೂ ದಧಿ ಸಮುದ್ರ' ವೆಂದು ವ್ಯತ್ಯಾಸ ಮಾಡಿ ಹೇಳಿದೆ. ಆದರೆ 'ಕ್ಷೀರ' ಶಬ್ದದಿಂದ ಕ್ಷೀರದಂತೆ

ಮಧುರವಾಗಿರುವ ಪ್ರಯುಕ್ತ ಕ್ಷೀರವೆಂದೇ ಗೌಣವಾಗಿ ಕರೆಸಿಕೊಳ್ಳುವ ಸಿಹಿ ಮೊಸರನ್ನಿಟ್ಟುಕೊಳ್ಳಬೇಕು. ದಧಿಶಬ್ದದಿಂದ ದಧಿಯಂತೆ ಗಟ್ಟಿಯಾಗಿರುವ ಪ್ರಯುಕ್ತ ದಧಿ ಎಂದೇ ಗೌಣವಾಗಿ ಕರೆಸಿಕೊಳ್ಳುವ ಗಟ್ಟಿಹಾಲನ್ನಿಟ್ಟುಕೊಳ್ಳಬೇಕೆಂದು ಶ್ರೀಮದಾಚಾರ್ಯರು ಹೇಳುತ್ತಾರೆ. ಈ ರೀತಿಯ ಗೌಣಪ್ರಯೋಗ ವಿರುವುದುಂಟೆನ್ನಲು ಶಬ್ದನಿರ್ಣಯದ ಆಧಾರವನ್ನು ತೋರಿಸುತ್ತಾರೆ-

ಅನಾಮ್ಲಂ ತು ದಧಿ ಕ್ಷೀರಂ ಕ್ಷೀರಂ ಸಾಂದ್ರಂ ತಥಾ ದಧಿ ।

ಇತಿ ಶಬ್ದನಿರ್ಣಯೇ ।

ಸಿಹಿಮೊಸರನ್ನು ಕ್ಷೀರವೆಂದೂ ಗಟ್ಟಿಹಾಲನ್ನು ದಧಿ ಎಂದೂ ವ್ಯವಹರಿಸುವುದುಂಟೆಂದು ಶಬ್ದನಿರ್ಣಯದಲ್ಲಿ ಹೇಳಿದೆ.

ಬೇರೆ ವ್ಯಾಖ್ಯಾನಕಾರರು ಈ ಪ್ರಶ್ನೆಯನ್ನೆತ್ತಿಕೊಳ್ಳಲಿಲ್ಲ. ವೀರರಾಘವ ವ್ಯಾಖ್ಯಾನದಲ್ಲಿ ಮಾತ್ರ ಭಾಗವತದಲ್ಲಿ ಕ್ಷೀರಸಮುದ್ರದಧಿಸಮುದ್ರಗಳ ನಿರ್ದೇಶದಲ್ಲಿ ವ್ಯತ್ಯಾಸವನ್ನೇ ಮಾಡಿಲ್ಲವೆಂಬಂತೆ 'ದಧಿ ಮಂಡೋದಾತ್ ಪರಿತಃ ಬಹಿರುಪವೇಶಿತಃ ವಿನ್ಯಸ್ತಃ ಶಾಕದ್ವೀಪಃ ದ್ವಾತ್ರಿಂಶಲ್ಲಕ್ಷಯೋಜನವಿಶಾಲಃ ಸಮಾನೇನ ದ್ವಾತ್ರಿಂಶ ಲ್ಲಕ್ಷಯೋಜನವಿಶಾಲೇನ ಕ್ಷೀರೋದಧಿನಾ ಪರಿವೇಷ್ಟಿತಃ' ದಧಿಸಮುದ್ರದ ಸುತ್ತಲೂ ಹೊರಭಾಗದಲ್ಲಿ ಮೂವತ್ತೆರಡು ಲಕ್ಷಯೋಜನ ವಿಸ್ತಾರದ ಶಾಕದ್ವೀಪವಿದೆ. ಅದಕ್ಕೆ ಸುತ್ತಲೂ ಮೂವತ್ತೆರಡು ಲಕ್ಷಯೋಜನ ವಿಶಾಲವಾದ ಕ್ಷೀರಸಮುದ್ರವಿದೆ.' ಎಂದಿದ್ದಾರೆ. ಭಾಗವತ ಪಾಠವೇ ಒಂದು ಹಾಗೇ ಇರಬಹುದು. ಇದ್ದರೂ ಅದು ಅಪಪಾಠ. ಏಕೆಂದರೆ ಭಾಗವತದಲ್ಲಿ ದಧಿಸಮುದ್ರಕ್ಷೀರಸಮುದ್ರಗಳ ವಿಷಯದಲ್ಲಿ ವ್ಯತ್ಯಾಸ ಕಾಣುತ್ತದೆ ಎಂದು ಶ್ರೀಮದಾಚಾರ್ಯರು ಉದಾಹರಿಸಿರುವ ಬ್ರಹ್ಮಾಂಡಪುರಾಣವಚನ ಸ್ಪಷ್ಟವಾಗಿ ಹೇಳುತ್ತಿದೆ-

'ಮಂಡೋದೇ ಪೂರಣಂ ಚೈವ ವ್ಯತ್ಯಾಸಂ ಕ್ಷೀರಸಾಗರೇ' ಎಂದು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ವಿಂಶೋಽಧ್ಯಾಯಃ ॥

—o—

ಅಧ್ಯಾಯ-೨೧

ಅಧ್ಯಾಯಸಾರಾಂಶ

ಮಾನಸೋತ್ತರ ಪರ್ವತದ ಮೇಲಿರುವ ಸೂರ್ಯರಥ ಸಂಚಾರ ಮಾರ್ಗ ಪೂರ್ತಿಸಮತಟ್ಟಾಗಿಲ್ಲ. ಅದರಲ್ಲಿ ಏರುಪೇರುಗಳಿವೆ. ವೃಶ್ಚಿಕ ಧನುಸ್ಸು ಮಕರ ಕುಂಭ ಮೀನ ಮಾಸಗಳಲ್ಲಿ ಇಳಿಜಾರಾದ ಮಾರ್ಗದಲ್ಲಿ ಸೂರ್ಯರಥ ಬೇಗನೆ ಸಂಚರಿಸುವುದರಿಂದ ಹಗಲಿನ ಪ್ರಮಾಣ ಕಡಿಮೆ. ರಾತ್ರಿ ಪ್ರಮಾಣ ಹೆಚ್ಚು. ವೃಷಭ ಮಿಥುನ ಕರ್ಕಟಕ ಸಿಂಹ ಕನ್ಯಾಮಾಸಗಳಲ್ಲಿ ಏರಾದ ಮಾರ್ಗದಲ್ಲಿ ನಿಧಾನವಾಗಿ ಸಂಚರಿಸುವುದರಿಂದ ಹಗಲು ಹೆಚ್ಚು ರಾತ್ರಿ ಕಡಿಮೆ. ಮೇಷ ತುಲಾ ಮಾಸಗಳಲ್ಲಿ ಸಮತಟ್ಟಾದ ದಾರಿಯಲ್ಲಿ ಪ್ರಯಾಣ. ಅದರಿಂದ ಹಗಲು ರಾತ್ರಿಗಳು ಸಮಪ್ರಮಾಣದಲ್ಲಿರುತ್ತವೆ.

ಸೂರ್ಯರಥಕ್ಕೆ ಒಂದೇ ಚಕ್ರ. ಅದಕ್ಕೆ ಸಂವತ್ಸರಾಭಿಮಾನಿಯೆ ಅಭಿಮಾನಿ. ಹನ್ನೆರಡು ಮಾಸಾಭಿಮಾನಿಗಳು ಅದರ ಹನ್ನೆರಡು ಅರೆಗಾಲುಗಳಿಗೆ ಅಭಿಮಾನಿಗಳು. ಆರು ಅಂಚಿನ ಪಟ್ಟಿಗಳಿಗೆ ಆರು ಋತ್ವಭಿಮಾನಿಗಳು ಅಭಿಮಾನಿಗಳು. ಮೂರು ಗುಮ್ಮೆಗಳಿಗೆ ಮೂರು ಚಾತುರ್ಮಾಸಾಭಿಮಾನಿಗಳು ಅಭಿಮಾನಿಗಳು. ಅಚ್ಚಿನ ಒಂದು ಕೊನೆ ಮೇರು ಪರ್ವತದ ತುದಿಯಲ್ಲಿ. ಇನ್ನೊಂದು ಕೊನೆ ಮಾನಸೋತ್ತರದಲ್ಲಿ. ಎಣ್ಣೆಗಾಣದ ಎತ್ತಿನಂತೆ ಚಕ್ರ ಸುತ್ತುತ್ತದೆ. ಈ ಚಕ್ರಕ್ಕೆ ಇನ್ನೊಂದು ಸಣ್ಣ ಅಚ್ಚಿನ ಕೆಳಭಾಗ ಸೇರಿಕೊಂಡಿದೆ. ತುದಿಭಾಗ ಧ್ರುವಮಂಡಲದಲ್ಲಿ ವಾಯುಪಾಶದಿಂದ ಬದ್ಧವಾಗಿದೆ.

ಈ ರಥಕ್ಕೆ ಚಕ್ರದಂತೆ ಕುದುರೆಯೂ ಒಂದೇ. ಆದರೆ ಅದು ಏಳು ರೂಪ ತಳೆದು ರಥವನ್ನು ಎಳೆಯುತ್ತದೆ. ಅರುಣ ಸಾರಥಿ. ಅವನು ಸೂರ್ಯನ ಮುಂದೆ ಕುಳಿತಿದ್ದರೂ ಅವನಿಗೆ ಬೆನ್ನುಹಾಕಿ

ಕುಳಿತುಕೊಳ್ಳುವುದಿಲ್ಲ. ಅಭಿಮುಖವಾಗಿ ಕುಳಿತಿರುತ್ತಾನೆ. ಪಶ್ಚಿಮಾಭಿ ಮುಖವಾಗಿ ಕುಳಿತು ಪೂರ್ವಾಭಿಮುಖವಾಗಿ ರಥ ಓಡಿಸುತ್ತಾನೆ.

ಸೂರ್ಯರಥದಲ್ಲಿ ಹೆಬ್ಬೆರಳಿನ ಗಂಟಿನಷ್ಟು ಗಾತ್ರದ ಅರವತ್ತು ಸಾವಿರ ಮಂದಿ ವಾಲಖಿಲ್ಯರೆಂಬ ಋಷಿಗಳು ಸೌರಮಂತ್ರಗಳಿಂದ ಸೂರ್ಯಾಂತರ್ಗತಪರಮಾತ್ಮನನ್ನು ಸ್ತುತಿಸುತ್ತಾರೆ. ಹಾಗೆಯೇ ಬೇರೆ ಋಷಿಗಳು ಗಂಧರ್ವರು ಮುಂತಾದವರು ಏಳೇಳು ಮಂದಿಗಳ ಹನ್ನೆರಡು ಗಣಗಳಾಗಿ ಹನ್ನೆರಡು ಮಾಸಗಳಲ್ಲಿ, ಸೂರ್ಯಾಂತರ್ಗತನನ್ನು ಉಪಾಸನೆ ಮಾಡುತ್ತಾರೆ. ಸೂರ್ಯರಥದ ವೇಗ ಒಂದು ಕ್ಷಣಕ್ಕೆ ಎರಡು ಸಾವಿರ ಯೋಜನ ಮತ್ತು ಎರಡು ಹರದಾರಿ.

—o—

ಅಧ್ಯಾಯ-೨೨

ಅಧ್ಯಾಯಸಾರಾಂಶ

ಪ್ರದಕ್ಷಿಣಾಕಾರವಾಗಿ ಸುತ್ತುವ ಕುಂಬಾರಚಕ್ರದ ಮೇಲೆ ಇರುವೆಗಳು ಅಪ್ರದಕ್ಷಿಣವಾಗಿ ಸುತ್ತ ಬಹುದು. ಹಾಗೆಯೇ ಸೂರ್ಯ ನಕ್ಷತ್ರರಾಶಿಗಳೊಂದಿಗೆ ಮೇರುವಿಗೆ ಪ್ರದಕ್ಷಿಣವಾಗಿ ಸುತ್ತುತ್ತಿರುವಾಗಲೇ ರಾಶಿಗೆ ಅಭಿಮುಖವಾಗಿ ಅಪ್ರದಕ್ಷಿಣವಾಗಿಯೂ ಸಂಚರಿಸುತ್ತಾನೆ. ಹಾಗೆಯೇ ಬೇರೆ ಗ್ರಹಗಳಿಗೂ ಬೇರೆಬೇರೆ ನಕ್ಷತ್ರರಾಶಿಗಳಲ್ಲಿ ಗತಿಯೂ ಇದೆ. ಸೂರ್ಯ ಹನ್ನೆರಡು ರಾಶಿಗಳಲ್ಲಿ ಸಂಚರಿಸುವಾಗ ಹನ್ನೆರಡು ಸೌರಮಾಸಗಳಾಗುವುವು. ಒಂದು ವರ್ಷದಲ್ಲಿ ಸೂರ್ಯ ಒಮ್ಮೆ ಎಲ್ಲ ರಾಶಿಗಳಲ್ಲಿ ಸಂಚರಿಸುತ್ತಾನೆ. ನಕ್ಷತ್ರಗ್ರಹಗಳ ಗತಿಗಳೂ ಸೂರ್ಯಗತಿಗೆ ಅಧೀನವಾದ್ದರಿಂದ ಸೂರ್ಯಗತಿಯ ಕಾಲವನ್ನು ಸಂವತ್ಸರ ಪರಿವತ್ಸರ ಇಡಾವತ್ಸರ ಅನುವತ್ಸರ ವತ್ಸರ ಎಂದು ಕರೆಯುತ್ತಾರೆ.

ಸೂರ್ಯಮಂಡಲಕ್ಕಿಂತ ಒಂದು ಲಕ್ಷಯೋಜನದಷ್ಟು ಮೇಲೆ ಚಂದ್ರಮಂಡಲವಿದೆ. ಸೂರ್ಯ ಒಂದು ವರ್ಷಕಾಲ ಕ್ರಮಿಸುವ ದ್ವಾದಶರಾಶಿಗಳನ್ನು ಚಂದ್ರ ಒಂದು ತಿಂಗಳಲ್ಲಿ ಕ್ರಮಿಸುತ್ತಾನೆ. ಚಂದ್ರನಿಗೆ ಹದಿನಾರು ಕಲೆಗಳಿವೆ. ಅವನು ಮನೋಭಿಮಾನಿ, ಅನ್ನವೃದ್ಧಿಕರ. ಚಂದ್ರನಿಗಿಂತ ಒಂದು ಲಕ್ಷಯೋಜನ ಮೇಲ್ಗಡೆ ನಕ್ಷತ್ರಗಳಿವೆ. ನಕ್ಷತ್ರಗಳಿಗೆ ಪ್ರದಕ್ಷಿಣಗತಿ ಮಾತ್ರವಿದೆ. ಅಪ್ರದಕ್ಷಿಣಗತಿಯಿಲ್ಲ. ಅವುಗಳಿಗಿಂತ ಎರಡು ಲಕ್ಷಯೋಜನ ಎತ್ತರದಲ್ಲಿ ಶುಕ್ರನಿದ್ದಾನೆ. ಇವನಿಗೆ ಶೀಘ್ರ ಮಂದ ಸಮಗತಿಗಳು ಮೂರೂ ಇವೆ. ಶುಭಗ್ರಹ. ಮಳೆ ಉಂಟುಮಾಡುವವನು. ಬುಧನೂ ಶುಭಗ್ರಹ. ಅವನು ಶುಕ್ರನಿಗಿಂತ ಎರಡು ಲಕ್ಷಯೋಜನ ಎತ್ತರದಲ್ಲಿದ್ದಾನೆ. ಬುಧನಿಗಿಂತ ಎರಡುಲಕ್ಷ ಯೋಜನ ಎತ್ತರದಲ್ಲಿ ಕುಜಗ್ರಹ. ಈತ ಅಶುಭಸೂಚಕ. ಇವನಿಗಿಂತ ಎರಡು ಲಕ್ಷಯೋಜನ ಎತ್ತರದಲ್ಲಿ ಬೃಹಸ್ಪತಿ. ಬ್ರಾಹ್ಮಣಕುಲಕ್ಕೆ ಈತ ಅನುಕೂಲ. ಪ್ರತಿಯೊಂದು ರಾಶಿಯಲ್ಲಿ ಒಂದು ವರ್ಷಕಾಲ ಇರುತ್ತಾನೆ. ಬೃಹಸ್ಪತಿಗಿಂತ ಎರಡು ಲಕ್ಷಯೋಜನ ಎತ್ತರದಲ್ಲಿ ಶನೈಶ್ಚರ. ಮೂವತ್ತು

ತಿಂಗಳ ಕಾಲ ಒಂದೊಂದು ರಾಶಿಯಲ್ಲಿರುತ್ತಾನೆ. ಈತ ಅಶಾಂತಿಸೂಚಕ. ಈತನಿಗಿಂತ ಹನ್ನೊಂದು ಲಕ್ಷಯೋಜನ ಎತ್ತರದಲ್ಲಿ ಸಪ್ತರ್ಷಿಮಂಡಲ. ಲೋಕಾನುಗ್ರಹಕ್ಕಾಗಿ ಸಪ್ತರ್ಷಿಗಳು ಶಿಂಶುಮಾರನಿಗೆ ಪ್ರದಕ್ಷಿಣೆ ಬರುತ್ತಾರೆ. ಇವರಿಗಿಂತ ಹದಿಮೂರು ಲಕ್ಷಯೋಜನ ಎತ್ತರದಲ್ಲಿ ಶಿಂಶುಮಾರನ ಪರಮಪದವಿದೆ. ಅಲ್ಲಿ ಧ್ರುವ ಭಗವಂತನ ಉಪಾಸನೆ ಮಾಡುತ್ತ ಮಹರ್ಲೋಕವಾಸಿಗಳಿಗೆ ತತ್ತ್ವೋಪದೇಶ ಮಾಡುತ್ತಾನೆ. ಎಲ್ಲ ಜ್ಯೋತಿರ್ಗಣಗಳು ಅಂತರಿಕ್ಷದಲ್ಲಿ ಸುತ್ತಲು ಮೇಟಿಕಂಬದಂತೆ ಆಶ್ರಯವಾಗಿರುವುದು ಧ್ರುವನಕ್ಷತ್ರ. ವಾಯುಪಾಶದಿಂದ ಬದ್ಧವಾಗಿ ಎಲ್ಲ ಜ್ಯೋತಿರ್ಮಂಡಲಗಳೂ ಧ್ರುವದ ಸುತ್ತಲೂ ತಮ್ಮ ಕಕ್ಷ್ಯೆಗಳಲ್ಲಿ ಸದಾ ಸುತ್ತುತ್ತವೆ. ಚೇಳಿನ ಆಕಾರದಲ್ಲಿರುವ ಶಿಂಶುಮಾರನೆ ತನ್ನ ಅವಯವಗಳಲ್ಲಿ ಎಲ್ಲ ಜ್ಯೋತಿರ್ಮಂಡಲಗಳನ್ನು ಧರಿಸಿದ್ದಾನೆ. ಬಾಲದ ತುದಿಯಲ್ಲಿ ಧ್ರುವನಕ್ಷತ್ರವನ್ನು ಧರಿಸಿದ್ದಾನೆ. ಸರ್ವದೇವತೆಗಳಿಗೂ ಆಧಾರನಾದ ಶಿಂಶುಮಾರನನ್ನು ಮೂರು ಸಂಧ್ಯೆಗಳಲ್ಲಿ ಉಪಸ್ಥಾನ ಮಾಡಬೇಕು. ಅದರಿಂದ ಮೂರು ಕಾಲಗಳಲ್ಲಿ ಮಾಡುವ ಪಾಪ ಪರಿಹಾರವಾಗುವುದು.

* * *

ಭಗವಾನ್ ವಿಷ್ಣುವಿನ ಶಿಂಶುಮಾರ ಮೂರ್ತಿಯ ಮಂತ್ರದಿಂದ ಮೂರುಕಾಲಗಳಲ್ಲಿ ಜಪ ನಮಸ್ಕಾರ ಸ್ತೋತ್ರಗಳು ವಿಹಿತವಾಗಿವೆ.

ಗ್ರಹರ್ಕ್ಷತಾರಾಮಯಮಾಧಿದೈವಿಕಂ
ರೂಪಂ ಹರೇರ್ಮಂತ್ರಕೃತಸ್ತ್ರಿಕಾಲಮ್ ।
ನಮಸ್ಯತಃ ಸ್ತುವತೋ ನಶ್ಯತೇ ವೈ
ಸ್ವಯಂ ತ್ರಿಕಾಲಕೃತಮಾಶು ಪಾಪಮ್ ॥ ೩೨ ॥

ಗ್ರಹನಕ್ಷತ್ರ ತಾರೆಗಳಿಗೂ ಸರ್ವದೇವತೆಗಳಿಗೂ ಆಧಾರವಾದ ಹರಿಯ ಶಿಂಶುಮಾರರೂಪವನ್ನು ಈ ಮಂತ್ರದಿಂದ ಮೂರುಕಾಲಗಳಲ್ಲಿ ಜಪ ನಮಸ್ಕಾರ ಸ್ತೋತ್ರಗಳನ್ನು ಮಾಡುವವನಿಗೆ ಮೂರುಕಾಲಗಳಲ್ಲಿ ಮಾಡುವ ಪಾಪವೂ ಬೇಗನೆ ಸ್ವತಃ ನಾಶವಾಗುವುದು.

ಇಲ್ಲಿ ಸೂರ್ಯಾದಿಗ್ರಹನಕ್ಷತ್ರಗಳು ಶಿಂಶುಮಾರನ ಶರೀರವನ್ನು ಆಶ್ರಯಿಸಿವೆ ಎಂದು ಹೇಳಿರುವುದರಿಂದ ಶಿಂಶುಮಾರನ ಶರೀರ ಪ್ರಾಕೃತವೆಂದು ತಪ್ಪಾಗಿ ತಿಳಿಯುವ ಸಂಭವವಿದೆ. ಮತ್ತು ಹಿಂದೆ (ಶ್ಲೋ೨೩) 'ಕೇಚನೈತಜ್ಜ್ಯೋತಿರನೀಕಂ'

'ಸೂರ್ಯಾದಿಜ್ಯೋತಿರ್ಮಂಡಲವನ್ನು ಶಿಂಶುಮಾರಮೂರ್ತಿ ಧರಿಸುತ್ತಾನೆ ಎಂದು ಕೆಲವರು ಹೇಳುತ್ತಾರೆ' ಎಂದಿರುವುದರಿಂದ ಜ್ಞಾನಿಗಳಿಗೆ ಇದು ಸಮ್ಮತವಲ್ಲವೇನೋ ಎಂಬ ಸಂದೇಹಕ್ಕೂ ಅವಕಾಶವಿದೆ. ಅದಕ್ಕೆ ಶ್ರೀಮದಾಚಾರ್ಯರು ಹೇಳುತ್ತಾರೆ.

ಜ್ಞಾನಾನಂದಾತ್ಮಕೇ ವಿಷ್ಣೌ ಶಿಂಶುಮಾರವಪುಷ್ಯಥ ।
ಊರ್ಧ್ವಲೋಕೇಷು ಸಂವ್ಯಾಪ್ತ ಆದಿತ್ಯಾದ್ಯಾಃ ಸಮಾಶ್ರಿತಾಃ ॥
ಇತಿ ಬ್ರಹ್ಮಾಂಡೇ ।

ಕೇವಲ ಅಂತರಿಕ್ಷದಲ್ಲಿ ಮಾತ್ರವಲ್ಲದೆ ಜ್ಞಾನಾನಂದಾತ್ಮಕನಾದ ಮತ್ತು ಊರ್ಧ್ವಲೋಕವ್ಯಾಪ್ತನಾದ ಶಿಂಶುಮಾರರೂಪಿ ವಿಷ್ಣುವಿನಲ್ಲಿಯೂ ಸೂರ್ಯಾದಿ ಗ್ರಹನಕ್ಷತ್ರಗಳು ಆಶ್ರಯಿಸಿಕೊಂಡಿವೆ ಎಂದು ಬ್ರಹ್ಮಾಂಡಪುರಾಣದಲ್ಲಿ ಉಕ್ತವಾಗಿದೆ.

ಶಿಂಶುಮಾರನ ಶರೀರ ಪ್ರಾಕೃತವಲ್ಲ, ಜ್ಞಾನಾನಂದಾತ್ಮಕ ಎಂದು ಸ್ಪಷ್ಟವಾಗಿ ಈ ವಚನ ಹೇಳುತ್ತಿದೆ ಮಾತ್ರವಲ್ಲ ಇಲ್ಲಿ 'ಕೇಚನ' 'ಕೆಲವರು' ಎನ್ನದೆ ಸರ್ವಸಮ್ಮತವಾಗಿಯೇ ಶಿಂಶುಮಾರನಿಗೆ ಗ್ರಹನಕ್ಷತ್ರಾದಿಧಾರಕತ್ವವನ್ನು ಹೇಳಿದೆ. ಆದರಿಂದ ಭಾಗವತದಲ್ಲಿ 'ಕೇಚನ' ಎಂದರೆ ಕೆಲವರು ಜ್ಞಾನಿಗಳೇ ಹೇಳುತ್ತಾರೆ ಎಂದು ಅರ್ಥವನ್ನು ಗ್ರಹಿಸಬೇಕು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ
ದ್ವಾವಿಂಶೋಽಧ್ಯಾಯಃ ॥

—o—

ಅಧ್ಯಾಯ-೨೩

ಅಧ್ಯಾಯಸಾರಾಂಶ

ಸೂರ್ಯನಿಗಿಂತ ಕೆಳಗೆ ಹತ್ತುಸಾವಿರ ಯೋಜನ ದೂರದಲ್ಲಿ ರಾಹು ಸಂಚರಿಸುತ್ತಾನೆ. ಇವನು ಪರ್ವಗಳಲ್ಲಿ ಸೂರ್ಯಚಂದ್ರಗ್ರಹಣ ಮಾಡುತ್ತಾನೆ. ಆಗ ಸೂರ್ಯಚಂದ್ರರ ರಕ್ಷಣೆಗೆ ಶ್ರೀಹರಿಯ ಸುದರ್ಶನ ಚಕ್ರ ಪ್ರಾದುರ್ಭವಿಸುವುದು. ರಾಹು ಒಂದು ಮುಹೂರ್ತಕಾಲ ನಿಂತು ಬಳಿಕ ಚಕ್ರದ ಭಯದಿಂದ ದೂರ ಸರಿಯುತ್ತಾನೆ. ಚಕ್ರಪ್ರಾದುರ್ಭಾವಕಾಲವಾದ್ದರಿಂದ ಗ್ರಹಣಕಾಲ ಪುಣ್ಯಕರ. ರಾಹುಮಂಡಲಕ್ಕಿಂತ ಹತ್ತುಸಾವಿರ ಯೋಜನ ಕೆಳಗೆ ಸಿದ್ಧಚಾರಣವಿದ್ಯಾಧರ ಲೋಕಗಳು. ಅವುಗಳಿಗೂ ಕೆಳಗೆ ಯಕ್ಷರಾಕ್ಷಸಭೂತಾದಿಗಳ ವಿಹಾರಪ್ರದೇಶವಾದ ಅಂತರಿಕ್ಷ. ಅಲ್ಲಿಯವರೆಗೆ ಗಾಳಿ ಬೀಸುತ್ತದೆ. ಮೋಡಗಳು ಚಲಿಸುತ್ತವೆ. ಅಲ್ಲಿಂದ ಕೆಳಗೆ ನೂರು ಯೋಜನದಷ್ಟು ಹಕ್ಕಿಗಳು ಹಾರುವ ಪ್ರದೇಶ ಭೂಲೋಕ.

ಭೂಲೋಕದಿಂದ ಕೆಳಗೆ ಏಳು ಪಾತಾಳಲೋಕಗಳಿವೆ. ಅವುಗಳಲ್ಲಿ ಮೊದಲಿಗೆ ಅತಲಲೋಕ. ಇಲ್ಲಿ ಮಯಾಸುರನ ಪುತ್ರ ಬಲ ಅಧಿಪತಿ. ಈತ ತೊಂಬತ್ತಾರು ಬಗೆಯ ಮಾಯೆಗಳನ್ನು ಸೃಷ್ಟಿ ಮಾಡಿದ್ದಾನೆ. ಬಾಯಿಯ ಆಕಳಿಕೆಯಿಂದ ಸ್ವೈರಿಣಿ ಕಾಮಿನಿ ಪುಂಶ್ಚಲಿ ಎಂಬ ಮೂರು ಬಗೆಯ ವೇಶ್ಯಾಸ್ತ್ರೀಯರನ್ನು ಹುಟ್ಟಿಸಿದ್ದಾನೆ. ವಿತಲದಲ್ಲಿ ಹಾಟಕೇಶ್ವರ ಶಿವ ಪಾರ್ವತೀಸಮೇತ ವಿಹರಿಸುತ್ತಾನೆ. ಸುತಲದಲ್ಲಿ ಬಲಿಚಕ್ರವರ್ತಿ. ಅವನ ಅರಮನೆದ್ವಾರದಲ್ಲಿ ಭಗವಂತನಿದ್ದಾನೆ. ತಲಾತಲದಲ್ಲಿ ತ್ರಿಪುರಾಧಿಪತಿಯಾದ ಮಯಾಸುರ. ಮಹಾತಲದಲ್ಲಿ ಕದ್ರುಪುತ್ರರಾದ ಕ್ರೋಧವಶರೆಂಬ ಸರ್ಪಗಳು. ಕುಹಕ ತಕ್ಷಕ ಕಾಲಿಯ ಮುಂತಾದವರು ಇವರಲ್ಲಿ ಪ್ರಧಾನರು. ರಸಾತಲದಲ್ಲಿ ಪಣಿ ನಿವಾತಕವಚ ಕಾಲಕೇಯ ಮುಂತಾದ ರಾಕ್ಷಸರು. ಪಾತಾಳದಲ್ಲಿ ವಾಸುಕಿ ಮುಂತಾದ ಸರ್ಪಗಳು. ಇನ್ನೂ ಕೆಳಗೆ ಮೂವತ್ತು ಸಾವಿರಯೋಜನ ದೂರದಲ್ಲಿ ಶೇಷದೇವ ಭೂಮಿಯನ್ನು ಧರಿಸಿ ನಿಂತಿದ್ದಾನೆ. ಲಯಕಾಲದಲ್ಲಿ ಅವನ ಭ್ರೂಮಧ್ಯದಿಂದ ತ್ರಿಶೂಲಪಾಣಿ ರುದ್ರ ಹೊರಗೆ ಬರುತ್ತಾನೆ. ಈ

ಶೇಷದೇವನ ಮಹಿಮೆಯನ್ನು ಬ್ರಹ್ಮನ ಸಭೆಯಲ್ಲಿ ಬ್ರಹ್ಮಪುತ್ರರಾದ ನಾರದರು ಹಾಡಿ ಹೊಗಳುತ್ತಾರೆ.

* * *

ಪಾತಾಳಲೋಕಕ್ಕೆ ಕೆಳಭಾಗದಲ್ಲಿ ಬ್ರಹ್ಮಾಂಡವನ್ನು ಹೊತ್ತು ನಿಂತ ಶೇಷದೇವನಿದ್ದಾನೆ. ಅವನ ಮಹಿಮೆಯನ್ನು ತುಂಬುರು ಸಮೇತರಾದ ನಾರದರು ಬ್ರಹ್ಮಸಭೆಯಲ್ಲಿ ಶ್ಲೋಕಬದ್ಧವಾಗಿ ಹಾಡುತ್ತಾರೆ.

ತಸ್ಯಾನುಭಾವಮಿಮಂ ಭಗವಾನ್ ಸ್ವಾಯಂಭುವೋ ನಾರದಃ ಸಹ ತುಂಬುರುಣಾ ಸಭಾಯಾಂ ಬ್ರಹ್ಮಣಃ ಸಂಶ್ಲೋಕಯಾಮಾಸ ॥ ೪೦ ॥

ಅನಂತನ ಈ ಮಹಿಮೆಯನ್ನು ಬ್ರಹ್ಮಪುತ್ರರಾದ ಭಗವಾನ್ ನಾರದರು ತುಂಬುರು ವಿನೊಂದಿಗೆ ಬ್ರಹ್ಮನ ಸಭೆಯಲ್ಲಿ ಶ್ಲೋಕಬದ್ಧವಾಗಿ ಹಾಡಿದರು.

ಇಲ್ಲಿ ನಾರದರು ಹಾಡುವ ಶ್ಲೋಕಗಳಲ್ಲಿ ಜಗಜ್ಜನ್ಮಾದಿಕಾರಣತ್ವರೂಪವಾದ ಭಗವಂತನ ಮಹಿಮೆ ಉಕ್ತವಾಗಿದೆ. ಅದು ಹೇಗೆ ಶೇಷದೇವನ ಸ್ತುತಿಯಾಗುತ್ತದೆ? ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಸಮಾಧಾನ ಹೀಗೆ ಹೇಳಬೇಕು. ಹಿಂದೆ ಇಳಾವೃತಖಂಡದಲ್ಲಿ ರುದ್ರದೇವ ಶೇಷನ ಸ್ತುತಿ ಮಾಡಿದ್ದರ ವರ್ಣನೆ ಬಂದಿದೆ. ಆ ಸ್ತುತಿ ಭಗವಂತನ ಸ್ತುತಿಯಾಗಿತ್ತು. ಕೇವಲ ಭಗವಂತನ ಸ್ತುತಿಯಲ್ಲ. ಶೇಷನ ಸ್ತುತಿಯೂ ಆಗಿತ್ತು, ಅವನ ಅಂತರ್ಯಾಮಿಯ ಸ್ತುತಿಯೂ ಆಗಿತ್ತು. ಅಂದರೆ ಮಿಶ್ರಸ್ತುತಿಯಾಗಿತ್ತು. ಮುಖ್ಯವಾಗಿ ಅಂತರ್ಯಾಮಿಯ ಸ್ತುತಿ, ಅಮುಖ್ಯವಾಗಿ ಶೇಷನ ಸ್ತುತಿ. ಹಾಗೇ ಇಲ್ಲಿಯೂ ತಿಳಿಯಬೇಕು. ಭಗವಂತನಿಗೆ ಹೇಳುವ ಜಗಜ್ಜನ್ಮಾದಿಕಾರಣತ್ವಮಹಿಮೆಯನ್ನು ಅಮುಖ್ಯವಾಗಿ ಶೇಷನಲ್ಲಿಯೂ ಕೂಡಿಸಬೇಕು.

ಇಳಾವೃತಸ್ಥಸ್ತುತಿವತ್ ಪಾತಾಳಮೂಲಸ್ಥಸ್ತುತಿರ್ಯೋಜನೀಯಾ ಅನಂತವಿಷಯಾ ॥

ಇಳಾವೃತಖಂಡದಲ್ಲಿರುವ ಶೇಷನ ಸ್ತುತಿಯಂತೆಯೇ ಪಾತಾಳದ ಕೆಳಭಾಗದಲ್ಲಿರುವ ಶೇಷನ ಸ್ತುತಿಯನ್ನೂ ಅಮುಖ್ಯವಾಗಿ ಶೇಷನ ವಿಷಯದಲ್ಲಿಯೂ ಮುಖ್ಯವಾಗಿ ಅವನ ಅಂತರ್ಯಾಮಿಯ ವಿಷಯದಲ್ಲಿಯೂ ಕೂಡಿಸಬೇಕು. ಆದರಿಂದ ವಿರೋಧವಿಲ್ಲ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧೇ ತ್ರಯೋವಿಂಶೋಽಧ್ಯಾಯಃ ॥

ಅಧ್ಯಾಯ-೨೬

ಅಧ್ಯಾಯಸಾರಾಂಶ

ಪಾಪಕರ್ಮಫಲವಾಗಿ ಲಭಿಸುವ ನರಕಗಳು ಸಾವಿರಾರು ಇವೆ. ದಕ್ಷಿಣದಿಕ್ಕಿನಲ್ಲಿ ಭೂಮಿಗಿಂತ ಕೆಳಗೆ ಗರ್ಭೋದಕದ ಮೇಲೆ ಈ ನರಕಗಳಿವೆ. ಅದೇ ದಿಕ್ಕಿನಲ್ಲಿ ಅಗ್ನಿಷ್ವಾತ್ತಾದಿ ಪಿತೃಗಣದವರು ಪರಮಾತ್ಮನ ಧ್ಯಾನ ಮಾಡುತ್ತಾರೆ. ಅಲ್ಲಿಯೇ ಪಿತೃಗಣಗಳಿಗೆ ಅಧಿಪತಿಯಾದ ಯಮದೇವನಿದ್ದಾನೆ. ಅವನು ಪಾಪಿಗಳಿಗೆ ಅವರ ಪಾಪಾನುಸಾರ ಶಿಕ್ಷೆ ನೀಡುತ್ತಾನೆ.

ಪ್ರಧಾನವಾಗಿ ಇಪ್ಪತ್ತೆಂಟು ನರಕಗಳಿವೆ. ಇನ್ನೊಬ್ಬರ ಹಣ ಹೆಂಡತಿಮಕ್ಕಳನ್ನು ಅಪಹರಿಸಿದರೆ ತಾಮಿಸ್ರ ಎಂಬ ನರಕ. ಇನ್ನೊಬ್ಬರನ್ನು ಹತ್ಯೆಮಾಡಿ ಎಲ್ಲವನ್ನೂ ಅಪಹರಿಸಿದರೆ ಅಂಧತಾಮಿಸ್ರ. ಎಲ್ಲ ಪ್ರಾಣಿಗಳಿಗೆ ದ್ರೋಹ ಮಾಡಿದರೆ ರೌರವ. ಎಲ್ಲ ಪ್ರಾಣಿಗಳಿಗೆ ಇನ್ನೂ ಹೆಚ್ಚಿನ ದ್ರೋಹ ಮಾಡಿದರೆ ಮಹಾರೌರವ. ಪಶು ಪಕ್ಷಿಗಳನ್ನು ಬೇಯಿಸಿದರೆ ಕುಂಭೀಪಾಕ. ತಂದೆ ತಾಯಿ ಬ್ರಾಹ್ಮಣರಿಗೆ ದ್ರೋಹ ಮಾಡಿದರೆ ಕಾಲಸೂತ್ರ. ಪಾಷಂಡಿಯಾದರೆ ಅಸಿಪತ್ರವನ. ರಾಜ ನಿರಪರಾಧಿಗೆ ದಂಡ ವಿಧಿಸಿದರೆ ಬ್ರಾಹ್ಮಣನಿಗೆ ದೇಹದಂಡನ ಮಾಡಿದರೆ ಸೂಕರಮುಖ. ಸೊಳ್ಳೆತಗಣೆಗಳಂಥ ಕ್ಷುದ್ರಜಂತು ಹತ್ಯೆಯಿಂದ ಅಂಧಕೂಪ. ಪಂಚಯಜ್ಞ ಮಾಡದೆ ಉಂಡರೆ ಕೃಮಿಭೋಜನ. ಬಂಗಾರ ಕದ್ದರೆ ಸಂದಂಶ. ಅಗಮ್ಯಾಗಮನದಿಂದ ತಪ್ತಸೂರ್ಮಿ. ಕಂಡಕಂಡ ಸ್ತ್ರೀಯರ ಸಂಗದಿಂದ ವಜ್ರಕಂಟಕಶಾಲ್ಮಲಿ. ರಾಜ ಪಾಷಂಡಿಯಾದರೆ ವೈತರಣಿ. ನೀಚಜಾತಿಸ್ತ್ರೀಸಂಗದಿಂದ ಪೂಯೋದ. ಬೇಟೆಯ ನಿಯಮ ಉಲ್ಲಂಘಿಸಿ ಮೃಗಹತ್ಯೆ ಮಾಡಿದರೆ ಪ್ರಾಣರೋಧ. ದಂಭಾಚಾರದ ಯಜ್ಞದಲ್ಲಿ ಪಶುವಧೆಯಿಂದ ವಿಶಸನ. ದ್ವಿಜನು ಸಜಾತಿಯ ಪತ್ನಿಗೆ ಕಾಮಾಂಧತೆಯಿಂದ ರೇತಃಪಾನ ಮಾಡಿಸಿದರೆ ಲಾಲಾಭಕ್ಷ. ರಾಜ ದರೋಡೆ ಮಾಡಿದರೆ ಸಾರಮೇಯಾದನ. ಸುಳ್ಳುಸಾಕ್ಷಿ ಹೇಳಿದರೆ

ಅವೀಚಿಪೂರ. ಬ್ರಾಹ್ಮಣ ಮದ್ಯಪಾನ ಮಾಡಿದರೆ ಅಯಃಪಾನ. ಉತ್ತಮರನ್ನು ಗೌರವಿಸದಿದ್ದರೆ ಕ್ಷಾರಕರ್ದಮ. ಕ್ಷುದ್ರದೇವತೆಗಳಿಗೆ ನರಬಲಿ ಕೊಟ್ಟರೆ ರಕ್ಷೋಗಣಭೋಜನ. ನಿರಪರಾಧಿಗಳನ್ನು ವಂಚಿಸಿ ಶೂಲಕ್ಕೇರಿಸಿದರೆ ಶೂಲಪ್ರೋತ. ಸರ್ಪಗಳಂತೆ ಅತಿಕ್ರೂರನಾದರೆ ದಂದಶೂಕ. ಹಳ್ಳದಲ್ಲಿ ಹಾಕಿ ಉಸಿರುಕಟ್ಟಿಸಿ ಸಾಯಿಸಿದರೆ ಅವಟನಿರೋಧ. ಅತಿಥಿಗಳನ್ನು ಕೋಪದಿಂದ ದಿಟ್ಟಿಸಿದರೆ ಪರ್ಯಾವರ್ತನ. ಎಲ್ಲರನ್ನು ಸಂಶಯದೃಷ್ಟಿಯಿಂದ ಕಂಡು ಬ್ರಹ್ಮರಾಕ್ಷಸನಂತೆ ಹಣವನ್ನು ಭದ್ರವಾಗಿರಿಸಿದರೆ ಸೂಚೀಮುಖ. ಹೀಗೆ ಎಲ್ಲ ಪಾಪಿಗಳಿಗೂ ಒಂದಲ್ಲ ಒಂದು ನರಕ ಕಾದಿರುತ್ತದೆ. ಹಾಗೇ ಪುಣ್ಯವಂತರು ಸ್ವರ್ಗಕ್ಕೆ ಹೋಗುತ್ತಾರೆ. ಸ್ವರ್ಗನರಕಗಳಲ್ಲಿ ಪುಣ್ಯಪಾಪಫಲಗಳನ್ನು ಅನುಭವಿಸಿದ ಬಳಿಕ ಅವುಗಳ ಶೇಷದಿಂದ ತಿರುಗಿ ಜನ್ಮವೆತ್ತಲು ಭೂಮಿಗೇ ಬರುತ್ತಾರೆ.

ಇದು ಬ್ರಹ್ಮಾಂಡ. ಪರಮಾತ್ಮನ ಮಹಾಪ್ರತಿಮೆ. ಅದರ ಚಿಂತನೆಯಲ್ಲಿ ಏಕಾಗ್ರತೆಯನ್ನು ಪಡೆದ ಮನಸ್ಸು ಬಿಂಬಧ್ಯಾನದಲ್ಲಿ ಶಕ್ತವಾಗುತ್ತದೆ. ಇದೇ ಸರಿಯಾದ ಕ್ರಮ.

* * *

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಪಂಚಮಸ್ಕಂಧಃ
ಸಮಾಪ್ತಃ

—o—

|| ಶ್ರೀಗುರುಭ್ಯೋ ನಮಃ ಹರಿಃ ಓಂ ||

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಃ

ಶ್ರೀಮದ್ ಭಾಗವತತಾತ್ಪರ್ಯನಿರ್ಣಯಃ

ಷಷ್ಠಸ್ಕಂಧಃ

ಅಧ್ಯಾಯ–೧

ಅಧ್ಯಾಯಸಾರಾಂಶ

|| ಓಂ ನಮೋ ಭಗವತೇ ವಾಸುದೇವಾಯ ಓಂ ||

ಅಜಾಮಿಳನ ಕಥೆಯಿಂದ ಷಷ್ಠಸ್ಕಂಧ ಪ್ರಾರಂಭವಾಗುತ್ತದೆ. ಮನುಷ್ಯ ಪಾಪ ಮಾಡಿ ತಕ್ಕ ಪ್ರಾಯಶ್ಚಿತ್ತ ಮಾಡಿಕೊಂಡರೂ ತಿರುಗಿ ಪಾಪ ಮಾಡುತ್ತಾನೆ. ಆನೆ ಸ್ನಾನ ಮಾಡಿ ತಿರುಗಿ ಮೈಮೇಲೆ ಮಣ್ಣೆರಚಿ ಕೊಳ್ಳುತ್ತದೆ. ಸ್ನಾನಕ್ಕೆ ಏನು ಬೆಲೆ? ಹೀಗೆಂದ ಮಾತ್ರಕ್ಕೆ ಪ್ರಾಯಶ್ಚಿತ್ತ ವ್ಯರ್ಥವೆನ್ನಲಾಗದು. ಮಾಡಿದ ಪಾಪಕ್ಕೆಲ್ಲ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತ ವಿಹಿತ ಕರ್ಮಾನುಷ್ಠಾನ ಮಾಡುತ್ತಿದ್ದರೆ ನಿಧಾನವಾಗಿಯಾದರೂ ಶ್ರೇಯಸ್ಸು ಲಭಿಸಬಹುದು. ಆದರೆ ಭಕ್ತಿಯಿಂದ ಭಗವಂತನ ನಾಮ ಸಂಕೀರ್ತನೆ ಮಾಡಿದರೆ ಮಾಡಿದ ಪಾಪವೆಲ್ಲ ಪರಿಮಾರ್ಜನವಾಗುವುದು ಮಾತ್ರವಲ್ಲದೆ, ಆತನ ಅಂತಃಕರಣಶುದ್ಧವಾಗಿ ಭಕ್ತಿಯಿಂದ ತುಂಬಿಕೊಳ್ಳುವುದರಿಂದ, ಮುಂದೆ ಆತ ಪಾಪ ಮಾಡುವುದಿಲ್ಲ. ಇದಕ್ಕೆ ಅಜಾಮಿಳನೆ ಉದಾಹರಣೆ.

ಅಜಾಮಿಳ ಮೊದಲಿಗೆ ಒಳ್ಳೆಯ ಸದಾಚಾರಿಬ್ರಾಹ್ಮಣನಾಗಿದ್ದ. ಜಪ ಪೂಜೆ ಕರ್ಮಾನುಷ್ಠಾನ ಮಾಡುತ್ತಿದ್ದ. ಆದರೆ ಒಂದು ದಿನ ಆತ ಫಲಪುಷ್ಪಸಮಿತ್ತುಗಳನ್ನು ತರಲು ಕಾಡಿಗೆ ಹೋಗಿದ್ದಾಗ ಅಲ್ಲಿ ಒಬ್ಬಳು

ವೇಶ್ಯೆ ಸ್ವಚ್ಛಂದವಾಗಿ ಒಬ್ಬ ಪುರುಷನೊಡನೆ ಸೇರಿದ್ದ ದೃಶ್ಯ ಕಣ್ಣಿಗೆ ಬಿದ್ದಿತು. ಅದರಿಂದ ಅವಳ ಮೋಹದ ಬಲೆಯಲ್ಲಿ ಸಿಲುಕಿ ಅಜಾಮಿಳ ಅವಳ ಜೊತೆ ಸೇರಿದ. ಸದಾಚಾರವೆಲ್ಲ ಬದಿಗಿಟ್ಟ. ಮದ್ಯಪಾನ ಮಾಡಿದ. ಪತಿವ್ರತೆಯಾದ ಮಡದಿಯನ್ನು ತೊರೆದ. ಸಂಪತ್ತೆಲ್ಲ ಕರಗಿದಾಗ ಜೂಜು ಕಳ್ಳತನ ಮಾಡಿ ಹಣ ಸಂಪಾದಿಸಿದ. ಹತ್ತು ಮಂದಿ ಮಕ್ಕಳನ್ನು ಹುಟ್ಟಿಸಿದ. ಕೊನೆಯ ಮಗ ನಾರಾಯಣ ಇನ್ನೂ ಆಟವಾಡುತ್ತಿದ್ದಾಗ ಈತನಿಗೆ ಎಂಬತ್ತೆಂಟು ವಯಸ್ಸಾಗಿತ್ತು. ಒಂದು ದಿನ ಅವನ ಅಂತ್ಯಕಾಲ ಬಂದೇ ಬಿಟ್ಟಿತು. ಯಮಭಟರು ಬಂದು ಪಾಶದಿಂದ ಬಿಗಿದು ಸೆಳೆದರು. ಭಯದಿಂದ ಅಜಾಮಿಳ 'ನಾರಾಯಣ' ಎಂದು ಮಗುವನ್ನು ಕೂಗಿ ಕರೆಯಲು ತೊಡಗಿದ. ಆದರೆ 'ನಾರಾಯಣ' ಎಂಬುದು ಭಗವಂತನ ನಾಮ ಎಂದು ದೈವಾತ್ ಪೂರ್ವಸಂಸ್ಕಾರದಿಂದ ಹೊಳೆದು ಹೋಯಿತು. ಭಗವಂತನನ್ನೆ ಭಕ್ತಿಯಿಂದ ನೆನೆದ. ವಿಷ್ಣುದೂತರು ಪ್ರತ್ಯಕ್ಷರಾದರು. ಯಮಭಟರನ್ನು ತಡೆದರು. ಆಗ ಪಾಪಿಯನ್ನು ಎಳೆದೊಯ್ಯುತ್ತಿದ್ದೇವೆ. ನೀವೇಕೆ ತಡೆಯುತ್ತೀರಿ? ಎಂದು ಯಮಭಟರು ಆಕ್ಷೇಪಿಸಿದರು.

* * *

ಅಜಾಮಿಳನನ್ನು ಯಮದೂತರು ಪಾಶದಿಂದ ಬಿಗಿದು ಸೆಳೆದೊಯ್ಯತೊಡಗಿದಾಗ ಆತ 'ನಾರಾಯಣ' ಎಂದ. ಆಗ ವಿಷ್ಣುದೂತರು ಬಂದು ಯಮದೂತರನ್ನು ತಡೆದರು. ನಿಮ್ಮ ಅಭಿಪ್ರಾಯದಲ್ಲಿ ಯಾರು ದಂಡನೆಗೆ ಅರ್ಹರು, ಹೇಳಿರಿ ಎಂದರು. ಆಗ ಯಮದೂತರು ಹೇಳುತ್ತಾರೆ. ಪಾಪಕರ್ಮಿಗಳು ದಂಡನೆಗೆ ಅರ್ಹರು. ಪುಣ್ಯಪಾಪಗಳನ್ನು ವೇದದಿಂದ ತಿಳಿಯಬೇಕು, ವೇದ ಅನಾದಿ ಅಪೌರುಷೇಯ, ಪರಮಪ್ರಮಾಣ' ಎಂದು.

ಯಮದೂತಾ ಊಚುಃ

ವೇದಪ್ರಣಿಹಿತೋ ಧರ್ಮೋ ಹ್ಯಧರ್ಮಸ್ತದ್ವಿಪರ್ಯಯಃ ।
ವೇದೋ ನಾರಾಯಣಃ ಸಾಕ್ಷಾತ್ ಸ್ವಯಂಭೂರಿತಿ ಶುಶ್ರುಮ ॥ ೪೦ ॥

ಯಮದೂತರು ಹೇಳಿದರು—

ವೇದವಿಹಿತವಾದುದು ಧರ್ಮ. ವೇದ ಯಾವುದನ್ನು ನಿಷೇಧ ಮಾಡಿದೆಯೋ ಅದು ಅಧರ್ಮ. ವೇದ ಅಪೌರುಷೇಯ, ಅನಾದಿ. ಕಲ್ಪದ ಆದಿಯಲ್ಲಿ ಅದನ್ನು ಪೂರ್ತಿಯಾಗಿ ಉಪದೇಶ ನೀಡಿದವನು ಅನಾದಿಯಾದ ನಾರಾಯಣನೇ ಎಂದು ನಾವು ಕೇಳಿದ್ದೇವೆ.

ಇಲ್ಲಿ 'ವೇದೋ ನಾರಾಯಣಃ ಸಾಕ್ಷಾತ್ ಸ್ವಯಂಭೂಃ' ಎಂದರೆ ವೇದವು ನಾರಾಯಣನಿಂದ ಉದ್ಭವಿಸಿದೆ. ಅದರಿಂದ 'ಸಾಕ್ಷಾತ್ ನಾರಾಯಣ' ಎಂದು ಔಪಚಾರಿಕವಾಗಿ ಹೇಳಲ್ಪಡುತ್ತದೆ. ವೇದ ಉದ್ಭವಿಸಿದರೂ ಅದು ಅನಿತ್ಯವಲ್ಲ. 'ಸ್ವಯಂಭೂಃ' ಅನ್ಯಪ್ರಮಾಣನಿರಪೇಕ್ಷವಾಗಿ ಭಗವಂತನ ನಿಶ್ವಾಸರೂಪವಾಗಿ ತಾನಾಗಿಯೇ ಪ್ರಾದುರ್ಭವಿಸುತ್ತದೆ. ಇದನ್ನು ಬೃಹದಾರಣ್ಯಕೋಪನಿಷತ್ತು 'ತಸ್ಯ ಹವಾ ಏತಸ್ಯ ಮಹತೋ ಭೂತಸ್ಯ ನಿಶ್ವಸಿತಮೇತತ್ ಯದ್ ಋಗ್ವೇದಃ' ಎಂದು ಮುಂತಾಗಿ ಹೇಳಿದೆ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ಇತಿಹಾಸಪುರಾಣಾದಿಗಳೂ ನಿಶ್ವಾಸರೂಪವಾಗಿ ತಾನಾಗಿಯೇ ಪ್ರಾದುರ್ಭವಿಸುವುದರಿಂದ ಅವೂ ವೇದದಂತೆ ನಿತ್ಯವೆನ್ನಬೇಕಾಗುವುದು. ಅದಕ್ಕೆ ವೀರರಾಘವವ್ಯಾಖ್ಯಾನದಲ್ಲಿ 'ಸ್ವಯಂಭೂಃ' ಎಂದರೆ 'ಸ್ವಯಮಾತ್ಮನೈವ ಅವಿಕೃತರೂಪೇಣೈವ ಅವಿಪ್ಲುತಪೂರ್ವಾನುಪೂರ್ವ್ಯಾ ಪ್ರಾದುರ್ಭವತಿ' ಹಿಂದಿನ ಆನುಪೂರ್ವಿ ವ್ಯತ್ಯಾಸವಿಲ್ಲದಂತೆ ಪ್ರಾದುರ್ಭವಿಸುತ್ತದೆ, ಅದರಿಂದ ವೇದ ಅನಾದಿ. ಇತಿಹಾಸಪುರಾಣಗಳು ಹಾಗಲ್ಲ ಎಂದು ವ್ಯಾಖ್ಯಾನಿಸಿದ್ದಾರೆ. ಹೀಗೆ ಹೇಳಿದರೂ ವೇದ ಅನಾದಿಯಾದ್ದರಿಂದ ಪ್ರಮಾಣವೆಂದಂತಾಯಿತು. 'ನಾರಾಯಣನಿಂದ ಉದ್ಭೂತವಾಗಿದೆ, ಅವನು ಕಾರಣ, ವೇದ ಕಾರ್ಯ, ಕಾರ್ಯಕಾರಣಗಳಿಗೆ ಅಭೇದವೇ ಇರುವುದರಿಂದ ಸಾಕ್ಷಾತ್ ನಾರಾಯಣನೇ ವೇದ' ಎಂದೆಲ್ಲ ಏಕೆ ಹೇಳಬೇಕು? ಅದು ವ್ಯರ್ಥವಲ್ಲವೆ? ಎಂಬ ಪ್ರಶ್ನೆಗೆ ಉತ್ತರವಿಲ್ಲ. ಅನಾದಿಯಾದ ವೇದ ಯಾರಿಂದ ಪ್ರಾದುರ್ಭೂತವಾದರೂ ಪ್ರಮಾಣ ತಾನೆ? ಮತ್ತು ನಿಶ್ವಾಸರೂಪವಾದ ವೇದಕ್ಕೆ ಭಗವಂತ ಉಪಾದಾಕಾರಣವೆನ್ನುತ್ತ ಕಾರ್ಯಕಾರಣಗಳಿಗೆ ಅಭೇದವನ್ನು ಹೇಳುವುದೂ ಕೂಡುವುದಿಲ್ಲ. ಗ್ರಂಥ ನಿಶ್ವಾಸರೂಪವಾಗದು. ಗ್ರಂಥಕ್ಕೆ ಗ್ರಂಥಕರ್ತ ಉಪಾದಾನಕಾರಣನಲ್ಲ. ನಿಮಿತ್ತಕಾರಣನಾಗಿರುತ್ತಾನೆ.ಅದರಿಂದ ಅಭೇದವಿಲ್ಲ. ಔಪಚಾರಿಕವಾಗಿ ಅಭೇದವನ್ನುಹೇಳಬೇಕು. ವೀರರಾಘವವ್ಯಾಖ್ಯಾನದಲ್ಲಿ ಮುಖ್ಯ ಅಭೇದವೇ ಉಕ್ತವಾಗಿದೆ. ಬೇರೆ ವ್ಯಾಖ್ಯಾನಕಾರರ ಪ್ರಕಾರ ಅಭೇದವ್ಯವಹಾರ ಔಪಚಾರಿಕ. 'ಸ ಏವ ಸಾಕ್ಷಾದಿತ್ಯುಪಚಾರಃ' ಎನ್ನುತ್ತಿದೆ ಶ್ರೀಧರವ್ಯಾಖ್ಯಾನ. ಅದರಿಂದ ಭಾಗವತದ 'ವೇದೋ ನಾರಾಯಣಃ ಸಾಕ್ಷಾತ್' ಎಂಬ ಮಾತಿಗೆ ಹೀಗೆ ಅರ್ಥ ಹೇಳಬೇಕು–

ವೇದಾನಾಂ ಪ್ರಥಮೋ ವಕ್ತಾ ಹರಿರೇವ ಯತೋ ವಿಭುಃ ।
ಅತೋ ವಿಷ್ಣ್ವಾತ್ಮಕಾ ವೇದಾ ಇತ್ಯಾಹುರ್ವೇದವಾದಿನಃ ॥

ಇತಿ ಶಬ್ದನಿರ್ಣಯೇ ।

ವೇದವೆಲ್ಲವನ್ನೂ ಮೊದಲಿಗೆ ಉಪದೇಶಿಸುವವನು ಹರಿಯೇ ಆಗಿರುವುದರಿಂದ ವೇದವಾದಿಗಳು ವೇದಗಳನ್ನು ಸಾಕ್ಷಾತ್ ನಾರಾಯಣಸ್ವರೂಪವೆಂದು ವ್ಯವಹರಿಸುತ್ತಾರೆ ಎಂದು ಶಬ್ದನಿರ್ಣಯದಲ್ಲಿ ಹೇಳಿದೆ.

ವೇದಗಳು ನಾರಾಯಣನಿಂದ ಪ್ರಾದುರ್ಭವಿಸಿವೆ ಎಂದರೆ ಅವನಿಂದ ಉಪದಿಷ್ಟವಾಗಿವೆ ವಂದರ್ಥ ಹೊರತು ನಿಶ್ವಾಸರೂಪದಿಂದ ಹುಟ್ಟಿವೆ ಎನ್ನಬಾರದು. ಏಕೆಂದರೆ ಅವು 'ಸ್ವಯಂಭೂ' ಸ್ವಯಂ ತಾನಾಗಿಯೇ ಯಾವುದೇ ಕಾರಣದ ಅಪೇಕ್ಷೆ ಇಲ್ಲದೆಯೇ ಭೂ ಇದೆ ಎಂದರ್ಥ. ಅದರಿಂದ ಅವು ನಿತ್ಯವಾಗಿದ್ದು 'ಸ್ವಯಂ' ಸ್ವತಂತ್ರನಾದ ಪರಮಾತ್ಮನಿಂದ ಆದಿಸೃಷ್ಟಿಯಲ್ಲಿ ಮೋತ್ತಮೊದಲಿಗೆ ಪೂರ್ತಿಯಾಗಿ 'ಭೂ' ವ್ಯಕ್ತವಾಗುತ್ತವೆ. ಅಂದರೆ ಉಪದಿಷ್ಟವಾಗುತ್ತವೆ. ಏಕೆಂದರೆ, 'ಅರರಹಃ ಸಂಧ್ಯಾಮುಪಾಸೀತ' 'ಪ್ರತಿದಿನ ಸಂಧ್ಯಾವಂದನೆ ಮಾಡಬೇಕು' ಎನ್ನುವುದು ಯಾರ ಆಜ್ಞೆ? ಯಾರ ಆಜ್ಞೆಯೂ ಅಲ್ಲದೆ ಹೋದರೆ ಆ ವೇದವಾಕ್ಯ ನಿರರ್ಥಕವಾಗುತ್ತದೆ. ನಾವು ಈ ವೇದವಾಕ್ಯವನ್ನು ಉಚ್ಚರಿಸುತ್ತಿದ್ದರೂ ಇದು ನಮ್ಮ ಆಜ್ಞೆಯಲ್ಲ. ಅದರಿಂದ ನಾರಾಯಣನ ಆಜ್ಞೆ ಎನ್ನಬೇಕು. ಅವನೇ ವೇದದ ಎಲ್ಲ ವಿಧಿನಿಷೇಧಗಳನ್ನು ಮಾಡುವ ಪ್ರಭು. ಅದರಿಂದ ನಿತ್ಯವಾದ ವೇದವನ್ನು ಉಪದೇಶಿಸಿ ಆ ಮೂಲಕ ವಿಧಿನಿಷೇಧಗಳನ್ನು ಮಾಡುವವನು ನಾರಾಯಣ. ಹೀಗಾಗಿ ವೇದವೆಲ್ಲವೂ ಸಾಕ್ಷಾತ್ ನಾರಾಯಣನೆ ಎಂದು ವೇದವಾದಿಗಳು ವ್ಯವಹರಿಸುವುದರಿಂದ ಇದು ಮುಖ್ಯ ಪ್ರಯೋಗವೆ. ಔಪಚಾರಿಕವಲ್ಲ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ
ಪ್ರಥಮೋಽಧ್ಯಾಯಃ ॥

—o—

ಅಧ್ಯಾಯ–೨

ಅಧ್ಯಾಯಸಾರಾಂಶ

'ಈತ ಪಾಪ ಮಾಡಿರಬಹುದು, ಧರ್ಮಶಾಸ್ತ್ರಗಳಲ್ಲಿ ಹೇಳಿದ ಕೃಚ್ಛ್ರಚಾಂದ್ರಾಯಣಾದಿ ಪ್ರಾಯಶ್ಚಿತ್ತವನ್ನೂ ಮಾಡಿಕೊಳ್ಳದಿರಬಹುದು. ಆದರೂ ಭಕ್ತಿಯಿಂದ ನಾರಾಯಣನಾಮ ಉಚ್ಚರಿಸಿದ್ದಾನೆ ಎಂದ ಮೇಲೆ ಎಲ್ಲ ಪಾಪ ಪರಿಹಾರವಾಗಿದೆ. ಇವನನ್ನು ಮುಟ್ಟುವ ಅಧಿಕಾರ ನಿಮಗಿಲ್ಲ. ನಿಮಗೆ ಈ ಬಗ್ಗೆ ಸಂಶಯವಿದ್ದರೆ ನಿಮ್ಮ ಒಡೆಯನನ್ನೇ ಹೋಗಿ ಕೇಳಿರಿ' ಎಂದು ವಿಷ್ಣುದೂತರು ಹೇಳಿದರು. ಯಮದೂತರು ಅಜಾಮಿಳನನ್ನು ಬಿಟ್ಟು ಹೊರಟು ಹೋದರು. ವಿಷ್ಣುದೂತರೂ ಅದೃಶ್ಯರಾದರು. ಇದೇನು ಸ್ವಪ್ನವೆ ಎಚ್ಚರವೆ ಎಂದು ಬೆರಗಾದ ಅಜಾಮಿಳ. ಹರಿನಾಮೋಚ್ಚಾರಣೆಯ ಪ್ರಭಾವವನ್ನು ಮನಗಂಡು ತಾನು ಹಿಂದೆ ಮಾಡಿದ ಘೋರ ಪಾಪಗಳಿಗೆ ತುಂಬ ಪಶ್ಚಾತ್ತಾಪ ಪಟ್ಟು ವಿರಕ್ತನಾಗಿ ಹರಿದ್ವಾರಕ್ಕೆ ನಡೆದ. ಅಲ್ಲಿ ತ್ರಿವಿಕ್ರಮದೇವಾಲಯದಲ್ಲಿ ಯೋಗಾಭ್ಯಾಸ ಮಾಡಿದ. ಒಂದು ದಿನ ಅವನಿಗಾಗಿ ಒಂದು ದಿವ್ಯವಿಮಾನ ಬಂದಿತು. ಅದೇ ವಿಷ್ಣುದೂತರು ತಿರುಗಿ ಕಾಣಿಸಿಕೊಂಡರು. ಅಜಾಮಿಳ ಗಂಗೆಯಲ್ಲಿ ಮಿಂದು ಶರೀರತ್ಯಾಗ ಮಾಡಿ ಅವರೊಂದಿಗೆ ದಿವ್ಯವಿಮಾನವೇರಿ ವಿಷ್ಣುಲೋಕಕ್ಕೆ ತೆರಳಿದ.

* * *

ವಿಷ್ಣುದೂತರು ಯಮದೂತರನ್ನು ತಡೆದು 'ಅಜಾಮಿಳನನ್ನು ಬಿಟ್ಟು ಬಿಡಿ. ಆತ ನಾರಾಯಣನಾಮೋಚ್ಚಾರಣ ಮಾಡಿದ್ದಾನೆ. ಯಾವುದೇ ನೆಪದಿಂದಾಗಲಿ ಭಕ್ತಿಯಿಂದ ಹರಿನಾಮ ಉಚ್ಚರಿಸಿದರೆ ಸಕಲಪಾಪ ಪರಿಹಾರವಾಗುತ್ತದೆ.' ಎನ್ನುತ್ತಾರೆ.

ಸಾಂಕೇತ್ಯಂ ಪಾರಿಹಾಸ್ಯಂ ವಾ ಸ್ತೋಭಂ ಹೇಳನಮೇವ ವಾ ।
ವೈಕುಂಠನಾಮಗ್ರಹಣಮಶೇಷಾಘಹರಂ ವಿದುಃ ॥ ೧೪ ॥

ಇನ್ನೊಬ್ಬರಿಗೆ ಆ ಹೆಸರಿದ್ದುದರಿಂದಾಗಲಿ, ಇನ್ನೊಬ್ಬರನ್ನು ಹಾಸ್ಯ ಮಾಡುವುದಕ್ಕಾಗಲಿ, ಇನ್ನೊಬ್ಬರಿಗೆ ಕೋಪ ಬರಿಸುವುದಕ್ಕಾಗಲಿ, ಇನ್ನೊಬ್ಬರನ್ನು ಅಣಕಿಸುವುದಕ್ಕಾಗಲಿ,

ಯಾವುದೇ ಕಾರಣದಿಂದ ಹರಿನಾಮವನ್ನು ಉಚ್ಚರಿಸಿದರೂ, ಅದರಿಂದ ಭಕ್ತರಿಗೆ ಹರಿಸ್ಮರಣೆ ಬರುವುದರಿಂದ, ಅವರ ಹರಿಭಕ್ತಿ ವ್ಯಕ್ತವಾಗುವುದರಿಂದ ಅದು ಸಕಲ ಪಾಪಪರಿಹಾರಕವಾಗುವುದು. ಮೋಕ್ಷಾದಿ ಸಮಸ್ತ ಫಲದಾಯಕವೂ ಆಗುವುದು.

ಇಲ್ಲಿ ಸಾಂಕೇತ್ಯವೆಂದರೆ ಇನ್ನೊಬ್ಬರಿಗೆ ಭಗವಂತನ ಹೆಸರಿಟ್ಟಿರುವುದು. ಪ್ರಕೃತದಲ್ಲಿ ಅಜಾಮಿಳ ಮಗನಿಗೆ 'ನಾರಾಯಣ' ಎಂದು ಭಗವಂತನ ಹೆಸರಿಟ್ಟಿದ್ದಾನೆ. 'ಪಾರಿಹಾಸ್ಯ' ಎಂದರೆ ಕೃಷ್ಣ! ನಿನ್ನ ಸಭ್ಯವರ್ತನೆಯನ್ನು ರಾಸೋತ್ಸವದಲ್ಲಿ ಕಂಡಿದ್ದೇವೆ' ಎನ್ನುವುದು. ಸ್ತೋಭವೆಂದರೆ ಹಾಡಿನಲ್ಲಿ ಸೌಕರ್ಯಕ್ಕಾಗಿ ನಡುವೆ ಹರಿನಾಮಗಳನ್ನು ಸೇರಿಸಿಕೊಳ್ಳುವುದು. ಹೇಲನವೆಂದರೆ, ಬ್ರಹ್ಮಾಂಡಧಾರಕನಾದ ಕೃಷ್ಣನಿಗೆ ಗೋವರ್ಧನಗಿರಿಯನ್ನೆತ್ತುವಾಗ ಏನು ಶ್ರಮವಾಗಿರಬಹುದು? ಆದರೂ ನನ್ನನ್ನು ಆತ ಉದ್ಧಾರಮಾಡುತ್ತಿಲ್ಲ ನನ್ನ ಹಣೆಬರಹ ಹೀಗಿರುವಾಗ ಕೃಷ್ಣನಾದರೂ ಏನು ಮಾಡುತ್ತಾನೆ. ಪಾಪ! ಎನ್ನುವುದು ಅಥವಾ 'ಹೇಲಾ' ಎಂದರೆ 'ಅನಾಯಾಸವಾಗಿ ಬೆಟ್ಟವನ್ನೆತ್ತಿದ್ದಾನೆ, 'ಹೇಲಯಾ ಗಿರಿರುದ್ಧೃತಃ' ಎಂಬಂತೆ ಅನಾಯಾಸವಾಗಿ ಅಬುದ್ಧಿಪೂರ್ವಕವಾಗಿ ಅಕಸ್ಮಾತ್ ಹರಿನಾಮೋಚ್ಚಾರಣೆ ಮಾಡುವುದು ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ.

ಆದರೆ ಎಲ್ಲರೂ ಒಕ್ಕೊರಲಿನಿಂದ 'ಹರಿಯನ್ನು ನಿಂದಿಸಬಾರದು ಪ್ರೀತಿಯಿಂದಲೇ ನಾಮವನ್ನು ಉಚ್ಚರಿಸಬೇಕು' ಎನ್ನುತ್ತಾರೆ.

'ಪರಿಹಾಸ ಹೇಲನಗಳಲ್ಲಿ ನಿಂದಾಸ್ತುತಿ ಮಾಡುವುದು ಶಕ್ಯವಿದೆ. ಸಾಂಕೇತ್ಯದಲ್ಲಿ ಅಥವಾ ಅಕಸ್ಮಾತ್ ಹರಿನಾಮೋಚ್ಚಾರಣೆಯಲ್ಲಿ ಪ್ರೀತಿ ಕಂಡು ಬರಲಾರದು. ಅಜಾಮಿಳ ಕೂಗಿ ಕರೆದುದು ಮಗನನ್ನು, ಭಗವಂತನನ್ನಲ್ಲ. ಅವನು ಭಗವಂತನಲ್ಲಿ ಪ್ರೀತಿಯಿಂದ ನಾಮೋಚ್ಚಾರಣೆ ಮಾಡಿಲ್ಲ.' ಎಂಬ ಆಕ್ಷೇಪ ಬಂದರೆ ಮುಂದಿನ ಶ್ಲೋಕದಲ್ಲಿ 'ಪತಿತಃ ಸ್ಖಲಿತೋ ಭಗ್ನಃ' ಎಂದು ಮುಂತಾಗಿ ಸಮಾಧಾನವಿದೆ. ಬಿದ್ದಾಗ ಎಡವಿದಾಗ ಅಥವಾ ಇನ್ನಾವುದೇ ಸಂದರ್ಭದಲ್ಲಿ ಇಚ್ಛೆ ಪ್ರಯತ್ನಗಳಿಲ್ಲದೆ 'ಹರಿ' ಎಂದು ಉಚ್ಚರಿಸಿದರೆ ಸಾಕು, ಯಮಯಾತನೆ ಬಾರದು ಎಂದು ಆ ಶ್ಲೋಕದಲ್ಲಿ ಹೇಳಿದೆ ಎನ್ನುತ್ತಾರೆ.

ಇದು ಸರಿಯಲ್ಲ. ಹರಿನಾಮೋಚ್ಚಾರಣೆಯಲ್ಲಿ ಹರಿನಿಂದೆ ಇರುವುದು ಹೇಗೆ ದೋಷವೋ ಹಾಗೇ ಹರಿಭಕ್ತಿ ಇಲ್ಲದಿರುವುದೂ ದೋಷವೆ. ಭಕ್ತಿರಹಿತವಾದ ನಾಮೋಚ್ಚಾರಣೆಯನ್ನು 'ಪತಿತಃ ಸ್ಖಲಿತಃ' ಎಂಬ ಶ್ಲೋಕವು ಪ್ರಶಂಸಿಸುತ್ತಿಲ್ಲ. ಭಕ್ತಿಪೂರ್ವಕ ನಾಮೋಚ್ಚಾರಣೆಯಲ್ಲಿ ಆಸನಾದಿನಿಯಮವಿಲ್ಲ, ಧ್ಯಾನಕ್ಕೆ ಮಾತ್ರ ಆ ನಿಯಮ ಎನ್ನುತ್ತಿದೆ. ಅದರಿಂದ 'ಅಕಸ್ಮಾತ್' ಹರಿನಾಮೋಚ್ಚಾರಣೆಯಾಗಿ ಬಿಟ್ಟ ಮಾತ್ರಕ್ಕೆ ಏನೂ ಫಲವಿಲ್ಲ. ಆ ಸಮಯದಲ್ಲಿ ಹರಿಸ್ಮರಣೆ ಬಂದರೆ, ಭಕ್ತಿ ಉದಿಸಿದರೆ,

ಆಗ ಆ ನಾಮೋಚ್ಚಾರಣೆಗೆ ಫಲ. ಮತ್ತು ಪ್ರಕೃತದಲ್ಲಿ ಯಮದೂತರು ಕೇಳುತ್ತಿದ್ದಾರೆ ಮಗನನ್ನು ಕರೆದ ಮಾತ್ರಕ್ಕೆ ಪಾಪ ಪರಿಹಾರ ಹೇಗೆ ಎಂದು. ಅದಕ್ಕೆ ಉದಾಹರಣೆಯಾಗಿ ನಿಂದಾಸ್ತುತಿಗರ್ಭಿತವಾದ ಹರಿನಾಮೋಚ್ಚಾರಣೆಯನ್ನು ತೋರಿಸುವುದು ಅಸಂಗತವಾಗುತ್ತದೆ. ಅನ್ಯರ ನಿಂದೆಯಲ್ಲಿ ಹರಿನಾಮೋಚ್ಚಾರಣ ಮಾಡಿದರೂ ಪಾಪಪರಿಹಾರವಾಗುವುದೆಂದು ದೃಷ್ಟಾಂತ ನೀಡಬೇಕು. ಅದರಿಂದ ಪರಿಹಾಸ ಹೇಲನಗಳೆಂದರೆ ಇಲ್ಲಿ ಹರಿಯಬಗ್ಗೆ ಪರಿಹಾಸನಿಂದೆಗಳಲ್ಲ, ಅನ್ಯರ ಬಗ್ಗೆ ಪರಿಹಾಸ ನಿಂದೆಗಳೆಂದು ಭಾಗವತಕ್ಕೆ ಅಭಿಪ್ರಾಯ ಹೇಳಬೇಕು.

ನಾರಾಯಣೋಽಯಮಿತ್ಯನ್ಯ ಹೇಲನವಿಷಯತ್ವೇನೋಕ್ತಮಘಹರಮ್ ।

ಸರ್ವಥಾಽಘಹರಂ ವಿಷ್ಣೋರ್ನಾಮ ತದ್ಭಕ್ತಿಪೂರ್ವಕಮ್ ।
ಅಭಕ್ತ್ಯೋದಾಹೃತಂ ನೈವ ಫಲದಾತೃ ಭವಿಷ್ಯತಿ ॥

ನಾಮಸ್ವಾಮಿತಯಾ ತಸ್ಯ ಸ್ಮರಣಂ ಜಾಯತೇ ಯತಃ ।
ಭಕ್ತಸ್ಯಾತೋ ನಾಮಕೀರ್ತಿಃ ಸಂಕೇತಾದಾವುದೀರಿತಾ ॥

'ಎಲ್ಲ ದೋಷಗಳಿಂದ ತುಂಬಿರುವ ಈತನೇನು ನಾರಾಯಣನೆ?' ಎಂದು ಅನ್ಯರ ನಿಂದೆಯ ವಿಷಯದಲ್ಲಿ ಹರಿನಾಮವನ್ನು ಹೇಳಿದರೂ ಅದು ಪಾಪಪರಿಹಾರಕ ವಾದೀತು ಎಂದು ಶ್ಲೋಕದ ಅಭಿಪ್ರಾಯ,

ಏಕೆಂದರೆ 'ಹರಿನಾಮ ಸರ್ವಥಾ ಹರಿಭಕ್ತಿಪೂರ್ವಕವಾಗಿ ಉಚ್ಚರಿಸಿದರೆ ಮಾತ್ರ ಪಾಪಪರಿಹಾರಕವಾಗುತ್ತದೆ ಹೊರತು ಭಕ್ತಿ ಇಲ್ಲದೆ ಉಚ್ಚರಿಸಿದರೆ ಅದು ಫಲಪ್ರದವಾಗುವುದಿಲ್ಲ. ಸಂಕೇತ ಪರಿಹಾಸ ಮುಂತಾದವುಗಳಲ್ಲಿಯೂ ಹರಿನಾಮೋಚ್ಚಾರಣೆ ಮಾಡಿದಾಗ ಸ್ವಾಭಾವಿಕ ಭಕ್ತನಿಗೆ ಆ ನಾಮ ಭಗವಂತನಿಗೇ ಮುಖ್ಯವಾಗಿ ಸಲ್ಲುವಂಥಹುದೆಂದು ಭಕ್ತಿಪೂರ್ವಕ ಭಗವಂತನ ಸ್ಮರಣೆ ಉಂಟಾಗುತ್ತದೆ. ಅದರಿಂದ ಸಂಕೇತಾದಿಗಳಲ್ಲಿಯೂ ಹರಿನಾಮೋಚ್ಚಾರಣೆ ಪಾಪಪರಿಹಾರಕ ವೆನಿಸುತ್ತದೆ.' ಎಂದು ನಾರದಪುರಾಣದಲ್ಲಿ ಉಕ್ತವಾಗಿದೆ.

* * *

ಹರಿನಾಮೋಚ್ಚಾರಣೆಯ ಮಹಿಮೆಯನ್ನು ಶುಕ ಮುನಿ ಪರೀಕ್ಷಿದ್ರಾಜನಿಗೆ ಹೇಳುತ್ತಾರೆ.

ಮ್ರಿಯಮಾಣೋ ಹರೇರ್ನಾಮ ಗೃಣನ್ ಪುತ್ರೋಪಚಾರಿತಮ್ ।
ಅಜಾಮಿಳೋಽಪ್ಯಗಾನ್ಮುಕ್ತಿಂ ಕಿಮುತ ಶ್ರದ್ಧಯಾ ಗೃಣನ್ ॥ ೪೨ ॥

ಅಜಾಮಿಳ ಜೀವನವಿಡೀ ಪಾಪಕರ್ಮ ಮಾಡಿ ಸಾಯುವ ಸಮಯದಲ್ಲಿ ಮಗನನ್ನು ಕೂಗಿ ಕರೆವ ನೆಪದಿಂದಲಾದರೂ ಭಕ್ತಿಯಿಂದ ಹರಿನಾಮ ಉಚ್ಚರಿಸಿ ಮುಕ್ತಿ ಪಡೆದ. ಇನ್ನು ಈ ಇತಿಹಾಸವನ್ನು ಕೇಳಿ ಸದಾ ಶ್ರದ್ಧೆಯಿಂದ ಹರಿನಾಮಸಂಕೀರ್ತನ ಮಾಡುವವನ ವಿಷಯದಲ್ಲಿ ಹೇಳತಕ್ಕದೇನಿದೆ?

[೧]ಇಲ್ಲಿ 'ಅಜಾಮಿಳೋಽಪ್ಯಗಾನ್ ಮುಕ್ತಿಂ' ಎಂದು ಅಪಿಶಬ್ದದಿಂದ ನಾಲ್ಕುರೀತಿಯ ಕೈಮುತ್ಯನ್ಯಾಯ ಉಕ್ತವಾಗಿದೆ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ–

ಮರಣಸಂಕಟದ ಅವಸ್ಥೆಯಲ್ಲಿ ಶ್ರದ್ಧೆ ಇಲ್ಲದೆಯೇ ನಾಮೋಚ್ಚಾರಣ ಮಾಡಿದರೂ ಮುಕ್ತಿ ಲಭಿಸಿತು, ಶ್ರದ್ಧೆಯಿಂದ ಉಚ್ಚರಿಸಿದರೆ ಏನು ಹೇಳಬೇಕು? ಸಾಯುವಾಗ ಹೇಳಿದರೂ ಮುಕ್ತಿ ಫಲ, ಬದುಕಿರುವಾಗ ಹೇಳಿದರೆ ಇನ್ನೇನು? ಮಗನನ್ನ ಕರೆದ ಮಾತ್ರಕ್ಕೇ ಮುಕ್ತಿಯಾಯಿತೆಂದರೆ ಸಾಕ್ಷಾತ್ ಭಗವಂತನನ್ನೇ ಕರೆದರೆ ಇನ್ನೇನು? ಮಹಾಪಾಪಿ ಅಜಾಮಿಳನಿಗೂ ಮುಕ್ತಿಯಾಯಿತೆಂದರೆ ಪಾಪ ಮಾಡದವರಿಗಿನ್ನೇನು? ಎಂದು ನಾಲ್ಕು ಬಗೆಯಿಂದ 'ಅಪಿ'ಶಬ್ದಕ್ಕೆ ವಿವರಣೆ ಶಕ್ಯವಿದೆ ಎಂದು ವಿಶ್ವನಾಥವ್ಯಾಖ್ಯಾನ ಹೇಳಿದೆ. ಆದರೆ, ಭಕ್ತಿ-ಶ್ರದ್ಧೆಗಳಿಲ್ಲದೆಯೆ ನಾಮೋಚ್ಚಾರಣೆ ಮಾಡಿದರೂ ಮುಕ್ತಿ ಸಿಗುವುದಾದರೆ ಭಕ್ತಿಶ್ರದ್ಧೆಗಳೇಕೆ?

ಮುಂದೆ ಭಾಗವತದಲ್ಲಿ–

ಏತಾವತಾಲಮಘನಿರ್ಹರಣಾಯ ಪುಂಸಾಂ'(೬-೩-೨೪)

ಎಂಬ ಶ್ಲೋಕದಲ್ಲಿ ಶ್ರೀಧರವ್ಯಾಖ್ಯಾನ ಹೀಗೆ ಹೇಳುತ್ತದೆ–

[೨]'ಭಗವಂತನ ಗುಣಕರ್ಮನಾಮ ಸಂಕೀರ್ತನವನ್ನು ಕೇವಲ ಪಾಪಕ್ಷಯಕ್ಕಾಗಿ ಮಾಡುವುದು ಉಚಿತವಲ್ಲ. ಏಕೆಂದರೆ ಭಕ್ತಿಯಿಲ್ಲದೆಯೆ ಮಹಾಪಾಪಿಯಾದ ಅಜಾಮಿಳ ಹರಿನಾಮವನ್ನು ಉಚ್ಚರಿಸಿ ಮುಕ್ತಿಯನ್ನೇ ಪಡೆದಿದ್ದಾನೆ. ಹಾಗಾದರೆ ಶ್ರದ್ಧೆ

೧. ಮ್ರಿಯಮಾಣತ್ವಾದೇವ ಅಶ್ರದ್ಧಯಾಪಿ ಗೃಹ್ಣನ್, ಕಿಂ ಪುನಃ ಶ್ರದ್ಧಯೇತಿ । ಮ್ರಿಯಮಾಣೋಽಪಿ, ಕಿಂ ಪುನರ್ಜೀವನ್ನಿತಿ । ಪುತ್ರೋಪಚಾರಿತಮಪಿ, ಕಿಂ ಪುನಃ ಸಾಕ್ಷಾದೇವ । ಅಜಾಮಿಲೋ ಮಹಾಪಾತಕ್ಯಪಿ, ಕಿಂಪುನರ್ನಿಷ್ಪಾಪ ಇತಿ, ಅವಧಾರಣಚತುಷ್ಟಯಮ್ । –ವಿಶ್ವನಾಥಃ

೨. ಭಗವತೋ ಗುಣಾನಾಂ ಕರ್ಮಣಾಂ ಚ ನಾಮ್ನಾಂ ಚ ಸಮ್ಯಕ್ ಕೀರ್ತನಮಿತಿ ಯದೇತಾವತಾ ಪುಂಸಾಮಘನಿರ್ಹರಣಾಯ ಪಾಪಕ್ಷಯಮಾತ್ರಾಯಾಲ ಮುಪಯೋಗೋ ನಾಸ್ತಿ । ಅಲಂಶಬ್ದೋಽತ್ರ ವಾರಣೇ । ಯಥಾಹಾಮರಸಿಂಹಃ ಅಲಂ ಭೂಷಣ ಪರ್ಯಾಪ್ತಿ ಶಕ್ತಿವಾರಣವಾಚಕಂ ಇತಿ । ಉಪಯೋಗಾಭಾವ ಮೇವಾಹ ಅಜಾಮಿಲೋ ಮಹಾಪಾತಕ್ಯಪಿ ನಾರಾಯಣೇತಿ ವಿಕ್ರುಶ್ಯ ನತು ಸಮ್ಯಕ್ ಕೀರ್ತಯಿತ್ವಾ, ತಚ್ಚ ಪುತ್ರಂ ವಿಕ್ರುಶ್ಯ ನ ತು ಹರಿಂ ಅಘವಾನಶುಚಿರಪಿ

ಭಕ್ತಿಗಳಿಂದ ಪುನಃಪುನಃ ಶ್ರವಣ ಕೀರ್ತನ ಧ್ಯಾನಗಳನ್ನು ಮಾಡಬೇಕೆಂದು ಭಾಗವತದಲ್ಲಿ ಮತ್ತು ಬೇರೆ ಪುರಾಣಗಳಲ್ಲಿ ಹೇಳಿದ್ದೇಕೆ? ಭಕ್ತಿಶ್ರದ್ಧೆಗಳಿಲ್ಲದವರಿಗೂ ಮುಕ್ತಿ ಸಿಗುವುದಾದರೆ ಭಕ್ತಿಶ್ರದ್ಧೆ ಇರುವವನಿಗಿಂತಲೂ ಇಲ್ಲದವನೇ ಜಾಣನಲ್ಲವೆ? ಎಂದರೆ, ಭಕ್ತಿಶ್ರದ್ಧೆಗಳು ಬೇಕೆನ್ನುವುದು ಪಾಪವೆಲ್ಲವನ್ನೂ ಸಮೂಲವಾಗಿ ನಾಶ ಪಡಿಸುವ ಉದ್ದೇಶದಿಂದ. ಇದು ಹಿಂದೆ,

ಹರೇರ್ಗುಣಾನುವಾದಃ ಖಲು ಸತ್ವಭಾವನಃ' (೬.೨.೧೨)

ಎಂಬಲ್ಲಿ ಭಾಗವತದಲ್ಲಿಯೇ ಉಕ್ತವಾಗಿದೆ,' ಎಂದು.

ಆದರೆ ಭಕ್ತಿಶ್ರದ್ಧೆ ಇಲ್ಲದೆ ಕೇವಲ ನಾಮೋಚ್ಚಾರಣೆಯಿಂದ ಮುಕಿಯ್ತೇ ಸಿಗುತ್ತಿರುವಾಗ ಮತ್ತೆ ಪಾಪಗಳನ್ನು ಸಮೂಲವಾಗಿ ನಾಶಪಡಿಸುವುದೇಕೆ? ಎನ್ನುವ ಪ್ರಶ್ನೆಗೆ ಉತ್ತರವಿಲ್ಲ. ಮತ್ತು ಅಜಾಮಿಳ ಭಕ್ತಿ ಇಲ್ಲದೆ ನಾಮೋಚ್ಚಾರಣೆ ಮಾಡಿದೊಡನೆ ಮುಕ್ತಿಯಾಯಿತೆಂದೂ ಭಾಗವತ ಹೇಳುತ್ತಿಲ್ಲ. ಅವನು ಮರಣದಿಂದ ಮುಕ್ತನಾಗಿ ಪಶ್ಚಾತ್ತಾಪಗೊಂಡು ಹರಿದ್ವಾರಕ್ಷೇತ್ರದಲ್ಲಿ ಭಕ್ತಿಶ್ರದ್ಧೆಗಳಿಂದ ಯೋಗಸಮಾಧಿಯನ್ನು ಪಡೆದೇ ಮುಕ್ತಿ ಹೊಂದಿದನೆಂದು ತಾನೆ ಕಥೆಯಲ್ಲಿರುವುದು?

ಹಾಗಾದರೆ ಭಾಗವತಶ್ಲೋಕಕ್ಕೆ ಏನರ್ಥ? 'ಕಿಮುತ ಶ್ರದ್ಧಯಾ ಗೃಣನ್?' ಎಂದರೇನು? ಎಂದರೆ, ಹಿಂದೆ ಎಲ್ಲ ಪಾಪಕರ್ಮವನ್ನೇ ಮಾಡಿದ್ದರೂ ಕೊನೆಗೆ ಶ್ರದ್ಧೆಯಿಂದ ಹರಿನಾಮೋಚ್ಚಾರಣೆ ಮಾಡಿ ಅಜಾಮಿಳ ಮುಕ್ತಿಸಾಧನೆ ಮಾಡಿಕೊಂಡ. ಸದಾ ಪರಿಶುದ್ಧನಾಗಿದ್ದು ಶ್ರದ್ಧೆಯಿಂದ ನಾಮೋಚ್ಚಾರಣೆ ಮಡುವವನು ಮುಕ್ತಿಸಾಧನೆ ಮಾಡಿಕೊಳ್ಳುವನೆಂದು ಬೇರೇನು ಹೇಳಬೇಕು ಎಂದರ್ಥ. ಹೀಗೆ ಹೇಳಿದರೆ ಈ ನಾರದಪುರಾಣವಚನಕ್ಕೆ ಬೆಲೆ ಕೊಟ್ಟಂತಾಗುತ್ತದೆ–

ಅಜಾಮಿಳೋಽಪಿ ಸ್ಮರಣಾದ್ ಭಕ್ತ್ಯಾ ಮೃತ್ಯೋರಮುಚ್ಯತ ।
ಇತಿ ನಾರದೀಯೇ ।

ಅಜಾಮಿಳ ಹಿಂದೆ ಪಾಪಮಾಡಿದ್ದರೂ ಅಂತ್ಯಕಾಲದಲ್ಲಿ ಹರಿಸ್ಮರಣೆ ಮಾಡುತ್ತ ಭಕ್ತಿಯಿಂದ ನಾಮೋಚ್ಚಾರಣ ಮಾಡಿಯೇ ಮರಣದಿಂದ ಬಿಡುಗಡೆ ಹೊಂದಿದ ಮತ್ತು ಕ್ರಮೇಣ ಮುಕ್ತಿ ಸಂಪಾದಿಸಿದ ಎಂದು ನಾರದಪುರಾಣದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ ದ್ವಿತೀಯೋಽಧ್ಯಾಯಃ ॥

ಮ್ರಿಯಮಾಣೋಽಸ್ವಸ್ಥಚಿತ್ತೋಽಪಿ ಮುಕ್ತಿಮವಾಪ । ನ ತ್ವಘನಿರ್ಹರಣ ಮಾತ್ರಮತೋ ನಾಮಾಭಾಸೇನಾಪಿ ಸರ್ವಪಾಪಕ್ಷಯ ಇತ್ಯೇವ ತತ್ವಂ । ಆವೃತ್ತಿ ಶ್ರದ್ಧಾದಿ ವಿಧಯಸ್ತು ಪಾಪವಾಸನಾಕ್ಷಯಾರ್ಥಾ ಇತ್ಯುಕ್ತಮೇವ ಹರೇರ್ಗುಣಾನು ವಾದಃ ಖಲು ಸತ್ವಭಾವನ ಇತ್ಯತ್ರ । – ಶ್ರೀಧರಃ

ಅಧ್ಯಾಯ-೩

ಅಧ್ಯಾಯಸಾರಾಂಶ

'ಲೋಕಕ್ಕೆಲ್ಲ ಪುಣ್ಯಪಾಪಗಳಿಗೆ ಶಾಸನ ಮಾಡುವವನು ಒಬ್ಬನೇ ಇರಬೇಕು. ಎಲ್ಲರೂ ಶಾಸನ ಮಾಡಲು ಹೊರಟರೆ ಅವ್ಯವಸ್ಥೆಯಾಗುವುದು. ಈಗ ಭೂಲೋಕದಲ್ಲಿ ಪಾಪಿ ಅಜಾಮಿಳನನ್ನು ನಾವು ಸೆಳೆದು ತರುವಾಗ ಯಾರೋ ನಾಲ್ವರು ಸಿದ್ಧಪುರುಷರು ಬಂದು ಅವನನ್ನು ಬಿಡಿಸಿಕೊಂಡರು' ಎಂದು ಯಮಭಟರು ದೂರಿತ್ತಾಗ ಯಮನೆಂದ, 'ದೂತರೆ, ಎಲ್ಲರಿಗೂ ಶಾಸನ ಮಾಡುವವನು ಸ್ವತಂತ್ರನಾದ ಹರಿಯೊಬ್ಬನೆ. ಅವನ ಶಾಸನಕ್ಕೊಳಪಟ್ಟು ಬ್ರಹ್ಮಾದಿದೇವತೆಗಳೆಲ್ಲರೂ ನಾವು ಮೂಗುದಾರ ಹಾಕಲ್ಪಟ್ಟ ಗೂಳಿಯಂತೆ ನಡೆದುಕೊಳ್ಳುತ್ತೇವೆ. ಅವನ ಆಜ್ಞಾರೂಪವಾದ ವೇದದ ವಿಧಿನಿಷೇಧಗಳಿಗೆ ನಾವೆಲ್ಲರೂ ಕಟ್ಟು ಬಿದ್ದವರೆ. ನೀವು ಕಂಡ ಆ ಸಿದ್ಧಪುರುಷರು ಅವನ ದೂತರು. ಭಕ್ತಿಯಿಂದ ಹರಿನಾಮೋಚ್ಚಾರಣೆ ಮಾಡುವ ಜನರನ್ನು ಅಂತ್ಯಕಾಲದಲ್ಲಿ ಅವರು ಕಾಪಾಡುತ್ತಾರೆ. ಅಂಥ ಜನರನ್ನು ಮುಟ್ಟುವ ಅಧಿಕಾರ ನಮಗಿಲ್ಲ. ಅಜಾಮಿಳನೂ ಅಂಥವನೆ ಅವನನ್ನು ನೀವು ಮುಟ್ಟ ಬಾರದಿತ್ತು. ನೀವು ಅಪರಾಧ ಮಾಡಿದ್ದೀರಿ. ಅದನ್ನು ಭಗವಂತ ಕ್ಷಮಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ'

ಈ ಅಜಾಮಿಳ ವೃತ್ತಾಂತವನ್ನು ಶುಕಮುನಿಗಳಿಗೆ ಮಲಯಪರ್ವತದಲ್ಲಿ ಅಗಸ್ತ್ಯ ಮುನಿಗಳು ಹೇಳಿದ್ದರು.

* * *

'ಜನರ ಪುಣ್ಯಪಾಪಗಳಿಗೆ ತಕ್ಕ ಫಲ ನೀಡುತ್ತ ಲೋಕವನ್ನು ಆಳುವವನು ಯಮಧರ್ಮರಾಜ ನೀನೇ ಎಂದು ನಾವು ತಿಳಿದಿದ್ದೆವು. ಆದರೆ ಈಗ ಪಾಪಿ ಅಜಾಮಿಳನನ್ನು ಮುಟ್ಟಲು ನಿಮಗೆ ಅಧಿಕಾರವೆಲ್ಲಿದೆ ಎಂದು ನಮ್ಮನ್ನು ಪ್ರಶ್ನಿಸುವವರಿದ್ದಾರೆ ಇದು ಆಶ್ಚರ್ಯಕರ' ಎಂದು ಯಮದೂತರು ಹೇಳಿದಾಗ ಯಮ ಅದಕ್ಕೆ ಉತ್ತರ ನೀಡುತ್ತಾನೆ–

ಯಮ ಉವಾಚ

ಪರೋ ಮದನ್ಯೋ ಜಗತಸ್ತಸ್ಥುಷಶ್ಚ
ಓತಂ ಪ್ರೋತಂ ಪಟವದ್ ಯತ್ರ ವಿಶ್ವಮ್ ।
ಯದಂಶತೋಽಸ್ಯ ಸ್ಥಿತಿಜನ್ಮನಾಶಾ
ನಸ್ಯೋತವದ್ ಯಸ್ಯ ವಶೇ ಚ ಲೋಕಃ ॥ ೧೨ ॥

ಯಮದೇವ ನುಡಿದ-

ಚರಾಚರ ಪ್ರಪಂಚಕ್ಕೆ ಪ್ರಭು ನನಗಿಂತ ಬೇರೆಯೆ ಒಬ್ಬನಿದ್ದಾನೆ. ಹರಿದ ಚಿಂದಿ ಬಟ್ಟೆಯನ್ನು ತಿರುಗಿ ದಾರದಿಂದ ಹೊಲಿದರೆ ಆ ದಾರದಲ್ಲಿ ಆ ಬಟ್ಟೆ ತುಂಡು ಹಾಸುಹೊಕ್ಕಾಗಿ ಆಶ್ರಯಿಸಿರುವಂತೆ ಎಲ್ಲ ಪ್ರಪಂಚವೂ ಅವನಲ್ಲಿ ಪೂರ್ತಿಯಾಗಿ ಆಶ್ರಯಿಸಿ ನಿಂತಿದೆ. ಅವನ ವಿಷ್ಣು ಬ್ರಹ್ಮ ರುದ್ರ ಎಂಬ ಅಂಶಗಳಿಂದಲೆ ಜಗತ್ತಿನ ರಕ್ಷಣೆ ಸೃಷ್ಟಿ ಲಯಗಳು ನಡೆಯುತ್ತವೆ. ಇಡಿ ಜಗತ್ತು ಮೂಗುದಾರ ಹಾಕಲ್ಪಟ್ಟ ಗೂಳಿಯಂತೆ ಅವನ ವಶವರ್ತಿಯಾಗಿದೆ.

ದಾರದಲ್ಲಿ ಬಟ್ಟೆ ಹಾಸುಹೊಕ್ಕಾಗಿ ಆಶ್ರಯಿಸಿರುವಂತೆ ಜಗತ್ತು ಪರಮಾತ್ಮನಲ್ಲಿ ಆಶ್ರಯಿಸಿ ನಿಂತಿದೆ ಎಂದರೆ ಪರಮಾತ್ಮ ಜಗತ್ತಿಗೆ ಉಪಾದಾನಕಾರಣ. ಅವನೇ ಜಗತ್ತಾಗಿ ಪರಿಣಮಿಸುತ್ತಾನೆ ಎಂದಂತಾಗುವುದು. ಇದು ಸರಿಯಲ್ಲ. ಜಗತ್ತಿಗೆ ಪ್ರಕೃತಿ ಉಪಾದಾನ ಕಾರಣ. ಪ್ರಕೃತಿ ಜಗತ್ತಾಗಿ ಪರಿಣಮಿಸುವಂತೆ ಮಾಡುವವನು ಪರಮಾತ್ಮ ನಿಮಿತ್ತಕಾರಣ ಅಂದರೆ ಕರ್ತನಾಗಿದ್ದಾನೆ ಎಂಬ ಸಮಸ್ಯೆ ಬರುತ್ತದೆ. ಮತ್ತು ಪರಮಾತ್ಮನ ಅಂಶಗಳು ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣ ಹೊರತು ಪರಮಾತ್ಮ ಕಾರಣ ಅಲ್ಲ ಎಂದೂ ಹೇಳಿದಂತಾಗಿದೆ. ಬೇರೆ ವ್ಯಾಖ್ಯಾನಕಾರರು ಈ ಪ್ರಶ್ನೆಗಳಿಗೆ ಸಮಾಧಾನ ನೀಡುವುದಿಲ್ಲ. ಅವರು ಜಗತ್ತಿಗೆ ಪರಮಾತ್ಮ ಉಪಾದಾನಕಾರಣವೆಂದು ಒಪ್ಪುತ್ತಾರೆ. ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಮಾಡುವವರು ಬ್ರಹ್ಮ ವಿಷ್ಣು ಮಹೇಶ್ವರರು ಪರಮಾತ್ಮನ ಅಂಶರೆಂದೂ ಹೇಳುತ್ತಾರೆ. [೧]ಗಿರಿಧರ ವ್ಯಾಖ್ಯಾನದಲ್ಲಿ ಇದು ಸ್ಪಷ್ಟವಿದೆ–

---

೧. ಮತ್ ಮತ್ತಃ ಪರ ಉತ್ಕೃಷ್ಟಶ್ಚ ಅಧೀಶ್ವರೋಽಸ್ತೀತಿ ಶೇಷಃ । ತರ್ಹಿ ಕಿಂ ಸ ವಿಷ್ಣುಬ್ರಹ್ಮರುದ್ರೇಷ್ವನ್ಯತಮಃ ಕಶ್ಚಿದಿತ್ಯಾಶಂಕ್ಯ ತೇಭ್ಯೋಽಪಿ ಪರ ಏವ ಸಃ, ತೇಷಾಂ ತದಂಶತ್ವಾದಿತ್ಯಾಹ. ಯದಂಶತ ಇತಿ । ತರ್ಹಿ ಸ ಕೀದೃಶ ಇತ್ಯಪೇಕ್ಷಾಯಾಂ ಸರ್ವಜಗದುಪಾದಾನಕಾರಣಂ ಸ ಏವೇತ್ಯಾಹ ಓತಮಿತಿ । ಯತ್ರ ಯಸ್ಮಿನ್ ವಿಶ್ವಮೋತಂ ಪ್ರೋತಂ ಚ । ತತ್ರ ದೃಷ್ಟಾಂತಮಾಹ ಪಟವದಿತಿ । ಊರ್ಧ್ವತಿರ್ಯಕ್ತಂತುಷು ಪಟವದಿತ್ಯರ್ಥಃ । ನನ್ವೇವಂ ಜಗದುಪಾದಾನತ್ವೇ ತಸ್ಯ

ವಸ್ತುತಃ ಬಟ್ಟೆಯಂತೆ ಎಂದು ದೃಷ್ಟಾಂತ ಕೊಟ್ಟ ಮಾತ್ರಕ್ಕೆ ಪರಮಾತ್ಮ ಜಗತ್ತಿಗೆ ಉಪಾದಾನಕಾರಣವೆಂದಾಗುವುದಿಲ್ಲ. ಬಟ್ಟೆ ಎಂದರೆ ಇಲ್ಲಿ, ಹರಿದ ಚಿಂದಿ ಬಟ್ಟೆ. ಅದನ್ನು ತಿರುಗಿ ದಾರದಿಂದ ಹೊಲಿದರೆ ಆ ದಾರದಲ್ಲಿ ಬಟ್ಟೆ ತುಂಡು ಆಶ್ರಯಿಸಿರುತ್ತದೆ. ಆ ದಾರವೆ ಬಟ್ಟೆಯಾಗಿ ಪರಿಣಮಿಸಿರುವುದಿಲ್ಲ. ಅದರಿಂದ ಅದು ಉಪಾದಾನಕಾರಣವಲ್ಲ. ಆದರೂ ಆಶ್ರಯವಾಗಿದೆ. ಹಾಗೆ ಪರಮಾತ್ಮ ಜಗತ್ತಿಗೆ ಉಪಾದಾನವಲ್ಲ. ಆದರೂ ಆಶ್ರಯನಾಗಿದ್ದಾನೆ ಎಂದು ಭಾಗವತದ ಅಭಿಪ್ರಾಯ.

ಬ್ರಹ್ಮವಿಷ್ಣುಮಹೇಶ್ವರರು ಸೃಷ್ಟಿಸ್ಥಿತಿಲಯಕರ್ತರು ಪರಮಾತ್ಮನ ಅಂಶರೆಂದ ಮಾತ್ರಕ್ಕೆ ಅವರು ಪರಮಾತ್ಮನಿಂದ ಬೇರೆಯಲ್ಲ. ಅವರು ಸ್ವರೂಪಾಂಶರು. ಬ್ರಹ್ಮನಲ್ಲಿರುವ ಬ್ರಹ್ಮರೂಪ, ಪ್ರತ್ಯೇಕ ವಿಷ್ಣುರೂಪ, ಮತ್ತು ಶಿವನಲ್ಲಿರುವ ಶಿವರೂಪ ಮೂರೂ ಪರಮಾತ್ಮನ ಸ್ವರೂಪಾಂಶಗಳು.

ಓತಂ ಪ್ರೋತಂ ಪಟವತ್ ।

ಯಥಾ ಕಂಥಾಪಟಾಃ ಸೂತ್ರ ಓತಾಃ ಪ್ರೋತಾಶ್ಚ ಸಂಸ್ಥಿತಾಃ ।
ಏವಂ ವಿಷ್ಣಾವಿದಂ ವಿಶ್ವಂ ಓತಂ ಪ್ರೋತಂ ಚ ಸಂಸ್ಥಿತಂ ॥
ಇತಿ ಸ್ಕಾಂದೇ ॥

ದಾರದಲ್ಲಿ ಅದರಿಂದ ಹೊಲಿದ ಚಿಂದಿಬಟ್ಟೆಗಳಂತೆ ಜಗತ್ತು ಪರಮಾತ್ಮನಲ್ಲಿ ಆಶ್ರಯಿಸಿ ನಿಂತಿದೆ ಎಂದು ಸ್ಕಾಂದಪುರಾಣದಲ್ಲಿ ಹೇಳಿರುವುದರಿಂದ ಭಾಗವತದಲ್ಲಿ 'ಓತಂ ಪ್ರೋತಂ ಪಟವತ್' ಎಂಬುದಕ್ಕೆ ಹಾಗೇ ಅರ್ಥಗ್ರಹಿಸಬೇಕು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ
ತೃತೀಯೋಽಧ್ಯಾಯಃ ॥

—೦—

ಜಡತ್ವಾಪತ್ತಿಃ ಜಡೋಪಾದಾನಸ್ಯ ಜಡತ್ವನಿಯಮಾತ್ । ಕರ್ತ್ರಧೀನತಾ ಚ ಸ್ಯಾತ್ । ಮೃತ್‌ಸುವರ್ಣಾದೇಸ್ತಥಾತ್ವದರ್ಶನಾತ್ । ತಥಾ ಚ ಕಥಂ ಸರ್ವೇಶ್ವರತ್ವಮಿತ್ಯಾಶಂಕ್ಯಾಹ ಯಸ್ಯ ವಶೇ ಚ ಲೋಕ ಇತಿ । ನನು ತಥಾಪಿ ಕಥಂ ಚೇತನಸ್ಯ ಜಡೋಪಾದಾನತ್ವಂ ಉಪಾದಾನತ್ವೇವಾ ಕಥಂ ಕರ್ತೃತ್ವಂ ಇತ್ಯಾಶಂಕ್ಯ ಇಯಂ ಲೀಲಾ ತು ಬ್ರಹ್ಮಾದೀನಾಮಸ್ಮಾಕಮಪಿ ದುರ್ವಿಭಾವ್ಯೈವೇತ್ಯಾಹ ಅಹಮಿತಿ ದ್ವಾಭ್ಯಾಂ ।
–ಗಿರಿಧರಃ

ಅಧ್ಯಾಯ-೪

ಅಧ್ಯಾಯಸಾರಾಂಶ

ಪ್ರಾಚೀನಬರ್ಹಿರಾಜನ ಪುತ್ರರು ಹತ್ತು ಮಂದಿ ಪ್ರಚೇತಸರು ತಂದೆಯ ಆದೇಶದಂತೆ ಸಂತಾನವೃದ್ಧಿಗಾಗಿ ಸಮುದ್ರದೊಳಗೆ ಕುಳಿತು ಬಹುಕಾಲ ತಪಸ್ಸು ಮಾಡಿ ಹೊರಗೆ ಬಂದರು. ಹೊರಗೆ ಭೂಮಿಯಲ್ಲಿ ಎಲ್ಲಿ ನೋಡಿದರೂ ಬರಿ ಮರಗಿಡಗಳೆ ಕಂಡುಬಂದುವು. ಕೋಪದಿಂದ ಅವನ್ನು ತಪೋಬಲದಿಂದ ಸುಡತೊಡಗಿದರು. ಚಂದ್ರ ಬಂದು ಸಮಾಧಾನ ಮಾಡುತ್ತ ಹೇಳಿದ. 'ಭಗವಂತನ ಸೃಷ್ಟಿಯಲ್ಲಿ ಬೇಡವಾದುದು ಯಾವುದೂ ಇಲ್ಲ. ಒಂದು ಜೀವಿ ಇನ್ನೊಂದು ಜೀವಿಗೆ ಆಹಾರ, ಜೀವನಾಧಾರ. ಆದರಿಂದ ನೀವು ಮರಗಳನ್ನು ಸುಡುವ ಕಾರ್ಯವನ್ನು ಕೈ ಬಿಟ್ಟು ಸಂತಾನವೃದ್ಧಿಗೆ ತೊಡಗಿರಿ. ವೃಕ್ಷಗಳೇ ಸಾಕಿ ಬೆಳೆಸಿದ ಮಾರಿಷೆ ಎಂಬ ಸುಂದರ ಕನ್ಯೆ ಇದ್ದಾಳೆ. ಅವಳನ್ನು ಮದುವೆಯಾಗಿ ಸಂತತಿ ಪಡೆಯಿರಿ' ಪ್ರಚೇತಸರು ಮಾರಿಷೆಯನ್ನು ವಿವಾಹವಾಗಿ ದಕ್ಷ ಎಂಬ ಮಗನನ್ನು ಪಡೆದರು. ಬ್ರಹ್ಮಪುತ್ರನಾದ ದಕ್ಷಪ್ರಜಾಪತಿಯೆ ತಿರುಗಿ ದಕ್ಷನಾಗಿ ಹುಟ್ಟಿದ. ಈತ ಮನಸಿನಿಂದಲೆ ನೆಲ ಜಲ ಆಕಾಶಗಳಲ್ಲಿ ಎಲ್ಲ ಜೀವಿಗಳನ್ನು ಸಂಕಲ್ಪಮಾತ್ರದಿಂದ ಸೃಷ್ಟಿಸಿದ. ಆದರೆ ಈ ಸಂತತಿ ಬೆಳೆಯಲಿಲ್ಲ. ಅದಕ್ಕೆ ಆತ ತಪಸ್ಸು ಮಾಡಿ ಹಂಸಗುಹ್ಯ ಎಂಬ ಸ್ತೋತ್ರದಿಂದ ಭಗವಂತನನ್ನು ಸ್ತುತಿಸಿದ- 'ದೇವ, ನೀದೋರ್ಷಗುಣಪೂರ್ಣನಾದ ನಿನಗಿದೊ ನಮಸ್ಕಾರ. ನೀನು ಅಂತರ್ಯಾಮಿಯಾಗಿ ನಮ್ಮೊಳಗೇ ಇದ್ದರೂ ನಾವು ನಿನ್ನನ್ನು ಕಾಣಲಾರೆವು. ಆದರೂ ನಮಗೆ ಬರುವ ಸ್ವಪ್ನ ಸುಷುಪ್ತಿ ಮುಂತಾದ ಅವಸ್ಥೆಗಳು ನಮ್ಮ ಅಧೀನವಲ್ಲ. ನೀನೇ ಅವುಗಳನ್ನು ನಮಗೆ ನೀಡುವೆ ಎಂದು ಊಹಿಸಿಕೊಳ್ಳುತ್ತೇವೆ. ಮತ್ತು ಜ್ಞಾನಿಗಳು ತಮ್ಮ ಹೃದಯದಲ್ಲಿ ನಿನ್ನನ್ನು ಪ್ರತ್ಯಕ್ಷವಾಗಿಯೆ ಕಾಣುತ್ತಾರೆ. ನಾನಾ ಜನರು ಅವರ ಯೋಗ್ಯತಾನುಸಾರ ನಿನ್ನನ್ನು ನಾನಾ ರೀತಿಯಲ್ಲಿ ತಿಳಿದು ವಾದ

ಮಾಡುತ್ತಾರೆ. ಅವರಿಗೆ ತಕ್ಕ ಫಲವನ್ನು ನೀನು ಕೊಡುವಿ. ಆದರೆ ಅವತಾರರೂಪಗಳಲ್ಲಿ ನೀನು ನಾನಾ ಲೀಲೆಗಳನ್ನು ಮಾಡಿ ದಾಮೋದರ ಕಂಸಾರಿ ಎಂದು ಮುಂತಾಗಿ ನಾನಾ ನಾಮಗಳನ್ನು ಪ್ರಸಿದ್ಧ ಪಡಿಸಿ ಭಕ್ತರನ್ನು ಅನುಗ್ರಹಿಸುವಿ'

ಶ್ರೀಹರಿ ಅಷ್ಟಭುಜರೂಪದಿಂದ ಮೈದೋರಿ 'ಪಂಚಜನ ಪ್ರಜಾಪತಿಯ ಮಗಳಾದ ಅಸಿಕ್ನಿಯನ್ನು ಮದುವೆಯಾಗು. ಮಕ್ಕಳನ್ನು ಪಡೆ. ಹೀಗೆಯೇ ಮುಂದೆ ಲೋಕದಲ್ಲಿ ಎಲ್ಲರೂ ಸ್ತ್ರೀಸಂಗದಿಂದಲೆ ಸಂತತಿಯನ್ನು ವೃದ್ಧಿಗೊಳಿಸಲಿ' ಎಂದು ಹೇಳಿ ಅಂತರ್ಧಾನನಾದ.

* * *

ದಕ್ಷ ಪ್ರಜಾಪತಿ ಸಂತಾನವೃದ್ಧಿಗಾಗಿ ಶ್ರೀಹರಿಯನ್ನು ಹಂಸಗುಹ್ಯಸ್ತೋತ್ರದಿಂದ ಸ್ತುತಿಸುತ್ತಾನೆ. ಆ ಸ್ತೋತ್ರದಲ್ಲಿ ಎರಡನೇ ಶ್ಲೋಕ–

ನ ಯಸ್ಯ ಸಖ್ಯಂ ಪುರುಷೋ ವೇತ್ತಿ ಸಖ್ಯುಃ
ಸಖಾ ವಸನ್ ಸಂವಸತಃ ಪುರೇಽಸ್ಮಿನ್ ।
ಗುಣೋ ಯಥಾ ಗುಣಿನೋ ವ್ಯಕ್ತದೃಷ್ಟಿ-
ಸ್ತಸ್ಮೈ ಮಹೇಶಾಯ ನಮಸ್ಕರೋಮಿ ॥ ೨೪ ॥

ಜೀವ ಪರಮಾತ್ಮರಿಬ್ಬರೂ ಜೊತೆಯಾಗಿ ಶರೀರದಲ್ಲಿ ನೆಲೆಸಿರುವುದರಿಂದ ಅವರಿಬ್ಬರೂ ಗೆಳೆಯರು. ಆದರೂ ಜೀವ ತನಗೆ ಶರೀರೇಂದ್ರಿಯಾದಿಪ್ರೇರಕನಾಗಿ ಪರಮಾತ್ಮ ಜೊತೆಗಿರುತ್ತಾನೆ, ಅವನು ತನ್ನಲ್ಲಿ ಪ್ರೀತಿಮಾಡುವ ಗೆಳೆಯನೆಂಬುದನ್ನು ಅರಿಯುವುದಿಲ್ಲ. ಏಕೆಂದರೆ ಅವನು ಸ್ಥೂಲದೃಷ್ಟಿಯವನು. ಸೂಕ್ಷ್ಮವನ್ನರಿಯಲಾರ. ಇಂಗಿತಜ್ಞನಲ್ಲದ ಸೇವಕ ಪ್ರಭುವಿನ ಮುಂದೆ ನಿಂತಿದ್ದರೂ ಪ್ರಭು ಮನಸ್ಸಿನಲ್ಲಿ ತನ್ನನ್ನು ಗೆಳೆಯನೆಂದು ಭಾವಿಸುತ್ತಿದ್ದಾನೆ ಎಂಬುದನ್ನು ತಿಳಿಯಲಾರ. ಪ್ರಭುವಿನ ಮನೋಗತವನ್ನು ಅರಿಯುವಷ್ಟು ಸೂಕ್ಷ್ಮದೃಷ್ಟಿ ಅವನಿಗಿಲ್ಲ. ಅಂಥ ಸರ್ವಶಕ್ತನಾದ ಪರಮಾತ್ಮನನ್ನು ನಮಸ್ಕರಿಸುತ್ತೇನೆ.

ಇಲ್ಲಿ ಗುಣವು ಗುಣಿಯನ್ನು ಹೇಗೆ ತಿಳಿಯುವುದಿಲ್ಲವೋ ಹಾಗೆ ಜೀವ ಪರಮಾತ್ಮನನ್ನು ತಿಳಿಯುವುದಿಲ್ಲ ಎಂದಿದೆ. 'ದ್ವಾ ಸುಪರ್ಣಾ ಸಯುಜಾ ಸಖಾಯಾ' ಒಂದೇ ಶರೀರದಲ್ಲಿ ಪರಸ್ಪರ ಮಿತ್ರರಾದ ಜೀವ ಪರಮಾತ್ಮರು ನೆಲೆಸಿದ್ದರೂ ಪರಮಾತ್ಮ ತನಗೆ ಆಪ್ತಮಿತ್ರ ಎಂಬುದನ್ನು ಜೀವ ತಿಳಿಯುವುದಿಲ್ಲ. ಅದಕ್ಕೆ ಉದಾಹರಣೆಯಾಗಿ ಗುಣಗುಣಿದೃಷ್ಟಾಂತವನ್ನು ನೀಡಲಾಗಿದೆ.

ಬೇರೆ ವ್ಯಾಖ್ಯಾನಕಾರರು- 'ಗುಣವೆಂದರೆ ಶಬ್ದಾದಿ ವಿಷಯಪದಾರ್ಥ. ಗುಣಿ ಎಂದರೆ ಅದನ್ನು ಗ್ರಹಿಸುವ ಇಂದ್ರಿಯ. ಇಂದ್ರಿಯ ವಿಷಯದ ಮಾಧುರ್ಯಾದಿಗಳನ್ನು ತಿಳಿಸುತ್ತ ಉಪಕಾರ ಮಾಡುವುದರಿಂದ ವಿಷಯಕ್ಕೆ ಇಂದ್ರಿಯ ಮಿತ್ರ ಎನಿಸುತ್ತದೆ. ಆದರೂ ವಿಷಯ ಇಂದ್ರಿಯದ ಈ ಮಿತ್ರತ್ವವನ್ನು ತಿಳಿಯುವುದಿಲ್ಲ. ಅಥವಾ ಗುಣ ಎಂದರೆ ತ್ರಿಗುಣಜನ್ಯವಾದ ಶರೀರ. ಅದನ್ನು ಧರಿಸುತ್ತ ಉಪಕಾರ ಮಾಡುವ ಆತ್ಮ ಗುಣಿ. ಶರೀರ ಆತ್ಮದ ಈ ಮಿತ್ರತ್ವವನ್ನು ತಿಳಿಯುವುದಿಲ್ಲ' ಎಂದು ವಿವರಣೆ ನೀಡುತ್ತಾರೆ. ಆದರೆ ಜಡವಾದ ವಿಷಯಪದಾರ್ಥವಾಗಲಿ ಶರೀರವಾಗಲಿ ತಿಳಿಯುವ ಪ್ರಸಕ್ತಿ ಇಲ್ಲ. ಚೇತನವಾದ ಜೀವ ತಿಳಿಯುವ ಶಕ್ತಿ ಉಳ್ಳವನು ಆದರೂ 'ಅವ್ಯಕ್ತದೃಷ್ಟಿ' ಮಂದದೃಷ್ಟಿಯವನು ಅಥವಾ 'ವ್ಯಕ್ತದೃಷ್ಟಿ' ವ್ಯಕ್ತವಾಗಿ ಸ್ಥೂಲವಾಗಿ ಇರುವುದನ್ನು ಮಾತ್ರ ತಿಳಿಯಬಲ್ಲನು ಅದರಿಂದ ಸೂಕ್ಷ್ಮವಾದ ಪರಮಾತ್ಮತತ್ತ್ವವನ್ನು ತಿಳಿಯಲಾರ ಎಂದು ಚೇತನನ ಅಶಕ್ತಿಗೆ ದೃಷ್ಟಾಂತವಾಗಿ ಚೇತನನನ್ನೇ ಕೊಡುವುದು ಸಮಂಜಸವಾಗುತ್ತದೆ. ಜಡದೃಷ್ಟಾಂತ ಉಚಿತವಲ್ಲ. ಜಡಕ್ಕೆ ತಿಳಿಯುವ ಶಕ್ತಿ ಅಪ್ರಸಕ್ತವಾಗಿರುವುದರಿಂದ 'ತಿಳಿಯುವುದಿಲ್ಲ' ಎನ್ನುವುದು ಕೂಡಲಾರದು.

ವೀರರಾಘವವ್ಯಾಖ್ಯಾನದಲ್ಲಿ ರತ್ನದಲ್ಲಿ ಪ್ರಭೆ ಎಂಬ ಗುಣ ಅವಿಭಾಜ್ಯವಾಗಿರುವಂತೆ ಪರಮಾತ್ಮನಲ್ಲಿ ಜೀವ ಅವಿಭಾಜ್ಯಸಂಬಂಧದಿಂದ ಇರುತ್ತಾನೆ ಆದರೂ ಜೀವ ಪರಮಾತ್ಮನನ್ನು ತಿಳಿಯುವುದಿಲ್ಲ ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಜೀವ ಪರಮಾತ್ಮನಲ್ಲಿ ವಾಸಮಾಡುತ್ತಿದ್ದಾನೆ ಎಂದು ಶ್ಲೋಕದಲ್ಲಿ ಹೇಳಿಲ್ಲ. ಪರಮಾತ್ಮನ ಜೊತೆಗೆ ದೇಹದಲ್ಲಿ ವಾಸ ಮಾಡುತ್ತಾನೆ ಎಂದಿದೆ. ಮತ್ತು ಗುಣವು ಗುಣಿಯಲ್ಲಿ ವಾಸಮಾಡುವಂತೆ ಜೀವ ಪರಮಾತ್ಮನಲ್ಲಿ ವಾಸಮಾಡುತ್ತಿಲ್ಲ ಗುಣಗುಣಿಗಳಿಗೆ ಅಭೇದ ಅಥವಾ ಭೇದಾಬೇದ ವಿರುತ್ತದೆ. ಜೀವ ಪರಮಾತ್ಮರೊಳಗೆ ಭೇದವೇ ಇದೆ. ಅದರಿಂದ ದೃಷ್ಟಾಂತ ಹೊಂದಿಕೆಯಾಗುವುದಿಲ್ಲ.

ಹೀಗೆ ಎರಡೂ ದೃಷ್ಟಾಂತಗಳು ಹೊಂದಿಕೆಯಾಗದಿರುವುದರಿಂದ 'ಅಥವಾ' ಎನ್ನುತ್ತ ಭಗವತ್ಪ್ರಸಾದಾಚಾರ್ಯವ್ಯಾಖ್ಯಾನದಲ್ಲಿ 'ಗಾಂಭೀರ್ಯಾದಿ ಗುಣಗಳುಳ್ಳ ರಾಜನ ಮಿತ್ರತ್ವವನ್ನು ಭೃತ್ಯತ್ವಗುಣ ಉಳ್ಳ ಮಂತ್ರಿ ಮುಂತಾದವರು ಹೇಗೆ ತಿಳಿಯುವುದಿಲ್ಲವೋ ಹಾಗೆ' ಎಂದು ಮೂರನೆ ದೃಷ್ಟಾಂತ ಉಕ್ತವಾಗಿದೆ. ಈ ಮೂರನೇ ದೃಷ್ಟಾಂತವೆ ಸರಿ. ಮತ್ತು ಸ್ಕಂದಪುರಾಣೋಕ್ತವೂ ಆಗಿದೆ. ಆದರೂ, ರಾಜಮಂತ್ರಿಗಳಿಬ್ಬರೂ ಗುಣಿಗಳು ಎಂದುದು ಸರಿಯಾಗಲಿಲ್ಲ. ಶ್ಲೋಕದಲ್ಲಿ 'ಗುಣ ಗುಣಿಯನ್ನು ತಿಳಿಯುವುದಿಲ್ಲ' ಎಂದಿದೆ. ಅದಕ್ಕೆ ಶ್ರೀಮದಾಚಾರ್ಯರು ಹೇಳುತ್ತಾರೆ-

ಗುಣೋ ಯಥಾ ಗುಣಿನಃ । ಕಶ್ಚಿತ್ ಪುರಸ್ಥಿತೋ ಗುಣಭೂತಃ । ಪ್ರಧಾನ ಭೂತಸ್ಯ ರಾಜ್ಞಃ । ಮಮಾಸೌ ಸಖೇತಿ ರಾಜ್ಞಾ ಚಿಂತಿತಮಪಿ ನ ಜಾನಾತಿ ।

ಯಥಾ ರಾಜ್ಞಃ ಪ್ರಿಯತ್ವಂ ತು ಭೃತ್ಯೋ ವೇದ ನ ಚಾತ್ಮನಃ ।
ತಥಾ ಜೀವೋ ನ ಯತ್ಸಖ್ಯಂ ವೇತ್ತಿ ತಸ್ಮೈ ನಮೋಽಸ್ತು ತೇ ॥
ಇತಿ ಸ್ಕಾಂದೇ ।

'ಗುಣೋ ಯಥಾ ಗುಣಿನಃ' ಎಂಬಲ್ಲಿ 'ಗುಣ' ಎಂದರೆ ಅಪ್ರಧಾನ, ರಾಜನ ಮುಂದೆ ನಿಂತಿರುವ ಒಬ್ಬ ಸೇವಕ. 'ಗುಣಿ' ಎಂದರೆ ಪ್ರಧಾನ, 'ಪ್ರಭುವಾಗಿರುವ ರಾಜ ಎಂದರ್ಥ. 'ನನಗೆ ಈ ಸೇವಕ ಮಿತ್ರನಾಗಿದ್ದಾನೆ' ಎಂದು ರಾಜ ಮನಸ್ಸಿನಲ್ಲಿ ಆಲೋಚಿಸುತ್ತಿದ್ದರೂ ಸೇವಕ ಅದನ್ನು ತಿಳಿಯಲಾರ, ಸ್ಥೂಲಬುದ್ಧಿಯವನಾದ್ದರಿಂದ.

'ರಾಜನಿಗೆ ತಾನು ಪ್ರಿಯನಾಗಿರುವೆನೆಂಬುದನ್ನು ಸೇವಕ ಹೇಗೆ ತಿಳಿಯುವುದಿಲ್ಲವೋ ಹಾಗೆ ಜೀವನು ಪರಮಾತ್ಮನಿಗೆ ತಾನು ಪ್ರಿಯನೆಂಬುದನ್ನು ತಿಳಿಯುವುದಿಲ್ಲ. ಅಂಥ ನಿನಗಿದೋ ನಮಸ್ಕಾರ' ಎಂದು ಸ್ಕಾಂದ ಪುರಾಣದಲ್ಲಿ ಉಕ್ತವಾಗಿದೆ.

ರಾಜ ತನ್ನ ಸೇವಕನಿಗೆ ಬಹುಮಾನವಿತ್ತರೆ ತಾನು ರಾಜನಿಗೆ ಪ್ರಿಯನೆಂದು ತಿಳಿಯುವುದು ಸೇವಕನಿಗೆ ಕಷ್ಟವಾಗದು. ಬಹುಮಾನ ನೀಡುವದಕ್ಕೆ ಮೊದಲಿಗೆ ರಾಜನ ಮನಸ್ಸಿನಲ್ಲಿ ಏನಿರುತ್ತದೆ ಎಂಬುದು ಇಂಗಿತಾಭಿಜ್ಞನಲ್ಲದ ಸ್ಥೂಲ ಮತಿಯಾದ ಸೇವಕನಿಗೆ ತಿಳಿಯಲಾಗದು ಎಂದು ಭಾಗವತ- ಸ್ಕಾಂದಪುರಾಣಗಳ ಹಾರ್ದವನ್ನು ತಾತ್ಪರ್ಯದಲ್ಲಿ ಬಿಡಿಸಿ ಹೇಳಿದ್ದಾರೆ.

* * *

ದಕ್ಷಪ್ರಜಾಪತಿ ಹಂಸಗುಹ್ಯ ಸ್ತೋತ್ರದಿಂದ ಹರಿಯನ್ನು ಸ್ತುತಿಸುತ್ತಾನೆ. ಈ ಸ್ತೋತ್ರದಲ್ಲಿ ಮೂರನೇ ಶ್ಲೋಕ–

ದೇಹೋಽಸವೋಽಕ್ಷಾ ಮನವೋ ಭೂತಮಾತ್ರಾ
ನಾತ್ಮಾನಮನ್ಯಂ ಚ ವಿದುಃ ಪರಂ ಯತ್ ।
ಸರ್ವಂ ಪುಮಾನ್ ವೇದ ಗುಣಾಂಶ್ಚ ತಜ್ಜ್ಞೋ
ನ ವೇದ ಸರ್ವಜ್ಞಮನಂತಮೀಡೇ ॥ ೨೫ ॥

ದೇಹಾಭಿಮಾನಿ ಕುಬೇರ. ಪ್ರಾಣಾಭಿಮಾನಿ ಮರುತ್ತುಗಳು.ಇಂದ್ರಿಯಾಭಿಮಾನಿ ಇಂದ್ರಾದಿಗಳು, ಮನೋಭಿಮಾನಿ ರುದ್ರ, ಪಂಚಭೂತಾಭಿಮಾನಿ ಗಣಪತಿ ಮುಂತಾದವರು ಶಬ್ದಾದ್ಯಭಿಮಾನಿ ಬೃಹಸ್ಪತ್ಯಾದಿಗಳು ಇವರು ಯಾರೂ ತಮ್ಮನ್ನಾಗಲಿ ಬೇರೆ ಪ್ರಪಂಚವನ್ನಾಗಲಿ ತಿಳಿಯಲಾರರು. ಪರಮಾತ್ಮನನ್ನು ಸರ್ವಥಾ ತಿಳಿಯ ಲಾರರು. ಜೀವಾಭಿಮಾನಿ ಬ್ರಹ್ಮನು ಮಾತ್ರ ಹರಿಯ ಅನುಗ್ರಹದಿಂದ ತನ್ನನ್ನೂ

ಬೇರೆ ಪ್ರಪಂಚವನ್ನೂ ಅವುಗಳ ಗುಣಕ್ರಿಯೆಗಳನ್ನೂ ಎಲ್ಲವನ್ನೂ ತಿಳಿಯಬಲ್ಲ. ಅವೆಲ್ಲವನ್ನು ಪೂರ್ತಿ ತಿಳಿಯುತ್ತಿದ್ದರೂ ಪರಮಾತ್ಮನನ್ನು ಪೂರ್ತಿಯಾಗಿ ತಿಳಿಯಲಾರ. ಏಕೆಂದರೆ ಪರಮಾತ್ಮನ ಮಹಿಮೆಗೆ ಪಾರವಿಲ್ಲ. ಅವನು ಸರ್ವಜ್ಞ, ತನ್ನ ಮಹಿಮೆಯನ್ನೆಲ್ಲ ತಾನೊಬ್ಬನೆ ಬಲ್ಲ. ಅಂಥಹ ಪರಮಾತ್ಮನನ್ನು ಸ್ತುತಿಸುತ್ತೇನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ದೇಹ ಪ್ರಾಣ ಇಂದ್ರಿಯ ಮುಂತಾದುವು ಜಡದ್ರವ್ಯಗಳಾದ್ದರಿಂದ ತಮ್ಮನ್ನೂ ಬೇರೆ ಪದಾರ್ಥಗಳನ್ನೂ ಹೇಗೆ ತಿಳಿಯಲಾರವೋ ಹಾಗೆ ಜೀವನು ಕೂಡ, ಆತ ಚೇತನನಾದ್ದರಿಂದ ತನ್ನನ್ನೂ ಬೇರೆ ಪದಾರ್ಥಗಳನ್ನೂ ಎಲ್ಲವನ್ನೂ ತಿಳಿಯಬಲ್ಲವನಾಗಿದ್ದರೂ ಪರಮಾತ್ಮನನ್ನು ತಿಳಿಯಲಾರ. ಏಕೆಂದರೆ ಅವನು ಅನಂತನಾಗಿದ್ದಾನೆ ಎಂದು ವ್ಯಾಖ್ಯಾನಿಸುತ್ತಾರೆ. ಆದರೆ 'ಸರ್ವಂ ಪುಮಾನ್ ವೇದ' ಜೀವ ತನ್ನ ಶರೀರ ಮುಂತಾದುವನ್ನು ಎಲ್ಲವನ್ನೂ ತಿಳಿಯಬಲ್ಲ ಎನ್ನುವುದು ಅಸಂಗತವಾಗುತ್ತದೆ. ತನಗೆ ರೋಗ ಬಂದಾಗ ಅದನ್ನು ತಿಳಿಯಲು ವೈದ್ಯನ ಬಳಿಗೆ ಓಡುವ ಜೀವ 'ಸರ್ವಂ ವೇದ' ಸರ್ವಜ್ಞನಾಗಿದ್ದಾನೆ ಎನ್ನುವುದು ಹೇಗೆ ಕೂಡುತ್ತದೆ? ಮತ್ತು 'ದೇಹ' ಮುಂತಾದ ಶಬ್ದಗಳಿಂದ ಜಡದ್ರವ್ಯಗಳನ್ನು ಗ್ರಹಿಸಿದರೆ ಅವುಗಳಿಗೆ ತಿಳಿಯುವ ಶಕ್ತಿ ಅಪ್ರಸಕ್ತವಾದ್ದರಿಂದ ನಿಷೇಧ ಮಾಡುವುದು ಯುಕ್ತವಾಗುವುದಿಲ್ಲ. ಮತ್ತು 'ಅಕ್ಷಾಃ' ಎಂದರೆ ಇಂದ್ರಿಯಗಳು ಎಂದು ವ್ಯಾಖ್ಯಾನಿಸುತ್ತಾರೆ. ಆದರೆ ಇಂದ್ರಿಯ ಎಂಬ ಅರ್ಥದಲ್ಲಿ ಅಕ್ಷಶಬ್ದ ನಪುಂಸಕವಾಗಬೇಕು. ಪುಲ್ಲಿಂಗವಾಗಬೇಕಾದರೆ ಇಂದ್ರಿಯನಿಯಾಮಕರಾದ ದೇವತೆಗಳೆಂದು ಅರ್ಥ ಗ್ರಹಿಸಬೇಕು. 'ಅಕ್ಷಂ ಇಂದ್ರಿಯಂ ನಿಯಮ್ಯತ್ವೇನ ಏಷಾಮಸ್ತೀತಿ ಅಕ್ಷಾಃ' ಎಂದು ವಿವರಣೆ ನೀಡಬೇಕು. ಇದರಿಂದ ಅಕ್ಷಶಬ್ದದೊಂದಿಗೆ ಇರುವ ದೇಹ ಮುಂತಾದ ಶಬ್ದಗಳೂ ಅಭಿಮಾನಿದೇವತಾಪರವೆಂದು ಸೂಚಿತವಾಗುತ್ತದೆ. ಹೀಗಾಗಿ ಶರೀರಾದಿಗಳ ಅಭಿಮಾನಿದೇವತೆಗಳು ತಮ್ಮನ್ನಾಗಲಿ ಬೇರೆಯವರನ್ನಾಗಲಿ ಪೂರ್ತಿಯಾಗಿ ತಿಳಿಯಲಾರರು ಎಂದೇ ಅರ್ಥ ಹೇಳಬೇಕು. 'ಪುಮಾನ್' ಎಂದರೂ 'ಸರ್ವಂ ವೇದ' ಎಂದಿರುವುದರಿಂದ ಜೀವನಲ್ಲ, ಜೀವಾಭಿಮಾನಿ ಬ್ರಹ್ಮ, ಅವನು ತನ್ನನ್ನೂ ಪ್ರಪಂಚವನ್ನೂ ಆಲೋಚನೆ ಮಾಡಿದರೆ ಎಲ್ಲವನ್ನೂ ತಿಳಿಯ ಬಲ್ಲವನು ಸರ್ವಜ್ಞ. ಅವನೂ ಕೂಡ ಅನಂತನನ್ನು ಪೂರ್ತಿ ತಿಳಿಯಲಾರ.

ದೇಹಮಾನೀ ವೈಶ್ರವಣೋ ಮರುತಃ ಪ್ರಾಣಮಾನಿನಃ ।
ಇಂದ್ರಾದ್ಯಾ ಇಂದ್ರಿಯಾತ್ಮಾನೋ ರುದ್ರೋಽಂತಃಕರಣಾತ್ಮಕಃ ॥

ನೈತೇ ವಿದಂತಿ ಸ್ವಾತ್ಮಾನಂ ಪರಂ ವಾಪಿ ವಿಮೋಹಿತಾಃ ।
ಜೀವಾಭಿಮಾನೀ ಬ್ರಹ್ಮಾ ತು ಸರ್ವಂ ವೇದ ಪ್ರಜಾಪತಿಃ ।
ಸೋಽಪಿ ವೇದ ಹರಿಂ ನೈವ ಸಮ್ಯಕ್ ಸೈವ ಹಿ ಸರ್ವವಿತ್ ॥ ಇತಿ ಚ ।

ದೇಹಾಭಿಮಾನಿ ಕುಬೇರ. ಪ್ರಾಣಾಭಿಮಾನಿಗಳು ಮರುತ್ತುಗಳು. ಇಂದ್ರಿಯಾಭಿಮಾನಿಗಳು ಇಂದ್ರಾದಿಗಳು. ಅಂತಃಕರಣಾಭಿಮಾನಿ ರುದ್ರ ಇವರೆಲ್ಲರೂ ಹರಿಯ ಬಂಧಕಶಕ್ತಿಯಿಂದ ಮೋಹಗೊಳ್ಳುವವರು. ಆದರಿಂದ ಇವರು ಯಾರೂ ತಮ್ಮ ಸ್ವರೂಪವನ್ನಾಗಲಿ ಪರರ ಸ್ವರೂಪವನ್ನಾಗಲಿ ಚೆನ್ನಾಗಿ ತಿಳಿಯಲಾರರು. ಜೀವಾಭಿಮಾನಿ ಬ್ರಹ್ಮ ಎಲ್ಲವನ್ನೂ ತಿಳಿಯಬಲ್ಲ. ಆದರೂ ಪರಮಾತ್ಮನನ್ನು ಪೂರ್ತಿ ತಿಳಿಯಲಾರ. ಪರಮಾತ್ಮನೊಬ್ಬನೆ ಎಲ್ಲವನ್ನೂ ಪೂರ್ತಿ ತಿಳಿಯಬಲ್ಲವನು ಎಂದೂ ಸ್ಕಾಂದಪುರಾಣದಲ್ಲಿ ಉಕ್ತವಾಗಿದೆ.

* * *

ದಕ್ಷಪ್ರಜಾಪತಿ ಹಂಸಗುಹ್ಯ ಸ್ತೋತ್ರದಿಂದ ಹರಿಯನ್ನು ಸ್ತುತಿಸುತ್ತಾನೆ. ಆದರಲ್ಲಿ ನಾಲ್ಕನೇ ಶ್ಲೋಕ–

ಯದೋಪರಾಮೋ ಮನಸೋ ನಾಮರೂಪ-
ರೂಪಸ್ಯ ದೃಷ್ಟಿಸ್ಮೃತಿಸಂಪ್ರಮೋಷಾತ್ ।
ಯ ಈಯತೇ ಕೇವಲಯಾ ಸ್ವಸಂಸ್ಥಯಾ
ಹಂಸಾಯ ತಸ್ಮೈ ಶುಚಿಸದ್ಮನೇ ನಮಃ ॥ ೨೬ ॥

ನಾಮರೂಪಾತ್ಮಕ ಪ್ರಪಂಚವನ್ನು ತಿಳಿಸುವ ಮನಸ್ಸು ಸ್ವಪ್ನಸುಷುಪ್ತಿ ಮುಂತಾದ ಅವಸ್ಥೆಗಳಲ್ಲಿ ಜೀವೇಚ್ಛೆಗೆ ಅಧೀನವಾಗದೆ ಕೇವಲ ಪರಮಾತ್ಮನ ಇಚ್ಛೆಯಿಂದ ಬಾಹ್ಯವ್ಯಾಪಾರದಿಂದ ಉಪರತವಾಗುವಾಗ, ನಾಮರೂಪಾತ್ಮಕ ಬಾಹ್ಯ ಪ್ರಪಂಚದ ಅನುಭವ ಸ್ಮರಣೆಗಳೆಲ್ಲವೂ ಜೀವನಿಗೆ ತಪ್ಪಿಹೋಗುವುವು. ಬಳಿಕ ಎಚ್ಚೆತ್ತ ಜೀವನಿಗೆ ಇಷ್ಟರವರೆಗೆ ತನಗಿಂತ ಬೇರೆಯಾಗಿ ತನಗೆ ಸುಪ್ತ್ಯವಸ್ಥೆಯನ್ನು ತಂದು ಕೊಟ್ಟವನು ಮತ್ತು ಎಚ್ಚರಗೊಳಿಸಿದವನು ಒಬ್ಬ ಪರಮಾತ್ಮನಿದ್ದಾನೆ ಎಂದು ಜ್ಞಾನೋದಯವಾಗುತ್ತದೆ. ಮುಖ್ಯಪ್ರಾಣಾಂತರ್ಗತನಾದ ನಿತ್ಯನಿರ್ದೋಷ ಸಾರರೂಪನಾದ ಅಂಥ ಪರಮಾತ್ಮನಿಗೆ ನಮಸ್ಕಾರ.

[೧]ಇಲ್ಲಿ ಶ್ರೀಧರ ಮುಂತಾದ ವ್ಯಾಖ್ಯಾನಕಾರರು ಹೀಗೆ ಹೇಳುತ್ತಾರೆ. ಮನಸ್ಸಿಗೆ ಸುಷುಪ್ತಿಯಲ್ಲಿ ಲಯವಿದೆ. ಜಾಗರ ಸ್ವಪ್ನಗಳಲ್ಲಿ ಮನಸ್ಸು ಬೇರೆ ವಿಷಯಗಳ ಕಡೆಗೆ

---

೧. ಅದೃಷ್ಟಧಾಮತ್ವಮುಕ್ತ್ವಾ ಸ್ವಪ್ರಕಾಶತ್ವಮಾಹ । ಯದಾ ಮನಸ ಉಪರಾಮಃ ಸಮಾಧಿಃ । ನ ತು ಸುಷುಪ್ತಾವಿವ ಲಯೋ ನಚ ಜಾಗ್ರತ್ಸ್ವಪ್ನಯೋರಿವ ವಿಕ್ಷೇಪಃ । ಉಪರಾಮೇ ಹೇತುಃ ದೃಷ್ಟಂ ದರ್ಶನಂ ಸ್ಮೃತಿಶ್ಚತಯೋಃ ಸಂಪ್ರಮೋಷಾನ್ನಾಶಾತ್ ತದಾ ಯಃ ಕೇವಲೇನ ಸ್ವರೂಪಜ್ಞಾನೇನ ಪ್ರತೀಯತೇ ತಸ್ಮೈ ಹಂಸಾಯ ನಮಃ ।
–ಶ್ರೀಧರಃ

ಹರಿಯುತ್ತದೆ. ಸಮಾಧಿಯಲ್ಲಿ ಇವೆರಡೂ ಇಲ್ಲ. ಏಕೆಂದರೆ ಆಗ ಅನುಭವ ಸ್ಮರಣ ಎರಡೂ ನಾಶವಾಗಿರುತ್ತದೆ. ಇಂಥ ಸಮಾಧಿಯಲ್ಲಿ ಭಗವಂತ ಜೀವನಿಗೆ ಸ್ವರೂಪಜ್ಞಾನದಿಂದಲೇ ವೇದ್ಯನಾಗುತ್ತಾನೆ. ಹೀಗೆ ಸ್ವಪ್ರಕಾಶನೆನಿಸುತ್ತಾನೆ' ಎಂದು.

ಇದು ಸರಿಯಲ್ಲ, ಮನೋವೃತ್ತಿಯಿಂದ ಮಾತ್ರ ಪರಬ್ರಹ್ಮನನ್ನು ತಿಳಿಯಬಹುದು, ಸ್ವರೂಪಭೂತಜ್ಞಾನದಿಂದ ಸ್ವರೂಪವನ್ನು ತಿಳಿಯುವುದು ಶಕ್ಯವಿಲ್ಲ, ಯಾವುದೇ ಕ್ರಿಯೆಗೆ ತಾನೇ ಕರ್ತ ತಾನೇ ಕರ್ಮವೂ ಕೂಡ ಎನ್ನುವುದು ಕಂಡಿಲ್ಲ. ಆದರಿಂದ ಸ್ವಪ್ರಕಾಶ ಎಂದರೆ ಅವೇದ್ಯ ಎಂದರ್ಥ ಎನ್ನುವುದು ಅದ್ವೈತದ ರೀತಿ. ಆದರಿಂದ ಸ್ವಪ್ರಕಾಶಪರಬ್ರಹ್ಮನು ಸ್ವರೂಪಜ್ಞಾನದಿಂದ ವೇದ್ಯನಾಗುತ್ತಾನೆ ಎನ್ನುವುದು ಕೂಡುವುದಿಲ್ಲ. 'ಉಪರಾಮ' ಎಂದರೆ ಉಪರಮ, ಏನೂ ಚಟುವಟಿಕೆ ಮಾಡದೆ ಇರುವುದು. ಮನಸ್ಸಿನ ಉಪರಾಮ ಸುಷುಪ್ತಿಯಲ್ಲಿ ಮಾತ್ರ ಸಾಧ್ಯ. ಅನುಭವ ಸ್ಮರಣೆ ಎರಡೂ ಇಲ್ಲದ ಉಪರಾಮ ಎಂದರೆ ಸುಷುಪ್ತಿ ಎಂದೇ ಹೇಳಬೇಕು, ಸಮಾಧಿ ಎಂದಲ್ಲ. ಸಮಾಧಿಯಲ್ಲಿ ಮನಸ್ಸು ಬಾಹ್ಯವಿಷಯಗಳಿಂದ ಈಚೆಗೆ ಬಂದರೂ ಮಾನಸ ವಾಸನಾಮಯವಾದ ಭಗವಂತನ ಪ್ರತೀಕವನ್ನು ಏಕಾಗ್ರತೆಯಿಂದ ನೋಡುತ್ತಿರುತ್ತದೆ. ಮತ್ತು ಆ ಪ್ರತೀಕದಲ್ಲಿ ಭಗವಂತನಿದ್ದಾನೆ ಎಂದು ನಿರಂತರ ಸ್ಮರಣೆ ಮಾಡುತ್ತಿರುತ್ತದೆ. ಆದ್ದರಿಂದ ದೃಷ್ಟಸ್ಮೃತಿ ಸಂಪ್ರಮೋಷವಾಗಲು ಶಕ್ಯವಿಲ್ಲ. ಮನಸ್ಸಿನಲ್ಲಿ ಏನೂ ಚಟುವಟಿಕೆ ಇಲ್ಲವೆನ್ನುವುದೂ ಸರಿಯಲ್ಲ. ಆಗ ವೇದ್ಯನಾಗುವವನು ಭಗವಂತನೂ ಅಲ್ಲ. ಅವನ ಪ್ರತೀಕ ಅಂತಶ್ಚಕ್ಷುವಿಗೆ ಕಾಣುತ್ತಿರುತ್ತದೆ. ಅದೇ ಭಗವಂತನಲ್ಲ. ಯೋಗಾಭ್ಯಾಸಕಾಲದಲ್ಲಿ ಸಮಾಧಿಯಲ್ಲಿ ಭಗವಂತನೇ ಕಾಣುವುದಾದರೆ ಅನೇಕ ಜನ್ಮಗಳಲ್ಲಿ ಯೋಗ ಸಮಾಧಿಮಾಡಿ ಅವನ ದರ್ಶನ ಪಡೆಯಬೇಕಾದ ಪ್ರಮೇಯ ಇಲ್ಲದಂತಾದೀತು. ಸಮಾಧಿಯಿಂದ ಭಗವಂತನು ಒಲಿದು ಮೈದೋರಿದಾಗಲೇ ಆತ ಕಂಡುಬರುತ್ತಾನೆ. ಮನಸ್ಸಿಗೇ ಆಗ ದರ್ಶನವಾಗುವುದರಿಂದ ಸ್ವರೂಪಜ್ಞಾನವೇದ್ಯನೆನ್ನುವುದು ಕೂಡುವದಿಲ್ಲ. ಸುಷುಪ್ತಿಯಲ್ಲಿ ಮನಸ್ಸಿಗೆ ಲಯವೆನ್ನುವುದು ಕೂಡ ಅದ್ವೈತಸಿದ್ಧಾಂತವೆ ಹೊರತು ವಾಸ್ತವವಲ್ಲ. ಸುಷುಪ್ತಿಯಲ್ಲಿ ಮನಸ್ಸು ಬಾಹ್ಯಪ್ರಪಂಚ ಸ್ವಾಪ್ನಪ್ರಪಂಚಗಳ ಚಟುವಟಿಕೆಗಳನ್ನು ನಿಲ್ಲಿಸುತ್ತದೆ ಹೊರತು ಲಯ ಹೊಂದುವುದಿಲ್ಲ.

ವೀರರಾಘವ ಮತ್ತು ವಿಷ್ಣುಪ್ರಸಾದಾಚಾರ್ಯ ವ್ಯಾಖ್ಯಾನಗಳಲ್ಲಿ ಜೀವನಿಗೆ ಸುಷುಪ್ತಿಯಲ್ಲಿ ಮನಸ್ಸು ಉಪರತವಾದಾಗ ಪರಮಾತ್ಮ ಲಭಿಸುತ್ತಾನೆ. ಆದರೂ ಪರಮಾತ್ಮ ಅವನಿಗೆ ಗೋಚರನಾಗುವುದಿಲ್ಲ. 'ಕೇವಲಯಾ ಸ್ವಸಂಸ್ಥಯಾ' ರಾಗಾದಿ ದೋಷರಹಿತವಾದ ಸ್ವಾಭಾವಿಕಜ್ಞಾನದಿಂದ ಮಾತ್ರ ಅವನು ತಿಳಿದು ಬರುತ್ತಾನೆ

ಎಂದು ವ್ಯಾಖ್ಯಾನಿಸಲಾಗಿದೆ. ಇಲ್ಲಿ 'ಈಯತೇ' ಎಂಬುದನ್ನು ಆವೃತ್ತಿ ಮಾಡಿಕೊಂಡು, ಲಭಿಸುತ್ತಾನೆ, ತಿಳಿದುಬರುತ್ತಾನೆ ಎಂದು ಬೇರೆ ಬೇರೆ ಅರ್ಥವಿಟ್ಟುಕೊಂಡು ಸುಷುಪ್ತಿಯಲ್ಲಿ ಲಭಿಸುತ್ತಾನೆ, ಎಚ್ಚರದಲ್ಲಿ ಶುದ್ಧಮನಸ್ಸಿನಿಂದ ತಿಳಿದುಬರುತ್ತಾನೆ ಎಂದು ಎರಡು ವಾಕ್ಯಗಳನ್ನು ಮಾಡಿಕೊಳ್ಳುವ ಶ್ರಮವಿದೆ. ಶ್ರೀಮದಾಚಾರ್ಯರು ಮಾಡಿರುವ ವ್ಯಾಖ್ಯಾನದಲ್ಲಿ ಈ ಶ್ರಮವೂ ಇಲ್ಲ. ಹರಿವಂಶವೇ ಹಾಗೇ ವ್ಯಾಖ್ಯಾನವನ್ನು ತೋರಿಸಿರುವಾಗ ಬೇರೆ ರೀತಿಯ ವ್ಯಾಖ್ಯಾನ ಆವಶ್ಯಕವೂ ಅಲ್ಲ.

ಕೇವಲಯಾ ಸ್ವಸಂಸ್ಥಯಾ । ಸ್ವಪ್ನಸುಷುಪ್ತ್ಯಾದೌ ಮನಉಪರಮಾಜ್ಜೀವಸ್ಯಾಸ್ವಾತಂತ್ರ್ಯದರ್ಶನೇಽಪಿ ಸ್ವಪ್ನಪ್ರಬೋಧಾದಿದರ್ಶನಾತ್ ಅನ್ಯ ಈಶ್ವರಸ್ತನ್ನಿಯಾಮಕೋಽಸ್ತೀತಿ ಜ್ಞಾಯತೇ । ಜೀವೇಚ್ಛಾಭಾವಾತ್ ಕೇವಲತ್ವಮ್ ।

'ಕೇವಲಯಾ ಸ್ವಸಂಸ್ಥಯಾ' ಎನ್ನುವುದರ ಅಭಿಪ್ರಾಯ ಹೀಗೆ– ಸ್ವಪ್ನ ಸುಷುಪ್ತಿಲಯಗಳಲ್ಲಿ ಮನಸ್ಸು ಉಪರತವಾಗುವುದರಿಂದ ಆ ಕಾಲದಲ್ಲಿ ಜೀವನಿಗೆ ಸ್ವಾತಂತ್ರ್ಯವಿಲ್ಲದಿರುವುದು ಕಂಡಿದ್ದರೂ ಸ್ವಪ್ನ ಎಚ್ಚರ ಮುಂತಾದುವು ಉಂಟಾಗುವುದು ಅನುಭವ ಸಿದ್ಧವಾಗಿರುವುದರಿಂದ ಅವುಗಳಿಗೆ ನಿಯಾಮಕ ಒಬ್ಬ ಭಗವಂತ ಇದ್ದಾನೆ ಎಂದು ತಿಳಿಯುತ್ತದೆ. ಜೀವನಿಗೆ ಸ್ವಪ್ನಸುಷುಪ್ತಿಲಯಗಳನ್ನು ಮಾಡಿಕೊಳ್ಳುವ ಇಚ್ಛೆ ಇರದಿದ್ದರೂ ಭಗವಂತನ ಇಚ್ಛೆಯಿಂದಲೇ ಅವು ಉಂಟಾಗುತ್ತವೆ ಎನ್ನುವುದನ್ನು 'ಕೇವಲಯಾ' ಎಂಬ ಶಬ್ದ ಹೇಳುತ್ತದೆ.

ಯದೋಪರಾಮೋ ಮನಸಃ ಸ್ವಪ್ನಸುಪ್ತಿಲಯಾದಿಷು ।
ತದಾಽವಸ್ಥಾಪ್ರಬೋಧಾದಿಕಾರಣತ್ವೇನ ಕೇಶವಃ ॥

ಅಸ್ವಾತಂತ್ರ್ಯಾತ್ತು ಜೀವಸ್ಯ ವಿದ್ಯತೇಽನ್ಯೋ ನಿಯಾಮಕಃ ।
ಜೀವಪ್ರವೃತ್ತ್ಯನಾಕುಲ್ಯಾಜ್ಜ್ಞಾಯತೇಽಸೌ ತದಾ ವಿಭುಃ ॥

ಇತಿ ಹರಿವಂಶೇಷು ।

'ಸ್ವಪ್ನ ಸುಷುಪ್ತಿ ಲಯ ಮೂರ್ಛೆಗಳಲ್ಲಿ ಮನಸ್ಸು ಉಪರತವಾಗಿರುವುದರಿಂದ ಜೀವನಿಗೆ ಸ್ವಾತಂತ್ರ್ಯವಿಲ್ಲದಿರುವುದರಿಂದ ಆ ಅವಸ್ಥೆಗಳಿಗೂ ಎಚ್ಚರ ಮುಂತಾದವುಗಳಿಗೂ ಕಾರಣನಾಗಿ ನಿಯಾಮಕನಾಗಿ ಬೇರೆಯೆ ಒಬ್ಬ ಭಗವಂತನಿರಬೇಕು. ಜೀವನಿಗೆ ಸ್ವಾತಂತ್ರ್ಯವಿಲ್ಲದಿದ್ದರೂ ಅವನ ಸ್ವಪ್ನ ಎಚ್ಚರ ಮುಂತಾದ ಪ್ರವೃತ್ತಿಗಳಿಗೆ ವ್ಯತ್ಯಯ ಉಂಟಾಗದಿರುವುದರಿಂದ ಅವುಗಳಿಗೆ ನಿಯಾಮಕ ಭಗವಂತನೇ ಎಂದು ಎಚ್ಚೆತ್ತುಕೊಂಡ ಜೀವ ಊಹಿಸಿ ತಿಳಿಯುತ್ತಾನೆ' ಎಂದು ಹರಿವಂಶದಲ್ಲಿ ಉಕ್ತವಾಗಿದೆ.

ಸ್ವಪ್ನದಲ್ಲಿ ಮನಸ್ಸು ಸ್ವಾಪ್ನಪದಾರ್ಥವಿಷಯದಲ್ಲಿ ಉಪರತವಾಗದಿದ್ದರೂ ಬಾಹ್ಯಪದಾರ್ಥವಿಷಯದಲ್ಲಿ ಉಪರತವಾಗುವುದರಿಂದ 'ಸ್ವಪ್ನಸುಪ್ತಿಲಯಾದಿಷು ಉಪರಾಮಃ' ಎನ್ನಲಾಗಿದೆ.

* * *

ದಕ್ಷಪ್ರಜಾಪತಿ ಮಾಡಿದ ಹಂಸಗುಹ್ಯಸ್ತೋತ್ರದಲ್ಲಿ ಐದನೇ ಪದ್ಯ–

ಮನೀಷಿಣೋಽಂತರ್ಹೃದಿ ಸನ್ನಿವೇಶಿತಂ
ಸ್ವಶಕ್ತಿಭಿರ್ನವಭಿಶ್ಚ ತ್ರಿವೃದ್ಭಿಃ ।
ವಹ್ನಿಂ ಯಥಾ ದಾರುಣಿ ಪಾಂಚದಶ್ಯಂ
ಮನೀಷಯಾ ನಿಷ್ಕೃಷಂತೀಹ ಗೂಢಮ್ ॥ ೨೭ ॥

ಜ್ಞಾನಿಗಳು ಮಾತ್ರ ತಮ್ಮೊಳಗೆ ಹೃದಯಕಮಲದಲ್ಲಿ ನೆಲೆಸಿರುವ ಹರಿಯನ್ನು ತಮಗಿಂತ ಬೇರೆಯಾಗಿ ಮನಸಿನಿಂದಲೇ ಪ್ರತ್ಯಕ್ಷವಾಗಿ ಕಾಣುತ್ತಾರೆ. ಹೃದಯಕಮಲದಲ್ಲಿ ಹರಿ ಮೂರು ಬಗೆಯ ಒಂಬತ್ತು ಶಕ್ತಿಗಳೊಂದಿಗೆ ನೆಲೆಸುತ್ತಾನೆ. ಅಲ್ಲಿ ಹದಿನಾಲ್ಕು ತತ್ತ್ವಗಳಿಗೆ ನಿಯಾಮಕನಾಗಿ ಹದಿನೈದನೆಯವನಾಗಿದ್ದಾನೆ. ಹೃದಯದೊಳಗೆ ಹೀಗೇ ವೈಭವದಿಂದ ಹರಿ ಕುಳಿತಿದ್ದರೂ ಅಯೋಗ್ಯರಿಗೆ ಕಾಣಿಸಿಕೊಳ್ಳದೆ ನಿಗೂಢನಾಗಿದ್ದಾನೆ. ಅರಣಿಯಲ್ಲಿ ನಿಗೂಢವಾಗಿ ನೆಲೆಸಿರುವ ಅಗ್ನಿಯನ್ನು ಮಥನಮಾಡಿ ಅರಣಿಗಿಂತ ಬೇರೆಯಾಗಿ ಪ್ರತ್ಯಕ್ಷ ಕಾಣುತ್ತಾರೆ. ಯಾಗಮಾಡುವವರು. ಹಾಗೇ ಜ್ಞಾನಿಗಳು ತಮ್ಮೊಳಗೆ ನೆಲೆಸಿರುವ ಹರಿಯನ್ನು ಧ್ಯಾನದಿಂದ ಕಂಡು ಕೊಳ್ಳುತ್ತಾರೆ.

[೧]ಇಲ್ಲಿ ಶ್ರೀಧರವ್ಯಾಖ್ಯಾನ ಹೀಗೆ ಹೇಳುತ್ತದೆ– 'ಇಪ್ಪತ್ತೇಳು ಶಕ್ತಿಗಳಿಂದ ಆವೃತನಾಗಿ ಕಾಣದಂತಾಗಿರುವ ಇಪ್ಪತ್ತೆಂಟನೆ ತತ್ತ್ವವು ಪರಮಾತ್ಮ. ತ್ರಿಗುಣಾತ್ಮಕವಾಗಿರುವ ನವಶಕ್ತಿಗಳೇ ಇಪ್ಪತ್ತೇಳು ಆವರಣಗಳು. ನವಶಕ್ತಿಗಳೆಂದರೆ ಪ್ರಕೃತಿ ಪುರುಷ ಮಹದ್ ಅಹಂಕಾರ ಮತ್ತು ಪಂಚತನ್ಮಾತ್ರಗಳು. ಇಪ್ಪತ್ತೇಳು ಆವರಣಗಳಿಂದ ಬೇರ್ಪಡಿಸಿ

---

೧. ಸ್ವಶಕ್ತಿಭಿರ್ಗೂಢಮಪ್ರಕಾಶಮಾನಂ । ಕತಿಭಿಃ । ನವಭಿಃ ಪ್ರಕೃತಿಪುರುಷಮಹದಹಂಕಾರ ಪಂಚತನ್ಮಾತ್ರರೂಪಾಭಿಃ । ತ್ರಿವೃದ್ಭಿಸ್ತ್ರಿಗುಣಾತ್ಮಕಾಭಿಃ । ಪಾಂಚದಶ್ಯಂ ಪಂಚದಶಸಾಮಿಧೇನೀಮಂತ್ರೈಃ ಪ್ರಕಾಶ್ಯಮಲೌಕಿಕಂ ವಹ್ನಿಮಿವಾಹಂಕಾರಾಸ್ಪದಾ-ದಾತ್ಮನೋಽನ್ಯಂ ಪರಮಾತ್ಮಾನಂ ನಿಷ್ಕರ್ಷಂತೀತ್ಯರ್ಥಃ । –ಶ್ರೀಧರಃ

ತ್ರಿವೃದ್ಭಿಃ ತ್ರಿಗುಣಾತ್ಮಿಕಾಭಿಃ ನವಭಿಃ ಪ್ರಕೃತಿಮಹದಹಂಕಾರಮನಃಪಂಚ ತನ್ಮಾತ್ರರೂಪಾಭಿಃ । ಚಕಾರಾತ್ ಪಂಚಮಹಾಭೂತದಶೇಂದ್ರಿಯರೂಪಾಭಿಶ್ಚ ಸ್ವಶಕ್ತಿಭಿರ್ಗೂಢಂ ಅಪ್ರಕಾಶಮಾನಮಿತ್ಯರ್ಥಃ –ಗಿರಿಧರಃ

ವಿವೇಕಿಗಳು ಪರಮಾತ್ಮನನ್ನು ತಿಳಿಯುತ್ತಾರೆ. ಪಂಚದಶ ಸಾಮಿಧೇನೀ ಮಂತ್ರಗಳಿಂದ ವ್ಯಕ್ತವಾಗುವ ಅಲೌಕಿಕ ಅಗ್ನಿಯನ್ನು ಯಜ್ಞದಲ್ಲಿ ಋತ್ವಿಜರು ಅರಣಿಯ ಕಟ್ಟಿಗೆಯಿಂದ ಬೇರೆಯಾಗಿ ಪ್ರಕಟಪಡಿಸುವಂತೆ' ಭಗವತ್ಪ್ರಸಾದಾಚಾರ್ಯ ವ್ಯಾಖ್ಯಾನವೂ ಹೀಗೇ ಹೇಳುತ್ತದೆ.

ಆದರೆ ಪ್ರಕೃತಿ ಮಹದಹಂಕಾರಾದಿಗಳು ತ್ರಿಗುಣಾತ್ಮಕವಾದರೂ ಪುರುಷ ತ್ರಿಗುಣಾತ್ಮಕ ಹೇಗೆ? ಮತ್ತು ಪ್ರಕೃತ್ಯಾದಿಗಳಿಂದ ಜೀವ ಆವೃತನಾಗಿರುತ್ತಾನೆ. ಅವನ ಚಿನ್ಮಯಸ್ವರೂಪ ಕಾಣದಂತಾಗಿರುತ್ತದೆ ಹೊರತು ಪರಮಾತ್ಮ ಆವೃತನಾಗಿರುವುದಿಲ್ಲ. ಅವನು ತನ್ನನ್ನೂ ಜಗತ್ತನ್ನೂ ಪೂರ್ತಿ ತಿಳಿಯುತ್ತಲೇ ಇರುತ್ತಾನೆ. ಅದರಿಂದ ಇಪ್ಪತ್ತೇಳು ಶಕ್ತಿಗಳಿಂದ ಆವೃತನಾಗಿದ್ದಾನೆ ಎನ್ನುವುದು ಕೂಡುವುದಿಲ್ಲ. ಆ ಶಕ್ತಿಗಳಿಗೆ ನಿಯಾಮಕನಾಗಿದ್ದಾನೆ ಎನ್ನಬೇಕು. ಮತ್ತು ಅರಣಿಯಿಂದ ಬೇರ್ಪಟ್ಟು ವ್ಯಕ್ತವಾಗುವುದು ಲೌಕಿಕಾಗ್ನಿ. ಸಾಮಿಧೇನೀ ಮಂತ್ರಗಳಿಂದ ಅಲೌಕಿಕ ಅಗ್ನಿ ಆ ಲೌಕಿಕಾಗ್ನಿಯಲ್ಲಿ ಸನ್ನಿಹಿತನಾಗುತ್ತಾನಷ್ಟೆ. ಅದರಿಂದ ಅರಣಿಯಿಂದ ಬೇರೆಯಾಗಿ ಅಲೌಕಿಕ ಅಗ್ನಿಯನ್ನು ಋತ್ವಿಜರು ಪ್ರಕಟ ಪಡಿಸುತ್ತಾರೆ ಎನ್ನುವುದೂ ಕೂಡುವುದಿಲ್ಲ.

---

[1]ವೀರರಾಘವ ವ್ಯಾಖ್ಯಾನದಲ್ಲಿ ನವಶಕ್ತಿಗಳು ಬೇರೆಯೇ ಉಕ್ತವಾಗಿವೆ- ಶ್ರೀ ಪುಷ್ಟಿ ಗೀಃ ಕಾಂತಿ ಕೀರ್ತಿ ತುಷ್ಟಿ ಇಲಾ ಊರ್ಜಾ ವಿದ್ಯಾ ಅವಿದ್ಯಾ ಮಾಯಾ ಎಂಬ ಶಕ್ತಿಗಳು ಎಂದು. ಆದರೆ ಈ ಶಕ್ತಿಗಳು ಹನ್ನೊಂದು, ಒಂಬತ್ತಲ್ಲ. ಪಾಂಚದಶ್ಯ ಅಗ್ನಿ ಎಂದರೆ ಪಂಚದಶಿಯಂದು, ಅಂದರೆ ಅಮಾವಾಸ್ಯೆ ಹುಣ್ಣಿಮೆಯಂದು ನಡೆಯುವ ದರ್ಶಪೂರ್ಣಮಾಸಕ್ಕೆ ಸಂಬಂಧಿಸಿದ ಅಗ್ನಿ. ಮತ್ತು ಹುಣ್ಣಿಮೆ ದಿನ ಆಧಾನ ಮಾಡುವುದರಿಂದಲೂ ಅಗ್ನಿ ಪಾಂಚದಶ್ಯ ಎನಿಸುತ್ತದೆ ಎನ್ನುತ್ತಾರೆ. ಆದರೆ ಅಗ್ನಿಗೆ ಈ ವಿಶೇಷಣ ವ್ಯರ್ಥ. ಋತ್ವಿಜರು ಅರಣಿಯಿಂದ ಅಗ್ನಿಯನ್ನು ಮಥನಮಾಡಿ ಪ್ರಕಟಪಡಿಸುವಂತೆ ಎಂದು ಉದಾಹರಣೆ ನೀಡಿದರೆ ಸಾಕು. ಮತ್ತು ಅಡಿಗೆಮನೆಯಲ್ಲಿರುವ ಲೌಕಿಕಾಗ್ನಿಯನ್ನೂ ಆಧಾನದಿಂದ ಸಂಸ್ಕರಿಸಲು ಅನುಮತಿ ಇದೆ. ಅರಣಿ ಮಥನದಿಂದಲೇ ಅಗ್ನಿಯನ್ನು ಸಿದ್ಧಪಡಿಸಬೇಕೆಂಬ ನಿಯಮವಿಲ್ಲ. ಆಧಾನವೂ ಹುಣ್ಣಿಮೆಯಂದು ಎಂದು ನಿಯಮವಿಲ್ಲ.

---

೨. ಶ್ರಿಯಾ ಪುಷ್ಟ್ಯಾ ಗಿರಾ ಕಾಂತ್ಯಾ ಕೀರ್ತ್ಯಾ ತುಷ್ಟ್ಯೇಲಯೋರ್ಜಯಾ ವಿದ್ಯಯಾವಿದ್ಯಯಾ ಶಕ್ತ್ಯಾಮಾಯಯಾ ಚ ನಿಷೇವಿತಮ್ । ಇತಿ ವಕ್ಷ್ಯಮಾಣಾಭಿಃ ಶಕ್ತಿಭಿಃ ಕಾರ್ಯೋಪಯೋಗ್ಯಪೃಥಕ್‌ಸಿದ್ಧವಿಶೇಷಣರೂಪಾಭಿಃ ಶಕ್ತಿಭಿಃ ಸಹಾಂತರ್ಹೃದಿ ನಿವೇಶಿತಂ ಸ್ವೇಚ್ಛಯಾ ಸನ್ನಿವಿಷ್ಟಂ ಗೂಢಂ ಬಾಹ್ಯೈಃ ಕರಣೈರಗ್ರಾಹ್ಯಂ । ಪಾಂಚದಶ್ಯಂ ಪಂಚದಶೀಯ ಕರ್ಮಸಂಬಂಧಿನಂ । ದರ್ಶಪೂರ್ಣಮಾಸಾನುಷ್ಠಾನಂ ಹಿ ಪಂಚದಶ್ಯುಪಕ್ರಮಮಗ್ನ್ಯಾಧಾನಮಪೀತಿ ವೈದಿಕೋಽಗ್ನಿಃ ಪಾಂಚದಶ್ಯ ಇತ್ಯುಚ್ಯತೇ । —ವೀರರಾಘವಃ

ಭಗವತ್ಪ್ರಸಾದವ್ಯಾಖ್ಯಾನದಲ್ಲಿ ಶ್ರೀಧರವ್ಯಾಖ್ಯಾನದಂತೆಯೇ ನವಶಕ್ತಿಗಳನ್ನು ಹೇಳಿ ಜೊತೆಗೆ ವಿಮಲಾದಿ ನವಶಕ್ತಿಪಕ್ಷವನ್ನೂ ಒಪ್ಪಿದೆ. ಗಿರಿಧರವ್ಯಾಖ್ಯಾನದಲ್ಲಿ ಪ್ರಕೃತಿ ಮಹದ್ ಅಹಂಕಾರ ಮನಸ್ ಪಂಚತನ್ಮಾತ್ರಗಳೆಂದು ಸ್ವಲ್ಪ ವ್ಯತ್ಯಾಸ ಮಾಡಿ ಹೇಳಿದೆ. ಪುರುಷನನ್ನು ಬಿಟ್ಟು ಮನಸ್ಸನ್ನು ಸೇರಿಸಿಕೊಂಡು ನವಶಕ್ತಿಗಳನ್ನು ಹೇಳಿದ್ದಾರೆ. ಆದರೂ ಪ್ರಕೃತ್ಯಾದಿಗಳಿಂದ ಪರಮಾತ್ಮ ಆವೃತನಾಗುತ್ತಾನೆ ಎಂದು ಇವರೂ ಹೇಳುತ್ತಾರೆ, ಅದು ಸಮಂಜಸವಾಗುವುದಿಲ್ಲ.

ಅದರಿಂದ ತಂತ್ರನಿರ್ಣಯದಲ್ಲಿ ಹೇಳಿದಂತೆ ಭಾಗವತಶ್ಲೋಕಕ್ಕೆ ಹೀಗೆ ವ್ಯಾಖ್ಯಾನ ಮಾಡಬೇಕು–

ಇಚ್ಛಾದಿರೂಪೇಣ ತ್ರಿವೃದ್ಭಿಃ ।

ಇಚ್ಛಾದಿತ್ವೇನ ತ್ರಿವಿಧಾ ವಿಮಲಾದ್ಯಾಸ್ತು ಶಕ್ತಯಃ ।
ವಿಷ್ಣೋಃ ಸ್ವರೂಪಭೂತಾ ಯಾಃ ತಾಭ್ಯಸ್ತನ್ನಾಮಿಕಾಃ ಪರಾಃ ॥

ಜಾಯಂತೇ ತತ್ಪ್ರಸಾದೇನ ತಾಶ್ಚ ಪೀಠೇಽಭಿಪೂಜಯೇತ್ ।
ತದ್ಭಿನ್ನಜೀವಾಸ್ತಸ್ಯೈವ ಪ್ರಸಾದಾತ್ ತತ್ಸಮೀಪಗಾಃ ॥

ಇತಿ ತಂತ್ರನಿರ್ಣಯೇ ।

ದಶೇಂದ್ರಿಯಾಣಿ ಚ ಮನೋಬುದ್ಧಿಪ್ರಾಣಪ್ರಧಾನಕಾಃ ।
ಚತುರ್ದಶೈಷಾಂ ಪರಮಃ ಪಾಂಚದಶ್ಯೋ ಹರಿಃ ಸ್ಮೃತಃ ।
ಬುದ್ಧೇರ್ಭೇದೇನ ವೈತೇಷು ಪಾಂಚದಶ್ಯೋಽಥ ಸಂಸ್ಥಿತೇಃ ।

ಇತಿ ಚ ।

'ತ್ರಿವೃದ್ಭಿಃ ನವಶಕ್ತಿಭಿಃ' ಎಂದರೆ ಇಚ್ಛಾಜ್ಞಾನಕ್ರಿಯಾ ಎಂದು ಮೂರು ರೂಪಗಳಿಂದ ಇರುವ ನವಶಕ್ತಿಗಳಿಂದ ಯುಕ್ತನಾಗಿದ್ದಾನೆ ಪರಮಾತ್ಮ ಎಂದರ್ಥ.

ವಿಮಲಾ ಉತ್ಕರ್ಷಿಣೀ ಜ್ಞಾನಾ ಕ್ರಿಯಾ ಯೋಗಾ ಪ್ರಹ್ವೀ ಸತ್ಯಾ ಈಶಾನಾ ಅನುಗ್ರಹಾ ಎಂಬ ನವಶಕ್ತಿಗಳು ಇಚ್ಛಾವಿಮಲಾ, ಜ್ಞಾನವಿಮಲಾ, ಕ್ರಿಯಾವಿಮಲಾ ಎಂದು ಮುಂತಾಗಿ ಮೂರು ಮೂರು ಬಗೆಯವರಾಗಿದ್ದು ವಿಷ್ಣುವಿನ ಸ್ವರೂಪಭೂತರಾಗಿದ್ದಾರೆ. ಅವರಿಂದ ಅವರ ಅಧಿಷ್ಠಾನಭೂತರಾಗಿ ಅವರ ಹೆಸರನ್ನೇ ಹೊಂದಿರುವ ಬೇರೆ ಜೀವರೂ ಹುಟ್ಟುತ್ತಾರೆ, ವಿಷ್ಣುವಿನ ಅನುಗ್ರಹದಿಂದ. ಅವರನ್ನು ಕೂಡ ವಿಷ್ಣುವಿನ ಪೀಠದಲ್ಲಿ ಸ್ವರೂಪಭೂತಶಕ್ತಿಗಳೊಂದಿಗೆ ಪೂಜಿಸಬೇಕು. ಏಕೆಂದರೆ ಅವರು ವಿಷ್ಣುವಿನ ಅನುಗ್ರಹದಿಂದಲೇ ಅವನ ಸಮೀಪದಲ್ಲಿ ಪೀಠದಲ್ಲಿ ಇರುತ್ತಾರೆ ಎಂದು ತಂತ್ರನಿರ್ಣಯದಲ್ಲಿ ಉಕ್ತವಾಗಿದೆ.

ದಶ ಇಂದ್ರಿಯಗಳು ಮನಸ್ಸು ಬುದ್ಧಿ ಮಹತ್ತತ್ತ್ವ ಅವ್ಯಕ್ತ ಎಂದು ಹದಿನಾಲ್ಕು ತತ್ತ್ವಗಳಿವೆ. ಅವುಗಳಿಂದ ಉತ್ತಮನಾದ ಹರಿ ಹದಿನೈದನೆಯವನಾಗಿ ಪಾಂಚದಶ್ಯನೆನಿಸುತ್ತಾನೆ. ಅಥವಾ ಮನಸ್ಸು ಬುದ್ಧಿ ಅಹಂಕಾರ ಚಿತ್ತ ಚೇತನಾ ಎಂದು ಐದು ಮನಸ್ಸಿನ ಪ್ರಭೇದಗಳೊಂದಿಗೆ ದಶ ಇಂದ್ರಿಯಗಳು ಒಟ್ಟು ಹದಿನೈದು. ಅವುಗಳಲ್ಲಿ ನಿಯಾಮಕನಾಗಿ ನೆಲೆಸಿರುವುದರಿಂದ ಹರಿ ಪಾಂಚದಶ್ಯನೆನಿಸುತ್ತಾನೆ ಎಂದೂ ತಂತ್ರನಿರ್ಣಯದಲ್ಲಿ ಉಕ್ತವಾಗಿದೆ.

ಜ್ಞಾನ ಇಚ್ಛಾ ಕೃತಿಗಳು ಜೀವರಲ್ಲಿ ಕ್ರಮವಾಗಿ ಹುಟ್ಟುವುದರಿಂದ ಅವುಗಳಿಗೆ ನಿಯಾಮಕನಾದ ವಿಷ್ಣುವಿನ ರೂಪಗಳೂ ಜ್ಞಾನಾದಿಗಳೆನ್ನಬೇಕು. ಇಚ್ಛಾದಿಗಳೆಂದು ತಂತ್ರನಿರ್ಣಯದಲ್ಲಿ ಹೇಳಿದೆ. ಇದು ಜ್ಞಾನೇಚ್ಛಾಕೃತಿಗಳೆಂಬ ಭಗವದ್ರೂಪಗಳಿಗೆ ಪರಸ್ಪರ ಭೇದವಿಲ್ಲ ಎಂಬುದನ್ನು ತಿಳಿಸುವುದಕ್ಕಾಗಿ.

ದಶ ಇಂದ್ರಿಯ ಮುಂತಾದವುಗಳು ಒಟ್ಟು ಹದಿನಾಲ್ಕು. ಅವುಗಳಿಗೆ ನಿಯಾಮಕನಾಗಿ ಹದಿನೈದನೆಯವನು ವಿಷ್ಣು. ಅದರಿಂದ ಪಂಚದಶಶಬ್ದದ ಮೇಲೆ ಪೂರ್ಣಾರ್ಥಕವಾದ ಡಟ್ ಪ್ರತ್ಯಯ ಬರಬೇಕಾಗಿತ್ತು. ಆದರೆ ವ್ಯತ್ಯಾಸದಿಂದ ಷ್ಯಞ್ ಪ್ರತ್ಯಯ ಬಂದಿದೆ. ಅದರಿಂದ 'ವ್ಯತ್ಯಯೋಽತಿಶಯಕುತ್ಸನಾಭೇದೇಷು' ಎಂಬ ಮಹಾವ್ಯಾಕರಣ ಸೂತ್ರದಂತೆ ಅತಿಶಯವನ್ನು ದ್ಯೋತನ ಮಾಡುತ್ತದೆ ಹೀಗಾಗಿ ಇಂದ್ರಿಯಾದಿ ನಿಯಾಮಕತ್ವರೂಪವಾದ ಅತಿಶಯವನ್ನು ಪಾಂಚದಶ್ಯಶಬ್ದ ಹೇಳುತ್ತಿದೆ. ಪಂಚದಶಸಂಖ್ಯಾಪೂರಕನೂ ಉತ್ತಮನೂ ಆಗಿದ್ದಾನೆ ಎನ್ನುವುದು ಪಾಂಚದಶ್ಯ ಶಬ್ದದ ಅರ್ಥ. ಎರಡನೆ ಪಕ್ಷದಲ್ಲಿ ಪಂಚದಶಗಳಲ್ಲಿ ನಿಯಾಮಕನಾಗಿ ಇರುವವನು ಪಾಂಚದಶ್ಯ. ಭವ ಅಂದರೆ ಸ್ಥಿತ ಎಂಬ ಅರ್ಥದಲ್ಲಿ ಷ್ಯಞ್ ಪ್ರತ್ಯಯ. ಹೀಗೆ ಪರಮಾತ್ಮನ ಮಹಿಮೆಯನ್ನು ಹೇಳುವುದರಿಂದ ಪಾಂಚದಶ್ಯಶಬ್ದ ಸಾರ್ಥಕ. ನವಶಕ್ತಿಗಳೂ ತಂತ್ರನಿರ್ಣಯೋಕ್ತವಾಗಿರುವುದರಿಂದ ಬೇರೆ ಕಲ್ಪನೆ ಮಾಡುವ ಪ್ರಸಂಗವೂ ಇಲ್ಲ.

* * *

ದಕ್ಷ ಪ್ರಜಾಪತಿಯು ಮಾಡಿದ ಹಂಸಗುಹ್ಯಸ್ತೋತ್ರದಲ್ಲಿ ಆರನೇ ಪದ್ಯ.

ಸ ವೈ ಮಮಾಶೇಷವಿಶೇಷಮಾಯಾ-
ನಿಷೇಧನಿರ್ವಾಣಸುಖಾನುಭೂತಿಃ ।
ಸ ಸರ್ವನಾಮಾ ಸ ಚ ವಿಶ್ವರೂಪಃ
ಪ್ರಸೀದತಾಮನಿರುಕ್ತಾತ್ಮಶಕ್ತಿಃ ॥ ೨೮ ॥

ದುಃಖಿಜೀವರ ಹೃದಯದಲ್ಲಿ ನೆಲೆಸಿದ್ದರೂ ಹರಿ ಅವರ ದುಃಖದಿಂದ ಲೇಪ ಹೊಂದುವುದಿಲ್ಲ. ಏಕೆಂದರೆ ಅವನ ಸ್ವರೂಪಭೂತವಾದ ಶಕ್ತಿ ವೇದಗಳಿಗೂ ಪೂರ್ತಿ ವರ್ಣಿಸಲಾಗದಷ್ಟು ಅಪರಿಮಿತವಾಗಿದೆ. ಅವನ ಯಾವ ಗುಣಗಳಲ್ಲಿಯೂ ಪರಿಮಿತಿ ಇಲ್ಲ. ಪ್ರಕೃತಿಸಂಬಂಧವಿಲ್ಲ. ಮತ್ತು ಅವನು ನಿತ್ಯ ಅಪ್ರಾಕೃತ ಆನಂದಾನುಭವ ಸ್ವರೂಪನಾಗಿದ್ದಾನೆ. ಎಲ್ಲ ಶಬ್ದಗಳೂ ಮುಖ್ಯವಾಗಿ ಅವನ ಗುಣಗಳನ್ನೇ ಹೇಳುವುದರಿಂದ ಎಲ್ಲ ಗುಣಗಳೂ ಅವನಲ್ಲಿರುತ್ತವೆ. ಬ್ರಹ್ಮಾದಿಸಮಸ್ತ ವಿಶ್ವವೂ ಅವನ ಪ್ರತಿಬಿಂಬಮಾತ್ರವಾಗಿದೆ. ಇಂಥ ಪರಮಾತ್ಮ ನನ್ನಲ್ಲಿ ಪ್ರಸನ್ನನಾಗಲಿ.

[1]ಇಲ್ಲಿ ಶ್ರೀಧರ ಮುಂತಾದವರ ವ್ಯಾಖ್ಯಾನ ಹೀಗೆ ಹೇಳುತ್ತದೆ. –'ಪರಬ್ರಹ್ಮನಲ್ಲಿ ನಾಮರೂಪಾತ್ಮಕವಾದ ಎಲ್ಲ ಪ್ರಪಂಚವೂ ಇದೆ. ಅವನು ಸರ್ವನಾಮ, ಸರ್ವರೂಪ. ಆದರೆ ಅನಿರುಕ್ತವಾದ ಅಂದರೆ ಅನಿರ್ವಚನೀಯವಾದ, ವಾಸ್ತವವಲ್ಲದ ಮಾಯಾಶಕ್ತಿಉಳ್ಳವನು ಆತ. ಅದರಿಂದ ಎಲ್ಲ ವಿಶೇಷಗಳನ್ನು ಅಂದರೆ ಭೇದಪ್ರಪಂಚವನ್ನು ತೋರುವ ಆ ಮಾಯೆಯನ್ನು ನಿಷೇಧ ಮಾಡಿದರೆ ಸಮಾಧಿಸುಖ ಅನುಭವಿಸಿದರೆ ಜ್ಞಾನಿಗೆ ಜೀವನ್ಮುಕ್ತ್ಯವಸ್ಥೆಯಲ್ಲಿ ಪರಮಾತ್ಮನ ಅನುಭವವಾಗುತ್ತದೆ' ಎಂದು.

ಆದರೆ ಇದು ಪೂರ್ತಿಯಾಗಿ ಅದ್ವೈತವಾಗುವುದಿಲ್ಲ. ಏಕೆಂದರೆ ಅದ್ವೈತೋಪಾಸನೆ ಮಾಡಿ ನಾಮರೂಪಾತ್ಮಕಪ್ರಪಂಚವನ್ನು 'ನಾಸ್ತಿ ನಾಸೀನ್ನ ಭವಿಷ್ಯತಿ' ಎಂದು ನಿಷೇಧ ಮಾಡಿದ ಜ್ಞಾನಿಗೆ ಅಜ್ಞಾನದ ಸಂಸ್ಕಾರಮಾತ್ರವಿರುತ್ತದೆ. ಅದರಿಂದ ಭಿಕ್ಷಾಟನಾದಿ ಪ್ರವೃತ್ತಿಗಾಗಿ ದ್ವೈತಪ್ರಪಂಚ ಕಾಣುತ್ತದೆ. ಇದು ಸಮಾಧಿಯಿಂದ ಈಚೆಗೆ ಬಂದಾಗ. ಸಮಾಧಿಯಲ್ಲಿ ಅಖಂಡನಿರ್ಗುಣಬ್ರಹ್ಮ ಮಾತ್ರ ಕಾಣಿಸುತ್ತದೆ. ಹೊರತು ದಕ್ಷಪ್ರಜಾಪತಿ ಸ್ತುತಿಸುತ್ತಿರುವ ಸಗುಣ ಪರಮಾತ್ಮ ಕಾಣುವುದಿಲ್ಲ. ಅದರಿಂದ ಜೀವನ್ಮುಕ್ತನಾದ ಜ್ಞಾನಿಗೆ ಸಮಾಧಿಯಲ್ಲಿ ನೀನು

---

೧. ಅಶೇಷಾ ವಿಶೇಷಾ ಯಸ್ಯಾಸ್ತಸ್ಯಾ ಮಾಯಾಯಾ ನಿಷೇಧೇನ ನಿರ್ವಾಣಸುಖೇ ಸಮಾಧಿಸುಖೇಽನುಭೂತಿರ್ಯಸ್ಯ । ಅಪ್ರಸಕ್ತನಿಷೇಧಾಸಂಭವಾತ್ ಪ್ರಸಕ್ತಿಮಾಹ ಸ ಏವ ಸರ್ವ ಸರ್ವನಾಮಾ ಸ ಏವ ಚ ವಿಶ್ವರೂಪ ಇತಿ । ತದ್ರೂಪತ್ವೇಽಪಿ ವಾಸ್ತವತ್ವಾಭಾವಾತ್ ನಿಷೇಧಃ ಸಂಭವತೀತ್ಯಾಹ ಅನಿರುಕ್ತಾಽಽತ್ಮನಿ ಶಕ್ತಿರ್ಮಾಯಾ ಯಸ್ಯ ಸಃ । –ಶ್ರೀಧರಃ

ಅಶೇಷಾಃ ಸಮಗ್ರಾಃ । ವಿಶೇಷಾ ಭೇದಾಃ । ನಿರ್ವಾಣಸುಖೇ ಮೋಕ್ಷಸುಖೇ ಜೀವನ್ಮುಕ್ತ್ಯವಸ್ಥಾಯಾಮಿತಿ ಯಾವತ್ । ತದ್ರೂಪತ್ವೇಽಪಿ ಸರ್ವರೂಪತ್ವೇಽಪಿ । ಅನಿರುಕ್ತಾಽನಿರ್ವಚನೀಯಾ । –ವಂಶೀಧರಃ ।

ಅನುಭವಗೋಚರನಾಗುವಿ ಎನ್ನುವುದು ವಿರುದ್ಧವಾಗುತ್ತದೆ. ಮತ್ತು 'ನಿಷೇಧೇನ' ಪ್ರಪಂಚ ನಿಷೇಧದಿಂದ ಸಗುಣನ ಅನುಭವ ಎನ್ನಬಾರದು. ನಿಷೇಧ ಮಾಡಿದರೂ ಅವಿದ್ಯೆಯ ಸಂಸ್ಕಾರದ ಬಲದಿಂದ ಸಗುಣ ಕಾಣಿಸಬೇಕು. ನಿಷೇಧ ಮಾಡದಿದ್ದರೂ ಸಗುಣೋಪಾಸಕನಿಗೆ ಸಗುಣನು ಸಮಾಧಿಯಲ್ಲಿ ಕಾಣಿಸುವುದರಿಂದ 'ಅಶೇಷವಿಶೇಷಮಾಯಾನಿಷೇಧ'ಎಂಬ ಅಂಶ ಪೂರ್ತಿಯಾಗಿ ವ್ಯರ್ಥವೆನಿಸುತ್ತದೆ.

[೧]ಗಿರಿಧರವ್ಯಾಖ್ಯಾನದಲ್ಲಿ 'ಪರಮಾತ್ಮನಿಗೂ ಪ್ರಪಂಚಕ್ಕೂ ಭೇದವಿಲ್ಲ. ಅವನು ಸರ್ವನಾಮ ಸರ್ವರೂಪ. ಸಚ್ಚಿದಾನಂದರೂಪನಿಗೆ ನಶ್ವರ ಜಡರೂಪತ್ವ ಹೇಗೆ ಎಂದರೆ ಅನಿರುಕ್ತ, ಅಚಿಂತ್ಯವಾದ ಆತ್ಮಶಕ್ತಿಯಿಂದ ಅದು ಕೂಡುತ್ತದೆ. ಅದರಿಂದ ನೇತಿನೇತಿ ಎಂದು ನಿಷೇಧ ಮಾಡಿ ವಿವೇಕದಿಂದ ಎಲ್ಲ ಪ್ರಪಂಚವನ್ನು ತ್ಯಾಗ ಮಾಡಿದಾಗ ಅವನ ನಿರ್ವಾಣಸುಖದ ಅನುಭವವಾಗುತ್ತದೆ. ನಿರ್ವಾಣ ಎಂದರೆ ನಾಶರಹಿತ, ತ್ರಿಕಾಲಾಬಾಧಿತ' ಎಂದು ಹೇಳುತ್ತಾರೆ. ಇದು ಸ್ವವ್ಯಾಹತ. ಅಚಿಂತ್ಯಶಕ್ತಿಯಿಂದ ಜಡಪ್ರಪಂಚವಾಗಿರುವ ಪರಮಾತ್ಮನನ್ನು 'ನೇತಿ ನೇತಿ' 'ಆತ ಪ್ರಪಂಚರೂಪನಲ್ಲ' ಎಂದು ಹೇಗೆ ಉಪಾಸನೆ ಮಾಡಲು ಶಕ್ಯ? ಹಾಗೆ ಉಪಾಸನೆ ಮಾಡಿದರೆ ಅದು ವಿವೇಕವಾಗುವುದಿಲ್ಲ ತಾನೆ? ಎಲ್ಲವೂ ಅಚಿಂತ್ಯವೆನ್ನಲು ಪ್ರಮಾಣವಿಲ್ಲ.

ಲೋಕದಲ್ಲಿ ವಿರುದ್ಧವಾಗಿ ಕಾಣುವ ಅಣುತ್ವಮಹತ್ವಾದಿಗುಣಗಳನ್ನು ಪರಮಾತ್ಮನಲ್ಲಿ ಅಚಿಂತ್ಯಶಕ್ತಿ ಒಪ್ಪಿ ಕೂಡಿಸಬೇಕು ಹೊರತು ದೋಷಗಳನ್ನು ಕೂಡಿಸಬಾರದು. ದೋಷಗಳನ್ನು ಕೂಡಿಸಿದರೆ ಅದು ಶಕ್ತಿಯಾಗಲಾರದು. ಅಶಕ್ತಿಯೇ ಆಗುವುದು. ದುಃಖರೂಪವಾದ ಪ್ರಪಂಚದ ಅಭೇದ ಪರಮಾತ್ಮನಲ್ಲಿ ದೋಷವಾಗುವುದು.

---

೧. ಅಶೇಷಾ ವಿಶೇಷಾ ಯಸ್ಯಾಸ್ತಸ್ಯಾ ಮಾಯಾಯಾಃ ಕಾರ್ಯಕಾರಣಾತ್ಮಕ ಪ್ರಪಂಚರೂಪಾಯಾಃ ಪ್ರಕೃತೇಃ ನೇತಿನೇತಿನಿಷೇಧೇ ವಿವೇಕೇನ ತ್ಯಾಗೇ ಸತಿ ನಿರ್ವಾಣಸುಖಾನುಭೂತಿರ್ಯಸ್ಯ ಸ ವೈ ಸ ಏವ ಮಮ ಪ್ರಸೀದತಾಮಿತ್ಯನ್ವಯಃ। ಬಾಣೋ ನಾಶಕಃ ಕಾಲಾದಿಃ । ಸ ನಿರ್ಗತೋ ಯಸ್ಮಾತ್ ಸ ನಿರ್ವಾಣ ಇತಿ ತ್ರಿಕಾಲಾಬಾಧ್ಯಸತ್ತಾರೂಪತೋಕ್ತಾ । ಸುಖಶಬ್ದೇನ ಪರಮಾನಂದರೂಪತ್ವಮುಕ್ತಂ । ಅನುಭೂತಿಪದೇನ ಚೇತನತ್ವಮುಕ್ತಮ್ । ನನು ತರ್ಹಿ ಸಚ್ಚಿದಾನಂದಾತ್ಮಕಸ್ಯ ಭಗವತಃ ಪ್ರಪಂಚಾದ್ ಭಿನ್ನತ್ವೇ ದ್ವೈತಾಪತ್ತಿಃ ಸ್ಯಾದಿತ್ಯಾಶಂಕ್ಯಾಹ ಸ ಇತಿ । ಸರ್ವಾಣಿ ನಾಮಾನಿ ಯಸ್ಯ ಸ ಸರ್ವನಾಮಾ । ವಿಶ್ವಾನಿ ಸರ್ವಾಣಿ ರೂಪಾಣಿ ಯಸ್ಯ ಸ ವಿಶ್ವರೂಪಶ್ಚ । ನನು ಕಥಂ ಸಚ್ಚಿದಾನಂದರೂಪಸ್ಯ ನಶ್ವರಜಡಪ್ರಪಂಚರೂಪತಾ ಸಂಭವತೀತ್ಯಾಶಂಕ್ಯಾಹ ಅನಿರುಕ್ತಾತ್ಮಶಕ್ತಿರಿತಿ । ಅನಿರುಕ್ತಾ ನಿರ್ವಚನಾನರ್ಹಾ ಆತ್ಮನಿ ಶಕ್ತಿರ್ಯಸ್ಯ ಸ ಇತ್ಯರ್ಥಃ । ಅಚಿಂತ್ಯಶಕ್ತ್ಯಾ ಸರ್ವಂ ಘಟತ ಇತಿ ಭಾವಃ । —ಗಿರಿಧರಃ

ಅದರಿಂದ 'ವಿಶೇಷ ಮಾಯೆ ಸರ್ವನಾಮ ಸರ್ವರೂಪ'ಶಬ್ದಗಳಿಗೆ ತಂತ್ರನಿರ್ಣಯಾನುಸಾರ ವ್ಯಾಖ್ಯಾನ ಮಾಡುವುದೇ ಸೂಕ್ತ.

ಇಯತ್ತಾ ತು ವಿಶೇಷಃ ಸ್ಯಾದಾನಂದಾದೌ ತದುಜ್ಝಿತೇಃ ।
ಸರ್ವೈರ್ವಿಶೇಷೈ ರಹಿತ ಉಚ್ಯತೇ ಹರಿರವ್ಯಯಃ ।
ಅಪ್ರಾಕೃತಸ್ವರೂಪತ್ವಾನ್ನಿರ್ಮಾಯಶ್ಚೇತಿ ಕಥ್ಯತೇ ॥ ಇತಿ ಚ ।

ತದ್ರೂಪಸದೃಶಂ ರೂಪಂ ಯತಃ ಸರ್ವಸ್ಯ ಸರ್ವದಾ ।
ಸರ್ವರೂಪೋ ಯತಃ ಶಬ್ದಮುಖ್ಯಾರ್ಥಃ ಸರ್ವನಾಮಕಃ ॥
ಇತಿ ಚ ।

ಹರಿಯ ಆನಂದಾದಿಗುಣಗಳಲ್ಲಿ ಪರಿಮಿತಿ ಇಲ್ಲ. ಪರಿಮಿತಿಯೇ ವಿಶೇಷವೆನಿಸುತ್ತದೆ. ಪರಿಮಿತಿ ಇಲ್ಲದಿರುವುದರಿಂದ ಸರ್ವವಿಶೇಷಗಳಿಂದ ರಹಿತನೆನಿಸುತ್ತಾನೆ. ಅಪ್ರಾಕೃತಸ್ವರೂಪನಾದ್ದರಿಂದ ಅವನಲ್ಲಿ ಮಾಯೆಯನ್ನೂ ನಿಷೇಧ ಮಾಡಬಹುದು ಎಂದು ತಂತ್ರನಿರ್ಣಯವಚನವಿದೆ.

ಎಲ್ಲಕ್ಕೂ ಎಲ್ಲಕಾಲದಲ್ಲಿಯೂ ಹರಿಯ ರೂಪಕ್ಕೆ ಕಿಂಚಿತ್ ಸದೃಶವಾದ ರೂಪವೇ ಇರುವುದರಿಂದ ಅವನು ಸರ್ವರೂಪನೆನಿಸುತ್ತಾನೆ. ಎಲ್ಲ ಶಬ್ದಗಳಿಗೂ ಮುಖ್ಯಾರ್ಥ ಅವನೇ ಆದುದರಿಂದ ಅವನೆ ಸರ್ವನಾಮನೂ ಎನಿಸುತ್ತಾನೆ ಎಂದೂ ತಂತ್ರನಿರ್ಣಯ ವಚನವಿದೆ.

* * *

ದಕ್ಷಪ್ರಜಾಪತಿಯು ಮಾಡಿದ ಹಂಸಗುಹ್ಯಸ್ತೋತ್ರದಲ್ಲಿ ಏಳನೇ ಪದ್ಯ.

ಯದ್ಯನ್ನಿರುಕ್ತಂ ವಚಸಾ ನಿರೂಪಿತಂ
ಧಿಯಾಽಕ್ಷಭಿರ್ವಾ ಮನಸಾ ವೋತ ಯಸ್ಯ ।
ಮಾ ಭೂತ್ ಸ್ವರೂಪಂ ಗುಣರೂಪಬೃಂಹಿತಂ
ಸ ವೈ ಗುಣಾಪಾಯನಿಸರ್ಗಲಕ್ಷಣಃ ॥ ೨೯ ॥

ನಾವು ಮಾತಿನಿಂದ ಲೋಕದಲ್ಲಿ ಏನೇನು ಹೇಳುತ್ತೇವೋ, ಬುದ್ಧಿಯಿಂದ ಇಂದ್ರಿಯಗಳಿಂದ ಅಥವಾ ಮನಸಿನಿಂದ ಏನೇನು ತಿಳಿಯುತ್ತೇವೋ, ಅವಾವುವೂ ಪರಮಾತ್ಮನ ಸ್ವರೂಪವಲ್ಲ. ಲೌಕಿಕಪ್ರಮಾಣಗಳಿಗೆ ಅವನು ಗೋಚರನಲ್ಲ. ಅದರಿಂದ ಲೌಕಿಕವಸ್ತುಗಳಿಗಿಂತ ಆತ ಭಿನ್ನನಾಗಿದ್ದಾನೆ. ಮತ್ತು ಲೌಕಿಕ ವಸ್ತುಗಳೆಲ್ಲವೂ ಪ್ರಕೃತಿಯ ಗುಣಗಳಿಂದ ಆಕಾರ ಪಡೆದು ಬೆಳೆದಿರುತ್ತವೆ. ಗುಣಬದ್ಧವಾಗಿವೆ. ಆತ ತ್ರಿಗುಣರಾಹಿತ್ಯವೆಂಬ ಸ್ವಾಭಾವಿಕಲಕ್ಷಣ ಉಳ್ಳವನು.

[1]ಇಲ್ಲಿ ಶ್ರೀಧರೀಯದಲ್ಲಿ 'ಪರಮಾತ್ಮ ಗುಣವ್ಯತಿರಿಕ್ತನಾದ್ದರಿಂದ ಅವಾಚ್ಯನೂ ಅಜ್ಞೇಯನೂ ಆಗಿದ್ದಾನೆ' ಎಂದಿದೆ. ಪೂರ್ವಶ್ಲೋಕದಲ್ಲಿ ಸರ್ವನಾಮ ಸರ್ವರೂಪ ಎಂದಿರುವುದರಿಂದ ಪೂರ್ವಾಪರವಿರೋಧ ಸ್ಪಷ್ಟ. ವಸ್ತುತಃ ಅವಾಚ್ಯ ಅಜ್ಞೇಯನಾದರೂ ಮಾಯಾಬಲದಿಂದ ಸರ್ವನಾಮ ಸರ್ವರೂಪನೂ ಆಗಿದ್ದಾನೆ ಎಂದು ವಿರೋಧಪರಿಹಾರ ಮಾಡುತ್ತಾರೆ. ಆದರೆ ಹಿಂದಿನ ಶ್ಲೋಕದಲ್ಲಿ ಮಾಯೆಯನ್ನು ನಿಷೇಧ ಮಾಡಿದ್ದಾರೆ.

[2]ವೀರರಾಘವವ್ಯಾಖ್ಯಾನದಲ್ಲಿ 'ಮಾತಿನಿಂದ ಹೇಳುವುದು ಬುದ್ಧಿಯಿಂದ ತಿಳಿಯುವುದು ಯಾವುದೂ ಪರಮಾತ್ಮನ ಸ್ವರೂಪವಲ್ಲ, ಅವನ ಶರೀರ ಮಾತ್ರವಾಗಿದೆ.' ಎಂದಿದ್ದಾರೆ. ಆದರೆ ಪರಮಾತ್ಮ ಸರ್ವಶಬ್ದವಾಚ್ಯ ಬುದ್ಧಿಗಮ್ಯ ಎಂದು ಪೂರ್ವಶ್ಲೋಕಗಳಲ್ಲಿ ಹೇಳಿ ಈ ಶ್ಲೋಕದಲ್ಲಿ 'ಮಾತಿನಿಂದ ಹೇಳುವುದು ಬುದ್ಧಿಯಿಂದ ತಿಳಿಯುವುದು ಯಾವುದೂ ಪರಮಾತ್ಮಸ್ವರೂಪವಲ್ಲ ಎನ್ನುವುದು ವ್ಯಾಹತ. ಶಬ್ದವಾಚ್ಯ ಬುದ್ಧಿಗಮ್ಯವಾದುದು ಎಲ್ಲವೂ ಪರಮಾತ್ಮನ ಶರೀರವೆಂದರೆ ಪರಮಾತ್ಮನೂ ಪರಮಾತ್ಮನ ಶರೀರವೆಂದಂತಾಗುವುದರಿಂದ ಪುನಃ ವ್ಯಾಹತಿ.

[3]ವಿಶ್ವನಾಥವ್ಯಾಖ್ಯಾನದಲ್ಲಿ ಶಬ್ದ ಬುದ್ಧಿ ಮುಂತಾದುವೆಲ್ಲವೂ ಮಾಯಿಕವಾಗಿವೆ. ಆದರಿಂದ ಹೇಳುವುದು ತಿಳಿಯುವುದು ಎಲ್ಲವೂ ಮಾಯಿಕವೇ ಆಗಿರಬೇಕು. ಹೀಗಾಗಿ ಪರಮಾತ್ಮ ಅಮಾಯಿಕನಾದ್ದರಿಂದ ಮಾಯಿಕವಾದ ಶಬ್ದಬುದ್ಧಿಗಳಿಗೆ ಗೋಚರನಾಗುವುದಿಲ್ಲ ಎಂದಿದ್ದಾರೆ. ಇದೂ ಹಿಂದಿನ ಶ್ಲೋಕದಲ್ಲಿ ಹೇಳಿರುವ ಸರ್ವನಾಮ ಸರ್ವರೂಪತ್ವಗಳಿಗೆ ವಿರುದ್ಧವಾಗಿದೆ. ಮತ್ತು 'ಪ್ರಪಂಚದ ಸೃಷ್ಟಿಪ್ರಳಯಗಳೆಂಬ ಕಾರ್ಯಬಲದಿಂದ ಕಾರಣನಾದ ಪರಮಾತ್ಮನನ್ನು ಊಹಿಸಿ ತಿಳಿಯಬೇಕು. ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ, ಮನಸೈವಾನುದ್ರಷ್ಟವ್ಯಂ' ಎಂದು ಈ ಶ್ಲೋಕದಲ್ಲಿಯೇ ಹೇಳುತ್ತಾರೆ. ಅದರಿಂದ ಸ್ವವ್ಯಾಹತಿ. ಈಶ್ವರಾನುಗ್ರವಿಲ್ಲದಿದ್ದರೆ ಶಬ್ದಬುದ್ಧಿಗಳಿಗೆ ಈಶ್ವರ ಗೋಚರಿಸುವುದಿಲ್ಲ ಎಂದು ಸೇರಿಸಿ ವ್ಯಾಹತಿ ಪರಿಹಾರ ಮಾಡಿದ್ದಾರೆ. ಆದರೆ 'ಈಶ್ವರಾನುಗ್ರಹವಿಲ್ಲದಿದ್ದರೆ' ಎಂಬ ಅಂಶ ಶ್ಲೋಕದಲ್ಲಿ ಇಲ್ಲ.

---

೧. ಸರ್ವೈರ್ನಾಮಭಿರ್ವಾಚ್ಯಂ ಪ್ರತ್ಯಕ್ಷಾದಿದೃಶ್ಯಂ ಚ ತಸ್ಯ ಸ್ವರೂಪಂ ವಸ್ತುತೋ ಮಾ ಭೂತ್ ।ತಥಾಪಿ ಮಾಯಯಾ ಘಟತೇ । —ಶ್ರೀಧರಃ

೨. ಯದ್ಯಪಿ ಯಸ್ಯ ಸ್ವರೂಪಂ ಮಾ ಭೂನ್ನ ಭವತಿ ಕಿಂತು ಶರೀರಮೇವೇತಿ ಭಾವಃ । —ವೀರರಾಘವಃ

೩. ಪರಸ್ಸಹಸ್ರಶ್ರುತಿಸ್ಮೃತಿವಾಕ್ಯವಿರೋಧಾದೀಶ್ವರಾನನುಗೃಹೀತೈರೇವ ವಚಆದಿಭಿರಿತಿ ವ್ಯಾಖ್ಯೇಯಂ । —ವಿಶ್ವನಾಥಃ

ಮಾಯಿಕವಾದ ಪ್ರಮಾಣ ಮಾಯಿಕವಾದ ಪ್ರಮೇಯವನ್ನೇ ತಿಳಿಸಬಲ್ಲದು ಎನ್ನಲೂ ಪ್ರಮಾಣವಿಲ್ಲ. [೧]ಶುಕದೇವ ವ್ಯಾಖ್ಯಾನದಲ್ಲಿ ಶಬ್ದಬುದ್ಧಿಗಳಿಗೆ ಗೋಚರವಾದುದು ಯಾವುದೂ ಬ್ರಹ್ಮಸ್ವರೂಪವಲ್ಲ ಎಂದು ಹೇಳಿ 'ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ' ಎಂದು ಪ್ರಮಾಣವಿರೋಧ ಬಂದರೆ 'ಗುಣವರ್ಧಿತಂ' ಪ್ರಾಕೃತಗುಣಮಯವಾದ ಶಬ್ದಬುದ್ಧಿವೇದ್ಯವಾದ ಯಾವ ವಸ್ತುವೂ ಬ್ರಹ್ಮಸ್ವರೂಪವಲ್ಲ ಎಂದು ವಿಶೇಷಣವನ್ನು ಸೇರಿಸುವ ಅಭಿಪ್ರಾಯ ಶ್ಲೋಕಕ್ಕಿದೆ ಎನ್ನುತ್ತಾರೆ. ಆದರೆ ವಿಶೇಷಣ ಮಾತ್ರವೇ ಸಾಕು, ಉಳಿದುದು ವ್ಯರ್ಥವಾಗುತ್ತದೆ.

[೨]ಗಿರಿಧರವ್ಯಾಖ್ಯಾನದಲ್ಲಿ ಪರಮಾತ್ಮ ಸರ್ವಪ್ರಪಂಚರೂಪನಾದರೂ ಶಬ್ದಬುದ್ಧಿಗೋಚರವಾದುದು ಯಾವುದೂ ಮುಮುಕ್ಷುವಿಗೆ ಉಪಾಸ್ಯವಾದ ಪರಮಾತ್ಮ ಸ್ವರೂಪವಾಗುವುದಿಲ್ಲ. ಹಾಗಾದರೆ ಉಪಾಸನೆ ಹೇಗೆ ಎಂದರೆ ಪ್ರಪಂಚ ಸೃಷ್ಟಿಲಯಕಾರಣವಾದ ಪರಮಾತ್ಮಸ್ವರೂಪವನ್ನು ಅನುಮಾನದಿಂದ ತಿಳಿಯಬೇಕು ಎನ್ನುತ್ತಾರೆ. ಇದೂ ಸ್ವವ್ಯಾಹತ. ಉಪಾಸ್ಯಸ್ವರೂಪ ಶಬ್ದಬುದ್ಧಿಗಳಿಗೆ ಅಗೋಚರ ವೆಂದು ಹೇಳಿ ಅನುಮಾನಬುದ್ಧಿಗೆ ಗೋಚರವಾಗುತ್ತದೆ ಎನ್ನುವುದು 'ನನ್ನ ತಾಯಿ ಬಂಜೆ' ಎನ್ನುವಂತೆ ವಿರುದ್ಧವಾಗುತ್ತದೆ.

ಈ ಎಲ್ಲ ವ್ಯಾಖ್ಯಾನಕಾರರೂ 'ಗುಣಾಪಾಯನಿಸರ್ಗಲಕ್ಷಣಃ' 'ತ್ರಿಗುಣ ರಾಹಿತ್ಯವೆಂಬ ಸ್ವಾಭಾವಿಕ ಲಕ್ಷಣವುಳ್ಳವನು ಪರಮಾತ್ಮ' ಎನ್ನದೆ 'ಗುಣಾಪಾಯ ವಿಸರ್ಗಲಕ್ಷಣಃ' ಎಂದು ಅಪಪಾಠವಿಟ್ಟುಕೊಂಡು ತ್ರಿಗುಣಪ್ರಪಂಚದ ಲಯಸೃಷ್ಟಿ ಎಂಬ ಕಾರ್ಯದಿಂದ ಕಾರಣನಾದ ಪರಮಾತ್ಮನನ್ನು ಅನುಮಾನ ಮಾಡಬಹುದೆಂದು ವ್ಯಾಖ್ಯಾನಿಸಿದ್ದಾರೆ.

ಅದರಿಂದ ಪರಮಾತ್ಮನು ನಿರುಕ್ತನಾಗುವುದಿಲ್ಲ, ನಿರೂಪಿತನಾಗುವುದಿಲ್ಲ ಎನ್ನುವುದಕ್ಕೂ, ನಿರುಕ್ತನಾಗುತ್ತಾನೆ ನಿರೂಪಿತನಾಗುತ್ತಾನೆ ಎನ್ನುವುದಕ್ಕೂ, ಪರಸ್ಪರ ವಿರೋಧಬಾರದಂತೆ ಜ್ಞಾನಿವ್ಯವಹಾರಾನುಗುಣವಾಗಿ ವ್ಯೋಮಸಂಹಿತೆಯಲ್ಲಿ ಹೇಳಿದಂತೆ ಭಾಗವತಶ್ಲೋಕಕ್ಕೆ ವ್ಯಾಖ್ಯಾನ ಮಾಡಬೇಕು.

---

೧. ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಇತ್ಯಾದಿಷು ಬುದ್ಧ್ಯಾದಿಷು ವಿಷಯೀಕೃತಸ್ಯ ಸ್ವರೂಪಸ್ಯ ವ್ಯಾವೃತ್ತ್ಯರ್ಥಮಾಹ ಗುಣವರ್ಧಿತಂ ಪ್ರಕೃತಿಗುಣಮಯಮಿತ್ಯರ್ಥಃ । –ಶುಕದೇವಃ

೨. ಯಸ್ಯ ಸಚ್ಚಿದಾನಂದಾತ್ಮಕಸ್ಯ ಭಗವತ ಉಪಾಸ್ಯಂ ಮೋಕ್ಷಪ್ರದಂ ಸ್ವರೂಪಂ ಮಾ ಭೂತ್ ನ ಭವತಿ । ನನು ಸಂಸಾರಾವಸ್ಥಾಯಾಂ ಸಚ್ಚಿದಾನಂದ ವಿಗ್ರಹಸ್ಯ ಭಗವತೋಽನುಭವಾಭಾವಾತ್ ಕಥಂ ತತ್ಸಿದ್ಧಿರಿತ್ಯಾಶಂಕ್ಯಾಹ ಸ ವಾ ಇತಿ । ಗುಣಸ್ಯ ಗುಣಕಾರ್ಯಸ್ಯ ವಿಶ್ವಸ್ಯಾಪಾಯವಿಸರ್ಗಾಭ್ಯಾಂ ಪ್ರಳಯೋತ್ಪತ್ತಿಭ್ಯಾಂ ತತ್ಕಾರಣತಯಾ ಲಕ್ಷ್ಯತೇಽನುಮೀಯತೇ ಇತಿ ತಥಾ ಸಃ । –ಗಿರಿಧರಃ

ಅಲೌಕಿಕತ್ವಾನ್ನೋ ವಿಷ್ಣುರ್ನಿರುಕ್ತೋ ನೋ ನಿರೂಪಿತಃ ।
ತಥಾಪಿ ವೇದೇಷೂಕ್ತತ್ವಾದುಕ್ತೋ ರೂಪಿತ ಏವ ಚ ॥
ಇತಿ ವ್ಯೋಮಸಂಹಿತಾಯಾಮ್ ।

ವಿಷ್ಣು ಲೋಕವಿಲಕ್ಷಣನಾದ್ದರಿಂದ ಲೌಕಿಕ ಪ್ರಮಾಣಶಬ್ದಗಳಿಂದ ಉಕ್ತನಾಗುವುದಿಲ್ಲ, ಲೌಕಿಕ ಪ್ರಮಾಣಬುದ್ಧಿಗೆ ಗೋಚರನೂ ಆಗುವುದಿಲ್ಲ. ಆದರೂ ವೇದಗಳಲ್ಲಿ ವರ್ಣಿತನಾದ್ದರಿಂದ ವೇದಾನುಸಾರಿಯಾಗಿ ಸರ್ವಶಬ್ದವಾಚ್ಯನೂ ಆಗುತ್ತಾನೆ. ಸರ್ವಪ್ರಮಾಣಗೋಚರನೂ ಆಗುತ್ತಾನೆ ಎಂದು ವ್ಯೋಮಸಂಹಿತೆಯಲ್ಲಿ ಉಕ್ತವಾಗಿದೆ.

ಅಲೌಕಿಕವಾದ ವೇದ ವೇದಾನುಸಾರಿಯಾದ ಪ್ರಮಾಣಗಳಿಂದ ವೇದ್ಯನೂ ಲೌಕಿಕ ಪ್ರತ್ಯಕ್ಷಾದಿಪ್ರಮಾಣಗಳಿಂದ ಅವೇದ್ಯನೂ ಆಗುತ್ತಾನೆ ಪರಮಾತ್ಮ. ಅದರಿಂದ ವಿರೋಧವಿಲ್ಲ. ಮತ್ತು ಹಿಂದಿನ ಶ್ಲೋಕದಲ್ಲಿ ಹೇಳಿದ 'ಅನಿರುಕ್ತಾತ್ಮಶಕ್ತಿ' ಎಂಬುದರಿಂದ ಪುನರುಕ್ತಿಯೂ ಇಲ್ಲ. ಅಲ್ಲಿ ಅಶೇಷವಿಶೇಷನಿಷೇಧವನ್ನು ಹೇಳುವ ಸಂದರ್ಭವಾದ್ದರಿಂದ 'ಅನಿರುಕ್ತ' ಎಂದರೆ ಪೂರ್ತಿಯಾಗಿ ವರ್ಣಿಸಲಾಗದವನೆಂದರ್ಥ. ಇಲ್ಲಿ ಲೌಕಿಕಶಬ್ದಗಳಿಗೆ ನಿಲುಕದವನು, ವೇದವೇದಾನುಸಾರಿ ಅಲೌಕಿಕಶಬ್ದಗಳಿಗೆ ಮಾತ್ರ ಗೋಚರನಾಗುತ್ತಾನೆ ಎಂದು ಅಭಿಪ್ರಾಯ

* * *

ದಕ್ಷಪ್ರಜಾಪತಿ ಮಾಡಿದ ಹಂಸಗುಹ್ಯಸ್ತೋತ್ರದಲ್ಲಿ ಎಂಟನೇ ಪದ್ಯ.

ಯಸ್ಮಿನ್ ಯತೋ ಯೇನ ಚ ಯಸ್ಯ ಯಸ್ಮೈ
ಯಂ ಯೋ ಯಥಾ ಕುರುತೇ ಕಾರ್ಯತೇ ವಾ ।
ಪರಾವರೇಷಾಂ ಪರಮಂ ಪ್ರಾಕ್ ಸ್ವಸಿದ್ಧಂ
ತದ್ ಬ್ರಹ್ಮ ತದ್ಧೇತುರನನ್ಯದೇಕಮ್ ॥ ೩೦ ॥

ಯಾವ ಸ್ಥಳದಲ್ಲಿ, ಯಾವ ಕಾಲದಲ್ಲಿ, ಯಾವ ಮೂಲವಸ್ತುವಿನಿಂದ ಯಾವ ಸಾಧನದಿಂದ, ಯಾರ ಸೊತ್ತಾಗಿರುವ, ಯಾವ ವಸ್ತುವನ್ನು ಯಾರಿಗಾಗಿ ಯಾರು ಯಾವ ರೀತಿ ಮಾಡುವನೋ, ಮತ್ತು ಅವನೂ ಕೂಡ ಯಾವ ಇನ್ನೊಬ್ಬನ ಪ್ರೇರಣೆಯಿಂದ ಮಾಡುವನೋ, ಅವೆಲ್ಲಕ್ಕೂ ಅವರೆಲ್ಲರಿಗೂ ಅವರು ಮಾಡುವ ಕ್ರಿಯೆಗೂ, ಅದಕ್ಕೆ ಆ ಇನ್ನೊಬ್ಬರು ನೀಡಿದ ಪ್ರೇರಣೆಗೂ ಭಗವಂತನೇ ಕಾರಣ. ಎಲ್ಲಕ್ಕೂ ಅಸ್ತಿತ್ವ ಅವನ ಅಧೀನ. ದೊಡ್ಡವರು ಸಣ್ಣವರೆನ್ನದೆ ಬ್ರಹ್ಮಾದಿ ಎಲ್ಲ ಸೃಷ್ಟಿಕರ್ತರಿಗೂ ಅವನೇ ಸ್ವತಂತ್ರ ಸೃಷ್ಟಿಕರ್ತ. ಅನಾದಿಕಾಲದಿಂದಲೂ ಸ್ವತಃ ಇದ್ದವನು, ಅದ್ವಿತೀಯ ಬ್ರಹ್ಮ ಅವನೆ. ಅವನ ಎಲ್ಲ ಅವತಾರಗುಣಕ್ರಿಯಾದಿಗಳಿಂದಲೂ ಅವನು ಅಭಿನ್ನ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಕ್ರಿಯಾ ಕಾರಕ ಸಂಬಂಧ ಪ್ರಕಾರಾದಿಗಳೆಲ್ಲವೂ ಪರಮಾತ್ಮಸ್ವರೂಪವೆ. ಏಕೆಂದರೆ ಎಲ್ಲಕ್ಕೂ ಅವನೆ ಕಾರಣ. ಕಾರಣ ಏಕೆಂದರೆ ಎಲ್ಲಕ್ಕೂ ಆದಿಯಲ್ಲಿ ಇರುವವನು ಅವನೆ ಎಂದು ಹೇಳುತ್ತಾರೆ. ಆದರೆ ಎಲ್ಲವೂ ಅವನ ಸ್ವರೂಪವೇ, ಎಲ್ಲಕ್ಕೂ ಮೊದಲಿಗೆ ಅವನಿದ್ದಾನೆ ಎನ್ನುವುದು ವ್ಯಾಹತ. ಯಾವುದೂ ತನಗಿಂತ ಮೊದಲಿಗೆ ತಾನಿರುವುದು ಶಕ್ಯವಿಲ್ಲ. ಕಾರ್ಯಕಾರಣಗಳಿಗೆ ಭೇದವನ್ನು ಒಪ್ಪಲೇಬೇಕು. ಅದಕ್ಕೆ ಶ್ರೀಧರವ್ಯಾಖ್ಯಾನ ಪ್ರಕಾರ ಅನಿರ್ವಚನೀಯ ಮಾಯೆ ಎಲ್ಲವನ್ನೂ ಕೂಡಿಸುತ್ತದೆ ಎಂದು ಉತ್ತರ. ಮಾಯೆಯ ನಿಷೇಧವನ್ನು ಹಿಂದೆ ಮಾಡಿದ್ದರಿಂದ ಇದೂ ಕೂಡುವುದಿಲ್ಲ. [1]ಗಿರಿಧರವ್ಯಾಖ್ಯಾನದಲ್ಲಿ ಪ್ರಪಂಚಕ್ಕೆ ಕಾರಣನಾದ ಪರಮಾತ್ಮ ಪ್ರಪಂಚರೂಪನೆನಿಸುವುದು ಹೇಗೆ? ಕಾರ್ಯಕಾರಣಗಳಿಗೆ ಭೇದವಿದೆ ತಾನೆ? ಎಂದು ಪ್ರಶ್ನೆ ಮಾಡಿಕೊಂಡು 'ಶ್ಲೋಕದಲ್ಲಿ 'ಅನನ್ಯತ್' ಎಂದು ಅಭೇದವನ್ನೇ ಹೇಳಿದೆ. ಅದರ ಅಭಿಪ್ರಾಯ– ಕಾರ್ಯಕಾರಣಗಳಿಗೆ ಕೆಲವರು ಭೇದವನ್ನು ಅಂಗೀಕರಿಸುವುದು ಭ್ರಾಂತಿಯಿಂದ, ಹೊರತು ವಾಸ್ತವದಲ್ಲಿ ಅಭೇದವೆ' ಎಂದಿದ್ದಾರೆ. ಕಾರ್ಯಕಾರಣಗಳಿಗೆ ಅಭೇದವೆನ್ನುವುದಾದರೆ ಕಾರ್ಯಕ್ಕಿಂತ ಮೊದಲಿಗೆ ಕಾರಣವಿದೆ ಎಂದು ಶ್ಲೋಕದಲ್ಲಿಯೇ 'ಪ್ರಾಕ್ ಪ್ರಸಿದ್ಧಂ' ಎನ್ನುವುದು ಹೇಗೆ ಕೂಡುತ್ತದೆ ಎಂಬ ಪ್ರಶ್ನೆಗೆ ಈ ವ್ಯಾಖ್ಯಾನಕಾರರು ಸಮಾಧಾನ ನೀಡಿಲ್ಲ.

ಸತ್ಕಾರ್ಯವಾದದಲ್ಲಿ ಕಾರ್ಯಕಾರಣಗಳಿಗೆ ಭೇದಾಭೇದವನ್ನು ಹೇಳುವ ನಮ್ಮ ಪಕ್ಷದಲ್ಲಿ ಕಾರ್ಯವು ಅದರ ಉತ್ಪತ್ತಿಗಿಂತ ಪೂರ್ವದಲ್ಲಿಯೂ ಕಾರಣರೂಪದಿಂದ ಇರುತ್ತದೆ. ಹೀಗಾಗಿ ತನಗೆ ತಾನು ಪೂರ್ವದಲ್ಲಿ ಇರುವುದು ಅಶಕ್ಯವೇನಲ್ಲ. ಆದರೆ ಪ್ರಪಂಚಕ್ಕೆ ಪರಮಾತ್ಮ ನಿಮಿತ್ತಕಾರಣವೆ ಹೊರತು ಉಪಾದಾನಕಾರಣವಲ್ಲ. ಅದರಿಂದ ಸತ್ಕಾರ್ಯವಾದದ ಬಲದಿಂದ ಸಮಾಧಾನ ನೀಡುವುದೂ ಶಕ್ಯವಿಲ್ಲ. 'ಅನನ್ಯತ್' ಎಂಬ ಶಬ್ದದ ಬಲದಿಂದಲೇ ಉಪಾದಾನಕಾರಣತ್ವವನ್ನು ಒಪ್ಪಬೇಕು ಎಂದರೆ ಆ ಶಬ್ದಕ್ಕೆ ಪರಮಾತ್ಮನಿಗೆ ಸದೃಶನಿನ್ನೊಬ್ಬನಿಲ್ಲ, ಅದ್ವಿತೀಯ' ಎಂದು ಅರ್ಥ ಹೇಳಲು ಬರುವುದರಿಂದ ಪ್ರಪಂಚಾಭಿನ್ನನೆಂದೇ ಅರ್ಥವಿಟ್ಟು ಕೊಳ್ಳಬೇಕಾಗಿಲ್ಲ ಎಂದು ಉತ್ತರ.

---

೧. ಬ್ರಹ್ಮೈವಾಧಿಕರಣಾದೀತಿ ಕುತಸ್ತತ್ರಾಹ ತದ್ಧೇತುರಿತಿ । ಯತಸ್ತೇಷಾಂ ಕಾರಣಮಿತ್ಯರ್ಥಃ । ತತ್ ಕಾರಣತ್ವಮೇವ ಕುತ ಇತ್ಯಾಕಾಂಕ್ಷಾಯಾಂ ಅನನ್ಯಥಾ ಸಿದ್ಧನಿಯತಪೂರ್ವವೃತ್ತಿತ್ವರೂಪಕಾರಣತ್ವಲಕ್ಷಣಯುಕ್ತತ್ವಾತ್ ಇತ್ಯಾಹ ಸರ್ವೇಭ್ಯಃ ಪ್ರಾಕ್ ಪ್ರಸಿದ್ಧಮಿತಿ । ನನ್ವೇವಂ ಕಾರಣತ್ವೇऽಪಿ ಕಥಂ ತದ್ರೂಪತ್ವಂ? ಕೈಶ್ಚಿತ್ ಕಾರ್ಯಕಾರಣಯೋರ್ಭೇದಾಂಗೀಕಾರಾತ್ ಇತ್ಯಾಶಂಕ್ಯ ತಯೋರನನ್ಯತ್ವಾತ್ ಭೇದಾಂಗೀಕಾರಸ್ಯ ಭ್ರಾಂತಿಮೂಲತ್ವಾದಿತ್ಯಾಹ ಅನನ್ಯದಿತಿ । –ಗಿರಿಧರಃ

ಆದರಿಂದ ಶ್ಲೋಕದಲ್ಲಿ 'ತದ್ ಬ್ರಹ್ಮ' ಎಂದರೆ ಎಲ್ಲವೂ ಪರಮಾತ್ಮಸ್ವರೂಪ ಎಂದರ್ಥವಲ್ಲ. ಎಲ್ಲಕ್ಕೂ ಕಾರಣ ಪರಮಾತ್ಮ ಎಂದರ್ಥ. 'ತದ್ಧೇತುಃ' ಎಂದರೆ ಎಲ್ಲದರ ಕಾರಣಗಳಿಗೂ ಕಾರಣ ಪರಮಾತ್ಮ ಎಂದರ್ಥ. 'ಏಕಃ' ಎಂದರೆ ಎಲ್ಲಕ್ಕೂ ಅಸ್ತಿತ್ವವಿರುವುದು ಪರಮಾತ್ಮನ ಅಧೀನವಾದ್ದರಿಂದ 'ಎಲ್ಲವೂ ಅವನೊಬ್ಬನೆ' ಎಂದು ಜ್ಞಾನಿಗಳ ವ್ಯವಹಾರ. ಮತ್ತು ತನ್ನೆಲ್ಲ ರೂಪಗುಣಕ್ರಿಯಾದಿಗಳಿಂದ ತಾನು ಅಭಿನ್ನನಾದ್ದರಿಂದಲೂ 'ಎಲ್ಲವೂ ಅವನೊಬ್ಬನೇ' ಎಂದು ವ್ಯವಹಾರ ಇದು ಭವಿಷ್ಯತ್ಪರ್ವವಚನದಿಂದಲೇ ಸಿದ್ಧವಾಗುತ್ತದೆ.

ಸಪ್ತವಿಭಕ್ತ್ಯರ್ಥಸ್ಯ ಕಾಲಸ್ಯ ಪ್ರಕಾರಸ್ಯ ಚ ಹೇತುರ್ಬ್ರಹ್ಮೈವ ।

ವಿಭಕ್ತ್ಯರ್ಥಸ್ಯ ಕಾಲಸ್ಯ ಪ್ರಕಾರಾಣಾಂ ಚ ಕಾರಣಮ್ ।
ಏಕ ಏವ ಪರೋ ವಿಷ್ಣು ಸರ್ವಸತ್ತಾಪ್ರದತ್ವತಃ ॥
ಇತಿ ಭವಿಷ್ಯತ್ಪರ್ವಣಿ ।

ಅನನ್ಯಃ ಸದೃಶಾಭಾವಾತ್ ಏಕೋ ರೂಪಾದ್ಯಭೇದತಃ । ಇತಿ ಚ ।

ಏಳು ವಿಭಕ್ತಿಗಳ ಅರ್ಥವಾದ ಅಧಿಕರಣಮುಂತಾದವುಗಳಿಗೂ ಕಾಲಕ್ಕೂ ಕಾರ್ಯ ನಡೆಯುವ ರೀತಿಗೂ ಕಾರಣ ಪರಮಾತ್ಮನೇ ಎಂದು ಶ್ಲೋಕ ಹೇಳುತ್ತಿದೆ.

ಭವಿಷ್ಯತ್ಪರ್ವದಲ್ಲಿಯೂ ಇದೇ ಅಭಿಪ್ರಾಯ ಉಕ್ತವಾಗಿದೆ.– 'ಸಪ್ತವಿಭಕ್ತ್ಯರ್ಥವಾದ ಅಧಿಕರಣ ಮುಂತಾದವುಗಳಿಗೂ ತಿಙ್ ವಿಭಕ್ತ್ಯರ್ಥವಾದ ವರ್ತಮಾನ ಮುಂತಾದ ಕಾಲಗಳಿಗೂ ಕ್ರಿಯೆ ನಡೆಯುವ ಪ್ರಕಾರಗಳಿಗೂ ಎಲ್ಲಕ್ಕೂ ಕಾರಣ ಸರ್ವೋತ್ತಮನಾದ ವಿಷ್ಣುವೇ. ಎಲ್ಲಕ್ಕೂ ಅಸ್ತಿತ್ವವನ್ನು ನೀಡುವವನು ಅವನೊಬ್ಬನಾದ್ದರಿಂದಲೇ ಅವನು 'ಏಕಃ' ಎನಿಸುತ್ತಾನೆ.

ಭವಿಷ್ಯತ್ಪರ್ವದಲ್ಲಿಯೇ ಇನ್ನೊಂದು ಕಡೆ– ಪರಮಾತ್ಮನಿಗೆ ಸದೃಶನಿನ್ನೊಬ್ಬ ನಿಲ್ಲದಿರುವುದರಿಂದ ಅವನು 'ಅನನ್ಯ' ಎನಿಸುತ್ತಾನೆ. ತನ್ನ ರೂಪಗುಣಕ್ರಿಯಾದಿಗಳಿಂದ ತಾನು ಅಭಿನ್ನನಾದ್ದರಿಂದ 'ಏಕಃ' ಎನಿಸುತ್ತಾನೆ' ಎಂದು ಉಕ್ತವಾಗಿದೆ.

* * *

ದಕ್ಷಪ್ರಜಾಪತಿ ಮಾಡಿದ ಹಂಸಗುಹ್ಯ ಸ್ತೋತ್ರದಲ್ಲಿ ಹತ್ತನೇ ಪದ್ಯ.

ಅಸ್ತೀತಿ ನಾಸ್ತೀತಿ ಚ ವಸ್ತುನಿಷ್ಠಯೋ-
ರೇಕಸ್ಥಯೋರ್ಭಿನ್ನವಿರುದ್ಧಧರ್ಮಯೋಃ ।
ಅಪೇಕ್ಷಿತಂ ಕಿಂಚನ ಸಾಂಖ್ಯಯೋಗಯೋಃ
ಸಮಂ ಪರಂ ಹ್ಯನುಕೂಲಂ ಬೃಹತ್ ತತ್ ॥ ೩೨ ॥

ನನಗಿಂತ ಬೇರೆಯಾಗಿ ಒಬ್ಬ ಪರಮಾತ್ಮ ಇದ್ದಾನೆ ಎಂದು, ಇಲ್ಲ ಎಂದು ಬೇರೆ ಬೇರೆ ವಿರುದ್ಧವಾದ ವಾದಗಳನ್ನು ಮಂಡಿಸುವ ಎರಡೂ ಮತಗಳಿಗೂ ಪರಮಾತ್ಮನೊಬ್ಬನೆ ವಿಷಯನಾಗುತ್ತಾನೆ. ಈ ಎರಡೂ ವಾದಗಳು ಪ್ರಾಮಾಣಿಕವಾದ ಪರಮಾತ್ಮ ಎಂಬ ವಸ್ತುವಿನ ವಿಷಯದಲ್ಲಿ ಇವೆ. ಮತ್ತು ಪ್ರತಿಯೊಂದು ವಸ್ತು 'ತಾನು ತಾನಾಗಿ ಇದ್ದು ಇನ್ನೊಂದಾಗಿ ಇಲ್ಲ' ಎನ್ನುವಂತೆ ಅವಿರೋಧವಾಗಿ ಪರಮಾತ್ಮನ ಅಸ್ತಿತ್ವ ಅಭಾವಗಳನ್ನೂ ಈ ಮತಗಳು ಹೇಳುತ್ತಿಲ್ಲ. ನನಗಿಂತ ಬೇರೆ ಒಬ್ಬ ಪರಮಾತ್ಮ 'ತಾನು ತಾನಾಗಿ ಇದ್ದಾನೆ', 'ತಾನು ತಾನಾಗಿ ಇಲ್ಲ' ಎಂದು ವಿರುದ್ಧವಾಗಿಯೇ ವಾದ ಮಾಡುತ್ತಿವೆ. ಈ ಎರಡೂ ಮತಗಳಿಗೆ ಅವುಗಳ ವಾದಗಳಿಗೆ ಅನುಸಾರವಾಗಿ ಪರಮಾತ್ಮ ಫಲ ನೀಡುತ್ತಾನೆ. ಸಾಂಖ್ಯಯೋಗಗಳಲ್ಲಿ, ಅಂದರೆ ವೇದದ ಜ್ಞಾನಕಾಂಡ ಕರ್ಮಕಾಂಡಗಳೆರಡರಲ್ಲಿಯೂ ಪರಸ್ಪರ ವಿರೋಧವಿಲ್ಲದಂತೆ ಜೀವಭಿನ್ನ ಪರಮಾತ್ಮನ ಅಸ್ತಿತ್ವ ಒಂದನ್ನೇ ನಿರ್ವಿವಾದವಾಗಿ ಪ್ರತಿಪಾದಿಸಲಾಗಿದೆ. ಇಂಥ ಅಲೌಕಿಕ ಪರಬ್ರಹ್ಮ ತತ್ವವಾಗಿರುವ ಪರಮಾತ್ಮನನ್ನು ಶವಣು ಹೊಂದುತ್ತೇನೆ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು ಯೋಗಶಾಸ್ತ್ರ ಸಾಂಖ್ಯಶಾಸ್ತ್ರಗಳಿಗೆ ಭಗವಂತನ ಸಾಕಾರತ್ವ ನಿರಾಕಾರತ್ವವಿಷಯದಲ್ಲಿ ವಿವಾದವಿದೆ ಎನ್ನುತ್ತಾರೆ. ಯೋಗವು ಉಪಾಸನಾಶಾಸ್ತ್ರ. ಅದರಿಂದ ಭಗವಂತನಲ್ಲಿ ಪಾತಾಳಪಾದತ್ವಾದಿ ಆಕಾರಗಳನ್ನು ಉಪಾಸನೆಗಾಗಿ ಹೇಳುತ್ತದೆ. ಸಾಂಖ್ಯವು ಜ್ಞಾನಶಾಸ್ತ್ರ. ಅದು 'ಅಪಾಣಿಪಾದಂ' ಎಂದು ಮುಂತಾಗಿ ನಿರಾಕಾರತ್ವವನ್ನು ಹೇಳುತ್ತದೆ. ಹೀಗೆ ವಿವಾದಾಸ್ಪದವಾದುದು ಬ್ರಹ್ಮ. ಏಕೆಂದರೆ ಒಂದೇ ವಸ್ತುವಿನಲ್ಲಿ ಸಾಕಾರತ್ವನಿರಾಕಾರತ್ವಗಳು ವಿರುದ್ಧ. ಅದರಿಂದ ಸಾಕಾರತ್ವಕಲ್ಪನೆಗೂ ಅದರ ನಿಷೇಧಕ್ಕೂ ಬೇಕಾಗುವ ಒಂದು ವಸ್ತು ಬ್ರಹ್ಮ ಸಿದ್ಧವಾಗುತ್ತದೆ ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ. ಆದರೆ ಬ್ರಹ್ಮನಿಗೆ ಆಕಾರವಿಲ್ಲವೆನ್ನಬೇಕಾದರೆ ಬ್ರಹ್ಮವಿರಲೇಬೇಕು, ಹೇಗೋ ಹಾಗೇ ಬ್ರಹ್ಮನಲ್ಲಿ ಆಕಾರವಿದೆ ಎನ್ನಲೂ ಬ್ರಹ್ಮವಿರಲೇಬೇಕು ಎನ್ನುವುದು ಮಾತ್ರ 'ಅನುಕೂಲಂ' ಎಂಬ ಶಬ್ದದಿಂದ ಸಿಕ್ಕೀತು ಹೊರತು 'ಆಕಾರಕಲ್ಪನೆಗೆ ಅಧಿಷ್ಠಾನವಾಗಿ ಬ್ರಹ್ಮವಿರಬೇಕಾಗುತ್ತದೆ' ಎನ್ನುವುದು ಅಧಿಕ. 'ಅಧಿಷ್ಠಾನ' 'ಅವಧಿ'ಶಬ್ದಗಳು ಸಾಪೇಕ್ಷ. ಎಲ್ಲಿ ಆರೋಪಿತವಾಗುವುದೋ ಅದು ಅಧಿಷ್ಠಾನ. ಎಲ್ಲಿ ಬಾಧಿತವಾಗುವುದೋ

೧. ಯೋಗಉಪಾಸನಾಶಾಸ್ತ್ರಂ । ತತ್ರ ಹಿ ವಿರಾಡ್ರೂಪೇಣೋಪಾಸನಾಯಾಂ ಪಾತಾಲಪಾದಾದಿಕಮಸ್ತೀತ್ಯುಪಾಸ್ಯತ್ವೇನ ವಿಧೀಯತೇ । ನಾಸ್ತೀತಿ ಸಾಂಖ್ಯಂ ಜ್ಞಾನಶಾಸ್ತ್ರಂ । ತಯೋರ್ಯೋಗಸಾಂಖ್ಯಯೋರ್ಯತ್ ಕಿಂಚಿತ್ ಸಮನುವರ್ತಮಾನಮವೇಕ್ಷಿತಂ ಪ್ರತೀತಂ ತದ್ ಬೃಹದ್ ಬ್ರಹ್ಮ। ವಿವಾದಾಸ್ಪದಂ ಬ್ರಹ್ಮೇತ್ಯರ್ಥಃ। ಅನುಕೂಲಂ ಅಧಿಷ್ಠಾನಂ ವಿನಾ ಪಾದಾದಿಕಲ್ಪನಾಯೋಗಾತ್ । ಅವಧಿಂ ವಿನಾ ತನ್ನಿಷೇಧಾಯೋಗಾಚ್ಚ ತಯೋರುಪಪಾದಕತ್ವೇನ ಸಿದ್ಧಮಿತ್ಯರ್ಥಃ । ತಸ್ಮೈ ನಮ ಇತಿ ಪೂರ್ವಸ್ಯಾನುಷಂಗಃ । —ಶ್ರೀಧರಃ

ಅದು ಅವಧಿ. ಪ್ರಕೃತದಲ್ಲಿ ಯೋಗಶಾಸ್ತ್ರಕಾರರಿಂದ ಆಕಾರ ಆರೋಪಿತವಾಗಿದೆ. ವಾಸ್ತವದಲ್ಲಿ ಅದು ಇಲ್ಲ ಎನ್ನಲು ಏನೂ ಆಧಾರವಿಲ್ಲ. ಸಾಂಖ್ಯಶಾಸ್ತ್ರ ಆಕಾರವಿಲ್ಲ ಎನ್ನುತ್ತಿದ್ದರೂ ಅದು ವಿವಾದವಾಯಿತೇ ಹೊರತು ವಾಸ್ತವವಿಷಯದಲ್ಲಿ ಪ್ರಮಾಣವಾಗುವುದಿಲ್ಲ. ಮತ್ತು ಈ ವಿವಾದವೇ ಬ್ರಹ್ಮನ ವಿಷಯದಲ್ಲಿ ಪ್ರಮಾಣವೆನ್ನಬೇಕು ಹೊರತು ಆಕಾರನಿಷೇಧಕ್ಕೆ ಅವಧಿಯಾಗಿ ಬ್ರಹ್ಮ ಸಿದ್ಧವಾಗುತ್ತದೆ ಎನ್ನುವುದು ಶ್ಲೋಕದಲ್ಲಿ ಇಲ್ಲ. 'ವಿರುದ್ಧಧರ್ಮಯೋಃ ಕಿಂಚನ ಸಮನುವರ್ತಮಾನಂ ಅವೇಕ್ಷಿತಂ' ವಿವಾದಕ್ಕೆ ಆಸ್ಪದವಾಗಿ ಎರಡೂ ಪಕ್ಷಕ್ಕೂ ಒಂದು ಬ್ರಹ್ಮ ಎಂಬ ವಸ್ತು ಸಿದ್ಧವಾಗುತ್ತದೆ ಎಂದು ಮಾತ್ರ ಶ್ಲೋಕದಲ್ಲಿ ಹೇಳಿದೆ. ಆಗ 'ನಿನಗೆ ಆಕಾರ ಉಂಟು ಇಲ್ಲ ಎಂದು ವಿವಾದವಿದೆ. ಅಂಥ ನಿನಗೆ ನಮಸ್ಕಾರ' ಎಂದು ಹೇಳಿದರೆ ಅದು ಹೇಗೆ ಸ್ತುತಿಯಾಗುತ್ತದೆ? ಭವಿಷ್ಯತ್ಪರ್ವವಚನ ಹೇಳುವಂತೆ ಎಲ್ಲ ವಾದಿಗಳಿಗೂ ಅವರಿಗೆ ಇಷ್ಟವಾಗುವಂಥ ಬುದ್ಧಿಯನ್ನೂ ಅದಕ್ಕೆ ತಕ್ಕ ಫಲವನ್ನೂ ಕೊಡುತ್ತ 'ಅನುಕೂಲ'ನೆನಿಸುವವನು ನೀನು' ಎಂದು ಹೇಳಿದರೆ ಅದು ಸ್ತುತಿಯಾಗುತ್ತದೆ. ಸಾಂಖ್ಯಯೋಗಗಳಲ್ಲಿ ಪರಸ್ಪರ ವಿರೋಧವನ್ನು ಕಲ್ಪಿಸಿದ್ದೂ ಸರಿಯಲ್ಲ. ಭಗವದ್ಗೀತೆಯಲ್ಲಿ ಅವುಗಳಿಗೆ ಅವಿರೋಧವೇ ಉಕ್ತವಾಗಿದೆ. [1]ವಿಶ್ವನಾಥವ್ಯಾಖ್ಯಾನದಲ್ಲಿ ಸಾಂಖ್ಯಶಾಸ್ತ್ರ ಭಗವಂತನಿಗೆ ವಿರಾಡ್ರೂಪವನ್ನು ನಿಷೇಧಿಸಿದೆ. ಯೋಗಶಾಸ್ತ್ರ ವಿರೂಡ್ರೂಪವನ್ನು ಹೇಳಿದರೂ ಅದು ಕೆಲವರಿಗೆ ಪ್ರಾರಂಭದಲ್ಲಿ ಮಾತ್ರ ಕೇವಲ ಚಿತ್ತಶುದ್ಧಿಗಾಗಿ ಉಪಾಸನೆ ಮಾಡಲು ಹೇಳಿದ್ದೇ ಹೊರತು ಎಲ್ಲರಿಗೂ ಸದಾ ಉಪಾಸನೆಗಾಗಿ ಅಲ್ಲ. ಅದರಿಂದ ಸಾಂಖ್ಯಯೋಗಗಳಿಗೆ ವಿರೋಧವಿಲ್ಲ ಎಂದಿದೆ. ಇದೂ ಸರಿಯಲ್ಲ. ಸದಾ ಉಪಾಸನೆಗಾಗಿ ಅಲ್ಲದಿದ್ದರೂ ವಿರಾಡ್ರೂಪವಿದೆ ಎಂದು ಹೇಳುವ ಯೋಗಕ್ಕೆ ಇಲ್ಲವೆನ್ನುವ ಸಾಂಖ್ಯದ ವಿರೋಧ ಅಪರಿಹಾರ್ಯ. [2]ಶುಕದೇವ ವ್ಯಾಖ್ಯಾನದಲ್ಲಿ' ಸಾಂಖ್ಯಯೋಗಗಳೆರಡೂ

---

೧. ಭಕ್ತಿಶಾಸ್ತ್ರೇಣ ಪರಮೇಶ್ವರಸ್ಯ ರಾಮಕೃಷ್ಣಾದಿಮೂರ್ತೇರ್ನಾಮರೂಪಾದಿಕವಶ್ರುಪ್ರತಿಪಾದನೇ ಸಿದ್ಧೇ ಜ್ಞಾನಶಾಸ್ತ್ರಮಪಿ ಸ್ವಸ್ಯ ವಸ್ತುನಿಷ್ಠತ್ವಾದೇವ ತಸ್ಯ ನಾಮರೂಪಾದಿಕಂ ನೈವ ನಿಷೇಧತಿ ಕಿಂತು ತಸ್ಯ ಮಾಯಿಕಮೂರ್ತೇರ್ವಿರಾಜ ಏವ । ಅತ ಏವ ಪುನರ್ಭಕ್ತಿಶಾಸ್ತ್ರಮಪಿ ಜ್ಞಾನಶಾಸ್ತ್ರೇ ನಿಷಿದ್ಧಂ ವಿರಾಡ್ರೂಪಮುಪಾಸ್ಯತ್ವೇನ ನೋಪಾದತ್ತೇ । ವಿರಾಡ್ರೂಪಸ್ಯಾಪಿ ಧಾರಣಾಯಾಮುಪಾದಾನಂ ತು ಕಸ್ಯಚಿದೇವ ಪ್ರಥಮದಶಾಯಾಮೇವ ಚಿತ್ತಶುದ್ಧ್ಯರ್ಥಮೇವ । ನತು ಸರ್ವದೋಪಾಸನಾರ್ಥಮಿತಿ । —ವಿಶ್ವನಾಥಃ

೨. ಸಾಂಖ್ಯೇ ಪ್ರೋಕ್ತಮೀಶ್ವರೋ ನಾಸ್ತಿ ಪ್ರಧಾನಮಚೇತನಸ್ಯ ಜಗತಃ ಕಾರಣಂ ನ ಬ್ರಹ್ಮೇತಿ ತದಯುಕ್ತಂ । ಯೋಗೇ ಚೋಕ್ತಮೀಶ್ವರೋಽಸ್ತಿ ನಿಮಿತ್ತಮಾತ್ರಂ

ವಿರುದ್ಧವಾಗಿದ್ದು ಎರಡೂ ಸರಿಯಾಗಿ ಅರ್ಥಮಾಡಿಕೊಂಡಿಲ್ಲ, ಸಾಂಖ್ಯ ಬ್ರಹ್ಮನನ್ನೇ ಒಪ್ಪಿಲ್ಲ. ಯೋಗ ಒಪ್ಪಿದರೂ ಅದನ್ನು ಜಗತ್ತಿಗೆ ಉಪಾದಾನವೆಂದು ಒಪ್ಪಿಲ್ಲ. ಪ್ರಕೃತಿಯನ್ನೇ ಉಪಾದಾನವೆಂದಿದೆ. ವಸ್ತುತ ಬ್ರಹ್ಮ ಜಗತ್ತಿಗೆ ಉಪಾದಾನ' ಎಂದಿದೆ. ಆದರೆ ಶ್ಲೋಕದಲ್ಲಿ ಬ್ರಹ್ಮ ಜಗತ್ತಿಗೆ ಉಪಾದಾನಕಾರಣವೆಂದು ಸ್ಪಷ್ಟ ಹೇಳಿಲ್ಲ. [೧]ವೀರರಾಘವವ್ಯಾಖ್ಯಾನದಲ್ಲಿ ಘಟಪಟಾದಿವಸ್ತುಗಳಿಗೆ ಅಸ್ತಿತ್ವ ನಾಸ್ತಿತ್ವಗಳನ್ನು ಸಾಂಖ್ಯಯೋಗರು ಒಪ್ಪಿದ್ದಾರೆ. ಅವುಗಳನ್ನು ಒಬ್ಬ ಪರಮಾತ್ಮನಲ್ಲಿ ಒಪ್ಪಿದರೆ ವಿರುದ್ಧವಾದೀತು. ಅದಕ್ಕೆ ಪ್ರಮಾಣ ಬೇಕು. ಅತೀಂದ್ರಿಯವಿಷಯವಾದ್ದರಿಂದ ಶ್ರುತಿಪ್ರಮಾಣವನ್ನು ಅಂಗೀಕರಿಸಿದರೆ ಅದು ಪರಮಾತ್ಮನ ಅಸ್ತಿತ್ವವನ್ನೂ ಸಗುಣತ್ವವನ್ನೂ ಒಪ್ಪಿವೆ. ಪ್ರಮಾಣದ ಆಧಾರವಿಲ್ಲದೆ ವಾದ ಮಾಡುವುದು ಸರಿಯಲ್ಲ ಎಂದಿದೆ. ಬೇರೆ ಎಲ್ಲ ವ್ಯಾಖ್ಯಾನಕಾರರೂ 'ಅವೇಕ್ಷಿತಂ' ಎಂದು ಅಪಪಾಠ ವಿಟ್ಟುಕೊಂಡು ವ್ಯಾಖ್ಯಾನ ಮಾಡಿದರೂ ವೀರರಾಘವವ್ಯಾಖ್ಯಾನದಲ್ಲಿ ಮಾತ್ರ 'ಅಪೇಕ್ಷಿತಂ' ಎಂದೇ ಪಾಠ. ಆದರೆ 'ಪ್ರಮಾಣಮಪೇಕ್ಷಿತಂ' ಎಂದು ಅಧ್ಯಾಹಾರ ಮಾಡಿ 'ಆ ಪ್ರಮಾಣದಿಂದ ಸಿದ್ಧವಾಗುವ' ಬ್ರಹ್ಮನಿಗೆ ಅಸ್ತಿತ್ವವಿದೆ ಸಗುಣತ್ವವಿದೆ ಎಂದು ತಿರುಗಿ ಅಧ್ಯಾಹಾರ ಮಾಡಿ ವ್ಯಾಖ್ಯಾನಿಸುವುದು ಉಚಿತವಲ್ಲ.

ಭವಿಷ್ಯತ್ಪರ್ವವಚನಾನುಸಾರವಾಗಿ ಶ್ರೀಮದಾಚಾರ್ಯರು ಹೀಗೆ ವ್ಯಾಖ್ಯಾನ ಮಾಡುತ್ತಾರೆ–

ಮದನ್ಯೋ ನಾಸ್ತಿ ಸರ್ವೇಶ ಇತಿ ವಿದ್ಧ್ಯಾಸುರಂ ಮತಮ್ ।
ಅಸ್ತೀತಿ ದೈವಮುಭಯೋರ್ಹರಿರೇವಂ ಹ್ಯಪೇಕ್ಷಿತಃ ॥

ನಿಷೇಧವಿಧ್ಯೋರ್ವಿಷಯಃ ಫಲದಾತಾ ಚ ಕೇಶವಃ ।
ತಾದೃಗ್‌ಬುದ್ಧೇಃ ಕಾರಣಂ ಚ ಸ್ಥಾನಯೋಶ್ಚೋಚ್ಚನೀಚಯೋಃ ॥
ಇತಿ ಚ ।

ನನಗಿಂತ ಬೇರೆ ಒಬ್ಬ ಸರ್ವೇಶ್ವರನಿಲ್ಲ ಎನ್ನುವುದು ಆಸುರಮತ, ನನಗಿಂತ ಬೇರೆ ಒಬ್ಬ ಸರ್ವೇಶ್ವರನಿದ್ದಾನೆ ಎನ್ನುವುದು ದೈವಮತವೆಂದು ತಿಳಿ. ಸರ್ವೇಶ್ವರ ಬೇರೆ ಇಲ್ಲ

ಜಗದುಪಾದಾನಕಾರಣಂ ತು ಪ್ರಧಾನಮಿತಿ ತದಪ್ಯಯುಕ್ತಂ । ತತ್ತಸ್ಮಾತ್ ಬೃಹದ್ ಬ್ರಹ್ಮೈವ ಪರಂ ಜಗತ್ಕಾರಣಂ । –ಶುಕದೇವಃ

೧. ಘಟಪಟಾದಿವಸ್ತುನಿಷ್ಠಾವಸ್ತಿತ್ವನಾಸ್ತಿಕ್ಯಧರ್ಮೌ ದೃಷ್ಟ್ವಾ ಯೋಗಸಾಂಖ್ಯ-ಮತಯೋಃ । ತಾವೇಕಸ್ಥಾವೀಶ್ವರವಿಷಯೌ ಚೇತ್ ವಿರುದ್ಧೌ ಸ್ಯಾತಾಂ । ತಯೋಃ ಕಿಂಚನ ಪ್ರಮಾಣಂ ವೇದಾಂತವಾಕ್ಯಮಪೇಕ್ಷಿತಂ ತಚ್ಚ ವೇದಾಂತವಾಕ್ಯಂ ಸತ್ಯಂ ಜ್ಞಾನಮಿತ್ಯಾದಿ ತದ್ಗಮ್ಯಂ ಚ ಸಮಮೇಕರೂಪಂ...। –ವೀರರಾಘವಃ

ಎನ್ನುವ ನಿಷೇಧ, ಬೇರೆ ಇದ್ದಾನೆ ಎನ್ನುವ ವಿಧಿ ಈ ಎರಡಕ್ಕೂ ಅಪೇಕ್ಷಿತ, ಅಂದರೆ ವಿಷಯ ಶ್ರೀಹರಿಯೆ. ಎರಡಕ್ಕೂ ತಕ್ಕ ಫಲ ನೀಡುವವನೂ ಅವನೇ. ಅಂಥ ಎರಡು ಬಗೆಯ ಬುದ್ಧಿಗೆ ಕಾರಣನೂ ಅವನೇ. ಆ ಬುದ್ಧಿಗಳಿಗೆ ಅನುಗುಣವಾಗಿ ಉಚ್ಚನೀಚಸ್ಥಾನಪ್ರಾಪ್ತಿಗಳಿಗೆ ಕಾರಣನೂ ಅವನೇ ಎಂದು ಭವಿಷ್ಯತ್ಪರ್ವದಲ್ಲಿ ಹೇಳಿದೆ.

* * *

ದಕ್ಷಪ್ರಜಾಪತಿ ಮಾಡಿದ ಹಂಸಗುಹ್ಯಸ್ತೋತ್ರದಲ್ಲಿ ಹನ್ನೊಂದನೇ ಪದ್ಯ

ಯೋಽನುಗ್ರಹಾರ್ಥಂ ಭಜತಾಂ ಪಾದಮೂಲ-
ಮನಾಮರೂಪೋ ಭಗವಾನನಂತಃ ।
ನಾಮಾನಿ ರೂಪಾಣಿ ಚ ಜನ್ಮಕರ್ಮಭಿ-
ರ್ಭೇಜೇ ಸ ಮಹ್ಯಂ ಪರಮಃ ಪ್ರಸೀದತಾಮ್ ॥ ೩೩ ॥

ಭಗವಾನ್ ಅನಂತ ಮೂಲರೂಪದಲ್ಲಿ ತನ್ನ ಲೀಲೆಗಳನ್ನು ಲೋಕಕ್ಕೆ ತೋರುವುದಿಲ್ಲ. ಆದರಿಂದ ಲೀಲೆಗಳನ್ನು ವರ್ಣಿಸುವ ನಾಮಗಳು ಪ್ರಸಿದ್ಧವಾಗುವುದಿಲ್ಲ. ತನ್ನ ಸುಂದರ ರೂಪಗಳನ್ನೂ ಲೋಕಕ್ಕೆ ತೋರುವುದಿಲ್ಲ. ಆದರಿಂದ ಆ ರೂಪಗಳೂ ಪ್ರಸಿದ್ಧವಾಗುವುದಿಲ್ಲ. ಆದರೆ ಅವತಾರರೂಪದಲ್ಲಿ ಅವತಾರದಿಂದ ರೂಪಗಳನ್ನೂ ಲೀಲೆಗಳಿಂದ ದಾಮೋದರ ಕಂಸಾರಿ ಎಂದು ಮುಂತಾದ ಮಂಗಳ ನಾಮಗಳನ್ನೂ ಪ್ರಸಿದ್ಧಗೊಳಿಸುತ್ತಾನೆ. ಇದು ತನ್ನ ಪಾದಸೇವಕರಾದ ಭಕ್ತರ ಮೇಲೆ ಅನುಗ್ರಹ ಮಾಡುವುದಕ್ಕಾಗಿ. ಇಲ್ಲದಿದ್ದರೆ ಆತ ಅವತಾರರೂಪಗಳಲ್ಲಿಯೂ ಮೂಲ ರೂಪದಂತೆಯೆ ಸ್ವಭಾವತಃ ಅವ್ಯಕ್ತನೆ. ಇಂಥ ಪರಮಾತ್ಮ ನನ್ನಲ್ಲಿ ಪ್ರಸನ್ನನಾಗಲಿ.

ಇಲ್ಲಿ 'ಅನಾಮರೂಪಃ' ಅಂದರೆ ನಾಮರೂಪಗಳಿಲ್ಲದ ಭಗವಂತ ಭಕ್ತರಿಗಾಗಿ ನಾಮರೂಪಗಳನ್ನು ಧರಿಸುತ್ತಾನೆ ಎಂದು ಹೇಳಿದೆ. [೧]ಪ್ರಾಕೃತ ನಾಮರೂಪ

೧. ಪ್ರಾಕೃತನಾಮರೂಪರಹಿತೋಽಪಿ ಜನ್ಮಭಿರವತಾರೈರ್ವಿಶುದ್ಧೋರ್ಜಿತ ಸತ್ವಾನಿ ರೂಪಾಣಿ ಕರ್ಮಭಿರ್ನಾಮಾನಿ ಚ ಯೋ ಭೇಜೇ । –ಶ್ರೀಧರಃ

ಕರ್ಮಕೃತನಾಮರೂಪರಹಿತೋಽಪಿ ಜನ್ಮಕರ್ಮಭಿರವತಾರಚೇಷ್ಟಿತೈಃ ಸಹ ನಾಮಾನಿ ಸ್ವೇಚ್ಛೋಪಾತ್ತಾನ್ಯಪ್ರಾಕೃತಾನಿ ಶರೀರಾಣಿ ಚ ಪರಿಗೃಹೀತವಾನ್ ।–ವೀರರಾಘವಃ

ನಾಮರೂಪರಹಿತ ಏವ ನಾಮಾನಿ ರೂಪಾಣಿ ಚ ಭೇಜೇ ಪ್ರಕಟಿತವಾನ್ । ಜನ್ಮಕರ್ಮಭಿಃ ಸಹಿತಾನಿ ಚ ಪ್ರಕಟಿತವಾನಿತ್ಯರ್ಥಃ । ಪಾದಮೂಲಂ ಭಜತಾಮಿತ್ಯನೇನ ತಾನ್ ಪ್ರತಿ ರೂಪಪ್ರಾಕಟ್ಯಾತ್ ಪೂರ್ವಮಪಿ ರೂಪಮಸ್ತ್ಯೇವೇತಿ ವ್ಯಂಜಿತಮ್ । –ಜೀವಗೋಸ್ವಾಮಿ

ರಹಿತನಾಗಿದ್ದರೂ ಭಕ್ತರಿಗಾಗಿ ಅವತಾರಗಳಲ್ಲಿ ಶುದ್ಧಸತ್ವಮಯ ರೂಪಗಳನ್ನೂ ಲೀಲೆಗಳಿಂದ ನಾಮಗಳನ್ನೂ ಹೊಂದುತ್ತಾನೆ ಎಂದು ಶ್ರೀಧರವ್ಯಾಖ್ಯಾನದಲ್ಲಿ ಹೇಳಿದೆ. ಆದರೆ ಪ್ರಾಕೃತರೂಪರಹಿತನೆಂದರೆ ಸರಿಯೆ. ಜೊತೆಗೆ ಪ್ರಾಕೃತನಾಮ ರಹಿತನೆನ್ನುವುದು ಹೇಗೆ ಎಂಬ ಪ್ರಶ್ನೆ ಬರುತ್ತದೆ. ರೂಪಗಳಲ್ಲಿ ಪ್ರಾಕೃತ ಶುದ್ಧ ಸತ್ವಾತ್ಮಕ ಎಂದು ಭೇದವಿರುವಂತೆ ನಾಮಗಳಲ್ಲಿ ಅಂಥ ಭೇದವಿಲ್ಲ. ಭಗವಂತನಿಗೂ ಪ್ರಾಕೃತವಾದ ನಾಮವೇ ಸಲ್ಲುತ್ತದೆ. ಶುದ್ಧಸತ್ವಾತ್ಮಕವಾದ ನಾಮ ಎಂದು ಬೇರೆ ಇಲ್ಲ. ವೀರರಾಘವವ್ಯಾಖ್ಯಾನದಲ್ಲಿ ಕರ್ಮಕೃತ ನಾಮರೂಪವಿಲ್ಲದವನು ಭಗವಂತ ಅವತಾರಲೀಲೆಗಳಿಂದ ರಾಮಕೃಷ್ಣಾದಿ ಪುಣ್ಯನಾಮಗಳನ್ನೂ ಅಪ್ರಾಕೃತಶರೀರಗಳನ್ನೂ ಭಕ್ತರಿಗೆ ತನ್ನ ದರ್ಶನ ನೀಡುವುದಕ್ಕಾಗಿ ಧರಿಸುತ್ತಾನೆ ಎಂದಿದೆ. ಇಲ್ಲಿಯೂ ಕರ್ಮಕೃತರೂಪವಿಲ್ಲದವನು, ನಮ್ಮಂತೆ ಕರ್ಮಾಧೀನವಾದ ಶರೀರವನ್ನು ಹೊಂದದವನು ಎನ್ನುವುದು ಸರಿಯೆ. ಕರ್ಮಕೃತನಾಮ ಅಂದರೆ ಅದೃಷ್ಟಜನ್ಯವಾದ ನಾಮವಿಲ್ಲದವನೆಂದರೂ ಸರಿಯೆ. ಆದರೆ ಅವತಾರಲೀಲೆಗಳಿಂದಲೇ ನಾಮಗಳನ್ನು ಧರಿಸುತ್ತಾನೆ ಎಂದರೆ ಮೂಲರೂಪಕ್ಕೆ ನಾಮವಿಲ್ಲವೆಂದಂತಾಯಿತು. ವಿಷ್ಣು ನಾರಾಯಣ ಮುಂತಾದ ನಾಮಗಳಿಂದ ಭಗವಂತನನ್ನು ಕರೆಯಲಾಗದೆ ಹೋದೀತು. ಏಕೆಂದರೆ ಆ ನಾಮಗಳು ಅವತಾರಲೀಲೆಗಳನ್ನು ಹೇಳುವುದಿಲ್ಲ. ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ ಮೂಲರೂಪದಲ್ಲಿ ನಾಮರೂಪಗಳಿಲ್ಲ. ಭಕ್ತರಿಗಾಗಿ ಅವತಾರಲೀಲೆಗಳೊಂದಿಗೆ ತನ್ನ ನಾಮರೂಪಗಳನ್ನು ಪ್ರಕಟಿಸುತ್ತಾನೆ. ಅದಕ್ಕಿಂತ ಹಿಂದೆಯೂ ನಾಮರೂಪಗಳಿವೆ, ಪ್ರಕಟವಾಗಿರುವುದಿಲ್ಲ ಎಂದಿದೆ. ಶೇಷ ಶಾಯಿಯಾದ ಮೂಲರೂಪದಲ್ಲಿಯೂ ಪ್ರಕಟವಾಗಿರುವ ನಾಮರೂಪಗಳನ್ನು ಭಕ್ತರು ಕಾಣುವುದರಿಂದ ಅವತಾರಲೀಲೆಗಳೊಂದಿಗೇ ಪ್ರಕಟಪಡಿಸುತ್ತಾನೆ ಎನ್ನುವುದು ಕೂಡುವುದಿಲ್ಲ.

ಪ್ರಕಾಶಸಂಹಿತೆಯಲ್ಲಿ ಭಗವಂತನ ಅನಾಮರೂಪತ್ವ ನಾಮ ರೂಪವತ್ವ ಗಳೆಂದರೇನೆಂದು ಸುಂದರವಾಗಿ ವರ್ಣಿಸಲಾಗಿದೆ.

ತತ್ಕರ್ಮಣಾಮದೃಷ್ಟತ್ವಾದನಾಮಾ ಚಾಪ್ಯದರ್ಶನಾತ್ ।
ಅರೂಪಸ್ತ್ವವತಾರೇಣ ರೂಪಕರ್ಮಾಣಿ ದರ್ಶಯೇತ್ ॥

ನಿತ್ಯರೂಪೋ ನಿತ್ಯಕರ್ಮಾऽಪ್ಯವ್ಯಕ್ತತ್ವಮಪೇಕ್ಷ್ಯ ತು ।
ಅರೂಪಕರ್ಮೇತ್ಯುದಿತೋ ರೂಪಕರ್ಮೋಜ್ಝಿತೇರ್ನ ತು ॥

ಇತಿ ಪ್ರಕಾಶಸಂಹಿತಾಯಾಮ್ ।

ಅನಾಮಾ ಸೋಽಧಿಕಾರ್ಥತ್ವಾದವ್ಯಕ್ತತ್ವಾದರೂಪಕಃ ।
ಕಂಸಾರಿತ್ವಾದಿಸಾಮರ್ಥ್ಯೇ ವ್ಯಕ್ತರೂಪೋಽವತಾರಗಃ ।
ಇತಿ ಚ ।

ಲೋಕದೃಷ್ಟಾಧಿಕಾರ್ಥಾನಿ ಮೂಲನಾಮಾನಿ ಕೇಶವೇ ।
ಅಥ ದಾಮೋದರಾದೀನಿ ಲೋಕದೃಷ್ಟಸಮಾನಿ ತು ॥

ಆನಂದೋಽವ್ಯಕ್ತರೂಪಸ್ತು ಮೂಲರೂಪಮುದಾಹೃತಮ್ ।
ಸ ಏವ ವ್ಯಕ್ತಿಮಾಪನ್ನಃ ಪ್ರಾದುರ್ಭಾವ ಇತೀರಿತಃ ॥ ಇತಿ ಚ ।

ಹರಿಯ ಅವತಾರಕರ್ಮಗಳು ಮೂಲರೂಪದಲ್ಲಿ ಕಾಣದಿರುವುದರಿಂದ ಕಂಸಾರಿ ಮುಂತಾದ ನಾಮಗಳು ಮೂಲರೂಪದಲ್ಲಿಲ್ಲ ಎಂದು ವ್ಯವಹಾರ. ವಸ್ತುತಃ ಮೂಲರೂಪ ಅವತಾರರೂಪಗಳಲ್ಲಿ ಭೇದವಿಲ್ಲ. ಮೂಲರೂಪ ಜನರಿಗೆ ಕಾಣದಿರುವುದರಿಂದ ಅವನಿಗೆ ರೂಪವಿಲ್ಲವೆಂದೂ ವ್ಯವಹಾರ. ಅವತಾರಗಳಲ್ಲಿ ರೂಪಗಳನ್ನೂ ತೋರಿಸುತ್ತಾನೆ. ಅವನ ರೂಪಗಳು ನಿತ್ಯ. ಕರ್ಮಗಳೂ ನಿತ್ಯ. ಆದರೂ ಅವ್ಯಕ್ತವಾಗಿರುವುದರಿಂದ ರೂಪಕರ್ಮಗಳಿಲ್ಲವೆಂದು ವ್ಯವಹಾರ. ಹೊರತು ರೂಪಕರ್ಮಗಳಿಲ್ಲವೆಂದಲ್ಲ ಎಂದು ಪ್ರಕಾಶಸಂಹಿತೆಯಲ್ಲಿ ಉಕ್ತವಾಗಿದೆ.

ಪ್ರಕಾಶಸಂಹಿತೆಯಲ್ಲಿಯೇ ಬೇರೆಡೆ ಹೀಗೂ ಹೇಳಿದೆ– ಅವನ ಮಹಿಮೆ ಪಾರ ಕಾಣದಿರುವುದರಿಂದ ಅದನ್ನು ಹೇಳುವ ನಾಮ ಅವನಿಗೆ ಇಲ್ಲವೆಂದು ವ್ಯವಹಾರ. ರೂಪ ಅವ್ಯಕ್ತವಾದ್ದರಿಂದ ರೂಪವಿಲ್ಲವೆಂದೂ ವ್ಯವಹಾರ. ಅವತಾರದಲ್ಲಿ ಅವನು ಕಂಸವಧಾದಿ ಸಾಮರ್ಥ್ಯಯುಕ್ತನಾಗಿ ವ್ಯಕ್ತರೂಪನಾಗಿರುತ್ತಾನೆ ಎಂದು. ಮತ್ತು ಇನ್ನೂ ಬೇರೆ ಕಡೆ ಹೀಗೆ ಹೇಳಿದೆ– ಹರಿಯ ಮೂಲರೂಪದ ನಾಮಗಳ ಅರ್ಥ ಲೋಕದೃಷ್ಟಕ್ಕಿಂತ ವಿಲಕ್ಷಣ. ದಾಮೋದರಾದಿನಾಮಗಳ ಅರ್ಥ ಲೋಕದೃಷ್ಟಕ್ಕೆ ಸಮಾನವಾಗಿದೆ. ಆನಂದ ಎಂಬ ಮೂಲ ರೂಪದಲ್ಲಿ ಅವನು ಅವ್ಯಕ್ತನಾಗಿ ರುವುದರಿಂದ ಅವ್ಯಕ್ತರೂಪನೆನಿಸುತ್ತಾನೆ. ಅವನೆ ವ್ಯಕ್ತನಾದಾಗ ಅವತಾರ ರೂಪನೆನಿಸುತ್ತಾನೆ ಎಂದು.

ಅವತಾರರೂಪಗಳ ಗುಣಕರ್ಮಾದಿಗಳಿಂದಲೇ ಭಗವಂತನಿಗೆ ನಾಮರೂಪ ಗಳೆಂದು ನಿಯಮವಿಲ್ಲ. ಮೂಲರೂಪದ ಗುಣಕರ್ಮಾದಿಗಳಿಂದಲೂ ಅವು ಅವನಿಗೆ ನಿತ್ಯವಾಗಿಯೇ ಇರುತ್ತವೆ. ಆದರೆ ಮೂಲರೂಪದ ಗುಣಕರ್ಮಾದಿಗಳು ವಿಲಕ್ಷಣ, ಜನರಿಗೆ ಗೋಚರವಾಗುವುದಿಲ್ಲ. ಈ ಅಭಿಪ್ರಾಯದಿಂದ ಮೂಲರೂಪದಲ್ಲಿ ನಾಮರೂಪಗಳಿಲ್ಲ ಎಂದು ವ್ಯವಹಾರ. ಅವತಾರಗಳಲ್ಲಿ ಕಂಸಾರಿತ್ವಾದಿಸಾಮರ್ಥ್ಯ ವ್ಯಕ್ತವಾಗಿ ಕಾಣುತ್ತದೆ. ದಾಮೋದರ ಮುಂತಾದ ನಾಮಗಳಲ್ಲಿ ದಾಮವು ಉದರದಲ್ಲಿರುವವನು ಉದರದಲ್ಲಿ ಗೋಪಿಯ ಹಗ್ಗದ ಬಂಧನಕ್ಕೆ ಸಿಲುಕಿದವನು

ಎಂದು ಲೋಕದೃಷ್ಟಿಯಿಂದ ಅರ್ಥವೇ ಕೂಡುತ್ತದೆ. ಇನ್ನೂ ಬೇರೆ ರಹಸ್ಯಾರ್ಥವಿದ್ದರೂ ಅದು ಲೋಕದೃಷ್ಟಿಗೆ ಗೋಚರವಾಗುವುದಿಲ್ಲ. ಆದರೆ ನಾರಾಯಣಾದಿ ನಾಮಗಳಲ್ಲಿ ವಿಲಕ್ಷಣ ರಹಸ್ಯಾರ್ಥವೇ ತುಂಬಿರುವುದರಿಂದ ಮೂಲರೂಪಗಳಿಗೆ ಅವೇ ನಾಮಗಳೆಂದು ವ್ಯವಹಾರ. ಮೂಲರೂಪ ಕಣ್ಣಿಗೆ ಕಾಣುವುದಿಲ್ಲವಾದ್ದರಿಂದ ಮತ್ತು ಲೋಕದೃಷ್ಟಿಗೆ ಅದರ ನಾಮದ ರಹಸ್ಯಾರ್ಥ ತಿಳಿಯುವುದಿಲ್ಲವಾದ್ದರಿಂದ ಮೂಲರೂಪದಲ್ಲಿ ಭಗವಂತ ಅನಾಮರೂಪನೆನಿಸುತ್ತಾನೆ ಎಂದು ಪ್ರಕಾಶಸಂಹಿತೆಯಲ್ಲಿ ಭಾಗವತಶ್ಲೋಕದ ತಾತ್ಪರ್ಯ ಉಕ್ತವಾಗಿದೆ. ಅದರಿಂದ ಮೂಲರೂಪದಲ್ಲಿ ಭಗವಂತನಿಗೆ ನಾಮರೂಪಗಳೇ ಇಲ್ಲವೆನ್ನಬಾರದು.

* * *

ದಕ್ಷಪ್ರಜಾಪತಿ ಮಾಡಿದ ಹಂಸಗುಹ್ಯಸ್ತೋತ್ರದಲ್ಲಿ ಕೊನೆಯದಾದ ಹನ್ನೆರಡನೇ ಪದ್ಯ

ಯಃ ಪ್ರಾಕೃತೈರ್ಜ್ಞಾನಪಥೈರ್ಜನಾನಾಂ
ಯಥಾಶಯಂ ದೇಹಗತೋ ವಿಭಾತಿ ।
ಯಥಾಽನಿಲಃ ಪಾರ್ಥಿವಮಾಶ್ರಿತೋ ಗುಣಂ
ಸ ಈಶ್ವರೋ ಮೇ ಕುರುತಾನ್ಮನೋರಥಮ್ ॥ ೩೪ ॥

ದೇಹದಲ್ಲಿ ನೆಲೆಸಿರುವ ಭಗವಂತ ಸಚ್ಛಾಸ್ತ್ರಗಳಿಂದ ಮತ್ತು ದುಃಶಾಸ್ತ್ರಗಳಿಂದ ಜನರಿಗೆ ಅವರವರ ಅನಾದಿವಾಸನಾನುಸಾರವಾಗಿ ತಿಳಿದು ಬರುತ್ತಾನೆ. ಪಾರ್ಥಿವ ದೇಹದಲ್ಲಿ ನೆಲೆಸಿರುವ ಮುಖ್ಯಪ್ರಾಣ ಜನರಿಗೆ ಹೇಗೆ ಅವರ ಅನಾದಿವಾಸನಾನುಸಾರವಾಗಿ ತಿಳಿದು ಬರುವನೋ ಹಾಗೆ. ಇಂಥ ಪರಮಾತ್ಮ ನನ್ನ ಮನೋರಥವನ್ನು ಈಡೇರಿಸಲಿ.

[೧]ಇಲ್ಲಿ ಶ್ರೀಧರವ್ಯಾಖ್ಯಾನ ಹೀಗೆ ಹೇಳುತ್ತದೆ–'ಅರ್ವಾಚೀನವಾದ ಉಪಾಸನಾಮಾರ್ಗಗಳಿಂದ ಜನರ ಅಭಿರುಚಿಗಳಿಗೆ ಅನುಗುಣವಾಗಿ ದೇಹಗತನಾದ ಅಂತರ್ಯಾಮಿ ನಾನಾ ದೇವತೆಗಳ ರೂಪದಿಂದ ವಿವಿಧವಾಗಿ ಭಾಸಮಾನ

೧. ನನು ತ್ವಾದೃಶಾಃ ಸಕಾಮಾ ಗಣೇಶಾದೀನ್ ಪ್ರಾರ್ಥಯಂತೇ ತ್ವಂ ತು ತಾನ್ ವಿಹಾಯ ಕಿಮಿತಿ ಭಗವಂತಮೇವ ಪ್ರಾರ್ಥಯಸೇ ತತ್ರಾಹ ಪ್ರಾಕೃತೈರರ್ವಾಚೀನೈರ್ಜ್ಞಾನಪಥೈರ್ಯಥಾಶಯಂ ತತ್ತದ್ವಾಸನಾನುಸಾರೇಣ ಯೋ ದೇಹಗತೋಽಂತರ್ಯಾಮೀ ತತ್ತದ್ದೇವತಾರೂಪೇಣ ವಿವಿಧೋ ಭಾತಿ ಯಥಾ ವಾಯುರ್ನಾನಾಗಂಧವಾನ್ ಭಾತಿ । ತತ್ತದ್ದೇವತಾರೂಪೇಣ ಫಲದಾತೃತ್ವಾತ್ ಸ ಈಶ್ವರ ಏವ ಮೇ ಮನೋರಥಂ ಸತ್ಯಂ ಕರೋತು ಕಿಮಂತರ್ಗಡುಭಿ ರ್ದೇವತಾಂತರೈರಿತ್ಯರ್ಥಃ ।
–ಶ್ರೀಧರಃ

ನಾಗುತ್ತಾನೆ. ವಾಯು ಬೇರೆ ಬೇರೆ ಗಂಧಗಳ ಸಂಪರ್ಕದಿಂದ ನಾನಾ ಗಂಧಯುಕ್ತವಾಗಿ ಬೇರೆಬೇರೆ ಬಣ್ಣದ ಧೂಳಿನ ಕಣಗಳಿಂದ ನಾನಾರೂಪವಾಗಿ ಕಾಣುವಂತೆ. ಆಯಾ ಫಲಗಳನ್ನು ನಾನಾ ದೇವತಾರೂಪಗಳಿಂದ ಕೊಡುವವನು, ಅಂತರ್ಯಾಮಿಯೇ. ಅವನೇ ನನ್ನ ಅಭೀಷ್ಟ ಪೂರೈಸಲಿ ಈ ದೇವತೆಗಳಿಂದೇನು?' ಈ ವ್ಯಾಖ್ಯಾನದಲ್ಲಿ ಉಪಾಸನಾಮಾರ್ಗಗಳನ್ನು ಅರ್ವಾಚೀನವೆಂದು ವಿಶೇಷಣ ಸೇರಿಸಿ ಹೇಳಿದ್ದು ವ್ಯರ್ಥ. ಮತ್ತು ದೇವತಾರೂಪಗಳಿಂದ ಅಂತರ್ಯಾಮಿಯೇ ಫಲ ನೀಡುತ್ತಾನೆ ಎಂದ ಮಾತ್ರಕ್ಕೆ ದೇವತೆಗಳನ್ನು ಏಕೆ ಬಿಡಬೇಕು? ಎನ್ನಲು ಕಾರಣ ಸ್ಪಷ್ಟವಿಲ್ಲ. ಭಗವದ್ಗೀತೆಯಲ್ಲಿ 'ಅಂತವತ್ತು ಫಲಂ ತೇಷಾಮ್' ಅನ್ಯದೇವತಾರಾಧನ ಮಾಡುವವರಿಗೆ ಮೋಕ್ಷರೂಪವಾದ ಅನಂತಫಲ ಸಿಗಲಾರದು. ಅಲ್ಪಫಲ ಸಿಗುತ್ತದೆ ಎಂದಿದೆ. ದಕ್ಷಪ್ರಜಾಪತಿ ಈಗ ಮೋಕ್ಷವನ್ನು ಬಯಸದೆ ಕೇವಲ ಪ್ರಜಾಸೃಷ್ಟಿಫಲ ಕೇಳುತ್ತಿದ್ದಾನೆ. ಅವನ ಆ ಬಯಕೆಯನ್ನು ಅಂತರ್ಯಾಮಿಯು ದೇವತಾ ರೂಪದಿಂದಲೇ ಕೊಡಬಹುದು. ದೇವತಾರೂಪವನ್ನು ಬಿಡಲು ಕಾರಣವಿಲ್ಲ. 'ನಿನ್ನಂಥ ಐಹಿಕಫಲಕಾಮನೆ ಉಳ್ಳವರು ಗಣೇಶ ಮುಂತಾದವರನ್ನು ಭಜಿಸುತ್ತಾರೆ, ನೀನೇಕೆ ಅವರನ್ನು ಬಿಟ್ಟು ಭಗವಂತನನ್ನು ಭಜಿಸುವೆ' ಎಂದು ಕೇಳಿದರೆ ದಕ್ಷಪ್ರಜಾಪತಿ ಕೊಡುವ ಉತ್ತರ ಈ ಶ್ಲೋಕ ಎಂದು ಶ್ರೀಧರವ್ಯಾಖ್ಯಾನದಲ್ಲಿ ಹೇಳಿದೆ. ಆದರೆ ಶ್ಲೋಕದಲ್ಲಿ ದಕ್ಷ ಪ್ರಶ್ನೆಗೆ ಉತ್ತರ ನೀಡಿಲ್ಲ.

[೧]ವೀರರಾಘವ್ಯಾಖ್ಯಾನ ಹೀಗೆ ಹೇಳುತ್ತದೆ– ಜಗತ್ತು ಪರಮಾತ್ಮನ ಶರೀರ ಎಂದು ತಿಳಿದವರಿಗೆ ಮನೊವೃತ್ತಿಗಳಿಗೆ ಅನುಗುಣವಾಗಿ ಪ್ರವೃತ್ತಿ ಮಾಡುವ ಪ್ರಾಕೃತ ಇಂದ್ರಿಯಗಳಿಂದ ಜಗತ್ತು ಗೋಚರವಾದಾಗ ಜಗಚ್ಛರೀರಿಯಾದ ಪರಮಾತ್ಮನೇ ಗೋಚರನಾಗುತ್ತಾನೆ, ಹೂವಿನ ಸಂಪರ್ಕದಿಂದ ವಾಯು ಗಂಧಯುಕ್ತವಾಗಿ ಕಾಣುವಂತೆ' ಇಲ್ಲಿ ಇಂದ್ರಿಯಗಳು ಮನೋವೃತ್ತಿಗಳಿಗೆ ಅನುಗುಣವಾಗಿ ಪ್ರವೃತ್ತಿಮಾಡುವುದು ಎಲ್ಲರಿಗೂ ಗೊತ್ತು. ಅದನ್ನು ಶ್ಲೋಕದಲ್ಲಿ ಹೇಳುವುದು ವ್ಯರ್ಥ. ಅವರವರ ಮನೋಭಾವನೆಗಳಿಗೆ ಅನುಗುಣವಾಗಿ ನಾನಾರೂಪದಿಂದ ಭಗವಂತ ಕಾಣುತ್ತಾನೆ ಎನ್ನುವ ಅಭಿಪ್ರಾಯವಿರುತ್ತಿದ್ದರೆ ಈ ವಿಶೇಷಣ ಸಾರ್ಥಕವಾಗುತ್ತಿತ್ತು. ದೇಹಗತ ಎಂಬ ವಿಶೇಷಣಕ್ಕೆ ಜಗಚ್ಛರೀರಿ ಎಂದು ಅರ್ಥವೂ ಸ್ವರಸವಲ್ಲ. ಜಗತ್ತು ಪರಮಾತ್ಮನ ಶರೀರವೂ ಅಲ್ಲ.

೧. ಪ್ರಾಕೃತಾರ್ಥಗೋಚರೈರ್ಜ್ಞಾನಪಥ್ಯೈರಿಂದ್ರಿಯೈರ್ಯಥಾಶಯಂ ಮನೋವೃತ್ತ್ಯನುಗುಣಮಿಂದ್ರಿಯಾಣಾಂ ಮನೋವೃತ್ತ್ಯನುಗುಣಪ್ರವೃತ್ತೇರ್ದೇಹಗತಃ ಸ್ವದೇಹಭೂತ ಚಿದಚಿದ್ ವಸ್ತುಗತೋ ವಿಭಾತಿ । ಯಥಾ ರಾಜಶರೀರೇ ದೃಷ್ಟೇ ರಾಜಾ ದೃಷ್ಟೋ ಭವತಿ ಏವಂ ಜಗತಃ ಪರಮಾತ್ಮಶರೀರತ್ವಾತ್ ಜಗದ್ಯಾಥಾತ್ಮ್ಯವಿದ್ಭಿರ್ಜಗದ್ದರ್ಶನೇ ಸತಿ ಪರಮಾತ್ಮಾ ದೃಷ್ಟೋ ಭವತಿ । —ವೀರರಾಘವಃ

[1]ವಿಶ್ವನಾಥವ್ಯಾಖ್ಯಾನ ಹೀಗೆ ಹೇಳುತ್ತದೆ– 'ಜೀವಪರಮಾತ್ಮಭೇದ ಔಪಾಧಿಕವೆಂದು ಹೇಳುವುದು ಯುಕ್ತವಲ್ಲ. ಅರ್ವಾಚೀನ ಜ್ಞಾನಮಾರ್ಗಗಳಿಂದ ಜನರಿಗೆ ಅವರ ದೇಹದಲ್ಲಿರುವ ಪರಮಾತ್ಮ ಅವರ ಮನೋಭಾವನೆಗಳಿಗೆ ಅನುಗುಣವಾಗಿ, ಅವು ಒಳ್ಳೆಯವೋ ಕೆಟ್ಟವೋ ಆಗಿರಬಹುದು, ಜೀವರೂಪದಿಂದಲೇ ಗೋಚರನಾಗುತ್ತಾನೆ. ವಾಯು ಒಳ್ಳೆಯ ಅಥವಾ ಕೆಟ್ಟ ಗಂಧಗಳಿಂದ ಯುಕ್ತವಾಗಿ ಗೋಚರವಾಗುವಂತೆ. ವಸ್ತುತಃ ಗಾಳಿ ಗಂಧಯುಕ್ತವಲ್ಲ, ಪರಮಾತ್ಮನೂ ಜೀವರೂಪನಲ್ಲ' ಎಂದು. ಆದರೆ ಅರ್ವಾಚೀನ ಜ್ಞಾನಮಾರ್ಗದಿಂದ ಜನರಿಗೆ ಜೀವೈಶ್ವರೈಕ್ಯಭ್ರಾಂತಿ ಏಕೆ ಬರುತ್ತದೆ? ಅರ್ವಾಚೀನ ಎಂದರೆ ಅಸಮಂಜಸವೆಂದರ್ಥವೆ? ಮತ್ತು ಜನರ ಮನೋಭಾವನೆಗಳಿಗೆ ಅನುಗುಣವಾಗಿ ಅವೂ ಒಳ್ಳೆಯವೇ ಇದ್ದರೂ ಜೀವೈಕ್ಯಭ್ರಾಂತಿ ಏಕೆ ಬರುತ್ತದೆ? ಮತ್ತು ವಾಯು ದೃಷ್ಟಾಂತವೂ ಸರಿಯಲ್ಲ. ವಾಯು ಗಂಧಯುಕ್ತವಾಗಿ ಗೋಚರಿಸಿದರೆ ಅದು ಭ್ರಾಂತಿಯಲ್ಲ. [2]ಶುಕದೇವವ್ಯಾಖ್ಯಾನದಲ್ಲಿ ವಾಯುವನ್ನು ಗಂಧವೆಂದೇ ಜನರು ಭ್ರಮಿಸುತ್ತಾರೆ ಎಂದಿದೆ. ಇದು ಅನುಭವವಿರುದ್ಧ. ಗಾಳಿ ಗಂಧಯುಕ್ತವಾಗಿದೆ ಎಂದೇ ಎಲ್ಲರ ಅನುಭವ.

ಪ್ರಕಾಶಸಂಹಿತೆಯಲ್ಲಿ ಭಾಗವತಶ್ಲೋಕಕ್ಕೆ ಸುಂದರವಾದ ವ್ಯಾಖ್ಯಾನವಿದೆ–

ಸ್ವದೇಹಸ್ಥಂ ಹರಿಂ ಪ್ರಾಹುರಧಮಾ ಜೀವಮೇವ ತು ।
ಮಧ್ಯಮಾಶ್ಚಾಪ್ಯನಿರ್ಣೀತಂ ಜೀವಾದ್ಭಿನ್ನಂ ಜನಾರ್ದನಮ್ ॥

ಪೂರ್ಣಾನಂದಾದಿಗುಣಕಂ ಸರ್ವಜೀವವಿಲಕ್ಷಣಮ್ ।
ಉತ್ತಮಾಸ್ತು ಹರಿಂ ಪ್ರಾಹುಸ್ತಾರತಮ್ಯೇನ ತೇಷು ಚ ॥

ಬುದ್ಧಿಶುದ್ಧ್ಯನುಸಾರೇಣ ಯಥಾ ಪ್ರಾಣಂ ಶರೀರಗಮ್ ।
ಶ್ವಾಸಮಾತ್ರಂ ಜನಾಃ ಪ್ರಾಹುರನಿರ್ಣೀತಂ ಚ ಮಧ್ಯಮಾಃ ।
ದೇವದೇವೇಶ್ವರಂ ಸೂತ್ರಮಾನಂದಂ ಪ್ರಾಣವೇದಿನಃ ॥ ಇತಿ ಚ ।

---

೧. ಯೇ ಜೀವೇಶ್ವರಯೋಃ ಪಾರ್ಥಕ್ಯಮುಪಾಧಿಕೃತಮೇವ ನ ವಾಸ್ತವಮಿತ್ಯಾಚಕ್ಷತೇ ತೇಷಾಂ ಜ್ಞಾನಿಮಾನಿನಾಮಸಮಂಜಸಪಥಗಾಮಿತ್ವಂ ವ್ಯಂಜಯನ್ ಪ್ರಾರ್ಥಯತೇ ಯ ಇತಿ । ಯಃ ಪ್ರಾಕೃತೈರರ್ವಾಚೀನೈರ್ಜ್ಞಾನಮಾರ್ಗೈರ್ಜನಾನಾಂ ದೇಹಗತಃ ಯಥಾಶಯಮಂತಃಕರಣಂ ದುಷ್ಟಂ ಶಿಷ್ಟಂ ವಾ ಅನತಿಕ್ರಮ್ಯ ತದ್ಧರ್ಮಾಕ್ರಾಂತ ಏವ ವಿಭಾತಿ । ಜೀವರೂಪೇಣ ಭಾಸತೇ । ಯಥಾ ವಾಯುಃ ಪಾರ್ಥಿವಂ ದುಷ್ಟಂ ಶಿಷ್ಟಂ ವಾ ಗಂಧಮಾಶ್ರಿತೋ ನಾನಾಗಂಧವಾನ್ ಭವತಿ ನ ತು ವಸ್ತುತಃ । –ವಿಶ್ವನಾಥಃ

೨. ಗಂಧೋಽಯಮಿತಿ ಜನಾನಾಂ ವಿಭಾತಿ ತದ್ವದಿತ್ಯರ್ಥಃ । –ಶುಕದೇವಃ

ಅಧಮ ಜೀವರು ತಮ್ಮ ಬುದ್ಧಿಗನುಸಾರವಾಗಿ ತಮ್ಮ ಶರೀರದಲ್ಲಿರುವ ಹರಿಯನ್ನು ಜೀವನೆಂದೇ ಹೇಳುತ್ತಾರೆ. ಮಧ್ಯಮ ಜೀವರು ತಮ್ಮ ಬುದ್ಧ್ಯನುಸಾರವಾಗಿ ಹರಿಯನ್ನು ಜೀವನೆಂದೊ ಜೀವವಿಲಕ್ಷಣನೆಂದೋ ನಿರ್ಣಯಿಸಲಾಗದೆನ್ನುತ್ತಾರೆ. ಉತ್ತಮ ಜೀವರು ತಮ್ಮ ತಾರತಮ್ಯಾನುಸಾರಿ ಬುದ್ಧಿಶುದ್ಧಿಗನುಗುಣವಾಗಿ ಜನಾರ್ದನನನ್ನು ಪೂರ್ಣಾನಂದಾದಿಗುಣ ಉಳ್ಳವನೆಂದೂ ಆದರಿಂದ ಸರ್ವ ಜೀವರಿಗಿಂತ ವಿಲಕ್ಷಣನೆಂದೂ ಹೇಳುತ್ತಾರೆ. ಶರೀರದಲ್ಲಿರುವ ಪ್ರಾಣವನ್ನು ಅಧಮರು ಶ್ವಾಸಮಾತ್ರವೆಂದೂ ಮಧ್ಯಮರು ಅದರ ಸ್ವರೂಪವನ್ನು ನಿರ್ಣಯಿಸಲಾಗದೆಂದೂ ಉತ್ತಮರು ದೇವದೇವೇಶ್ವರ ಸೂತ್ರನಾಮಕ ಆನಂದರೂಪಿ ಪ್ರಾಣದೇವನೆಂದೂ ಹೇಳುತ್ತಾರೆ. ಹಾಗೇ ಇದು ಎಂದು ಉಕ್ತವಾಗಿದೆ.

ಭಾಗವತಶ್ಲೋಕದಲ್ಲಿ 'ಯಥಾಶಯಂ' ಎಂದಿರುವುದನ್ನು 'ಬುದ್ಧಿಶುದ್ಧ್ಯನುಸಾರೇಣ' ಎಂದು ತಾತ್ಪರ್ಯದಲ್ಲಿ ವಿವರಿಸಲಾಗಿದೆ. ಅದನ್ನು ಬುದ್ಧ್ಯನುಸಾರೇಣ, ಬುದ್ಧಿಶುದ್ಧ್ಯನುಸಾರೇಣ ಎಂದು ಬಿಡಿಸಿಕೊಂಡು ಅಧಮರೂ ಮಧ್ಯಮರೂ ತಮ್ಮ ಬುದ್ಧ್ಯನುಸಾರವಾಗಿ, ಉತ್ತಮರು ಬುದ್ಧಿಶುದ್ಧ್ಯನುಸಾರವಾಗಿ ತಿಳಿಯುತ್ತಾರೆ ಎಂದು ಅನ್ವಯಿಸಬೇಕು. ಶ್ಲೋಕದಲ್ಲಿ 'ಪ್ರಾಕೃತೈಃ' ಎಂದರೆ ದುಷ್ಟಶಾಸ್ತ್ರಗಳಿಂದ ಅಧಮ ಮಧ್ಯಮರೂ, 'ಜ್ಞಾನಪಥೈಃ' ಎಂದರೆ ಸಚ್ಛಾಸ್ತ್ರಗಳಿಂದ ಉತ್ತಮರೂ ತಿಳಿಯುತ್ತಾರೆ ಎಂದೂ ಅನ್ವಯಿಸಬೇಕು. ತಮ್ಮಲ್ಲಿರುವ ಯೋಗ್ಯತಾತಾರತಮ್ಯಾನುಗುಣವಾದ ಬುದ್ಧಿಶುದ್ಧಿಬಲದಿಂದ ಭಗವಂತನಲ್ಲಿ ಪೂರ್ಣವಾದ ಆನಂದಾದಿಗುಣಗಳನ್ನು ಹೆಚ್ಚು ಹೆಚ್ಚಾಗಿ ಉತ್ತಮರು ತಿಳಿಯುತ್ತಾರೆ.

* * *

ದಕ್ಷನಿಗೆ ಒಲಿದು, ಶ್ರೀಹರಿ ಮೈದೋರಿ ನುಡಿದ.

ಬ್ರಹ್ಮಾ ಭವೋ ಭವಂತಶ್ಚ ಮನವೋ ವಿಬುಧೇಶ್ವರಾಃ ।
ವಿಭೂತಯೋ ಮಮ ಹ್ಯೇತಾ ಭೂತಾನಾಂ ಭೂತಿಹೇತವಃ ॥ ೪೫ ॥

ಬ್ರಹ್ಮ ಶಿವ ನೀವು ಪ್ರಜಾಪತಿಗಳು ಮನುಗಳು ದೇವಶ್ರೇಷ್ಠರು ಇವರೆಲ್ಲರೂ ನನ್ನ ವಿಶೇಷಸನ್ನಿಧಾನಪಾತ್ರರಾಗಿದ್ದು ಪ್ರಜೆಗಳ ಸಮೃದ್ಧಿಗೆ ಕಾರಣರಾಗಿರುವಿರಿ.

ಇಲ್ಲಿ ವಿಭೂತಿ ಎಂದರೆ ಅಂಶ ಎಂದು ವೀರರಾಘವವ್ಯಾಖ್ಯಾನ. ಬ್ರಹ್ಮಾದಿ ದೇವತೆಗಳು ಹರಿಯ ಸ್ವರೂಪಾಂಶರೆಂದು ಅವರ ಅಭಿಪ್ರಾಯ. ಇದು ಸರಿಯಲ್ಲ. ಅವತಾರವಿಶೇಷ ವಿಭೂತಿ ಎನಿಸುತ್ತದೆ ಎಂದು ಗಿರಿಧರವ್ಯಾಖ್ಯಾನ. ಆವೇಶಾವತಾರಾಭಿಪ್ರಾಯವಿದ್ದಲ್ಲಿ ಇದು ಸರಿಯೆ. ಆದರೂ 'ವಿಭೂತಿ'ಶಬ್ದದ ಅವಯವಾರ್ಥವನ್ನು ಬೇರೆ ವ್ಯಾಖ್ಯಾನಕಾರರು ಯಾರೂ ಇಲ್ಲಿ ತೋರಿಸಿಲ್ಲ. ತಂತ್ರನಿರ್ಣಯವಚನ ಅದನ್ನು ತೋರಿಸುತ್ತದೆ.

ವಿಶೇಷವ್ಯಕ್ತಿಪಾತ್ರತ್ವಾದ್ ಬ್ರಹ್ಮಾದ್ಯಾಸ್ತು ವಿಭೂತಯಃ ।
ತದಂತರ್ಯಾಮಿಣಶ್ಚೈವ ಮತ್ಸ್ಯಾದ್ಯಾ ವಿಭವಾಃ ಸ್ಮೃತಾಃ ॥
ಇತಿ ತಂತ್ರನಿರ್ಣಯೇ ।

ಶ್ರೀಹರಿಯ 'ವಿ' ವಿಶೇಷವಾದ 'ಭೂತಿ'ಗೆ ಅಂದರೆ ಅಭಿವ್ಯಕ್ತಿಗೆ ಸ್ಥಾನಭೂತರಾದ್ದರಿಂದ ಬ್ರಹ್ಮಾದಿಗಳು ವಿಭೂತಿಗಳೆನಿಸುತ್ತಾರೆ. ಹರಿಯ ಮತ್ಸ್ಯಾದಿರೂಪಗಳೂ ಜೀವರ ಅಂತರ್ಯಾಮಿರೂಪಗಳೂ 'ವಿ'ವಿಶೇಷವಾಗಿ ಸರ್ವೋತ್ತಮವಾಗಿ 'ಭವ' ಇರುವವುಗಳಾದ್ದರಿಂದ ವಿಭವಗಳೆನಿಸುತ್ತವೆ ಎಂದು ತಂತ್ರನಿರ್ಣಯದಲ್ಲಿ ಉಕ್ತವಾಗಿದೆ.

* * *

ತಪಸ್ಸು ನನಗೆ ಪ್ರಿಯವಾಗಿದೆ. ಅಂಥ ತಪಸ್ಸನ್ನು ನೀನು ಮಾಡಿರುವೆ ಎಂದು ಶ್ರೀಹರಿ ದಕ್ಷನನ್ನು ಹೊಗಳುತ್ತಾನೆ.

ತಪೋ ಮೇ ಹೃದಯಂ ಬ್ರಹ್ಮ ತನುರ್ವಿದ್ಯಾ ಕ್ರಿಯಾಽಽಕೃತಿಃ ।
ಅಂಗಾನಿ ಕ್ರತವೋ ಜಾತಾ ಧರ್ಮ ಆತ್ಮಾಽಸವಃ ಸುರಾಃ ॥ ೪೬ ॥

ತಪಸ್ಸಿಗೆ ಅಭಿಮಾನಿಯಾದ ಶಿವ ನನ್ನ ಗುಣಪೂರ್ಣವಾದ ಹೃದಯದಿಂದ ಹುಟ್ಟಿ ಅಲ್ಲಿಯೆ ಇರುವುದರಿಂದ ತಪಸ್ಸು ನನಗೆ ಪ್ರಿಯವಾಗಿದೆ. ವಿದ್ಯಾಭಿಮಾನಿನಿ ಉಮೆ ನನ್ನ ಶರೀರದಿಂದ, ಕ್ರಿಯಾಭಿಮಾನಿ ಇಂದ್ರ ಆಕೃತಿಯಿಂದ. ಯಜ್ಞಾಭಿಮಾನಿ ದೇವತೆಗಳು ಬೇರೆ ಬೇರೆ ಅಂಗಗಳಿಂದ, ಧರ್ಮಾಭಿಮಾನಿ ಯಮ ಮಧ್ಯದೇಹದಿಂದ ಮುಖ್ಯಪ್ರಾಣ ಪ್ರಾಣದಿಂದ, ಬ್ರಹ್ಮ ಚಿತ್ತದಿಂದ, ಬೇರೆ ಸೂರ್ಯಾದಿದೇವತೆಗಳು ಚಕ್ಷುರಾದಿ ಇಂದ್ರಿಯಗಳಿಂದ ಜನಿಸಿ ಅಲ್ಲೇ ಇರುತ್ತಾರೆ.

ಇಲ್ಲಿ ವಿಶ್ವನಾಥ ವ್ಯಾಖ್ಯಾನದ ಪ್ರಕಾರ ಕರ್ಮಯೋಗಕ್ಕೆ ಉಚಿತವಾದ ಪರಮಾತ್ಮನ ರೂಪವನ್ನು ವರ್ಣಿಸಲಾಗಿದೆ. ತಪಸ್ಸು ಮುಂತಾದವು ಆ ರೂಪದ ಅವಯವಗಳು. ಮುಂದೆ 'ಅಹಮೇವಾಸಮೇವಾಗ್ರೇ' ಎಂದು ಮುಂತಾಗಿ ಹೇಳುವುದು ಭಕ್ತಿಯೋಗಕ್ಕೆ ಉಚಿತವಾದ ಪರಮಾತ್ಮನ ರೂಪ ಎನ್ನುತ್ತಾರೆ. ಆದರೆ ಈ ರೂಪಗಳ ಕಲ್ಪನೆ ನಿರಾಧಾರವಾಗಿದೆ.

ವೀರರಾಘವ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ–'ತಪಸ್ಸು ಮುಂತಾದುವನ್ನು ತನ್ನ ಹೃದಯ ಎಂದು ಮುಂತಾಗಿ ರೂಪಕ ಮಾಡಿ ಭಗವಂತ ಹೊಗಳುತ್ತಿದ್ದಾನೆ. ತನಗೆ ತನ್ನ ಹೃದಯದಂತೆ ಪರಮ ಪ್ರೀತ್ಯಾಸ್ಪದವೆನಿಸಿದ್ದು ತಪಸ್ಸು ಎಂದು ಅಭಿಪ್ರಾಯ ಎಂದು. ಆದರೆ ರೂಪಕವೆಂದರೆ ಆಹಾರ್ಯ ಅಭೇದಾರೋಪ. ಅದರಿಂದ ಹೃದಯಶಬ್ದಕ್ಕೆ ಹೃದಯದಂತೆ ಪ್ರೀತ್ಯಾಸ್ಪದ ಎಂದರ್ಥ. ಇದು ಲಕ್ಷಣಾ. ಈ

ಅಭೇದಾರೋಪವಾಗಲಿ ಲಕ್ಷಣೆಯಾಗಲಿ ಕಾವ್ಯದಲ್ಲಿ ಚಮತ್ಕಾರಕಾರಿಯಾಗಬಹುದು. ಶಾಸ್ತ್ರದಲ್ಲಿ ಅಲ್ಲ. ಆದರಿಂದ ಹೃದಯದಲ್ಲಿ ಹುಟ್ಟಿ ಹೃದಯವನ್ನು ಆಶ್ರಯಿಸಿರುವ ತಪಸ್ಸನ್ನು ಹೃದಯ ಎಂಬ ನಾಮದಿಂದಲೇ ಕರೆಯುವುದು ಶಬ್ದನಿರ್ಣಯಗ್ರಂಥಕ್ಕೆ ಸಮ್ಮತವಾದ್ದರಿಂದ ರೂಪಕ ಅನಾವಶ್ಯಕ. ತಪಸ್ಸು ಮುಂತಾದ ಶಬ್ದಗಳಿಂದ ತಪಸ್ಸಿನ ಅಭಿಮಾನಿ ದೇವತೆಗಳನ್ನು ಕೂಡ ಇಟ್ಟುಕೊಳ್ಳುವುದು ತಂತ್ರನಿರ್ಣಯ ಗ್ರಂಥೋಕ್ತವಾಗಿದ್ದರೂ ಅದನ್ನು ಬೇರೆ ವ್ಯಾಖ್ಯಾನಕಾರರು ಯಾರೂ ಗಮನಿಸದಿರುವುದೂ ಸರಿಯಲ್ಲ.

ತಪೋಽಭಿಮಾನೀ ರುದ್ರಸ್ತು ವಿಷ್ಣೋರ್ಹೃದಯಮಾಶ್ರಿತಃ ।
ವಿದ್ಯಾರೂಪಾ ತಥೈವೋಮಾ ವಿಷ್ಣೋಸ್ತನುಸಮಾಶ್ರಿತಾ ॥

ಶೃಂಗಾರಾದ್ಯಾಕೃತಿಗತಃ ಕ್ರಿಯಾತ್ಮಾ ಪಾಕಶಾಸನಃ ।
ಅಂಗೇಷು ಕ್ರತವಃ ಸರ್ವೇ ಮಧ್ಯದೇಹೇ ಚ ಧರ್ಮರಾಟ್ ।
ಪ್ರಾಣೇ ವಾಯುಶ್ಚಿತ್ತಗತೋ ಬ್ರಹ್ಮಾಽನ್ಯಾಃ ಖೇಷು ದೇವತಾಃ ॥
ಇತಿ ಚ ।

ಯದಾಶ್ರಯಂ ಯದ್ ಭವತಿ ತತ್ತನ್ನಾಮಕಮೀರಿತಮ್ ॥
ಇತಿ ಶಬ್ದನಿರ್ಣಯೇ ।

ತಪೋಭಿಮಾನಿಯಾದ ರುದ್ರನು ವಿಷ್ಣುವಿನ ಹೃದಯವನ್ನು ಆಶ್ರಯಿಸಿರುತ್ತಾನೆ. ವಿದ್ಯಾಭಿಮಾನಿನಿ ಪಾರ್ವತಿ ವಿಷ್ಣುವಿನ ಪೂರ್ಣಶರೀರವನ್ನು ಆಶ್ರಯಿಸಿರುತ್ತಾಳೆ. ಕ್ರಿಯಾಭಿಮಾನಿಯಾದ ಇಂದ್ರ ವಿಷ್ಣುವಿನ ಶರೀರದ ಶೃಂಗಾರಾದಿ ಆಕೃತಿಗಳಲ್ಲಿ ಇರುತ್ತಾನೆ. ಎಲ್ಲ ಯಜ್ಞಾಭಿಮಾನಿಗಳು ಅಂಗಗಳಲ್ಲಿ ನೆಲೆಸಿರುತ್ತಾರೆ. ಧರ್ಮರಾಜ ದೇಹದ ಮಧ್ಯದಲ್ಲಿ ಇರುತ್ತಾನೆ. ಪ್ರಾಣದಲ್ಲಿ ವಾಯು, ಚಿತ್ತದಲ್ಲಿ ಬ್ರಹ್ಮ, ಇಂದ್ರಿಯಗಳಲ್ಲಿ ಬೇರೆ ದೇವತೆಗಳು ನೆಲೆಸಿರುತ್ತಾರೆ ಎಂದೂ ತಂತ್ರನಿರ್ಣಯದಲ್ಲಿ ಹೇಳಿದೆ.

ಯಾವುದು ಯಾವುದನ್ನು ಆಶ್ರಯಿಸಿರುತ್ತದೋ ಅದಕ್ಕೆ ಅದರ ನಾಮವೇ ಬರುತ್ತದೆ ಎಂದು ಶಬ್ದನಿರ್ಣಯದಲ್ಲಿ ಉಕ್ತವಾಗಿದೆ.

* * *

ದಕ್ಷನಿಗೆ ಒಲಿದು ಮೈದೋರಿದ ಹರಿ ಸೃಷ್ಟಿಕಾರ್ಯಕ್ಕೆ ತಪಸ್ಸು ಎಷ್ಟು ಆವಶ್ಯಕ ವೆನ್ನುವುದನ್ನು ಆದಿಸೃಷ್ಟಿಕಾಲದ ಉದಾಹರಣೆ ಕೊಟ್ಟು ಬೋಧಿಸುತ್ತಾನೆ.

ಅಹಮೇವೇದಮಾಸಾಗ್ರೇ ನಾನ್ಯತ್ ಕಿಂಚಾಂತರಂ ಬಹಿಃ ।
ಸಂಜ್ಞಾನಮಾತ್ರಮವ್ಯಕ್ತಂ ಪ್ರಸುಪ್ತಮಿವ ವಿಶ್ವತಃ ॥ ೪೭ ॥

ನೀನು ತಪಸ್ಸಿನಿಂದ ಸಾಕ್ಷಾತ್ಕರಿಸಿಕೊಂಡ ಈ ನನ್ನ ಚಿನ್ಮಯವಾದ ರೂಪವೇ ಹಿಂದೆ ಪ್ರಳಯಕಾಲದಲ್ಲಿಯೂ ಇದ್ದಿತು. ಒಳಗೆ ಹೊರಗೆ ಬೇರೇನೂ ಇರಲಿಲ್ಲ. ನನ್ನ ಅನುಗ್ರಹವಾಗದೆ ಯಾರಿಗೂ ಕಾಣಲಾಗದ ಗುಣಪೂರ್ಣವಾದ ಈ ರೂಪ ಪ್ರಳಯಕಾಲದಲ್ಲಿ ಕಣ್ಣು ಮುಚ್ಚಿಕೊಂಡು ನಿದ್ರಿಸುವಂತಿತ್ತು.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ 'ಅಹಮೇವಾಸಮೇವಾಗ್ರೇ' ಎಂದು ಅಪಪಾಠವಿಟ್ಟುಕೊಂಡಿದ್ದಾರೆ. ಶ್ರೀಧರವ್ಯಾಖ್ಯಾನದಲ್ಲಿ 'ಪ್ರಳಯಕಾಲದಲ್ಲಿ ನಾನೊಬ್ಬನೆ ಇದ್ದೆ. ಒಳಗೆ ಹೊರಗೆ ಬೇರೆ ಯಾವ ವಸ್ತುವೂ ಇರಲಿಲ್ಲ. ನಾನು ಸುಮ್ಮನೇ ಇದ್ದೆ, ಅಸ್ತಿತ್ವ ಹೊರತು ಬೇರೆ ಕ್ರಿಯೆ ನನ್ನಲ್ಲಿರಲಿಲ್ಲ. ಶುದ್ಧಚೈತನ್ಯ ಮಾತ್ರವೆ ನಾನು ನಿರ್ವಿಷಯಕನಾದ್ದರಿಂದ ನಿದ್ರೆ ಮಾಡುತ್ತಿರುವಂತೆ ಇದ್ದೆ' ಎಂದು ಹೇಳಿದೆ. ಲಯಕಾಲದಲ್ಲಿ ನಿರ್ಗುಣವಿದ್ದಿತು. ಸೃಷ್ಟಿಕಾಲದಲ್ಲಿ ಸಗುಣ ಉಂಟಾಯಿತೆಂದು ಅಭಿಪ್ರಾಯ. ಇದು ಸರಿಯಲ್ಲ. ನಾನಾವರ್ಣ ನಾನಾ ಅವಯವಯುಕ್ತನಾದ ಸಗುಣನಾದ ಭಗವಂತನೇ ಲಯಕಾಲದಲ್ಲಿ ಸುಪ್ತನಂತೆ ಸೃಷ್ಟಿಕಾರ್ಯವನ್ನು ಬದಿಗಿಟ್ಟು ಕಣ್ಣುಮುಚ್ಚಿಕೊಂಡಿದ್ದನೆಂದು ಮತ್ಸ್ಯಪುರಾಣ ವಚನವಿದೆ. ವಿಶ್ವನಾಥ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ– 'ನೀನು ಕಂಡ ಈ ರೂಪದಲ್ಲಿಯೆ ನಾನು ಸೃಷ್ಟಿಗೆ ಪೂರ್ವದಲ್ಲಿಯೂ ಇದ್ದೆ, ಮಹಾಪ್ರಳಯಾನಂತರವೂ ಇರುವೆ, ಈಗಲೂ ಇದ್ದೇನೆ. ಸಣ್ಣರೂಪದವನಾದರೂ ಅಚಿಂತ್ಯಶಕ್ತಿಯಿಂದ ವ್ಯಾಪಕನೂ ಆಗಿದ್ದೇನೆ. ಇದು ಭಕ್ತಿಯೋಗಕ್ಕೆ ಉಚಿತವಾದ ರೂಪ. ಜ್ಞಾನಯೋಗಕ್ಕೆ ಉಚಿತವಾದ ಶುದ್ಧಚೈತನ್ಯಸ್ವರೂಪನಾಗಿಯೂ ಅತೀಂದ್ರಿಯನಾಗಿ ಎಲ್ಲೆಡೆಯೂ ನಾನಿರುತ್ತೇನೆ.' ಎಂದಿದೆ. ಆದರೆ 'ಅಹಮೇವ' ಎಂದು ಏವಕಾರದಿಂದ ಸಗುಣಮಾತ್ರವೇ ಮೂರುಕಾಲದಲ್ಲಿಯೂ ಇದೆ ಎಂದು ಹೇಳಿ ನಿರ್ಗುಣವೂ ಇದೆ ಎನ್ನುವುದು ವ್ಯಾಹತವಾಗುವುದು. ಅದರಿಂದ ಮತ್ಸ್ಯಪುರಾಣವಚನಾನುಸಾರವಾಗಿ ಹೀಗೆ ವ್ಯಾಖ್ಯಾನಿಸಬೇಕು–

ಸಂಜ್ಞಾನಮಾತ್ರಂ ಯದಿದಂ ತ್ವಯಾ ತಪಸಾ ದೃಷ್ಟಂ ಮಮ ರೂಪಂ ತದೇವಾಗ್ರ ಆಸೀತ್ ।

ನಾನಾವರ್ಣೋ ಹರಿಸ್ತ್ವೇಕೋ ಬಹುಶೀರ್ಷಭುಜೋರುಪಾತ್ ।
ಆಸೀಲ್ಲಯೇ ತದನ್ಯತ್ತು ಸೂಕ್ಷ್ಮರೂಪಂ ಶ್ರಿಯಂ ವಿನಾ ।
ಅಸುಪ್ತಃ ಸುಪ್ತ ಇವ ಚ ಮೀಲಿತಾಕ್ಷೋಽಭವದ್ಧರಿಃ ॥

ಅನ್ಯತ್ರಾನಾದರಾತ್ ಶ್ರೀಶ್ಚ ವಿಷ್ಣೋರ್ಲೀನೇವ ಕಥ್ಯತೇ ।
ಸೂಕ್ಷ್ಮತ್ವೇನ ಹರೌ ಸ್ಥಾನಾಲ್ಲೀನಮನ್ಯದಪೀಷ್ಯತೇ ॥

ಇತಿ ಮಾತ್ಸ್ಯೇ ।

ನೀನು ತಪಸ್ಸಿನಿಂದ ಕಂಡಿರುವ ಜ್ಞಾನಾನಂದಾದಿ ಮಾತ್ರಸ್ವರೂಪವಾದ ನನ್ನ ಈ ರೂಪವೇ ಸೃಷ್ಟಿಗೆ ಮೊದಲು ಪ್ರಳಯಕಾಲದಲ್ಲಿದ್ದಿತು ಎನ್ನುವುದು ಶ್ಲೋಕದ ಅಭಿಪ್ರಾಯ.

'ನಾನಾವರ್ಣಗಳುಳ್ಳವನು ಅನಂತ ಶಿರ ಬಾಹು ಊರು ಪಾದಗಳುಳ್ಳವನು ಇಂಥ ಹರಿಯೊಬ್ಬನೇ ಲಯಕಾಲದಲ್ಲಿದ್ದ. ಲಕ್ಷ್ಮೀದೇವಿ, ಸೂಕ್ಷ್ಮರೂಪದ ಜಡಪ್ರಕೃತಿ ಜೀವ ಅವ್ಯಾಕೃತಾಕಾಶ ವರ್ಣಗಳು ಹೊರತು ಬೇರೆ ಯಾವುದೂ ಇರಲಿಲ್ಲ. ಶ್ರೀಹರಿಗೆ ಸುಪ್ತಿ ಇಲ್ಲದಿದ್ದರೂ ಸುಪ್ತನಂತೆ ಕಣ್ಣು ಮುಚ್ಚಿಕೊಂಡಿದ್ದ. ಶ್ರೀದೇವಿಯೂ ಹರಿಗಿಂತ ಬೇರೆಯವರಲ್ಲಿ ಅನುಗ್ರಹಾದಿರೂಪವಾದ ಆದರ ಮಾಡದಿದ್ದುದರಿಂದ ಲಯ ಹೊಂದಿದವಳಂತೆ ಹೇಳಲ್ಪಡುತ್ತಾಳೆ. ಜಡಪ್ರಕೃತಿ ಮುಂತಾದುವು ಸೂಕ್ಷ್ಮಾವಸ್ಥೆಯಲ್ಲಿ ಹರಿಯಲ್ಲಿದ್ದುದರಿಂದ ಸ್ಥೂಲರೂಪದಿಂದ ಇಲ್ಲದ್ದರಿಂದ, ಲಯ ಹೊಂದಿದಂತೆ ಉಕ್ತವಾಗುತ್ತವೆ ಎಂದು ಮತ್ಸ್ಯಪುರಾಣದಲ್ಲಿ ಹೇಳಿದೆ.

* * *

ದಕ್ಷನಿಗೆ ಒಲಿದು ಮೈದೋರಿದ ಶ್ರೀಹರಿ ಸೃಷ್ಟಿಕಾರಣವಾದ ತನ್ನ ಪದ್ಮನಾಭ ರೂಪದ ಅನಂತಗುಣ ಪರಿಪೂರ್ಣತ್ವರೂಪವಾದ ಮಹಿಮೆಯನ್ನು ಉಪದೇಶಿಸುತ್ತಾನೆ.

ಮಯ್ಯನಂತಗುಣೇಽನಂತೇ ಗುಣತೋಽನಂತವಿಗ್ರಹೇ ।
ಯದಾಸೀತ್ ತತ ಏವಾದ್ಯಃ ಸ್ವಯಂಭೂಃ ಸಮಭೂದಜಃ ॥ ೪೮ ॥

ನನ್ನ ಎಲ್ಲ ಗುಣಗಳೂ ಪ್ರತಿಯೊಂದೂ ಅಪರಿಮಿತವಾಗಿವೆ. ಅಂಥ ಅನಂತಗುಣ ಉಳ್ಳವನು ನಾನು. ಮತ್ತು ಅನಂತರೂಪ ಉಳ್ಳವನು. ನನ್ನ ನಾಭಿಕಮಲದಿಂದ ಮೊತ್ತಮೊದಲಿಗೆ ಅಯೋನಿಜನಾಗಿ ಬ್ರಹ್ಮ ಜನಿಸಿದ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಗುಣತೋ ಗುಣವಿಗ್ರಹಃ' ಎಂದು ಅಪಪಾಠ ಇಟ್ಟುಕೊಂಡಿದ್ದಾರೆ. 'ತ್ರಿಗುಣದಿಂದ ತ್ರಿಗುಣಪರಿಣಾಮರೂಪವಾದ ಬ್ರಹ್ಮಾಂಡ ವೆಂಬ ನನ್ನ ಶರೀರ ಉತ್ಪನ್ನವಾಯಿತು' ಎಂದು ವ್ಯಾಖ್ಯಾನಿಸಿದ್ದಾರೆ. 'ತ್ರಿಗುಣದಿಂದ ತ್ರಿಗುಣಪರಿಣಾಮವಾದ' ಎಂಬುದು ವ್ಯರ್ಥ ಪುನರುಕ್ತಿ. ಆದರಿಂದ 'ಗುಣತಃ' ಎಂಬುದನ್ನು 'ಗುಣವಿಗ್ರಹಃ' ಎಂಬಲ್ಲಿಗೆ ಅನ್ವಯಿಸದೆ 'ಅನಂತೇ' ಎಂಬಲ್ಲಿಗೆ ಅನ್ವಯಿಸುವುದೇ ಸಮಂಜಸ. ಆಗಲೂ 'ಅನಂತಗುಣೇ ಗುಣತೋಽನಂತೇ' ಎಂದು ಪುನರುಕ್ತಿಯಾಗುವುದಿಲ್ಲವೆ? ಎಂಬ ಪ್ರಶ್ನೆ ಬರಬಹುದು. ಇದಕ್ಕೆ ಸಮಾಧಾನವನ್ನು ತಂತ್ರಭಾಗವತ ವಚನ ನೀಡುತ್ತದೆ.

ಗುಣತೋಽನಂತೇ ।

ಪ್ರತ್ಯೇಕಶೋ ಗುಣಾನಾಂ ತು ನಿಃಸೀಮತ್ವಮುದೀರ್ಯತೇ ।
ತದಾನಂತ್ಯಂ ತು ಗುಣತಸ್ತೇ ಚಾನಂತಾ ಹಿ ಸಂಖ್ಯಯಾ ।
ಅತೋಽನಂತಗುಣೋ ವಿಷ್ಣುರ್ಗುಣತೋಽನಂತ ಏವ ಚ ॥
ಇತಿ ತಂತ್ರಭಾಗವತೇ ।

'ಗುಣತಃ' ಎಂಬುದನ್ನು 'ಅನಂತೇ' ಎಂಬುದಕ್ಕೆ ಅನ್ವಯಿಸಬೇಕು.

'ಅನಂತಗುಣೇ' 'ಗುಣತೋಽನಂತೇ' ಎಂಬಲ್ಲಿ ಪುನರುಕ್ತಿ ಪರಿಹಾರ ತಂತ್ರಭಾಗವತದಲ್ಲಿ ಹೀಗೆ ಉಕ್ತವಾಗಿದೆ–

'ಗುಣತೋಽನಂತಃ' ಎಂದರೆ ಗುಣಗಳು ಪ್ರತಿಯೊಂದೂ ಅನಂತ ಬಗೆಯವುಗಳಾಗಿವೆ ಎಂದರ್ಥ. 'ಅನಂತಗುಣಃ' ಎಂದರೆ ಗುಣಗಳು ಅಸಂಖ್ಯವಾಗಿವೆ ಎಂದರ್ಥ. ಆದರಿಂದ ವಿಷ್ಣು ಗುಣತೋಽನಂತನೂ ಆಗಿದ್ದಾನೆ ಅನಂತಗುಣನೂ ಆಗಿದ್ದಾನೆ.'

ಅನಂತಬಗೆಯ ಅನಂತಗುಣಗಳು ಪರಮಾತ್ಮನಲ್ಲಿ ಇವೆ ಎನ್ನುವಾಗ ಪುನರುಕ್ತಿಗೆ ಅವಕಾಶರಿಲ್ಲ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ
ಚತುರ್ಥೋಽಧ್ಯಾಯಃ ॥

—o—

ಅಧ್ಯಾಯ-೫

ಅಧ್ಯಾಯಸಾರಾಂಶ

ದಕ್ಷನಿಗೆ ಅಸಕ್ನಿಯಲ್ಲಿ ಹತ್ತುಸಾವಿರ ಮಂದಿ ಹರ್ಯಶ್ವರೆಂಬ ಪುತ್ರರು ಜನಿಸಿದರು. ಅವರು ತಂದೆಯ ಆದೇಶದಂತೆ ಸಂತಾನವೃದ್ಧಿಗಾಗಿ ತಪಸ್ಸು ಮಾಡಲು ಸಿಂಧೂಸಾಗರಸಂಗಮದಲ್ಲಿ ನಾರಾಯಣ ಸರೋವರದಲ್ಲಿ ಮಿಂದರು. ಆಗಲೆ ಅವರಲ್ಲಿ ಬಲವಾದ ವೈರಾಗ್ಯ ಉದಿಸಿತು. ನಾರದರೂ ಬಂದು ವೈರಾಗ್ಯವನ್ನೇ ಬೋಧಿಸಿದರು- 'ನೀವು ಅನಾದಿಲಿಂಗ ಶರೀರದಿಂದ ಬಿಡುಗಡೆ ಹೇಗೆಂಬುದನ್ನು ತಿಳಿಯಬೇಕು. ಜಗತ್ತು ಸ್ವತಂತ್ರನಾದ ಭಗವಂತನದೇ ರಾಜ್ಯ. ಅವನ ಅನುಗ್ರಹದಿಂದ ಅವನನ್ನು ಹೊಂದಿ ತಿರುಗಿ ಸಂಸಾರಕ್ಕೆ ಬಾರದಂತೆ ಮಾಡಿಕೊಳ್ಳಬೇಕು. ತನ್ನ ದುರ್ಬುದ್ಧಿಗೆ ತಾನು ವಶನಾಗಬಾರದು. ಪರಮಾತ್ಮ ಪ್ರಜ್ಞೆಯನ್ನು ಕಳೆದು ಕೊಳ್ಳಬಾರದು. ಪರಮಾತ್ಮ ಜಗತ್ತಿಗೆ ಸೃಷ್ಟಿಕರ್ತನೂ ಹೌದು, ಲಯಕರ್ತನೂ ಹೌದು. ಅವನೇ ಸಕಲ ಚೇತನಾಚೇತನಗಳಿಗೆ ಆಶ್ರಯ. ಶಾಸ್ತ್ರಗಳು ದರ್ಶನ ಸಮಾಧಿ ಗುಹ್ಯ ಎಂಬ ಭಾಷೆಗಳಲ್ಲಿ ವಿಚಿತ್ರರೀತಿಯಿಂದ ಭಗವಂತನನ್ನೇ ಹೇಳುತ್ತವೆ. ಕಾಲಚಕ್ರ ತೀಕ್ಷ್ಣವಾಗಿದ್ದು ಎಲ್ಲರೂ ಅದಕ್ಕೆ ಅಧೀನರಾಗಿ ಕರ್ಮಗಳನ್ನು ಮಾಡುತ್ತಾರೆ. ಅದರಿಂದ ಶಾಸ್ತ್ರವಿಧಿಗಳನ್ನು ಚೆನ್ನಾಗಿ ಅರಿತು ಕರ್ಮಾನುಷ್ಠಾನ ಮಾಡಿ ಪುರುಷಾರ್ಥ ಸಾಧನೆ ಮಾಡಿಕೊಳ್ಳಬೇಕು.' ಈ ಹತ್ತು ವಿಷಯಗಳನ್ನು ಹತ್ತು ಒಗಟಿನ ಮಾತುಗಳಲ್ಲಿ ನಾರದರು ಬೋಧಿಸಿದರು. ಹರ್ಯಶ್ವರು ಈ ಉಪದೇಶದಂತೆ ಸನ್ಯಾಸಿಗಳಾಗಿ ಹೊರಟು ಹೋದರು. ದಕ್ಷ ಒಂದು ಸಾವಿರ ಮಂದಿ ಶಬಲಾಶ್ವರೆಂಬ ಪುತ್ರರನ್ನು ಪಡೆದ. ಅವರೂ ನಾರದರ ಉಪದೇಶದಿಂದ ತಮ್ಮ ಅಣ್ಣಂದಿರ ಹಾದಿಯನ್ನೇ ಹಿಡಿದರು. ದಕ್ಷ ಕುಪಿತನಾಗಿ ನಾರದರಿಗೆ ಶಪಿಸಿದ. 'ಒಂದೇ ಕಡೆ ನಿಲ್ಲದೆ ಸದಾ ತ್ರಿಲೋಕ ಸಂಚಾರಿಯಾಗು' ಎಂದು. ನಾರದರು ಕೋಪಿಸಿಕೊಳ್ಳದೆ 'ಹಾಗೇ ಆಗಲಿ' ಎಂದರು.

* * *

ಅಧ್ಯಾಯ-೬

ಅಧ್ಯಾಯಸಾರಾಂಶ

ದಕ್ಷ ತಿರುಗಿ ಗಂಡು ಮಕ್ಕಳನ್ನು ಪಡೆದರೆ ನಾರದರು ಅವರನ್ನೂ ಸನ್ಯಾಸಿಗಳನ್ನಾಗಿ ಮಾಡಬಹುದೆಂದು ಹೆದರಿ ಅರವತ್ತು ಮಂದಿ ಹೆಣ್ಣು ಮಕ್ಕಳನ್ನೇ ಪಡೆದ. ಅವರಲ್ಲಿ ಹತ್ತು ಮಂದಿಯನ್ನು ಧರ್ಮರಾಜನಿಗೂ, ಇಪ್ಪತ್ತೇಳು ಮಂದಿಯನ್ನು ಚಂದ್ರನಿಗೂ ಹದಿಮೂರು ಮಂದಿಯನ್ನು ಕಶ್ಯಪರಿಗೂ, ಇಬ್ಬರನ್ನು ಭೂತನಿಗೂ, ಇಬ್ಬರನ್ನು ಅಂಗಿರಸರಿಗೂ, ಇಬ್ಬರನ್ನು ಕೃಶಾಶ್ವನಿಗೂ ಇನ್ನುಳಿದ ನಾಲ್ವರನ್ನು ತಿರುಗಿ ಕಶ್ಯಪರಿಗೂ ಮದುವೆ ಮಾಡಿಕೊಟ್ಟ ಇವರಲ್ಲಿ ಕಶ್ಯಪರ ಸಂತಾನವೇ ಹೆಚ್ಚು. ಅವರಲ್ಲಿ ದನುವಿನ ಮಕ್ಕಳು ಅರವತ್ತೊಂದು ಮಂದಿ ದಾನವರು. ಅದಿತಿಯ ಪುತ್ರರು ಹನ್ನೆರಡು ಮಂದಿ ಆದಿತ್ಯರು. ವಿವಸ್ವಾನ್ ಅರ್ಯಮಾ ಪೂಷಾ ತ್ವಷ್ಟಾ ಸವಿತಾ ಭಗ ಧಾತಾ ವಿಧಾತಾ ವರುಣ ಮಿತ್ರ ಶಕ್ರ ಮತ್ತು ಉರುಕ್ರಮ ಎಂದು. ಉರುಕ್ರಮನೆ ಸರ್ವಶಕ್ತನಾದ ನಾರಾಯಣನ ವಾಮನಾವತಾರ. ವಿವಸ್ವತನಿಗೆ ಸಂಜ್ಞಾದೇವಿಯಲ್ಲಿ ವೈವಸ್ವತ ಮನು, ಯಮ ಯಮಿ ಅಶ್ವಿನೀದೇವತೆಗಳು ಜನಿಸಿದರು. ಛಾಯಾದೇವಿಯಲ್ಲಿ ಶನಿ, ಸಾವರ್ಣಿಮನು ಮತ್ತು ತಪತಿ ಎಂಬ ಮಕ್ಕಳು ಜನಿಸಿದರು. ಅರ್ಯಮನಿಗೆ ಮಾತೃಕಾದೇವಿಯಲ್ಲಿ ಚರ್ಷಣಿಗಳೆಂಬ ಪುತ್ರರು. ಪೂಷನಿಗೆ ಸಂತತಿ ಇಲ್ಲ. ತ್ವಷ್ಟನಿಗೆ ದೈತ್ಯರ ಸೋದರಿ ರಚನೆಯಲ್ಲಿ ಸನ್ನಿವೇಶ ಮತ್ತು ವಿಶ್ವರೂಪ ಇಬ್ಬರು ಪುತ್ರರು. ವಿಶ್ವರೂಪ ತಮ್ಮ ಶತ್ರುಗಳ ಸೋದರಿಯ ಮಗನಾಗಿದ್ದರೂ ದೇವತೆಗಳು ಅವನನ್ನು ಪುರೋಹಿತನನ್ನಾಗಿ ಸ್ವೀಕರಿಸಿದರು. ಏಕೆಂದರೆ ಅವರ ಪುರೋಹಿತರಾಗಿದ್ದ ಬೃಹಸ್ಪತ್ಯಾಚಾರ್ಯರು, ಅವಮಾನಿತರಾಗಿ ಅವರನ್ನು ಬಿಟ್ಟು ಹೊರಟು ಹೋದರು.

* * *

ಅಧ್ಯಾಯ-೭

ಅಧ್ಯಾಯಸಾರಾಂಶ

ಬೃಹಸ್ಪತ್ಯಾಚಾರ್ಯರಿಗೆ ಅವಮಾನವಾದ ಪ್ರಸಂಗವಿದು– ಒಮ್ಮೆ ದೇವೇಂದ್ರನಿಗೆ ಮೂಲೋಕದ ಒಡೆತನದಿಂದ ಅಹಂಕಾರ ಬಂದಿತು. ಆತನೊಂದುದಿನ ಎಂದಿನಂತೆ ಶಚಿದೇವಿಯೊಂದಿಗೆ ಸುಧರ್ಮಸಭೆಯ ಸಿಂಹಾಸನದಲ್ಲಿ ಕುಳಿತಿದ್ದಾಗ ಬೃಹಸ್ಪತ್ಯಾಚಾರ್ಯರು ಪ್ರವೇಶಿಸಿದರು. ಇಂದ್ರ ಅವರನ್ನು ನೋಡಿಯೂ ಆಸನ ಬಿಟ್ಟೇಳಲಿಲ್ಲ. ಅವರನ್ನು ಬರ ಮಾಡಿಕೊಂಡು ಆದರಿಸಲಿಲ್ಲ. ಅವರು ತಕ್ಷಣ ಹಿಂತಿರುಗಿ ಮನೆಗೇ ಹೋದರು. ಇಂದ್ರನಿಗೆ ಆಗಲೆ ತನ್ನ ಅವಿವೇಕದ ಅರಿವಾಗಿ ಪಶ್ಚಾತ್ತಾಪ ಉಂಟಾಯಿತು. ಕಾಲಿಗೆ ಬಿದ್ದು ಕ್ಷಮೆ ಬೇಡಬೇಕೆಂದು ಗುರುಗಳ ಮನೆಗೆ ಹೋದ. ಇದನ್ನು ಮೊದಲೇ ತಿಳಿದಿದ್ದ ಗುರುಗಳು ಯೋಗಬಲದಿಂದ ಮನೆಯಿಂದಲೂ ಹೊರಗೆ ಯಾರಿಗೂ ಕಾಣಿಸದಂತೆ ಹೊರಟು ಹೋಗಿದ್ದರು. ಈ ಪ್ರಸಂಗದಿಂದ ದುರ್ಲಾಭ ಪಡೆದು ದೈತ್ಯರು ಸ್ವರ್ಗವನ್ನು ಆಕ್ರಮಿಸಿದರು. ಅವರಿಂದ ಪೆಟ್ಟು ತಿಂದ ದೇವತೆಗಳು ಬ್ರಹ್ಮದೇವರ ಬಳಿಗೆ ಹೋದರು. ಬ್ರಹ್ಮದೇವರು ಅವರಿಗೆ ತ್ವಷ್ಟನ ಪುತ್ರನಾದ ವಿಶ್ವರೂಪನನ್ನು ಪುರೋಹಿತನನ್ನಾಗಿ ಸ್ವೀಕರಿಸಲು ಆದೇಶ ನೀಡಿದರು. ಅದರಂತೆ ದೇವತೆಗಳು ಕೇಳಿಕೊಂಡಾಗ ವಿಶ್ವರೂಪ ಒಪ್ಪಿದ. ಪೌರೋಹಿತ್ಯನಿಂದಿತವಾದ್ದರಿಂದ ಅದನ್ನು ವಹಿಸಲು ಮನಸ್ಸಿಲ್ಲದಿದ್ದರೂ ಹಿರಿಯರ ಅಪೇಕ್ಷೆಯನ್ನು ನಿರಾಕರಿಸಲಾಗದೆ ಒಪ್ಪಿಕೊಂಡ. ದೇವೇಂದ್ರನಿಗೆ 'ನಾರಾಯಣವರ್ಮ' ಮಂತ್ರವನ್ನು ಉಪದೇಶಿಸಿದ. ಅದರ ಬಲದಿಂದ ದೇವತೆಗಳು ಅಸುರರನ್ನು ಗೆದ್ದರು.

* * *

ಅಧ್ಯಾಯ-೮

ಅಧ್ಯಾಯಸಾರಾಂಶ

ನಾರಾಯಣವರ್ಮ ಎಂಬುದು ಮಂತ್ರಮಯವಾದ ಕವಚ. ಅದನ್ನು ಧರಿಸಿದರೆ ಆಧ್ಯಾತ್ಮಿಕಾದಿ ಸಕಲ ಆಪತ್ತುಗಳಿಂದ ರಕ್ಷಣೆ ದೊರೆಯುವುದು. ಮೊದಲಿಗೆ ಕೈಕಾಲು ತೊಳೆದು ಕೊಂಡು ಆಚಮನ ಮಾಡಿ ಪವಿತ್ರವನ್ನು ಧರಿಸಿ ಉತ್ತರಾಭಿಮುಖವಾಗಿ ಕುಳಿತು ನಾರಾಯಣಾಷ್ಟಾಕ್ಷರ ವಾಸುದೇವ ದ್ವಾದಶಾಕ್ಷರ ಮಂತ್ರಗಳಿಂದ ಅಂಗನ್ಯಾಸ, ಕರನ್ಯಾಸಗಳನ್ನು ಮಾಡಿ ತಿರುಗಿ ವಿಷ್ಣುಸಪ್ತಾಕ್ಷರಮಂತ್ರದಿಂದ ಅಂಗನ್ಯಾಸ ಮಾಡಿ ಐಶ್ವರ್ಯವೀರ್ಯಾದಿಷಡ್ಗುಣಪೂರ್ಣನಾದ ಭಗವಂತನನ್ನು ಧ್ಯಾನಿಸಿ ನಾರಾಯಣವರ್ಮಮಂತ್ರವನ್ನು ಜಪಿಸಬೇಕು-

'ಗರುಡಾರೂಢನಾದ ಅಷ್ಟಭುಜ ಅಷ್ಟಾಯುಧ ಅಷ್ಟಸಿದ್ಧಿಯುಕ್ತನಾದ ಹರಿ ನನಗೆ ರಕ್ಷಣೆ ನೀಡಲಿ. ನೀರಲ್ಲಿ ಮತ್ಸ್ಯ, ನೆಲದಲ್ಲಿ ವಾಮನ, ಆಕಾಶದಲ್ಲಿ ತ್ರಿವಿಕ್ರಮ, ಅರಣ್ಯದಲ್ಲಿ ನರಸಿಂಹ, ಪ್ರಯಾಣದಲ್ಲಿ ವರಾಹ, ಬೆಟ್ಟದಮೇಲೆ ಪರಶುರಾಮ, ಪ್ರವಾಸಗಳಲ್ಲಿ ರಾಮಲಕ್ಷ್ಮಣರು, ಪ್ರಮಾದದಿಂದ ನಾರಾಯಣ, ಉನ್ಮಾದದ ನಗುವಿನಿಂದ ನರ, ಯೋಗಭ್ರಂಶದಿಂದ ದತ್ತ, ಕರ್ಮಬಂದನದಿಂದ ಕಪಿಲ. ಆಯೋಗ್ಯಕಾಮನೆಯಿಂದ ಸನತ್ಕುಮಾರ, ಪ್ರಯಾಣ ಮಾಡುವಾಗ ದಾರಿಯಲ್ಲಿ ಸಿಗುವ ಭಗವನ್ಮೂರ್ತಿಗಳಿಗೆ ನಮಸ್ಕಾರ ಮಾಡದಿರುವ ಅಪರಾಧದಿಂದ ಹಯಗ್ರೀವ, ಅನ್ಯದೇವತೆಗಳನ್ನು ಸ್ವತಂತ್ರರೆಂದು ಆರಾಧನೆ ಮಾಡುವ ಅಪರಾಧದಿಂದ ಮಹಿದಾಸ, ನರಕಗಳಿಂದ ಕೂರ್ಮ, ಅಪಥ್ಯದಿಂದ ಧನ್ವಂತರಿ, ಸುಖದುಃಖಾದಿ ದ್ವಂದ್ವದಿಂದ ಋಷಭ, ಲೋಕಾಪವಾದದಿಂದ ಯಜ್ಞ, ಸರ್ಪಗಳಿಂದ ಬಲರಾಮಾಂತರ್ಗತಮೂರ್ತಿ, ಶಾಸ್ತ್ರಗಳ ಅಜ್ಞಾನದಿಂದ ವೇದವ್ಯಾಸರು, ಪಾಷಂಡಿಗಳಿಂದ ಬುದ್ಧ ಮತ್ತು ಕಲಿದೊಷದಿಂದ ಕಲ್ಕಿ ನನ್ನನ್ನು ಕಾಪಾಡಲಿ.

ಹಗಲನ್ನು ಆರುಭಾಗ ಮಾಡಿದಾಗ ಆ ಆರು ಭಾಗಗಳಲ್ಲಿ ಕ್ರಮವಾಗಿ ಕೇಶವ ಗೋವಿಂದ ನಾರಾಯಣ ವಿಷ್ಣು ಮಧುಸೂದನ ಮಾಧವರು

ಮತ್ತು ರಾತ್ರಿಯನ್ನು ಆರು ಭಾಗ ಮಾಡಿದಾಗ ಆ ಆರು ಭಾಗಗಳಲ್ಲಿ ಕ್ರಮವಾಗಿ ಹೃಷೀಕೇಶ, ಪದ್ಮನಾಭ, ಪದ್ಮನಾಭ, ಶ್ರೀಧರ, ಜನಾರ್ದನ, ದಾಮೋದರರು ನನ್ನನ್ನು ಕಾಪಾಡುತ್ತಿರಲಿ. ನಿನ್ನ ಚಕ್ರ ಗದೆ ಶಂಖ ಖಡ್ಗ ಗುರಾಣಿಗಳೂ ನನ್ನನ್ನು ಕಾಪಾಡಲಿ, ಗರುಡ ವಿಷ್ವಕ್ಸೇನರೂ ನನ್ನನ್ನು ಕಾಪಾಡಲಿ. ನೀನು ಸ್ವತಂತ್ರ, ಪ್ರಪಂಚವೆಲ್ಲ ನಿನ್ನ ಅಧೀನ. ಚಕ್ರಾದಿ ಆಯುಧಗಳಲ್ಲಿಯೂ ನೀನೇ ಆಯಾ ರೂಪದಿಂದ್ದು ನಮ್ಮ ಆಪತ್ತು ಕಳೆಯುವೆ. ಈ ಯಥಾರ್ಥಜ್ಞಾನವೂ ನನ್ನನ್ನು ಕಾಪಾಡಲಿ. ಅಟ್ಟಹಾಸದಿಂದಲೆ ಲೋಕದ ಭಯವನ್ನು ಕಳೆವ ಉಜ್ವಲತೇಜೋಮಯನಾದ ನರಸಿಂಹ ಎಲ್ಲೆಡೆ ನನ್ನನ್ನು ಕಾಪಾಡಲಿ'

ಈ ಮಂತ್ರಗಳನ್ನು ಜಪಿಸುತ್ತಿದ್ದ ಕೌಶಿಕಗೋತ್ರದ ಒಬ್ಬ ಮುನಿಯ ಅಸ್ಥಿಯನ್ನು ಮೇಲೆ ಆಕಾಶದಲ್ಲಿ ಚಿತ್ರರಥಗಂಧರ್ವ ವಿಮಾನದಿಂದ ದಾಟುವಾಗ ತಲೆಕೆಳಗಾಗಿ ವಿಮಾನಸಹಿತ ಬಿದ್ದು ಬಿಟ್ಟ. ಬಳಿಯಲ್ಲಿಯೇ ಇದ್ದ ವಾಲಖಿಲ್ಯರ ಉಪದೇಶದಿಂದ ಆತ ಆ ಅಸ್ಥಿಯನ್ನು ಸರಸ್ವತೀ ನದಿಯಲ್ಲಿ ವಿಸರ್ಜಿಸಿದ.

* * *

ವಿಶ್ವರೂಪಾಚಾರ್ಯರು ದೇವೇಂದ್ರನಿಗೆ ಉಪದೇಶಿಸಿದ ನಾರಾಯಣ ವರ್ಮದಲ್ಲಿ ಒಂದು ಶ್ಲೋಕ–

ಸನತ್ಕುಮಾರೋಽವತು ಕಾಮದೇವಾ-
ದ್ಧಯಶೀರ್ಷೋ ಮಾಂ ಪಥಿ ದೇವಹೇಳನಾತ್ ।
ದೇವರ್ಷಿವರ್ಯಃ ಪುರುಷಾಂತರಾರ್ಚನಾತ್
ಕೂರ್ಮೋ ಹರಿರ್ಮಾಂ ನಿರಯಾದಶೇಷಾತ್ ॥ ೧೭ ॥

ಸನತ್ಕುಮಾರನಲ್ಲಿ ಆವಿಷ್ಟನಾದ ಸನತ್ಕುಮಾರನಾಮಕ ಭಗವಂತ ಅಯೋಗ್ಯಕಾಮನೆಯಿಂದ ನನ್ನನ್ನು ಕಾಪಾಡಲಿ. ಪ್ರಯಾಣಮಾಡುವಾಗ ದಾರಿಯಲ್ಲಿ ಸಿಗುವ ಭಗವನ್ಮೂರ್ತಿಗಳಿಗೆ ನಮಸ್ಕಾರ ಮಾಡದೆ ಹಾಗೇ ಮುಂದೆ ಹೋಗುವ ಅಪಚಾರದಿಂದ ನನ್ನನ್ನು ಹಯಗ್ರೀವ ಕಾಪಾಡಲಿ. ಅನ್ಯದೇವತೆಗಳನ್ನು ವಿಷ್ಣುವಿನ ಪರಿವಾರವಾಗಿ ಕಾಣದೆ ಸ್ವತಂತ್ರವಾಗಿ ಅರ್ಚಿಸುವ ಅಪರಾಧದಿಂದ ನನ್ನನ್ನು ದೇವರ್ಷಿವರ್ಯನಾದ ಮಹಿದಾಸ ಕಾಪಾಡಲಿ. ಎಲ್ಲ ನರಕಗಳಿಂದಲೂ ಕೂರ್ಮಮೂರ್ತಿ ಹರಿ ನನ್ನನ್ನು ಕಾಪಾಡಲಿ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ನನ್ನಲ್ಲಿ ಕಾಮಾವೇಗ ಉಂಟಾಗದಂತೆ ಕಾಮಸ್ಪರ್ಶವೆ ಇಲ್ಲದ ಸನತ್ಕುಮಾರ ಮುನಿ ನನ್ನನ್ನು ಕಾಪಾಡಲಿ. ದೇವಪೂಜೆಯಲ್ಲಿ ನನ್ನಿಂದಾಗಬಹುದಾದ ದ್ವಾಂತ್ರಿಂಶದಪರಾಧಗಳನ್ನು ದೇವರ್ಷಿ ನಾರದರು ಪರಿಹರಿಸಲಿ' ಎಂದು ವ್ಯಾಖ್ಯಾನಿಸುತ್ತಾರೆ. 'ಪುರುಷಾಂತರಾರ್ಚನಾತ್' ಎಂಬಲ್ಲಿ 'ಪುರುಷಾರ್ಚನಾಂತರಾತ್' ಎಂಬ ಅಪಪಾಠವಿಟ್ಟುಕೊಳ್ಳುತ್ತಾರೆ. ಪರಮ ಪುರುಷನ ಅರ್ಚನದ ನಡುವೆ ಉಂಟಾಗುವ ಛಿದ್ರ ಅಂದರೆ ದ್ವಾತ್ರಿಂಶದಪರಾಧಗಳೆಂದು ಹೇಳುತ್ತಾರೆ. ಆದರೆ 'ದೇವಾಂತರಾರ್ಚನಾತ್ ದೇವಋಷಿಃ ಪಾತು' ಎಂದು ತಂತ್ರಭಾಗವತ ವಚನದಿಂದ 'ಪುರುಷಾಂತರಾರ್ಚನಾತ್' ಎಂದೇ ಭಾಗವತ ಪಾಠ ಸೂಚಿತವಾಗುತ್ತಿದೆ. ಮತ್ತು 'ನಾರಾಯಣವರ್ಮ'ದಲ್ಲಿ ನಾರಾಯಣನ ಬೇರೆಬೇರೆ ರೂಪಗಳು ಮತ್ತು ಅವನ ಆಯುಧವಾಹನ ಮುಂತಾದವುಗಳು ನಮ್ಮ ಶರೀರದ ಅವಯವಗಳಲ್ಲಿ ನೆಲೆಸಿ ಕವಚರೂಪದಿಂದ ಇದ್ದು ರಕ್ಷಣೆ ಮಾಡಲಿ ಎಂದು ಪ್ರಾರ್ಥಿಸಬೇಕು ಹೊರತು ಬೇರೆ ಸನತ್ಕುಮಾರ ನಾರದ ಮುಂತಾದವರನ್ನು ಬೇಡಿಕೊಳ್ಳುವುದು ಸಂಗತವಾಗುವುದಿಲ್ಲ.

ಅದರಿಂದ 'ಸನತ್ಕುಮಾರ' ಎಂದರೆ ಇಲ್ಲಿ ಬ್ರಹ್ಮನ ಮಾನಸಪುತ್ರನಾದ ಸನತ್ಕುಮಾರ ಅಲ್ಲ. 'ದೇವರ್ಷಿ' ಎಂದರೂ ನಾರದರಲ್ಲ. ಭಗವಂತನ 'ಸನತ್ಕುಮಾರ' ಎಂಬ ಒಂದು ಬೇರೆಯೆ ರೂಪವಿದೆ. ಆ ಸನತ್ಕುಮಾರ ಸನತ್ಕುಮಾರನಲ್ಲಿ ಆವಿಷ್ಟನಾಗಿದ್ದಾನೆ. ಅವನನ್ನು ನಾರಾಯಣವರ್ಮದಲ್ಲಿ 'ಸನತ್ಕುಮಾರ'ಶಬ್ದದಿಂದ ಹೇಳಲಾಗಿದೆ. ದೇವರ್ಷಿ ಎಂದರೂ ಭಗವದವತಾರನಾದ ದೇವರ್ಷಿ ಮಹಿದಾಸ ಐತರೇಯನನ್ನು ಗ್ರಹಿಸಬೇಕು. ಪುರುಷಾಂತರಾರ್ಚನವೆಂದರೆ ಬ್ರಹ್ಮಾದಿದೇವತೆಗಳ ಅರ್ಚನ. ಆ ದೇವತೆಗಳನ್ನು ಹರಿಯ ಪರಿವಾರದವರೆನ್ನುವ ಅನುಸಂಧಾನವಿಲ್ಲದೆ ಅರ್ಚಿಸಿದರೆ ದೋಷವಿದೆ. ಅದನ್ನು ಮಹಿದಾಸ ಪರಿಹರಿಸಲಿ ಎಂದು ಪ್ರಾರ್ಥಿಸಬೇಕು. ಅವನು 'ದೇವರ್ಷಿವರ್ಯ' ಅಂದರೆ ದೇವತೆಗಳಿಗೂ ಋಷಿಗಳಿಗೂ ವರ್ಯ, ಪೂಜ್ಯ 'ಮಹಿ-ದಾಸ' ಎಂದರೂ ಮಹಾತ್ಮರಾದ ದೇವತೆಗಳೂ ಋಷಿಗಳೂ ಅವನಿಗೆ ದಾಸರು, ಪೂಜಕರು ಎಂದರ್ಥ. ಅದರಿಂದ ಎರಡು ಶಬ್ದಗಳೂ ಸಮಾನಾರ್ಥಕ. ಪುರುಷಾಂತರ ಅರ್ಚನ ಎಂಬ ಎರಡು ಶಬ್ದಗಳ ನಡುವೆ 'ಆ' ಎಂಬ ಶಬ್ದ ಸೇರಿಸಿ ಕೊಂಡರೆ 'ಆ ಅರ್ಚನ' ಚೆನ್ನಾಗಿ ಅಂದರೆ ಬ್ರಹ್ಮಾದಿಗಳೇ ಸರ್ವೋತ್ತಮರೆಂಬ ಭಾವನೆಯಿಂದ ಅವರನ್ನು ಅರ್ಚನ ಮಾಡುವುದು ಅಪರಾಧ. ಪುರುಷಾಂತರಾರ್ಚನವೆಂಬ ದೋಷ ಉಪಲಕ್ಷಣ. ಹರಿಗೆ ಕರ್ಮಸಮರ್ಪಣ ಮಾಡದಿರುವುದೂ ಹರಿಸ್ಮರಣೆ ಮಾಡದಿರುವುದೂ ದೋಷವೆ. ಅದನ್ನೂ ಮಹಿದಾಸ ಪರಿಹರಿಸುತ್ತಾನೆ ಎಂದೂ ಭಾಗವತದಲ್ಲಿ ವಿವಕ್ಷಿತವಾಗಿದೆ. ಏಕೆಂದರೆ ತಂತ್ರಭಾಗವತದಲ್ಲಿ ಅದೂ ಉಕ್ತವಾಗಿದೆ.

ಸನತ್ಕುಮಾರೋಽವತು ಕಾಮದೇವಾತ್ ।

ಸನತ್ಕುಮಾರನಾಮಾ ತು ಬ್ರಹ್ಮಚರ್ಯವಪುರ್ಹರಿಃ ।
ಸನತ್ಕುಮಾರಮಪರಂ ಬ್ರಹ್ಮಪುತ್ರಂ ವಿವೇಶ ಯಃ ।
ಸ ಮಾಂ ಯೋಗ್ಯೇತರಾತ್ ಕಾಮಾತ್ ಪಾತು ವಿಶ್ವೇಶ್ವರಃ ಪ್ರಭುಃ ।
ಇತಿ ಚ ।

ದೇವರ್ಷಿವರ್ಯಃ ಪುರುಷಾಂತರಾರ್ಚನಾತ್ ।

ವಿಷ್ಣೋರಪರಿವಾರತ್ವದೃಷ್ಟ್ಯಾ ದೇವಾಂತರಾರ್ಚನಾತ್ ।
ಮಹಿದಾಸೋ ದೇವಋಷಿಃ ಪಾತು ಮಾಂ ವಿಷ್ಣುರವ್ಯಯಃ ।
ತದನರ್ಪಿತಕರ್ಮಭ್ಯಸ್ತದಸ್ಮರಣತಸ್ತಥಾ ॥ ಇತಿ ಚ ।

'ಸನತ್ಕುಮಾರೋಽವತು ಕಾಮದೇವಾತ್' ಎಂಬಲ್ಲಿ ವಿವಕ್ಷಿತನಾದ ಸನತ್ಕುಮಾರ ಯಾರೆಂಬುದನ್ನು ತಂತ್ರಭಾಗವತ ವಚನದಿಂದ ತಿಳಿಯಬೇಕು. ಅಲ್ಲಿ ಹೀಗೆ ಹೇಳಿದೆ– ಸನತ್ಕುಮಾರನೆಂದರೆ ಬ್ರಹ್ಮಚರ್ಯಾನುಷ್ಠಾನ ಮಾಡಿ ತೋರಿದ ಒಂದು ಭಗವದ್ರೂಪ. ಅವನು ಇನ್ನೊಬ್ಬ ಬ್ರಹ್ಮಪುತ್ರ ಸನತ್ಕುಮಾರನಲ್ಲಿ ಆವಿಷ್ಟನಾದ. ಸರ್ವೇಶ್ವರಪ್ರಭುವಾದ ಆ ಸನತ್ಕುಮಾರ ನನಗೆ ಅಯೋಗ್ಯಕಾಮನೆಗಳು ಬರದಂತೆ ಕಾಪಾಡಲಿ' ಎಂದು.

'ದೇವರ್ಷಿವರ್ಯಃ ಪುರುಷಾಂತರಾರ್ಚನಾತ್' ಎಂದರೆ 'ಅನ್ಯದೇವತೆಗಳನ್ನು ವಿಷ್ಣುವಿನ ಪರಿವಾರದವರೆಂದು ತಿಳಿಯದೆ ಸ್ವತಂತ್ರವಾಗಿ ಪೂಜಿಸುವ ಅಪರಾಧದಿಂದ ಮತ್ತು ವಿಷ್ಣುವಿಗೆ ಕರ್ಮಸಮರ್ಪಣೆ ಮಾಡದಿರುವ ಮತ್ತು ಅವನನ್ನು ಸ್ಮರಿಸದಿರುವ ಅಪರಾಧಗಳಿಂದ ದೇವರ್ಷಿ ಮಹಿದಾಸರೂಪಿ ವಿಷ್ಣು ನನ್ನನ್ನು ಕಾಪಾಡಲಿ' ಎಂದು ತಂತ್ರಭಾಗವತದಲ್ಲಿ ಉಕ್ತವಾಗಿದೆ.

* * *

ಶ್ರೀಹರಿ ಪ್ರಪಂಚದ ಎಲ್ಲ ವಸ್ತುಗಳಿಗೂ ನಿಯಾಮಕ. ತನ್ನ ಭೂಷಣ ಆಯುಧ ಧ್ವಜಗಳಲ್ಲಿಯೂ ತಾನೇ ನಿಯಾಮಕನಾಗಿ ನೆಲೆಸಿದ್ದಾನೆ. ಈ ಯಥಾರ್ಥಜ್ಞಾನ ಹರಿಗೆ ಪ್ರೀತಿಕರ. ಅದರಿಂದ ಆತನೊಲಿದು ನಮ್ಮನ್ನು ಕಾಪಾಡುತ್ತಾನೆ ಎಂದು ನಾರಾಯಣವರ್ಮದಲ್ಲಿ ಉಕ್ತವಾಗಿದೆ.

ಯಥಾ ಹಿ ಭಗವಾನೇವ ವಸ್ತುತಃ ಸದಸಚ್ಚ ಯತ್ ।
ಸತ್ಯೇನಾನೇನ ನಃ ಸರ್ವೇ ಯಾಂತು ನಾಶಮುಪದ್ರವಾಃ ॥ ೩೧ ॥

ಯಥೈಕಾತ್ಮ್ಯಾನುಭಾವೇನ ವಿಕಲ್ಪರಹಿತಃ ಸ್ವಯಮ್ ।
ಭೂಷಣಾಯುಧಲಿಂಗಾಖ್ಯಾ ಧತ್ತೇ ಶಕ್ತೀಃ ಸ್ವಮಾಯಯಾ ॥ ೩೨ ॥

ತೇನೈವ ಸತ್ಯಮಾನೇನ ಸರ್ವಜ್ಞೋ ಭಗವಾನ್ ಹರಿಃ ।
ಪಾತು ಸರ್ವೈಃ ಸ್ವರೂಪೈರ್ನಃ ಸದಾ ಸರ್ವತ್ರ ಸರ್ವಗಃ ॥ ೩೩ ॥

ಕಾರ್ಯಕಾರಣಾತ್ಮಕವಾದ ಪ್ರಪಂಚವೆಲ್ಲವೂ ಭಗವಂತನ ಅಧೀನವೇ. ಈ ಸತ್ಯದ ಅರಿವಿನಿಂದ ಭಗವಂತ ಸುಪ್ರೀತನಾಗಲಿ. ಅದರಿಂದ ನಮ್ಮ ಎಲ್ಲ ಉಪದ್ರವಗಳೂ ನಾಶಹೊಂದಲಿ.

ಹರಿ ಸ್ವಗತಭೇದವರ್ಜಿತನಾದರೂ ತನ್ನ ಸರ್ವಸ್ವಾತಂತ್ರ್ಯಗುಣದ ಬಲದಿಂದ ಸ್ವೇಚ್ಛೆಯಿಂದಲೇ ವನಮಾಲಾದಿ ಭೂಷಣ ಚಕ್ರಾದಿ ಆಯುಧ ಗರುಡಧ್ವಜಾದಿ ಚಿಹ್ನೆಗಳಲ್ಲಿ ಅವೇ ಶಬ್ದಗಳಿಂದ ಕರೆಸಿಕೊಳ್ಳುವ ಬೇರೆಬೇರೆ ರೂಪಗಳನ್ನು ಧರಿಸುತ್ತಾನೆ.

ಚಕ್ರಶಂಖಾದಿ ಜಡವಸ್ತುಗಳನ್ನು ಪ್ರಾರ್ಥಿಸುವುದಿಲ್ಲ. ಅವುಗಳೊಳಗೆ ಅವುಗಳ ಶಕ್ತಿಗಳನ್ನು ವ್ಯಕ್ತಗೊಳಿಸುತ್ತ ಅವೇ ಹೆಸರಿನಿಂದ ಇರುವ ಹರಿಯ ರೂಪಗಳನ್ನು ಪ್ರಾರ್ಥಿಸುತ್ತೇನೆ. ಈ ಯಥಾರ್ಥಜ್ಞಾನಕ್ಕೆ ಒಲಿದು ಸರ್ವಗತನಾದ ಸರ್ವಜ್ಞನಾದ ಭಗವಾನ್ ಶ್ರೀಹರಿ ಸರ್ವಾಂತರ್ಗತ, ಬಹಿರ್ಗತ ಎಂದು ಎಲ್ಲ ಸ್ವರೂಪಗಳಿಂದಲೂ ಸದಾ ಸರ್ವತ್ರ ನಮ್ಮನ್ನು ಕಾಪಾಡಲಿ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಸದಸತ್' ಎಂದರೆ ಮೂರ್ತ ಅಮೂರ್ತ ಪ್ರಪಂಚವೆಲ್ಲವೂ ಭಗವಂತನೆ ಎಂದಿದ್ದಾರೆ. ಭೂಷಣ ಆಯುಧ ಧ್ವಜಗಳು, ಅವುಗಳ ಹೆಸರುಗಳು ಎಲ್ಲವೂ ಭಗವಂತನ ಆವಿರ್ಭಾವಗಳೇ ಎಂದಿದ್ದಾರೆ. ವಸ್ತುತಃ ಎಲ್ಲವೂ ಭಗವಂತನಲ್ಲ, ಎಲ್ಲದರೊಳಗೂ ಅವುಗಳ ಶಕ್ತಿಗಳನ್ನು ವ್ಯಕ್ತಮಾಡುತ್ತ ಅವುಗಳ ಹೆಸರುಗಳಿಂದ ಮುಖ್ಯವಾಗಿ ಕರೆಸಿಕೊಳ್ಳುತ್ತ ಅವುಗಳ ಆಕಾರದ ರೂಪಗಳಿಂದ ಅವುಗಳಲ್ಲಿ ಭಗವಂತ ನೆಲೆಸಿದ್ದಾನೆ. ಇದೇ ಯಥಾರ್ಥಜ್ಞಾನ. ಹೀಗೆ ಹೇಳುವುದೇ ಯಥಾರ್ಥವಾದ ಶಪಥ. ಈ ಜ್ಞಾನಶಪಥಗಳಿಗೆ ಒಲಿದು ಭಗವಂತ ರಕ್ಷಿಸುತ್ತಾನೆ. ಬೇರೆ ವ್ಯಾಖ್ಯಾನಕಾರರು 'ಇದು ಸತ್ಯವಾದರೆ ನನ್ನನ್ನು ಭಗವಂತ ಕಾಪಾಡಲಿ' ಎಂದು ವ್ಯಾಖ್ಯಾನಿಸುತ್ತಾರೆ. ಇದು ಸತ್ಯವಾಗುವುದಕ್ಕೂ ನನ್ನನ್ನು ಭಗವಂತ ಕಾಪಾಡುವುದಕ್ಕೂ ಏನು ಸಂಬಂಧ? 'ಯದಿ ವೇದಾಃ ಪ್ರಮಾಣಂ ಸ್ಯುಃ' 'ವೇದ ಪ್ರಮಾಣವಾಗಿರುವುದಾದರೆ ನನಗೆ ಮರಣ ಬಾರದಿರಲಿ' ಎಂದು ಕುಮಾರಿಲಭಟ್ಟರ ಮಾತನ್ನು ಉದಾಹರಣೆ ಕೊಡುತ್ತಾರೆ. ಆದರೆ ಅಲ್ಲಿಯೂ ನನ್ನ ಈ ಶಪಥಕ್ಕೆ ಭಗವಂತನೊಲಿದು ಮರಣ ಬಾರದಂತೆ ಮಾಡಲಿ ಎಂದೇ ಅಭಿಪ್ರಾಯ.

ಯಥಾ ಹಿ ಭಗವಾನೇವ ।

ಸದಸನ್ನಿಯಾಮಕತಯಾ ಸದಸದ್ರೂಪ ಉಚ್ಯತೇ ।
ಸತ್ಯೇನಾನೇನ ಮಾಂ ದೇವಃ ಪಾತು ವಿಷ್ಣುಶ್ಚತುರ್ಭುಜಃ ॥
ಏಕ ಏವ ಪರೋ ವಿಷ್ಣುರ್ಭೂಷಾಹೇತಿಧ್ವಜೇಷ್ವಜಃ ।
ತತ್ತಚ್ಛಕ್ತಿಸ್ವರೂಪೇಣ ಸ್ವಯಮೇವ ವ್ಯವಸ್ಥಿತಃ ।
ಸತ್ಯೇನಾನೇನ ಮಾಂ ದೇವಃ ಪಾತು ಸರ್ವೇಶ್ವರೋ ಹರಿಃ ॥

ಇತಿ ಚ ।

ಕಾರ್ಯಕಾರಣವಸ್ತುಗಳಿಗೆ, ಮೂರ್ತಾಮೂರ್ತ ವಸ್ತುಗಳಿಗೆ ನಿಯಾಮಕನಾಗಿ ಹರಿ ಸದಸದ್ರೂಪನೆಂದು ಉಕ್ತನಾಗುತ್ತಾನೆ. ಈ ನಿಯಾಮಕತ್ವಜ್ಞಾನದಿಂದ ಚತುರ್ಭುಜ ನಾದ ವಿಷ್ಣು ಒಲಿದು ನನ್ನನ್ನು ರಕ್ಷಿಸಲಿ. ಸರ್ವೋತ್ತಮನಾದ ವಿಷ್ಣು ಒಬ್ಬನೆ ಭೂಷಣ ಆಯುಧ ಧ್ವಜಗಳಲ್ಲಿ ಅವುಗಳ ಆಯಾ ಶಕ್ತಿಗಳನ್ನು ವ್ಯಕ್ತಮಾಡುತ್ತ ಆಯಾ ರೂಪಗಳಿಂದ ತಾನೆ ಇರುತ್ತಾನೆ. ಈ ಯಥಾರ್ಥಜ್ಞಾನದಿಂದ ಸರ್ವೇಶನಾದ ಹರಿ ಒಲಿದು ನನ್ನನ್ನು ರಕ್ಷಿಸಲಿ' ಎಂದು ತಂತ್ರಭಾಗವತದಲ್ಲಿ ಹೇಳಿದ್ದೇ ಭಾಗವತದಲ್ಲಿ 'ಯಥಾ ಹಿ ಭಗವಾನೇವ' ಎಂದು ಮುಂತಾದ ಶ್ಲೋಕಗಳಲ್ಲಿ ಉಕ್ತವಾಗಿದೆ.

* * *

ನಾರಾಯಣವರ್ಮ ಮಂತ್ರದ ಪ್ರಭಾವವನ್ನು ವಿಶ್ವರೂಪಾಚಾರ್ಯರು ದೇವೇಂದ್ರನಿಗೆ ಹೇಳುತ್ತಾರೆ.

ಏತದ್ ಧಾರಯಮಾಣಸ್ತು ಯಂಯಂ ಪಶ್ಯತಿ ಚಕ್ಷುಷಾ ।
ಪದಾ ವಾ ಸಂಸ್ಪೃಶೇತ್ ಸದ್ಯಃ ಸಾಧ್ವಸಾತ್ ಸ ವಿಮುಚ್ಯತೇ ॥ ೩೬ ॥

ಈ ಕವಚವನ್ನು ಧರಿಸಿದವನು ಯಾರನ್ನಾದರೂ ಕಣ್ಣಿಂದ ನೋಡಿದರೆ ಸಾಕು, ಪಾದಗಳಿಂದ ಸ್ಪರ್ಶಿಸಿದರೂ ಸಾಕು ಅವನೂ ಕೂಡ ಒಡನೆ ಎಲ್ಲ ಭಯಗಳಿಂದ ಮುಕ್ತನಾಗುತ್ತಾನೆ.

ಈ ಮಂತ್ರವನ್ನು ಜಪಿಸಿದರೂ ಫಲ ಬಾರದಿರಬಹುದು. ಅಷ್ಟರಿಂದಲೇ ಮಂತ್ರಕ್ಕೆ ಶಕ್ತಿ ಇಲ್ಲ ಎನ್ನಬಾರದು. ತಂತ್ರಸಾರಗ್ರಂಥದಲ್ಲಿ ಮಂತ್ರಗಳಿಗೆ ಫಲ ಏಕೆ ಕಂಡು ಬರುವುದಿಲ್ಲ ಎನ್ನುವುದರ ಬಗ್ಗೆ ವಿವರಣೆ ಇದೆ. ಬೇರೆ ವ್ಯಾಖ್ಯಾನಕಾರರು ಈ ಬಗ್ಗೆ ವಿಚಾರ ಮಾಡಿಲ್ಲ.

ಗುರುಶಿಷ್ಯಯೋರಯೋಗ್ಯತ್ವಾದ್ ಗುರುವೃತ್ತೇರಪೂರ್ತಿತಃ ।
ಅಪ್ರಸಾದಾದ್ ಗುರೋರ್ವಿದ್ಯಾ ನ ಯಥೋಕ್ತಫಲಪ್ರದಾ ॥

ಇತಿ ಚ ।

ವಿದ್ಯಾಃ ಕರ್ಮಾಣಿ ಚ ಸದಾ ಗುರೋಃ ಪ್ರಾಪ್ತಾಃ ಫಲಪ್ರದಾಃ ।
ಅನ್ಯಥಾ ನೈವ ಫಲದಾಃ ಪ್ರಸನ್ನೋಕ್ತಾಃ ಫಲಪ್ರದಾಃ ॥
ಇತಿ ಚ ತಂತ್ರಸಾರೇ ।

ಗುರುಶಿಷ್ಯರು ಇಬ್ಬರೂ ಅಥವಾ ಅವರಲ್ಲಿ ಒಬ್ಬರು ಅನಾಚಾರಿಗಳಾಗಿದ್ದು ಫಲಕ್ಕೆ ಯೋಗ್ಯರಾಗಿರದಿದ್ದಲ್ಲಿ, ಗುರುಸೇವೆ ಪೂರ್ತಿಯಾಗದೆ ಗುರುವಿನ ಅನುಗ್ರಹವಾಗದಿದ್ದಲ್ಲಿ, ಮಂತ್ರ ಅದಕ್ಕೆ ಹೇಳಿರುವ ಫಲವನ್ನು ನೀಡಲಾರದೆಂದೂ, ಮಂತ್ರಜಪವಾಗಲಿ ಕರ್ಮಾನುಷ್ಠಾನವಾಗಲಿ ಯೋಗ್ಯಗುರುವಿನ ಆದೇಶದಂತೆ ಯೋಗ್ಯಶಿಷ್ಯ ನಡೆಸಿದಲ್ಲಿ ಮಾತ್ರ ಅದು ಫಲಪ್ರದ. ಇಲ್ಲದಿದ್ದರೆ ಫಲಪ್ರದವಾಗುವುದಿಲ್ಲ. ಪ್ರಸನ್ನಬುದ್ಧಿಯ ಶಿಷ್ಯನಿಗೆ ಗುರು ಪ್ರಸನ್ನಚಿತ್ತನಾಗಿ ಉಪದೇಶಿಸಿದರೆ ಮಾತ್ರ ಅವು ಫಲಪ್ರದವಾಗುವುವು ಎಂದೂ ತಂತ್ರಸಾರದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ
ಅಷ್ಟಮೋಽಧ್ಯಾಯಃ ॥

—o—

ಅಧ್ಯಾಯ-೯

ಅಧ್ಯಾಯಸಾರಾಂಶ

ವಿಶ್ವರೂಪ ಎಲ್ಲರೆದುರಿಗೆ ಯಜ್ಞದಲ್ಲಿ ದೇವತೆಗಳಿಗೆ ಆಹುತಿ ಕೊಡುತ್ತಿದ್ದರೂ ಗುಟ್ಟಾಗಿ ತನ್ನ ತಾಯಿಯ ಕಡೆಯವರಾದ ಹಿರಣ್ಯಕಶಿಪು ಮುಂತಾದ ದೈತ್ಯರಿಗೂ ಆಹುತಿ ನೀಡುತ್ತಿದ್ದ. ಇದನ್ನರಿತ ಇಂದ್ರ ಅವನ ಸೋಮಪೀಥ ಸುರಾಪೀಥ ಅನ್ನಾದ ಎಂಬ ಮೂರೂ ತಲೆಗಳನ್ನು ಕತ್ತರಿಸಿದ. ಆ ಮೂರು ತಲೆಗಳು ಮೂರು ಪಕ್ಷಿಗಳಾಗಿ ಹಾರಿಹೋದುವು. ಅದರಿಂದ ಬಂದ ಬ್ರಹ್ಮಹತ್ಯಾಪಾಪವನ್ನು ಇಂದ್ರ ಅಂಜಲಿಯಿಂದ ಸ್ವೀಕರಿಸಿ ಒಂದು ವರ್ಷವಾದ ಬಳಿಕ ಅದನ್ನು ಭೂಮಿ ಜಲ ವೃಕ್ಷ ಮತ್ತು ಸ್ತ್ರೀಯರಿಗೆ ಹಂಚಿದ. ಅವರು ಇಂದ್ರನಿಂದ ವರಗಳನ್ನು ಪಡೆದು ಪಾಪವನ್ನು ಸ್ವೀಕರಿಸಲು ಒಪ್ಪಿದರು. ಬಳಿಕ ತ್ವಷ್ಟೃ ಇಂದ್ರನನ್ನು ಸಂಹರಿಸಬಲ್ಲ ಪುತ್ರನನ್ನು ಪಡೆಯಬೇಕೆಂದು ಹೋಮ ಮಾಡಿದಾಗ ವೃತ್ರಾಸುರ ಜನಿಸಿದ.

ವೃತ್ರ ದೇವತೆಗಳನ್ನು ಆಕ್ರಮಿಸಿದ. ಅವರ ಎಲ್ಲ ಅಸ್ತ್ರಗಳನ್ನೂ ನುಂಗಿದ. ಅವರು ಶ್ರೀಹರಿಯನ್ನು ಮೊರೆ ಹೊಕ್ಕರು. ಸ್ತೋತ್ರ ಮಾಡಿದರು. ಆಗ ಶ್ರೀಹರಿ ತನ್ನ ವಾಸುದೇವಾದಿ ಚತುರ್ಮೂರ್ತಿ ಮತ್ತು ಕೇಶವಾದಿ ದ್ವಾದಶಮೂರ್ತಿಗಳೊಂದಿಗೆ ಮೈದೋರಿದ. ದೇವತೆಗಳು ಪುನಃ ಸ್ತುತಿಸಿದರು. 'ಅಜ್ಞಾನಿಗಳು ನಿನ್ನ ಬಗ್ಗೆ ತಪ್ಪಾಗಿ ತಿಳಿದು ವಾದ ಮಾಡಿ ಅದಕ್ಕೆ ತಕ್ಕ ಫಲವನ್ನೇ ಹೊಂದುತ್ತಾರೆ. ಏಕಾಂತ ಭಕ್ತರು ನಿನ್ನ ಧ್ಯಾನಾನಂದದಲ್ಲಿ ಮೈ ಮರೆಯುತ್ತಾರೆ. ಅದರಿಂದ ನಾನಾ ಅವತಾರಗಳಿಂದ ದೈತ್ಯರನ್ನು ಸಂಹರಿಸಿ ಲೋಕರಕ್ಷಣೆ ಮಾಡಿರುವ ನೀನು ಈಗ ವೃತ್ರಾಸುರನಿಂದ ಲೋಕವನ್ನು ಕಾಪಾಡಬೇಕು' ಎಂದರು. ಆಗ ಶ್ರೀಹರಿ ಆದೇಶಿಸಿದ, 'ದಧೀಚಿ ಮುನಿ ನಾರಾಯಣವರ್ಮ ಮಂತ್ರವನ್ನು ಸಿದ್ಧಿ ಮಾಡಿಕೊಂಡವನು. ಅವನ ಮೈಯ ಎಲುಬು ಮಂತ್ರಬಲದಿಂದ ಗಟ್ಟಿಯಾಗಿದೆ. ಅದರಿಂದ ವಜ್ರಾಯುಧವನ್ನು ತಯಾರಿಸಿರಿ. ಅದರಲ್ಲಿ ನನ್ನ ತೇಜಸ್ಸು ತುಂಬಿರುತ್ತದೆ. ಅದರಿಂದ ವೃತ್ರನನ್ನು ಸಂಹರಿಸಿರಿ' ಎಂದು.

* * *

ವೃತ್ರಾಸುರನಿಂದ ಪರಾಜಿತರಾದ ದೇವತೆಗಳು ಶ್ರೀಹರಿಯನ್ನು ಶರಣು ಹೊಂದುತ್ತಾರೆ.

ದೇವಾ ಊಚುಃ

ವಾಯ್ವಂಬರಾಗ್ನ್ಯಪ್‌ಕ್ಷಿತಯಸ್ತ್ರಿಲೋಕಾ
ಬ್ರಹ್ಮಾದಯೋ ಯೇ ವಯಮುದ್ವಿಜಂತಃ ।
ಹರಾಮ ಯಸ್ಮೈ ಬಲಿಮಂತಕೋಽಸೌ
ಬಿಭೇತಿ ಯಸ್ಮಾದರಣಂ ತತೋ ನಃ ॥ ೨೦ ॥

ದೇವತೆಗಳು ನುಡಿದರು- ವಾಯು ಆಕಾಶ ಅಗ್ನಿ ಜಲ ಪೃಥಿವಿಗಳ ಅಭಿಮಾನಿಗಳೂ ಮೂರು ಲೋಕದ ಅಧಿಪತಿಗಳೂ ಆದ ಬ್ರಹ್ಮಾದಿದೇವತೆಗಳು ನಾವೆಲ್ಲರೂ ಯಾರಿಗೆ ಭಯದಿಂದ ಆರಾಧನೆಯನ್ನು ಸಲ್ಲಿಸುವೆವೋ ಆ ಮಹಾಲಕ್ಷ್ಮಿಯೂ ಭಗವಂತನಿಗೆ ಅಧೀನಳಾಗಿ ಭಯಪಟ್ಟವಳಂತೆ ಇರುತ್ತಾಳೆ. ಅಂಥ ಭಗವಂತ ನಮಗೆ ರಕ್ಷಣೆ ನೀಡಲಿ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ವಾಯು ಆಕಾಶ ಮುಂತಾದ ಇಪ್ಪತ್ತ ಮೂರು ತತ್ವಗಳೂ ಅವುಗಳಿಂದಾಗಿರುವ ಮೂರು ಲೋಕಗಳೂ ಆ ಲೋಕಗಳಲ್ಲಿರುವ ಬ್ರಹ್ಮಾದಿಗಳೂ ಎಲ್ಲರೂ ಕಾಲಕ್ಕೆ ಭಯಪಟ್ಟು ಆಯಾ ಕಾಲೋಚಿತವಾದ ಕರ್ಮ ಮಾಡುತ್ತಾರೆ, ಆದರೆ ಆ ಕಾಲವೂ ಪರಮಾತ್ಮನಿಗೆ ಭಯ ಪಡುತ್ತದೆ' ಎನ್ನುತ್ತಾರೆ. ವೀರರಾಘವ ಭಗವತ್ಪ್ರಸಾದವ್ಯಾಖ್ಯಾನಗಳಲ್ಲಿ ಮಾತ್ರ ವಾಯ್ವಾದಿತತ್ವಗಳೂ ಮೂಲೋಕಗಳೂ ಬ್ರಹ್ಮಾದಿಗಳೂ ಪರಮಾತ್ಮನಿಗೆ ಭಯಪಟ್ಟು ಆರಾಧಿಸುತ್ತಾರೆ, ಯಮನೂ ಪರಮಾತ್ಮನಿಗೆ ಭಯಪಡುತ್ತಾನೆ ಎಂದಿದೆ. ಆದರೆ ಜಡವಾದ ವಾಯು ಆಕಾಶ ಮುಂತಾದ ತತ್ವಗಳು ಜಡವಾದ ಕಾಲಕ್ಕೆ ಭಯ ಪಡುವುದೆಂದರೇನು? ಜಡವಾದ ಕಾಲ ಭಗವಂತನಿಗೆ ಭಯ ಪಡುವುದೆಂದರೇನು? ಯಮನು ಭಗವಂತನಿಗೆ ಭಯಪಡುವುದು ಸಹಜವೆ ಆದರೂ ಬ್ರಹ್ಮಾದಿಗಳು ಭಯ ಪಡುತ್ತಾರೆ ಯಮನೂ ಭಯ ಪಡುತ್ತಾನೆ ಎಂದು ಪ್ರತ್ಯೇಕವಾಗಿ ಹೇಳಲು ವಿಶೇಷಕಾರಣವಿಲ್ಲ. ಬ್ರಹ್ಮಾದಗಳಿಗಿಂತಲೂ ಯಮ ಬಲಿಷ್ಠನೇ? ವ್ಯಾಖ್ಯಾನಕಾರರು ಶ್ಲೋಕಕ್ಕೆ ಅನ್ವಯಾರ್ಥ ಹೇಳಿದರೆ ಸಾಲದು, ಇಂಥ ಪ್ರಶ್ನೆಗಳಿಗೂ ಸಮಾಧಾನ ನೀಡುವುದು ಅವರ ಕರ್ತವ್ಯ. ವಸ್ತುತಃ ಶ್ಲೋಕದಲ್ಲಿ 'ಅಂತಕ' ಎಂದರೆ ಜಡವಾದ ಕಾಲವಲ್ಲ, ಯಮನೂ ಅಲ್ಲ, ಶ್ರೀಭೂದುರ್ಗಾನಾಮಕಳಾದ ಮಹಾಲಕ್ಷ್ಮಿ. ಅವಳು ವಾಯ್ವಾದಿಜಡತತ್ವಗಳ ಅಭಿಮಾನಿದೇವತೆಗಳಾದ ಬ್ರಹ್ಮಾದಿಗಳಿಗೂ ಭಯ ಉಂಟು ಮಾಡುತ್ತಾಳೆ. ವಿಷ್ಣುವಿನ ಪತ್ನಿಯಾಗಿದ್ದು ಅವನಿಗೆ ವಶಳಾದ್ದರಿಂದ ಅವನಿಗೆ ಭಯ

ಪಟ್ಟವಳಂತೆಯೂ ನಡೆದುಕೊಳ್ಳುತ್ತಾಳೆ ಎಂದು ಮಾಹಾತ್ಮ್ಯ ಎಂಬ ಗ್ರಂಥದ ಆಧಾರ ತೋರಿಸಿ ಶ್ರೀಮದಾಚಾರ್ಯರು ವ್ಯಾಖ್ಯಾನಿಸುತ್ತಾರೆ.

ಕಾಲೋಽಂತಕಃ ಪ್ರಧಾನಂ ಚ ಮೃತ್ಯುರವ್ಯಕ್ತಮಿತ್ಯಪಿ ।
ಉಚ್ಯತೇ ಪ್ರಕೃತಿಃ ಸೂಕ್ಷ್ಮಾ ಶ್ರೀಭೂದುರ್ಗೇತಿ ನಾಮಭಿಃ ॥

ಸೈವ ಬ್ರಹ್ಮಾದಿಭಯದಾ ವಿಷ್ಣೋಸ್ತು ವಶವರ್ತಿನೀ ।
ಅಭಯಾಽಪಿ ಬಿಭೇತೀವ ತದ್ವಶತ್ವಾದುದೀರ್ಯತೇ ॥

ಇತಿ ಮಾಹಾತ್ಮ್ಯೇ ॥

ಕಾಲ ಅಂತಕ ಪ್ರಧಾನ ಮೃತ್ಯು ಅವ್ಯಕ್ತ ಎಂದೂ ಸೂಕ್ಷ್ಮ ಚಿತ್‌ಪ್ರಕೃತಿ ಕರೆಸಿಕೊಳ್ಳುತ್ತಾಳೆ. ಶ್ರೀ ಭೂ ದುರ್ಗಾ ನಾಮಗಳಿಂದಲೂ ಕರೆಸಿಕೊಳ್ಳುತ್ತಾಳೆ. ಅವಳೇ ಬ್ರಹ್ಮಾದಿಗಳಿಗೆ ಭಯದಾಯಕಳು. ವಿಷ್ಣುವಿಗೆ ಮಾತ್ರ ವಶವರ್ತಿನಿಯಾಗಿದ್ದು ಭಯರಹಿತಳಾಗಿದ್ದರೂ ವಶವರ್ತಿನಿಯಾದ್ದರಿಂದಲೇ ಭಯ ಪಡುವಂತೆ ಇರುವಳೆಂದು ಹೇಳಲ್ಪಡುತ್ತಾಳೆ ಎಂದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

---

* * *

ಆದಿಸೃಷ್ಟಿಯಲ್ಲಿ ಬ್ರಹ್ಮನನ್ನು ಭಯದಿಂದ ಪಾರು ಮಾಡಿದ ಹರಿ ನಮ್ಮನ್ನು ಕಾಪಾಡಲಿ ಎಂದು ವೃತ್ರಭಯಭೀತರಾದ ದೇವತೆಗಳು ಪ್ರಾರ್ಥಿಸುತ್ತಾರೆ.

ಪುರಾ ಸ್ವಯಂಭೂರಪಿ ಸಂಯಮಾಂಭ-
ಸ್ಯುದೀರ್ಣವಾತೋರ್ಮಿರವೈಃ ಕರಾಳೇ ।
ಏಕೋಽರವಿಂದಾತ್ ಪತಿತಸ್ತತಾರ
ತಸ್ಮಾದ್ ಭಯಾದ್ ಯೇನ ಸ ನೋಽಸ್ತು ಪಾರಃ ॥ ೨೩ ॥

ಆದಿಸೃಷ್ಟಿಯಲ್ಲಿ ಪ್ರಳಯಸಮುದ್ರ ಬಿರುಗಾಳಿಗೆ ಎದ್ದ ಅಲೆಗಳಿಂದ ಭೋರ್ಗರೆಯುತ್ತಿತ್ತು. ಭಯಂಕರವಾಗಿತ್ತು. ಅದರ ನಡುವೆ ಪದ್ಮದಲ್ಲಿ ಏಕಾಂಗಿಯಾಗಿ ಕುಳಿತಿದ್ದ ಬ್ರಹ್ಮ ಭೀತನಾಗಿ ನೀರಿಗೆ ಬೀಳುವ ಸಂಭವವಿದ್ದಿತು. ಅವನನ್ನು ಭಯದಿಂದ ಪಾರುಮಾಡಿದ ಭಗವಂತನೆ ನಮ್ಮನ್ನೂ ಪಾರು ಮಾಡಲಿ.

ಇಲ್ಲಿ ಜಡವಾದ ಪ್ರಳಯಸಮುದ್ರ ಬಿರುಗಾಳಿಗಳಿಗೆ ಚೇತನನಾದ ಜೀವೋತ್ತಮ ಸರ್ವಶಕ್ತನಾದ ಬ್ರಹ್ಮ ಭಯಪಡುವನೆ? ಭಯಕ್ಕೆ ಕಾರಣವಾದ ಅಜ್ಞಾನವಾದರೂ ಸರ್ವಜ್ಞನಾದ ಆತನಿಗೆ ಸಂಭವನೀಯವೆ? ಎಂದು ಮುಂತಾದ ಪ್ರಶ್ನೆಗಳಿಗೆ ಸಮಾಧಾನ ಬೇರೆ ವ್ಯಾಖ್ಯಾನಕಾರರಲ್ಲಿ ಇಲ್ಲ. ಶ್ರೀಮದಾಚಾರ್ಯರು ಹೇಳುತ್ತಾರೆ–

ಯತ್ರ ವಾಯೂದಪದ್ಮಾದಿರೂಪೇಣ ಪ್ರಕೃತಿಃ ಸ್ಥಿತಾ ।
ಏಕಸ್ತತ್ರಾಬಿಭೇದ್ ಬ್ರಹ್ಮಾ ವಿಚಾರ್ಯ ಭಯಮತ್ಯಗಾತ್ ।
ಅಂತರ್ಗತೋ ಹರಿಸ್ತಸ್ಯ ಧ್ಯಾತೋ ಭಯಮಪಾನುದತ್ ॥
ಇತಿ ಚ ।

ಜನಿಷ್ಯತಾಂ ಜನಾನಾಂ ತು ಸ್ವಭಾವಾನಾಂ ಪ್ರಸಿದ್ಧಯೇ ।
ಜ್ಞಾನಾದಿಗುಣಪೂರ್ಣಸ್ಯ ಬ್ರಹ್ಮಣೋಽಪಿ ಕ್ಷಣಾರ್ಧಗಾಃ ।
ಭಯಾದಿಕಾ ಭವಂತೀವ ಕಥಂ ತಸ್ಮಿನ್ ಸ್ಥಿರಾಲಯಾಃ ॥ ಇತಿ ಚ ।

ಭಗವತ್ಪ್ರೀತಯೇ ನಿತ್ಯಂ ಬ್ರಹ್ಮಣೋ ಯೇ ಭಯಾದಯಃ ।
ನ ವೃಥಾ ತಸ್ಯ ಭಾವಃ ಸ್ಯಾತ್ ಕಶ್ಚಿತ್ ತೇಽಪಿ ಕ್ಷಣಾರ್ಧಗಾಃ ॥

ಅಜ್ಞಾನಂ ತು ಚತುರ್ವಾರಂ
ದ್ವಿವಾರಂ ಭಯಮೇವ ಚ ।
ಶೋಕೋಽಪಿ ತಾವಾನ್ ನಾನ್ಯತ್ರ
ಕದಾಚಿದ್ ಬ್ರಹ್ಮಣೋ ಭವೇತ್ ।

ತತ್ರಾಪಿ ಭಗವತ್ಪ್ರೀತ್ಯಾ
ಉನ್ನತ್ಯೈ ಚಾಸ್ಯ ತದ್ ಭವೇತ್ ॥ ಇತಿ ಬ್ರಹ್ಮತರ್ಕೇ ॥

ಮಹಾಪ್ರಳಯಾನಂತರದ ಸೃಷ್ಟಿಯ ಆದಿಯಲ್ಲಿ ವಾಯು ಸಮುದ್ರಜಲ ಪದ್ಮ ಅಲೆಗಳ ರೂಪದಿಂದ ರಮಾದೇವಿ ಇದ್ದಳು. ಪದ್ಮದಲ್ಲಿ ಏಕಾಕಿಯಾಗಿ ಕುಳಿತಿದ್ದ ಬ್ರಹ್ಮ ಭಯಗೊಂಡ. (ಸೈವ ಬ್ರಹ್ಮಾದಿ ಭಯದಾ' ಎಂದು ಮಾಹಾತ್ಮ್ಯ ವಚನವೂ ಇದನ್ನು ಹೇಳುತ್ತದೆ.) ಬಳಿಕ ವಿಚಾರ ಮಾಡಿ ಭಯವನ್ನು ಪರಿಹರಿಸಿಕೊಂಡ. ಅಂದರೆ, ಅವನು ತನ್ನೊಳಗಿರುವ ಪರಮಾತ್ಮನನ್ನು ಧ್ಯಾನಿಸಿದ್ದರಿಂದ ಪರಮಾತ್ಮ ಅವನ ಭಯವನ್ನು ಕಳೆದ ಎಂದೂ ಹೇಳಿದೆ.

ಮುಂದೆ ಹುಟ್ಟುವ ಜನರು ಏಕಾಂಗಿಗಳಾಗಿದ್ದರೆ ಹೀಗೆ ಭಯಗೊಳ್ಳುತ್ತಾರೆ ಎಂದು ಲೋಕಕ್ಕೆ ಅರಿವಾಗುವುದು ಬ್ರಹ್ಮನ ಈ ಭಯದ ಫಲ. ಬ್ರಹ್ಮ ಜ್ಞಾನಾದಿ ಗುಣಪೂರ್ಣನಾದರೂ ಅವನಲ್ಲಿ ಕ್ಷಣಾರ್ಧಕಾಲದಲ್ಲಿ ಅತ್ಯಲ್ಪವಾಗಿ ಭಯ ಮುಂತಾದುವು ಉಂಟಾಗುತ್ತವೆ. ಜ್ಞಾನಾದಿಗುಣ ಪೂರ್ಣನಲ್ಲಿ ಅವು ಹೆಚ್ಚು ಕಾಲ ಹೇಗೆ ಇರ ಬಲ್ಲುವು? ಎಂದೂ ಹೇಳಿದೆ.

ಬ್ರಹ್ಮನ ಭಯಶೋಕಾದಿಗಳು ಸದಾ ಭಗವಂತನ ಅನುಗ್ರಹಕ್ಕೇ ಕಾರಣವಾಗುತ್ತವೆ. ಅವನ ಯಾವುದೇ ಮನೋಭಾವ ವ್ಯರ್ಥವೆನಿಸುವುದಿಲ್ಲ. ಮತ್ತು ಆ ಭಯ

ಶೋಕಾದಿಗಳು ಕ್ಷಣಾರ್ಧಕಾಲದಲ್ಲಿ ಮಾತ್ರ ಇರುತ್ತವೆ. ಅಜ್ಞಾನ ನಾಲ್ಕು ಬಾರಿ, ಭಯ ಎರಡುಬಾರಿ, ಶೋಕವೂ ಎರಡು ಬಾರಿ ಬ್ರಹ್ಮನಿಗೆ ಆಗುತ್ತದೆ ಹೊರತು ಬೇರೆ ಪ್ರಸಂಗಗಳಲ್ಲಿ ಅವು ಎಂದೂ ಉಂಟಾಗುವುದಿಲ್ಲ. ಅವು ಉಂಟಾಗುವಾಗಲೂ ಅದು ಭಗವದನುಗ್ರಹದ ಹೆಚ್ಚಳಕ್ಕೆ ಕಾರಣವಾಗುತ್ತದೆ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ದಿನ ಪ್ರಳಯಾನಂತರದ ಸೃಷ್ಟಿಯಲ್ಲಿ ನಾಭಿಕಮಲದಲ್ಲಿ ಕುಳಿತಿರುವ ಬ್ರಹ್ಮನಿಗೆ ತಾನು ಯಾರು? ಈ ಕಮಲ ಯಾರಿಂದ ಜನಿಸಿತು? ತಾನು ಮುಂದೆ ಏನು ಸೃಷ್ಟಿ ಮಾಡಬೇಕು? ಎಂದು ಮೂರು ಬಗೆಯಾಗಿ ಅಜ್ಞಾನ ಉಂಟಾಯಿತು. ಪರಮಾತ್ಮನಿಂದ ಲಕ್ಷ್ಮೀದೇವಿಯ ಉದರದಲ್ಲಿ ಜನಿಸಿದ ಸಂವತ್ಸರ ಎಂಬ ಹೆಸರಿನ ರೂಪದಲ್ಲಿ ಬ್ರಹ್ಮನಿಗೆ ತಾನು ಯಾವ ಸಾಧನಗಳಿಂದ ಪರಮಾತ್ಮನನ್ನು ಪೂಜಿಸಬೇಕೆನ್ನುವಲ್ಲಿಯೂ ಅಜ್ಞಾನ ಉಂಟಾಯಿತು. ಹೀಗೆ ನಾಲ್ಕು ಬಾರಿ ಅಜ್ಞಾನ. ಇದು ಭಾವರೂಪ ಅಜ್ಞಾನ. ಅಂದರೆ ಜ್ಞಾನಕ್ಕೆ ಪ್ರತಿಬಂಧಕವಾದ ಒಂದು ಭಾವವಸ್ತು. 'ದುಃಖಸ್ಪೃಷ್ಟಂ ತದಸ್ಪೃಷ್ಟಂ' ಎಂದು ತತ್ವಸಂಖ್ಯಾನದಲ್ಲಿ ಹೇಳಿದ ದುಃಖವೆಂದರೆ ಇದೇ. ಬ್ರಹ್ಮನಿಗೆ ದುಃಖಸ್ಪರ್ಶವೆ ಇಲ್ಲ ಎನ್ನಬಾರದು ಎಂದೂ ದುಃಖಸ್ಪರ್ಶವಿಲ್ಲದ ಅಸ್ವತಂತ್ರಚೇತನ ರಮೆಯೊಬ್ಬಳೆ. ಮುಕ್ತರಿಗೆ ಇಚ್ಛಿಸಿದ ವಸ್ತು ವಿಲಂಬವಿಲ್ಲದೆ ದೊರಕುವುದರಿಂದ ಅವರಿಗೂ ದುಃಖವಿಲ್ಲ. ಬ್ರಹ್ಮನಿಗೆ ಇಚ್ಛೆ ಪೂರೈಸಲು ಕ್ಷಣ ವಿಲಂಬವಾಗಿ ಸ್ವಲ್ಪ ದುಃಖ ಬರುವುದುಂಟು. ಆದರೂ ಅದು ಬಾಹ್ಯ ಅಂತಃಕರಣದಲ್ಲಿ. ಅದರಲ್ಲಿ ಅವನಿಗೆ ಅಭಿಮಾನವಿಲ್ಲದ ಪ್ರಯುಕ್ತ ಅವನ ಸ್ವರೂಪದಲ್ಲಿ ಅವನು ಕುಗ್ಗುವುದಿಲ್ಲ ಎಂದು ಬೃಹದಾರಣ್ಯಕ ಭಾಷ್ಯದಲ್ಲಿ ಉಕ್ತವಾಗಿದೆ–

ಬ್ರಹ್ಮಣೋ ಹ್ಯಲ್ಪದುಃಖಂ ಸ್ಯಾತ್ ತದಪ್ಯನಭಿಮಾನತಃ ।
ನಾಸ್ವಾತ್ಮಸಂಬದ್ಧತಯಾ ಭೋಗಾಭಾವಾತ್ ಕಥಂಚನ ॥

ಅದರಿಂದ ಬ್ರಹ್ಮನಿಗೆ ಅಜ್ಞಾನ ಭಯ ಶೋಕಗಳೆಲ್ಲವೂ ಕೇವಲ ನಟನೆ, ಭಗವತ್ಪ್ರೀತಿಗಾಗಿ, ಎನ್ನುವಂತಿಲ್ಲ. ಭಗವತ್ಪ್ರೀತಿಯ ಉದ್ದೇಶದಿಂದ ಅಜ್ಞಾನಾದಿಗಳನ್ನು ಆತ ಬಯಸುತ್ತಾನೆ. ರಮಾದೇವಿ ಅವನ್ನು ನೀಡುತ್ತಾಳೆ. ಇದೆ ಬೇರೆ ಜೀವರಿಗಿಂತ ಜೀವೋತ್ತಮನಲ್ಲಿರುವ ವೈಶಿಷ್ಟ್ಯ.

ಮಹಾಪ್ರಳಯಾನಂತರದ ಸೃಷ್ಟಿಗೆ ಆದಿಯಲ್ಲಿ ಪದ್ಮದಿಂದ ಜನಿಸಿದ ಬ್ರಹ್ಮನಿಗೆ ಒಮ್ಮೆ ಭಯವೂ ಶೋಕವೂ ಉಂಟಾಯಿತು. ಸಂವತ್ಸರ ನಾಮಕ ಬ್ರಹ್ಮನಿಗೆ ಭಗವದಾರಾಧನೆಗೆ ಸಾಧನ ಸಿಗದಿದ್ದುದರಿಂದ ಇನ್ನೊಮ್ಮೆ ಭಯ ಮತ್ತು ಶೋಕ. ಹೀಗೆ ಎರಡು ಬಾರಿ ಭಯ, ಎರಡು ಬಾರಿ ಶೋಕ.

* * *

ಶ್ರೀಹರಿಯೆ ಸ್ವತಂತ್ರಕರ್ತೃ. ಆದರೂ ನಾವೇ ಸ್ವತಂತ್ರರೆಂಬ ಅಭಿಮಾನ ಕೆಲವೊಮ್ಮೆ ನಮ್ಮಲ್ಲಿ ಉಂಟಾಗುತ್ತವೆ ಎಂದು ಹೇಳಿಕೊಳ್ಳುತ್ತ ವೃತ್ರ ಭಯಪೀಡಿತರಾದ ದೇವತೆಗಳು ಹರಿಯನ್ನು ಮೊರೆ ಹೊಗುತ್ತಾರೆ.

ಯ ಏಕ ಈಶೋ ನಿಜಮಾಯಯಾ ನಃ
ಸಸರ್ಜ ಯೇನಾನುಸೃಜಾಮ ವಿಶ್ವಮ್ ।
ವಯಂ ಚ ಯಸ್ಯಾಪಿ ಪುರಃ ಸಮೇತಾಃ
ಪಶ್ಯಾಮ ಲಿಂಗಂ ಪೃಥಗೀಶಮಾನಿನಃ ॥ ೨೪ ॥

ಸ್ವತಂತ್ರ ಸರ್ವೇಶನಾದ ಭಗವಂತ ತನ್ನ ಇಚ್ಛೆಯಿಂದ ನಮ್ಮನ್ನು ಸೃಜಿಸಿದ್ದಾನೆ. ಅವನ ಅನುಗ್ರಹದಿಂದ ನಾವು ಪ್ರಪಂಚ ಸೃಷ್ಟಿ ಮಾಡುತ್ತೇವೆ. ಸ್ವತಂತ್ರ ಸೃಷ್ಟಿಕರ್ತ ಅವನೆ. ಪೂರ್ಣಾನಂದಸ್ವರೂಪನಾದ್ದರಿಂದ ಅವನು ಸೃಷ್ಟಿ ಮಾಡುತ್ತಾನೆ. ನಾವೆಲ್ಲರೂ ಸೇರಿ ಅವನ ಮುಂದೆ ನಿಂತರೂ, ಈ ಸೃಷ್ಟಿಯನ್ನು ನೋಡಿ ಅದಕ್ಕೆ ಸ್ವತಂತ್ರಕರ್ತನು ಪೂರ್ಣಾನಂದನಾದವನು ಒಬ್ಬನಿರಬೇಕೆಂದು ನಾವು ಊಹಿಸುತ್ತೇವೆ ಹೊರತು ಅವನ ಆ ಸ್ವರೂಪವನ್ನು ನಾವು ಸಾಕ್ಷಾತ್ತಾಗಿ ಕಾಣಲಾರೆವು. ಇದಕ್ಕೆ ಕಾರಣವೇನೆಂದರೆ ನಾವು ಸ್ವತಂತ್ರಸೃಷ್ಟಿಕರ್ತರೆಂದು ಅಭಿಮಾನ ಪಡುತ್ತೇವೆ. ಈ ಅಭಿಮಾನ ನಮ್ಮಲ್ಲಿ ಸ್ವರೂಪತಾರತಮ್ಯಾನುಗುಣವಾಗಿ ಹೆಚ್ಚು ಅಥವಾ ಕಡಿಮೆ ಆಗಾಗ ಬಂದುಬಿಡುತ್ತದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ವಯಂ ಚ ಯಸ್ಯಾಪಿ ಪುರಃ' ಎಂಬಲ್ಲಿ 'ವಯಂ ನ ಯಸ್ಯಾಪಿ ಪುರಃ' ಎಂದು ಪಾಠವಿಟ್ಟುಕೊಂಡು ಲಿಂಗವೆಂದರೆ ಸ್ವರೂಪವೆಂದು ವ್ಯಾಖ್ಯಾನಿಸಿದ್ದಾರೆ. ನಾವು ಪ್ರಪಂಚಸೃಷ್ಟಿ ಮಾಡುತ್ತೇವೆ. ಆದರೆ ನಮ್ಮೊಳಗೆ ನಿಂತು ನಮ್ಮನ್ನುಸೃಷ್ಟಿಕಾರ್ಯದಲ್ಲಿ ಪ್ರೇರಿಸುವ ಪರಮಾತ್ಮನ ಸ್ವರೂಪವನ್ನು ನಾವು ಕಾಣುತ್ತಿಲ್ಲ ಎಂದು ಶ್ರೀಧರವ್ಯಾಖ್ಯಾನ. ವಸ್ತುತಃ ಲಿಂಗವೆಂದರೆ ಚಿಹ್ನೆ ಎಂದು ಪ್ರಸಿದ್ಧ. ಪರಮಾತ್ಮ ಪೂರ್ಣಾನಂದನಾದ್ದರಿಂದಲೇ ಸೃಷ್ಟಿ ಮಾಡುತ್ತಾನೆ, ಸುಖಪ್ರಾಪ್ತಿಗಾಗಲಿ ದುಃಖನಿವೃತ್ತಿಗಾಗಲಿ ಅಲ್ಲ. ಅದರಿಂದ ಅವನು ಸೃಜಿಸಿದ ಈ ಜಗತ್ತು ಅವನು ಪೂರ್ಣಾನಂದ ಸ್ವರೂಪ ಎಂದು ಊಹಿಸಿಕೊಳ್ಳಲು ಚಿಹ್ನೆಯಾಗಿದೆ. ಅಂಥ ಜಗತ್ತನ್ನು ಮಾತ್ರ ನೋಡುತ್ತಿದ್ದೇವೆ, ಊಹೆಯಿಂದ ಮಾತ್ರ ಅವನ ಪೂರ್ಣಾನಂದ ಸ್ವರೂಪತ್ವವನ್ನು ತಿಳಿಯುತ್ತೇವೆ ಹೊರತು ಸಾಕ್ಷಾತ್ತಾಗಿ ಅವನನ್ನು ನಾವು ಕಾಣುತ್ತಿಲ್ಲ. ಏಕೆಂದರೆ ನಾವು ಸ್ವತಂತ್ರರೆಂದು ಅಭಿಮಾನ ಪಡುತ್ತೇವೆ ಎಂದು ದೇವತೆಗಳು ಹೇಳುತ್ತಾರೆ. ಆದರೆ ಶ್ರೀಧರ ವ್ಯಾಖ್ಯಾನದಲ್ಲಿ 'ಚಿಹ್ನವನ್ನು ಮಾತ್ರ ಕಾಣುವೆವೆ'ನ್ನುವ ಅಂಶ ಶ್ಲೋಕದಲ್ಲಿ ಇಲ್ಲವಾಗಿದೆ. 'ಸ್ವರೂಪವನ್ನು ಕಾಣುತ್ತಿಲ್ಲ' ಎಂಬ ಅಂಶ ಮಾತ್ರ ಉಕ್ತವಾಗುತ್ತಿದೆ. ಅದಕ್ಕೂ 'ಲಿಂಗ' ಶಬ್ದವನ್ನು ಬಲಾತ್ಕಾರವಾಗಿ ಸ್ವರೂಪ ಎಂಬ ಅರ್ಥದಲ್ಲಿ ಗ್ರಹಿಸಬೇಕು.

ಶುಕದೇವ ವ್ಯಾಖ್ಯಾನದಲ್ಲಿ 'ಲಿಂಗ'ವೆಂದರೆ ಚಿಹ್ನೆ ಎಂದೇ ಅರ್ಥವಿಟ್ಟುಕೊಂಡು ನಾವು ಪರಮಾತ್ಮನ ಪ್ರೇರಣೆಯಿಂದಲೆ ಏನಾದರೂ ಸೃಷ್ಟಿಕಾರ್ಯಮಾಡುತ್ತಿದ್ದರೂ ಅದಕ್ಕೆ ಜ್ಞಾಪಕವಾದ ಚಿಹ್ನೆಯನ್ನೂ ಕೂಡ ಕಾಣುತ್ತಿಲ್ಲ. ಇಷ್ಟು ಅಜ್ಞಾನಿಗಳಾಗಿದ್ದೇವೆ' ಎಂದು ವ್ಯಾಖ್ಯಾನಿಸಲಾಗಿದೆ. ಇದು ಸ್ವವ್ಯಾಹತ. ದೇವತೆಗಳು ತಮಗೆ ಪರಮಾತ್ಮನ ಪ್ರೇರಣೆಯನ್ನು ಒಪ್ಪಿಕೊಂಡಿದ್ದಾರೆ. ಅದಕ್ಕೆ ಜ್ಞಾಪಕ ಚಿಹ್ನೆ. ಒಂದೂ ನಮಗೆ ಸಿಕ್ಕಿಲ್ಲ ಎನ್ನುತ್ತಿದ್ದಾರೆ. ಹಾಗಾದರೆ ಅದನ್ನು ಹೇಗೆ ಒಪ್ಪಿಕೊಂಡರು? ಗಿರಿಧರ ವ್ಯಾಖ್ಯಾನದಲ್ಲಿಯೂ ಇದೇ ತಪ್ಪನ್ನು ಮಾಡಿದ್ದಾರೆ. ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳಲ್ಲಿ 'ಲಿಂಗ' ಎಂದರೆ ಶರೀರ ಎಂದು ಅರ್ಥೈಸಿ 'ಹೃದಯದೊಳಗೇ ನಿಂತು ಪ್ರೇರಿಸುವ ಪರಮಾತ್ಮನ ದಿವ್ಯಶರೀರವನ್ನು ನಾವು ಕಾಣಲಾರದೇ ಇದ್ದೇವೆ' ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಅವರ ಸಿದ್ಧಾಂತದಲ್ಲಿ ಇಡಿ ಜಗತ್ತು ಪರಮಾತ್ಮನ ಶರೀರ. ಇದು ದೇವತೆಗಳಿಗೆ ತಿಳಿಯದುದೇನಲ್ಲ. ಅವರು ಪರಮಾತ್ಮನ ದಿವ್ಯಶರೀರ ಕಾಣದೆ ಹೋದರೂ ಜಗತ್ತೆಂಬ ಶರೀರವನ್ನು ಪ್ರತ್ಯಕ್ಷ ಕಾಣುತ್ತಿದ್ದಾರೆ ಎಂದ ಮೇಲೆ ಏಕೆ ಕೊರಗುತ್ತಾರೆ? ದಿವ್ಯಶರೀರ ಧ್ಯಾನಗಮ್ಯ. ಪ್ರತ್ಯಕ್ಷವಾಗಲೆಂದು ಏಕೆ ಬಯಸುತ್ತಾರೆ? ಶ್ಲೋಕದಲ್ಲಿ 'ಲಿಂಗಂ' ಶರೀರವನ್ನು ಎಂದು ಸಾಮಾನ್ಯವಾಗಿ ಹೇಳಿರುವಾಗ ಹೃದಯದೊಳಗೆ ನಿಂತು ಪ್ರೇರಿಸುವ ಪರಮಾತ್ಮನ 'ದಿವ್ಯಶರೀರ'ವೆಂದು ಸೇರಿಸುವುದೂ ಅಸ್ವರಸ.

'ಈಶಮಾನಿನಃ ಲಿಂಗಂ ಪಶ್ಯಾಮಃ' ನಾವು ಸ್ವತಂತ್ರರೆಂಬ ಅಭಿಮಾನ ಉಳ್ಳವರಾದ್ದರಿಂದ ಭಗವಂತನ ಪೂರ್ಣಾನಂದಸ್ವರೂಪ ಜ್ಞಾಪಕವಾದ ಚಿಹ್ನೆಯನ್ನು ಕಾಣುತ್ತಿದ್ದೇವೆ ಎಂದು ಮೇಲು ನೋಟಕ್ಕೆ ಹೇಳಿದಂತೆ ಕಾಣುತ್ತದೆ. ಅದು ಅಸಂಗತವಾಗುತ್ತದೆ. ಸ್ವಾತಂತ್ರ್ಯಾಭಿಮಾನ ಪ್ರಯುಕ್ತವಾಗಿ ನಾವು ಭಗವಂತನ ಸ್ವರೂಪಕ್ಕೆ ಜ್ಞಾಪಕವಾದ ಚಿಹ್ನೆಯನ್ನು ಮಾತ್ರ ಕಾಣುತ್ತಿದ್ದೇವೆ, ಸ್ವರೂಪವನ್ನು ಕಾಣುತ್ತಿಲ್ಲ ಎಂದು ಹೇಳುವ ಅಭಿಪ್ರಾಯವಿರುವುದರಿಂದ 'ಲಿಂಗಂ ಪಶ್ಯಾಮಃ' ಎಂಬಲ್ಲಿ 'ಸರ್ವಂ ವಾಕ್ಯಂ ಸಾವಧಾರಣಂ' ಎಂಬಂತೆ 'ಲಿಂಗಮೇವ ಪಶ್ಯಾಮಃ ನ ತು ಸ್ವರೂಪಂ' ಎಂದು ಏವಕಾರ ಸೇರಿಸುವುದು ಅಸ್ವರಸವೇನಲ್ಲ. ಅದರಿಂದ

'ವಯಂ ಚ ಯಸ್ಯಾಪಿ ಪುರಃ' ಎಂಬ ಪಾಠದಲ್ಲಿ ಏನೂ ಅನುಪಪತ್ತಿ ಇಲ್ಲ.

'ವಯಂ ನ ಯಸ್ಯಾಪಿ ಪುರಃ' ಎಂಬ ಪಾಠದಲ್ಲಿಯೂ 'ನ ಲಿಂಗಂ ಪಶ್ಯಾಮಃ' 'ಚಿಹ್ನೆಯನ್ನು ನಾವು ಕಾಣಲಾರದೇ ಇದ್ದೇವೆ' ಎನ್ನುವುದು ಬಾಧಿತವಾಗುವುದರಿಂದ 'ಲಿಂಗಮೇವ ಪಶ್ಯಾಮಃ ನ ತು ಸ್ವರೂಪಂ' ಎಂದು ಅಭಿಪ್ರಾಯ ಸಿಗುವಂತೆ ಏವಕಾರವನ್ನೂ ಸ್ವರೂಪಶಬ್ದವನ್ನೂ ಅಧ್ಯಾಹಾರ ಮಾಡಿಕೊಳ್ಳದೆ ಬೇರೆ ಉಪಾಯವಿಲ್ಲ. ತಾತ್ಪರ್ಯದಲ್ಲಿ ಏವಕಾರಾಧ್ಯಾಹಾರ ಮಾತ್ರ ಉಕ್ತವಾಗಿದೆ.

ಸ್ವರೂಪಶಬ್ದಾಧ್ಯಾಹಾರ ಮತ್ತು ಅದಕ್ಕೆ ನಕಾರದ ಅನ್ವಯ ಉಕ್ತವಾಗಿಲ್ಲ. ಆದ್ದರಿಂದಲೂ ನಕಾರರಹಿತವಾದ ಪಾಠವೆ ಹೆಚ್ಚು ಸರಳ ಸೂಕ್ತವೆನಿಸುತ್ತದೆ.

ಲಿಂಗಮೇವ ಪಶ್ಯಾಮಃ ।

ಕದಾಚಿದಭಿಮಾನಸ್ತು ದೇವಾನಾಮಪಿ ಸನ್ನಿವ ।
ಪ್ರಾಯಃ ಕಾಲೇಷು ನಾಸ್ತ್ಯೇವ ತಾರತಮ್ಯೇನ ಸೋಽಪಿ ತು ।

ಇತಿ ಚ ।

'ಲಿಂಗಂ' ಎಂಬಲ್ಲಿ ಏವಕಾರವನ್ನೂ 'ಪಶ್ಯಾಮ' ಎಂಬಲ್ಲಿ ವಿಸರ್ಗವನ್ನೂ ಇಟ್ಟುಕೊಳ್ಳಬೇಕು.

'ದೇವತೆಗಳು ಅಪರೋಕ್ಷಿಗಳಾದ್ದರಿಂದ ಅವರಲ್ಲಿ ಸ್ವಾತಂತ್ರ್ಯಾಭಿಮಾನ ಪ್ರಾಯಃ ಎಂದೂ ಇರುವುದಿಲ್ಲ. ಆದರೂ ಕೆಲವೊಮ್ಮೆ ಅಸುರಾವೇಶದಿಂದ ಬರುವುದುಂಟು. ಅದೂ ಬ್ರಹ್ಮನಿಗಿಲ್ಲ. ರುದ್ರಾದಿಗಳಿಗೆ ತಾರತಮ್ಯಾನುಗುಣವಾಗಿ ಮೇಲಿನವರಿಗಿಂತ ಕೆಳಗಿನವರಿಗೆ ಹೆಚ್ಚಾಗಿರುತ್ತದೆ' ಎಂದೂ ಹೇಳಿದೆ.

ದೇವತೆಗಳ ಸ್ವಾತಂತ್ರ್ಯಾಭಿಮಾನದ ಬಗ್ಗೆ ಈ ವಿವರಗಳನ್ನು ಬೇರೆ ವ್ಯಾಖ್ಯಾನಕಾರರು ಗಮನಿಸುವುದಿಲ್ಲ.

* * *

ವೃತ್ರಾಸುರನಿಂದ ಪೀಡಿತರಾದ ದೇವತೆಗಳು ಹರಿಯನ್ನು ಸ್ತುತಿಸಿದಾಗ ಅವನು ಒಲಿದು ಸ್ವಮೂರ್ತಿಗಣ ಮಧ್ಯಗನಾಗಿ ಮೈದೋರಿದ.

ಆತ್ಮತುಲ್ಯೈಃ ಷೋಡಶಭಿರ್ವಿನಾ ಶ್ರೀವತ್ಸಕೌಸ್ತುಭೌ ।
ಪರ್ಯುಪಾಸಿತಮುನ್ನಿದ್ರಶಾರದಾಂಬುರುಹೇಕ್ಷಣಮ್ ॥ ೨೮ ॥

ಬಳಿಕ ತಮ್ಮ ಎದುರಿಗೂ ಆ ಭಗವಂತ ಪ್ರಕಟನಾದ. ಅವನು ಅರಳಿದ ಶರತ್ಕಾಲದ ಕಮಲದಂಥ ಕಣ್ಣಿನವನು. ಅವನ ಸುತ್ತಲೂ ಅವನ ಸ್ವರೂಪಭೂತರೇ ಆದ ವಾಸುದೇವಾದಿಗಳು ಮತ್ತು ಕೇಶವಾದಿಗಳೆಂದು ಹದಿನಾರು ಭಗವನ್ಮೂರ್ತಿಗಳು ಲೀಲೆಯಿಂದ ಪರಿವಾರರೂಪದಿಂದ ಸೇವಿಸುತ್ತ ಇದ್ದಾರೆ. ಅವರೆಲ್ಲರೂ ಶ್ರೀವತ್ಸ ಕೌಸ್ತುಭಾಭಿಮಾನಿಗಳಾದ ಪ್ರಕೃತಿಪುರುಷರಿಗೆ ಅತೀತರು. ಅವರಿಂದ ನಿರ್ಮಿತ ವಾಗದಿರುವ ಶುದ್ಧ ಚಿನ್ಮಯಗಾತ್ರದವರು. ಅವರಿಗಿಂತ ಉತ್ತಮರು. ಅದರಿಂದ ಪರಸ್ಪರ ಸಮಾನರು.

ಇಲ್ಲಿ 'ವಕ್ಷಃಸ್ಥಳದಲ್ಲಿ ಶ್ರೀವತ್ಸ ಕತ್ತಿನಲ್ಲಿ ಕೌಸ್ತುಭ ಹೊರತಾಗಿ ಉಳಿದ ಎಲ್ಲ ವಿಷಯಗಳಲ್ಲಿಯೂ ಹರಿಗೆ ಸಮಾನರಾದ ಹದಿನಾರು ಮಂದಿ ನಂದ ಸುನಂದ

ಮುಂತಾದ ಪಾರ್ಷದರು ಹರಿಯ ಸೇವೆ ಮಾಡುತ್ತಿದ್ದರು' ಎಂದು ಬೇರೆ ವ್ಯಾಖ್ಯಾನಕಾರರು ಹೇಳಿದ್ದಾರೆ. ಆದರೆ ನಂದ ಸುನಂದ ಮುಂತಾದ ಪಾರ್ಷದಯುಕ್ತನಾದ ಹರಿಯನ್ನು ಅಂದರೆ ಪಾರ್ಷದರನ್ನೂ ಬ್ರಹ್ಮಾದಿದೇವತೆಗಳು ನಮಿಸುವರೆ? ಪಾರ್ಷದರು ಸಾಮಾನ್ಯದೇವತೆಗಳು. ಬ್ರಹ್ಮಾದಿಗಳು ದೇವೋತ್ತಮರು. ಮತ್ತು ಪಾರ್ಷದರು ಬಾಹ್ಯ ಆಕಾರದಲ್ಲಿ ತುಲ್ಯರಂತೆ ಕಾಣುತ್ತಾರೆ. ವಸ್ತುತಃ ಹರಿಗೆ ತುಲ್ಯರೂ ಅಲ್ಲ. ಬಹಳ ಅಲ್ಪಶಕ್ತರು. ಅದರಿಂದ ಇಲ್ಲಿ ಹರಿಯ ಬೇರೆ ಹದಿನಾರು ರೂಪಗಳನ್ನೇ ಇಟ್ಟುಕೊಳ್ಳಬೇಕು. ನಂದಸುನಂದಾದಿ ಪಾರ್ಷದರೇ ಹದಿನಾರು ಮಂದಿ ಎನ್ನುವುದಾದರೆ 'ಶ್ರೀವತ್ಸ ಕೌಸ್ತುಭೌ ವಿನಾ' ಎಂಬ ಶಬ್ದಗಳು ವ್ಯರ್ಥ. ಏಕೆಂದರೆ ಶ್ರೀವತ್ಸಕೌಸ್ತುಭಗಳು ಹರಿಯ ಅಸಾಧಾರಣ ಲಕ್ಷಣಗಳು, ಹರಿಯನ್ನು ಹೊರತು ಇನ್ನಾರಲ್ಲಿಯೂ ಕೂಡುವುದಿಲ್ಲ ಎನ್ನುವುದು ಪ್ರಸಿದ್ಧ. ಹರಿ ತನ್ನವರಿಗೆ ಚತುರ್ಭುಜತ್ವಾದಿ ಸಾರೂಪ್ಯ ಮಾತ್ರ ಕೊಡುತ್ತಾನೆ, ಶ್ರೀವತ್ಸ ಕೌಸ್ತುಭಗಳನ್ನು ಕೊಡುವುದಿಲ್ಲ ಎಂದು ಪ್ರಸಿದ್ಧ. ವೀರರಾಘವವ್ಯಾಖ್ಯಾನದಲ್ಲಿ 'ತಯೋಃ ಪ್ರಧಾನಪುರುಷತತ್ತ್ವಾಭಿಮಾನಿತ್ವಾಜ್ಜೀವೇನಾಧಾರ್ಯತ್ವಾದಿತಿ ಭಾವಃ' ಶ್ರೀವತ್ಸಕೌಸ್ತುಭಗಳಿಗೆ ಪ್ರಕೃತಿ ಪುರುಷ ತತ್ತ್ವಗಳು ಅಭಿಮಾನಿಗಳಾಗಿರುವುದರಿಂದ ಅವುಗಳನ್ನು ಜೀವನು ಧರಿಸಲು ಶಕ್ತನಲ್ಲ' ಎಂದು ಸ್ಪಷ್ಟ ಹೇಳಿದೆ. ಅದರಿಂದ ಶ್ಲೋಕದಲ್ಲಿ 'ಆತ್ಮತುಲ್ಯೈಃ' ಎಂದಿದ್ದರೆ ಸಾಕಾಗಿತ್ತು. 'ಶ್ರೀವತ್ಸಕೌಸ್ತುಭೌ ವಿನಾ' ಎಂಬ ಅಂಶ ವ್ಯರ್ಥ. ಶ್ಲೋಕದಲ್ಲಿ 'ಪಾರ್ಷದರಿಂದ ಯುಕ್ತ'ನೆಂದು ಸ್ಪಷ್ಟಹೇಳಿಯೂ ಇಲ್ಲ.

ಅದರಿಂದ ಹರಿಯ ರೂಪಗಳನ್ನೇ 'ಆತ್ಮತುಲ್ಯ'ಶಬ್ದದಿಂದ ಪರಿಗ್ರಹಿಸಬೇಕು. ಹರಿಯ ರೂಪಗಳಿಗೆ ಪರಸ್ಪರವಾಗಿಯೂ ಹರಿಯಿಂದಲೂ ಭೇದವಿಲ್ಲ ನಿಜ. ಆದರೂ ತುಲ್ಯತ್ವ ಕೂಡುತ್ತದೆ. ಭೇದವಿದ್ದರೆ ಮಾತ್ರ ಸಾದೃಶ್ಯ ಎಂಬ ನಿಯಮವಿಲ್ಲ. ಅನನ್ವಯಾಲಂಕಾರಸ್ಥಳದಲ್ಲಿ ತನಗೆ ತಾನೇ ಉಪಮಾನವಾಗುವುದು ಕಂಡಿದೆ. 'ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ' ಎಂಬಂತೆ ಹರಿಗೆ ಸದೃಶ ಹರಿಯೆ, ಹರಿಯ ರೂಪಗಳೆ. ಅಭೇದವಿರುವಲ್ಲಿ ಪೂರ್ಣ ಸಾದೃಶ್ಯವಿರುತ್ತದೆ. ಭೇದವಿದ್ದರೆ ಅಲ್ಪ ಸಾದೃಶ್ಯ ಎಂದು ಮಾತ್ರ ವ್ಯತ್ಯಾಸ. ಪ್ರಕೃತದಲ್ಲಿ ಹರಿಯ ರೂಪಗಳಿಗೂ ಹರಿಗೂ ಭೇದವಿರಬಹುದೆ? ಎಂಬ ಸಂದೇಹಕ್ಕೆ ಅವಕಾಶವಿರುವುದರಿಂದ ಹರಿಯ ಅಸಾಧಾರಣಲಕ್ಷಣಗಳಾದ ಶ್ರೀವತ್ಸಕೌಸ್ತುಭಗಳು ಹದಿನಾರು ರೂಪಗಳಲ್ಲಿ ಇವೆ ಎನ್ನಬೇಕಾಗಿತ್ತು. ಶ್ರೀವತ್ಸಕೌಸ್ತುಭೌ ವಿನಾ ಎಂದಿದೆ. ಇದು ಹೇಗೆ ಕೂಡುತ್ತದೆ ಎಂದರೆ ಶ್ರೀಮದಾಚಾರ್ಯರು ತಂತ್ರಸಾರವಚನದ ಆಧಾರ ತೋರಿಸಿ ಹೀಗೆ ವ್ಯಾಖ್ಯಾನ ಮಾಡುತ್ತಾರೆ–

ಶ್ರೀವತ್ಸಃ ಪ್ರಕೃತಿರ್ಜ್ಞೇಯಾ ಬ್ರಹ್ಮಾಖ್ಯಃ ಕೌಸ್ತುಭಃ ಪುಮಾನ್ ।
ತದತೀತೈಃ ಷೋಡಶಭಿಃ ಸ್ವರೂಪೈರ್ಯ ಉಪಾಸ್ಯತೇ । ಇತಿ ಚ ।

ಶ್ರೀವತ್ಸಕೌಸ್ತುಭೌ ವಿನಾಽಽತ್ಮತುಲ್ಯೈಃ । ಪ್ರಕೃತಿಪುರುಷಾತೀತತ್ವಾತ್ ಸಪ್ತದಶರೂಪಾಣ್ಯಪಿ ತುಲ್ಯಾನೀತ್ಯರ್ಥಃ । ಆತ್ಮಭೂತೈಶ್ಚ ತುಲ್ಯೈಶ್ಚ ಆತ್ಮತುಲ್ಯೈಃ ॥

ಅಪುಂಪ್ರಕೃತ್ಯಧೀನತ್ವಾತ್ ವಾಸುದೇವಾದಿಕಾ ಹರೇಃ ।
ತುಲ್ಯಾಶ್ಚ ಕೇಶವಾದ್ಯಾಶ್ಚ ನ ಚ ಭಿನ್ನಾಃ ಕಥಂಚನ ।
ಇತಿ ತಂತ್ರಸಾರೇ ।

ಶ್ರೀವತ್ಸಕೌಸ್ತುಭಾಭ್ಯಾಂ ತು ವಿನಾಭಾವಂ ಪ್ರದರ್ಶಯನ್ ।
ಪುಂಪ್ರಕೃತ್ಯಾತ್ಮಕಾಭ್ಯಾಂ ತು ಧತ್ತೇ ನಿತ್ಯಂ ಜನಾರ್ದನಃ ॥

ಯದಸ್ಮಾಭ್ಯಾಮತೀತತ್ವಂ ಯದ್ ವಶೋ ನಾನಯೋರ್ಹರಿಃ ।
ಶ್ರೀವತ್ಸಕೌಸ್ತುಭಾಭ್ಯಾಂ ತು ವಿನಾಭಾವಃ ಸ ಏವ ತು ॥ ಇತಿ ಚ ।

ಆತ್ಮೈವ ಸಪ್ತದಶಧಾ ಸ್ವಯಂ ಭೂತ್ವಾ ಜನಾರ್ದನಃ ।
ಮಧ್ಯಸ್ಥಾವೃತಿರೂಪೇಣ ಕ್ರೀಡತೇ ಪುರುಷೋತ್ತಮಃ ॥ ಇತಿ ಚ ।

ಶ್ರೀವತ್ಸಶಬ್ದದಿಂದ ಶ್ರೀವತ್ಸಾಭಿಮಾನಿನಿ ರಮಾದೇವಿಯನ್ನೂ ಕೌಸ್ತುಭಶಬ್ದದಿಂದ ಕೌಸ್ತುಭಾಭಿಮಾನಿ ಬ್ರಹ್ಮನನ್ನೂ ಇಟ್ಟುಕೊಳ್ಳಬೇಕು. ಅವರಿಬ್ಬರನ್ನೂ ಮೀರಿಸುವ ತನ್ನ ಹದಿನಾರು ರೂಪಗಳಿಂದ ಹರಿ ತಾನೇ ಆರಾಧಿಸಲ್ಪಡುತ್ತಾನೆ ಎಂದೂ ಹೇಳಿದೆ.

'ಶ್ರೀವತ್ಸಕೌಸ್ತುಭೌ ವಿನಾ' ಎಂದರೆ ಶ್ರೀವತ್ಸ ಕೌಸ್ತುಭಗಳನ್ನು ಹರಿಯ ಹದಿನಾರು ರೂಪಗಳು ಧರಿಸುವುದಿಲ್ಲ ಎಂದರ್ಥವಲ್ಲ. ಶ್ರೀವತ್ಸ ಕೌಸ್ತುಭಾಭಿಮಾನಿಗಳಾದ ಪ್ರಕೃತಿಪುರುಷರನ್ನು ಹರಿಯ ಹದಿನೇಳು ರೂಪಗಳೂ ಮೀರಿ ಶ್ರೇಷ್ಠವಾಗಿರುವುದರಿಂದ ಈ ವಿಷಯದಲ್ಲಿ ಎಲ್ಲ ಹದಿನೇಳು ರೂಪಗಳೂ ತುಲ್ಯವೇ ಆಗಿವೆ ಎಂದರ್ಥ. ಅದರಿಂದ 'ಆತ್ಮತುಲ್ಯೈಃ' ಎಂಬಲ್ಲಿ ಆತ್ಮಭೂತರಾಗಿದ್ದು ತುಲ್ಯರಾಗಿರುವವರು ಎಂದು ಸಮಾಸ ಮಾಡಬೇಕು. ಪರಸ್ಪರವಾಗಿ ಪೂರ್ಣಸಾದೃಶ್ಯವೇ ಇರುವುದರಿಂದ ಪರಸ್ಪರ ಅಭಿನ್ನರೆಂದರ್ಥ.

ಹರಿಯ ವಾಸುದೇವಾದಿ ನಾಲ್ಕು ರೂಪಗಳು ಮತ್ತು ಕೇಶವಾದಿ ಹನ್ನೆರಡುರೂಪಗಳು ಎಂದು ಹದಿನಾರು ರೂಪಗಳೂ ಕೂಡ ಅಪ್ರಾಕೃತಶರೀರಿಗಳಾಗಿದ್ದು ಪ್ರಕೃತಿಪುರುಷರಿಗೆ ಅಧೀನವಾಗದಿ ರುವುದರಿಂದ ಈ ವಿಷಯದಲ್ಲಿ ಹರಿಗೆ ಪೂರ್ಣಸಾದೃಶ್ಯ ಹೊಂದಿದ್ದು ಅಭಿನ್ನವೇ ಆಗಿವೆ. ಒಂದಿಷ್ಟೂ ಭೇದವಿಲ್ಲ ಎಂದು ತಂತ್ರಸಾರದಲ್ಲಿ ಹೇಳಿದೆ.

ಶ್ರೀವತ್ಸ ಕೌಸ್ತುಭಗಳಿಗಿಂತ ಹರಿ ತಾನು ಶ್ರೇಷ್ಠನೆಂದು ತೋರುವುದಕ್ಕಾಗಿಯೇ ಪ್ರಕೃತಿಪುರುಷರಿಂದ ಅಭಿಮನ್ಯಮಾನವಾದ ಅವುಗಳನ್ನು ತನ್ನೆದೆಯಲ್ಲಿ ಸದಾ ಧರಿಸುತ್ತಾನೆ. ಪ್ರಕೃತಿಪುರುಷರ ಅಧೀನನಾಗದಿರುವುದೇ ಹರಿಯಲ್ಲಿ ಅವರಿಗಿಂತ ಶ್ರೇಷ್ಠತ್ವ, ಶ್ರೀವತ್ಸಕೌಸ್ತುಭಗಳ ವಿನಾಭಾವವೂ ಅದೇ ಆಗಿದೆ, ಎಂದೂ ಹೇಳಿದೆ.

ಶ್ರೀಹರಿ ತಾನೇ ಹದಿನೆಂಟು ರೂಪ ಧರಿಸಿ, ಮಧ್ಯದಲ್ಲಿ ಇರುವ ಒಂದು ರೂಪಕ್ಕೆ ಆವರಣವಾಗಿ, ಅಂದರೆ ಪರಿವಾರವಾಗಿ ಹದಿನಾರು ರೂಪಗಳಿಂದ ಕೂಡಿಕೊಂಡು ಲೀಲೆ ಮಾಡುತ್ತಾನೆ ಎಂದೂ ಹೇಳಿದೆ.

ಶ್ರೀವತ್ಸ ಎದೆಯಲ್ಲಿರುವುದರಿಂದ ಮತ್ತು ಕೌಸ್ತುಭ ಕಂಠದಲ್ಲಿ ಇರುವುದರಿಂದ ಹರಿಗೆ ಶೋಭೆ, ಹೆಚ್ಚಿನ ಮಹತ್ವ ಬಂದಿದೆ. ರತ್ನಕ್ಕೆ ಪ್ರಕಾಶದಿಂದ ಮಹತ್ವ. ಹಾಗೇ ಹರಿಗೆ ಲಕ್ಷ್ಮೀಬ್ರಹ್ಮರಿಂದ ಮಹತ್ವ. ಅಂದರೆ ತನ್ನ ಮಹತ್ವದ ವಿಷಯದಲ್ಲಿ ಹರಿ ಲಕ್ಷ್ಮೀಬ್ರಹ್ಮರಿಗೆ ಅಧೀನ. ಎಂದು ಪರಾಶರಭಟ್ಟರ ಶ್ರೀಗುಣರತ್ನಕೋಶದಲ್ಲಿ ಉಕ್ತವಾಗಿದೆ–

ಸ್ವತಃ ಶ್ರೀಸ್ತ್ವಂ ವಿಷ್ಣೋಃ ಸ್ವಮಸಿ ತತ ಏವೈಷ ಭಗವಾನ್
ತ್ವದಾಯತ್ತರ್ದ್ಧಿತ್ವೇಽಪ್ಯಭವದಪರಾಧೀನವಿಭವಃ ।
ಸ್ವಯಂ ದೀಪ್ತ್ಯಾ ರತ್ನಂ ಭವದಪಿ ಮಹಾರ್ಘಂ ನ ವಿಗುಣಂ
ನ ಕುಂಠಸ್ವಾತಂತ್ರ್ಯಂ ಭವತಿ ಚ ನ ಚಾನ್ಯಾಹಿತಗುಣಮ್ ॥

ವಸ್ತುತಃ ಶ್ರೀವತ್ಸಕೌಸ್ತುಭಗಳನ್ನು ಧರಿಸಿದ್ದರಿಂದ ಹರಿಗೆ ಮಹತ್ವವಲ್ಲ, ಹರಿ ಧರಿಸಿದ್ದರಿಂದ ಶ್ರೀವತ್ಸ ಕೌಸ್ತುಭಗಳಿಗೇ ಮಹತ್ವ ಬಂದಿದೆ. ಅದರಿಂದ ಹರಿ ತನ್ನ ಮಹಿಮೆಯ ವಿಷಯದಲ್ಲಿ ಲಕ್ಷ್ಮೀಬ್ರಹ್ಮರಿಗೆ ಅಧೀನನಾಗಿಲ್ಲ. ಮತ್ತು ಶ್ರೀವತ್ಸ ಕೌಸ್ತುಭಗಳೊಳಗೆ ಅವೇ ಆಕಾರದಿಂದ ಅವೇ ನಾಮಗಳಿಂದ ತಾನೇ ಇದ್ದು ಅವುಗಳ ಮೂಲಕ ತನಗೆ ತಾನೇ ಶೋಭೆ ತಂದುಕೊಳ್ಳುವುದರಿಂದಲೂ ಹರಿ ಅವುಗಳಿಗೆ ಅಧೀನನಲ್ಲ. ಅವುಗಳಿಗೆ ಆಶ್ರಯನಾಗಿ ಅವುಗಳಿಗಿಂತ ಶ್ರೇಷ್ಠನೆನಿಸಿದ್ದಾನೆ. ಇದೇ ಶ್ರೀವತ್ಸಕೌಸ್ತುಭಗಳ ವಿನಾಭಾವ.

* * *

ವೃತ್ರಾಸುರನಿಂದ ಪೀಡಿತರಾದ ದೇವತೆಗಳು ಹರಿಯನ್ನು ಪ್ರಾರ್ಥಿಸಿದಾಗ ಹರಿ ಒಲಿದು ಮೈ ದೋರಿ ನಿಂತ. ಅವನನ್ನು ದೇವತೆಗಳು ಪುನಃ ಸ್ತುತಿಸುತ್ತಾರೆ–

ದೇವಾ ಊಚುಃ

ನಮಸ್ತೇ ಯಜ್ಞವೀರ್ಯಾಯ ವಯಸೇ ಉತ ತೇ ನಮಃ ।
ನಮಸ್ತೇ ಅಸ್ತು ಚಕ್ರಾಯ ನಮೋಽಸ್ತು ಪುರುಹೂತಯೇ ॥ ೩೦ ॥

ದೇವತೆಗಳು ನುಡಿದರು– ಯಜ್ಞ ಮಾಡಲು ನಮಗೆ ಸಾಮರ್ಥ್ಯ ನೀಡುವ ಭಗವಂತನಿಗೆ ನಮಸ್ಕಾರ. ಜಗತ್ತನ್ನು ತನ್ನ ವಶದಲ್ಲಿ ಬಂಧಿಸಿಟ್ಟವನಿಗೆ ನಮಸ್ಕಾರ. ಚಕ್ರಧಾರಿಗೆ ನಮಸ್ಕಾರ. ಅನಂತನಾಮನಿಗೆ ನಮಸ್ಕಾರ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ವಯಸೇ' ಎಂದರೆ ಕಾಲಾತ್ಮಕನಾದ ಪರಮಾತ್ಮನಿಗೆ ನಮಸ್ಕಾರ ಎನ್ನುತ್ತಾರೆ. ಯಜ್ಞಕ್ಕೆ ಫಲಸಾಮರ್ಥ್ಯ ನೀಡುವವನೂ ಅವನೆ, ಫಲ ಉಂಟಾಗಲು ಯೋಗ್ಯಕಾಲ ಬರಬೇಕು. ಆ ಕಾಲವೂ ಅವನೆ ಫಲನಾಶಕ್ಕೂ ಕಾರಣವಾದ ಕಾಲ ಅವನೆ ಎನ್ನುತ್ತಾರೆ. ಆದರೆ ಪರಮಾತ್ಮ ಜಡಕಾಲ ಸ್ವರೂಪನೆನ್ನುವುದು ಅಸಂಗತವಾಗುತ್ತದೆ. ಕಾಲನಿಯಾಮಕ ಎಂದು ಅಭಿಪ್ರಾಯ ವಿಟ್ಟುಕೊಂಡರೂ ಕಾಲಾಭಿಮಾನಿಗಳಾದ ಲಕ್ಷ್ಮೀ ಬ್ರಹ್ಮಾದಿ ದೇವತೆಗಳೆಲ್ಲರೂ ಕಾಲನಿಯಾಮಕರಾಗಿರುವಾಗ ಪರಮಾತ್ಮನಲ್ಲಿ ಏನು ವಿಶೇಷ ಎಂಬ ಪ್ರಶ್ನೆ ಬರುತ್ತದೆ. ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳಲ್ಲಿ ಯಜ್ಞಾನುಷ್ಠಾನಕ್ಕೆ ಯೋಗ್ಯವಾದ ಆಯುಷ್ಯವನ್ನು ನೀಡುವವನು ಪರಮಾತ್ಮ ಎನ್ನುತ್ತಾರೆ ಆದರೆ ವಯಸ್ಸೆಂದರೆ ಆಯುಷ್ಯ. ಅದನ್ನು ನೀಡುವ ಪರಮಾತ್ಮನೂ ವಯಸ್ಸೆನಿಸುತ್ತಾನೆ ಎಂದು 'ಆಯುರ್ಘೃತಂ' ಎನ್ನುವಂತೆ ಅಮುಖ್ಯ ಪ್ರಯೋಗವೆನ್ನಬೇಕಾಗುತ್ತದೆ. ಶ್ರೀಮದಾಚಾರ್ಯರು ತಂತ್ರಸಾರ ವಚನದ ಆಧಾರ ನೀಡುತ್ತ ಪರಮಾತ್ಮನಿಗೊಬ್ಬನಿಗೇ ಸಲ್ಲುವಂಥ 'ವಯಸ್' ಎಂಬ ನಾಮವಿದೆ ಎನ್ನುತ್ತಾರೆ–

ವಯಃ ಸರ್ವಸ್ಯ ವಯನಾದ್ ಭಗವಾನ್ ಪುರುಷೋತ್ತಮಃ ।
ಇತಿ ಚ ।

'ಮಾ ತಂತುಶ್ಛೇದಿ ವಯತೋ ಧಿಯಂ ಮೇ' ಇತಿ ಶ್ರುತಿಃ ।

ಸರ್ವಜಗತ್ತನ್ನೂ ತನ್ನ ಆಜ್ಞೆಯಲ್ಲಿ ಬಂಧಿಸುವವನಾದ್ದರಿಂದ ಭಗವಾನ್ ಪುರುಷೋತ್ತಮನೊಬ್ಬನೆ 'ವಯಸ್' ಎನಿಸುತ್ತಾನೆ ಎಂದೂ ತಂತ್ರಸಾರದಲ್ಲಿ ಹೇಳಿದೆ. ವಯ ಧಾತುವಿಗೆ ಬಂಧನಾರ್ಥದಲ್ಲಿ ಪ್ರಯೋಗ ಋಗ್ವೇದ ಮಂತ್ರ(೨.೨೮.೫) ದಲ್ಲಿಯೂ ಕಂಡಿದೆ. 'ನನ್ನ ಮನಸ್ಸನ್ನು ನಿನ್ನಲ್ಲಿಯೇ ಕಟ್ಟಿಹಾಕುತ್ತಿರುವ ನನಗೆ ಜ್ಞಾನಸಂತತಿ ಪುತ್ರಸಂತತಿಗಳು ವಿಚ್ಛೇದ ಹೊಂದದಿರಲಿ' ಎಂದು ಆ ಶ್ರುತಿ ಹೇಳುತ್ತಿದೆ.

* * *

ವೃತ್ರಾಸುರನಿಂದ ಪೀಡಿತರಾದ ದೇವತೆಗಳು ಪರಮಾತ್ಮನನ್ನು ಸ್ತುತಿಸುತ್ತ ವಿಷ್ಣುಲೋಕ ಅಜ್ಞಮಾನವರಿಗೆ ಅಲಭ್ಯ ಎನ್ನುತ್ತಾರೆ.

ಯತ್ ತೇ ಗತೀನಾಂ ತಿಸೃಣಾಮೀಶಿತುಃ ಪರಮಂ ಪದಮ್ ।
ನಾರ್ವಾಚೀನೋ ವಿಸರ್ಗಸ್ಯ ಧಾತುರ್ವೇದಿತುಮರ್ಹತಿ ॥ ೩೧ ॥

ದೇವಲೋಕ ಪಿತೃಲೋಕ ನರಕಲೋಕಗಳೆಂಬ ಮೂರು ಲೋಕಗಳನ್ನು ಮೀರಿಸಿ ಉತ್ಕೃಷ್ಟವಾಗಿರುವ ನಿನ್ನ ವೈಕುಂಠಾದಿ ಸ್ಥಾನವನ್ನು ಬ್ರಹ್ಮಸೃಷ್ಟಿಯಲ್ಲಿ ದೇವಾದಿ ಉತ್ತಮಜೀವರಿಗಿಂತ ಕೆಳಗಿನವನಾದ ಅಜ್ಞಮಾನವ ಹೊಂದಲಾರ.

ಇಲ್ಲಿ ಶ್ರೀಧರ ವ್ಯಾಖ್ಯಾನ ಹೇಳುತ್ತದೆ 'ಪರಮಾತ್ಮ ದೇವತೆಗಳನ್ನು ಕೇಳುತ್ತಾನೆ, 'ನೀವು ಯಜ್ಞವೀರ್ಯ ಎಂದು ಮುಂತಾಗಿ ನನ್ನ ಸಗುಣರೂಪವನ್ನು ಏಕೆ ಸ್ತುತಿಸುವಿರಿ? ನಿರ್ಗುಣರೂಪವನ್ನು ಏಕೆ ಬಿಡುವಿರಿ?' ದೇವತೆಗಳು ಹೇಳುತ್ತಾರೆ, ನಮಗೆ ಸಗುಣರೂಪ ಮಾತ್ರ ಗೊತ್ತು, ನಿರ್ಗುಣರೂಪ ನಮಗೆ ಯಾರಿಗೂ ತಿಳಿಯದು' ಎಂದು. ಈ ವ್ಯಾಖ್ಯಾನದ ಪ್ರಕಾರ ಅದ್ವೈತ ದೇವತೆಗಳಿಗೂ ತಿಳಿದಿಲ್ಲವೆಂದರೆ ಇನ್ನಾರಿಗೆ ತಿಳಿದಿದೆ? ಯಾರಿಗೂ ತಿಳಿಯಲಾಗದೆನ್ನುವುದಾದರೆ ಅದನ್ನು ಏಕೆ ಬಿಡುವಿರಿ ಎಂದು ಪರಮಾತ್ಮನಾದರೂ ಏಕೆ ಕೇಳುತ್ತಾನೆ? ವೃತ್ರನ ಪೀಡೆಯನ್ನು ಕಳೆಯಲು ಅದ್ವೈತೋಪಾಸನೆಯಾದರೂ ಏಕೆ ಬೇಕು?

ವಿಶ್ವನಾಥವ್ಯಾಖ್ಯಾನದಲ್ಲಿ ಪರಮಾತ್ಮ ಕೇಳುತ್ತಾನೆ 'ನಶ್ವರವಾದ ಸ್ವರ್ಗಕ್ಕಾಗಿ ನನ್ನನ್ನೇಕೆ ಬೇಡುವಿರಿ? ನಿತ್ಯಸುಖಉಳ್ಳ ವೈಕುಂಠಕ್ಕಾಗಿ ನನ್ನನ್ನು ಸ್ತುತಿಸಬಾರದೆ?' ದೇವತೆಗಳು ಹೇಳುತ್ತಾರೆ. 'ನಿನ್ನ ವೈಕುಂಠಧಾಮವನ್ನು ಪಡೆಯಲು ಅನುಭವಿಸಲು ನಾವು ಅರ್ಹರಲ್ಲ. ಪಶುಗಳು ಹುಲ್ಲು ಹೊಟ್ಟುಗಳನ್ನೇ ತಿನ್ನುತ್ತವೆ, ಹಾಲು ಮೊಸರು ಮುಂತಾದುವನ್ನು ಬಯಸುವುದೂ ಇಲ್ಲ ಅನುಭವಿಸುವುದೂ ಇಲ್ಲ' ಎಂದು. ಆದರೆ ದೇವತೆಗಳು ವೈಕುಂಠಧಾಮವನ್ನು ಹೊಂದಲು ಮುಖ್ಯಪಾತ್ರರು. ಸ್ವರ್ಗವನ್ನು ಅವರು ಬಯಸುವುದು ಭಗವಂತನ ಪ್ರತಿನಿಧಿಗಳಾಗಿ ಅದನ್ನು ಆಳುವುದಕ್ಕೇ ಹೊರತು ತಮ್ಮ ಸುಖಭೋಗಕ್ಕಾಗಿ ಅಲ್ಲ. ಆದರಿಂದ ಈ ಪ್ರಶ್ನೆ ಉತ್ತರಗಳೆರಡೂ ಅಸಂಗತವಾಗಿವೆ.

ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳಲ್ಲಿ 'ನರಕ ಸ್ವರ್ಗ ಮೋಕ್ಷಗಳನ್ನು ಕೊಡುವ ನಿನ್ನ ಪ್ರಕೃತಿಪುರುಷ ವಿಲಕ್ಷಣ ಸ್ವರೂಪವನ್ನು ತಿಳಿಯಲು ನಾವು ಅರ್ಹರಲ್ಲ' ಎಂದಿದ್ದಾರೆ. ಇಲ್ಲಿ ಪ್ರಕೃತಿಪುರುಷವಿಲಕ್ಷಣವಾದ ಭಗವತ್ಸ್ವರೂಪವನ್ನು ದೇವತೆಗಳೆ ತಿಳಿಯಲು ಅರ್ಹರಲ್ಲವೆಂದರೆ ಇನ್ನಾರು ಅರ್ಹರು? ಮತ್ತು 'ನರಕಸ್ವರ್ಗಮೋಕ್ಷಗಳನ್ನು ಕೊಡುವ' ಎಂದು ವಿಶೇಷಣಕ್ಕೆ ಏನು ಸಾರ್ಥಕ್ಯವಿದೆ?

ವಸ್ತುತಃ ದೇವತೆಗಳು ತಾವು ಅದ್ವೈತವನ್ನು ತಿಳಿದಿಲ್ಲ, ವೈಕುಂಠವನ್ನು ಪಡೆಯಲು ಅರ್ಹರಲ್ಲ, ಪ್ರಕೃತಿಪುರುಷವಿಲಕ್ಷಣವಾದ ಭಗವತ್ಸ್ವರೂಪವನ್ನು ತಿಳಿಯಲು ಶಕ್ತರಲ್ಲ

ಎನ್ನುತ್ತಿಲ್ಲ. 'ವಿಸರ್ಗಸ್ಯ ಅರ್ವಾಚೀನಃ' ವಿಶಿಷ್ಟಸರ್ಗ ಎಂದರೆ ಉತ್ತಮವಾದ ದೇವಾದಿಸೃಷ್ಟಿ. ಅದಕ್ಕಿಂತ ಕೆಳಗಿನದು ಅಜ್ಞಮಾನವ ಸೃಷ್ಟಿ. ಅಂಥ ಅಜ್ಞಮಾನವನಿಗೆ ವೈಕುಂಠಲೋಕ ಲಭ್ಯವಲ್ಲ ಎಂದು ಶ್ಲೋಕದಲ್ಲಿ ಹೇಳಲಾಗಿದೆ.

ಶ್ಲೋಕದಲ್ಲಿ ಹೇಳಿದ ಮೂರು ಗತಿಗಳೆಂದರೆ, ಮಹರಾದಿ ಊರ್ಧ್ವಲೋಕಗಳು ದೇವಲೋಕಗಳು. ಸ್ವರ್ಗ ಪಿತೃಲೋಕ, ಪಿತೃಗಳ ಅನುಗ್ರಹದಿಂದ ಸಿಗುವ ಲೋಕ. ರೌರವಾದಿಗಳು ನರಕಲೋಕ. ಈ ಎಲ್ಲ ಲೋಕಗಳಿಗಿಂತ ಶ್ರೇಷ್ಠವಾದ ಧಾಮತ್ರಯ ಅಜ್ಞಮಾನವನಿಗೆ ಸಿಗಲಾರದು. 'ತಿಸೃಣಾಂ ಗತೀನಾಂ' ಎಂಬುದನ್ನು ಬೇರೆ ವ್ಯಾಖ್ಯಾನಕಾರರು 'ಈಶಿತುಃ'ಕೊಡುವವನಾದ ಭಗವಂತ ಎಂದು ಅನ್ವಯಿಸಿದ್ದಾರೆ. ವಸ್ತುತಃ 'ಸಕಾಶಾತ್' ಎಂದು ಅಧ್ಯಾಹಾರ ಮಾಡಿ 'ಪರಮಂ ಪದಂ' ಶ್ರೇಷ್ಠವಾದ ಲೋಕ ಎಂಬಲ್ಲಿಗೆ ಅನ್ವಯಿಸಬೇಕು.

ದೇವಲೋಕಾತ್ ಪಿತೃಲೋಕಾನ್ನಿರಯಾಚ್ಚಾಪಿ ಯತ್ಪರಮ್ ।
ತಿಸೃಭ್ಯಃ ಪರಮಂ ಸ್ಥಾನಂ ವೈಷ್ಣವಂ ವಿದುಷಾಂ ಗತಿಃ ॥
ಇತಿ ಮಾಹಾತ್ಮ್ಯೇ ॥

ದೇವಲೋಕಕ್ಕಿಂತ ಪಿತೃಲೋಕಕ್ಕಿಂತ ನರಕಲೋಕಕ್ಕಿಂತ ಎಂದು ಮೂರೂ ಗತಿಗಳಿಗಿಂತ ಶ್ರೇಷ್ಠವಾದ ವಿಷ್ಣುಲೋಕವು ಜ್ಞಾನಿಗಳಿಗೆ ಮಾತ್ರ ಲಭ್ಯವಾಗುವ ಗತಿ ಎಂದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿ ಹೇಳಿದೆ.

* * *

ಪರಮಾತ್ಮ ಸ್ವತಂತ್ರನಾದರೂ ಅಚಿಂತ್ಯಶಕ್ತಿಯಿಂದ ತ್ರಿಗುಣಗಳಿಗೆ ಅಧೀನನಾಗಿ ಸೃಷ್ಟ್ಯಾದಿ ಸತ್ಕರ್ಮಗಳಿಂದ ಸುಖವನ್ನೂ ಸಂಹಾರಾದಿ ದುಷ್ಕರ್ಮಗಳಿಂದ ದುಃಖವನ್ನೂ ಪಡೆಯುತ್ತಾನೆ ಎಂದು ಕೆಲವರು ಭ್ರಮಿಸುತ್ತಾರೆ. ಹಗ್ಗವನ್ನು ನೋಡಿ ಹಾವೆಂದು ಜನರು ಭ್ರಮಿಸುವುದುಂಟು. ಹಾಗೇ ಇದು. ವಸ್ತುತಃ ಪರಮಾತ್ಮ ಪರತಂತ್ರನೂ ಆಗುತ್ತಾನೆ. ಸ್ವತಂತ್ರನೂ ಆಗಿರುತ್ತಾನೆ ಎನ್ನುವಲ್ಲಿ ಪ್ರಮಾಣವಿಲ್ಲ. ಇರುತ್ತಿದ್ದರೆ ವಿರುದ್ಧ ಅಣುತ್ವಮಹತ್ವಗಳಂತೆ ಸ್ವಾತಂತ್ರ್ಯಪಾರತಂತ್ರ್ಯಗಳನ್ನೂ ಅಚಿಂತ್ಯಶಕ್ತಿಯಿಂದ ಕೂಡಿಸಬಹುದಾಗಿತ್ತು ಎಂದು ದೇವತೆಗಳು ಪರಮಾತ್ಮನನ್ನು ಸ್ತುತಿಸುತ್ತಾರೆ.

ಅಥ ತತ್ರ ಭಗವಾನ್ ಕಿಂ ದೇವದತ್ತವದಿಹ ಗುಣವಿಸರ್ಗಪತಿತಃ ಪಾರತಂತ್ರ್ಯೇಣ ಸ್ವಕೃತಕುಶಲಾಕುಶಲಫಲಮುಪಾದದಾತಿ ಆಹೋ ಸ್ವಿದಾತ್ಮಾರಾಮ ಉಪಶಮಶೀಲಃ ಸಮಂಜಸದರ್ಶನ ಉದಾಸ್ತ ಇತಿ ಹ ವಾವ ನ ವಿದಾಮಃ । ನಹಿ ವಿರೋಧ ಉಭಯಂ ।

ಭಗವತ್ಯಪರಿಗಣಿತಗುಣಗಣ ಈಶ್ವರೇ ಅನವಗಾಹ್ಯಮಾಹಾತ್ಮ್ಯೇ ಅರ್ವಾಚೀನವಿಕಲ್ಪವಿತರ್ಕವಿಚಾರಪ್ರಮಾಣಾಭಾಸಕುತರ್ಕ-ಶಾಸ್ತ್ರಕಲಿಲಾಂತಃಕರಣ ದುರವಗ್ರಹವಾದಿನಾಂ ಚ ವಿವಾದಾನವಸರೇ ಉಪರತಸಮಸ್ತಮಾಯಾಮಯೇ ಕೇವಲಸ್ವಾತ್ಮಮಾಯಾಮ-ಂತರ್ಧಾಯ ಕೋ ನು ದುರ್ಘಟ ಇವ ಭವತಿ ॥

ಸ್ವರೂಪದ್ವಯಾಭಾವಾತ್ । ಸಮವಿಷಮಮತೀನಾಂ ಮತಮನುಸರಸಿ ಯಥಾ ರಜ್ಜುಖಂಡಃ ಸರ್ಪಾದಿಧಿಯಾಮ್ ॥

ಸ ಏವ ಹಿ ಪುನಃ ಸರ್ವವಸ್ತುಷು ವಸ್ತುಸ್ವರೂಪಃ ಸರ್ವೇಶ್ವರಃ ಸಕಲ ಜಗತ್ಕಾರಣಕಾರಣಭೂತಃ ಸರ್ವಪ್ರತ್ಯಗಾತ್ಮತ್ವಾತ್ ಸರ್ವಗುಣಾ ಭಾಸೋಪಲಕ್ಷಿತ ಏಕ ಏವ ಪರ್ಯವಶೇಷಿತಃ ॥

ಅಥ ಹ ವಾವ ತವ ಮಹಿಮಾಮಹಾಮೃತರಸಸಮುದ್ರ ವಿಪ್ರುಷಾಽ-ಸಕೃಲ್ಲೀಢಯಾ ಸ್ವಮನಸಿ ನಿಷ್ಯಂದಮಾನಾನವರತಸುಖೇನ ವಿಸ್ಮಾರಿತದೃಷ್ಟಶ್ರುತವಿಷಯಸುಖಲೇಶಾಭಾಸಾಃ ಪರಮಭಾಗವತಾ ಏಕಾಂತಿನೋ ಭಗವತಿ ಸರ್ವಭೂತ ಪ್ರಿಯಸುಹೃದಿ ಸರ್ವಾತ್ಮನಿ ನಿರಂತರನಿರ್ವೃತಮನಸಃ ಕಥಮು ಹ ವಾ ಏತೇ ಮಧುಮಥನ ಪುನಃ ಸ್ವಾರ್ಥಕುಶಲಾ ಹ್ಯಾತ್ಮಪ್ರಿಯಸುಹೃದಃ ಸಾಧವಸ್ತ್ವಚ್ಚರ-ಣಾಂಬುಜಾನುಸೇವಾಂ ವಿಸೃಜಂತಿ ನ ಯತ್ರ ಪುನರಯಂ ಸಂಸಾರ-ಪರಿವರ್ತಃ ॥

ತ್ರಿಭುವನಾತ್ಮಭವನ ತ್ರಿವಿಕ್ರಮ ತ್ರಿನಯನ ತ್ರಿಲೋಕಮನೋ-ಹರಾನುಭಾವ ತವೈವ ವಿಭೂತಯೋಽಭೂವನ್ ದಿತಿಜ-ದನುಜಾದಯಶ್ಚಾಪಿ । ತೇಷಾಮನುಪಕ್ರಮಸಮಯೋಽಯಮಿತಿ ಸ್ವಾತ್ಮಮಾಯಯಾ ಸುರನರಮೃಗಮಿಶ್ರಿತಜಲಚರಾಕೃತಿಭಿಃ ಯಥಾಽ-ಪರಾಧಂ ದಂಡಂ ದಧರ್ಥಾವತೀರ್ಯ ॥ ೩೩ ॥

ಈ ಲೋಕದಲ್ಲಿ ದೇವದತ್ತನಂಥ ಪ್ರಾಕೃತಜನರು ಪರತಂತ್ರರಾಗಿದ್ದು ಮನೆ ಮುಂತಾದುವನ್ನು ಸೃಷ್ಟಿ ಮಾಡಿ ತಮ್ಮ ಶುಭಾಶುಭಕರ್ಮಗಳಿಗೆ ಸರಿಯಾಗಿ ಸುಖದುಃಖಫಲವನ್ನು ಅನುಭವಿಸುತ್ತಾರೆ. ಹಾಗೇ ಭಗವಂತನೂ ಪರತಂತ್ರನಾಗಿದ್ದು

ತ್ರಿಗುಣಗಳಿಂದ ಸೃಷ್ಟ್ಯಾದಿ ನಾನಾಕಾರ್ಯಗಳಲ್ಲಿ ತೊಡಗಿ ಸೃಷ್ಟ್ಯಾದಿ ಶುಭಕರ್ಮಗಳಿಗೆ ಶುಭಫಲವನ್ನೂ ಸಂಹಾರಾದಿ ಅಶುಭಕರ್ಮಗಳಿಗೆ ಅಶುಭಫಲವನ್ನೂ ಅನುಭವಿಸುವನೆ? ಅಥವಾ ಸ್ವತಂತ್ರನೂ ಪೂರ್ಣಾನಂದಾನುಭವಸ್ವರೂಪನೂ ಶುದ್ಧ ಜ್ಞಾನಸ್ವರೂಪನೂ ಆಗಿದ್ದು ಶುಭಾಶುಭಕರ್ಮಫಲಗಳ ಭೋಗದಿಂದ ದೂರವಿರುವನೆ? ಎಂಬುದನ್ನು ನಾವು ನಿಶ್ಚಯಿಸಲಾರೆವು. ಸಂಶಯದಲ್ಲಿಯೇ ಬೀಳುವೆವು. ಏಕೆಂದರೆ ಸ್ವಾತಂತ್ರ್ಯಪಾರತಂತ್ರ್ಯಗಳಿಗೆ ಪರಸ್ಪರ ವಿರೋಧವಿರುವಾಗ ಎರಡನ್ನೂ ಜೊತೆಗೆ ಒಪ್ಪಲಾಗದು ತಾನೆ?

ಯಾವುದಾದರೊಂದನ್ನು ಅಂದರೆ ಪಾರತಂತ್ರ್ಯವನ್ನು ನಿರ್ಧರಿಸುವುದೂ ಕಷ್ಟವೆ. ಏಕೆಂದರೆ ಭಗವಂತ, ಸ್ವಾತಂತ್ರ್ಯಾದಿ ಅನಂತಗುಣಗಣ ಉಳ್ಳವನು ಅವನ ಮಾಹಾತ್ಮ್ಯ ಎಷ್ಟೆಂದು ಊಹಿಸಲೂ ಆಗದು. ಹೀಗೂ ಇರಬಹುದು ಹಾಗೂ ಇರಬಹುದೆನ್ನುವ ವಿಕಲ್ಪ, ಏನಿರಬಹುದು ಎನ್ನುವ ವಿತರ್ಕ, ಹೀಗೇ ಇರಬೇಕು ಎನ್ನುವ ವಿಚಾರ, ಇವುಗಳಿಗೆ ಬಳಸುವ ದುರ್ಬಲಪ್ರಮಾಣಗಳು, ಅವುಗಳನ್ನು ಆಶ್ರಯಿಸಿ ಹೊರಡುವ ಕುತರ್ಕಗಳು- ಇವು ಯಾವುವೂ ವಸ್ತುವಿನ ನಿಜವಾದ ಸ್ವರೂಪವನ್ನು ಗ್ರಹಿಸುವುದೇ ಇಲ್ಲ. ಆದರೂ ದುರಾಗಮಗಳಲ್ಲಿ ಅವೇ ತುಂಬಿರುತ್ತವೆ. ಆ ದುರಾಗಮಗಳಿಂದ ಅಂತಃಕರಣ ಮಲಿನವಾಗುವುದರಿಂದ ಅಂತಃಕರಣ ದುರಾಗ್ರಹಪೂರಿತವಾಗುತ್ತದೆ. ಅದರಿಂದ ತಮಗೆ ಅಭೀಷ್ಟವಾದ ವಿಷಯವನ್ನೇ ದುರಾಗ್ರಹದಿಂದ ವಾದಿಗಳು ಪ್ರತಿಪಾದಿಸುತ್ತಾರೆ. ಪರಮಾತ್ಮ, ನೀನು ಅವರ ವಿವಾದಗಳಿಗೆ ಗೋಚರಿಸುವುದಿಲ್ಲ. ಅದ್ವಿತೀಯ ಸ್ವರೂಪಸಾಮರ್ಥ್ಯದ ಬಲದಿಂದ ಪ್ರಕೃತಿಗುಣಪ್ರಭಾವವನ್ನು ನಿತ್ಯ ದೂರೀಕರಿಸಿಕೊಂಡವನು ನೀನು. ಹೀಗಾಗಿ ಪಾರತಂತ್ರ್ಯ ನಿನ್ನಲ್ಲಿ ಕೂಡಲಾರದು. ಹಾಗಾದರೆ ಸ್ವಾತಂತ್ರ್ಯವನ್ನೇ ಒಪ್ಪಿರಿ ಎಂದರೆ ನೀನು ಈಶ್ವರ, ಅಘಟಿತವಾದ ಅಣುತ್ವಮಹತ್ವಾದಿ ವಿರುದ್ಧಗುಣಗಳನ್ನು ತನ್ನಲ್ಲಿ ಅನಾಯಾಸವಾಗಿ ಕೂಡುವಂತೆ ಮಾಡಿಕೊಳ್ಳುವ ಅಚಿಂತ್ಯಶಕ್ತಿ ಉಳ್ಳವನು. ವಿರುದ್ಧವಾದ ಅಣುತ್ವ ಮಹತ್ವಗಳೆಂಬ ಎರಡು ಗುಣಗಳನ್ನು ಹೇಗೋ ಹಾಗೆ ಸ್ವಾತಂತ್ರ್ಯ ಪಾರತಂತ್ರ್ಯಗಳೆಂಬ ವಿರುದ್ಧವಾದ ಎರಡು ಗುಣದೋಷಗಳನ್ನೂ ಅದೇ ಅಚಿಂತ್ಯಶಕ್ತಿಯಿಂದ ಜೊತೆಯಾಗಿ ತನ್ನಲ್ಲಿ ಕೂಡುವಂತೆ ಮಾಡಿಕೊಳ್ಳಬಲ್ಲೆ ಎನ್ನುತ್ತಾರೆ ವಾದಿಗಳು. ಹೀಗಾಗಿ ನಿನ್ನಲ್ಲಿ ಕೇವಲ ಸ್ವಾತಂತ್ರ್ಯಮಾತ್ರ ವಿದೆಯೆ? ಅಥವಾ ಸ್ವಾತಂತ್ರ್ಯಪಾರತಂತ್ರ್ಯ ಎರಡೂ ಜೊತೆ ಸೇರಿ ಇವೆಯೆ? ಎಂಬುದನ್ನೂ ನಿರ್ಧರಿಸುವುದು ಕಷ್ಟ ಎನ್ನುತ್ತಾರೆ ಕೆಲವರು.

ಇವೆಲ್ಲವೂ ಅಜ್ಞಾನಿಗಳಾಡುವ ಮಾತುಗಳು. ವಸ್ತುತಃ ಸ್ವಾತಂತ್ರ್ಯಪಾರತಂತ್ರ್ಯತಿ ಎಂದು ಭಗವಂತನಲ್ಲಿ ಎರಡು ಬಗೆಯ ವಿರುದ್ಧವಾದ ಸ್ವರೂಪಗಳಿವೆ ಎನ್ನುವಲ್ಲಿ ಪ್ರಮಾಣವಿಲ್ಲ. ಎರಡು ಸ್ವರೂಪಗಳೂ ಇವೆ ಎಂದು ತಿಳಿಯುವವರೂ ಇದ್ದಾರೆ.

ಆದರೆ ಆ ತಿಳುವಳಿಕೆ ಭ್ರಮೆ. ನೀನು ಜ್ಞಾನಿಗಳ ಯಥಾರ್ಥಜ್ಞಾನಕ್ಕೂ ಗೋಚರನಾಗುವಿ. ಅಜ್ಞಾನಿಗಳ ಈ ಭ್ರಮೆಗೂ ಆಸ್ಪದನಾಗುವಿ. ಇದು ನಿನ್ನ ಅಚಿಂತ್ಯಶಕ್ತಿ. ಹಗ್ಗದ ಚೂರು ಅಜ್ಞಾನಿಗಳಿಗೆ ಹಾವಾಗಿ ಕಂಡರೂ ಜ್ಞಾನಿಗಳಿಗೆ ಹಗ್ಗದ ಚೂರಾಗಿಯೇ ಕಂಡು ಬರುತ್ತದೆ. ಅದೇ ರೀತಿ ನೀನು ಜ್ಞಾನಿಗಳಿಗೆ ನಿಜಸ್ವರೂಪದಿಂದಲೆ ಕಂಡು ಬರುವಿ.

ನಿನ್ನ ಆ ನಿಜಸ್ವರೂಪವಿದು- ಎಲ್ಲ ವಸ್ತುಗಳಲ್ಲಿಯೂ ಅವುಗಳ ಸೃಷ್ಟಿ ಮಾಡಿದ ನೀನು ಅಂತರ್ಗತನಾಗಿರುವಿ. ಆದರೆ ಅವುಗಳಲ್ಲಿ ವಿಕಾರವಾದರೂ ನಿನ್ನಲ್ಲಿ ವಿಕಾರವಾಗುವುದಿಲ್ಲ. ಏಕೆಂದರೆ ನೀನು ಸರ್ವಶಕ್ತ. ಸರ್ವಶಕ್ತನಾದ್ದರಿಂದಲೇ ಸಕಲಜಗತ್ಕಾರಣರಾದ ಬ್ರಹ್ಮಾದಿಗಳಿಗೂ ನೀನು ಕಾರಣನಾಗಿರುವಿ. ಎಲ್ಲರಿಗೂ ಅಂತರ್ಯಾಮಿಯಾಗಿರುವಿ. ನಿನ್ನ ಆನಂದಾದಿಸಕಲಗುಣಗಳನ್ನು ನೀನು ಅನುಭವಿಸುವಿ. ಪ್ರಳಯದಲ್ಲಿ ನೀನು ಒಬ್ಬನೆ ಇದ್ದು ಮುಂದೆ ಸೃಷ್ಟಿಕಾಲದಲ್ಲಿ ಎಲ್ಲವನ್ನು ಸೃಜಿಸುವಿ.

ಹೇಗೆ ಮಧುಸೂದನ, ಏಕಾಂತಭಕ್ತರಾದ ಪರಮಭಾಗವತರು ನಿನ್ನ ಮಹಿಮೆಗಳೆಂಬ ಮಹಾ ಅಮೃತರಸಸಮುದ್ರದ ಕಣಗಳನ್ನು ಮತ್ತೆ ಮತ್ತೆ ಆಸ್ವಾದನಮಾಡಿ ತಮ್ಮ ಮನಸ್ಸಿನಲ್ಲಿ ಸತತವಾಗಿ ಒಸರುವ ಸುಖದಿಂದ ತಾವು ಹಿಂದೆ ಕಂಡಿದ್ದ ಅಥವಾ ಕೇಳಿದ್ದ ಅಲ್ಪವಾದ ಎಲ್ಲ ವಿಷಯಸುಖಗಳನ್ನೂ ಮರೆತುಬಿಡುತ್ತಾರೆ. ಎಲ್ಲ ಪ್ರಾಣಿಗಳಿಗೆ ಪ್ರಿಯಮಿತ್ರನಾದ ಸರ್ವಸ್ವಾಮಿಭಗವಂತನಾದ ನಿನ್ನ ಧ್ಯಾನದಲ್ಲಿಯೆ ಮನಸಿನಲ್ಲಿ ನಿರಂತರ ಸುಖಾನುಭವ ಹೊಂದುತ್ತಾರೆ. ತಮ್ಮ ಪುರುಷಾರ್ಥವಾದ ಪರಮಾತ್ಮಪ್ರಾಪ್ತಿಯನ್ನು ಸಾಧಿಸಿಕೊಳ್ಳುವಲ್ಲಿ ಇವರು ಕುಶಲರು. ಅವರಿಗೆ ನೀನೇ ಪ್ರಿಯಮಿತ್ರನೆನಿಸಿರುವಿ. ಅಂಥ ಸಾಧುಗಳಾದ ಪರಮಭಾಗವತರು ನಿನ್ನ ಪಾದಕಮಲಸೇವೆಯನ್ನು ಹೇಗೆ ತಾನೆ ಬಿಟ್ಟಾರು? ಸೇವೆಯಿಂದ ಅವರಿಗೆ ಜನನ ಮರಣವೆಂಬ ಸಂಸಾರದಲ್ಲಿ ಸುತ್ತುವುದು ಇಲ್ಲವಾಗುತ್ತದೆ.

ನೀನು ಮೂಲೋಕಗಳಿಗೆ ಆಶ್ರಯ. ಮೂರು ವೇದಗಳಲ್ಲಿ ನಿನ್ನ ಪರಾಕ್ರಮ ವರ್ಣಿತವಾಗುತ್ತಿದೆ. ಮೂರುಕಣ್ಣುಳ್ಳ ನರಸಿಂಹ ನೀನೆ. ಮೂಲೋಕಗಳಲ್ಲಿ ಅತ್ಯಂತ ಮನೋಹರವಾದ ಮಹಿಮೆ ನಿನ್ನದು. ದೈತ್ಯರು ದಾನವರು ಮುಂತಾದವರಲ್ಲಿಯೂ ವಿವಿಧಗುಣಸ್ವಭಾವಗಳ ಅಭಿವ್ಯಕ್ತಿಗಾಗಿ ನಿನ್ನ ವಿವಿಧರೂಪಗಳಿವೆ. ಆದರೂ ಅವರ ಪರಾಭವಕ್ಕೆ ಕಾಲ ಬಂದಾಗಲೆಲ್ಲ ಇದೇ ತಕ್ಕ ಸಮಯ ಎಂದುಕೊಂಡು ನೀನು ಶುಕ್ಲಶೋಣಿತಸಂಬಂಧವಿಲ್ಲದೆಯೆ ಸ್ವಸಾಮರ್ಥ್ಯದಿಂದ ದೇವ ಮಾನವ ಮೃಗ ನರಮೃಗ ಜಲಚರ ಆಕೃತಿಗಳಿಂದ ಉಪೇಂದ್ರ, ಕೃಷ್ಣ ವರಾಹ ನರಸಿಂಹ ಮತ್ಸ್ಯ ಮುಂತಾದ ಅವತಾರಗಳನ್ನು ಮಾಡಿ ದಾನವರಿಗೆ ಅವರ ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ನೀನು ಹಿಂದೆ ಕೊಟ್ಟಿರುವೆ.

[೧]ಇಲ್ಲಿ ಶ್ರೀಧರವ್ಯಾಖ್ಯಾನ ಹೇಳುತ್ತದೆ– 'ಬ್ರಹ್ಮಸ್ವರೂಪನಾದ ಪರಮಾತ್ಮ ಜೀವರೂಪದಿಂದ ಕರ್ಮಫಲ ಉಣ್ಣುತ್ತಾನೆ. ಜೊತೆಗೆ ಉದಾಸೀನನಾಗಿಯೂ ಇರುತ್ತಾನೆ. ಇವುಗಳಿಗೆ ಪರಸ್ಪರ ವಿರೋಧವಿಲ್ಲ. ಏಕೆಂದರೆ 'ಸ್ವರೂಪದ್ವಯಾಭಾವಾತ್' ದ್ವೈತ ಮಿಥ್ಯ. ಸತ್ಯವಾಗಿದ್ದರೆ ವಿರೋಧವಿರುತ್ತಿತ್ತು' ಎಂದು. ಆದರೆ ವಿರೋಧಪರಿಹಾರಕ್ಕಾಗಿ ದ್ವೈತವನ್ನು ಮಿಥ್ಯೆ ಎನ್ನುವುದಕ್ಕಿಂತ ಅನುಭವಸಿದ್ಧವಾದ ಕರ್ಮಫಲಭೋಗವನ್ನು ಸತ್ಯವೆಂದೇ ಇಟ್ಟುಕೊಂಡು ಉದಾಸೀನತ್ವವನ್ನೇ ಮಿಥ್ಯೆ ಎಂದೇಕೆ ಹೇಳಬಾರದು? ಅನುಭವವನ್ನು ತಿರಸ್ಕರಿಸಿ ಕರ್ಮಫಲಭೋಗವನ್ನು ಮಿಥ್ಯೆ ಎನ್ನುವುದು ವ್ಯಾಹತವಾಗುವುದು. ಶ್ರುತಿಯೂ ಕೂಡ ಅನುಭವ ವಿರುದ್ಧವಾದುದನ್ನು ಹೇಳಲಾರದು. ಹೇಳುವುದಾದರೆ ಯಜಮಾನಪ್ರಸ್ತರ, ಆದಿತ್ಯಯೂಪಗಳಂಥ ವಾಕ್ಯಗಳೂ ಹಾಗೇ ಹೇಳುತ್ತವೆ ಎನ್ನಬೇಕಾದೀತು.

[೨]ವಿಶ್ವನಾಥ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ. 'ಪರಮಾತ್ಮ ಭಕ್ತವಾತ್ಸಲ್ಯ ಪರವಶನಾಗಿ ಭಕ್ತರ ಸುಖದುಃಖದಿಂದ ತಾನೂ ಅಪ್ರಾಕೃತಸುಖದುಃಖಗಳನ್ನು ಹೊಂದುತ್ತಾನೆ. ಪ್ರಾಕೃತ ಸುಖದುಃಖಗಳು ಮಾತ್ರ ಅವನಿಗೆ ಇಲ್ಲ. ಭಕ್ತರ ರಕ್ಷಣೆಗಾಗಿ ದುಷ್ಟಸಂಹಾರದಲ್ಲಿ ತೊಡಗಿ ಅವನು ನಾನಾದುಃಖಗಳನ್ನು ಅನುಭವಿಸುವುದು ಕಂಡಿದೆ. ದಾರ್ಶನಿಕರು ಯಾರೂ ಇದನ್ನು ಹೇಳುವುದಿಲ್ಲ, ನಿಜ. ಆದರೆ ಭಕ್ತರಿಗೆ ಮಾತ್ರ ಇದು ತಿಳಿಯುತ್ತದೆ. ಭಕ್ತಿಹೀನರಿಗೆ ಗೋಚರಿಸದ ಮಾಹಾತ್ಮ್ಯ ಉಳ್ಳವನು

೧. ಭವಾನ್ ಬ್ರಹ್ಮಸ್ವರೂಪೋ ಜೀವರೂಪೇಣ ಗುಣವಿಸರ್ಗೇ ಪತಿತಃ ಸನ್ನುಪಾದದಾತಿ ಯದ್ವಾ ಸಮಂಜಸಮಪ್ರಚ್ಯುತಂ ದರ್ಶನಂ ಚಿಚ್ಛಕ್ತಿರ್ಯಸ್ಯ ಸ ಭವಾನ್ ಉದಾಸ್ತೇ ಉದಾಸೀನಃ ಸಾಕ್ಷಿತಯಾ ವರ್ತತೇ ಇತಿ ನ ವಿದಾಮಃ । ವಿರುಧ್ಯತ ಇತಿ ವಿರೋಧಃ । ಉಭಯಂ ನ ವಿರುದ್ಧಮಿತ್ಯರ್ಥಃ । ಆತ್ಮಮಾಯಾಂ ಮಧ್ಯೇ ನಿಧಾಯ ಕೋ ನ್ವರ್ಥಃ ಕರ್ತೃತ್ವಾದಿರ್ನ ಸಂಭವತಿ । ಯದಿ ವಸ್ತುತಃ ಕರ್ತೃತ್ವಾದಿ ಭವೇತ್ತರ್ಹಿ ವಿರೋಧಃ ಸ್ಯಾತ್, ನ ತು ತದಸ್ತೀತ್ಯಾಹುಃ ಸ್ವರೂಪದ್ವಯಾಭಾವಾದಿತಿ । ವಸ್ತುತೋ ದ್ವೈತಾಭಾವಾನ್ನ ವಿರೋಧ ಇತ್ಯರ್ಥಃ । ತಮೇವಾವಿರೋಧಂ ಪುರುಷಮತಿಭೇದೇನ ದರ್ಶಯತಿ ಸಮವಿಷಮೇತಿ । –ಶ್ರೀಧರಃ

೨. ವಿರುಧ್ಯತ ಇತಿ ವಿರೋಧಃ । ಉಭಯಮಾತ್ಮಾರಾಮತ್ವಮಪ್ರಾಕೃತಸುಖದುಃಖಿತ್ವಂ ಚ ತ್ವಯಿ ನ ವಿರುದ್ಧಮಿತ್ಯರ್ಥಃ । ತತ್ತದ್ದುಷ್ಟಸಂಹಾರಾರ್ಥಂ ವಿವಿಧಪ್ರಯಾಸಜ್ಞಾಪಿತಸ್ಯ ತ್ವದೀಯ ದುಃಖಸ್ಯ ತಥಾ ಭಕ್ತಾನಾಂ ಪರಮಸುಖೇ ವೃತ್ತೇ ಸತ್ಯದ್ಭುತಸ್ಯ ತವ ಸುಖಸ್ಯ ಚ ಭಕ್ತವಾತ್ಸಲ್ಯಪ್ರೇಮವಶ್ಯತ್ವೈಕನಿದಾನತ್ವಾದಪ್ರಾಕೃತೇ ಏವ ತೇ ಸುಖದುಃಖೇ ಭವತಃ । ನನ್ವೇವಂ ಕೈರಪಿ ದಾರ್ಶನಿಕೈರ್ನಾಹಂ ನಿರೂಪ್ಯೇ ತತ್ರಾಹುಃ । ತೇಷಾಂ

ಪರಮಾತ್ಮ. ಇದರ ಮೇಲೆ ವಾದಿಗಳು ನಾನಾ ಬಗೆಯ ವಿವಾದಮಾಡಬಹುದು. ಆದರೆ ದುರಾಗ್ರಹದಿಂದ ಮಾಡುವ ವಾದವಿವಾದಗಳಿಗೆ ಅವನು ನಿಲುಕುವುದಿಲ್ಲ. ವಸ್ತುತಃ 'ಆತ್ಮಮಾಯೆ'ಯಿಂದ ಅಂದರೆ ಅಚಿಂತ್ಯಶಕ್ತಿಯಿಂದ ದುಃಖವೂ ಚಿನ್ಮಯ ಸುಖರೂಪವೇ ಆಗಿರುತ್ತದೆ. ಪರಮಾತ್ಮಸ್ವರೂಪ ಎರಡಿಲ್ಲ. ಸ್ವರೂಪದ್ವಯಾಭಾವಾತ್ ಒಂದೇ. ಭಕ್ತಿಹೀನರಾಗಿದ್ದು ಪರಮಾತ್ಮನ ಅತ್ಯಲ್ಪ ಕೃಪೆಗೆ ಪಾತ್ರರಾದ ಜ್ಞಾನಿಗಳು ದೂರದಿಂದ ಅವನನ್ನು ಉದಾಸೀನನೆಂದು ಕಾಣುತ್ತಾರೆ. ಪ್ರಿಯರಾದ ಭಕ್ತರು ಸಮೀಪದಿಂದ ಅವನನ್ನು ಅಪ್ರಾಕೃತ ಸುಖದುಃಖ ಉಳ್ಳವನೆಂದು ಕಾಣುತ್ತಾರೆ. ಆ ಜ್ಞಾನಿಗಳಿಗೆ ಆತ ಕೇವಲ 'ಬ್ರಹ್ಮ' ಈ ಭಕ್ತರಿಗೆ ಮಾತ್ರ 'ಭಗವಂತ'– ಎಂದು. ಇಲ್ಲಿ ಪರಮಾತ್ಮನಿಗೆ ನಿತ್ಯ ಸಂಸಾರಿ ಜೀವರಂತೆ ಅಪ್ರಾಕೃತವಾದ ಸುಖರೂಪವಾದ ದುಃಖವನ್ನು ಒಪ್ಪಿ ಅಚಿಂತ್ಯಶಕ್ತಿಯಿಂದ ಕೂಡಿಸಿದ್ದಾರೆ. ಆದರೆ ದುಷ್ಟಸಂಹಾರಕಾಲದಲ್ಲಿ ಪರಮಾತ್ಮನಲ್ಲಿ ಕಾಣುವ ಶ್ರಮ ದುಃಖವೆಲ್ಲವೂ ನಟನೆ ಎನ್ನಲು ಬರುವಾಗ ನಿಜವೆಂದು ಒಪ್ಪಿಕೊಂಡು ಅಚಿಂತ್ಯಶಕ್ತಿಯಿಂದ ಕೂಡಿಸಲು ಯತ್ನಿಸಬಾರದು. ನಿರವಕಾಶಪ್ರಮಾಣಸಿದ್ಧವಾದ ವಿರುದ್ಧಧರ್ಮವನ್ನು ಮಾತ್ರ ಅಚಿಂತ್ಯಶಕ್ತಿಯಿಂದ ಕೂಡುತ್ತದೆ ಎನ್ನಬೇಕು.

---

[೧]ವೀರರಾಘವವ್ಯಾಖ್ಯಾನದಲ್ಲಿ 'ಪರಮಾತ್ಮನಿಗೆ ಕರ್ತೃತ್ವವಿದೆ. ಜೊತೆಗೆ ಉದಾಸೀನತ್ವವೂ ಇದೆ. ಎಲ್ಲ ಅಂಕುರಗಳಿಗೂ ಆಯಾ ಬೀಜ ಅಸಾಧಾರಣಕಾರಣ. ನೀರು ಸಾಧಾರಣಕಾರಣ. ಹಾಗೇ ಸರ್ವಕಾರ್ಯಗಳಿಗೆ ಪರಮಾತ್ಮ ಸಾಧಾರಣ ಕಾರಣನಾಗಿದ್ದಾನೆ. ಇದೇ ಉದಾಸೀನತ್ವ. ಅದರಿಂದ ಸ್ವರೂಪದ್ವಯವಿಲ್ಲವೆಂದು ಕರ್ತೃತ್ವ ಉದಾಸೀನತ್ವಗಳಿಗೆ ವಿರೋಧವಿಲ್ಲ' ಎಂದಿದ್ದಾರೆ. ಆದರೆ ಇವರು

ಭಕ್ತಿಹೀನಾನಾಮವಗಾಹನಾನರ್ಹಂ ಮಾಹಾತ್ಮ್ಯಂ ಯಸ್ಮಿನ್ । ದುರವಗ್ರಹಾ ದುರಾಗ್ರಹಾಸ್ತೈರೇವ ವಾದಿನಾಂ ವಿವಾದಸ್ಯಾನವಸರೇ ಅಗೋಚರೇ ತ್ವಯಿ ಮಾಯಾ ಶಕ್ತಿ ವಿನಾಭೂತೇ ಸತ್ಯೇವ ಯಾ ಆತ್ಮಮಾಯಾ ಅಚಿಂತ್ಯಯೋಗಮಾಯಾ ತಾಮಂತರ್ಧಾಯ ಮಧ್ಯೇ ಕೃತ್ವಾ ಕೋ ನ್ವರ್ಥೋ ದುರ್ಘಟಃ । ಏಕಸ್ಯೈವ ಭಗವತಸ್ತವ ನಿರ್ವಿಶೇಷಜ್ಞಾನಗಮ್ಯತ್ವಮೇವ ಬ್ರಹ್ಮತ್ವಂ । ಅಲೌಕಿಕ ವಿಶೇಷಜ್ಞಾನಗಮ್ಯತ್ವಮೇವ ಭಗವತ್ತ್ವಮಿತಿ ದೂರವರ್ತಿಭಿರ್ಜ್ಞಾನಿಭಿರಲೌಕಿಕ ವಿಶೇಷಗ್ರಹಣಾಸಮರ್ಥೈಃ ತ್ವಮೇವ ಬ್ರಹ್ಮೇತಿ ಸಮೀಪವರ್ತಿಭಿರ್ಭಕ್ತೈರಲೌಕಿಕವಿಶೇಷ ಗ್ರಹಣಸಮರ್ಥೈರ್ಭಗವಾನಿತಿ ತ್ವಮೇವೋಚ್ಯಸೇ । ತತ್ರ ಕೃಪಾಯಾಃ ಪರಮಾಣುತ್ವ ಪರಮಮಹತ್ವೇ ಏವ ದೂರತ್ವಸಮೀಪತ್ವಯೋರ್ಹೇತೂ ಜ್ಞೇಯೌ ।
—ವಿಶ್ವನಾಥಃ

೧. ಜಗತ್ಸೃಷ್ಟ್ಯಾದಿವ್ಯಾಪಾರೇಷು ಸ್ವಾತಂತ್ರ್ಯರೂಪಂ ಕರ್ತೃತ್ವಂ ಪ್ರಯೋಜ್ಯಕರ್ತುರ್ಜೀವಸ್ಯ ಕಾರಯಿತೃತ್ವಾತ್ ಪ್ರೇರಕತ್ವರೂಪಂ ಪ್ರಯೋಜಕಕರ್ತೃತ್ವಂ

ಹೇಳುವ ಉದಾಸೀನತ್ವವು ಪಾರಿಭಾಷಿಕವಾಗಿದೆ. ಯಾವುದೇ ಕಾರಣತ್ವವಿಲ್ಲದಿದ್ದರೆ ಮಾತ್ರ ಅದು ಉದಾಸೀನತ್ವವೆನಿಸುತ್ತದೆ. ಮತ್ತು ಬೀಜ ಅಸಾಧಾರಣಕಾರಣವಾಗಲು ಅದರೊಳಗೆ ಬೀಜದ ಆಕಾರದಲ್ಲಿ ಪ್ರವೇಶಿಸಿರುವ ಭಗವದ್ರೂಪ ಅಸಾಧಾರಣಕಾರಣವಾಗಿರುವುದೇ ಕಾರಣ. ಅದರಿಂದ ಭಗವಂತನನ್ನು ಸಾಧಾರಣಕಾರಣವೆಂದು ಉದಾಸೀನನೆಂದು, ಹೇಳುವುದು ಕೂಡುವುದಿಲ್ಲ.

೧ಶುಕದೇವ ವ್ಯಾಖ್ಯಾನದಲ್ಲಿ 'ಪರಮಾತ್ಮ ಕರ್ಮಫಲಭೋಗದಲ್ಲಿ ಆಸಕ್ತನೆಂದರೆ ಪೂರ್ಣಕಾಮತ್ವವಿರೋಧ. ವಿರಕ್ತನಾಗಿ ಮೋಕ್ಷಸಾಧನೆಯಲ್ಲಿ ಆಸಕ್ತನಾಗಿದ್ದಾನೆ ಎಂದರೆ ಮುಕ್ತಪ್ರಾಪ್ಯತ್ವದ ವಿರೋಧ ಎಂಬ ಶಂಕೆ ಬಂದರೆ ಪರಮಾತ್ಮಸ್ವರೂಪದಲ್ಲಿ ದ್ವಯವಿಲ್ಲ. ವಿರುದ್ಧವಾದ ಈ ಎರಡು ಧರ್ಮಗಳೂ ಇಲ್ಲ. ಅವನ ಅಂಶಭೂತರಾದ ಜೀವರಲ್ಲಿ ಮಾತ್ರವಿದೆ. ಅದರಿಂದ ವಿರೋಧವಿಲ್ಲ' ಎಂದಿದೆ. ಆದರೆ 'ಪರಮಾತ್ಮ ಜೀವಭಿನ್ನನೆ ವಿಲಕ್ಷಣನೆ ಎಂದೇ ವಿಚಾರ ಹೊರತು, ಜೀವಾಭಿನ್ನನೆಂದು ಒಪ್ಪಿ ಅವನಿಗೆ ಭೋಗಾಸಕ್ತಿ ವಿರಕ್ತಿಗಳನ್ನು ಶಂಕಿಸುವುದು ವ್ಯರ್ಥ. ಜೀವವಿಲಕ್ಷಣ ನೆಂದೊಪ್ಪಿಯೂ ಹಾಗೆ ಶಂಕಿಸಿದರೆ ಅದು ಅನುಚಿತ.

ವಸ್ತುತಃ 'ಆತ್ಮಮಾಯೆಯ ಬಲದಿಂದ ಎಲ್ಲವೂ ಕೂಡುತ್ತದೆ, ಕೋ ನು ದುರ್ಘಟಃ?' ಎಂದು ವಿರೋಧ ಪರಿಹಾರ ಮಾಡುವುದು ಪೂರ್ವಪಕ್ಷವೇ ಹೊರತು ಸಿದ್ಧಾಂತವಲ್ಲ. 'ಸ್ವರೂಪದ್ವಯಾಭಾವಾತ್' ಎರಡು ವಿರುದ್ಧಸ್ವರೂಪಗಳು ಭಗವಂತನಿಗೆ ಇಲ್ಲ' ಎಂಬಲ್ಲಿಂದಲೇ ಸಿದ್ಧಾಂತ ಪ್ರಾರಂಭವಾಗುತ್ತದೆ.

'ಎರಡು ವಿರುದ್ಧ ಧರ್ಮಗಳಿಗೆ ವಿರೋಧ ಪರಿಹಾರ ಮಾಡುವ ವಿಧಾನ, ಒಂದೇ ವಸ್ತು ಅನೇಕರಿಗೆ ಅವರವರ ಬುದ್ಧ್ಯನುಸಾರ ಅನೇಕವಾಗಿ ಕಾಣುತ್ತದೆ ಎಂದು. ಉದಾ: ಒಂದು ಹಗ್ಗದ ಚೂರು ಕೆಲವರಿಗೆ ಹಾವಾಗಿ, ಕೆಲವರಿಗೆ ಹಗ್ಗವಾಗಿ

ಚೇಶ್ವರಸ್ಯೋಪಪನ್ನಂ । ತಥಾ ಸರ್ವಾಂಕುರಾಣಾಂ ಸಾಧಾರಣಕಾರಣಂ ಸಲಿಲಂ ವಿಶೇಷಕಾರಣಂ ಬೀಜಂ ದೃಷ್ಟಮೇವಂ ಸರ್ವೇಷ್ವಪಿ ಕಾರ್ಯೇಷು ಸಮಾನತ್ವಾದುದಾಸೀನಃ । —ವೀರರಾಘವಃ

೧. ಈಶ್ವರೇ ಬುಭುಕ್ಷುಮುಮುಕ್ಷುಸರ್ವನಿಯಂತರಿ ಸ್ವಕೃತ ಕುಶಲಭೋಕ್ತೃತ್ವೇನ ಬುಭುಕ್ಷುತ್ವಂ ಆತ್ಮಾರಾಮತ್ವೋಪಶಮಶೀಲತ್ವಾದಿನಾ ಮುಮುಕ್ಷುತ್ವಂ ಚೇತ್ಯುಭಯಂ ನಾಸ್ತಿ ಸ್ವರೂಪದ್ವಯಾಭಾವಾತ್ । ಸ್ವರೂಪೇ ಈಶ್ವರಸ್ವರೂಪೇ ತದ್ದ್ವಯಸ್ಯಾ ಭಾವಾತ್ ಈಶ್ವರಾಂಶಭೂತಜೀವಧರ್ಮತ್ವಾತ್ ಬುಭುಕ್ಷುತ್ವಮುಮುಕ್ಷುತ್ವ ದ್ವಯಸ್ಯೇತ್ಯರ್ಥಃ । ಅತೋ ಹೇತೋರ್ನ ವಿರೋಧಃ । —ಶುಕದೇವಃ

ಕಾಣುತ್ತದೆ' ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ. ಆದರೆ 'ಸಮವಿಷಮ ಮತೀನಾಂ' ಎಂದು ಭಾಗವತ ಹೇಳುತ್ತಿದೆ. 'ಸಮಮತಿ' ಎಂದರೆ ಯಥಾರ್ಥಜ್ಞಾನ.'ವಿಷಮಮತಿ' ಎಂದರೆ ಭ್ರಾಂತಿ. ಯಥಾರ್ಥಜ್ಞಾನದಲ್ಲಿಯೇ ಅಥವಾ ಅಯಥಾರ್ಥ ಜ್ಞಾನದಲ್ಲಿಯೇ ಹಗ್ಗವಾಗಿ, ಭ್ರಾಂತಿಯಲ್ಲಿಯೇ ಹಾವಾಗಿ ಕಾಣುವುದರಿಂದ ಹಗ್ಗ ಹಾವುಗಳಲ್ಲಿ ವಿರೋಧವೇ ಸಿದ್ಧವಾಗುತ್ತದೆ. ಯಥಾರ್ಥಜ್ಞಾನದಲ್ಲಿಯೇ ಎರಡು ಬೇರೆಬೇರೆ ಧರ್ಮಗಳು ಕಂಡರೆ ವಿರೋಧವಿಲ್ಲ. ಭಗವಂತನಲ್ಲಿ ಕೇವಲ ಸ್ವಾತಂತ್ರ್ಯವನ್ನು ಮತ್ತು ಸ್ವಾತಂತ್ರ್ಯಪಾರತಂತ್ರ್ಯಗಳೆಂಬ ಎರಡು ವಿರುದ್ಧಧರ್ಮಗಳನ್ನು ತಮ್ಮ ಸಮಮತಿ ವಿಷಮಮತಿಗಳಿಗನುಸಾರ ತಿಳಿಯುವವರಿಗೆ ಆ ಮತಿಗಳಿಗನುಸಾರವಾಗಿಯೇ ಅನುಗ್ರಹ ನಿಗ್ರಹಗಳನ್ನು ಭಗವಂತ ಮಾಡುತ್ತಾನೆ. 'ಸಮವಿಷಮಮತೀನಾಂ ಮತಮನುಸರಸಿ' ಎಂದು ಭಾಗವತ ಹೇಳಿದ್ದರ ಅಭಿಪ್ರಾಯವನ್ನು ಹೀಗೇ ತಂತ್ರಭಾಗವತ ಸ್ಪಷ್ಟಪಡಿಸಿದೆ. ಆದರೆ ಬೇರೆ ವ್ಯಾಖ್ಯಾನಕಾರರು ವಿರುದ್ಧಧರ್ಮಗಳಿಗೆ ವಸ್ತುತಃ ವಿರೋಧವೆ ಇಲ್ಲ ಎನ್ನುತ್ತ ಆ ವಿರುದ್ಧಧರ್ಮಗಳನ್ನು ಭಗವಂತನಲ್ಲಿ ಒಪ್ಪುವದನ್ನೆ ಸಿದ್ಧಾಂತವಾಗಿ ಸ್ವೀಕರಿಸಿದ್ದಾರೆ. ವಸ್ತುತಃ ಅದು ಸಮಮತಿಯಲ್ಲ. ವಿಷಮಮತಿ.

'ತ್ರಿನಯನ' ಎಂಬಲ್ಲಿ ಶಿವನೊಬ್ಬನೆ ಮುಕ್ಕಣ್ಣನೆಂಬ ಅಭಿಪ್ರಾಯದಿಂದ ಬೇರೆ ವ್ಯಾಖ್ಯಾನಕಾರರು ತ್ರಿಲೋಕಗಳಿಗೆ ನಯನ, ಅಂದರೆ ನಾಯಕ, ಸಂಚಾಲಕ ಎಂದು ಬೇರೆ ಅರ್ಥ ಮಾಡಿದ್ದಾರೆ. ವಸ್ತುತಃ ಶಿವನೊಬ್ಬನೇ ಮುಕ್ಕಣ್ಣನಲ್ಲ. ನರಸಿಂಹನೂ ಮುಕ್ಕಣ್ಣ ಆ ಹೆಸರು ನರಸಿಂಹನಿಗೂ ಇದೆ. ಆದರಿಂದ ಈ ಭಾಗವತಗದ್ಯವನ್ನು ಹೀಗೆ ವ್ಯಾಖ್ಯಾನಿಸಬೇಕು–

ಅಥ ತತ್ರ ಭಗವಾನ್ ಕಿಂ ದೇವದತ್ತವದಿತ್ಯಾಕ್ಷೇಪಃ । ಅಚಿಂತ್ಯಶಕ್ತೇರನಂತ-ಗುಣಸ್ಯ ಕುತಃ ಪಾರತಂತ್ರ್ಯಾದಿಕಮಿತ್ಯಭಿಪ್ರಾಯಃ । ಉಪರತ ಸಮಸ್ತಮಾಯಾಮಯೇ ಪ್ರಾಕೃತಸ್ವಭಾವವರ್ಜಿತೇ । ಕೇವಲ ಸ್ವಾತ್ಮಮಾಯಾಂ ನಿಜಸಾಮರ್ಥ್ಯಂ ।

ಸ್ವರೂಪದ್ವಯಾಭಾವಾದಿತ್ಯಾದಿ ಸಮಾಧಾನಮ್ ॥

ಅಥ ತತ್ರ ಭಗವಾನ್ ಕಿಂ ದೇವದತ್ತವತ್ (ದೇವದತ್ತಮುಂತಾದ ಪ್ರಾಕೃತಜನರಂತೆ ಪರಮಾತ್ಮನೂ ಪರತಂತ್ರನೆ ಅಥವಾ ಸ್ವತಂತ್ರನೆ? ಎಂಬುದನ್ನು ನಿರ್ಧರಿಸಲಾಗುವುದಿಲ್ಲ. ಅಪಾರ ಮಹಿಮನಾದ್ದರಿಂದ ಕೇವಲ ಸ್ವತಂತ್ರನೆ? ಅಥವಾ ಅಚಿಂತ್ಯಶಕ್ತಿಯುಳ್ಳವನಾದ್ದರಿಂದ ತನ್ನ ಸ್ವಾತಂತ್ರ್ಯಗುಣದೊಂದಿಗೆ ಪಾರತಂತ್ರ್ಯವನ್ನೂ ಜೊತಗೂಡಿಸಿಕೊಂಡವನೆ? ಎಂಬುದನ್ನು ನಿರ್ಧರಿಸಲಾಗುವುದಿಲ್ಲ) ಎಂದು ಆಕ್ಷೇಪ.

(ಅಂದರೆ ದೇವತೆಗಳು ತಾವೇ ಈ ಪ್ರಶ್ನೆ ಎತ್ತಿಕೊಂಡು ಮುಂದೆ ಸಮಾಧಾನ ಹೇಳಿಕೊಳ್ಳುತ್ತಾರೆ.) ಅಚಿಂತ್ಯಶಕ್ತಿ ಅನಂತಗುಣಗಳುಳ್ಳವನಾದ್ದರಿಂದ ಅವನಲ್ಲಿ ಪಾರತಂತ್ರ್ಯಾದಿ ದೋಷಗಳು ಹೇಗೆ ಇರಬಲ್ಲುವು ಎಂಬುದು 'ಅಪರಿಗಣಿತ ಗುಣಗಣೇ' ಮುಂತಾದ ವಿಶೇಷಣಗಳ ಅಭಿಪ್ರಾಯ 'ಉಪರತ ಸಮಸ್ತಮಾಯಾ ಮಯೇ' ಎಂದರೆ ಪ್ರಾಕೃತಸ್ವಭಾವ ವರ್ಜಿತನೆಂದರ್ಥ. 'ಕೇವಲ ಸ್ವಾತ್ಮಮಾಯಾಂ' ಎಂದರೆ ತನ್ನ ಅಚಿಂತ್ಯಶಕ್ತಿಯನ್ನು ಎಂದರ್ಥ.

'ಸ್ವರೂಪದ್ವಯಾಭಾವಾತ್' ಎಂಬಲ್ಲಿಂದ, ಮೇಲೆ ಹೇಳಿದ ಆಕ್ಷೇಪಗಳಿಗೆ ಸಮಾಧಾನ ಪ್ರಾರಂಭವಾಗುತ್ತದೆ. (ಸ್ವಾತಂತ್ರ್ಯ ಪಾರತಂತ್ರ್ಯಗಳೆಂಬ ವಿರುದ್ಧಧರ್ಮಗಳೆರಡೂ ಭಗವಂತನಲ್ಲಿ ಇವೆ ಎನ್ನಲಾಗುವುದಿಲ್ಲ. 'ಅವನು ಕೇವಲ ಸ್ವತಂತ್ರ ಎಂದು ಸಮಾಧಾನ.)

ಸ್ವತಂತ್ರಃ ಪರತಂತ್ರೋ ವಾ ಜ್ಞೋಽಜ್ಞೋ ದುಃಖೀ ಸುಖೀ ನು ಕಿಂ ।
ಇತ್ಯಾದಿಸಂಶಯಃ ಕ್ವ ಸ್ಯಾತ್ ಜ್ಞಾನಿನಾಂ ಪುರುಷೋತ್ತಮೇ ॥

ತಸ್ಯಾನಂತಗುಣತ್ವಾಚ್ಚ ಪೂರ್ಣಶಕ್ತಿತ್ವತೋ ಹರೇಃ ।
ಸ್ವಾತಂತ್ರ್ಯಾದಿಕಮೇವಾಸ್ಯ ವಿದೋ ಜಾನಂತಿ ನಿಶ್ಚಯಾತ್ ॥

ಘಟಕತ್ವಾದ್ ದುರ್ಘಟಸ್ಯ ದುರ್ಜ್ಞೇಯತ್ವಾಚ್ಚ ಸರ್ವಶಃ ।
ತಚ್ಛಕ್ತೇರವಿದೋ ಜೀವಂ ಪರತಂತ್ರಂ ವದಂತ್ಯಮುಮ್ ॥

ಏವಂ ದುರ್ಘಟಯಾ ಶಕ್ತ್ಯಾ ಜ್ಞಾಜ್ಞಾನಾಂ ಪರಮೇಶ್ವರಃ ।
ಯಥಾ ರಜ್ಜುಃ ಸರ್ಪಧಿಯಾ ರಜ್ಜುಬುದ್ಧ್ಯಾ ಚ ಗಮ್ಯತೇ ॥

ತಥಾ ಯಥಾರ್ಥಬುದ್ಧ್ಯಾ ಚ ಮಿಥ್ಯಾಬುದ್ಧ್ಯಾ ಚ ಗಮ್ಯತೇ ।
ಸ್ವೇಚ್ಛಯೈವ ಮಹಾವಿಷ್ಣುಃ ಫಲದಶ್ಚಾನುಸಾರತಃ ॥

ಇತಿ ತಂತ್ರಭಾಗವತೇ ॥

ಶ್ರೀಹರಿ ಸ್ವತಂತ್ರನೆ, ಪರತಂತ್ರನೆ? ಸರ್ವಜ್ಞನೆ ಅಜ್ಞನೆ? ದುಃಖಿಯೆ, ಸುಖಿಯೆ? ಎಂದು ಮುಂತಾಗಿ ಸಂಶಯ ಜ್ಞಾನಿಗಳಿಗೆ ಹರಿಯ ವಿಷಯದಲ್ಲಿ ಎಲ್ಲಿ ಬಂದೀತು? ಅವನು ಅನಂತಗುಣಪೂರ್ಣನೂ ಪೂರ್ಣಶಕ್ತಿ ಉಳ್ಳವನೂ ಆಗಿರುವುದರಿಂದ ಜ್ಞಾನಿಗಳು ಅವನಲ್ಲಿ ಸ್ವಾತಂತ್ರ್ಯಾದಿಗುಣಗಳನ್ನೇ ನಿಶ್ಚಯವಾಗಿ ತಿಳಿದುಕೊಳ್ಳುತ್ತಾರೆ. ಆದರೆ 'ಅವನ ಶಕ್ತಿ ದುರ್ಘಟವಾದುದನ್ನೂ ಕೂಡಿಸಬಲ್ಲುದು ಮತ್ತು ಅದನ್ನು ಪೂರ್ತಿಯಾಗಿ ಯಾರಿಂದಲೂ ತಿಳಿಯಲಾಗದು. ಅದರಿಂದ ಅವನು ಅಚಿಂತ್ಯಶಕ್ತಿಯಿಂದ ಪರತಂತ್ರಜೀವನೂ ಆಗಿರುತ್ತಾನೆ' ಎಂದು ಅಜ್ಞಾನಿಗಳು

ಹೇಳುತ್ತಾರೆ. ಹೀಗೆ ದುರ್ಘಟವಾದುದನ್ನು ಕೂಡಿಸಬಲ್ಲ ಶಕ್ತಿಯಿಂದಲೆ ಪರಮಾತ್ಮ ಜ್ಞಾನಿಗಳಿಗೂ ಅಜ್ಞಾನಿಗಳಿಗೂ ಹಗ್ಗ ಹಗ್ಗವಾಗಿಯೂ ಹಾವಾಗಿಯೂ ಕಾಣುವಂತೆ ಯಥಾರ್ಥವಾಗಿಯೂ ತಪ್ಪಾಗಿಯೂ ತಿಳಿದುಬರುತ್ತಾನೆ. ಮಹಾವಿಷ್ಣು ಸ್ವೇಚ್ಛೆಯಿಂದಲೇ ಹೀಗೆ ಯಥಾರ್ಥಜ್ಞಾನಕ್ಕೂ ಮಿಥ್ಯಾಜ್ಞಾನಕ್ಕೂ ಗೋಚರನಾಗಿ ಆ ಜ್ಞಾನಗಳಿಗೆ ಅನುಗುಣವಾಗಿ ಸತ್ಫಲ ದುಷ್ಫಲಗಳನ್ನೂ ನೀಡುತ್ತಾನೆ ಎಂದು ತಂತ್ರಭಾಗವದಲ್ಲಿ ಉಕ್ತವಾಗಿದೆ.

ತ್ರಿನಯನೋ ನೃಸಿಂಹಾದಿರೂಪೀ ।

ವಿಷ್ಣೋರ್ನೃಸಿಂಹನಾಮಾನಿ ತ್ರಿನೇತ್ರೋಗ್ರಾದಿಕಾನಿ ತು ।

ಇತಿ ಶಬ್ದನಿರ್ಣಯೇ ।

ತ್ರಿನಯನ ಎಂದರೆ ನರಸಿಂಹರೂಪಿ ಎಂದರ್ಥ.

ತ್ರಿನೇತ್ರ ಉಗ್ರ ಮುಂತಾದುವು ಮುಖ್ಯವಾಗಿ ನೃಸಿಂಹರೂಪಿಯಾದ ವಿಷ್ಣುವಿನ ನಾಮಗಳೆಂದು ಶಬ್ದನಿರ್ಣಯದಲ್ಲಿ ಉಕ್ತವಾಗಿದೆ.

'ನೃಸಿಂಹನಾಮಾನಿ' ಎಂಬಲ್ಲಿ 'ನ ಲೋಪಃ ಪ್ರಾತಿಪಪದಿಕಾಂತಸ್ಯ' ಎಂದು ಪಾಣಿನಿ ಸೂತ್ರದಲ್ಲಿ ಪ್ರಯೋಗ ಮಾಡಿರುವಂತೆ 'ನೃಸಿಂಹಸ್ಯ' ಎಂದು ಷಷ್ಠೀ ವಿಭಕ್ತಿಯನ್ನು ಲೋಪ ಮಾಡಿ ಪ್ರಯೋಗಿಸಲಾಗಿದೆ. ಅದರಿಂದ 'ನೃಸಿಂಹಸ್ಯ ವಿಷ್ಣೋಃ ನಾಮಾನಿ' ಎಂದು ಅನ್ವಯ ಮಾಡಬೇಕು.

'ತವೈವ ವಿಭೂತಯೋಽಭೂವನ್ ದಿತಿಜದನುಜಾದಯಶ್ಚ' ಎಂಬಲ್ಲಿ ಹೇಳಿದ ವಿಭೂತಿಗಳೆಂದರೆ ರಾಮಕೃಷ್ಣಾದಿ ಪ್ರತ್ಯಕ್ಷವಿಶೇಷವಿಭೂತಿಗಳಂತಲ್ಲ, ಬ್ರಹ್ಮರುದ್ರಾದಿ ತಿರೋಹಿತವಿಶೇಷವಿಭೂತಿಗಳಂತೆಯೂ ಅಲ್ಲ. ದೈತ್ಯದಾನವರಲ್ಲಿ ಭಗವಂತನ ಸಾಧಾರಣ ವಿಭೂತಿರೂಪವಿದೆ.

ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ'

ಎಂಬಂತೆ 'ಆತ್ಮ' ಎಂಬ ಸರ್ವಭೂತಹೃದಯಾಂತರ್ಗತವಾದ ಸಾಧಾರಣ ವಿಭೂತಿರೂಪ ಇಲ್ಲಿ ವಿವಕ್ಷಿತವಾಗಿದೆ. ವಿಶೇಷವಿಭೂತಿಗಳು ನಿಗ್ರಹಕ್ಕೆ ಯೋಗ್ಯರಲ್ಲ. ದೈತ್ಯದಾನವರಲ್ಲಿ ಸಾಧಾರಣ ವಿಭೂತಿರೂಪವಿರುವುದರಿಂದ ಅವರು ನಿಗ್ರಹಕ್ಕೆ ಯೋಗ್ಯರೆನಿಸುತ್ತಾರೆ. ಈ ವಿಶೇಷವನ್ನು ಬೇರೆ ವ್ಯಾಖ್ಯಾನಕಾರರು ಗಮನಿಸುವುದಿಲ್ಲ.

ವಿವಿಧಂ ಭಾವಪಾತ್ರತ್ವಾತ್ ಸರ್ವೇ ವಿಷ್ಣೋರ್ವಿಭೂತಯಃ ।

ಇತಿ ಚ ।

ಎಲ್ಲರೂ ಅಂದರೆ ದೈತ್ಯದಾನವಾದಿಗಳೂ ನಾನಾಬಗೆಯಿಂದ ವಿಷ್ಣುವಿನ ನಾನಾರೂಪಗಳ ಸನ್ನಿಧಾನಪಾತ್ರಗಳೇ ಆಗಿರುವುದರಿಂದ ವಿಷ್ಣುವಿನ ವಿಭೂತಿ ಗಳೆನಿಸುತ್ತಾರೆ ಎಂದೂ ಹೇಳಿದೆ.

* * *

ಅನಾಯಾಸವಾಗಿಯೇ ಎಲ್ಲ ಕಾರ್ಯಗಳನ್ನು ನಿರ್ವಹಿಸುವವನೆಂದು ಭಗವಂತನನ್ನು ಸ್ತುತಿಸುತ್ತ ನಮಿಸುತ್ತಾರೆ ದೇವತೆಗಳು.

ಹಂಸಾಯ ದಭ್ರನಿಲಯಾಯ ನಿರೀಕ್ಷಕಾಯ
ಕೃಷ್ಣಾಯ ಮೃಷ್ಟಯಶಸೇ ನಿರುಪಕ್ರಮಾಯ ।
ಸತ್ಸಂಗ್ರಹಾಯ ಭವಪಾಂಥನಿಜಾಶ್ರಯಾಯ
ಶಶ್ವದ್‌ವರಿಷ್ಠಗತಯೇ ಹರಯೇ ನಮಸ್ತೇ ॥ ೩೫ ॥

ಶತ್ರುನಾಶಕ, ಹೃದಯಾಕಾಶವಾಸಿ, ಎಲ್ಲರ ಚಿತ್ತವೃತ್ತಿಯನ್ನು ಅರಿಯುವವನು, ಸದಾ ಆನಂದರೂಪಿ, ನಿರ್ಮಲಕೀರ್ತಿ ಉಳ್ಳವನು. ಅನಾಯಾಸವಾಗಿ ಎಲ್ಲ ಕಾರ್ಯ ನಡೆಸುವವನು, ಸಜ್ಜನರನ್ನು ಸ್ವೀಕರಿಸುವವನು, ಸಂಸಾರ ಮಾರ್ಗದಲ್ಲಿ ನಡೆವವರಿಗೆ ಸದಾ ಆಶ್ರಯ. ತಿರುಗಿ ಸಂಸಾರಕ್ಕೆ ಬೀಳದಂತೆ ಶಾಶ್ವತವಾದ ಉತ್ತಮವಾದ ಮುಕ್ತಿ ನೀಡುವವನು. ಇಂಥ ಹರಿಗೆ ನಮಸ್ಕಾರ.

ಇಲ್ಲಿ ನಿರುಪಕ್ರಮ ಎಂದರೇನು? ಉಪಕ್ರಮವೆಂದರೆ ಆದಿ. ಆದಿ ಇಲ್ಲದವನು ನಿರುಪಕ್ರಮ ಎಂದು ಶ್ರೀಧರವ್ಯಾಖ್ಯಾನ ಶುಕದೇವವ್ಯಾಖ್ಯಾನಗಳು ಹೇಳುತ್ತವೆ. ಉಪಕ್ರಮವೆಂದರೆ ಪ್ರಯತ್ನ. ಭಗವಂತನನ್ನು ಪ್ರಪತ್ತಿಮಾಡಿದರೆ ಸಾಕು, ಮೋಕ್ಷಕ್ಕಾಗಿ ನಾವು ಬೇರೆ ಪ್ರಯತ್ನವನ್ನೇ ಮಾಡಬೇಕಾಗಿಲ್ಲ. ಹಾಗೆ ಮಾಡುವವನು ನಿರುಪಕ್ರಮ ಎಂದು ವೀರರಾಘವವ್ಯಾಖ್ಯಾನ. ನಮ್ಮ ಇಷ್ಟವಾದ ಕಾರ್ಯವನ್ನು ನಿವೇದಿಸಿ ಕೊಂಡಾಗ ಅದನ್ನು ಏನೂ ಪ್ರಯತ್ನವಿಲ್ಲದೆ ಮಾಡಿಕೊಡುವವನು ನಿರುಪಕ್ರಮ ಎಂದು ವಿಶ್ವನಾಥವ್ಯಾಖ್ಯಾನ. ಆದರೆ 'ನಿರುಪಕ್ರಮ' ಎಂಬ ಹರಿನಾಮವೆ ಒಂದಿದೆ. ಅದನ್ನು ಶಬ್ದನಿರ್ಣಯ ವಚನ ಹೀಗೆ ನಿರ್ವಚನ ಮಾಡಿದೆ.

ನಿರುಪಕ್ರಮೋ ಹರಿರ್ನಿತ್ಯಮಪ್ರಯತ್ನೋ ಹ್ಯುಪಕ್ರಮೇತ್ ।
ಇತಿ ಚ ।

ಹರಿ ನಿರುಪಕ್ರಮನೆನಿಸುತ್ತಾನೆ. ಏಕೆಂದರೆ ಶ್ರಮದಿಂದ ಯುಕ್ತವಾದ ಪ್ರಯತ್ನವನ್ನು ಮಾಡದೆಯೆ ಸೃಷ್ಟ್ಯಾದಿ ಸಕಲಕಾರ್ಯಗಳನ್ನು ಮಾಡುತ್ತಾನೆ ಎಂದು ಉಕ್ತವಾಗಿದೆ.

* * *

ದೇವತೆಗಳೆ, ನೀವು ಬಯಸಿದ ವೃತ್ರಹತ್ಯೆ ನನಗೂ ಇಷ್ಟವಾಗಿರುವುದರಿಂದ ನಾನು ನಡೆಸಿಕೊಡುತ್ತೇನೆ ಎಂದು ಭಗವಂತ ಆಶ್ವಾಸನ ನೀಡುತ್ತಾನೆ.

ನ ವೇದ ಕೃಪಣಃ ಶ್ರೇಯ ಆತ್ಮನೋ ಗುಣವಸ್ತುದೃಕ್ ।
ತಸ್ಯ ತಾನಿಚ್ಛತೋ ಯಚ್ಛೇ ಯದಿ ಸೋಽಪಿ ತಥಾವಿಧಃ ॥ ೩೯ ॥

ನಶ್ವರವಾದ ಕಾಮ್ಯಫಲವನ್ನು ಬಯಸುವ ಇಂದ್ರಿಯವಶನಾದ ಅಜ್ಞಾನಿ ವಿಲಂಬವಾಗಿ ಸಿಗುವ ಮೋಕ್ಷವನ್ನು ನನ್ನಿಂದ ತನಗೆ ಬಯಸುವುದಿಲ್ಲ. ಬೇಗನೆ ಸಿಗುವ ಐಹಿಕಫಲವನ್ನೇ ಚಿರಸ್ಥಾಯಿಯೆಂದುಕೊಳ್ಳುತ್ತಾನೆ. ಹೀಗೆ ಕಾಮ್ಯಫಲವನ್ನೇ ಬಯಸುವವನಿಗೆ ನಾನು ಅದನ್ನು ಕೊಡುತ್ತೇನೆ, ಅವನು ಉತ್ತಮ ಭಕ್ತನಲ್ಲದಿದ್ದರೆ ಮಾತ್ರ. ಉತ್ತಮಭಕ್ತನಾಗಿದ್ದರೆ ಅವನಿಗೆ ನಾನು ಹಿತಕಾರಿಯಾಗಿರುವುದರಿಂದ ಅಹಿತವಾದ ಆ ಕಾಮ್ಯಫಲವನ್ನು ಅವನಿಗೆ ಕೊಡಲಾರೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ– 'ದೇವತೆಗಳೆ, ನೀವು ಮೂರ್ಖರು. [೧]ಐಹಿಕಸುಖವನ್ನು ಕೇಳಿಕೊಳ್ಳುತ್ತಿದ್ದೀರಿ. ನಿಮಗೆ ನಿಮ್ಮ ಹಿತ ಯಾವುದರಿಂದ ಎನ್ನುವ ತಿಳುವಳಿಕೆ ಇಲ್ಲ. ಅದರಿಂದ ನೀವು ಬಯಸಿದ್ದನ್ನು ನಾನು ಪೂರೈಸಲಾರೆ. ಪೂರೈಸಿದರೆ ನಾನೂ ಮೂರ್ಖನೇ ಆಗುವೆ. ಮಕ್ಕಳು ತಿಳಿಯದೆ ಬೇಡಿದ ಮಾತ್ರಕ್ಕೆ ತಾಯಿ ಕೈಯಾರೆ ವಿಷ ಉಣಿಸುವುದಿಲ್ಲ' ಎಂದು ಪರಮಾತ್ಮ ಹೇಳುತ್ತಾನೆ.' ಇದು ಮುಂದೆ 'ಭಗವಂತ 'ಮಘವನ್ ಯಾತ ಭದ್ರಂ ವೋ' 'ದೇವರಾಜ, ನಿಮಗೆ ಮಂಗಳವಾಗಲಿ. ಈಗ ತಡ ಮಾಡದೆ ದಧೀಚಿ ಮುನಿಯ ಬಳಿಗೆ ಹೋಗಿರಿ' ಎಂದು ಹೇಳುವುದಕ್ಕೆ ವಿರುದ್ಧವಾಗುತ್ತದೆ. 'ದೇವತೆಗಳೆ ನಿಮಗೆ ಮಂಗಳ ಯಾವುದರಿಂದಾಗುತ್ತದೆ ಎನ್ನುವುದು ತಿಳಿದಿಲ್ಲ. ವೃತ್ರವಧ ಎಂಬುದು ವಿಷಪ್ರಾಶನದಂತೆ ಅಮಂಗಳಕರ' ಎಂದು ಹೇಳಿ, ಒಡನೆಯೆ, 'ನಿಮಗೆ ಮಂಗಳವಾಗಲಿ, ಬೇಗನೆ ವೃತ್ರವಧೆಯ ಕಾರ್ಯವನ್ನು ದಧೀಚಿ ಮುನಿಯ ಸಹಾಯದಿಂದ ಸಾಧಿಸಿಕೊಳ್ಳಿರಿ' ಎನ್ನುವುದು ವ್ಯಾಹತವಾಗುವುದು.

---

೧. ಯದ್ಯಪಿ ಯೂಯಂ ಮೂರ್ಖಾ ವಿಷಯಾನಭಿಲಷಂತಃ ಸ್ವಭದ್ರಾಭದ್ರಂ ನ ಜಾನೀಥ । ತದಪ್ಯಹಂ ತು ವಿಜ್ಞಸ್ತಾನ್ ಕಥಂ ಯುಷ್ಮಭ್ಯಂ ದದಾಮಿ । ನ ಹಿ ಮಾತಾ ಸುತೇಭ್ಯಃ ಸ್ವಹಸ್ತೇನ ವಿಷಂ ದದಾತೀತ್ಯಾಹ ನೇತಿ ।....ತದಪಿ ಯದಿ ದೇಹಾರಾಮತ್ವಾದ್ ವಿಷಯಾನ್ ವಿನಾ ಮ್ರಿಯಧ್ವೇ ತರ್ಹಿ ತತ್ರೋಪಾಯಂ ಶೃಣುತೇತ್ಯಾಹ ಮಘವನ್ನಿತಿ । –ವಿಶ್ವನಾಥಃ ।

ಏವಂ ತತ್ವಕಥನೇನಾನೌಚಿತ್ಯಂ ಪರಿಹೃತ್ಯ ತದಭಿಪ್ರಾಯಮನುಸರನ್ನಾಹ ಮಘವನ್ನಿತಿ । –ಶ್ರೀಧರಃ

'ಮೂರ್ಖರು ತಮಗೆ ಹಿತವಲ್ಲದ್ದನ್ನು ಬೇಡಿದ ಮಾತ್ರಕ್ಕೆ ಅದನ್ನು ಕೊಟ್ಟುಬಿಡುವುದು ವಿವೇಕಿಗೆ ಉಚಿತವೆನಿಸುವುದಿಲ್ಲ. ಆದರೂ ಈ ತತ್ತ್ವವನ್ನು ಅವರಿಗೆ ಹೇಳಿಬಿಟ್ಟರೆ ಬಳಿಕ ಅವರು ಬೇಡಿದ್ದನ್ನು ಕೊಟ್ಟರೂ ಅನೌಚಿತ್ಯವಿರುವುದಿಲ್ಲ' ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ. ಆದರೆ, ಪರಮಾತ್ಮ 'ದೇವತೆಗಳೇ, ನೀವು ಈಗ ಐಹಿಕಭೋಗವನ್ನು ಪಡೆಯದಿದ್ದರೆ ಸತ್ತೇ ಹೋಗುತ್ತೇವೆ ಎನ್ನುವುದಾದರೆ ದಧೀಚಮುನಿಯ ಸಹಾಯದಿಂದ ವೃತ್ರವಧೆಯನ್ನು ಸಾಧಿಸಿಕೊಳ್ಳಿರಿ' ಎಂದು ತನಗೆ ಮನಸ್ಸಿಲ್ಲದಿದ್ದರೂ ಬೇರೆ ಉಪಾಯ ಕಾಣದೆ ಹೇಳುತ್ತಿದ್ದಾನೆ' ಎನ್ನುವುದು 'ಮಘವನ್ ಯಾತ ಭದ್ರಂ ವೋ' ನಿಮಗೆ ಮಂಗಳವಾಗಲಿ, ನಿಮ್ಮ ವೃತ್ರವಧೆಯ ಅಭಿಲಾಷೆ ಈಡೇರುವುದು ಎಂದು ಹೃತ್ಪೂರ್ವಕವಾಗಿ ವರ ನೀಡುವುದಕ್ಕೆ ವಿರುದ್ಧವೇ ಆಗುವುದು.

ಅದರಿಂದ ಭಗವಂತನ ಅಭಿಪ್ರಾಯವನ್ನು ಹೀಗೆ ಗ್ರಹಿಸಬೇಕು. 'ಜ್ಞಾನಿಗಳೂ ಕೂಡ ಕೆಲವೊಮ್ಮೆ ನಿಷಿದ್ಧಕಾಮನೆ ಮಾಡುವುದುಂಟು. ಅದನ್ನು ನಾನು ಪೂರೈಸುವುದಿಲ್ಲ. ಪೂರೈಸಿದರೆ ಅನುಚಿತವಾಗುತ್ತದೆ. ಅಶ್ವತ್ಥಾಮ ದುರ್ಯೋಧನನ ಹೆಂಡತಿಯಲ್ಲಿ ಸಂತತಿಯನ್ನು ಹುಟ್ಟಿಸಲು ಬಯಸಿದ. ಅದನ್ನು ನಾನು ಈಡೇರುವಂತೆ ಮಾಡಲಿಲ್ಲ. ಆದರೆ ನೀವೀಗ ವೃತ್ರವಧೆಯನ್ನು ಬಯಸಿದ್ದು ನಿಷಿದ್ಧಕಾಮನೆಯಲ್ಲ. ನನಗೆ ಅದು ಇಷ್ಟವೆ. ಅದರಿಂದ ದಧೀಚನ ಸಹಾಯದಿಂದ ನಿಮ್ಮ ಬಯಕೆ ಈಡೇರುವಂತೆ ಮಾಡುತ್ತೇನೆ, ಹೋಗಿರಿ, ನಿಮಗೆ ಮಂಗಳವಾಗುವುದು' ಎಂದು.

ಪ್ರಕೃತಶ್ಲೋಕದಲ್ಲಿ 'ದೇವತೆಗಳು ನೀವು ಮೂರ್ಖರು ನೀವು ಕೇಳಿದ್ದನ್ನು ನಾನು ಕೊಟ್ಟುಬಿಡುವುದಿಲ್ಲ' ಎಂದು ಭಗವಂತ ಹೇಳುತ್ತಿಲ್ಲ. 'ಮೂರ್ಖರು ಕೇಳಿದ್ದನ್ನೆಲ್ಲ ಕೊಡಬಾರದು' ಎಂದು ಮಾತ್ರ ಹೇಳುತ್ತಿದ್ದಾನೆ. ನೀವು ಕೇಳಿದ್ದನ್ನು ಕೊಟ್ಟುಬಿಡುತ್ತೇನೆ ಎಂದು ಮೊದಲೇ 'ಪ್ರೀತೋಽಽಹಂ ವಃ' ಕಿಂ ದುರಾಪಂ ಮಯಿ ಪ್ರಾಪ್ತೇ' ಎಂಬ ಮಾತುಗಳಿಂದ ಪರ್ಯಾಯವಾಗಿ ಹೇಳಿದ್ದಾನೆ.

'ಮಯ್ಯೇಕಾಂತಮತಿರ್ನಾನ್ಯನ್ಮತ್ತೋ ವಾಂಛತಿ ತತ್ತ್ವವಿತ್' 'ನನ್ನ ಏಕಾಂತಭಕ್ತರು ನನ್ನಿಂದ ನನಗೆ ಪ್ರಿಯವಾದುದನ್ನಲ್ಲದೆ ಬೇರೇನನ್ನೂ ಬಯಸುವುದಿಲ್ಲ' ಎಂಬಲ್ಲಿಯೂ ಬೇರೆ ವ್ಯಾಖ್ಯಾನಕಾರರು 'ಮತ್ತೋಽನ್ಯತ್' ನನಗಿಂತ ಬೇರೆಯಾದುದನ್ನು ಅಂದರೆ ವೃತ್ರವಧ ಮುಂತಾದುದನ್ನು ಬಯಸುವುದಿಲ್ಲ ಎಂದು ಅಪಾರ್ಥಮಾಡಿಕೊಂಡಿದ್ದಾರೆ. ಏಕಾಂತಭಕ್ತರು ಭಗವಂತನಿಗಿಂತ ಬೇರೆಯಾಗಿ ಅವನ ಸೇವೆಯನ್ನೂ ಬಯಸುತ್ತಾರೆ. ವೃತ್ರವಧೆ ಮಾಡಿ ಲೋಕವನ್ನು ಕಾಪಾಡುವುದೂ ಭಗವಂತನ ಸೇವೆಯೆ. ಅದು ಲೌಕಿಕವಿಷಯಸುಖವಲ್ಲ. ಭಗವಂತನಿಗೆ ಪ್ರಿಯವೇ ಆಗಿದೆ. ಅದರಿಂದ 'ನ ವೇದ ಕೃಪಣಃ' ಎಂದು ಮುಂತಾದ ಶ್ಲೋಕಗಳ ಅಭಿಪ್ರಾಯ ಹೀಗೆ—

ಯದಿ ಸೋಽಪಿ ತಥಾವಿಧಃ । ಅತ್ಯುತ್ತಮೋ ನ ಭವತಿ ಚೇತ್ । ಯುಷ್ಮತ್ ಕಾಮೋ ಮತ್ಪ್ರಿಯ ಏವ । ಅನ್ಯಥಾ ನ ದದ್ಯಾಮಿತಿ ಭಾವಃ ।

ವಿಷ್ಣೋಃ ಪ್ರಿಯಂ ಕಾಮಯಂತಿ ದೇವಾ ನೈವಾಪ್ರಿಯಂ ಕ್ವಚಿತ್ ।
ಯದ್ಯಪ್ರಿಯಂ ಕಾಮಯಂತಿ ನ ರಾತೀಶೋ ಹಿತೋ ಹಿ ಸಃ ॥

ಇತಿ ತಂತ್ರಭಾಗವತೇ ।

'ಯದಿ ಸೋಽಪಿ ತಥಾವಿಧಃ' ಎಂದರೆ ನನಗೆ ಅಪ್ರಿಯವಾದುದನ್ನು ಅಂದರೆ ನಿಷಿದ್ಧಕಾಮನೆಯನ್ನು ಬಯಸುವವನು ಅತ್ಯುತ್ತಮಭಕ್ತನಲ್ಲದಿದ್ದರೆ ಅದನ್ನು ಕೊಡುತ್ತೇನೆ. ಅತ್ಯುತ್ತಮ ಭಕ್ತನಾಗಿದ್ದರೆ ಕೊಡುವುದಿಲ್ಲ ಎಂದರ್ಥ. ಈಗ ನೀವು ಬಯಸಿದ್ದು ನನಗೆ ಪ್ರಿಯವೇ ಆಗಿದೆ. ಹಾಗಿಲ್ಲದಿದ್ದರೆ, ನಿಷಿದ್ಧವಾಗಿದ್ದರೆ ನಾನು ಕೊಡಲಾರೆ ಎಂದು ಅಭಿಪ್ರಾಯ. ವೈದ್ಯದೃಷ್ಟಾಂತ ನೀಡಿದುದರ ಅಭಿಪ್ರಾಯ ಹೀಗೆ–

ವಿಷ್ಣುವಿಗೆ ಪ್ರಿಯವಾದುದನ್ನೇ ದೇವತೆಗಳು ಬಯಸುತ್ತಾರೆ. ಅಪ್ರಿಯವಾದುದನ್ನು ಎಂದೂ ಬಯಸುವುದಿಲ್ಲ. ಅಪ್ರಿಯವಾದುದನ್ನು ಬಯಸಿದರೆ ಭಗವಂತ ನೀಡುವುದಿಲ್ಲ. ಏಕೆಂದರೆ ರೋಗಿಗೆ ವೈದ್ಯನಂತೆ ಆತ ದೇವತೆಗಳಿಗೆ ಹಿತಕಾರಿಯಾಗಿರುತ್ತಾನೆ ಎಂದು ತಂತ್ರಭಾಗವತದಲ್ಲಿ ಹೇಳಿದೆ.

* * *

ವಜ್ರಾಯುಧ ನಿರ್ಮಾಣ ಮಾಡಲು ದಧೀಚಿ ಮುನಿಯ ಮೈಯ ಎಲುಬನ್ನು ಅವನಿಂದ ಬೇಡಿ ಪಡೆಯಿರೆಂದು ಭಗವಂತ ದೇವತೆಗಳಿಗೆ ಆದೇಶ ನೀಡುತ್ತಾನೆ.

ಮಘವನ್ ಯಾತ ಭದ್ರಂ ವೋ ದಧ್ಯಂಚಮೃಷಿಸತ್ತಮಮ್ ।
ವಿದ್ಯಾವ್ರತತಪಃಸಾರಂ ಗಾತ್ರಂ ಯಾಚತ ಮಾಚಿರಮ್ ॥ ೪೧ ॥

ದೇವೇಂದ್ರ, ನೀವು ಶ್ರೇಷ್ಠಋಷಿಯಾದ ದಧೀಚನ ಬಳಿಗೆ ಹೋಗಿರಿ. ಮಂತ್ರವ್ರತ ತಪಸ್ಸುಗಳಿಂದ ಅವನ ಶರೀರ ಬಲು ದೃಢವಾಗಿದೆ ಅದನ್ನು ಬೇಗನೆ ಅವನಲ್ಲಿ ಬೇಡಿರಿ. ನಿಮಗೆ ಶುಭವಾಗಲಿ.

ಇಲ್ಲಿ ದೇವೋತ್ತಮರಾದ ಇಂದ್ರಾದಿಗಳು ಒಬ್ಬ ಸಾಮಾನ್ಯ ಋಷಿಯನ್ನು ಬೇಡಿದರೆ ದೇವತೆಗಳಿಗಿಂತ ಋಷಿಗಳು, ಶ್ರೇಷ್ಠರು, ಋಷಿಗಳಲ್ಲಿ ದಧೀಚ ಶ್ರೇಷ್ಠನೆಂಬ ಭಾವನೆ ಬರುವುದು ಸಹಜ. ಪರಮಾತ್ಮ ದೇವತೆಗಳಿಗೆ ಋಷಿಯನ್ನು ಯಾಚಿಸಲು ಏಕೆ ಆದೇಶ ನೀಡಿದ ಎಂಬ ಸಮಸ್ಯೆಗೆ ಇದು ಉತ್ತರ–

ಸಮರ್ಥಾ ಅಪಿ ಯಾಚಂತೇ ದೇವಾ ಮುನ್ಯಾದಿಕಾನ್ ಕ್ವಚಿತ್ ।
ಆಜ್ಞಯೈವ ಹರೇಸ್ತೇಷಾಂ ಯಶೋಽರ್ಥಮಪಿ ನಾನ್ಯಥಾ ॥

ಇತಿ ಚ ।

ದೇವತೆಗಳು ಋಷಿಗಳಿಗಿಂತ ರಾಜರಿಗಿಂತ ಹೆಚ್ಚು ಶಕ್ತರಾಗಿದ್ದರೂ ಹರಿಯ ಆಜ್ಞೆಯಿಂದ ಮತ್ತು ಋಷಿಗಳಿಗೆ ರಾಜರಿಗೆ ಕೀರ್ತಿ ತಂದು ಕೊಡುವ ಉದ್ದೇಶದಿಂದಲೇ ಕೆಲವೊಮ್ಮೆ ಋಷಿಗಳನ್ನೂ ರಾಜರನ್ನೂ ಬೇಡುತ್ತಾರೆ ಹೊರತು ಅವರು ದೇವತೆಗಳನ್ನು ಮೀರಿ ಹೆಚ್ಚು ಶಕ್ತರೆಂದಲ್ಲ ಎಂದೂ ತಂತ್ರಭಾಗವತದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ
ನವಮೋಽಧ್ಯಾಯಃ ॥

—o—

ಅಧ್ಯಾಯ-೧೦

ಅಧ್ಯಾಯಸಾರಾಂಶ

ದೇವತೆಗಳು ದಧೀಚಮುನಿಯನ್ನು ಕೇಳಿಕೊಂಡರು. ಆತ ಲೋಕೋಪಕಾರಕ್ಕಾಗಿ ಶರೀರತ್ಯಾಗ ಮಾಡಿ ತನ್ನ ಅಸ್ಥಿಯನ್ನು ದೇವತೆಗಳಿಗೆ ಒಪ್ಪಿಸಿದ. ಆ ಅಸ್ಥಿಯಿಂದ ವಿಶ್ವಕರ್ಮ ವಜ್ರಾಯುಧ ನಿರ್ಮಿಸಿ ಕೊಟ್ಟ. ಆ ಆಯುಧದಲ್ಲಿಯೂ ಇಂದ್ರನಲ್ಲಿಯೂ ಶ್ರೀಹರಿಯ ತೇಜಸ್ಸು ತುಂಬಿಕೊಂಡಿತು. ಇಂದ್ರ ಐರಾವತವನ್ನೇರಿ ದೇವಸೇನೆಯೊಂದಿಗೆ ಹೊರಟು ವೃತ್ರಾಸುರನೊಂದಿಗೆ ಯುದ್ಧ ಸಾರಿದ. ಈಗಿನ ವೈವಸ್ವತ ಮನ್ವಂತರದ ಮೊದಲನೆ ಚತುರ್ಯುಗದ ತ್ರೇತಾಯುಗದ ಆದಿಯಲ್ಲಿ ನರ್ಮದಾ ನದೀತೀರದಲ್ಲಿ ಭಯಂಕರವಾದ ದೇವಾಸುರಸಂಗ್ರಾಮ ನಡೆಯಿತು. ನಮುಚಿ ಶಂಬರ ಮುಂತಾದ ದಾನವರು ಎಲ್ಲರೂ ಸೋತು ರಣರಂಗದಲ್ಲಿ ತಮ್ಮ ನಾಯಕನಾದ ವೃತ್ರಾಸುರನೊಬ್ಬನನ್ನೇ ಬಿಟ್ಟು ಪಲಾಯನ ಮಾಡತೊಡಗಿದರು. ಆಗ ವೃತ್ರಾಸುರ ಅವರನ್ನು ತಡೆದು ಹೇಳಿದ 'ಹುಟ್ಟಿದವನಿಗೆ ಸಾವು ನಿಶ್ಚಿತ. ಅದಕ್ಕೆ ಹೆದರದೆ ಧೀರತನದಿಂದ ಕಾದಾಡಿ ವೀರೋಚಿತವಾದ ಮರಣ ಹೊಂದಿದರೆ ವೀರಸ್ವರ್ಗ ಸಿಗುವುದು.

* * *

ದೇವತೆಗಳು ವಜ್ರಾಯುಧ ನಿರ್ಮಾಣಕ್ಕಾಗಿ ದಧೀಚ ಮುನಿಯ ಬೆನ್ನಲುಬನ್ನು ಅವನಿಂದ ಬೇಡಿ ಪಡೆಯುವ ಉದ್ದೇಶದಿಂದ ಅವನಲ್ಲಿ 'ದಾನಿಯ ಸಂಕಟವನ್ನು ಯಾಚಕನು ಅರ್ಥಮಾಡಿಕೊಳ್ಳದಿದ್ದರೂ ಯಾಚಕನ ಸಂಕಟವನ್ನು ದಾನಿ ಅರಿತುಕೊಳ್ಳುತ್ತಾನೆ' ಎಂದು ತಮ್ಮನ್ನು ತಾವು ಹಳಿದು ಕೊಳ್ಳುತ್ತಾರೆ, ಮುನಿಯನ್ನು ಬೇಡುತ್ತಾರೆ.

ನೂನಂ ಸ್ವಾರ್ಥಪರೋ ಲೋಕೋ ನ ವೇದ ಪರಸಂಕಟಮ್ ।
ಯದಿ ವೇದ ನ ಯಾಚೇತ ನೇತಿ ನಾಹ ಯದೀಶ್ವರಃ ॥ ೬ ॥

ಲೋಕದಲ್ಲಿ ಎಲ್ಲರೂ ತಮ್ಮ ಸುಖದ ಬಗ್ಗೆ ಮಾತ್ರ ಆಲೋಚನೆ ಮಾಡುವವರೇ ಹೊರತು ಇನ್ನೊಬ್ಬರ ಸಂಕಟವನ್ನು ಅರಿತುಕೊಳ್ಳುವುದಿಲ್ಲ. ಅರಿತುಕೊಂಡರೆ ಬೇಡುವವರು ಯಾರೂ ಬೇಡಲಾರರು. ಕೊಡುವವರೂ ಇಲ್ಲವೆನ್ನಲಾರರು.

ಯಾಚಕ ದಾನಿಯ ಸಂಕಟವನ್ನು ಅರಿಯದಿದ್ದರೂ ದಾನಿ ಯಾಚಕನ ಸಂಕಟವನ್ನು ಅರಿತು ದಾನ ಮಾಡಬೇಕು ಎಂಬ ಧರ್ಮವನ್ನು ದೇವತೆಗಳು ದಧೀಚ ಋಷಿಗೆ ಉಪದೇಶ ಮಾಡಿದರು ಹೊರತು ನಾವು ನಿನ್ನ ಸಂಕಟವನ್ನು ಅರಿಯದ ಕ್ರೂರ ಜಂತುಗಳು ಎಂದು ತಮ್ಮನ್ನು ಹಳಿದುಕೊಳ್ಳುತ್ತಿಲ್ಲ. ಇದು ಋಷಿಗೂ ಗೊತ್ತು. ಅದರಿಂದಲೇ ಆತ,

'ಧರ್ಮಂ ವಃ ಶ್ರೋತುಕಾಮೇನ ಯೂಯಂ ವೈ ಪ್ರತ್ಯುದಾಹೃತಾಃ'

ಎನ್ನುತ್ತಾನೆ. ಬೇರೆ ವ್ಯಾಖ್ಯಾನಕಾರರು ಇದನ್ನು ಋಷಿಯು ಆಡಿದ ವ್ಯಂಗ್ಯದ ಮಾತು ಎಂದಿದ್ದಾರೆ' 'ದೇವತೆಗಳೇ, ನೀವು ನಿಜವಾಗಿಯೂ ನನ್ನ ಸಂಕಟ ಅರಿಯದ ಕ್ರೂರಮೃಗಗಳೇ 'ದಾನ ಮಾಡದಿದ್ದರೆ ನೀನೂ ಯಾಚಕರಾದ ನಮ್ಮ ಸಂಕಟ ವರಿಯದ ಪಶುವೆನಿಸುವಿ' ಎಂದು ಚಮತ್ಕಾರವಾಗಿ ನುಡಿದು ನನ್ನನ್ನು ನಿರುತ್ತರ ಗೊಳಿಸುತ್ತಿರುವಿರಿ' ಎಂದು ದಧೀಚಿ ಹೇಳುತ್ತಿದ್ದಾನೆ ಎನ್ನುತ್ತಾರೆ.

ವಸ್ತುತಃ, ದೇವತೆಗಳು ತಮ್ಮನ್ನು ಕ್ರೂರಜಂತುಗಳೆಂದು ಹಳಿದುಕೊಳ್ಳುತ್ತಿರುವಂತೆ ತೋರಿದರೂ, ಋಷಿಗಿಂತ ತಾವು ಕಡಿಮೆಯವರೆಂದು ಪರ್ಯಾಯವಾಗಿ ಹೇಳಿದಂತೇ ತೋರಿಕೊಂಡರೂ, ಇದು ಮಗುವಿನ ಮುಂದೆ ತಂದೆತಾಯಿಗಳು ತಾವು ದುರ್ಬಲರೆಂದು ತೋರಿಕೊಳ್ಳುವಂತೇ ಹೊರತು ವಾಸ್ತವವೇನಲ್ಲ ಎನ್ನುವುದು, ತಂತ್ರಮಾಲಾಗ್ರಂಥದಲ್ಲಿ ಉಕ್ತವಾಗಿದೆ–

ಆಜ್ಞಯೈವ ಮಹಾವಿಷ್ಣೋಃ ಕಾರ್ಯಾರ್ಥಮಪಿ ಚ ಕ್ವಚಿತ್ ।
ನೀಚಾನಪಿ ಚ ಯಾಚಂತೇ ಸ್ವಾತ್ಮನೋ ಗುಣವತ್ತರಾಃ ॥

ನೀಚವಾಕ್ಯಂ ವದೇಯುಶ್ಚ ಸುರಾ ನೈತಾವತಾ ಕ್ವಚಿತ್ ।
ತೇಜಃಕ್ಷತಿರ್ಭವೇದೇಷಾಂ ಜನಕಸ್ಯ ಯಥಾರ್ಭಕೇ ॥
ಇತಿ ತಂತ್ರಮಾಲಾಯಾಮ್ ।

'ದೇವತೆಗಳು ತಾವು ಋಷಿಗಳಿಗಿಂತ ಹೆಚ್ಚು ಗುಣಸಂಪನ್ನರೇ ಆಗಿದ್ದರೂ ಮಹಾ ವಿಷ್ಣುವಿನ ಆಜ್ಞೆಯಿಂದಲೂ ತಮಗೆ ಕಾರ್ಯವಾಗಬೇಕಾಗಿರುವುದರಿಂದಲೂ ಕೆಲ ವೊಮ್ಮೆ ತಮಗಿಂತ ಕೆಳಗಿನವರಾದ ಋಷಿಗಳನ್ನೂ ಬೇಡುತ್ತಾರೆ, ತಮ್ಮನ್ನು ಹಳಿದು

ಕೊಳ್ಳುತ್ತಾರೆ, ಇಷ್ಟರಿಂದಲೇ ಅವರ ಮಹತ್ವವೆಂದೂ ಕಡಿಮೆಯಾಗುವುದಿಲ್ಲ, ತಂದೆ ಮಗುವಿನಲ್ಲಿ ಬೇಡುವಂತೆಯೇ ಇದು' ಎಂದು ತಂತ್ರಮಾಲಾಗ್ರಂಥದಲ್ಲಿ ಉಕ್ತವಾಗಿದೆ.

ಹಿಂದೇ 'ಸಮರ್ಥಾ ಅಪಿ ಯಾಚಂತೇ ದೇವಾಃ' ಎಂದು ತಂತ್ರಭಾಗವತ ವಚನದಿಂದ ದೇವತೆಗಳು ಮುನಿಗಳನ್ನು ಬೇಡುವುದರ ರಹಸ್ಯವನ್ನು ಹೇಳಿಯಾಗಿತ್ತು. ತಿರುಗಿ ಇಲ್ಲಿ ತಂತ್ರಮಾಲಾ ವಚನದಿಂದಲೂ ಅದೇ ರಹಸ್ಯವನ್ನು ಹೇಳುತ್ತಿದ್ದಾರೆ. ಇದು ದಾರ್ಢ್ಯಕ್ಕಾಗಿ. ಎರಡು ಗ್ರಂಥಗಳ ಸಂಮತಿಯಿಂದ ಮತ್ತು ತಂದೆ ಮಗು ದೃಷ್ಟಾಂತದಿಂದ ಪ್ರಕೃತ ಪ್ರಮೇಯ ದೃಢವಾಗುತ್ತದೆ ಎಂದು ಅಭಿಪ್ರಾಯ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ
ದಶಮೋಽಧ್ಯಾಯಃ ॥

—o—

ಅಧ್ಯಾಯ-೧೧

ಅಧ್ಯಾಯಸಾರಾಂಶ

ದೈತ್ಯರು ಇನ್ನೂ ಪಲಾಯನ ಮಾಡುತ್ತಲೇ ಇದ್ದರು. ದೇವತೆಗಳು ಅವರನ್ನು ಅಟ್ಟಿಸಿಕೊಂಡು ಹೋಗಿ ಬಡಿಯುತ್ತಿದ್ದರು. ವೃತ್ರ ಕೋಪಗೊಂಡು ದೇವತೆಗಳಿಗೆ 'ಹೆದರಿ ಓಡುವವರ ಮೇಲೆ ಇದೇನು ನಿಮ್ಮ ಪೌರುಷ? ನಿಮ್ಮಲ್ಲಿ ಪರಾಕ್ರಮವಿದ್ದರೆ ನನ್ನ ಮುಂದೆ ತೋರಿಸಿರಿ' ಎಂದು ಗರ್ಜಿಸಿದ. ಇಂದ್ರನೆಸೆದ ಗದೆಯನ್ನು ಎಡಗೈಯಿಂದ ಲೀಲಾಜಾಲವಾಗಿ ಹಿಡಿದು ಆ ಗದೆಯಿಂದಲೆ ಐರಾವತದ ಕುಂಭಸ್ಥಳಕ್ಕೆ ಹೊಡೆದ. ಆನೆ ಜರ್ಝರಿತವಾಗಿ ತಲೆ ಒಡೆದು ರಕ್ತ ಸುರಿಸಿತು. ಇಂದ್ರ ತನ್ನ ಅಮೃತಹಸ್ತದಿಂದ ಸವರಿದಾಗ ಆನೆ ಚೇತರಿಸಿಕೊಂಡಿತು. ವೃತ್ರಾಸುರನೆಂದ, 'ಇಂದ್ರ, ನಿನ್ನ ಎದೆಯನ್ನು ಶೂಲದಿಂದ ಒಡೆದು ನಮ್ಮಣ್ಣನ ಋಣ ಪರಿಹರಿಸಿಕೊಳ್ಳುವೆನು. ಅಥವಾ ನೀನು ವಜ್ರಾಯುಧದಿಂದ ನನ್ನನ್ನು ಕೊಂದರೂ ಸರಿಯೆ. ದಿವ್ಯವಾದ ಜ್ಞಾನಿಗಳ ಲೋಕ ನನಗೆ ಲಭಿಸುವುದು. ವಜ್ರಾಯುಧವನ್ನು ಪ್ರಯೋಗಿಸು, ಅದು ನಿನ್ನ ಗದೆಯಂತೆ ವ್ಯರ್ಥವಾಗಲಾರದು. ದಧೀಚನ ತಪಸ್ಸು ಹರಿಯ ತೇಜಸ್ಸುಗಳು ಅದರಲ್ಲಿ ತುಂಬಿವೆ. ಶ್ರೀಹರಿ ಯಾರ ಪಕ್ಷದಲ್ಲಿರುವನೋ ಅವನ ಪಕ್ಷಕ್ಕೆ ಜಯವಾಗುವುದು ಖಚಿತ. ನಾನು ಪ್ರಭು ಸಂಕರ್ಷಣನ ಧ್ಯಾನಮಾಡುತ್ತ ಶರೀರತ್ಯಾಗ ಮಾಡಿ ಅವನ ಲೋಕವನ್ನು ಸೇರುತ್ತೇನೆ. ಪ್ರಭು ಶ್ರೀಹರಿ, ನಾ ನಿನ್ನ ದಾಸಾನುದಾಸ. ನನಗೆ ಸದಾ ನಿನ್ನ ಸ್ಮರಣೆಯನ್ನು ನೀಡು. ನಿನ್ನ ಭಕ್ತರ ಸಂಗ ನೀಡು.'

* * *

ಅಧ್ಯಾಯ-೧೨

ಅಧ್ಯಾಯಸಾರಾಂಶ

ವೃತ್ರನಿಗೆ ಇಂದ್ರನನ್ನು ಪರಾಭವಗೊಳಿಸುವುದಕ್ಕಿಂತಲೂ ಅವನ ಕೈಯಲ್ಲಿ ಮರಣ ಹೊಂದುವುದೆ ಹೆಚ್ಚಿನ ಲಾಭ ಎಂಬ ಭಾವನೆ ಇದ್ದಿತು. ಆತ ಶೂಲ ಹಿಡಿದು ಇಂದ್ರನ ಮೇಲೇರಿ ಹೋದ. ಇಂದ್ರ ವಜ್ರಾಯುಧದಿಂದ ಶೂಲವನ್ನು ತುಂಡರಿಸಿದ. ಜೊತೆಗೆ ಶೂಲವನ್ನು ಹಿಡಿದ ಬಲತೋಳನ್ನೂ ಕಡಿದ. ಈಗ ವೃತ್ರ ಎಡಗೈಯಿಂದ ಪರಿಘಾಯುಧವನ್ನೆತ್ತಿ ಇಂದ್ರನ ದವಡೆಗೆ ಹೊಡೆದ. ಆಗ ಇಂದ್ರನ ಕೈಯಿಂದ ವಜ್ರಾಯುಧ ಜಾರಿ ಬಿದ್ದಿತು. ಅದನ್ನು ಎತ್ತಿಕೊಳ್ಳಲು ನಾಚಿದ ಇಂದ್ರನಿಗೆ ವೃತ್ರ ನುಡಿದ, 'ನಾಚಿಕೊಳ್ಳಬೇಡ. ಯುದ್ಧದಲ್ಲಿ ಜಯಾಪಜಯಗಳು ಯಾರಿಗೂ ಸ್ಥಿರವಲ್ಲ. ಎಲ್ಲವೂ ಹರಿಯ ಅಧೀನವೆಂದು ನಾವು ನಿರ್ವಿಕಾರರಾಗಿರಬೇಕು. ನಾನು ನೋಡು ನನ್ನ ಆಯುಧ ಬಲತೋಳು ಹೋದರೂ ಹರೀಚ್ಛೆಯೆಂದು ತಿಳಿದು ನನ್ನ ಕರ್ತವ್ಯವೆಂದು ಯುದ್ಧ ಮಾಡುತ್ತಿಲ್ಲವೆ?' ಇಂದ್ರನೆಂದ 'ನೀನು ಜೀವನ್ಮುಕ್ತನಾಗಿರುವೆ. ಜಾತಿಯಲ್ಲಿ ಅಸುರನಾದರೂ ಜ್ಞಾನಭಕ್ತಿಗಳು ನಿನ್ನಲ್ಲಿ ತುಂಬಿವೆ.' ಹೀಗೆ ಹೇಳಿ ಆ ಪರಿಘಾಯುಧವನ್ನೂ ಅದನ್ನು ಹಿಡಿದಿದ್ದ ಎಡತೋಳನ್ನೂ ವಜ್ರಾಯುಧದಿಂದ ಕತ್ತರಿಸಿದ. ಈಗ ವೃತ್ರಾಸುರ ಬಾಯಿ ತೆರೆದು ಐರಾವತಸಮೇತ ಇಂದ್ರನನ್ನು ನುಂಗಿಬಿಟ್ಟ. ನಾರಾಯಣವರ್ಮ ಮಂತ್ರಬಲದಿಂದ ಇಂದ್ರ ವೃತ್ರನ ಉದರದೊಳಗೆ ಜೀವಂತನಾಗೇ ಇದ್ದು ವಜ್ರಾಯುಧದಿಂದ ಹೊಟ್ಟೆ ಬಗಿದು ಹೊರ ಬಂದ. ಬಳಿಕ ವೃತ್ರನಿಗೆ ಕಡಿದು ಹೋದ ಕೈಗಳು ತಿರುಗಿ ಬಂದುವು. ಇಂದ್ರ ವೃತ್ರನೊಂದಿಗೆ ಸಂಧಾನ ಮಾಡಿಕೊಂಡ. ಆಗ ಹಸಿಯಾದ ಪದಾರ್ಥದಿಂದಾಗಲಿ ಒಣಗಿದ ಪದಾರ್ಥದಿಂದಾಗಲಿ ನನ್ನನ್ನು ನೀನು ವಧಿಸುವಂತಿಲ್ಲ ಎಂದು ವೃತ್ರ ಶರತ್ತು ಹಾಕಿದ್ದ. ಅದರಿಂದ ಸಮುದ್ರದ ನೊರೆ ಹಸಿಯೂ ಅಲ್ಲ ಒಣಗಿದ್ದೂ ಅಲ್ಲ ಎಂದು ಅದರೊಳಗೆ ಭಗವಂತನ ತೇಜಸ್ಸಿನಿಂದ ಯುಕ್ತವಾದ ವಜ್ರಾಯುಧವನ್ನು ಯೋಗಬಲದಿಂದ

ಪ್ರವೇಶ ಮಾಡಿಸಿ ಆ ನೊರೆಯಿಂದ ವೃತ್ರನ ಶಿರಸ್ಸನ್ನು ಭೇದಿಸಿದ ಇಂದ್ರ. ಆಗ ವೃತ್ರನ ಶರೀರದಿಂದ ವೃತ್ರನ ಆತ್ಮಜ್ಯೋತಿ ಹೊರಗೆ ಬಂದು ವಿದ್ಯಾಧರಲೋಕವನ್ನು ಸೇರಿತು.

* * *

ಬ್ರಹ್ಮಾದಿಗಳಿಗೆ ಪ್ರೇರಕನಾದ ಪರಮಾತ್ಮನನ್ನು ಬ್ರಹ್ಮಾದಿಗಳಂತೆಯೇ ಅವನೂ ಒಬ್ಬ ಜೀವನೆಂದು ತಿಳಿಯುವವನು ಅಜ್ಞಾನಿ, ಮಹಾಪಾಪಿ ಎಂದು ವೃತ್ರಾಸುರ ದೇವೇಂದ್ರನಿಗೆ ಹೇಳುತ್ತಾನೆ.

ಪುರುಷಃ ಪ್ರಕೃತಿರ್ವ್ಯಕ್ತಮಾತ್ಮಭೂತೇಂದ್ರಿಯಾಶಯಾಃ ।
ಶಕ್ನುವಂತ್ಯಸ್ಯ ಸರ್ಗಾದೌ ನ ವಿನಾ ಯದನುಗ್ರಹಮ್ ।
ಅವಿದ್ವಾನೇವಮಾತ್ಮಾನಂ ಮನ್ಯತೇಽನೀಶಮೀಶ್ವರಮ್ ॥ ೧೧ ॥

ಬ್ರಹ್ಮ ಲಕ್ಷ್ಮಿ ಶೇಷ ವಾಯು ಭೂತಾಭಿಮಾನಿ ಇಂದ್ರಿಯಾಭಿಮಾನಿಗಳು ಇಂದ್ರ ಇವರು ಯಾರೂ ಯಾರ ಅನುಗ್ರಹವಿಲ್ಲದೆ ಸೃಷ್ಟ್ಯಾದಿ ಕಾರ್ಯಗಳಲ್ಲಿ ಸಮರ್ಥರಾಗುವುದಿಲ್ಲವೊ ಸರ್ವಾಂತರ್ಯಾಮಿಯಾದ ಆ ಭಗವಂತನನ್ನು ಅಸಮರ್ಥನಾದ ಜೀವನಿಂದ ಅಭಿನ್ನನೆಂದು ತಿಳಿಯುತ್ತಾನೆ, ಅನ್ಯಥಾಜ್ಞಾನಿ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು ಪ್ರಕೃತ್ಯಾದಿಗಳು ಜಡಪದಾರ್ಥಗಳೆಂದಿಟ್ಟುಕೊಂಡು ಅವುಗಳಿಗೆ ಪರಮಾತ್ಮ ಪ್ರೇರಕನೆಂದು ಹೇಳಿ 'ಮನ್ಯತೇಽನೀಶಮೀಶ್ವರಮ್' ಎಂದರೆ ಅಸ್ವತಂತ್ರನಾದ ಜೀವನೇ ಅದೃಷ್ಟದ್ವಾರಾ ಸೃಷ್ಟ್ಯಾದಿಗಳನ್ನು ಮಾಡುವುದರಿಂದ ಅವನು ಸ್ವತಂತ್ರನೆಂದು ಮೀಮಾಂಸಕರು ತಿಳಿಯುತ್ತಾರೆ, ಅವರು ಅಜ್ಞರು ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಮೀಮಾಂಸಕರು 'ತಸ್ಮೈ ನಮಃ ಕರ್ಮಣೇ' ಎಂದು ಕರ್ಮಜನ್ಯವಾದ ಅದೃಷ್ಟಕ್ಕೇ ಈಶ್ವರನ ಸ್ಥಾನವನ್ನು ನೀಡಿದ್ದಾರೆ ಹೊರತು ಕರ್ಮಪರತಂತ್ರನಾದ ಜೀವನನ್ನು ಸ್ವತಂತ್ರನೆಂದು ಹೇಳುವುದಿಲ್ಲ. ಸ್ವತಂತ್ರನೊಬ್ಬ ಬೇಡವೆನ್ನುತ್ತಾರೆ. ವಿಷ್ಣುವೂ ದಶಾವತಾರಗಳನ್ನೆತ್ತಿ ಬಳಲುತ್ತಾನೆ, ಬ್ರಹ್ಮನೂ ಕುಂಬಾರನಂತೆ ಸೃಷ್ಟಿಕಾರ್ಯದಲ್ಲಿ ನಿರತನಾಗುತ್ತಾನೆ. ರುದ್ರನೂ ಭಿಕ್ಷಾಟನ

೧. ನನು ಸ್ವಕರ್ಮದ್ವಾರಾ ಜೀವ ಏವ ಸೃಷ್ಟ್ಯಾದಿಹೇತುರಿತಿ ಮೀಮಾಂಸಕಾ ಮನ್ಯಂತೇ । ತತ್ರಾಹ । ಏವಮವಿದ್ವಾನ್ ಅನೀಶಮೇವಾತ್ಮಾನಮೀಶ್ವರಂ ಸ್ವತಂತ್ರಂ ಮನ್ಯತೇ । —ಶ್ರೀಧರಃ

ಇಮಂ ಪರಮಪುರುಷಾಯತ್ತೋತ್ಪತ್ಯಾದಿಮಂತಂ ತತ್‌ಪರತಂತ್ರಮತ ಏವಾನೀಶ್ವರಮಾತ್ಮಾನಮವಿದ್ವಾನಜಾನನ್ ಸ್ವಾತ್ಮಾನಮೀಶ್ವರಂ ಮನ್ಯತೇ । ಜನ ಇತಿ ಶೇಷಃ । —ವೀರರಾಘವಃ

ಮಾಡುತ್ತಾನೆ, ಸೂರ್ಯನೂ ಆಕಾಶದಲ್ಲಿ ನಿರಂತರ ಚಲಿಸುತ್ತಾನೆ, ಎಲ್ಲರೂ ಕರ್ಮಾಧೀನರಾಗಿ ಹಾಗೆ ಮಾಡುತ್ತಾರೆ ಎಂದು ಭರ್ತೃಹರಿ ಮೀಮಾಂಸಕಮತವನ್ನು ವರ್ಣಿಸಿದ್ದಾನೆ. ಮೀಮಾಂಸಕ ಮತದಲ್ಲಿ ಯಜ್ಞವು ದೇವತೆಗಳ ತೃಪ್ತಿಗಾಗಿ ಎಂದು ಒಪ್ಪಿಲ್ಲ. ಆದರೂ ಸ್ತೋತ್ರಪಾಠಾದಿಗಳು ದೇವತೆಗಳ ತೃಪ್ತಿಗಾಗಿ ಎಂದು ಒಪ್ಪಲಾಗಿದೆ. ಅದರಿಂದ ದೇವತೆಗಳಿಲ್ಲ ಎಂದು ಅವರು ಹೇಳುವುದಿಲ್ಲ. ದೇವತೆಗಳೂ ಕರ್ಮಾಧೀನರೆನ್ನುತ್ತಾರೆ. ಅಷ್ಟರಿಂದಲೇ ಕರ್ಮದ್ವಾರಾ ಜೀವ ಸ್ವತಂತ್ರನೆನಿಸುವುದಿಲ್ಲ. ಅವನು ಕರ್ಮಾಧೀನನೆ. ಅದರಿಂದ 'ಅನೀಶಮೀಶ್ವರಂ ಮನ್ಯತೇ' ಎನ್ನುವುದು ಮೀಮಾಂಸಕರ ಕುರಿತು ಎನ್ನುವುದು ಸರಿಯಲ್ಲ. ಜೀವಾಭೇದವನ್ನು ಈಶ್ವರನಿಗೆ ಹೇಳುವ ಅದ್ವೈತಿಗಳ ಕುರಿತು ಎನ್ನಬೇಕು. ಅವರನ್ನೆ ಭಾಗವತ 'ಅವಿದ್ವಾನ್' ಎಂದು ನಿಂದಿಸಿದೆ.

ವೀರರಾಘವವ್ಯಾಖ್ಯಾನದಲ್ಲಿ 'ಜೀವ ಪರಮಾತ್ಮನಿಂದಲೇ ಉತ್ಪತ್ತ್ಯಾದಿಗಳನ್ನು ಹೊಂದುತ್ತ ಪರತಂತ್ರನಾಗಿದ್ದರೂ ಅದನ್ನು ಅರಿಯದೆ ತಾನು ಈಶ್ವರ, ಸ್ವತಂತ್ರ ಎಂದುಕೊಳ್ಳುತ್ತಾನೆ' ಎಂದು ಹೇಳಿದ್ದಾರೆ. ಇದೂ ಸರಿಯಲ್ಲ. ಜೀವನು ತಾನು ಪರತಂತ್ರನೆಂಬುದನ್ನು ಮರೆತು ತನ್ನ ಎಲ್ಲಾ ಕಾರ್ಯಗಳಲ್ಲಿ ತಾನು ಸ್ವತಂತ್ರನೆಂದು ಅಭಿಮಾನ ಪಡುತ್ತಾನೆ ನಿಜ. ಆದರೆ ಭಾಗವತದಲ್ಲಿ ಪ್ರಸ್ತುತವಾದುದು ಸೃಷ್ಟ್ಯಾದಿಕಾರ್ಯ– 'ಶಕ್ನುವಂತ್ಯಸ್ಯ ಸರ್ಗಾದೌ ನ ವಿನಾ ಯದನುಗ್ರಹಾತ್' ಎಂದು. ಯಾವ ಜೀವನೂ ಬ್ರಹ್ಮಾಂಡ ಸೃಷ್ಟಿಲಯಗಳನ್ನು ನಾನು ಸ್ವತಂತ್ರವಾಗಿ ಮಾಡುತ್ತೇನೆ ಎಂದು ಅಭಿಮಾನಪಡುವುದಿಲ್ಲ. ಅದರಿಂದ ಬ್ರಹ್ಮಾಂಡಸೃಷ್ಟಿಲಯ ಗಳನ್ನು ಮಾಡುವ ಬ್ರಹ್ಮರುದ್ರಾದಿಗಳು ಸ್ವತಂತ್ರಪರಮಾತ್ಮನಿಂದ ಅಭಿನ್ನರೆಂದು ಹೇಳುವ ಅದ್ವೈತಮತವನ್ನೇ 'ಮನ್ಯತೇಽನೀಶಮೀಶ್ವರಂ' ಎಂದು ಹೇಳಿದೆ ಎನ್ನಬೇಕು.

ಮನ್ಯತೇಽನೀಶಮೀಶ್ವರಮ್ ।

ಅನೀಶಜೀವರೂಪೇಣ ಪರಮಾತ್ಮಾನಮೀಶ್ವರಮ್ ।
ಯೇ ಮನ್ಯಂತೇ ತಾನ್ ಸಮೀಕ್ಷ್ಯ ಸ್ನೇಹಾನ್ನಿರಯಭಾಗ್ ಭವೇತ್ ॥

ಇತಿ ಚ ।

ಹಿರಣ್ಯಗರ್ಭಃ ಪುರುಷ ಆತ್ಮಾ ವಾಯುರುದಾಹೃತಃ ।
ಶೇಷೋ ವ್ಯಕ್ತಸ್ತಥೈವೇಂದ್ರ ಆಶಯಃ ಸಮುದಾಹೃತಃ ॥ ಇತಿ ಚ ।

'ಮನ್ಯತೇಽನೀಶಮೀಶ್ವರಂ' ಎಂಬುದರ ಅಭಿಪ್ರಾಯ ಹೀಗೆ– ಸರ್ವಾಂತರ್ಯಾಮಿ ಯಾದ ಈಶ್ವರನನ್ನು ಅಶಕ್ತನಾದ ಜೀವನಿಂದ ಅಭಿನ್ನನೆಂದು ಯಾರು ತಿಳಿಯುವರೋ

ಅವರನ್ನು ಸ್ನೇಹದಿಂದ ನೋಡಿದರೂ ಸಾಕು, ನರಕ ಭಾಗಿಯಾಗುತ್ತಾನೆ' ಎಂದೂ ಹೇಳಿದೆ.

'ಪುರುಷಃ ಪ್ರಕೃತಿರ್ವ್ಯಕ್ತಮಾತ್ಮಭೂತೇಂದ್ರಿಯಾಶಯಾಃ ।' ಎಂಬಲ್ಲಿ ಹೇಳಿದ ಪುರುಷ ಪ್ರಕೃತಿ ಮುಂತಾದವರು ದೇವತೆಗಳು 'ಪುರುಷನೆಂದರೆ ಬ್ರಹ್ಮ. ಆತ್ಮನೆಂದರೆ ವಾಯು. ವ್ಯಕ್ತನೆಂದರೆ ಶೇಷ, ಆಶಯ ಎಂದರೆ ಇಂದ್ರ' ಎಂದೂ ಹೇಳಿದೆ.

* * *

ಇಂದ್ರವಜ್ರಾಯುಧದಿಂದ ವೃತ್ರನ ಶಿರಸ್ಸನ್ನು ಕತ್ತರಿಸಿದುದರ ವರ್ಣನೆ–

ವಜ್ರಸ್ತು ತತ್ಕಂಧರಮಾಶುವೇಗಃ
ಕೃಂತನ್ ಸಮಂತಾತ್ ಪರಿವರ್ತಮಾನಃ ।
ನ್ಯಪಾತಯತ್ ತಾವದಹರ್ಗಣೇನ
ಯೋ ಜ್ಯೋತಿಷಾಮಯನೇ ವಾರ್ತ್ರಹತ್ಯೇ ॥ ೩೩ ॥

ಆದರೆ ಮಹಾವೇಗ ಉಳ್ಳ ಚಕ್ರದಂತೆ ಸುತ್ತುವ ಆ ವಜ್ರಾಯುಧವೂ ಕೂಡ ತಕ್ಷಣವೇ ವೃತ್ರನ ಶಿರಶ್ಛೇದ ಮಾಡಲಿಲ್ಲ. ಗ್ರಹಗಳ ಉತ್ತರಾಯಣಗಳಿಂದಾಗುವ ಮತ್ತು ದಕ್ಷಿಣಾಯನ ಒಂದು ವರ್ಷದಲ್ಲಿ ಎಷ್ಟು ದಿನಗಳೋ ಅಷ್ಟು ಅಂದರೆ ಮುನ್ನೂರ ಅವವತ್ತು ದಿನಗಳಲ್ಲಿ ವೃತ್ರಹತ್ಯಾಕಾಲದಲ್ಲಿ ವೃತ್ರನ ಕುತ್ತಿಗೆಯನ್ನು ಕತ್ತರಿಸಿ ತಲೆಯನ್ನು ಬೀಳಿಸಿತು.

ಇಲ್ಲಿ ಅನೇಕ ಸಮಸ್ಯೆಗಳಿವೆ. ವಜ್ರಾಯುಧ ಆಶುವೇಗ, ಮಹಾವೇಗ ಉಳ್ಳದ್ದು. ಕ್ಷಣದಲ್ಲಿ ವೃತ್ರನ ಎರಡೂ ತೋಳುಗಳನ್ನು ಲೀಲಾಜಾಲವಾಗಿ ಕಡಿದುಬೀಳಿಸಿತ್ತು. ವೃತ್ರ ಇಂದ್ರನ್ನು ನುಂಗಿದಾಗ ಆತ ಅವನ ಹೊಟ್ಟೆಯನ್ನು ವಜ್ರಾಯುಧದಿಂದ ಬಗಿದು ಹೊರಗೆ ಬಂದಿದ್ದ. ಇಂಥ ವಜ್ರಾಯುಧ ಕುತ್ತಿಗೆಯನ್ನು ಕತ್ತರಿಸಲು ಒಂದು ವರ್ಷಕಾಲವನ್ನು ತೆಗೆದುಕೊಂಡಿತೆ? ಅದು ವೃತ್ರನ ಯೋಗಶಕ್ತಿ ಎನ್ನುವುದಾದರೆ ಒಂದು ವರ್ಷ ಕಳೆದಾಗಲಾದರೂ ಹೇಗೆ ಕತ್ತರಿಸಿತು?

'ಅಪಾಂ ಫೇನೇನ ವೃತ್ರಸ್ಯ ಶಿರ ಇಂದ್ರೋ ನ್ಯಪಾತಯತ್'

ಇಂದ್ರ ನೀರಿನ ನೊರೆಯಿಂದ ವೃತ್ರನ ಶಿರಶ್ಛೇದ ಮಾಡಿದನೆಂದು ಬೇರೆ ಕಡೆ ಹೇಳಿದ್ದೂ ಉಂಟು. ಅದರ ವಿರೋಧ ಬರುವುದರಿಂದಲೂ ಈ ಶ್ಲೋಕ ಕಗ್ಗಂಟಾಗಿ ಬಿಡುತ್ತದೆ. ಶ್ರೀಮದಾಚಾರ್ಯರು ಅಗ್ನಿಪುರಾಣದ ಆಧಾರಕೊಟ್ಟು ಹೀಗೆ ವಿವರಣೆ ನೀಡುತ್ತಾರೆ–

ಸಂಧಿತಃ ಸಮಯೇನೇಂದ್ರೋ ವೃತ್ರೇಣಾಥೋ ಕರಗ್ರಹಃ ।
ಸಮುದ್ರತೀರೇ ವಿಚರನ್ ಫೇನೇನ ವಧಮಸ್ಯ ತು ॥

ನರ್ಮಣಾ ಜಹಿ ಫೇನೇತಿ ವಾಚಯಿತ್ವಾ ಸುರೇಶ್ವರಃ ।
ಪಾದಸ್ಪರ್ಶವಿವಾದಂ ಚ ಕೃತ್ವಾ ಯುದ್ಧಾಯ ದಂಶಿತಃ ॥

ಫೇನೇ ವಜ್ರಂ ಸಮಾವೇಶ್ಯ ವಿಷ್ಣುಯುಕ್ತಂ ವ್ಯಸರ್ಜಯತ್ ।
ಅಪಾನುದಚ್ಛಿರಸ್ತಸ್ಯ ಧ್ಯಾಯತೋ ವತ್ಸರೇಣ ಸಃ ॥

ಇತ್ಯಾಗ್ನೇಯೇ ।

ಹಸಿಪದಾರ್ಥದಿಂದಾಗಲಿ ಒಣಗಿದ ಪದಾರ್ಥದಿಂದಾಗಲಿ ನನ್ನನ್ನು ನೀನು ಕೊಲ್ಲಕೂಡದು, ಎಂದು ಮುಂತಾಗಿ ಶರತ್ತುಗಳನ್ನು ಹಾಕಿ, ಎರಡು ತೋಳುಗಳನ್ನೂ ತಿರುಗಿ ಪಡೆದು, ಇಂದ್ರನೊಂದಿಗೆ ವೃತ್ರ ಸಂಧಿ ಮಾಡಿಕೊಂಡ. ಅಂದಿನಿಂದ ಒಂದು ವರ್ಷಕಾಲ ವೃತ್ರನೂ ಇಂದ್ರನೂ ಕೈಕೈ ಹಿಡಿದು ಸ್ನೇಹದಿಂದ ಸಂಚರಿಸಿದರು. ಬಳಿಕ ಒಂದು ದಿನ ಇಂದ್ರ ಸಮುದ್ರತೀರದಲ್ಲಿ ಸಂಚರಿಸುತ್ತ ಸಮುದ್ರಜಲದ ನೊರೆಯಲ್ಲಿರುವ ಭಗವಂತನಲ್ಲಿ 'ನೊರೆಯೆ, ನೀನು ಲೀಲಾಜಾಲವಾಗಿ ವೃತ್ರನನ್ನು ಸಂಹರಿಸು' ಎಂದು ವೃತ್ರವಧೆಯನ್ನು ಪ್ರಾರ್ಥಿಸಿದ. ಬಳಿಕ ಸಮುದ್ರತೀರದಲ್ಲಿ ಧ್ಯಾನ ಮಾಡುತ್ತಿದ್ದ ವೃತ್ರನನ್ನು ಕಾಲಿಂದ ತುಳಿದು ಜಗಳ ಪ್ರಾರಂಭಿಸಿ ಯುದ್ಧಕ್ಕೆ ನಿಂತ. ನೊರೆಯಲ್ಲಿ ವಿಷ್ಣುತೇಜಸ್ಸಿನಿಂದ ಯುಕ್ತವಾದ ವಜ್ರಾಯುಧದ ತೇಜಸ್ಸನ್ನು ತುಂಬಿಸಿದ. ಆ ನೊರೆ ಹಸಿಯೂ ಅಲ್ಲ, ಒಣಗಿದ್ದೂ ಅಲ್ಲದ ಪದಾರ್ಥವಾದ್ದರಿಂದ ಒಪ್ಪಂದದ ಶರತ್ತಿಗೆ ಅನುಗುಣವಾಗಿತ್ತು. ಅದನ್ನೆಸೆದು ಭಗವದ್ಧ್ಯಾನ ಮಾಡುತ್ತಿದ್ದ ವೃತ್ರನ ಶಿರಶ್ಛೇದ ಗೈದ. ಹೀಗೆ ಸಂಧಿ ಮಾಡಿದಂದಿನಿಂದ ಒಂದು ವರ್ಷಕಾಲದಲ್ಲಿ ವೃತ್ರವಧೆಯಾಯಿತು ಎಂದು ಅಗ್ನಿಪುರಾಣದಲ್ಲಿ ಉಕ್ತವಾಗಿದೆ.

ಭಾಗವತದಲ್ಲಿ 'ವಜ್ರಸ್ತು ತತ್ಕಂಧರಮಾಶುವೇಗಃ' ಎಂದು ವಜ್ರಾಯುಧ ವೃತ್ರನ ಶಿರಶ್ಛೇದ ಗೈದುದೂ ನಿಜ. 'ಅಪಾಂ ಫೇನೇನ ವೃತ್ರಸ್ಯ ಶಿರ ಇಂದ್ರೋ ನ್ಯಪಾತಯತ್' ಎಂದು ನೊರೆ ಶಿರಶ್ಛೇದ ಮಾಡಿದ್ದೂ ನಿಜ. ಏಕೆಂದರೆ ನೊರೆಯೊಳಗೆ ವಜ್ರಾಯುಧದ ತೇಜಸ್ಸೂ ತುಂಬಿತ್ತು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ
ದ್ವಾದಶೋಽಧ್ಯಾಯಃ ॥

—೦—

ಅಧ್ಯಾಯ-೧೩

ಅಧ್ಯಾಯಸಾರಾಂಶ

ಕರಾಳರೂಪದ ಬ್ರಹ್ಮಹತ್ಯಾಪಾಪ ಇಂದ್ರನನ್ನು ಬೆನ್ನಟ್ಟಿತು. ಇಂದ್ರ ಮಾನಸ ಸರೋವರದಲ್ಲಿ ಒಂದು ಕಮಲನಾಳದೊಳಗೆ ಸೂಕ್ಷ್ಮರೂಪದಿಂದ ಅಡಗಿ ಕುಳಿತು ಒಂದು ಸಾವಿರ ವರ್ಷಕಾಲ ನರಸಿಂಹ ಮಂತ್ರಜಪಿಸಿದ. ಈ ಅವಧಿಯಲ್ಲಿ ಇಂದ್ರನ ಸಿಂಹಾಸನವನ್ನು ನಹುಷಚಕ್ರವರ್ತಿ ಆಳಿದ. ಕೊನೆಯಲ್ಲಿ ಅವನು ಶಚಿಯನ್ನು ಬಯಸಿದ. ಮುನಿಗಳಿಂದ ಮೇನೆಯನ್ನು ಹೊರಿಸಿಕೊಂಡು ಬಂದರೆ ನಾನು ನಿನ್ನವಳಾಗುತ್ತೇನೆ ಎಂದಳು ಶಚಿ. ಅದರಂತೆ ನಹುಷ ತನ್ನ ಮೇನೆಯನ್ನು ಅಗಸ್ತ್ಯಮುಂತಾದ ಮುನಿಗಳಿಂದ ಹೊರಿಸಿದ. ಅವರೊಂದಿಗೆ ಜಗಳಾಡಿ ಶಾಪದಿಂದ ಹೆಬ್ಬಾವಾಗಿ ಭೂಮಿಯಲ್ಲಿ ಬಿದ್ದ. ಆಗಲೆ ಇಂದ್ರ ಕಮಲನಾಳದಿಂದ ಹೊರಗೆ ಬಂದು ಅಶ್ವಮೇಧಯಾಗ ಮಾಡಿ ತನ್ನ ಸಿಂಹಾಸನವನ್ನೇರಿದ.

* * *

ಇಂದ್ರ ವೃತ್ರಹತ್ಯೆ ಮಾಡಿದಾಗ ಅವನಿಗೆ ಬ್ರಹ್ಮಹತ್ಯಾಪಾಪ ತಗುಲಿತು. ಅದರ ದುಃಖದಿಂದ ಆತನಿಗೆ ಮನಸಿನಲ್ಲಿ ನೆಮ್ಮದಿ ಇಲ್ಲವಾಯಿತು ಎಂದು ಶುಕಮುನಿ ಪರೀಕ್ಷಿದ್ರಾಜನಿಗೆ ಹೇಳುತ್ತಾರೆ.

ತಯೇಂದ್ರಂ ಸ್ಮ ಹ ಸಂತಪ್ತಂ ನಿರ್ವೃತಿರ್ನಾಮುಮಾವಿಶತ್ ।
ಹ್ರೀಮಂತಂ ಹತ್ಯಯಾ ತಪ್ತಂ ಸುಖಯಂತ್ಯಪಿ ನೋ ಗುಣಾಃ ॥೧೧॥

ಬ್ರಹ್ಮಹತ್ಯೆಯಿಂದ ಸಂತಾಪಗೊಂಡ ಇಂದ್ರನಿಗೆ ನೆಮ್ಮದಿ ಉಂಟಾಗಲಿಲ್ಲ. ಲೋಕಾಪವಾದಕ್ಕೆ ಲಜ್ಜೆಪಡುವವನಿಗೆ ದುಷ್ಟವಧೆ ಮಾಡಿದಾಗಲೂ ಅದರಿಂದ ಲಭಿಸಬಹುದಾದ ಪುಣ್ಯ ಯಶಸ್ಸು ಮುಂತಾದ ಗುಣ ತೃಪ್ತಿ ಉಂಟುಮಾಡಲಾರದು.

ಇಲ್ಲಿ ಅನೇಕ ಪ್ರಶ್ನೆಗಳು ಬರುತ್ತವೆ. ವೃತ್ರನು ಬ್ರಾಹ್ಮಣನಾಗಿದ್ದರೂ ಲೋಕರಕ್ಷಣೆಗಾಗಿ ಇಂದ್ರ ಅವನನ್ನು ಕೊಂದದ್ದರಿಂದ, ಲೋಕರಕ್ಷಣೆಯನ್ನು ಹೇಗೆ ಮಾಡಿದರೂ ದೋಷವಿಲ್ಲದಿರುವುದರಿಂದ ಇಂದ್ರನಿಗೆ ಪಾಪ ಹೇಗೆ ಬಂದೀತು? ಮುನಿಗಳು ಬ್ರಹ್ಮಹತ್ಯಾ ಪಾಪ ಬರುತ್ತದೆ ಎಂದು ಒಪ್ಪಿಕೊಂಡು 'ಅಶ್ವಮೇಧ ಯಾಗ

ಮಾಡಿಸುತ್ತೇವೆ, ಪಾಪ ಪರಿಹಾರವಾಗುತ್ತದೆ' ಎಂದುದು ನಿಜ. ಆದರೆ ಅಜ್ಞಜನರು ದೇವೇಂದ್ರ ಸ್ವರ್ಗಸಾಮ್ರಾಜ್ಯದಾಸೆಯಿಂದ ಒಬ್ಬ ಬ್ರಾಹ್ಮಣನನ್ನು ಹತ್ಯೆಮಾಡಿದನೆಂದು ಹೇಳಿಕೊಳ್ಳಬಹುದು, ಈ ಲೋಕಾಪವಾದವನ್ನು ಅಶ್ವಮೇಧಯಾಗದಿಂದ ಪರಿಹರಿಸುತ್ತೇವೆ, ಇಂದ್ರ ಬ್ರಹ್ಮಹತ್ಯೆ ಮಾಡಿರೇನಂತೆ, ಅದಕ್ಕೆ ತಕ್ಕ ಪ್ರಾಯಶ್ಚಿತ್ತವಾಗಿ ಅಶ್ವಮೇಧಯಾಗ ಮಾಡಿದ್ದಾನೆ ಎಂಬ ಭಾವನೆಯಿಂದ ಜನರು ಸುಮ್ಮನಾಗುತ್ತಾರೆ ಎಂದು ಮುನಿಗಳ ಅಭಿಪ್ರಾಯವಾಗಿದೆ. ದೇವೇಂದ್ರ ಮಾನಸಸರೋವರದಲ್ಲಿ ಕಮಲನಾಳದೊಳಗೆ ಅವಿತುಕೊಂಡು ನರಸಿಂಹ ಮಂತ್ರಜಪಿಸುತ್ತ ಒಂದು ಸಾವಿರ ವರ್ಷಕಾಲ ದುಃಖ ಪಟ್ಟಿದ್ದು ಬ್ರಹ್ಮಹತ್ಯಾ ಪಾಪಪ್ರಯುಕ್ತ ತಾನೆ? ಎಂದರೆ, ಬ್ರಹ್ಮಹತ್ಯೆಯನ್ನು ನೆಪ ಮಾಡಿಕೊಂಡು ಏಕಾಂತದಲ್ಲಿ ಕುಳಿತು ಸಾವಿರವರ್ಷಕಾಲ ನರಸಿಂಹನ ಧ್ಯಾನಾನಂದದಲ್ಲಿ ಮುಳುಗಿದನೇ ಹೊರತು ದುಃಖಪಡಲಿಲ್ಲ. ಅದರಿಂದಲೇ ಈ ಸುಖಕ್ಕಾಗಿಯೇ ದೇವೇಂದ್ರ ಅಶ್ವಮೇಧಯಾಗ ಮಾಡದೆ ಪರಾರಿಯಾದ. ತಿರುಗಿ ಬಂದಮೇಲೆ ಯಾಗ ಮಾಡಿ ಲೋಕಾಪವಾದವನ್ನೂ ತೊಡೆದು ಕೊಂಡ. ಇಂದ್ರ ಅಪರೋಕ್ಷಜ್ಞಾನಿ. ಅಪರೋಕ್ಷಿಗಳಿಗೆ ಸ್ವೋತ್ತಮರಲ್ಲಿ ಅಪರಾಧ ಮಾಡುವುದು ಹೊರತು ಬೇರೆ ಏನೂ ಪಾಪ ಅಂಟುವುದಿಲ್ಲ ಎಂದು ಬ್ರಹ್ಮಸೂತ್ರದ ತದಧಿಗಮಾಧಿಕರಣದ ಸಿದ್ಧಾಂತವಿದೆ. ಇಂದ್ರನಿಗೆ ವೃತ್ರ ಉತ್ತಮನಲ್ಲ, ಆತನೊಬ್ಬ ವಿದ್ಯಾಧರ. ಇಂದ್ರ ದೇವೋತ್ತಮ. ಹೀಗಾಗಿ ವೃತ್ರವಧೆಯಿಂದ ಇಂದ್ರ ಬ್ರಹ್ಮಹತ್ಯಾಪಾಪಕ್ಕೊಳಗಾಗಿ ದುಃಖ ಅನುಭವಿಸಿದನೆನ್ನುವುದು ಹೇಗೆ? ಬ್ರಹ್ಮಸೂತ್ರಕ್ಕೆ ವಿರುದ್ಧವಾಗಿ 'ಅರ್ಥೋಽಯಂ ಬ್ರಹ್ಮಸೂತ್ರಾಣಾಂ' ಎಂಬ ಖ್ಯಾತಿಯ ಭಾಗವತ ಹೇಳುತ್ತದೆಯೆ?

[೧]ಈ ಎಲ್ಲ ಪ್ರಶ್ನೆಗಳಿಗೆ ಬೇರೆ ವ್ಯಾಖ್ಯಾನಕಾರರು ಯಾರೂ ಉತ್ತರ ಕೊಟ್ಟಿಲ್ಲ. ದೇವೇಂದ್ರ ಬ್ರಹ್ಮಹತ್ಯಾಪಾಪದಿಂದ ದುಃಖ ಅನುಭವಿಸಿದ ಮತ್ತು ಲೋಕಾಪವಾದಕ್ಕೂ ಗುರಿಯಾದನೆಂದೇ ಹೇಳಿದ್ದಾರೆ. [೧]ವಿಶ್ವನಾಥವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ–'ದೇವೇಂದ್ರ, ನೀನು ವೃತ್ರವಧ ಮಾಡು. ಅದರಿಂದ ಬರುವ ಬ್ರಹ್ಮಹತ್ಯಾಪಾಪಕ್ಕೆ ಪ್ರಾಯಶ್ಚಿತ್ತವಾಗಿ ಅಶ್ವಮೇಧ ಯಾಗ ಮಾಡಿಸುತ್ತೇವೆ' ಎಂದು ಮುನಿಗಳು ಹೇಳಿದ್ದರಿಂದ ದೇವೇಂದ್ರ ವೃತ್ರಹತ್ಯೆ ಮಾಡಿದ. ಬ್ರಹ್ಮಹತ್ಯಾಪಾಪ

---

೧. ಅತ್ರ ಪ್ರಾಯಶ್ಚಿತ್ತಬಲೇನ ಪಾಪಾಚರಣಾತ್ ಪೂರ್ವತೋಽಪೀಯಮತಿಪ್ರಬಲಾ ದುಃಖಭೋಗೇನ ವಿನಾ ಕೇವಲೇನ ಪ್ರಾಯಶ್ಚಿತ್ತೇನ ನ ಶಾಮ್ಯೇದಿತ್ಯತ ಏವ ತೇ ತದಾನೀಮಶ್ವಮೇಧೇನ ತಂ ನೈವ ಯಾಜಯಾಮಾಸುರಿತಿ ಜ್ಞೇಯಮ್ । ತೇ ಋಷ್ಯಾದಯೋಽಪಿ ಪ್ರಾಯಶ್ಚಿತ್ತಬಲೇನ ಪಾಪಪ್ರವರ್ತನಾಜ್ಜನ್ಯಸ್ಯಾಪರಾಧಸ್ಯ ಫಲಂ ಚಿರಕಾಲವ್ಯಾಪಿನೀಂ ದುರವಸ್ಥಾಮಿಂದ್ರಪದಾರೂಢೇನ ನಹುಷೇಣ ತದಾನೀಮೇವ ಪ್ರಾಪಿತಾ ಇತಿ ಚ ಜ್ಞೇಯಮ್ । —ವಿಶ್ವನಾಥಃ

ಅಂಟಿಕೊಂಡಿತು. 'ಪ್ರಾಯಶ್ಚಿತ್ತ ಮಾಡಿಕೊಂಡರಾಯಿತೆಂಬ ಭಾವನೆಯಿಂದ ಮಾಡಿದ ಪಾಪ ಪ್ರಬಲವಾಗಿರುತ್ತದೆ. ಅದನ್ನು ಅನುಭವಿಸದೆ ಕೇವಲ ಪ್ರಾಯಶ್ಚಿತ್ತದಿಂದ ಪರಿಹಾರವಾಗುವುದಿಲ್ಲ. ಅದಕ್ಕೆಂದೇ ಮುನಿಗಳು ಕೂಡಲೆ ಅಶ್ವಮೇಧಯಾಗ ಮಾಡಿಸಲಿಲ್ಲ. ಇಂದ್ರ ಒಂದು ಸಾವಿರ ವರ್ಷಕಾಲ ದುಃಖ ಅನುಭವಿಸಿದ. ಜನಾಪವಾದಕ್ಕೂ ಗುರಿಯಾದ. ಪಾಪ ಮಾಡಿಸಿದ ಮುನಿಗಳೂ ನಹುಷನ ದುರಾಡಳಿತದಲ್ಲಿ ದೀರ್ಘಕಾಲ ದುಃಖ ಅನುಭವಿಸಬೇಕಾಯಿತು.'

ಅದರಿಂದ ಇಂದ್ರನ ಬ್ರಹ್ಮಹತ್ಯಾಪಾಪದ ಬಗ್ಗೆ ಹೀಗೆ ವಿವರಣೆ ಕೊಡಬೇಕು–

ಪ್ರಾರಬ್ಧಕರ್ಮಣೈವೈಷಾಂ ಕ್ಲೃಪ್ತದುಃಖಸ್ಯ ಸೂಚಕಮ್ ।
ಇದಾನೀಂತನ ಕರ್ಮ ಸ್ಯಾದ್ ವ್ರಣಹೇತುರ್ಯಥಾ ರಣಃ ॥

ದೇವಾದೀನಾಂ ಸ್ಥಿತಪ್ರಜ್ಞಭಾವಾನ್ನೈವಾನ್ಯಥಾ ಭವೇತ್ ।
ಪ್ರಾರಬ್ಧಮಪಿ ತು ಕ್ವಾಪಿ ಕಿಂಚಿದ್ ವಿಘಟಿತಂ ಭವೇತ್ ॥

ಇತಿ ಚ ।

~~ದೇವತೆಗಳಿಗೆ ಪ್ರಾರಬ್ಧಕರ್ಮದಿಂದ ದುಃಖ ಬರುವಾಗಲೇ ಅದಕ್ಕೆ ಸೂಚಕವಾಗಿ~~ ಜ್ಞಾನೋತ್ತರದಲ್ಲಿ ಪಾಪಕರ್ಮ ಅವರಿಂದ ನಡೆಯುತ್ತದೆ, ಹೊರತು ಹೊಸದಾಗಿ ಪಾಪ ಕರ್ಮದಿಂದ ದುಃಖ ಉಂಟಾಗುವುದಿಲ್ಲ. (ಅದಕ್ಕೆ ಉದಾಹರಣೆ–ಅಶ್ವತ್ಥಾಮನಿಗೆ ಮೈಯೆಲ್ಲ ಗಾಯ ಉಂಟುಮಾಡಿದ ಕುರುಕ್ಷೇತ್ರ ಯುದ್ಧ ಅವನಿಗೆ ಪ್ರಾರಬ್ಧದಿಂದಲೇ ಗಾಯ ಉಂಟಾಗುವುದಕ್ಕೆ ಸೂಚಕವಾಯಿತು. ಹೊರತು ಯುದ್ಧದಿಂದಲೆ ಗಾಯ ಉಂಟಾದುದಲ್ಲ. ಯುದ್ಧದಿಂದಲೆ ಉಂಟಾಗಿದ್ದರೆ ಬೇಗನೆ ವಾಸಿಯಾಗಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಚಿರಜೀವಿಯಾದ ಅಶ್ವತ್ಥಾಮ ಬದುಕಿರುವಷ್ಟು ಕಾಲ ಗಾಯ ವಾಸಿಯಾಗದೇ ಇದ್ದಿತು. ಹೀಗೆ ಬೇರೆ ಯಾರಿಗೂ ಆದದ್ದು ಕಂಡಿಲ್ಲ.) ದೇವತೆಗಳು ಮುಂತಾದ ಅಪರೋಕ್ಷಜ್ಞಾನಿಗಳು ಸ್ಥಿತಪ್ರಜ್ಞರಾದ್ದರಿಂದ ಪ್ರಾರಬ್ಧದುಃಖ ಮಾತ್ರವನ್ನೇ ಅನುಭವಿಸುತ್ತಾರೆ. ಹೊರತು ಹೊಸದಾಗಿ ಕರ್ಮದಿಂದ ದುಃಖ ಸಂಪಾದಿಸುವುದಿಲ್ಲ. ಪ್ರಾರಬ್ಧಕರ್ಮ ಅದರ ಫಲಾನುಭವದಿಂದಲೇ ನಾಶವಾಗಬೇಕು. ಹೊರತು ಪ್ರಾಯಶ್ಚಿತ್ತಾದಿಗಳಿಂದ ಅದಕ್ಕೆ ನಾಶವಿಲ್ಲ. ಅದರಿಂದ ಪ್ರಾಯಶ್ಚಿತ್ತ ಮಾಡುವುದು ಪ್ರಾರಬ್ಧಕರ್ಮದ ನಾಶಕ್ಕಾಗಿ ಅಲ್ಲ. ಆ ಕರ್ಮದಿಂದ ಹೆಚ್ಚಿನ ದುಃಖ ಬರುತ್ತಿದ್ದರೆ ಕಡಿಮೆ ಮಾಡಿಕೊಳ್ಳುವ ಉದ್ದೇಶದಿಂದ ಮಾಡುತ್ತಾರೆ ಎಂದೂ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ
ತ್ರಯೋದಶೋಽಧ್ಯಾಯಃ ॥

ಅಧ್ಯಾಯ-೧೪

ಅಧ್ಯಾಯಸಾರಾಂಶ

ವೃತ್ರ ಅಸುರನಾಗಿದ್ದರೂ ವಿಷ್ಣುಭಕ್ತ ಏಕೆಂದರೆ ಹಿಂದೆ ಅವನು ಚಿತ್ರಕೇತುಚಕ್ರವರ್ತಿಯಾಗಿದ್ದ. ಅವನಿಗೆ ಒಂದು ಕೋಟಿ ರಾಣಿಯರು. ಒಬ್ಬರಲ್ಲಿಯೂ ಸಂತಾನವಾಗಲಿಲ್ಲ. ಅಂಗಿರಸ ಮುನಿ ಆತನಿಗೆ ತತ್ತ್ವೋಪದೇಶ ಮಾಡಲು ಬಂದಾಗ ಅವನ ಸಂತಾನದ ಬಯಕೆಯನ್ನು ಕಂಡು ಇಷ್ಟಿ ಮಾಡಿಸಿ ಪಟ್ಟಮಹಿಷಿಯಾದ ಕೃತದ್ಯುತಿಗೆ ಯಜ್ಞಶೇಷವನ್ನಿತ್ತರು. 'ಹರ್ಷಶೋಕಗಳೆರಡನ್ನು ನೀಡುವಂಥ ಒಬ್ಬ ಪುತ್ರ ಹುಟ್ಟುತ್ತಾನೆ' ಎಂದು ಹೇಳಿಹೋದರು. ಅದರಂತೆ ಒಬ್ಬ ಮಗ ಹುಟ್ಟಿದ. ರಾಜನಿಗೆ ಆ ಮಗುವಿನಲ್ಲಿಯೂ ಮಗುವಿನ ತಾಯಿಯಲ್ಲಿಯೂ ಎಲ್ಲಿಲ್ಲದ ಅಕ್ಕರೆ. ಬೇರೆ ರಾಣಿಯರಿಗೆ ಹೊಟ್ಟೆಕಿಚ್ಚಾಯಿತು. ಅವರು ಮಗುವಿಗೆ ವಿಷ ಹಾಕಿದರು. ಮಗು ಸತ್ತಿತು. ರಾಜ ಒಂದೇ ಸವನೆ ಅಳಲು ತೊಡಗಿದ. ಆಗ ಅಂಗಿರಸರೂ ನಾರದರೂ ಬಂದರು.

* * *

ಲೋಕದಲ್ಲಿ ಮುಮುಕ್ಷುಗಳೇ ಅತಿ ವಿರಳ. ಅವರಲ್ಲಿಯೂ ಕೋಟಿಗೆ ಒಬ್ಬ ಉತ್ತಮ ಭಕ್ತ ಸಿಗುತ್ತಾನೆ. ಹೀಗಿದ್ದರೂ ಪಾಪಿಯಾದ ವೃತ್ರ ಹೇಗೆ ರಣರಂಗದ ನಡುವೆಯೂ ಉತ್ತಮವಾದ ಪರಮಾತ್ಮಭಕ್ತಿಯನ್ನು ತೋರಿದ ಎಂದು ಪರೀಕ್ಷಿದ್ರಾಜ ಶುಕಮುನಿಯನ್ನು ಕೇಳುತ್ತಾನೆ.

ಮುಕ್ತಾನಾಮಪಿ ಸಿದ್ಧಾನಾಂ ನಾರಾಯಣಪರಾಯಣಃ ।
ಸುದುರ್ಲಭಃ ಪ್ರಶಾಂತಾತ್ಮಾ ಕೋಟಿಷ್ವಪಿ ಮಹಾಮುನೇ ॥ ೫ ॥

ಜೀವನ್ಮುಕ್ತರು ಎಲ್ಲರೂ ಮುಕ್ತಿ ಪಡೆಯುತ್ತಾರೆ. ಅವರು ನಾರಾಯಣಜ್ಞಾನ ಭಕ್ತಿಪೂರ್ಣರೂ ಆಗಿರುತ್ತಾರೆ. ಅವರಲ್ಲಿಯೂ ಕೋಟಿಗಳಲ್ಲಿ ಕೆಲವರೇ ಮಹತ್ತಾದ ಜ್ಞಾನಭಕ್ತಿ ಉಳ್ಳವರು, ಬಹಳ ದುರ್ಲಭರು.

೧ಇಲ್ಲಿ 'ಸಿದ್ಧರಾದ ಮುಕ್ತರಲ್ಲಿಯೂ ನಾರಾಯಣಪರಾಯಣರು ಕೋಟಿಗೊಬ್ಬರು ಸಿಗಬಹುದು' ಎನ್ನುವುದಕ್ಕೆ ವಿಶ್ವನಾಥವ್ಯಾಖ್ಯಾನದಲ್ಲಿ ಹೀಗೆ ವಿವರಣೆ ಇದೆ– ಸಿದ್ಧರಾದ ಮುಕ್ತರೆಂದರೆ ನಿರ್ಗುಣಮೋಕ್ಷ ಪಡೆಯಲು ಸಿದ್ಧರಾಗಿರುವವರು. ಇವರಿಗೆ ಸಗುಣನಲ್ಲಿಯೂ ಆದರವಿದೆ. ಇಂಥವರು ಸಾಮಾನ್ಯವಾಗಿ ನಿರ್ಗುಣಬ್ರಹ್ಮೈಕ್ಯ ಹೊಂದಿಬಿಡುತ್ತಾರೆ. ಯಾರೋ ಕೋಟಿಗೆ ಒಬ್ಬರು ಮಾತ್ರ ಸಗುಣಭಕ್ತರ ಕೃಪೆಯಿಂದ ಭಕ್ತಿಮಾಧುರ್ಯವನ್ನು ಅರಿತು ನಿರ್ಗುಣಮೋಕ್ಷವನ್ನು ಕಡೆಗಣಿಸಿ ನಾರಾಯಣಪರಾಯಣರಾಗುತ್ತಾರೆ ಎಂದು. ಆದರೆ ಭಾಗವತದಲ್ಲಿ ಸಿದ್ಧಮುಕ್ತರೆಂದರೆ ಅದ್ವೈತೋಪಾಸಕರೆನ್ನಲು ಏನೂ ಆಧಾರವಿಲ್ಲ. ಮತ್ತು ನಿರ್ಗುಣೋಪಾಸನೆಗೆ ಸಗುಣೋಪಾಸನೆ ಮೊದಲನೆ ಮೆಟ್ಟಲು ಎನ್ನುವ ಅದ್ವೈತಮತದಲ್ಲಿ ನಿರ್ಗುಣಮೋಕ್ಷ ಹೊಂದಲು ಸಿದ್ಧರಾಗಿರುವವರು ಹಿಂತಿರುಗಿ ಸಗುಣದ ಕಡೆಗೆ ಬರುವುದು ಅಸಂಭವ.

ಆದರಿಂದ ಭಾಗವತಪದ್ಯಕ್ಕೆ ಹೀಗೆ ವಿವರಣೆ ನೀಡಬೇಕು–

ನವಕೋಟ್ಯಸ್ತು ದೇವಾನಾಮೃಷಯಃ ಶತಕೋಟಯಃ ।
ನಾರಾಯಣಾಯನಾಃ ಸರ್ವೇ ಯೇಕೇಚಿತ್ ತತ್ಪರಾಯಣಾಃ ।
ಇತಿ ಚ ।

ನಾರಾಯಣಾಯನಾ ದೇವಾ ಋಷ್ಯಾದ್ಯಾಸ್ತತ್ಪರಾಯಣಾಃ ।
ಬ್ರಹ್ಮಾದ್ಯಾಃ ಕೇಚನೈವ ಸ್ಯುಃ ಸಿದ್ಧೋ ಯೋಗಸುಖಂ ಲಭನ್ ॥
ಇತಿ ತಂತ್ರಭಾಗವತೇ ।

'ದೇವತೆಗಳು ಒಂಬತ್ತು ಕೋಟಿ, ಋಷಿಗಳು ನೂರು ಕೋಟಿ. ಅವರೆಲ್ಲರೂ ನಾರಾಯಣಭಕ್ತರೆ. ಆದರೆ ಅವರಲ್ಲಿಯೂ ಕೆಲವರು ಮಾತ್ರ ನಾರಾಯಣನ ಅಂತರಂಗಭಕ್ತರು' ಎಂದೂ ಹೇಳಿದೆ.

ತಂತ್ರಭಾಗವತದಲ್ಲಿ ಇನ್ನೂ ಸ್ಪಷ್ಟವಾಗಿ ಇದನ್ನೇ ಹೇಳಿದೆ–'ದೇವತೆಗಳು ಋಷಿಗಳು ಮುಂತಾದವರು ನಾರಾಯಣನ ಭಕ್ತರೆ. ಅವರಲ್ಲಿಯೂ ಬ್ರಹ್ಮಾದಿಗಳು ಕೆಲವರು ಅವನ ಅಂತರಂಗಭಕ್ತರು. ಸಿದ್ಧರು ಎಂದರೆ ಸ್ವಯೋಗ್ಯಮೋಕ್ಷಸುಖವನ್ನು ಹೊಂದಿರುವವರು' ಎಂದು.

---

೧. ಸಿದ್ಧಾಃ ಸನ್ನಿಹಿತಸಾಯುಜ್ಯಾ ಏವೋಚ್ಯಂತೇ । ತೇಷಾಂ ಸಿದ್ಧಾನಾಂ ಮಧ್ಯೇ ಕೋಽಪಿ ಭಕ್ತ್ಯಾ ತತ್ಪದಾರ್ಥಾನುಭವಾರಂಭಸಮಯೇ ಯದಿ ಕಸ್ಯಚಿಚ್ಛುದ್ಧಭಕ್ತಸ್ಯ ಕೃಪಯಾ ಪೂರ್ಣಾಂ ಶುದ್ಧಾಂ ಭಕ್ತಿಂ ಪ್ರಾಪ್ನೋತಿ ತದಾ ತನ್ಮಾಧುರ್ಯಲಾಭಾತ್ ಸಾಯುಜ್ಯಮರೋಚಯಿತ್ವಾ ನಾರಾಯಣಪರಾಯಣಃ ಸ್ಯಾತ್ । –ವಿಶ್ವನಾಥಃ

ಭಾಗವತದಲ್ಲಿ ಮುಕ್ತರೆಂದರೆ ಜೀವನ್ಮುಕ್ತರು ಸಿದ್ಧರೆಂದರೆ ಮುಕ್ತರು. ಇವರಲ್ಲಿ ನಾರಾಯಣಭಕ್ತರು ದುರ್ಲಭರೆನ್ನಲಾಗದು. ಎಲ್ಲರೂ ನಾರಾಯಣಭಕ್ತರೆ. ಅದರಿಂದ 'ಜೀವನ್ಮುಕ್ತರಲ್ಲಿಯೂ ಮುಕ್ತರಲ್ಲಿಯೂ ಎಲ್ಲರೂ ನಾರಾಯಣಭಕ್ತರೆ. ಆದರೂ ಅವರಲ್ಲಿ ನಾರಾಯಣನ ಅಂತರಂಗಭಕ್ತರು ದುರ್ಲಭರು' ಎಂದು ಮಧ್ಯದಲ್ಲಿ ಅಧ್ಯಾಹಾರಮಾಡಿ ಅನ್ವಯ ಹೇಳಬೇಕು. 'ನಾರಾಯಣಪರಾಯಣಾಃ' ಎಂಬಲ್ಲಿ ಪರಶಬ್ದ, 'ಪ್ರಶಾಂತಾತ್ಮಾ' ಎಂಬಲ್ಲಿ ಪ್ರಶಬ್ದಗಳು 'ಅತ್ಯುತ್ತಮವಾದ ವೈರಾಗ್ಯ ಭಕ್ತಿ ಉಳ್ಳವರೆ'ಂದು ಹೇಳುತ್ತಿರುವುದರಿಂದ ಎಲ್ಲರೂ ನಾರಾಯಣಾಯನರೆ, ಶಾಂತಾತ್ಮರೇ, ನಾರಾಯಣಪರಾಯಣರು ಪ್ರಶಾಂತಾತ್ಮರು ಬಹಳ ಕಡಿಮೆ ಎಂದು ಹೇಳಿದಂತಾಗಿದೆ. ಅದರಿಂದ ಅಧ್ಯಾಹಾರ ಯುಕ್ತವೆ.

✻ ✻ ✻

ಚಿತ್ರಕೇತುವಿನ ರಾಣಿ ಕೃತದ್ಯುತಿ ತನ್ನ ಮುದ್ದಿನ ಮಗು ಸಾವನ್ನಪ್ಪಿದಾಗ ಶೋಕಪರವಶಳಾಗಿ ಬ್ರಹ್ಮದೇವನನ್ನು ಮೂರ್ಖನೆಂದು ನಿಂದಿಸುತ್ತಾಳೆ.

ಅಹೋ ವಿಧಾತಸ್ತ್ವಮತೀವ ಬಾಲಿಶೋ
ಯತ್ಸಾತ್ಮಸೃಷ್ಟ್ಯಪ್ರತಿರೂಪಮೀಹಸೇ ।
ಪರೇ ತು ಜೀವತ್ಯಪರಸ್ಯ ಯಾ ಮೃತಿಃ
ವಿಪರ್ಯಯಶ್ಚೇತ್ ತ್ವಮಸಿ ಧ್ರುವಂ ಪರಃ ॥ ೫೩ ॥

ನಹಿ ಕ್ರಮಶ್ಚೇದಿಹ ಮೃತ್ಯುಜನ್ಮನೋಃ
ಶರೀರಿಣಾಮಸ್ತು ತದಾತ್ಮಕರ್ಮಭಿಃ ।
ಯಃ ಸ್ನೇಹಪಾಶೋ ನಿಜಸರ್ಗವೃದ್ಧಯೇ
ಸ್ವಯಂ ಕೃತಸ್ತೇ ತಮಿಮಂ ವಿವೃಶ್ಚಸಿ ॥ ೫೪ ॥

ತ್ವಂ ತಾತ ನಾರ್ಹಸಿ ಸ ಮಾಂ ಕೃಪಣಾಮನಾಥಾಂ
ತ್ಯಕ್ತುಂ ವಿಚಕ್ಷ್ವ ಪಿತರಂ ತವ ಶೋಕತಪ್ತಮ್ ।
ಅಂಜಸ್ತರೇಮ ಭವತಾಽಪ್ರಜದುಸ್ತರಂ ಯದ್
ಧ್ವಾಂತಂ ನ ಯಾಹ್ಯಕರುಣೇನ ಯಮೇನ ದೂರಮ್ ॥ ೫೫ ॥

ಉತ್ತಿಷ್ಠ ತಾತ ತ ಇಮೇ ಶಿಶವೋ ವಯಸ್ಯಾ-
ಸ್ತ್ವಾಮಾಹ್ವಯಂತಿ ನೃಪನಂದನ ಸಂವಿಹರ್ತುಮ್ ।

ಸುಪ್ತಶ್ಚಿರಂ ಹ್ಯಶನಯಾ ಚ ಭವಾನ್ ಪರೀತೋ
ಭುಂಕ್ಷ್ವಸ್ತನಂ ಪಿಬ ಶುಚೋ ಹರ ನಃ ಸ್ವಕಾನಾಮ್ ॥ ೫೬ ॥

ನಾಹಂ ತನೂಜ ದದೃಶೇ ಹತಮಂಗಲಾ
ತೇ ಮುಗ್ಧಸ್ಮಿತಂ ಮುದಿತವೀಕ್ಷಣಮಾನನಾಬ್ಜಮ್ ।
ಕಿಂ ವಾ ಗತೋಽಸ್ಯಪುನರನ್ವಯಮನ್ಯಲೋಕಂ
ನೀತೋಽಘೃಣೇನ ನ ಶೃಣೋಮಿ ಕಳಾ ಗಿರಸ್ತೇ ॥ ೫೭ ॥

ಅಯ್ಯೋ ಸೃಷ್ಟಿಕರ್ತನೇ! ನೀನು ಅತ್ಯಂತ ಮೂರ್ಖನೆ ಸರಿ. ಏಕೆಂದರೆ ನಿನ್ನ ಸೃಷ್ಟಿಕಾರ್ಯಕ್ಕೆ ಪ್ರತಿಕೂಲವಾಗಿ ನೀನೇ ನಡೆದುಕೊಳ್ಳುವೆ. ವಯಸ್ಸಾದವರು ಬದುಕಿರುವಾಗ ಎಳಗೂಸನ್ನು ಸಾಯಿಸುವೆ. ಈ ವಿಪರೀತ ನಡೆತೆಯೇ ನನ್ನ ಸ್ವಭಾವ ಎನ್ನುವಿಯಾದರೆ ನೀನು ನಿಶ್ಚಯವಾಗಿ ಪ್ರಪಂಚಕ್ಕೆ ಶತ್ರು

'ಶರೀರಿಗಳ ಹುಟ್ಟು ಸಾವುಗಳಲ್ಲಿ ಕ್ರಮವಿಲ್ಲ ಎಲ್ಲವೂ ಅವರವರ ಕರ್ಮದಿಂದಲೇ' ಎನ್ನುವುದಾದರೆ ಹಾಗೇ ಆಗಲಿ. ಆದರೆ ಸೃಷ್ಟಿ ಮುಂದುವರಿಯುವುದಕ್ಕಾಗಿ ನೀನೇ ಮಾಡಿರುವ ಈ ತಂದೆತಾಯಿಮಕ್ಕಳ ಪರಸ್ಪರ ಸ್ನೇಹಪಾಶವನ್ನು ನೀನೇ ಈ ರೀತಿಯಲ್ಲಿ ಕಿತ್ತು ಹಾಕುವಿ, ಮೂರ್ಖ ನೀನು.

ಮಗು, ನೀನು ನನ್ನನ್ನು ದೀನಳನ್ನಾಗಿ ಅನಾಥೆಯನ್ನಾಗಿ ಮಾಡಿ ಬಿಟ್ಟು ಹೋಗಬೇಡ. ನೋಡು ನಿನ್ನ ತಂದೆ ಶೋಕತಪ್ತರಾಗಿದ್ದಾರೆ. ಸಂತಾನಹೀನರಿಗೆ ದಾಟಲಾಗದ ನರಕವನ್ನು ನಿನ್ನ ಸಹಾಯದಿಂದ ಅನಾಯಾಸವಾಗಿ ನಾವು ದಾಟಬೇಕು. ಅದಕ್ಕೆ ನೀನು ನಿಷ್ಕರುಣಿಯಾದ ಯಮನೊಂದಿಗೆ ದೂರಕ್ಕೆ ಹೊರಟು ಹೋಗಬೇಡ.

ಮಗು, ಎದ್ದೇಳು. ರಾಜಕುಮಾರ, ನಿನ್ನ ಜೊತೆಯ ಬಾಲಕರು ನಿನ್ನನ್ನು ಆಟಕ್ಕೆ ಕರೆಯುತ್ತಿದ್ದಾರೆ. ತುಂಬ ಹೊತ್ತು ಮಲಗಿರುವೆ. ನಿನಗೆ ಹಸಿವಾಗಿರುತ್ತದೆ. ಊಟ ಮಾಡು. ಎದೆ ಹಾಲು ಉಣ್ಣು, ಬಂಧುಗಳಾದ ನಮ್ಮೆಲ್ಲರ ಶೋಕವನ್ನು ಹೋಗಲಾಡಿಸು.

ಮಗು, ನಾನು ಭಾಗ್ಯಹೀನಳು. ಮುಗ್ಧ ಮಂದಹಾಸ ಬೀರುವ ಅರಳಿದ ಕಣ್ಣುಗಳ ನಿನ್ನ ಮುಖಕಮಲವನ್ನು ಕಣ್ಣುತುಂಬ ತೃಪ್ತಿಯಾಗುವಷ್ಟು ನಾನಿನ್ನೂ ನೋಡೇ ಇಲ್ಲ. ಸವಿಯಾದ ನಿನ್ನ ತೊದಲು ನುಡಿ ನನಗೆ ಕೇಳಿಸುತ್ತಿಲ್ಲ. ನಿಷ್ಕರುಣಿಯಾದ ಯಮ ನಿನ್ನನ್ನು ತಿರುಗಿ ಹಿಂದೆ ಬರಲಾಗದ ಪರಲೋಕಕ್ಕೆ ಕರೆದೊಯ್ದನೆ, ನೀನು ಅಲ್ಲಿಗೆ ಹೋಗಿಬಿಟ್ಟೆಯ?

ಇಲ್ಲಿ ಚಿತ್ರಕೇತು ಮಹಾಭಗವದ್ಭಕ್ತ. ಅವನ ನಿಯತಪತ್ನಿಯಾದ ಈ ಕೃತದ್ಯುತಿ ಹೀಗೆ ಬ್ರಹ್ಮನನ್ನು ನಿಂದಿಸುವುದು ಸಂಭವನೀಯವೆ? ಎಂಬ ಪ್ರಶ್ನೆ ಬರುತ್ತದೆ. ವಿಶ್ವನಾಥವ್ಯಾಖ್ಯಾನದಲ್ಲಿ ಬ್ರಹ್ಮ ಕೃತದ್ಯುತಿಗೆ ಹೀಗೆ ಪುತ್ರಶೋಕ ತಂದು ನೀಡಿದುದು ಅವನ ಮೂರ್ಖತನವೆ. ಹಾಗೆ ನಿಶ್ಚಯಿಸಿ ಆತ ಮುಂದೆ ಇಂಥ ಮೂರ್ಖತನ ಕೆಲಸ ಮಾಡದಿರಲಿ ಎಂದು ಹಿತೈಷಿಯಾಗಿಯೇ ರಾಣಿ ಬ್ರಹ್ಮನಿಗೆ ಉಪದೇಶ ಮಾಡುತ್ತಿದ್ದಾಳೆ! ಗಿರಿಧರ ವ್ಯಾಖ್ಯಾನವೂ ಹೀಗೇ ಹೇಳುತ್ತದೆ!

ವಸ್ತುತಃ ಮೇಲಿನ ಪ್ರಶ್ನೆಗೆ ಹೀಗೆ ಸಮಾಧಾನ–

ಸಂತಾಪಕ್ರೋಧರಾಗಾದಿಷ್ವನರ್ಥಕವಚಃ ಕ್ವಚಿತ್ ।

ಇತಿ ಶಬ್ದನಿರ್ಣಯೇ ।

ಸಂತಾಪಕ್ರೋಧ ಅನುರಾಗಾದಿ ಪರವಶತೆ ಬಂದಾಗ ಅನರ್ಥಕವಾದ ಮಾತುಗಳೂ ಕೆಲವೊಮ್ಮೆ ಸಜ್ಜನರ ಬಾಯಿಂದ ಬರುತ್ತವೆ ಎಂದು ಶಬ್ದನಿರ್ಣಯದಲ್ಲಿ ಹೇಳಿದೆ.

**ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ
ಚತುರ್ದಶೋಽಧ್ಯಾಯಃ ॥**

—o—

ಅಧ್ಯಾಯ-೧೫

ಅಧ್ಯಾಯಸಾರಾಂಶ

'ರಾಜನೆ, ಸಂಸಾರದಲ್ಲಿ ಈ ತಂದೆ ಮಕ್ಕಳು ಮುಂತಾದ ಸಂಬಂಧ ಶಾಶ್ವತವಲ್ಲ. ಪ್ರವಾಹದಲ್ಲಿ ಮರಳುಗಳು ಒಂದು ಕ್ಷಣ ಸೇರಿ ಮರುಕ್ಷಣ ಬೇರೆಯಾಗುವುವು. ಬಿತ್ತಿದ ಬೀಜಗಳೆಲ್ಲವೂ ಅಂಕುರಿಸುವ ನಿಯಮವಿಲ್ಲ. ಹುಟ್ಟಿದ ಮಕ್ಕಳೆಲ್ಲ ಬೆಳೆದು ದೊಡ್ಡವರಾಗುವರೆಂಬ ನಿಯಮವೂ ಇಲ್ಲ. ಶರೀರಕ್ಕೆ ಉತ್ಪತ್ತಿನಾಶಗಳೇ ಹೊರತು ಜೀವನಿಗೆ ಅವು ಇಲ್ಲ. ಇದನ್ನು ತಪ್ಪಾಗಿ ತಿಳಿದು ದುಃಖಿಸಬೇಡ. ಹೆಂಡತಿ ಮಕ್ಕಳಲ್ಲಿ ಅತಿಯಾದ ಮೋಹವನ್ನು ಬಿಟ್ಟು ಅವರೊಳಗೆ ಅಂತರ್ಯಾಮಿಯಾಗಿರುವ ಸರ್ವೇಶ್ವರನಾದ ವಾಸುದೇವನಲ್ಲಿ ಮನಸ್ಸಿಡು' ಎಂದು ಹೇಳಿ, 'ರಾಜನೆ, ನಾನು ಅಂದು ನಿನಗೆ ತತ್ತ್ವೋಪದೇಶ ನೀಡಲೆಂದೇ ಬಂದಿದ್ದೆ. ಆದರೆ ಕಾಲ ಪಕ್ವವಾಗಿಲ್ಲ ಎಂದು ಸಂತತಿವರವನ್ನೇ ನೀಡಿದೆ. ಅದು ಮಕ್ಕಳಿದ್ದವರ ದುಃಖಕ್ಕೇ ಕಾರಣವಾಗುತ್ತವೆ. ಹಿಂದೆ ಭೋಜನೆಂಬ ರಾಜ ಸ್ವಪ್ನದಲ್ಲಿ ಶತ್ರುಗಳು ತನ್ನೆಲ್ಲ ಸಂಪತ್ತನ್ನು ಅಪಹರಿಸಿದಂತೆ ತನ್ನ ತಲೆಯನ್ನೇ ಕತ್ತರಿಸಿದಂತೆ ನೋಡಿ ವೈರಾಗ್ಯದಿಂದ ದೇಹಾಭಿಮಾನವನ್ನು ತೊರೆದ. ನೀನೂ ಹಾಗೇ ಮಾಡು' ಎಂದರು. ನಾರದರು ಅವನಿಗೆ ಸಂಕರ್ಷಣಮಂತ್ರವನ್ನು ಉಪದೇಶಿಸಿ ನಿನಗೆ ಏಳು ದಿನಗಳಲ್ಲಿ ಭಗವಂತನ ದರ್ಶನವಾಗುವುದೆಂದು ಹರಸಿದರು.

* * *

ಚಿತ್ರಕೇತು ರಾಜ ಪುತ್ರಶೋಕದಿಂದ ರೋದಿಸುತ್ತಿದ್ದಾಗ ನಾರದ ಅಂಗಿರ ಋಷಿಗಳು ಬಂದು ವೈರಾಗ್ಯೋಪದೇಶ ಮಾಡಿದರು. ಎಲ್ಲವನ್ನೂ ಕೇಳಿದ ಬಳಿಕ ರಾಜ 'ಭೂಮಿಯ ಮೇಲೆ ಜ್ಞಾನದ ಬೆಳಕನ್ನು ನೀಡುತ್ತ ಅನೇಕ ಋಷಿಗಳು ಸಂಚರಿಸುತ್ತಾರೆ. ಅವರಲ್ಲಿ ನೀವು ಯಾರು' ಎಂದು ಕೇಳುತ್ತಾನೆ.

ಚರಂತಿ ಹ್ಯವನೌ ಕಾಮಂ ಬ್ರಾಹ್ಮಣಾ ಭಗವತ್ಪ್ರಿಯಾಃ ।
ಮಾದೃಶಾಂ ಗ್ರಾಮ್ಯಬುದ್ಧೀನಾಂ ಬೋಧಾಯೋನ್ಮತ್ತಲಿಂಗಿನಃ
॥ ೧೫ ॥

ಕುಮಾರೋ ನಾರದ ಋಭುರಂಗಿರಾ ದೇವಲೋಽಸಿತಃ ।
ಅಪಾಂತರತಮೋ ವ್ಯಾಸೋ ಮಾರ್ಕಂಡೇಯೋಽಥ ಗೌತಮಃ
॥ ೧೬ ॥

ವಸಿಷ್ಠೋ ಭಗವಾನ್ ರಾಮಃ ಕಪಿಲೋ ಬಾದರಾಯಣಿಃ ।
ದುರ್ವಾಸಾ ಯಾಜ್ಞವಲ್ಕ್ಯಶ್ಚ ಜಾತೂಕರ್ಣ್ಯಸ್ತಥಾಽಽರುಣಿಃ ॥ ೧೭ ॥
ರೋಮಶಶ್ಚ್ಯವನೋ ದತ್ತ ಆಸುರಿಃ ಸಪತಂಜಲಿಃ ।
ಪರಾಶರೋಽಥ ಮೈತ್ರೇಯೋ ಭರದ್ವಾಜಶ್ಚ ಆರುಣಃ ।
ಋಷಿರ್ವೇದಶಿರಾ ಬೋಧ್ಯೋ ಮುನಿಃ ಪಂಚಶಿಖಸ್ತಥಾ ॥ ೧೮ ॥
ಹಿರಣ್ಯನಾಭಃ ಕೌಶಲ್ಯಃ ಶ್ರುತದೇವಃ ಕ್ರತುಧ್ವಜಃ ।
ಏತೇ ಪರೇ ಚ ಸಿದ್ಧೇಶಾಶ್ಚರಂತಿ ಜ್ಞಾನಹೇತವಃ ॥ ೧೯ ॥

ಭಗವಂತನಿಗೆ ಪ್ರಿಯರಾದ ಬ್ರಾಹ್ಮಣರು ಹುಚ್ಚರ ವೇಷ ಧರಿಸಿ ನಮ್ಮಂಥ ವಿಷಯಾಸಕ್ತರಿಗೆ ಜ್ಞಾನ ನೀಡಲು ಯಥೇಚ್ಛವಾಗಿ ಸಂಚರಿಸುತ್ತಾರೆ. ಸನತ್ಕುಮಾರ ನಾರದ ಋಭು ಅಂಗಿರಸ್ ದೇವಲ ಅಸಿತ ಅಪಾಂತರತಮ ವ್ಯಾಸ ಮಾರ್ಕಂಡೇಯ ಗೌತಮ ವಸಿಷ್ಠ ಪರಶುರಾಮ ಕಪಿಲ ಶುಕ ದುರ್ವಾಸ ಯಾಜ್ಞವಲ್ಕ್ಯ ಜಾತುಕರ್ಣ್ಯ ಆರುಣಿ ರೋಮಶ ಚ್ಯವನ ದತ್ತ ಆಸುರಿ ಪತಂಜಲಿ ಪರಾಶರ ಮೈತ್ರೇಯ ಭರದ್ವಾಜ ಆರುಣ ವೇದಶಿರಸ್ ಬೋಧಾಯನ ಪಂಚಶಿಖ ಹಿರಣ್ಯನಾಭ ಕೌಶಲ್ಯ ಶ್ರುತದೇವ ಕ್ರತುಧ್ವಜ ಮತ್ತು ಇನ್ನೂ ಬೇರೆ ಸಿದ್ಧಪುರುಷರು ಜ್ಞಾನ ನೀಡಲು ಸಂಚರಿಸುತ್ತಾರೆ.

ಇಲ್ಲಿ ಹೇಳಿದ ಮುನಿಗಳಲ್ಲಿ ಕೆಲವರು ಸಾಕ್ಷಾದ್ ಭಗವಂತನ ಅವತಾರಗಳು. ಕೆಲವರು ಭಗವದ್ಭಕ್ತರು. ಅವರಲ್ಲಿಯೂ ಕೆಲವರು ಬ್ರಹ್ಮಾದಿ ಉತ್ತಮದೇವತೆಗಳು ಉಳಿದವರು ಸಾಧಾರಣ ಋಷಿಗಳು. ರಾಜ ಎಲ್ಲರನ್ನೂ ಸಾಧಾರಣವಾಗಿ 'ಭಗವತ್ಪ್ರಿಯಾಃ ಸಿದ್ಧೇಶಾಃ' ಎಂದು ವಿಶೇಷಣ ಕೊಟ್ಟು ಹೆಸರಿಸುತ್ತಾನೆ. ಆದರೂ ನಾವು ತಾರತಮ್ಯವನ್ನು ತಿಳಿಯಬೇಕು ಹೇಗೆ? ಈ ಪ್ರಶ್ನೆಗೆ ಸಮಾಧಾನ–

ನಾರಾಯಣಾಯನಾ ದೇವಾಃ ಋಷ್ಯಾದ್ಯಾಸ್ತತ್ಪರಾಯಣಾಃ ।
ಬ್ರಹ್ಮಾದ್ಯಾಃ ಕೇಚನೈವ ಸ್ಯುಃ ಸಿದ್ಧೋ ಯೋಗ್ಯಸುಖಂ ಲಭನ್ ॥
ಇತಿ ತಂತ್ರಭಾಗವತೇ ।

ನವಕೋಟ್ಯಸ್ತು ದೇವಾನಾಮೃಷಯಃ ಶತಕೋಟಯಃ ।
ನಾರಾಯಣಾಯನಾಃ ಸರ್ವೇ ಯೇಕೇಚಿತ್ ತತ್ಪರಾಯಣಾಃ ।
ಇತಿ ಚ ॥

ದೇವತೆಗಳು ಋಷಿಗಳು ಮುಂತಾದವರು ಎಲ್ಲರೂ ನಾರಾಯಣನ ಭಕ್ತರೆ ಅವರಲ್ಲಿಯೂ ಬ್ರಹ್ಮಾದಿಗಳು ಕೆಲವರು ಮಾತ್ರ ಅವನ ಅಂತರಂಗಭಕ್ತರು ಸಿದ್ಧರೆಂದರೆ ಯೋಗ್ಯ ಮೋಕ್ಷಸುಖವನ್ನು ಹೊಂದಿರುವವರು ಎಂದು ತಂತ್ರಭಾಗವತದಲ್ಲಿ ಹೇಳಿದೆ.

ದೇವತೆಗಳು ಒಂಬತ್ತು ಕೊಟಿ. ಋಷಿಗಳು ನೂರು ಕೋಟಿ. ಅವರೆಲ್ಲರೂ ನಾರಾಯಣನ ಭಕ್ತರೆ. ಆದರೆ ಅವರಲ್ಲಿಯೂ ಕೆಲವರು ನಾರಾಯಣನ ಅಂತರಂಗಭಕ್ತರು ಎಂದೂ ಹೇಳಿದೆ.

ಭಾಗವತದಲ್ಲಿ ಸಿದ್ಧರೆಂದರೆ ಮುಕ್ತರು. ಸಿದ್ಧೇಶರೆಂದರೆ ಮುಕ್ತರಿಗೆ ಒಡೆಯನಾದ ಭಗವಂತನ ವ್ಯಾಸ ಪರಶುರಾಮ ಕಪಿಲ ಮುಂತಾದ ಋಷಿರೂಪಗಳು. ಉಳಿದ ಋಷಿಗಳೆಲ್ಲರೂ ನಾರಾಯಣಾಯನರು. ಅಂದರೆ ನಾರಾಯಣನ ಭಕ್ತರು. ಅವರಲ್ಲಿಯೂ ಕೆಲವರು ದುರ್ವಾಸ ಶುಕ ಮುಂತಾದವರು ನಾರಾಯಣ ಪರಾಯಣರು, ಅಂದರೆ, ನಾರಾಯಣನ ಪರಮ ಅಂತರಂಗಭಕ್ತರು. ನಾರಾಯಣಾಯನರೂ ನಾರಾಯಣಪರಾಯಣರೂ ಬ್ರಾಹ್ಮಣರು, ಭಗವತ್ಪ್ರಿಯರು.

'ಮುಕ್ತಾನಾಮಪಿ ಸಿದ್ಧಾನಾಂ'(೧೪.೫) ಎಂದು ಹಿಂದೆ ಹೇಳಿದ ಶ್ಲೋಕಕ್ಕೂ ತಾತ್ಪರ್ಯವನ್ನು ತಂತ್ರಭಾಗವತದ ಇವೇ ವಚನಗಳು ನಿರ್ಣಯಿಸುತ್ತವೆ. ಪ್ರಚಲಿತಪಾಠದಲ್ಲಿ ಈ ವಚನಗಳು ಹಿಂದಿನ ಅಧ್ಯಾಯದಲ್ಲಿ ಪಠಿತವಾಗಿದೆಯಾದರೂ ವಿಜಯಧ್ವಜೀಯಟೀಕಾನುಸಾರ ಅವು ಈ ಅಧ್ಯಾಯದಲ್ಲಿ ಪಠಿತವಾಗಿವೆ. ಈ ಅಧ್ಯಾಯದಲ್ಲಿ ವಿಜಯಧ್ವಜೀಯದ ವನಮಾಲಿರಾಯಬಹಾದೂರ್ ಅವರ ಪಾಠ ಹೀಗೆ ಹೇಳಿದೆ–

'ನಾರಾಯಣಾಯನಾ ದೇವಾ ಇತ್ಯಾದಿ ವಾಕ್ಯಂ ಮುಕ್ತಾನಾಮಪಿ ಸಿದ್ಧಾನಾಂ ನಾರಾಯಣಪರಾಯಣಃ ಇತ್ಯತ್ರ ಚ ಪ್ರಮಾಣಾರ್ಥಮಸ್ಮಿನ್ನಧ್ಯಾಯ ಉದಾಹೃತಮ್ ।

* * *

ಹೆಂಡತಿ ಮಕ್ಕಳು ಮುಂತಾದ ವಿಷಯ ಭೋಗಗಳಿಗೆ ವಿಷಯಾಸೆಯನ್ನು ಹೊತ್ತ ಮನಸಿನಿಂದಾಗುವ ಕಾಮ್ಯಕರ್ಮಗಳು ಕಾರಣ. ಅದರಿಂದ ಆ ವಿಷಯ ಭೋಗಗಳೆಲ್ಲವೂ ಅನಿತ್ಯ ಎಂದು ಅಂಗಿರಸ ಮುನಿ ಚಿತ್ರಕೇತುರಾಜನಿಗೆ ಉಪದೇಶಿಸುತ್ತಾರೆ.

ಅಧುನಾ ಪುತ್ರಿಣಾಂ ತಾಪೋ ಭವತೈವಾನುಭೂಯತೇ ।
ಏವಂ ದಾರಾ ಗೃಹಾ ರಾಯೋ ವಿವಿಧೈಶ್ವರ್ಯಸಂಪದಃ ॥ ೨೫ ॥

ಶಬ್ದಾದಯಶ್ಚ ವಿಷಯಾಶ್ಚಲಾ ರಾಜನ್ ವಿಭೂತಯಃ ।
ರಾಜ್ಯಂ ಮಹೀ ಬಲಂ ಕೋಶೋ ಭೃತ್ಯಾಮಾತ್ಯಸುಹೃಜ್ಜನಾಃ ॥ ೨೬ ॥

ಸರ್ವೇಽಪಿ ಶೂರಸೇನೇಮೇ ಶೋಕಮೋಹಭಯಾರ್ತಿದಾಃ ।
ಗಂಧರ್ವನಗರಪ್ರಖ್ಯಾಃ ಸ್ವಪ್ನಮಾಯಾಮನೋರಥಾಃ ॥ ೨೭ ॥

ದೃಶ್ಯಮಾನಾ ವಿನಾಽರ್ಥೇನ ನ ದೃಶ್ಯಂತೇ ಮನೋಭವಾಃ ।
ಕರ್ಮಾಭಿಧ್ಯಾಯತೋ ನಾನಾ ಕರ್ಮಾಣಿ ಮನಸೋಽಭವನ್ ॥ ೨೮ ॥

ಈಗ ಮಕ್ಕಳಿದ್ದವರ ದುಃಖ ನಿನಗೇ ಅನುಭವಕ್ಕೆ ಬಂದಿದೆ. ಹೀಗೆಯೇ ಹೆಂಡತಿ ಮನೆ ಹಣ ನಾನಾ ಬಗೆಯ ಅಧಿಕಾರಸಂಪತ್ತುಗಳು ಶಬ್ದ ರಸ ಮುಂತಾದ ವಿಷಯಭೋಗಗಳು, ವೈಭವಗಳು ರಾಜ್ಯ ಭೂಮಿ ಸೈನ್ಯ ಕೋಶ ಸೇವಕರು ಅಮಾತ್ಯರು ಮಿತ್ರಜನರು ಇವರೆಲ್ಲರೂ ಶೋಕ ಮೋಹ ಭಯ ದುಃಖಗಳಿಗೇ ಕಾರಣರು ಗಂಧರ್ವನಗರದಂತೆ ಸ್ವಪ್ನ ಪದಾರ್ಥ, ಇಂದ್ರಜಾಲ, ಹಗಲುಗನಸುಗಳಂತೆ ಕಾಣಿಸಿಕೊಳ್ಳುತ್ತಾರೆ. ಪದಾರ್ಥವಿಲ್ಲದೆ ಕೇವಲ ಭ್ರಾಂತಿಯಿಂದ ಕಾಣಿಸಿಕೊಳ್ಳುವುದಿಲ್ಲ. ವಿಷಯಪದಾರ್ಥಗಳನ್ನು ಅಭಿಲಾಷೆ ಪಡುವ ಮನಸ್ಸಿನಿಂದ ನಾನಾ ಕರ್ಮಗಳು ಉಂಟಾಗುವುದರಿಂದ ಆ ಕಾಮ್ಯ ಕರ್ಮಗಳಿಂದ ಸಂಪಾದಿತವಾದ ಎಲ್ಲ ವಿಷಯಪದಾರ್ಥಗಳು 'ಮನೋಭವ'ವೆನಿಸುತ್ತವೆಯಷ್ಟೆ, ಹೊರತು ಅವು ಮಿಥ್ಯೆಯಲ್ಲ, ಅನಿತ್ಯವಾಗಿವೆ.

[1]ಇಲ್ಲಿ 'ದೃಶ್ಯಮಾನಾ ವಿನಾರ್ಥೇನ ನ ದೃಶ್ಯಂತೇ ಮನೋಭವಾಃ' ಎಂದು ಜಗನ್ಮಿಥ್ಯಾತ್ವವನ್ನು ಹೇಳಿದಂತೆ ಕಾಣುತ್ತದೆ. ಶ್ರೀಧರವ್ಯಾಖ್ಯಾನ ಹಾಗೇ ಹೇಳುತ್ತದೆ– 'ವಿಷಯಪದಾರ್ಥಗಳೆಲ್ಲವೂ ಮನೋಭವ. ಮನಸಿನ ಕಲ್ಪನೆಗಳಷ್ಟೆ. ಏಕೆಂದರೆ 'ಅರ್ಥೇನ ವಿನಾ ದೃಶ್ಯಮಾನಾಃ' ತಾತ್ವಿಕಸ್ವರೂಪವಿಲ್ಲದೆಯೇ ಕಾಣಿಸಿಕೊಳ್ಳುತ್ತವೆ.

---

೧. ಮನೋಭವಾ ಮನೋಮಾತ್ರವಿಜೃಂಭಿತಾಃ । ಅತ್ರ ಹೇತುಃ ಅರ್ಥೇನ ತಾತ್ವಿಕಸ್ವರೂಪೇಣ ವಿನೈವ ದೃಶ್ಯಮಾನಾಃ । ತತ್ಕುತಃ । ಯಸ್ಮಾತ್ ಕ್ಷಣಾಂತರೇ ನ ದೃಶ್ಯಂತೇ । ತಾತ್ವಿಕತ್ವೇ ಹಿ ಕ್ಷಣಾಂತರೇ ಬಾಧೋ ನ ಸ್ಯಾತ್ । ಅತೋ ಮನೋಮಾತ್ರ ವಿಜೃಂಭಿತತ್ವೇನ ಸ್ವಪ್ನಾದಿವನ್ಮಿಥ್ಯಾಭೂತಾ ಇತ್ಯರ್ಥಃ । ನನ್ವೇತೇ ಪುಣ್ಯಾಪುಣ್ಯಕೃತಾ ಇತಿ ಮೀಮಾಂಸಕಾಃ ಪ್ರಾಹುಃ । ತತ್ ಕುತೋ ಮನೋಭವತ್ವಂ ತತ್ರಾಹ । ಕರ್ಮಭಿಃ ಕರ್ಮವಾಸನಾಭಿರರ್ಥಾನ್ ಧ್ಯಾಯತಃ ಪುಂಸೋ ಮನಸ ಏವ ನಿಮಿತ್ತಾತ್ ಕರ್ಮಾಣ್ಯಭವನ್ । ಕರ್ಮಣೋಽಪಿ ಮನೋಭವತ್ವಾತ್ ತತ್ಸಾಧ್ಯಾ ಅರ್ಥಾ ಅಪಿ ಮನೋಭವಾ ಏವೇತಿ ಭಾವಃ । –ಶ್ರೀಧರಃ

ಹಾಗೇ ಏಕೆ ಹೇಳಬೇಕೆಂದರೆ 'ನ ದೃಶ್ಯಂತೇ' ಮರುಕ್ಷಣದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಸತ್ಯವಾಗಿದ್ದರೆ ಮರುಕ್ಷಣದಲ್ಲಿಯೂ ಕಾಣಿಸಿ ಕೊಳ್ಳುತ್ತಿತ್ತು. ಬಾಧಜ್ಞಾನ ಉಂಟಾಗುತ್ತಿರಲಿಲ್ಲ. ಅದರಿಂದ ಸ್ವಪ್ನದಂತೆ ಮಿಥ್ಯಾ ಆದರೆ 'ಮೀಮಾಂಸಕರು ವಿಷಯಪದಾರ್ಥಗಳನ್ನು ಕಾಮ್ಯಕರ್ಮಜನ್ಯವೆನ್ನುತ್ತಾರೆ. ಕೇವಲ ಮನಸಿನ ಕಲ್ಪನೆ, 'ಮನೋಭವ'ವೆನಿಸುವುದು ಹೇಗೆ' ಎಂಬ ಪ್ರಶ್ನೆ ಬಂದರೆ, ಕರ್ಮವೂ ಮನಸಿನಿಂದ ಹುಟ್ಟುತ್ತದೆ, ಅದರಿಂದ ಕರ್ಮಜನ್ಯವೂ ಮನೋಜನ್ಯವೇ ಆಗುವುದರಿಂದ ಮನೋಭವ ಎನ್ನುವುದು ತಪ್ಪಲ್ಲ' ಎಂದು ಉತ್ತರ' ಎನ್ನುತ್ತಾರೆ.

ಆದರೆ ಇಲ್ಲಿ 'ನ ದೃಶ್ಯಂತೇ' ಎಂಬಲ್ಲಿ ಕ್ಷಣಾಂತರೇ ಎಂದು ಅಧ್ಯಾಹಾರ ಮಾಡಿಕೊಳ್ಳುವುದು ತಪ್ಪು. 'ಅರ್ಥೇನ ವಿನಾ ನ ದೃಶ್ಯಂತೇ' ತಾತ್ವಿಕಸ್ವರೂಪವಿಲ್ಲದೆ ಕಾಣಿಸಿಕೊಳ್ಳುವುದಿಲ್ಲ. ತಾತ್ವಿಕಸ್ವರೂಪದೊಂದಿಗೇ ಕಾಣಿಸಿಕೊಳ್ಳುತ್ತದೆ ಎಂದು ಸ್ವರಸವಾಗಿ ಮಿಥ್ಯಾತ್ವ ನಿರಾಕರಣೆಯೇ ಇಲ್ಲಿ ಕಾಣುತ್ತಿದೆ. 'ಕ್ಷಣಾಂತರೇ ನ ದೃಶ್ಯಂತೇ' ಮರುಕ್ಷಣದಲ್ಲಿ ಕಾಣಿಸಿಕೊಳ್ಳುವುದಿಲ್ಲ' ಎಂದರೂ ಮರುಕ್ಷಣದಲ್ಲಿ ಅವು ಇಲ್ಲ, ಅನಿತ್ಯವಾದ್ದರಿಂದ. ಅದರಿಂದ ಕಾಣಿಸಿಕೊಳ್ಳುವುದಿಲ್ಲ. ಹೊರತು, ಬಾಧಜ್ಞಾನ ಉಂಟಾಗುತ್ತದೆ ಎನ್ನಲು ಶ್ಲೋಕದಲ್ಲಿ ಶಬ್ದವಿಲ್ಲ. ಮೀಮಾಂಸಕರು ಮನಸಿನಿಂದ ಕರ್ಮ, ಕರ್ಮದಿಂದ ವಿಷಯಪದಾರ್ಥ ಹುಟ್ಟುತ್ತದೆ, ಹೀಗಾಗಿ ವಿಷಯಪದಾರ್ಥ ಮನೋಭವ ಎಂಬುದನ್ನು ಒಪ್ಪುತ್ತಾರೆ. ಮನಸಿನ ಕಲ್ಪನೆ ಎಂಬ ಅರ್ಥದಲ್ಲಿ ಮನೋಭವ ಹೇಗೆ ಎಂದು ಕೇಳುತ್ತಾರೆ. ಅದಕ್ಕೆ 'ನೀವು ಹೇಳುವ ರೀತಿಯಲ್ಲಿಯೇ 'ಮನೋಭವ'ವೆಂದು ನಾವೂ ಹೇಳುತ್ತೇವೆ' ಎಂದು ಉತ್ತರಿಸಿದರೆ ಮನಸಿನ ಕಲ್ಪನೆ, ಮಿಥ್ಯಾ ಎಂಬ ಪಕ್ಷವನ್ನು ತೊರೆದಂತಾಗುತ್ತದೆ.

ವಸ್ತುತಃ 'ಮನೋಭವ' ಎಂದರೆ ಮನಸಿನಿಂದ ಕರ್ಮದ ಮೂಲಕ ಹುಟ್ಟಿದ್ದು ಸತ್ಯವೇ ಆಗಿರುವ ಪದಾರ್ಥ ಎಂದೇ ಭಾಗವತದ ಅಭಿಪ್ರಾಯ. ನಾರದ ಪುರಾಣದಲ್ಲಿಯೂ ಹಾಗೇ ಹೇಳಿದೆ.

ಮನಸೋ ದ್ವೇಷರಾಗಾಭ್ಯಾಂ ಪುಣ್ಯಪಾಪಸಮುದ್ಭವಃ ।
ಪುತ್ರಾದಿ ಪುಣ್ಯಪಾಪಾಭ್ಯಾಂ ತಸ್ಮಾತ್ ಸರ್ವಂ ಮನೋಭವಮ್ ।
ಇತಿ ನಾರದೀಯೇ ।

ಮನಸಿನ ರಾಗದ್ವೇಷಗಳಿಂದ ಪುಣ್ಯಪಾಪಗಳ ಉತ್ಪತ್ತಿ. ಪುಣ್ಯಪಾಪಗಳಿಂದ ಪುತ್ರಾದಿ ಉತ್ಪತ್ತಿ. ಅದರಿಂದ ಮನೋಭವವೇ ಎಲ್ಲವೂ ಎಂದು ನಾರದಪುರಾಣದಲ್ಲಿ ಉಕ್ತವಾಗಿದೆ.

* * *

ಶರೀರ ಇಂದ್ರಿಯಗಳು ಅವುಗಳಲ್ಲಿ ಅಭಿಮಾನ ಉಳ್ಳ ಜೀವನಿಗೆ ಕ್ಲೇಶದಾಯಕವಾದ್ದರಿಂದ ಮಿಥ್ಯೆಯಲ್ಲ. ಅನಿತ್ಯ ಎಂದು ಅಂಗಿರಸಮುನಿ ಚಿತ್ರಕೇತುರಾಜನಿಗೆ ವೈರಾಗ್ಯೋಪದೇಶ ನೀಡುತ್ತಾರೆ.

ಅಯಂ ಹಿ ದೇಹಿನೋ ದೇಹೋ ದ್ರವ್ಯಜ್ಞಾನಕ್ರಿಯಾತ್ಮಕಃ ।
ದೇಹಿನೋ ವಿವಧಕ್ಲೇಶಸಂತಾಪಕೃದುದಾಹೃತಃ ॥ ೨೯ ॥

ದೇಹಿಯ ಈ ದೇಹ ಪಂಚಭೂತ ಜ್ಞಾನೇಂದ್ರಿಯ ಕರ್ಮೇಂದ್ರಿಯಾತ್ಮಕವಾಗಿದ್ದು ದೇಹಿಗೆ ನಾನಾ ಬಗೆಯ ಕ್ಲೇಶ ಸಂತಾಪದಾಯಕವೆನಿಸುತ್ತದೆ. ಆದರಿಂದ ಮಿಥ್ಯೆಯಲ್ಲ.

ಇಲ್ಲಿ ದೇಹವು ದ್ರವ್ಯಾತ್ಮಕ. ಏಕೆಂದರೆ ಪಂಚಭೂತಗಳು ದ್ರವ್ಯಗಳು. ಅವುಗಳ ಪರಿಣಾಮರೂಪವಾದ್ದರಿಂದ ದೇಹವೂ ದ್ರವ್ಯಾತ್ಮಕ. ಆದರೆ ಜ್ಞಾನೇಂದ್ರಿಯಗಳು ಜ್ಞಾನಾತ್ಮಕ ಹೇಗೆ? ಜ್ಞಾನಕ್ಕೂ ಇಂದ್ರಿಯಗಳಿಗೂ ಅಭೇದ ಶಕ್ಯವಿಲ್ಲ. ಜ್ಞಾನ ಇಂದ್ರಿಯಪರಿಣಾಮರೂಪವಲ್ಲ. ಹಾಗೇ ಕ್ರಿಯೆಯೂ ಕರ್ಮೇಂದ್ರಿಯ ಪರಿಣಾಮವಲ್ಲ. ಶರೀರದಲ್ಲಿ ಕ್ರಿಯೆ ಕರ್ಮೇಂದ್ರಿಯ ಗಳಿಂದಾಗುತ್ತಷ್ಟೆ. ಆದರಿಂದ ಅಭೇದವಿಲ್ಲ. ಬೇರೆ ವ್ಯಾಖ್ಯಾನಕಾರರು ಈ ಪ್ರಶ್ನೆಯನ್ನು ಎತ್ತಿ ಕೊಳ್ಳುವುದಿಲ್ಲ. ಅಭೇದವಿಲ್ಲದಿದ್ದರೂ ಕಾರ್ಯಕಾರಣಭಾವವಿದ್ದ ಮಾತ್ರಕ್ಕೆ ಕಾರ್ಯವಾಚಕ ಶಬ್ದದಿಂದ ಗೌಣವಾಗಿ ಕಾರಣವನ್ನು ಹೇಳುವುದು ಶಬ್ದನಿರ್ಣಯ ವಚನದಿಂದ ಸಿದ್ಧವಾಗುವುದು. ಆದರಿಂದ ದ್ರವ್ಯವೆಂದರೆ ಪಾಂಚಭೌತಿಕವಾದ ಸ್ಥೂಲದೇಹ. ಜ್ಞಾನವೆಂದರೆ ಜ್ಞಾನೇಂದ್ರಿಯ. ಕ್ರಿಯಾ ಎಂದರೆ ಕರ್ಮೇಂದ್ರಿಯ. ಈ ಮೂರರ ಸಮೂಹವನ್ನೂ ದೇಹ ಎಂದೇ ಕರೆಯುತ್ತಾರೆ.

ದ್ರವ್ಯಾತ್ಮಕಃ ಸ್ಥೂಲದೇಹಃ ಕ್ರಿಯಾ ಕರ್ಮೇಂದ್ರಿಯಾಣಿ ಚ ।
ಜ್ಞಾನೇಂದ್ರಿಯಾಣಿ ಚ ಮನೋ ಜ್ಞಾನಾತ್ಮಕಮುದಾಹೃತಮ್ ।
ಇತಿ ಬ್ರಹ್ಮವೈವರ್ತೇ ।

ಕಾರ್ಯಕಾರಣಯೋರೇಕಶಬ್ದವ್ಯವಹೃತಿರ್ಭವೇತ್ ।
ಇತಿ ಶಬ್ದನಿರ್ಣಯೇ ।

ದ್ರವ್ಯವೆಂದರೆ ಪಾಂಚಭೌತಿಕವಾದ ಸ್ಥೂಲದೇಹ. ಕ್ರಿಯೆ ಎಂದರೆ ಕರ್ಮೇಂದ್ರಿಯ ಗಳು. ಜ್ಞಾನ ಎಂದರೆ ಜ್ಞಾನೇಂದ್ರಿಯಗಳು ಮತ್ತು ಮನಸ್ಸು ಎಂದು ಬ್ರಹ್ಮವೈವರ್ತ ಪುರಾಣದಲ್ಲಿ ಉಕ್ತವಾಗಿದೆ. ಕಾರ್ಯಕಾರಣಗಳನ್ನು ಒಂದೇ ಶಬ್ದದಿಂದ ಹೇಳಬಹುದೆಂದು ಶಬ್ದನಿರ್ಣಯದಲ್ಲಿದೆ.

ಲೋಕವ್ಯವಹಾರದಲ್ಲಿರುವುದಕ್ಕೇ ಶಾಸ್ತ್ರಸಮ್ಮತಿಯನ್ನು ಶ್ರೀಮದಾಚಾರ್ಯರು ತೋರಿಸಿದ್ದಾರೆ.

* * *

ಪರತಂತ್ರನಾದ ಜೀವ ಸಂಪಾದಿಸುವ ಶರೀರಾದಿಗಳು ಯಾವುದೂ ಶಾಶ್ವತವಲ್ಲವೆಂದು ಅಂಗಿರಸಮುನಿ ಚಿತ್ರಕೇತುರಾಜನಿಗೆ ಉಪದೇಶ ಮಾಡುತ್ತಾರೆ.

ತಸ್ಮಾತ್ ಸ್ವಸ್ಥೇನ ಮನಸಾ ವಿಮೃಶ್ಯ ಗತಿಮಾತ್ಮನಃ ।
ದ್ವೈತೇ ಧ್ರುವಾರ್ಥವಿಸ್ರಂಭಂ ತ್ಯಜೋಪಶಮಮಾವಿಶ ॥ ೩೦ ॥

ಅದರಿಂದ ಸ್ವಸ್ಥಮನಸಿನಿಂದ ಪರಮಾತ್ಮನ ಸ್ವರೂಪವಿಚಾರ ಮಾಡಿ ಅದೊಂದೇ ನಿತ್ಯವೆಂದು ನಂಬು. ಪರತಂತ್ರನಾದ ಜೀವನು ಸಂಪಾದಿಸುವ ಶರೀರಾದಿಗಳ ವಿಷಯದಲ್ಲಿ ಅವು ಶಾಶ್ವತವಾದ ವಸ್ತುಗಳೆಂಬ ವಿಶ್ವಾಸವನ್ನು ಬಿಟ್ಟು ಬಿಡು. ಭಗವಂತನಲ್ಲಿ ಭಕ್ತಿ ಮಾಡು.

ಇಲ್ಲಿ 'ದ್ವೈತ'ವನ್ನು ಶಾಶ್ವತವೆಂದು ನಂಬಬೇಡ ಎಂದರೆ ಶರೀರಾದಿಗಳನ್ನು ಶಾಶ್ವತವೆನ್ನಬೇಡ ಎಂದೇ ವ್ಯಾಖ್ಯಾನಿಸಿದ್ದಾರೆ. ಆದರೆ ಶರೀರಾದಿಗಳು ದ್ವೈತವೆನಿಸುವುದು ಹೇಗೆ? ಭೇದವಿರುವುದರಿಂದ. ಹಾಗಾದರೆ ಭೇದವಿರುವುದೇ ಶರೀರಾದಿಗಳ ಅನಿತ್ಯತ್ವಕ್ಕೆ ಕಾರಣವೆ? ಭೇದ ಆಕಾಶಾದಿಗಳಲ್ಲಿ ಇದೆ. ಅವು ಅನಿತ್ಯವೆ? 'ಆಕಾಶವೂ ಅನಿತ್ಯವೆ' ಎನ್ನುವುದಾದರೆ ಅಂಥ ಅನಿತ್ಯತ್ವ ಶರೀರಾದಿಗಳಲ್ಲಿ ಇರಲಿ. ಶ್ರೀಮದಾಚಾರ್ಯರು ಹೇಳುತ್ತಾರೆ–

ಅನನ್ಯಾಪೇಕ್ಷತಸ್ತ್ವೇಕೋ ಹರಿರನ್ಯದ್ ದ್ವಯಂ ಸ್ಮೃತಮ್ ।
ಅನ್ಯಾಪೇಕ್ಷತ್ವತಸ್ತೇನ ಪ್ರಾಪ್ತತ್ವಾದ್ ದ್ವೈತಮುಚ್ಯತೇ ॥
ಇತಿ ಚ ।

ಪರಾಪೇಕ್ಷೆ ಇಲ್ಲದೆ ಸ್ವತಂತ್ರವಾಗಿರುವುದರಿಂದ ಹರಿ ಏಕನೆನಿಸುತ್ತಾನೆ. ಬೇರೆ ಎಲ್ಲವೂ ಪರಾಪೇಕ್ಷೆ ಉಳ್ಳದ್ದಾದ್ದರಿಂದ ದ್ವಯವೆನಿಸುತ್ತದೆ. ಅಥವಾ 'ದ್ವಿ' ಎನಿಸುತ್ತದೆ. ಹೀಗಾಗಿ ದ್ವಿ ಎನಿಸಿದ ಜೀವನಿಂದ 'ಇತ' ಪ್ರಾಪ್ತವಾದ ಶರೀರಾದಿ ಎಲ್ಲವೂ ದ್ವೀತ. ದ್ವೀತವೇ ದ್ವೈತ ಎಂದೂ ಶಬ್ದನಿರ್ಣಯದಲ್ಲಿ ಹೇಳಿದೆ.

ಅಸ್ವತಂತ್ರನಾದ ಜೀವ ಸಂಪಾದಿಸುವ ಶರೀರಾದಿಗಳು ಯಾವುವೂ ಅವನಿಗೆ ಶಾಶ್ವತವಲ್ಲ, ಏಕೆಂದರೆ ಅವನು ಅಸ್ವತಂತ್ರ ಎಂದು ಅಭಿಪ್ರಾಯ.

* * *

ನಿನಗೆ ನಾನೊಂದು ಶೇಷಮಂತ್ರವನ್ನು ಉಪದೇಶಿಸುತ್ತೇನೆ. ಅದನ್ನು ಜಪಿಸಿ ಬೇಗನೆ ಮೋಕ್ಷ ಪಡೆ ಎಂದು ನಾರದರು ಚಿತ್ರಕೇತುರಾಜನಿಗೆ ಹೇಳುತ್ತಾರೆ.

ಯತ್ಪಾದಮೂಲಮುಪಸೃತ್ಯ ನರೇಂದ್ರ ಪೂರ್ವೇ
ಶರ್ವಾದಯೋ ಭ್ರಮಮಿಮಂ ದ್ವಿತಯಂ ವಿಸೃಜ್ಯ ।

ಸದ್ಯಸ್ತದೀಯಮತುಲಾನಧಿಕಂ ಮಹಿತ್ವಂ
ಪ್ರಾಪುರ್ಭವಾನಪಿ ಪರಂ ನಚಿರಾದುಪೈತಿ ॥ ೩೬ ॥

ಶೇಷಾಂತರ್ಗತ ಸಂಕರ್ಷಣನ ಪಾದಸೇವೆ ಮಾಡಿಯೇ ಹಿಂದೆ ರುದ್ರಾದಿ ದೇವತೆಗಳು ದೇಹಾಭಿಮಾನವನ್ನೂ ಅದಕ್ಕೆ ಮೂಲವಾದ ದೇಹಾದಿಬಂಧವನ್ನೂ ಪರಿತ್ಯಜಿಸಿ ಸಂಕರ್ಷಣನ ಅನುಗ್ರಹದಿಂದ ಲಭ್ಯವಾಗುವ ಅವನ ಅನುಪಮವಾದ ಉತ್ತಮವಾದ ಮಾಹಾತ್ಮ್ಯವನ್ನು ಬೇಗನೆ ಪಡೆದಿದ್ದಾರೆ. ನೀನೂ ಕೂಡ ಆ ಮಹಾಮಹಿಮೆಯನ್ನು ಬೇಗನೆ ಸಂಪಾದಿಸುವೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ದ್ವಿತಯಂ ಭ್ರಮಂ' ಎಂದರೆ ಭ್ರಮ ಉಂಟುಮಾಡುವ ದ್ವೈತವನ್ನು ತೊರೆ ಎಂದು ವಿಶ್ವನಾಥ ವ್ಯಾಖ್ಯಾನ. ಶರೀರ ಶರೀರಸಂಬಂಧಿಗಳಲ್ಲಿ ಎರಡರಲ್ಲಿ ನಾನು ನನ್ನವೆಂಬ ಭ್ರಮವನ್ನು ತೊರೆ ಎಂದು ಶುಕದೇವ ವ್ಯಾಖ್ಯಾನ. ನಾನು ನನ್ನದೆಂಬ ಎರಡು ಬಗೆಯಾದ ಭ್ರಮವನ್ನು ತೊರೆ ಎಂದು ಗಿರಿಧರವ್ಯಾಖ್ಯಾನ. ನಾನು ನನ್ನ ಶರೀರ ಮುಂತಾದುವು ಯಾವುದೂ ಪರಮಾತ್ಮನ ಶರೀರವಲ್ಲ, ಸ್ವತಂತ್ರವಸ್ತುಗಳು ಎಂದು ಎರಡು ಬಗೆಯಾದ ಭ್ರಮವನ್ನೂ ತೊರೆ ಎಂದು ವೀರರಾಘವ ಭಗವತ್ಪ್ರಸಾದರ ವ್ಯಾಖ್ಯಾನಗಳು ಹೇಳುತ್ತವೆ.

ಆದರೆ ಭ್ರಮಶಬ್ದಕ್ಕೆ ಭ್ರಮಜನಕ ಎಂದು, ದ್ವಿತಯಂ ಎಂದರೆ ಎರಡರಲ್ಲಿ ಎಂದು, ಎರಡು ಬಗೆಯಾದ ಎಂದು ವ್ಯಾಖ್ಯಾನಮಾಡುವುದು ಸ್ವರಸವಲ್ಲ. ದ್ವಿತಯಂ ವಿಸೃಜ್ಯ ಭ್ರಮಂ ವಿಸೃಜ್ಯ ಎಂದು ಬೇರೆಬೇರೆ ವಾಕ್ಯಮಾಡಿಕೊಳ್ಳಬೇಕು. ಆಗ ದ್ವೈತತ್ಯಾಗವೆಂದರೆ ದೇಹಾದಿಗಳು ನನ್ನವು ಎಂಬ ಅಭಿಮಾನ ಬಂಧನವನ್ನು ಕಿತ್ತೊಗೆಯುವುದು. ಭ್ರಮವೆಂದರೆ ದೇಹ ಇಂದ್ರಿಯಗಳಿಗಿಂತ ಬೇರೆ ಆತ್ಮ ಎಂಬುದಿಲ್ಲ ಎಂದು ನಾಸ್ತಿಕರು ವಾದ ಮಾಡಿದ್ದನ್ನು ಕೇಳಿ ನಾನೇ ದೇಹಾದಿಗಳೆಂದು ಭ್ರಮಿಸುವುದು. ವಸ್ತುತಃ ಭೇದಜ್ಞಾನವೆ ಸ್ವಾಭಾವಿಕವಾಗಿ ಎಲ್ಲ ಜೀವರಿಗೂ ಇದೆ. ಆದರೆ ಅದು ಸ್ಫುಟವಾಗಿಲ್ಲ, ಅಭೇದವಿದ್ದರೆ ಹೇಗೋ ಹಾಗೇ ವ್ಯವಹಾರದಲ್ಲಿ ನಡೆದುಕೊಳ್ಳುತ್ತೇವೆ. ನಾಸ್ತಿಕರ ವಾದವನ್ನು ಕೇಳಿದಾಗ ಅಭೇದಭ್ರಮವೆ ಉಂಟಾಗುತ್ತದೆ. ಅದನ್ನು ತ್ಯಾಗ ಮಾಡಬೇಕು.

ಸಂಕರ್ಷಣನೆಂದರೆ ಶೇಷ, ಅವನ ಉಪಾಸನೆಯಿಂದ ಅವನ ಮಹಿಮೆಯೇ ಲಭ್ಯವೆಂದು ಬೇರೆ ವ್ಯಾಖ್ಯಾನಕಾರರು ಶ್ಲೋಕದಲ್ಲಿ ಮೇಲುನೋಟಕ್ಕೆ ಕಾಣುವ ಅರ್ಥವನ್ನೇ ಪರಿಗ್ರಹಿಸಿದ್ದಾರೆ. ಶುಕದೇವವ್ಯಾಖ್ಯಾನದಲ್ಲಿ ಮಾತ್ರ 'ಅವನ ಮಹಿಮೆಗೆ ಸದೃಶವಾದ ಮಹಿಮೆ' ಎಂದು ವ್ಯಾಖ್ಯಾನಿಸಿದ್ದಾರೆ. ವಸ್ತುತ ಸಂಕರ್ಷಣನೆಂದರೆ ಶೇಷಾಂತರ್ಗತವಾದ ಸಂಕರ್ಷಣ ಎಂಬ ಭಗವದ್ರೂಪ. ಅದರ ಉಪಾಸನೆಯಿಂದ

ಲಭ್ಯವಾದ ಮಹಿಮೆ ಜೀವಸ್ವರೂಪಭೂತವೇ ಆದರೂ ಅದು ಸಂಕರ್ಷಣನ ಅಧೀನವಾದ್ದರಿಂದ ಸಂಕರ್ಷಣನ ಮಹಿಮೆ ಎನಿಸುತ್ತದೆ. ಜೀವಸ್ವರೂಪಭೂತವಾದ ಮಹಿಮೆ 'ಅತುಲಾನಧಿಕ' ಎನ್ನುವುದು ಹೇಗೆ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಹೀಗೆ ಸಮಾಧಾನ ಜೀವನಿಗೆ ಸಂಸಾರಾವಸ್ಥೆಯಲ್ಲಿ ಸಿಕ್ಕಿರುವ ಎಲ್ಲ ಮಹಿಮೆಗಳೂ ಅಲ್ಪವೆ ಯಾವುದೂ ಅನುಪಮವಲ್ಲ, ಅನಧಿಕವಲ್ಲ. ಒಂದಕ್ಕೆ ಇನ್ನೊಂದು ತುಲ್ಯವಾಗಿರುತ್ತದೆ. ಅಧಿಕವೂ ಆಗಿರುತ್ತದೆ. ಮೋಕ್ಷದಲ್ಲಿ ಸಿಕ್ಕಿದ ಸ್ವರೂಪಾನಂದ ಮಾತ್ರ ಅನುಪಮ ಅನಧಿಕ. ಅದಕ್ಕೆ ಸಮನಾಗಿ ಅಥವಾ ಅಧಿಕವಾಗಿ ಯಾವುದೇ ಮಹಿಮೆ ಸಂಸಾರದಲ್ಲಿ ಸಿಕ್ಕಿರುವುದಿಲ್ಲ. ಅಥವಾ ಭಗವತನ ಮಹಿಮೆಗೆ ಸಾಟಿಯಲ್ಲ ಜೀವರ ಸ್ವರೂಪಾನಂದ. ಅದರಿಂದ ಅತುಲ. ಅಧಿಕವೂ ಅಲ್ಲ. ಅದರಿಂದ ಅನಧಿಕ. ಹೀಗೆ ಹೇಳದೆ ಭಗವಂತನ ಅನುಪಮವಾದ ಅನಧಿಕವಾದ ಮಹಿಮೆಯೇ ಜೀವರಿಗೂ ಮೋಕ್ಷದಲ್ಲಿ ಬರುತ್ತದೆ ಎಂದು ಬೇರೆ ವ್ಯಾಖ್ಯಾನಕಾರರು ಹೇಳುವುದು 'ನ ತೇ ವಿಷ್ಣೋ' ಇತ್ಯಾದಿ ಶ್ರುತಿಸ್ಮೃತಿಗಳಿಗೆ ವಿರುದ್ಧವಾಗುತ್ತದೆ.

ರುದ್ರಾದ್ಯಾಃ ಶೇಷದೇಹಸ್ಥಂ ವಿಷ್ಣುಂ ಸಂಕರ್ಷಣಾಭಿಧಮ್ ।
ಶೇಷಾಂತರ್ಯಾಮಿಣಂ ಜ್ಞಾತ್ವಾ ಸ್ವಪದಂ ಪ್ರಾಪುರಂಜಸಾ ।

ಇತಿ ತಂತ್ರಭಾಗವತೇ ।

ದ್ವೈತೇನ ಬಂಧಸಂತ್ಯಾಗಾದ್ ದ್ವೈತತ್ಯಾಗೀ ಭವತ್ಯುತ ।

ಇತಿ ಶಬ್ದನಿರ್ಣಯೇ ।

ದೇಹಾದ್ಯೇಽಹಂಮಮಾಭಿಮಾನೋ ಭ್ರಮಃ ।

ತೇಷಾಂತೇಷಾಂ ಪದಾನ್ಯೇವ ವೈಷ್ಣವಾನಿ ಪದಾನಿ ತು ।
ತೇಷಾಂ ಮಹಿತ್ವಂ ಚ ತಥಾ ಹರೇಸ್ತದ್ ವಶಗಂ ಯತಃ ।
ಅತುಲ್ಯಾನಧಿಕಂ ಚೈವ ತಸ್ಯತಸ್ಯೈವ ಮುಕ್ತಿಗಮ್ ॥

ಸ್ವಸ್ಯೈವ ಪೂರ್ವಮಾಹಾತ್ಮ್ಯಮಪೇಕ್ಷ್ಯ ನ ಹರೇಃ ಕ್ವಚಿತ್ ।
ಮಾಹಾತ್ಮ್ಯಮನ್ಯಪ್ರಾಪ್ಯಂ ಸ್ಯಾನ್ನತೇ ವಿಷ್ಣವಿತಿ ಶ್ರುತೇಃ ।

ಇತಿ ತಂತ್ರಭಾಗವತೇ ॥

ಬ್ರಹ್ಮೇಶಾನಾದಿಭಿರ್ದೇವೈರ್ಯತ್ ಪ್ರಾಪ್ತುಂ ನೈವ ಶಕ್ಯತೇ ।
ತದ್ ಯತ್‌ಸ್ವಭಾವಃ ಕೈವಲ್ಯಂ ಸ ಭವಾನ್ ಕೇವಲೋ ಹರಿಃ ॥

ಇತಿ ಸ್ಕಾಂದೇ ।

ತತ್ಪ್ರಸಾದಲಭ್ಯತ್ವಾತ್ ತದೀಯಮಪಿ ತೇನಾತುಲಮನಧಿಕಂ ಚಾನ್ಯಮಾಹಾತ್ಮ್ಯಮ್ ।

ರುದ್ರ ಮುಂತಾದವರು ಶೇಷದೇಹದಲ್ಲಿರುವ ಶೇಷಾಂತರ್ಯಾಮಿಯಾದ ಸಂಕರ್ಷಣನಾಮಕ ವಿಷ್ಣುವನ್ನು ಉಪಾಸನ ಮಾಡಿ ತಮ್ಮ ಪದವಿಯನ್ನು ಚೆನ್ನಾಗಿ ಸಂಪಾದಿಸಿಕೊಂಡರು ಎಂದು ತಂತ್ರಭಾಗವತದಲ್ಲಿ ಹೇಳಿದೆ. ದೇಹಾದಿಗಳಲ್ಲಿ ಅಭಿಮಾನದ ಬಂಧನವನ್ನು ಬಿಡುವುದು ದ್ವೈತತ್ಯಾಗವೆನಿಸುತ್ತದೆ ಎಂದು ಶಬ್ದನಿರ್ಣಯದಲ್ಲಿ ಹೇಳಿದೆ.

ಭ್ರಮವೆಂದರೆ ದೇಹಾದಿಗಳನ್ನು ನಾನೆಂದು ನನ್ನವೆಂದು ತಪ್ಪಾಗಿ ಅಭಿಮಾನ ಪಡುವುದು.

ಆಯಾ ಜೀವರಿಗೆ ಸಿಗುವ ಪದವಿಗಳೂ ಅವರ ಮಹಿಮೆಯೂ ಹರಿಯ ವಶವಾಗಿರುವುದರಿಂದ ಅವು ಹರಿಯ ಪದಗಳು, ಹರಿಯ ಮಹಿಮೆಗಳೆನಿಸುವುವು. ಮುಕ್ತಿಯಲ್ಲಿ ಜೀವನಿಗೆ ಸಿಗುವ ಮಹಿಮೆ ಅವನವನ ಸ್ವರೂಪಭೂತವೇ ಆಗಿದ್ದು ತನಗೆ ಸಂಸಾರದಲ್ಲಿ ಸಿಕ್ಕಿದ್ದ ಮಹಿಮೆಗಳಿಗೆ ಹೋಲಿಸಿದಾಗ ಅದು ಅನುಪಮ ಅನಧಿಕವೆನಿಸುತ್ತದೆ ಹರಿಯ ಮಹಿಮೆಗೆ ಹೋಲಿಸಿ ಅಲ್ಲ. 'ನ ತೇ ವಿಷ್ಣೋ' ಇತ್ಯಾದಿಶ್ರುತಿಗಳಿರುವುದರಿಂದ ಹರಿಯ ಮಹಿಮೆ ಅನ್ಯರಿಗೆ ಎಂದೂ ಲಭ್ಯವಲ್ಲ ಎಂದು ತಂತ್ರಭಾಗವತದಲ್ಲಿ ಹೇಳಿದೆ. ಶ್ರೀಹರಿಯೆ, ಬ್ರಹ್ಮರುದ್ರಾದಿದೇವತೆಗಳು ಯಾವ ಮಹಿಮೆಯನ್ನು ಹೊಂದಲು ಶಕ್ತರಾಗಲಾರರೋ ಆ ಮಹಿಮೆ ನಿನಗೆ ಸ್ವಭಾವಭೂತವಾಗಿದೆ. ಅಂಥ ಮಹಿಮೆ ಉಳ್ಳವನು ಸರ್ವೋತ್ತಮನು ನೀನು ಎಂದು ಸ್ಕಾಂದ ಪುರಾಣದಲ್ಲಿಯೂ ಉಕ್ತವಾಗಿದೆ.

ಭಗವಂತನ ಅನುಗ್ರಹದಿಂದ ಲಭ್ಯವಾಗುವುದರಿಂದ ಅನ್ಯರ ಮಹಿಮೆ, ಭಗವಂತನ ಮಹಿಮೆ ಎನಿಸುತ್ತದೆ. ಮತ್ತು ಅವನ ಸ್ವರೂಪಭೂತಮಹಿಮೆಗೆ ಹೋಲಿಸಿದರೆ ಅನ್ಯರ ಮಹಿಮೆ ಸದೃಶವೂ ಅಲ್ಲ, ಹೆಚ್ಚಿನದೂ ಅಲ್ಲವಾದ್ದರಿಂದ ಅತುಲ್ಯ ಅನಧಿಕವೆನಿಸುತ್ತದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ
ಪಂಚದಶೋಽಧ್ಯಾಯಃ ॥

—o—

ಅಧ್ಯಾಯ-೧೬

ಅಧ್ಯಾಯಸಾರಾಂಶ

ಬಳಿಕ ನಾರದರು ಸತ್ತ ಬಾಲಕನನ್ನು ಯೋಗಬಲದಿಂದ ಪುನಃ ಎಬ್ಬಿಸಿ 'ನೀನು ಅಪಮೃತ್ಯುವಿನಿಂದ ಸತ್ತಿರುವೆ, ಇನ್ನೂ ಆಯುಷ್ಯವಿದೆ. ನಿನ್ನ ಬಂಧುಗಳು ಅಳುತ್ತಿದ್ದಾರೆ ಬದುಕಿದ್ದು ಅವರನ್ನು ಸಂತೈಸು' ಎಂದರು. ಆಗ ಆತ ನುಡಿದ. ನಾನು ಅನಾದಿಕಾಲದಿಂದ ಅನಂತ ಜನ್ಮಗಳನ್ನೆತ್ತಿದ್ದೇನೆ. ಆ ಎಲ್ಲ ಜನ್ಮಗಳಲ್ಲಿ ಇವರು ತಂದೆತಾಯಿಗಳಾಗಿದ್ದರೇನು? ಈ ಒಂದು ಜನ್ಮದಲ್ಲಿ ಇವರಿಗೆ ನಾನು ಮೋಹದ ಶಿಶುವಾಗಿರಬಹುದು. ಬೇರೆ ಜನ್ಮಗಳಲ್ಲಿ ಶತ್ರುವೂ ಆಗಿರಬಹುದು. ಅವರು ಏಕೆ ನನಗಾಗಿ ಅಳಬೇಕು? ಚಿನ್ನದ ನಾಣ್ಯ ಜನರಲ್ಲಿರುವಷ್ಟು ಕಾಲ ಅದು ಅವರ ಸೊತ್ತು. ಹಾಗೇ ನಾನೀ ಶರೀರದಲ್ಲಿ ಇರುವಷ್ಟು ಕಾಲ ಇವರ ಮಗ. ಈ ಶರೀರವನ್ನು ತೊರೆದ ಬಳಿಕ ನಾನಾರೋ ಇವರಾರೋ' ಹೀಗೇ ಹೇಳಿ ಜೀವಾತ್ಮ ಹೊರಟು ಹೋದ. ಎಲ್ಲರಿಗೂ ಜ್ಞಾನೋದಯವಾಯಿತು. ರಾಜ ನಾರದರು ಉಪದೇಶಿಸಿದ ಮಂತ್ರವನ್ನು ಏಳು ದಿನಗಳ ಕಾಲ ಜಪಿಸಿ ಶೇಷಾಂತರ್ಗತಸಂಕರ್ಷಣನನ್ನು ಸಾಕ್ಷಾತ್ಕರಿಸಿಕೊಂಡು ವಿದ್ಯಾಧರ ಚಕ್ರವರ್ತಿ ಎನಿಸಿದ. ಜೀವನ್ಮುಕ್ತನಾದ. ಅಸ್ವತಂತ್ರನಾದ ಜೀವನಿಗೆ ಜಾಗರಾದಿ ಅವಸ್ಥೆಗಳನ್ನು ನೀಡುವವನು ಭಗವಂತನೆಂದು ಭಗವಂತನ ಉಪದೇಶದಿಂದಲೇ ತಿಳಿದುಕೊಂಡ.

* * *

'ಶರೀರ ಸಂಬಂಧಪ್ರಯುಕ್ತ ಸಂಬಂಧಿಗಳು ತಂದೆ ತಾಯಿ ಮುಂತಾದವರು. ಶರೀರ ಸಂಬಂಧ ಶಾಶ್ವತವಲ್ಲ. ನಿತ್ಯವಾಗಿ ಸಂಬಂಧಿಯಾಗಿರುವವನು ಭಗವಂತನೆ. ಅವನು ಜೀವರಿಗೆ ಪ್ರಾಕೃತಶರೀರ ನಿರ್ಮಿಸಿಕೊಡುತ್ತಾನೆ. ಅದಕ್ಕೆ ನಿಯಾಮಕರೂಪಗಳಿಂದ ತನ್ನನ್ನು ಪ್ರಾದುರ್ಭಾವಗೊಳಿಸುತ್ತಾನೆ' ಎಂದು ಚಿತ್ರಕೇತುರಾಜನಿಗೆ ಅವನ ಮಗನ ಶರೀರದಲ್ಲಿದ್ದ ಜೀವಾತ್ಮ ನುಡಿಯುತ್ತಾನೆ.

ಜೀವ ಉವಾಚ

ಕಸ್ಮಿನ್ ಜನ್ಮನ್ಯಮೀ ಬ್ರಹ್ಮನ್ ಪಿತರೋ ಮಾತರೋಽಭವನ್ ।
ಕರ್ಮಭಿರ್ಭ್ರಾಮ್ಯಮಾಣಸ್ಯ ದೇವತಿರ್ಯಙ್ನೃಯೋನಿಷು ॥ ೪ ॥

ನಿತ್ಯಸ್ಯಾರ್ಥಸ್ಯ ಸಂಬಂಧೋ ಹ್ಯನಿತ್ಯೋ ದೃಶ್ಯತೇ ನೃಷು ।
ಯಾವದ್ ಯಸ್ಯ ಹಿ ಸಂಬಂಧೋ ಮಮತ್ವಂ ತಾವದೇವ ಹಿ ॥ ೭ ॥

ಏಷ ನಿತ್ಯೋಽವ್ಯಯಃ ಸೂಕ್ಷ್ಮ ಏಕಃ ಸರ್ವಾಶ್ರಯಃ ಸ್ವದೃಕ್ ।
ಆತ್ಮಮಾಯಾಗುಣೈರ್ವಿಶ್ವಮಾತ್ಮಾನಂ ಸೃಜತೇ ಪ್ರಭುಃ ॥ ೯ ॥

ಜೀವಾತ್ಮ ನುಡಿದ- ಮುನಿಯೆ, ಯಾವಯಾವ ಜನ್ಮಗಳಲ್ಲಿ ಇವರು ನನಗೆ ತಂದೆಗಳು, ತಾಯಂದಿರಾಗಿದ್ದಾರೆ? ನಾನು ಹೊಂದಿರುವ ಅನಂತಜನ್ಮಗಳಲ್ಲಿ ಇದೊಂದೇ ಜನ್ಮದಲ್ಲಿ ಇವರು ನನಗೆ ತಾತ್ಕಾಲಿಕವಾಗಿ ತಂದೆ ತಾಯಿಗಳು. ನಾನು ಕರ್ಮವಶದಿಂದ ದೇವ ಪ್ರಾಣಿ ಮನುಷ್ಯ ಮುಂತಾದ ಎಷ್ಟೋ ಶರೀರಗಳಲ್ಲಿ ಅಲೆದಾಡುತ್ತ ಬಂದಿದ್ದೇನೆ. ಮುಂದಿನ ಜನ್ಮದಲ್ಲಿ ಇವರು ನನಗೆ ತಂದೆತಾಯಿಗಳಲ್ಲ.

ಚಿರಕಾಲ ಸ್ಥಾಯಿಯಾದ ಚಿನ್ನ ಮುಂತಾದ ಪದಾರ್ಥಗಳ ಒಡೆತನ ಮನುಷ್ಯರಲ್ಲಿ ಅಲ್ಪ ಕಾಲಮಾತ್ರ ವಿರುತ್ತದೆ ಎನ್ನುವುದು ಕಂಡಿದೆ. ಎಷ್ಟು ಕಾಲ ಯಾರಿಗೆ ಅದರ ಮೇಲೆ ಒಡೆತನವಿರುತ್ತದೋ ಅಷ್ಟು ಕಾಲ ಮಾತ್ರ ಅವನಿಗೆ ಅದರಲ್ಲಿ ಮೋಹ ಉಂಟಾಗುತ್ತದೆ.

ತನ್ನ ಇಚ್ಛೆಗೆ ಅಧೀನವಾದ ಗುಣತ್ರಯದಿಂದ ಪ್ರಪಂಚವನ್ನು ಸೃಜಿಸುತ್ತಾನೆ, ಅದಕ್ಕೆ ನಿಯಾಮಕವಾದ ರೂಪಗಳಿಂದ ತನ್ನನ್ನೂ ತಾನು ಸೃಜಿಸಿಕೊಳ್ಳುತ್ತಾನೆ. ಇಂಥ ಪರಮಾತ್ಮನೇ ನಿತ್ಯ, ನಿತ್ಯಸಂಬಂಧಿ, ಆದರೂ ಸೂಕ್ಷ್ಮ, ನಮ್ಮ ಕಣ್ಣಿಗೆ ಕಾಣುವುದಿಲ್ಲ. ಎಲ್ಲ ರೂಪಗಳಲ್ಲಿ ಅಭಿನ್ನ. ಎಲ್ಲರಿಗೂ ಆಶ್ರಯ, ಸ್ವತಃ ಎಲ್ಲವನ್ನೂ ನೋಡಬಲ್ಲವನು ಸರ್ವಶಕ್ತ. ಅದರಿಂದ ಅನಿತ್ಯಸಂಬಂಧಿಗಳಾದ ಪುತ್ರಾದಿಗಳಲ್ಲಿ ಮೋಹವನ್ನು ಬಿಟ್ಟು ನಿತ್ಯಸಂಬಂಧಿಯಾದ ಪರಮಾತ್ಮನನ್ನೇ ಭಜಿಸಬೇಕು.

ಇಲ್ಲಿ 'ಏಷ ನಿತ್ಯೋಽವ್ಯಯಃ' ಎಂದು ಯಾರ ಬಗ್ಗೆ ಈ ಶ್ಲೋಕ ಹೇಳುತ್ತಿದೆ? ಜೀವನ ಬಗ್ಗೆ ಅಲ್ಲ. 'ನಿತ್ಯಸ್ಯಾರ್ಥಸ್ಯ ಸಂಬಂಧೋ ಹ್ಯನಿತ್ಯೋ ದೃಶ್ಯತೇ ನೃಷು' ನಿತ್ಯವಾದ ಪದಾರ್ಥದ ಸಂಬಂಧವೂ ಜೀವರಿಗೆ ಅನಿತ್ಯ' ಎಂದು ಹೇಳಿದ್ದರಿಂದ 'ಏಷ ನಿತ್ಯಃ' 'ಇವನು ನಿತ್ಯಸಂಬಂಧಿ' ಎಂದು ಹೇಳುವುದು ವಿರುದ್ಧವಾಗುತ್ತದೆ. 'ಏಷಃ' ಎಂದು ಪರಮಾತ್ಮನನ್ನು ಗ್ರಹಿಸಿದರೆ, ಅವನೂ 'ಆತ್ಮಾನಂ ಸೃಜತೇ' ತಾನು ತನ್ನನ್ನು ಉತ್ಪತ್ತಿ ಮಾಡಿಕೊಳ್ಳುತ್ತಾನೆ' ಎನ್ನುವುದು ಕೂಡುವುದಿಲ್ಲ.

[1]ಇಲ್ಲಿ ಶ್ರೀಧರ ವ್ಯಾಖ್ಯಾನದ ಪ್ರಕಾರ ಜೀವ ನಿತ್ಯ ಎಂದು ಸಾಧಿಸುತ್ತಿದ್ದಾರೆ. ಜೀವ ಸೂಕ್ಷ್ಮ, ಅಂದರೆ ಜನ್ಮಾದಿಶೂನ್ಯ, ಏಕೆಂದರೆ ಅವನು ಸರ್ವಾಶ್ರಯ. ಜನ್ಮಾದಿಉಳ್ಳದೇಹಾದಿಗಳಿಗೆ ಆಶ್ರಯನೇ ಹೊರತು ದೇಹಾದಿರೂಪನಲ್ಲ, ಅನಿತ್ಯನಲ್ಲ. ಸರ್ವಾಶ್ರಯನು ಯದ್ಯಪಿ ಬ್ರಹ್ಮ. ಆದರೂ ಜೀವನು ಬ್ರಹ್ಮನೇ ಆದ್ದರಿಂದ ಚಿಚ್ಛಕ್ತಿವಿಶಿಷ್ಟ ಈಶ್ವರರೂಪ ಬ್ರಹ್ಮ ಜಗತ್ತಿಗೆ ಉಪಾದಾನವಾಗುವಾಗ ಜೀವನೂ ಉಪಾದಾನನಾಗಿ ಆಶ್ರಯ ಎನಿಸುತ್ತಾನೆ. 'ಆತ್ಮಮಾಯಾಗುಣೈರ್ವಿಶ್ವಮಾತ್ಮಾನಂ ಸೃಜತೇ' ಎಂದರೆ ಮಾಯೆಯಿಂದ ತನ್ನನ್ನು ವಿಶ್ವರೂಪವಾಗಿ ಪರಿಣಾಮಗೊಳಿಸುತ್ತಾನೆ. ಇದನ್ನೇ ಶ್ರುತಿಯೂ 'ತದಾತ್ಮಾನಂ ಸ್ವಯಮಕುರುತ' ಎಂದಿದೆ.

ಆದರೆ 'ಜೀವನ ಧರ್ಮ ಬ್ರಹ್ಮನಲ್ಲಿ ಬರಬಹುದು, ಬ್ರಹ್ಮನ ಧರ್ಮ ಜೀವನಲ್ಲಿ ಬರಲಾರದು. ಉದಾ: ಸತ್ಯಕಾಮ ಸತ್ಯಸಂಕಲ್ಪತ್ವಾದಿ ಬ್ರಹ್ಮಧರ್ಮ ಜೀವನಲ್ಲಿ ಕೂಡುವುದಿಲ್ಲ. ಮನೋಮಯತ್ವಾದಿ ಜೀವನ ಧರ್ಮ ಬ್ರಹ್ಮನಲ್ಲಿ ಕೂಡುತ್ತದೆ. ಹಗ್ಗ ಹಾವಾಗಿ ಭಯಜನಕವಾಗಬಹುದು. ಹಾವು ಹಗ್ಗವಾಗಿ ಮುಟ್ಟಲು ಯೋಗ್ಯವೆನಿಸುವುದಿಲ್ಲ. ಏಕೆಂದರೆ ಹಾವು ಹಗ್ಗವಾಗುವಾಗ ಹಾವೇ ಇರುವುದಿಲ್ಲ. ಹಗ್ಗ ಹಾವಾಗುವಾಗ ಹಗ್ಗವಿರುತ್ತದೆ' ಎಂದು ಸರ್ವಗತತ್ವಾಧಿಕರಣ ಭಾಮತಿಯಲ್ಲಿ ಹೇಳಿದೆ. ಅದರಿಂದ 'ಬ್ರಹ್ಮ ಸರ್ವಾಶ್ರಯವಾದ್ದರಿಂದ ಜೀವ ಸರ್ವಾಶ್ರಯನೆನಿಸುತ್ತಾನೆ' ಎನ್ನುವುದು ಅದ್ವೈತವಾಗುವುದಿಲ್ಲ. ಹೀಗಾಗಿ ಜೀವನಿತ್ಯತ್ವವನ್ನು ಸರ್ವಾಶ್ರಯತ್ವಯುಕ್ತಿಯಿಂದ ಸಾಧಿಸಲಾಗದು. ಮತ್ತು ಜೀವ ಮಾತ್ರ ನಿತ್ಯ ದೇಹ ಅನಿತ್ಯವಾದ್ದರಿಂದ ತಂದೆ ಮಕ್ಕಳ ಸಂಬಂಧ ಅನಿತ್ಯವಾದರೂ ಮಿಥ್ಯೆ ಏಕಾಗಬೇಕು? ಅನಿತ್ಯ ಮಿಥ್ಯೆ ಎಂದರೆ ಒಂದೇ ಅಲ್ಲ. ಅದರಿಂದ ಜೀವನಿತ್ಯತ್ವವನ್ನು ಸಾಧಿಸಿ ಏನೂ ಪ್ರಯೋಜನವಿಲ್ಲ. ಜೀವರಿಗೆ ಪರಸ್ಪರ ತಂದೆಮಕ್ಕಳ ಸಂಬಂಧ ಅನಿತ್ಯ, ಪರಮಾತ್ಮಜೀವರಿಗೆ ಆ ಸಂಬಂಧ ನಿತ್ಯ ಎಂದು ಸಾಧಿಸಬೇಕು. ಅದಕ್ಕೆ ಈ ಶ್ಲೋಕದಲ್ಲಿ ಪರಮಾತ್ಮನನ್ನೇ ಜೀವರಿಗೆ ನಿತ್ಯಸಂಬಂಧಿ, ಎನ್ನುತ್ತಾರೆ. ವಿಶ್ವಂ ಸೃಜತೇ ಆತ್ಮಾನಂ ಸೃಜತೇ ಎಂದು ಬೇರೆಬೇರೆ ವಾಕ್ಯಗಳು. ಜಗತ್ತನ್ನು ಸೃಜಿಸುತ್ತಾನೆ, ಅದನ್ನು ಕಾಪಾಡುವುದಕ್ಕಾಗಿ ನಿಯಾಮಕರೂಪಗಳಿಂದ ತನ್ನನ್ನೇ ಆವಿರ್ಭಾವಗೊಳಿಸುತ್ತಾನೆ ಎಂದರ್ಥ.

---

೧. ಜೀವಸ್ಯ ನಿತ್ಯತ್ವಂ ಸಾಧಯತಿ ಏಷ ನಿತ್ಯಃ । ಕುತಃ ಸರ್ವಾಶ್ರಯಃ । ಜನ್ಮಾದಿಮತೋ ದೇಹಾದೇರಾಶ್ರಯಃ । ನ ತು ದೇಹಾದಿರೂಪಃ । ಸರ್ವಾಶ್ರಯತ್ವಮುಪಪಾದಯತಿ ಆತ್ಮನೋ ಮಾಯಾಯಾ ಗುಣೈರಾತ್ಮಾನಮೇವ ವಿಶ್ವಂ ವಿಶ್ವಾತ್ಮಕಂ ಸೃಜತಿ ತದಾತ್ಮಾನಂ ಸ್ವಯಮಕುರುತೇತಿ ಶ್ರುತೇಃ । ಉಪಾದಾನಕಾರಣತ್ವಾತ್ ಸರ್ವಾಶ್ರಯ ಇತ್ಯರ್ಥಃ । ಜೀವಸ್ಯ ವಸ್ತುತೋ ಬ್ರಹ್ಮತ್ವಾತ್ ಬ್ರಹ್ಮಣ ಏವ ಚಿಚ್ಛಕ್ತಿವಿಶಿಷ್ಟಸ್ಯೇಶ್ವರತ್ವೇನ ಸ್ರಷ್ಟೃತ್ವಾತ್ ಜೀವಃ ಸೃಜತೀತಿ ವಾಚೋಯುಕ್ತಿಃ । —ಶ್ರೀಧರಃ

ಅದರಿಂದ ಹೀಗೆ ವ್ಯಾಖ್ಯಾನ ಮಾಡಬೇಕು–

ಏಷ ನಿತ್ಯೋಽವ್ಯಯಃ ।

ಅನಿತ್ಯಸಂಬಂಧಯುತಾಃ ಪಿತ್ರಾದ್ಯಾ ನಿತ್ಯಯುಗ್ ಹರಿಃ ॥

ಇತಿ ಚ ।

ಆತ್ಮಾನಂ ಚಾವತಾರರೂಪೇಣ ಸೃಜತೇ ।

ತಂದೆ ತಾಯಿ ಮುಂತಾದವರು ಅನಿತ್ಯವಾದ ದೇಹ– ದೇಹಗಳ ಸಂಬಂಧ ಯುಕ್ತರಾಗಿರುತ್ತಾರೆ. ಹರಿಯು ನಿತ್ಯವಾಗಿ ಸಂಬಂಧಯುಕ್ತನಾಗಿರುತ್ತಾನೆ ಎಂದೂ ಹೇಳಿರುವುದರಿಂದ 'ಏಷ ನಿತ್ಯೋಽವ್ಯಯಃ' ಎಂಬ ಶ್ಲೋಕದಲ್ಲಿ ಪರಮಾತ್ಮ ಜೀವರೊಳಗಿನ ಸಂಬಂಧನಿತ್ಯತ್ವವನ್ನು ಹೇಳುವ ಅಭಿಪ್ರಾಯವಿಟ್ಟುಕೊಳ್ಳಬೇಕು. ಜೀವರಿಗೆ ಪ್ರಾಕೃತಶರೀರಗಳನ್ನು ನಿರ್ಮಿಸಿಕೊಟ್ಟು ಅವರನ್ನು ಕಾಪಾಡಲು ತಾನೂ ತನ್ನನ್ನು ಅವತಾರರೂಪಗಳಿಂದ ಪ್ರಾದುರ್ಭಾವಗೊಳಿಸುತ್ತಾನೆ. ಅದರಿಂದ ಎಲ್ಲ ಜನ್ಮಗಳಲ್ಲಿಯೂ ನಿಜವಾಗಿ ತಂದೆ ತಾಯಿ ಎಲ್ಲವೂ ಅವನೆ ಎಂದು ತಿಳಿಯಬೇಕು.

---

* * *

ಭಗವಂತ ಜೀವರಿಗೆ ದೇಹಾದಿಗಳನ್ನು ಸೃಷ್ಟಿಮಾಡಿದರೂ ಅವನು ಆ ಕರ್ಮಫಲ ಉಣ್ಣುವುದಿಲ್ಲ. ಅದು ಅವನ ಅಚಿಂತ್ಯಶಕ್ತಿ. ಅಂಥ ಭಗವಂತನನ್ನೇ ತಂದೆ ಎಂದು ಭಜಿಸಬೇಕು. ನನ್ನಂಥ ಜೀವರನ್ನಲ್ಲ ಎಂದು ಚಿತ್ರಕೇತುರಾಜನಿಗೆ ಅವನ ಮಗನ ಮೃತಶರೀರದಲ್ಲಿದ್ದ ಜೀವಾತ್ಮ ಹೇಳುತ್ತಾನೆ.

ನಾದತ್ತ ಆತ್ಮಾ ಹಿ ಗುಣಂ ನ ದೋಷಂ ನ ಕ್ರಿಯಾಫಲಮ್ ।
ಉದಾಸೀನ ಇವಾಸೀನಃ ಪರಾವರದೃಗೀಶ್ವರಃ ॥ ೧೧ ॥

ಜಗತ್ಕರ್ತನಾದರೂ ಪರಮಾತ್ಮ ಶುಭ ಅಶುಭ ಕರ್ಮಫಲವನ್ನು ಜೀವರಂತೆ ಉಣ್ಣುವುದಿಲ್ಲ. ಶುಭವನ್ನು ಉಂಡರೂ ಅದರಿಂದ ಅವನಿಗೆ ವೃದ್ಧಿ ಇಲ್ಲ. ಅಶುಭವನ್ನು ಉಣ್ಣುವುದೇ ಇಲ್ಲ. ಅನಾಯಾಸವಾಗಿ ಎಲ್ಲವನ್ನೂ ಮಾಡುವುದರಿಂದ ಉದಾಸೀನ ನಂತಿರುತ್ತಾನೆ. ಅಚಿಂತ್ಯಶಕ್ತಿ ಉಳ್ಳವನು, ಭೂತಭವಿಷ್ಯವೆಲ್ಲವನ್ನೂ ಕಾಣುವವನು. ಇಂಥ ಮಹಿಮೆ ಉಳ್ಳವನಾದ್ದರಿಂದ ಅವನು ಜೀವರಿಗೆ ತಾಯಿ ತಂದೆ ಮಗ ಎಂದು ಮುಂತಾಗಿ ಎಲ್ಲ ಬಗೆಯಿಂದಲೂ ನಿತ್ಯಸಂಬಂಧಿಯಾಗಿರುವಾಗ ಅಲ್ಪಕಾಲದ ಸಂಬಂಧಿಯಾದ ನನಗಾಗಿ ಅವರು ಏಕೆ ಅಳುತ್ತಾರೆ, ನಾನೇಕೆ ಅವರನ್ನು ಸಂತೈಸಬೇಕೆಂದು ಜೀವಾತ್ಮ ಪ್ರಶ್ನಿಸುತ್ತಾನೆ.

ಇಲ್ಲಿ ಶ್ರೀಧರವ್ಯಾಖ್ಯಾನ ಹೇಳುತ್ತದೆ– ನೀವು ನನಗೆ ನನ್ನ ಈ ಶವಶರೀರದಲ್ಲಿ ಪುನಃ ಪ್ರವೇಶಿಸಿ ಎಲ್ಲ ವಿಷಯಭೋಗಗಳನ್ನು ಅನುಭವಿಸು ಎನ್ನುವಿರಿ. ಆದರೆ ನಾನು ಗುಣದೋಷ, ಕರ್ಮಫಲಗಳನ್ನು ಸ್ವೀಕರಿಸದೆ ಉದಾಸೀನನಾಗಿರುವವನು, ಈಶ್ವರ. ನನಗೂ ನಿಮಗೂ ಏನೂ ಸಂಬಂಧವಿಲ್ಲ. ನನಗಾಗಿ ಅಳಬೇಡಿ ಎನ್ನುತ್ತಾನೆ ಜೀವಾತ್ಮ' ಎಂದು. ಆದರೆ ಜೀವಾತ್ಮನೊಬ್ಬ ತಾನು ಕರ್ಮಫಲ ಲೇಪರಹಿತನಾದ ಈಶ್ವರನೆಂದು ಹೇಳಿಕೊಂಡರೆ ಯಾರು ನಂಬುತ್ತಾರೆ?

ಅದರಿಂದ ಪರಮಾತ್ಮನನ್ನೇ ಈ ಶ್ಲೋಕ ಹೇಳುತ್ತಿದೆ. ಆದರೆ 'ಶುಭಂ ಪಿಬತ್ಯಸೌ ನಿತ್ಯಂ' ಎಂಬಂತೆ ಶುಭರಸವನ್ನು ಪರಮಾತ್ಮ ಸ್ವೀಕರಿಸುತ್ತಾನೆ. 'ನಾದತ್ತ ಆತ್ಮಾ ಹಿ ಗುಣಂ' ಎನ್ನುವುದು ಹೇಗೆ ಎಂಬ ಪ್ರಶ್ನೆ ಬರುತ್ತದೆ. ಗುಣವನ್ನು ಲೀಲೆಯಿಂದ ಸ್ವೀಕರಿಸುತ್ತಾನೆ. ಆದರೆ ತತ್ಪ್ರಯುಕ್ತ ವೃದ್ಧಿ ಉಂಟಾಗುವುದಿಲ್ಲ ಏಕೆಂದರೆ ಅವನು ಈಶ್ವರ, ಅಚಿಂತ್ಯಶಕ್ತಿ ಉಳ್ಳವನು ಎಂದು ಸಮಾಧಾನ.

ಭೋಕ್ತಾ ಸದ್ಗುಣಭೋಕ್ತೃತ್ವಾನ್ನ ಭೋಕ್ತಾ ತದವೃದ್ಧಿತಃ ।
ಅಚಿಂತ್ಯಶಕ್ತಿತಸ್ತಚ್ಚ ಯುಜ್ಯತೇ ಪರಮೇಶಿತುಃ । ಇತಿ ಚ ।

ಶುಭರಸಭೋಕ್ತೃವಾದುದರಿಂದ ಶ್ರೀಹರಿ ಭೋಕ್ತೃ. ಆ ಭೋಗದಿಂದ ಅವನಿಗೆ ಸುಖವೃದ್ಧಿ ಇಲ್ಲದ್ದರಿಂದ ಅವನು ಅಭೋಕ್ತೃವೂ ಹೌದು. ಅವನು ಪರಮೇಶ್ವರನಾದ್ದರಿಂದ ಅಚಿಂತ್ಯಶಕ್ತಿಯಿಂದ ಇದು ಕೂಡುತ್ತದೆ ಎಂದೂ ಹೇಳಿದೆ.

* * *

ನಾರದರು ಚಿತ್ರಕೇತುರಾಜನಿಗೆ ಶೇಷಾಂತರ್ಗತಸಂಕರ್ಷಣ ಮಂತ್ರವನ್ನು ಉಪದೇಶಿಸುತ್ತ ಉಪಾಸಕನ ಜಡಮನಸ್ಸು ಮತ್ತು ಇಂದ್ರಿಯಗಳು ಸುಮ್ಮನಾದಾಗ ಚಿನ್ಮಯ ಮನಸ್ಸು ಮತ್ತು ಇಂದ್ರಿಯಗಳಿಂದ ಅವನಿಗೆ ಪರಮಾತ್ಮ ಗೋಚರನಾಗುತ್ತಾನೆ ಎನ್ನುತ್ತಾರೆ.

ವಚಸ್ಯುಪರತೇ ಪ್ರಾಪ್ಯೋ ಯ ಏಕೋ ಮನಸಾ ಸಹ ।
ಅನಾಮರೂಪಶ್ಚಿನ್ಮಾತ್ರಃ ಸೋऽವ್ಯಾನ್ನಃ ಸದಸತ್ಪರಃ ॥ ೨೧ ॥

---

೧. ಯಚ್ಚೋಕ್ತಂ ಭುಂಕ್ಷ್ವ ಭೋಗಾನ್ ಇತ್ಯಾದಿ ತತ್ರಾಪ್ಯಾಹ ನಾದತ್ತ ಇತಿ । ಗುಣಂ ಸುಖಂ ದೋಷಂ ದುಃಖಂ ಕ್ರಿಯಾಫಲಂ ಚ ರಾಜ್ಯಾದಿಕಮ್ । ಉದಾಸೀನತ್ವೇ ಹೇತುಃ ಪರಾವರದೃಕ್ ಕಾರಣಸ್ಯ ಕಾರ್ಯಸ್ಯ ಚ ಸಾಕ್ಷೀ ನ ತು ಭೋಕ್ತಾ ಯತಃ ಈಶ್ವರಃ ದೇಹಾದಿಪಾರತಂತ್ರ್ಯಶೂನ್ಯಃ । ಅತ ಏವಂಭೂತಸ್ಯ ಮಮ ಚ ಯುಷ್ಮಾಕಂ ಚ ಸಂಬಂಧಾಭಾವಾಚ್ಛೋಕಂ ಮಾ ಕುರುತೇತಿ ವಾಕ್ಯಾರ್ಥಃ । –ಶ್ರೀಧರಃ

ಬಾಹ್ಯ ಮನಇಂದ್ರಿಯಗಳು ಸುಮ್ಮನಾದಾಗ ಚಿನ್ಮಯವಾದ ಮನಇಂದ್ರಿಯಗಳಿಗೆ ಗೋಚರನಾಗುವವನು ಸರ್ವೋತ್ತಮ ಭಗವಂತ. ನಾಮರೂಪರಹಿತನಾಗಿದ್ದಾನೆ. ಚಿನ್ಮಯನಾಗಿದ್ದಾನೆ. ನಾಶರಹಿತನಾಗಿದ್ದು ಕಾರ್ಯಕಾರಣವಿಲಕ್ಷಣನಾಗಿದ್ದಾನೆ.

ಇಲ್ಲಿ ಮನಸ್ಸು ಇಂದ್ರಿಯಗಳೆಲ್ಲವೂ ಉಪರತವಾದುವೆಂದರೆ ಪರಮಾತ್ಮ ಗೋಚರನಾಗುವುದೆಂತು? ಶ್ರೀಧರವಿಶ್ವನಾಥವ್ಯಾಖ್ಯಾನಗಳು ನಿರ್ವಿಶೇಷಬ್ರಹ್ಮ ಸ್ವಪ್ರಕಾಶವಾಗಿ ಗೋಚರನಾಗುತ್ತಾನೆ ಎನ್ನುತ್ತವೆ. ನಿರ್ವಿಶೇಷಬ್ರಹ್ಮ ಜ್ಞೇಯವೆ ಅಲ್ಲ. ಜ್ಞೇಯವೆಂದರೂ ಮನಸಿಗೇ ಜ್ಞೇಯ ಎಂದು ಅದ್ವೈತಮತ. ಆದರಿಂದ ಮನಸ್ಸು ಉಪರತವಾದರೆ ಬ್ರಹ್ಮಜ್ಞಾನ ಶಕ್ಯವಿಲ್ಲ. ವೀರರಾಘವ ಶುಕದೇವವ್ಯಾಖ್ಯಾನಗಳು– ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' ಎಂಬಂತೆ ಮನಸ್ಸು ಮಾತುಗಳು ಅವನ ಮಹಿಮೆಗೆ ಪಾರಗಾಣದೆ ಅನಂತ ಎಂದು ತಿಳಿಸುತ್ತವೆ ಎಂದು ಹೇಳಿವೆ. ಆದರೆ 'ಅನಂತ ಇತಿ 'ಪ್ರಾಪ್ಯಃ' ಎಂದು ಅಧ್ಯಾಹಾರ ಮಾಡಬೇಕಾಗುತ್ತದೆ. ಆದರಿಂದ ಹೀಗೆ ಹೇಳಬೇಕು–

ಬಾಹ್ಯಮನಸ್ಯುಪರತೇ ಚಿನ್ಮಾತ್ರಮನಸಾ ಸಹ ಪ್ರಾಪ್ಯಃ ।

ಬಾಹ್ಯಮನಸ್ಸು ಉಪರತವಾದಾಗ ಚಿನ್ಮಯಮನಸಿನ ಸಹಕಾರದಿಂದ ಚಿನ್ಮಯ ಇಂದ್ರಿಯಗಳಿಂದ ಕಾಣಲು ಸಿಗುತ್ತಾನೆ ಭಗವಂತ ಎಂದರ್ಥ.

'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' ಎಂಬ ಶ್ರುತಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು 'ಮನಸಿನೊಂದಿಗೆ ಮಾತು ಉಪರತವಾದಾಗ' ಎಂದು ಅರ್ಥ ಬರುವಂತೆ 'ಮನಸ್ಯುಪರತೇ' ಎಂಬ ಪಾಠವನ್ನು 'ವಚಸ್ಯುಪರತೇ' ಎಂದು ಪ್ರಕ್ಷೇಪಕಾರರು ತಿದ್ದಿರಬೇಕು. ವಸ್ತುತಃ 'ಯತೋ ವಾಚೋ' ಎಂಬ ಶ್ರುತಿ ಇಲ್ಲಿ ಪ್ರಸ್ತುತವಲ್ಲ. ಆದರಿಂದ ಸತ್ಯಾಭಿನವರೂ ಸತ್ಯಧರ್ಮರೂ 'ಮನಸ್ಯುಪರತೇ' ಎಂದೇ ಪಾಠ ಎನ್ನುತ್ತಾರೆ. ಹೀಗಾಗಿ 'ಮನಸ್ಯುಪರತೇ' 'ಮನಸಾ ಸಹ' ಎನ್ನುವುದು ವ್ಯಾಹತವಾದಂತೆ ಕಾಣುತ್ತದೆ. ಅದನ್ನು ತಾತ್ಪರ್ಯದಲ್ಲಿ ಪರಿಹಾರಮಾಡುತ್ತಾರೆ– 'ಬಾಹ್ಯಮನಸ್ಯುಪರತೇ' 'ಚಿನ್ಮಯಮನಸಾ ಸಹ' ಎಂದು.

'ವಚಸ್ಯುಪರತೇ' ಎಂಬ ಪಾಠದಲ್ಲಿ ತಾತ್ಪರ್ಯದಲ್ಲಿ 'ಬಾಹ್ಯಮನಸ್ಯುಪರತೇ' ಎಂದುದು ಮನಇಂದ್ರಿಯಗಳಲ್ಲಿ ಮನಸ್ಸು ಪ್ರಧಾನ ಎಂಬ ಭಾವದಿಂದ ಎನ್ನಬೇಕು. 'ಬಾಹ್ಯಮನಸ್ಸೂ ಬಾಹ್ಯಇಂದ್ರಿಯಗಳೂ ಉಪರತವಾದಾಗ' ಎಂದರ್ಥ. ತಾತ್ಪರ್ಯದಲ್ಲಿ 'ಚಿನ್ಮಾತ್ರಮನಸಾ ಸಹ' ಎಂದಾದ ಬಳಿಕ 'ಚಿನ್ಮಾತ್ರೇಂದ್ರಿಯೈಃ' ಎಂದು ಅಧ್ಯಾಹಾರ ಮಾಡಬೇಕು. ಆಗ ಚಿನ್ಮಯಮನಸಿನಿಂದ ಯುಕ್ತವಾದ ಚಿನ್ಮಯ ಇಂದ್ರಿಯಗಳಿಂದ ಪರಮಾತ್ಮ ಕಾಣಲು ಸಿಗುತ್ತಾನೆ ಎಂದು ಹೇಳಿದಂತಾಗುವುದು.

* * *

ನಾರದರು ಚಿತ್ರಕೇತು ರಾಜನಿಗೆ ಶೇಷಮಂತ್ರವನ್ನು ಉಪದೇಶಿಸುತ್ತ ಮರಗಿಡಗಳು ನೆಲದಲ್ಲಿ ಹುಟ್ಟಿ ಬೆಳೆದು ನೆಲದಲ್ಲಿಯೆ ನಾಶಹೊಂದುವಂತೆ ಈ ಜಗತ್ತು ಪರಮಾತ್ಮನಲ್ಲಿಯೆ ಹುಟ್ಟಿ ಬೆಳೆದು ಪರಮಾತ್ಮನಲ್ಲಿಯೆ ಲಯ ಹೊಂದುತ್ತದೆ ಎನ್ನುತ್ತಾರೆ.

ಯಸ್ಮಿನ್ನಿದಂ ಯತಶ್ಚೇದಂ ತಿಷ್ಠತ್ಯಪ್ಯೇತಿ ಜಾಯತೇ ।
ಮೃಣ್ಮಯೇಷ್ವಿವ ಮೃಜ್ಜಾತಿಸ್ತಸ್ಮೈ ತೇ ಬ್ರಹ್ಮಣೇ ನಮಃ ॥ ೨೨ ॥

ಮಣ್ಣಿಂದಾಗಿರುವ ಪರ್ವತ ಬಯಲು ಮುಂತಾದವುಗಳಲ್ಲಿ ಮಣ್ಣಿನ ಜಾತಿಯ ಗಿಡಮರಗಳು ಹುಟ್ಟಿ ಬೆಳೆದು ನಾಶ ಹೊಂದುವಂತೆ ಭಗವಂತನಲ್ಲಿ ಈ ಜಗತ್ತು ಇರುತ್ತದೆ ಅಳಿಯುತ್ತದೆ ಅವನಿಂದಲೇ ಹುಟ್ಟುತ್ತದೆ. ಗುಣಪೂರ್ಣನಾದ ಆ ಭಗವಂತನಿಗೆ ನಮಸ್ಕಾರ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಎಲ್ಲರೂ 'ಪರಮಾತ್ಮ ಜಗತ್ತಿಗೆ ಉಪಾದಾನಕಾರಣ ಎನ್ನುವಲ್ಲಿ ಮೃಣ್ಮಯವಾದ ಗಡಿಗೆ ಮುಂತಾದುವುಗಳಿಗೆ ಮಣ್ಣು ಹೇಗೇ ಉಪಾದಾನವೋ ಹಾಗೆ ಎಂದು ದೃಷ್ಟಾಂತ' ಎಂದಿದ್ದಾರೆ. ಆದರೆ 'ಮೃಣ್ಮಯೇಷ್ವಿವ ಮೃಜ್ಜಾತಿಃ' ಎಂಬ ಮಾತನ್ನು ಸರಿಯಾಗಿ ಕೂಡಿಸುವಲ್ಲಿ ವಿಫಲರಾಗಿದ್ದಾರೆ. ಏಕೆಂದರೆ, ಉಪನಿಷತ್ತಿನಲ್ಲಿ ಮೃಣ್ಮಯಗಳಿಗೆ ಮೃತ್ಪಿಂಡ ಉಪಾದಾನ ಎಂದಿದೆ ಎನ್ನುತ್ತಾರೆ. ಅಲ್ಲಿಯೂ ಪಿಂಡ ಉಪಾದಾನವಲ್ಲ. ಮೃತ್ ಉಪಾದಾನ. ಪಿಂಡವನ್ನು ಉಪಾದಾನವೆಂದಿಟ್ಟುಕೊಂಡರೂ ಭಾಗವತದಲ್ಲಿ 'ಮೃತ್ಪಿಂಡ' ಎನ್ನದೆ 'ಮೃಜ್ಜಾತಿ' ಎನ್ನಲು ಕಾರಣವೇನು?

[೧]ವೀರರಾಘವವ್ಯಾಖ್ಯಾನದಲ್ಲಿ 'ಮೃಜ್ಜಾತಿ' ಎಂದರೆ 'ಮೃಜ್ಜಾತೀಯ' ಎಂದಿದ್ದಾರೆ. ಆಗ ಮೃತ್ತಿನ ಜಾತಿಯವುಗಳು ಎಲ್ಲ ಮೃಣ್ಮಯಗಳೂ ಮೃಣ್ಮಯಗಳಿಗೆ ಉಪಾದಾನ ಎನ್ನುವುದು ಅಸಂಗತವಾಗುತ್ತದೆ. ಜಾತಿಶಬ್ದ ವ್ಯರ್ಥ ಮಾತ್ರವಲ್ಲ, ವಿರುದ್ಧಾರ್ಥವೂ ಆಗುತ್ತದೆ. 'ಮೃಣ್ಮಯೇಷು' ಎಂಬ ಸಪ್ತಮೀ ವಿಭಕ್ತಿಯೂ ಅಸಂಗತ. ಉಪಾದಾನದಲ್ಲಿ ಉಪಾದೇಯವಿರುತ್ತದೆ ಎಂದ ಮೇಲೆ 'ಮೃಜ್ಜಾತೌ ಮೃಣ್ಮಯ ಇವ' ಎಂದು

೧. ಮೃಣ್ಮಯೇಭ್ಯೋ ಮೃತ್ಪಿಂಡೇಭ್ಯ ಉಪಾದಾನಭೂತೇಭ್ಯೋ ಮೃಜ್ಜಾತೀಯಘಟಾದಿ ರ್ಜಾಯತ ಇತ್ಯರ್ಥಃ । ಅಥವಾ ಮೃಣ್ಮಯೇಷ್ವಿತಿ ಪದಮೇವ ಮೃದ್ವಿಕಾರಘಟಾದಿ ಪರವಮ್ । ಮೃಜ್ಜಾತಿರ್ಮೃತ್ಪಿಂಡಃ ಮೃಣ್ಮಯೇಷು ಘಟಾದಿಷು ಕಾರಣ ತಯಾಽನುಸ್ಯೂತಃ । ಅಥವಾ ಯಸ್ಮಿನ್ನಧಿತಿಷ್ಠತೀತ್ಯತ್ರೈವ ದೃಷ್ಟಾಂತಃ । ಮೃಣ್ಮಯೇಷು ಘಟಾದಿಷು ಮೃಜ್ಜಾತಿರ್ಮೃತ್ತ್ವಮಧಿತಿಷ್ಠತಿ, ಅಪೃಥಕ್ಸಿದ್ಧಪ್ರಕಾರತಯಾ ವರ್ತತೇ । ತದ್ವದಿದಂ ವಿಶ್ವಂ ಚಿದಚಿದಾತ್ಮಕಮಪೃಥಕ್‌ಸಿದ್ಧಪ್ರಕಾರತಯಾ ಯಸ್ಮಿನ್ ವರ್ತತೇ ತಸ್ಮೈ ಬ್ರಹ್ಮಣೇ ನಮಃ । —ವೀರರಾಘವಃ

ಹೇಳಬೇಕಾಗಿತ್ತು. ಅದಕ್ಕೆ ವೀರರಾಘವವ್ಯಾಖ್ಯಾನದಲ್ಲಿ 'ಮೃಣ್ಮಯ' ಎಂದರೆ 'ಮೃತ್ಪಿಂಡ' ಎಂದೂ ಮೃಜ್ಜಾತಿ ಎಂದರೆ ಘಟಾದಿಗಳೆಂದೂ ಅರ್ಥೈಸಿದ್ದಾರೆ. ಆದರೆ 'ಮೃಣ್ಮಯ' ಎಂದು ಮಯಟ್ ಪ್ರತ್ಯಯ ವಿಕಾರಾರ್ಥಕವಿರುವುದರಿಂದ ಮಣ್ಣಿನಿಂದ ಹುಟ್ಟಿದ ಘಟಾದಿಗಳೇ ಅದಕ್ಕೆ ಸ್ವರಸವಾದ ಅರ್ಥ. ಅದರಿಂದ ವೀರರಾಘವವ್ಯಾಖ್ಯಾನದಲ್ಲಿ 'ಅಥವಾ' ಎನ್ನುತ್ತ ಮೃಣ್ಮಯವಾದ ಘಟಾದಿಗಳಲ್ಲಿ 'ಮೃಜ್ಜಾತಿ' ಯಾದ ಮೃತ್ಪಿಂಡ ಕಾರಣವಾಗಿ ಅನುಸ್ಯೂತವಾಗಿದೆ ಎಂದಿದ್ದಾರೆ. ಆದರೆ ಪಟದಲ್ಲಿ ತಂತುವಿನಂತೆ ಮೃಣ್ಮಯದಲ್ಲಿ ಮೃತ್ ಅನುಸ್ಯೂತವಾಗಿರುತ್ತದೆ, ಮೃತ್ಪಿಂಡ ಅಲ್ಲ. ಮತ್ತು 'ಯಸ್ಮಿನ್ನಿದಂ' ಎಂದು 'ಪರಮಾತ್ಮನಲ್ಲಿ ಜಗತ್ತು' ಎನ್ನಲು ದೃಷ್ಟಾಂತವಾಗಿ 'ಮೃತ್ತಿನಲ್ಲಿ ಮೃಣ್ಮಯ' ಎನ್ನಬೇಕೇ ಹೊರತು 'ಮೃಣ್ಮಯದಲ್ಲಿ ಮೃತ್ಪಿಂಡ' ಎಂದು ತಿರುವುಮುರುವಾಗಿ ಹೇಳುವುದು ಅದನ್ನು ಕೂಡಿಸಲು 'ಕಾರಣತಯಾ ಅನುಸ್ಯೂತ' ಎಂದು ಅಧ್ಯಾಹಾರ ಮಾಡುವುದು ಕ್ಲಿಷ್ಟ ಕಲ್ಪನೆ. ಅದಕ್ಕೆ ವೀರರಾಘವವ್ಯಾಖ್ಯಾನದಲ್ಲಿ ಕೊನೆಯಲ್ಲಿ 'ಪರಮಾತ್ಮನಲ್ಲಿ ಜಗತ್ತು ಆಶ್ರಯಿಸಿ ನಿಂತಿದೆ' ಎನ್ನುವಲ್ಲಿಯೇ ಮೃಣ್ಮಯಪದಾರ್ಥಗಳಲ್ಲಿ ಮೃಜ್ಜಾತಿ, ಅಂದರೆ ಪೃಥಿವೀತ್ವಜಾತಿ ಇರುವಂತೆ ಎಂದು ದೃಷ್ಟಾಂತ ಹೊರತು ಉಪಾದಾನೋಪಾದೇಯ ಭಾವದಲ್ಲಿ ಅಲ್ಲ. ವ್ಯಕ್ತಿಯಲ್ಲಿ ಜಾತಿಯಂತೆ ಪರಮಾತ್ಮನಲ್ಲಿ ಜಗತ್ತು ಅಪೃಥಕ್ಸಿದ್ಧಪ್ರಕಾರವಾಗಿ ಇರುತ್ತದೆ ಎಂದಿದ್ದಾರೆ. ಆದರೆ ವ್ಯಕ್ತಿನಾಶವಾದರೂ ಜಾತಿ ನಿತ್ಯವಾಗಿ ಇರುವಂತೆ ಪರಮಾತ್ಮ ನಾಶವಾದರೂ ಜಗತ್ತು ನಿತ್ಯವಾಗಿ ಇರುತ್ತದೆ ಎಂದಂತಾಗುತ್ತದೆ.

ಅದರಿಂದ ದೃಷ್ಟಾಂತವಾಕ್ಯವನ್ನು ಸರಿಯಾಗಿ ಹೀಗೇ ಕೂಡಿಸಬೇಕು–

ಮೃಣ್ಮಯೇಷ್ವಿವ ಮೃಜ್ಜಾತಿಃ ।

ಪೃಥಿವೀ ಪರ್ವತಾಶ್ಚೈವ ಮೃಣ್ಮಯಾಃ ಸಮುದೀರಿತಾಃ ।
ತೇಷು ಮೃಜ್ಜಾತಯಃ ಸರ್ವೇ ಜಾಯಂತೇ ಸ್ಥಾವರಾದಯಃ ॥

ಇತಿ ಚ ।

'ಮೃಣ್ಮಯೇಷ್ವಿವ ಮೃಜ್ಜಾತಿಃ' ಎಂಬ ದೃಷ್ಟಾಂತದ ಅಭಿಪ್ರಾಯ ಹೀಗೆ– ನೆಲ ಮತ್ತು ಬೆಟ್ಟಗಳು ಮೃಣ್ಮಯವಾಗಿವೆ. ಮಣ್ಣಿನಿಂದ ಹುಟ್ಟುವ ಸ್ಥಾವರ ಜಂಗಮಗಳೆಲ್ಲವೂ ಆ ನೆಲ ಮತ್ತು ಬೆಟ್ಟಗಳಲ್ಲಿಯೇ ಜನಿಸುತ್ತವೆ ಎಂದೂ ಉಕ್ತವಾಗಿದೆ.

* * *

ನಾರದರು ಉಪದೇಶಿಸಿದ ಶೇಷಮಂತ್ರದ ಬಲದಿಂದ ಚಿತ್ರಕೇತುರಾಜ ಶೇಷ ಲೋಕದಲ್ಲಿ ಶೇಷದೇವನ ಪಾದಸಮೀಪವನ್ನು ಹೋಗಿ ಸೇರಿದ.

ತತಃ ಕತಿಪಯಾಹೋಭಿರ್ವಿದ್ಯಯೇದ್ಧಮನೋಗತಿಃ ।
ಜಗಾಮ ದೇವದೇವಸ್ಯ ಶೇಷಸ್ಯ ಚರಣಾಂತಿಕಮ್ ॥ ೨೯ ॥

ಬಳಿಕ ಕೆಲವೇ ದಿನಗಳಲ್ಲಿ ಮಂತ್ರದಿಂದ ಮನೋಬಲವನ್ನು ಹೊಂದಿ ತನಗೆ ಬೇಕಾದಲ್ಲಿಗೆ ಹೋಗಬಲ್ಲವನಾಗಿ ದೇವದೇವನಾದ ಶೇಷನ ಲೋಕದಲ್ಲಿ ಅವನ ಪಾದದ ಸಮೀಪಕ್ಕೆ ಹೋಗಿ ಸೇರಿದ.

ಇಲ್ಲಿ ಚಿತ್ರಕೇತುರಾಜ ಶೇಷಾಂತರ್ಗತನಾದ ಸಂಕರ್ಷಣನಾಮಕ ಭಗವಂತನನ್ನು ಉಪಾಸನೆ ಮಾಡಿದ್ದಾನೆ. ಅದರಿಂದ ಭಗವಂತನ ಲೋಕಪ್ರಾಪ್ತಿಯೆ ಆಗಬೇಕಿತ್ತು, ಶೇಷನ ಲೋಕಪ್ರಾಪ್ತಿ ಏಕೆ? ಎಂಬ ಪ್ರಶ್ನೆ ಬರುತ್ತದೆ. ಬೇರೆ ವ್ಯಾಖ್ಯಾನಕಾರರು ಈ ಬಗ್ಗೆ ವಿಮರ್ಶೆ ಮಾಡಿಲ್ಲ. ಏಕೆಂದರೆ ಶೇಷನಿಗೂ ಸಂಕರ್ಷಣ ಎಂಬ ನಾಮವಿದೆ. ಸಂಕರ್ಷಣ ಮಂತ್ರದ ಬಲದಿಂದ ಸಂಕರ್ಷಣನ ಸಾಮೀಪ್ಯವನ್ನೇ ಹೊಂದಿದ್ದಾನೆ. ಇದರಲ್ಲಿ ಪ್ರಶ್ನೆಗೇ ಅವಕಾಶವಿಲ್ಲ. ಶೇಷಾಂತರ್ಗತಭಗವನ್ಮೂರ್ತಿಯ ಉಪಾಸನೆ ಎಂದು ಅವರು ಹೇಳುತ್ತಿಲ್ಲ. ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ 'ಶೇಷನನ್ನು ಸಾಕ್ಷಾತ್ ಭಗವಂತನೆಂದು ಸ್ತೋತ್ರಮಾಡುವುದರಿಂದ ಸಂಕರ್ಷಣೋಪಾಸನೆ ಭಗವತ್ಪ್ರಾಪ್ತಿಗೆ ದ್ವಾರಭೂತವಾಗಿದೆ' ಎಂದಿದೆ.

ಅನ್ಯಾಂತರ್ಯಾಮಿಣಂ ವಿಷ್ಣುಮುಪಾಸ್ಯಾನ್ಯಸಮೀಪಗಃ ।
ಭವೇದ್ಯೋಗ್ಯತಯಾ ತಸ್ಯ ಪದಂ ಚ ಪ್ರಾಪ್ನುಯಾನ್ನರಃ ॥
ಇತಿ ನಾರದೀಯೇ ।

ಅನ್ಯದೇವತೆಗಳಲ್ಲಿ ಅಂತರ್ಯಾಮಿಯಾದ ವಿಷ್ಣುರೂಪವನ್ನು ಉಪಾಸನ ಮಾಡಿದರೆ ಆ ಅನ್ಯರ ಮೂಲಕ ವಿಷ್ಣುಪ್ರಾಪ್ತಿಗೆ ಯೋಗ್ಯನಾಗಿದ್ದರೆ ಮೊದಲಿಗೆ ಅನ್ಯರ ಸಾಮೀಪ್ಯವನ್ನೇ ಪಡೆಯುತ್ತಾನೆ. ಅನ್ಯರ ಪದವಿಗೇ ಯೋಗ್ಯನಾಗಿದ್ದರೆ ಅನ್ಯರ ಪದವಿಯನ್ನೂ ಪಡೆಯುತ್ತಾನೆ ಎಂದು ನಾರದಪುರಾಣದಲ್ಲಿ ಹೇಳಿದೆ.

ಚಿತ್ರಕೇತು ಶೇಷಾಂತರ್ಯಾಮಿತ್ವೇನ ವಿಷ್ಣುವನ್ನು ಉಪಾಸನೆ ಮಾಡಿ, ಅವನು ಶೇಷನ ಮೂಲಕ ವಿಷ್ಣುಪ್ರಾಪ್ತಿಗೆ ಯೋಗ್ಯನಾದ್ದರಿಂದ ಮೊದಲಿಗೆ ಶೇಷನ ಸಾಮೀಪ್ಯವನ್ನು ಹೊಂದಿದ. ರುದ್ರಶೇಷಾಂತರ್ಯಾಮಿತ್ವೇನ ವಿಷ್ಣುವಿನ ಉಪಾಸನೆ ಮಾಡಿ, ಶೇಷಪದವಿ ಹೊಂದಲು ಯೋಗ್ಯನಾದ್ದರಿಂದ, ಶೇಷಪದವಿಯನ್ನು ಹೊಂದಿದ.

* * *

ಶೇಷದೇವನ ದರ್ಶನ ಮಾಡಿ ಸಮಸ್ತಪಾಪ ಪರಿಹಾರ ಮಾಡಿಕೊಂಡ ಚಿತ್ರಕೇತು ರಾಜ ತಿರುಗಿ ಅವನ ಅಂತರ್ಯಾಮಿಯಾದ ಭಗವಂತನ ದರ್ಶನ ಮಾಡಿದ.

ತದ್ದರ್ಶನಧ್ವಸ್ತಸಮಸ್ತಕಿಲ್ಬಿಷಃ
ಸ್ವಸ್ಥಾಮಲಾಂತಃಕರಣೋಽಭ್ಯಯಾನ್ಮುಹುಃ ।
ಪ್ರವೃದ್ಧಭಕ್ತ್ಯಾ ಪ್ರಣಯಾಶ್ರುಲೋಚನಃ
ಪ್ರಹೃಷ್ಟರೋಮಾ ತಮನಾದಿಪೂರುಷಮ್ ॥ ೩೧ ॥

ಸಂಕರ್ಷಣನಾಮಕನಾದ ಆ ಶೇಷದೇವನ ದರ್ಶನದಿಂದ ಅವನ ಸಮಸ್ತ ಪಾಪ ಪರಿಹಾರವಾಯಿತು. ಅಂತಃಕರಣ ಸ್ವಸ್ಥವಾಯಿತು ನಿರ್ಮಲವಾಯಿತು ಭಕ್ತಿಯ ಉದ್ರೇಕದಿಂದ ಮೈ ರೋಮಾಂಚಗೊಂಡಿತು. ಕಣ್ಣುಗಳಲ್ಲಿ ಪ್ರಣಯ ಬಾಷ್ಪ ತುಂಬಿತು. ಬಳಿಕ ಹೀಗೇ ಉಪಾಸನ ಮಾಡಿ ತಿರುಗಿ ಅನಾದಿಪುರುಷನಾದ ಶೇಷಾಂತರ್ಗತ ಸಂಕರ್ಷಣನನ್ನೇ ಚಿತ್ರಕೇತುರಾಜ ದರ್ಶನ ಮಾಡಿದ.

ಇಲ್ಲಿ 'ಅಭ್ಯಯಾನ್ಮುಹುಃ' 'ಶೇಷನ ಚರಣಸಮೀಪವನ್ನು ಇನ್ನೊಮ್ಮೆ ಹೋಗಿ ಸೇರಿದ' ಎಂದರೇನು? 'ಶೇಷಸ್ಯ ಚರಣಾಂತಿಕಂ ಜಗಾಮ' ಶೇಷನ ಚರಣಸಮೀಪವನ್ನು ಹೋಗಿ ಸೇರಿದ' ಎಂದು ಹಿಂದೆ ಹೇಳಿದೆ. ಪುನಃ ಹೋಗುತ್ತಾನೆ ಚಿತ್ರಕೇತು ಏಕೆ? ಬೇರೆ ವ್ಯಾಖ್ಯಾನಕಾರರು 'ಅಭ್ಯಯಾನ್ಮುನಿಃ' ಎಂದು ಅಪಪಾಠವಿಟ್ಟುಕೊಂಡಿದ್ದಾರೆ. ಆದರಿಂದ ಪುನಃ ಹೋಗಿದ್ದೇಕೆ ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಆದರೂ 'ಅಭ್ಯಯಾತ್' ಹೋದನೆಂದು ತಿರುಗಿ ಹೇಳಿದ್ದೇಕೆ? ಹಿಂದೊಮ್ಮೆ 'ಜಗಾಮ' ಎಂದಿದೆ ತಾನೆ? ಎಂಬ ಪ್ರಶ್ನೆ ಬರಬಹುದು. ಅದಕ್ಕೆ 'ಅಭ್ಯಯಾತ್' ಎಂದರೆ 'ಶರಣಮಭ್ಯಯಾತ್' ಶರಣುಹೊಂದಿದನೆಂದು ಅಧ್ಯಾಹಾರ ಮಾಡಿದ್ದಾರೆ. ವಸ್ತುತಃ 'ಅಭ್ಯಯಾನ್ಮುಹುಃ' ಎಂದೇ ಪಾಠ. ಪುನಃ ಹೋದುದು ಶೇಷಾಂತರ್ಗತನಾದ 'ಅನಾದಿಪುರುಷ'ನ ಬಳಿಗೆ. ಶೇಷನೇ ಅನಾದಿಪುರುಷನಲ್ಲ ತಾನೆ? ಹಿಂದೆ 'ಜಗಾಮ ಶೇಷಸ್ಯ ಚರಣಾಂತಿಕಂ' ಶೇಷದರ್ಶನಕ್ಕೆ ಹೋಗಿದ್ದ. ಅವನ ಅನುಗ್ರಹ ಪಡೆದು ಅವನ ಲೋಕದಲ್ಲಿ ಅವನ ಪಾರ್ಷದನಾಗಿದ್ದು ಅವನ ಅಂತರ್ಗತನಾದ ಹರಿಯನ್ನು ಕಾಣಲು ತಿರುಗಿ ಬಂದಿದ್ದಾನೆ. ಇದು ತಂತ್ರಮಾಲಾಗ್ರಂಥದಲ್ಲಿ ಸ್ಪಷ್ಟವಾಗಿ ಹೇಳಿದೆ.

ಅನೇನ ಪ್ರಕಾರೇಣ ಮುಹುಸ್ತತ್ಕಾಶಮಭ್ಯಯಾತ್ ।

ಶೇಷಾಂತರ್ಯಾಮಿಣಂ ವಿಷ್ಣುಂ ಚಿತ್ರಕೇತುರುಪಾಸ್ಯ ತು ।
ಶೇಷಾವಿಷ್ಟಹರೇಶ್ಚಾಪಿ ವರಾನ್ ಪ್ರಾಪ್ಯಾಪ ತದ್ಗತಿಮ್ ।
ಇತಿ ತಂತ್ರಮಾಲಾಯಾಮ್ ।

'ಮೈರೋಮಾಂಚಗೊಂಡು ಕಣ್ಣುಗಳಲ್ಲಿ ಪ್ರಣಯಾಶ್ರು ತುಂಬಿಕೊಂಡು' ಎಂದು ಮುಂತಾಗಿ ಹೇಳಿದ ರೀತಿಯಲ್ಲಿ ಶೇಷನ ಚರಣಸಮೀಪವನ್ನು ಹಿಂದೆ ಹೊಂದಿದ್ದ ಚಿತ್ರಕೇತು ಅದೇ ಪ್ರಕಾರದಿಂದ ಪುನಃ ಅವನ ಅಂತರ್ಯಾಮಿಯ ಉಪಾಸನೆ ಮಾಡಿ ಅವನ ಬಳಿಗೇ ಹೋಗಿ ಸೇರಿದ. ಏಕೆಂದರೆ, ತಂತ್ರಮಾಲಾಗ್ರಂಥದಲ್ಲಿ ಹೇಳಿದೆ–

'ಶೇಷಾಂತರ್ಗತನಾದ ವಿಷ್ಣುವನ್ನು ಚಿತ್ರಕೇತು ಉಪಾಸನೆ ಮಾಡಿ ಮೊದಲಿಗೆ ಶೇಷನನ್ನು ಹೊಂದಿ, ಬಳಿಕ ಶೇಷನಲ್ಲಿ ಆವಿಷ್ಟನಾದ ಹರಿಯಿಂದಲೂ ವರಗಳನ್ನು ಪಡೆದು ಅವನ ಲೋಕವನ್ನು ಹೊಂದಿದ.' ಎಂದು.

* * *

ಭಗವಾನ್ ಸಂಕರ್ಷಣ ಪ್ರಸನ್ನನಾಗಿ ಚಿತ್ರಕೇತುರಾಜನಿಗೆ ನುಡಿದ.

ಅಹಂ ವೈ ಸರ್ವಭೂತಾನಿ ಭೂತಾತ್ಮಾ ಭೂತಭಾವನಃ ।
ಶಬ್ದಬ್ರಹ್ಮ ಪರಂ ಬ್ರಹ್ಮ ಮಮೋಭೇ ಶಾಶ್ವತೀ ತನೂ ॥ ೫೧ ॥

ನಾನು ಎಲ್ಲ ಜೀವಿಗಳಿಗೂ ಅಂತರ್ಯಾಮಿ ಅಧಿಪತಿ, ಜೀವಿಗಳನ್ನು ಸೃಷ್ಟಿಮಾಡುವವನೂ ನಾನೆ. ಶಬ್ದಬ್ರಹ್ಮವೆನಿಸಿದ ವೇದಾದಿಶಾಸ್ತ್ರ ಮತ್ತು ಪರಬ್ರಹ್ಮ ಪರಮಾತ್ಮ ಎಂದು ಎರಡೂ ನನ್ನ ಶಾಶ್ವತರೂಪಗಳು.

[1]ಇಲ್ಲಿ 'ಅಹಂ ವೈ ಸರ್ವಭೂತಾನಿ' 'ನಾನೇ ಸರ್ವಭೂತರೂಪನಾಗಿದ್ದೇನೆ' ಎಂದು ಪರಮಾತ್ಮನಲ್ಲಿ ಸಕಲ ಜಡಪದಾರ್ಥಗಳ ಅಭೇದವನ್ನು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಹಾಗೇ ಸ್ವೀಕರಿಸಿದ್ದಾರೆ. ಆದರೆ ಸತ್ಯವಾದ ಬ್ರಹ್ಮ ಅನೃತವಾದ ಜಡದಿಂದ ಅಭಿನ್ನವೆನಿಸಲು ಶಕ್ಯವಿಲ್ಲ ಎಂದು ಸತ್ಯಾನೃತವಿವೇಕವನ್ನು ಹೇಳುವ ಅದ್ವೈತದಲ್ಲಿ ಅಭೇದ ಕೂಡುವುದಿಲ್ಲ. ಅದಕ್ಕೆ ಶ್ರೀಧರವ್ಯಾಖ್ಯಾನ ಹೇಳುತ್ತದೆ. 'ಪರಮಾತ್ಮನಿಗಿಂತ ಬೇರೆಯಾಗಿ ಜಡಪ್ರಪಂಚ ಇಲ್ಲ ಎಂದು ಅಭಿಪ್ರಾಯ ಹೊರತು ಅಭೇದವನ್ನು ಹೇಳುತ್ತಿಲ್ಲ.' ಎಂದು. ಆದರೆ 'ಬೇರೆಯಾಗಿ ಇಲ್ಲ' ಎಂದರೆ ಅಭಿನ್ನವಾಗಿ ಇದೆ ಎಂದಂತಾಗುತ್ತದೆ. ಬೇರೆಯಾಗಿ ಯಾಗಲಿ ಅಭಿನ್ನವಾಗಿಯಾಗಲಿ ಯಾವ ಪ್ರಕಾರದಿಂದಲೂ ಇಲ್ಲ ಎನ್ನುವುದಾದರೆ 'ಬೇರೆಯಾಗಿ' ಎಂದೇಕೆ ಹೇಳಬೇಕು? ಅದರಿಂದ 'ನಾನು ಸರ್ವಭೂತರೂಪ' ಎನ್ನದೆ 'ಯಾವ ಭೂತಗಳೂ ಇಲ್ಲ' ಎಂದು ಹೇಳಬೇಕಾಗುತ್ತದೆ.

---

೧. ಸರ್ವಭೂತಾನ್ಯಹಮೇವ । ಭೂತಾನಾಮಾತ್ಮಾ ಭೋಕ್ತಾಽಪ್ಯಹಮೇವ । ಭೋಕ್ತೃಭೋಗ್ಯಾತ್ಮಕಂ ವಿಶ್ವಂ ಮದ್ವ್ಯತಿರಿಕ್ತಂ ನಾಸ್ತೀತ್ಯರ್ಥಃ ।
–ಶ್ರೀಧರಃ

[1]ವೀರರಾಘವವ್ಯಾಖ್ಯಾನದಲ್ಲಿ 'ಭೂತಭಾವನಃ' 'ಭೂತಗಳಿಗೆ ಪರಮಾತ್ಮ ಉಪಾದಾನಕಾರಣ' ಎಂದು ಹೇಳಿದ್ದರಿಂದ ಕಾರಣ ಕಾರ್ಯಗಳಿಗೆ ಅಭೇದವಿರುವುದರಿಂದ 'ಅಹಂ ವೈ ಸರ್ವಭೂತಾನಿ' 'ನಾನೇ ಸರ್ವಭೂತಗಳು' ಎಂದಿದೆ ಎನ್ನುತ್ತಾರೆ. ಆದರೆ ಸರ್ವಭೂತಗಳಿಗೆ ಪ್ರಕೃತಿ ಉಪಾದಾನ. ಪರಮಾತ್ಮ ಉಪಾದಾನನಲ್ಲ. ಅವನು ನಿರ್ವಿಕಾರ ಎಂದು ಅವರೇ ಒಪ್ಪಿದ್ದಾರೆ ಅದಕ್ಕೆ ಅವರು ಹೇಳುತ್ತಾರೆ– 'ಸೂಕ್ಷ್ಮಪ್ರಕೃತಿಶರೀರಿಯಾಧ ಪರಮಾತ್ಮ ಸ್ಥೂಲಪ್ರಪಂಚ ಶರೀರಿಯಾಗುತ್ತಾನೆ. ಆಗ ಪ್ರಕೃತಿಶರೀರಿಯು ಕಾರಣ. ಪ್ರಪಂಚಶರೀರಿ ಕಾರ್ಯ. ಹೀಗಾಗಿ ಪರಮಾತ್ಮ ಸ್ವರೂಪದಲ್ಲಿ ನಿರ್ವಿಕಾರಿಯಾದರೂ ಪ್ರಕೃತಿಶರೀರಿಯಾಗಿ ಉಪಾದಾನಕಾರಣನೆನಿಸುತ್ತಾನೆ' ಎಂದು. ಆದರೆ ಪ್ರಕೃತಿ ಪ್ರಪಂಚಕ್ಕೆ ಉಪಾದಾನ ಕಾರಣ ಎಂದರೆ ಸಾಕು. ಪ್ರಕೃತಿ ಶರೀರಿ ಪ್ರಪಂಚಶರೀರಿಗೆ ಉಪಾದಾನ ಎನ್ನಲು ಕಾರಣವಿಲ್ಲ. ಲೋಕದಲ್ಲಿಯೂ 'ಬಾಲಕ ಯುವಕನಾದ' ನೆಂದರೆ ಬಾಲಕನ ಶರೀರ ಯುವಕಶರೀರವಾಗಿ ಪರಿಣಮಿಸಿತೆಂದೇ ಅರ್ಥ. ಬಾಲಕ ಯುವಕನಾಗಿ ಹರಿಣಾಮಹೊಂದಿದನೆನ್ನುವುದಿಲ್ಲ. 'ಯುವಕನಾದ' ಎಂದರೆ ಯುವಕನಾಗಿ ಪರಿಣಮಿಸಿದನೆಂದೇ ಇಟ್ಟುಕೊಂಡರೂ ಬಾಲಕನು ಯುವಕಶರೀರವಾಗಿ ಪರಿಣಮಿಸುತ್ತಾನೆ ಎನ್ನಲಾಗದು. ಅದರಿಂದ ಪ್ರಕೃತಿಶರೀರಿಯಾದ ಪರಮಾತ್ಮ ಪ್ರಪಂಚರೂಪವಾಗಿ, ಸರ್ವಭೂತರೂಪವಾಗಿ ಪರಿಣಮಿಸದಿರುವುದರಿಂದ ನಾನೇ ಸರ್ವಭೂತರೂಪನೆಂದು ಪರಮಾತ್ಮ ಹೇಳುವುದು ಅಸಂಗತವೆ ಆಗುವುದು.

ಅದರಿಂದ ಹೀಗೆ ವ್ಯಾಖ್ಯಾನ ಮಾಡುವುದೇ ಸೂಕ್ತ–

ಹರಿಸ್ತು ಸರ್ವಭೂತಾನಿ ತದಂತರ್ಯಾಮ್ಯಪೇಕ್ಷಯಾ ।
ತಿಙ್‌ಪದಾನಿ ತು ಸರ್ವಾಣಿ ಸುಪ್‌ಪದಾನಿ ತಥೈವ ಚ ।
ತಸ್ಮಿನ್ನೇವ ಪ್ರವರ್ತಂತೇ ಮುಖ್ಯವೃತ್ತ್ಯಾ ವಿಶೇಷತಃ ॥ ಇತಿ ಚ ॥

ಹರಿ ತಾನು ಸರ್ವಭೂತರೂಪನಾಗಿದ್ದೇನೆ ಎನ್ನುವುದು ಸರ್ವಭೂತಗಳ ಅಂತರ್ಯಾಮಿಯಾಗಿದ್ದೇನೆ ಎನ್ನುವ ಅಭಿಪ್ರಾಯದಿಂದ. 'ತತ್ವಮಸಿ, ಅಹಂ ಬ್ರಹ್ಮಾಸ್ಮಿ, ಇದಂ ಸರ್ವಂ ಯದಯಮಾತ್ಮಾ' ಇತ್ಯಾದಿ ವಾಕ್ಯಗಳಲ್ಲಿ ಅಭೇದವನ್ನು ಹೇಳಿಲ್ಲ ಏಕೆಂದರೆ ಅಲ್ಲಿ ಅಸಿ ಅಸ್ಮಿ ಮುಂತಾದ ತಿಙಂತಪದಗಳಾಗಲಿ ತ್ವಂ ಅಹಂ ಮುಂತಾದ ಸುಬಂತಪದಗಳಾಗಲಿ ಎಲ್ಲವೂ ಹರಿಯಲ್ಲಿಯೇ ಮುಖ್ಯವೃತ್ತಿಯಿಂದ

---

೧. ಸರ್ವಾಣ್ಯಪಿ ಭೂತಾನಿ ಮದಭಿನ್ನಾನ್ಯೇವ । ಭೂತಾನಿ ಚಿದಚಿದಾತ್ಮಕಾನಿ ದೇವಮನುಷ್ಯಾದೀನಿ ಭಾವಯತಿ ಉತ್ಪಾದಯತಿ ಸ್ವಸ್ಮಾದೇವೋಪಾದಾನ ಭೂತಾದಿತಿ ಭೂತಭಾವನಃ । ಕಾರ್ಯಕಾರಣಯೋರಭೇದಸ್ತ್ವಾರಂಭಣಾಧಿಕರಣಾದಿಭಾಷ್ಯೇ ಬಹೂಪಪತ್ತಿಭಿರ್ನಿರೂಪಿತಃ । —ವೀರರಾಘವಃ

ಪ್ರವೃತ್ತವಾಗುತ್ತವೆ. ಭೇದಪ್ರತಿನಿಧಿಯಾದ ವಿಶೇಷಬಲದಿಂದ ಬೇರೆ ಬೇರೆಯಾಗಿರುವ ಹರಿಯ ರೂಪವಿಶೇಷಗಳನ್ನು ಅವು ಹೇಳುವುದರಿಂದ ಪರ್ಯಾಯಪದಗಳೆನಿಸುವುದಿಲ್ಲ ಎಂದೂ ತಂತ್ರಮಾಲಾಗ್ರಂಥದಲ್ಲಿ ಉಕ್ತವಾಗಿದೆ.

* * *

ಮನಸ್ಸು ವಿಷಯದಲ್ಲಿ, ವಿಷಯ ಮನಸಿನಲ್ಲಿ, ಇರುತ್ತದೆ. ಎರಡರಲ್ಲಿಯೂ ನಿಯಾಮಕನಾಗಿ ನಾನಿರುತ್ತೇನೆ ಎಂದು ಭಗವಾನ್ ಸಂಕರ್ಷಣ ಚಿತ್ರಕೇತುರಾಜನಿಗೆ ಉಪದೇಶಿಸುತ್ತಾನೆ.

ಲೋಕೇ ವಿತತಮಾತ್ಮಾನಂ
ಲೋಕಂ ಚಾತ್ಮನಿ ಸಂತತಮ್ ।
ಉಭಯಂ ಚ ಮಯಾ ವ್ಯಾಪ್ತಂ
ಮಯಿ ಚೈವೋಭಯಂ ಕೃತಮ್ ॥ ೫೨ ॥

ನಿನ್ನ ಮನಸ್ಸು ತನಗೆ ವಿಷಯವಾದ ಪ್ರಪಂಚದಲ್ಲಿ ವ್ಯಾಪಿಸಿರುವಂಥದ್ದೆಂದೂ, ಪ್ರಪಂಚವು ಮನಸಿನಲ್ಲಿ ತನ್ನ ಸಂಸ್ಕಾರರೂಪದಿಂದ ವ್ಯಾಪಿಸಿರುವಂಥದ್ದೆಂದೂ, ಮನಸ್ಸು ಪ್ರಪಂಚಗಳೆರಡೂ ನನ್ನಿಂದ ವ್ಯಾಪಿಸಲ್ಪಟ್ಟವುಗಳೆಂದೂ ಎರಡೂ ನನಗೆ ಅಧೀನವಾಗಿದ್ದು ನನ್ನನ್ನು ಆಶ್ರಯಿಸಿಕೊಂಡಿರುವವುಗಳೆಂದೂ ತಿಳಿ.

ಇಲ್ಲಿ ಶ್ರೀಧರವ್ಯಾಖ್ಯಾನ ಹೇಳುತ್ತದೆ. 'ನೀನು ಪ್ರಪಂಚದಲ್ಲಿ ಭೋಕ್ತನಾಗಿ ವ್ಯಾಪಿಸಿರುವೆ. ನಿನ್ನಲ್ಲಿ ಪ್ರಪಂಚ ಭೋಗ್ಯವಾಗಿ ವ್ಯಾಪಿಸಿದೆ. ಭೋಕ್ತೃಭೋಗ್ಯ ಎರಡರಲ್ಲಿಯೂ ನಾನು ಕಾರಣರೂಪದಿಂದ ವ್ಯಾಪಿಸಿದ್ದೇನೆ. ಎರಡೂ ನನ್ನಲ್ಲಿ ಕಲ್ಪಿತವಾಗಿವೆ' ಎಂದು. ಆದರೆ ಜೀವ ನಿತ್ಯ, ಅವನ ಜೀವತ್ವವೂ ಅನಾದಿ ಎಂದು ಅದ್ವೈತಿಗಳು ಒಪ್ಪಿದ್ದಾರೆ. ಅಂಥ ಜೀವನಿಗೆ ಪರಮಾತ್ಮ ಕಾರಣ, ಕಾರಣರೂಪದಿಂದ ಜೀವನಲ್ಲಿ ಪರಮಾತ್ಮ ವ್ಯಾಪಿಸಿದ್ದಾನೆ ಎನ್ನುವುದು ಕೂಡುವುದಿಲ್ಲ. ಭೋಗ್ಯಪ್ರಪಂಚ ಜಡವಾದ್ದರಿಂದ ಅದಕ್ಕೆ ಕಾರಣ ಪರಮಾತ್ಮ ಎಂದರೆ ತಪ್ಪಿಲ್ಲ. ಭೋಕ್ತೃವಾದ ಜೀವ ಭೋಗ್ಯಪ್ರಪಂಚ ಎರಡರಲ್ಲಿಯೂ ಕಾರಣರೂಪದಿಂದ ಪರಮಾತ್ಮ ವ್ಯಾಪಿಸಿದನೆಂದು ಹೇಳುವುದು ತಪ್ಪಾಗುತ್ತದೆ. ಜೀವ ಭೋಕ್ತನಾಗಿ ಪ್ರಪಂಚದಲ್ಲಿ ವ್ಯಾಪಿಸಿದ್ದಾನೆ ಎಂದು ಹೇಳಿದ ಮೇಲೆ ಪ್ರಪಂಚ ಭೋಗ್ಯವಾಗಿ ಜೀವನಲ್ಲಿ ವ್ಯಾಪಿಸಿದೆ ಎಂದು ಬೇರೆ ಹೇಳುವುದು ವ್ಯರ್ಥ. ಜೀವ ಪ್ರಪಂಚದ ಭೋಕ್ತನೆಂದ ಮೇಲೆ ಪ್ರಪಂಚ ಜೀವನಿಗೆ ಭೋಗ್ಯವೆಂದು ತಿರುಗಿ ಹೇಳಬೇಕಾಗಿಲ್ಲ. ಅದರಿಂದ 'ಲೋಕಂ ಚಾತ್ಮನಿ ಸಂತತಂ' ಎಂಬ ವಾಕ್ಯ ವ್ಯರ್ಥ. 'ಉಭಯಂ ಚ ಮಯಾ ವ್ಯಾಪ್ತಂ' ಎಂಬುದು ವಿರುದ್ಧಾರ್ಥಕ. 'ಮಯಿ ಚೈವೋಭಯಂ ಕೃತಂ' ಎಂಬುದು ತಿರುಗಿ ಆ

ವಿರುದ್ಧಾರ್ಥವನ್ನೇ ಬೇರೆ ಶಬ್ದದಿಂದ ಹೇಳುವ ವಾಕ್ಯವಾಗಿದೆ. ಏಕೆಂದರೆ ಕಾರಣ ಎಂದರೆ ವಿವರ್ತಕಾರಣ. ಅಂದರೆ ಅದರಲ್ಲಿ ಭೋಕ್ತೃಭೋಗ್ಯಗಳೆರಡೂ ಆರೋಪಿತವೆಂದರ್ಥ. ಆದರೆ ಭೋಗ್ಯವಾದ ಜಡ ಮಿಥ್ಯೆಯಾದ್ದರಿಂದ ಆರೋಪಿತವೆನ್ನಬಹುದು. ಭೋಕ್ತೃ ಚೇತನ ಆರೋಪಿತನೆನ್ನಲಾಗದು. ಚೇತನ ಸತ್ಯ.

ವೀರರಾಘವ ವ್ಯಾಖ್ಯಾನದಲ್ಲಿ ಶರೀರದಲ್ಲಿ ಧಾರಕನಾಗಿ ಜೀವ, ಜೀವನಲ್ಲಿ ಧಾರ್ಯವಾಗಿ ಶರೀರ ವ್ಯಾಪಿಸಿದೆ, ಎನ್ನುತ್ತಾರೆ ಇಲ್ಲಿಯೂ ಪುನರುಕ್ತಿ ದೋಷವಿದೆ. ಜೀವನು ಶರೀರಕ್ಕೆ ಧಾರಕನೆಂದ ಮೇಲೆ ಶರೀರ ಜೀವನಿಂದ ಧಾರ್ಯ ಎಂದು ಬೇರೆ ಹೇಳಬೇಕಾಗಿಲ್ಲ.

ವಸ್ತುತಃ ಶ್ಲೋಕದಲ್ಲಿ ಆತ್ಮಶಬ್ದದಿಂದ ಜೀವನನ್ನು ಇಟ್ಟುಕೊಳ್ಳುವುದು ಸ್ವರಸವಲ್ಲ. ಆತ್ಮವೆಂದರೆ ಮನಸ್ಸು ಎಂದಿಟ್ಟುಕೊಳ್ಳುವುದೇ ಭಾಗವತದಲ್ಲಿ ಮುಂದೆ ಏಕಾದಶ ಸ್ಕಂಧವಚನಕ್ಕೆ ಅನುಗುಣವಾಗುತ್ತದೆ. ಅಲ್ಲಿ ಸನಕಾದಿಗಳು ಹೀಗೆ ಪ್ರಶ್ನಿಸುತ್ತಾರೆ–

ಗುಣೇಷ್ವಾವಿಶತೇ ಚೇತೋ ಗುಣಾಶ್ಚೇತಸಿ ಚ ಪ್ರಭೋ ।
ಕಥಮನ್ಯೋನ್ಯ ಸಂತ್ಯಾಗೋ ಮುಮುಕ್ಷೋಃ ಸಂತಿತೀರ್ಷೋಃ ॥
(ಭಾಗ.೧೧.೧೩.೧೭)

'ವಿಷಯಗಳಲ್ಲಿ ಮನಸ್ಸು, ಮನಸ್ಸಿನಲ್ಲಿ ವಿಷಯಗಳು ಪ್ರವೇಶಿಸುತ್ತವೆ. ಎರಡನ್ನೂ ಮುಮುಕ್ಷು ಹೇಗೆ ತೊಡೆದು ಹಾಕಿಕೊಳ್ಳಬೇಕು?' ಇದಕ್ಕೆ ಉತ್ತರವಾಗಿ ಹಂಸನಾಮಕ ಪರಮಾತ್ಮ ಹೇಳುತ್ತಾನೆ–

ಗುಣೇಷ್ವಾವಿಶತೇ ಚೇತೋ ಗುಣಾಶ್ಚೇತಸಿ ವಃ ಪ್ರಜಾಃ ।
ಜೀವಸ್ಯ ದೇಹ ಉಭಯಂ ಗುಣಾಶ್ಚೇತೋ ಮದಾತ್ಮನಃ ॥
(ಭಾಗ.೧೧.೧೩.೨೫)

'ನಿಮ್ಮ ಮನಸ್ಸು ವಿಷಯಗಳಲ್ಲಿ, ವಿಷಯಗಳು ಮನಸಿನಲ್ಲಿ ಪ್ರವೇಶಿಸಿರಬಹುದು. ಆದರೆ ಜೀವನು ಎರಡನ್ನೂ ನನಗೆ ಅರ್ಪಿಸಿದರೆ ಎರಡೂ ಸುಟ್ಟು ಹೋಗುತ್ತವೆ.' ಮನಸ್ಸು ಸುಡುವುದೆಂದರೆ ಮನಸ್ಸಿನ ವಿಷಯಾಸೆ ಸುಟ್ಟು ಹೋಗುತ್ತದೆ. ವಿಷಯ ಸುಡುವುದೆಂದರೆ ವಿಷಯಾಸೆಗೆ ಕಾರಣವಾದ ಅನಾದಿಯಾದ ವಿಷಯವಾಸನೆ ಸುಟ್ಟುಹೊಗುವುದು. ವಿಷಯದಲ್ಲಿ ಮನಸ್ಸು ಪ್ರವೇಶಿಸುವುದೆಂದರೆ ಮನಸಿನಿಂದ ವಿಷಯವನ್ನು ಭೋಗಿಸುವುದು, ಭೋಗಿಸುವಲ್ಲಿ ಆಸಕ್ತಿ ತೋರುವುದು. ಅದಕ್ಕೆ ಕಾರಣ ವಿಷಯಗಳು ಅನಾದಿವಾಸನಾರೂಪವಾಗಿ ಮನಸ್ಸಿನಲ್ಲಿ ವ್ಯಾಪಿಸಿರುವುದು. ವಿಷಯವನ್ನು ಭಗವಂತನದೆಂದು ಭಗವಂತನಿಗೇ ಅರ್ಪಿಸಬೇಕು. ಮನಸ್ಸನ್ನೂ

ಅವನಲ್ಲಿ ಅರ್ಪಿಸಬೇಕು. ಅಂದರೆ ಸದಾ ಅವನನ್ನೇ ಚಿಂತಿಸಬೇಕು. ಆಗ ಅವನ ಅನುಗ್ರಹದಿಂದ ಮನಸಿನಲ್ಲಿರುವ ವಿಷಯಾಸೆ ಅದಕ್ಕೆ ಕಾರಣವಾದ ವಿಷಯವಾಸನೆ ಎರಡೂ ತೊಲಗುತ್ತದೆ. ಹೀಗೆ ಸ್ಪಷ್ಟವಾಗಿ ಏಕಾದಶಸ್ಕಂಧದಲ್ಲಿ ವಿವರಣೆ ಬಂದಿರುವುದರಿಂದ ಇಲ್ಲಿ ಆತ್ಮ ಎಂದರೆ ಜೀವನೆಂದು ವ್ಯಾಖ್ಯಾನಿಸುವುದು ಸಮಂಜಸವಾಗುವುದಿಲ್ಲ.

ಲೋಕಂ ಚಾತ್ಮನಿ ಸತತಂ ವಾಸನಾರೂಪೇಣ ।

ವಿಷಯಪ್ರಪಂಚ ಮನಸ್ಸಿನಲ್ಲಿ ವ್ಯಾಪಿಸಿದೆ ಎಂದರೆ ಅನಾದಿವಾಸನಾರೂಪದಿಂದ ಎಂದು ತಿಳಿಯಬೇಕು.

* * *

ಜಾಗರ ಮುಂತಾದ ಅವಸ್ಥಾನಿಯಾಮಕನಾದ ಭಗವಂತನನ್ನು ಉಪಾಸನ ಮಾಡಬೇಕೆಂದು ಭಗವಾನ್ ಸಂಕರ್ಷಣ ಚಿತ್ರಕೇತುರಾಜನಿಗೆ ಉಪದೇಶ ಮಾಡುತ್ತಾನೆ.

ಏವಂ ಜಾಗರಣಾದೀನಿ ಜೀವಸ್ಥಾನಾನಿ ಚಾತ್ಮನಃ ।
ಮಾಯಾಮಾತ್ರಾಣಿ ವಿಜ್ಞಾಯ ತದ್ದ್ರಷ್ಟಾರಂ ಪರಂ ಸ್ಮರೇತ್ ॥ ೫೪ ॥

ಹಾಗೆಯೇ ಎಚ್ಚರ ಮುಂತಾದ ಅವಸ್ಥೆಗಳೂ ಭಗವಂತನ ಅಧೀನವೆ. ಮನಸಿಗೆ ಸಂಬಂಧಿಸಿದ ಜೀವನ ಸುಖದುಃಖಾದಿ ಅನುಭವದ ಸ್ಥಳವಾದ ಈ ಜಾಗರಾದಿ ಅವಸ್ಥೆಗಳೆಲ್ಲವೂ ಭಗವಂತನ ಇಚ್ಛೆಯಿಂದ, ಅವನ ಅಧೀನವಾದ ಪ್ರಕೃತಿಯಿಂದ ಉಂಟಾಗಿರುತ್ತವೆ ಎಂದು ತಿಳಿದು ಅವುಗಳನ್ನು ತೋರಿಸುವ ಭಗವಂತನನ್ನು ಉಪಾಸನ ಮಾಡಬೇಕು.

ಇಲ್ಲಿ 'ಮಾಯಾಮಾತ್ರ' ಎಂದರೆ ಮಾಯಾಕಲ್ಪಿತ, ಮಿಥ್ಯೆ ಎಂದು ಶ್ರೀಧರ ಮುಂತಾದ ವ್ಯಾಖ್ಯಾನಕಾರರು ಹೇಳಿದ್ದಾರೆ. ಹಿಂದಿನ ಶ್ಲೋಕದಲ್ಲಿ ಸ್ವಪ್ನವನ್ನು ಹೇಳಿ, ಈ ಶ್ಲೋಕದಲ್ಲಿ 'ಸ್ವಪ್ನದಂತೆ ಜಾಗರವೂ ಕೂಡ ಮಾಯಾಮಾತ್ರ, ಕಲ್ಪಿತ' ಎಂದು ಹೇಳಿದರೆ, 'ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್' 'ಸ್ವಪ್ನವು ಸುಳ್ಳೆಂದು ಎಚ್ಚೆತ್ತಾಗ ತಿಳಿಯುತ್ತದೆ, ಹಾಗೆ ಜಾಗರದಲ್ಲಿ ಕಂಡಿದ್ದು ಸುಳ್ಳೆಂದು ಎಂದೂ ತಿಳಿಯುವುದಿಲ್ಲ. ಈ ವ್ಯತ್ಯಾಸವಿರುವುದರಿಂದ ಜಾಗರಪ್ರಪಂಚ ಸ್ವಪ್ನಪ್ರಪಂಚದಂತೆ ಸುಳ್ಳೆಂದು ಹೇಳಲಾಗದು' ಎಂದು ಬ್ರಹ್ಮಸೂತ್ರದಲ್ಲಿ ಹೇಳಿದ್ದಕ್ಕೆ ಭಾಗವತ ವ್ಯತಿರಿಕ್ತವಾಗಿ ಹೇಳಿದಂತಾಗುವುದು. ಆದರಿಂದ 'ಮಾಯಾ ಮಾತ್ರ' ಎಂದರೆ 'ಪ್ರಕೃತಿನಿರ್ಮಿತ' ಎಂದು ಅರ್ಥವನ್ನೆ ಗ್ರಹಿಸಬೇಕು. ಪ್ರಕೃತಿ ಎಂದರೆ ಶ್ರೀಹರಿ, ಲಕ್ಷ್ಮಿ, ಮತ್ತು ಜಡಪ್ರಕೃತಿ ಮೂವರನ್ನು ಇಟ್ಟುಕೊಳ್ಳಬೇಕು.

ಮಾಯಾಮಾತ್ರಾಣಿ ಪ್ರಕೃತಿನಿರ್ಮಿತಾನಿ ।

'ಮಾಯಾಮಾತ್ರಾಣಿ' ಎಂದರೆ ಪ್ರಕೃತಿನಿರ್ಮಿತಗಳೆಂದರ್ಥ.

* * *

ಜೀವ ಎಚ್ಚೆತ್ತಿರುವಾಗ ಅವನೊಳಗಿರುವ ಭಗವಂತ ಎಚ್ಚೆತ್ತಿರುತ್ತಾನೆ. ಜೀವ ಮಲಗಿರುವಾಗಲೂ ಆತ ಎಚ್ಚೆತ್ತೇ ಇರುತ್ತಾನೆ. ಅದರಿಂದ ಅವನು ಜ್ಞಾನಸ್ವರೂಪ. ಜೀವನಿಗಿಂತ ಬಹಳ ವಿಲಕ್ಷಣ ಎಂದು ಭಗವಾನ್ ಸಂಕರ್ಷಣ ಚಿತ್ರಕೇತುರಾಜನಿಗೆ ಉಪದೇಶಿಸುತ್ತಾನೆ.

ಉಭಯಂ ಸ್ಮರತಃ ಪುಂಸಃ ಪ್ರಸ್ವಾಪಪ್ರತಿಬೋಧಯೋಃ ।
ಅನ್ವೇತಿ ವ್ಯತಿರಿಚ್ಯೇತ ತಜ್ಜ್ಞಾನಂ ಬ್ರಹ್ಮ ತತ್ ಪರಮ್ ॥ ೫೬ ॥

ನಿದ್ದೆ ಎಚ್ಚರ ಎರಡನ್ನೂ ಜೀವ ಅನುಭವಿಸುತ್ತಾನೆ, ಜೀವ ಎಚ್ಚರವನ್ನು ಅನುಭವಿಸುವಾಗ ಭಗವಂತ ಅವನಂತೆ ತಾನೂ ಎಚ್ಚರವನ್ನು ಅನುಭವಿಸುತ್ತಾನೆ. ಆದರೆ ಜೀವ ನಿದ್ದೆಯನ್ನು ಅನುಭವಿಸುವಾಗ ಭಗವಂತ ಜೀವನಂತೆ ನಿದ್ದೆಯನ್ನು ಅನುಭವಿಸುವುದಿಲ್ಲ. ಎಚ್ಚೆತ್ತೇ ಇರುತ್ತಾನೆ. ಅದರಿಂದ ಜ್ಞಾನಸ್ವರೂಪನಾಗಿದ್ದು ಜೀವನಿಗಿಂತ ಬಹಳ ವಿಲಕ್ಷಣನಾಗಿರುವವನು ಆ ಭಗವಂತ ನಾನೇ ಎಂದು ತಿಳಿ.

[೧]ಇಲ್ಲಿ ಶ್ರೀಧರವ್ಯಾಖ್ಯಾನದಲ್ಲಿ 'ಸ್ವಪ್ನಾವಸ್ಥೆಯಲ್ಲಿದ್ದ ಜೀವ ಸ್ವಪ್ನದಲ್ಲಿ ಕಂಡಿದ್ದನ್ನು ಜಾಗ್ರದವಸ್ಥೆಯಲ್ಲಿರುವ ಜೀವ ಹೇಗೆ ಸ್ಮರಿಸುತ್ತಾನೆ? ಒಬ್ಬ ಕಂಡಿದ್ದನ್ನು ಇನ್ನೊಬ್ಬ ಸ್ಮರಿಸುವುದುಂಟೆ? ಎಂಬ ಪ್ರಶ್ನೆಗೆ ಸಮಾಧಾನ ಹೀಗೆ– 'ಸ್ವಪ್ನ ಜಾಗರಗಳನ್ನು ಜೀವ ಅನುಭವಿಸುವಾಗ ಆ ಸ್ವಪ್ನಜಾಗರಗಳೆರಡನ್ನೂ ನೋಡುವ ಚೈತನ್ಯ ಎರಡಕ್ಕೂ ಅಲಿಪ್ತವಾಗಿರುತ್ತದೆ. ಅಂದರೆ ಅವೆರಡರಲ್ಲಿ ಯಾವುದೊಂದಾದರೂ ಇಲ್ಲದಿದ್ದಾಗಲೂ ಚೈತನ್ಯ ಇಲ್ಲವಾಗುವುದಿಲ್ಲ. ಆ ಚೈತನ್ಯವೇ ಪರಬ್ರಹ್ಮ. ಬೇರೆಯಲ್ಲ.' ಎಂದು. ಇಲ್ಲಿ ಪ್ರಶ್ನೆಯ ಅಭಿಪ್ರಾಯ ಹೀಗೆ– ಜೀವನಿಗೆ ಸ್ವಪ್ನಾವಸ್ಥೆಯಲ್ಲಿ ತೈಜಸ ಎಂದು ಹೆಸರು. ಅವನಿಗೇ ಸುಪ್ತಾವಸ್ಥೆಯಲ್ಲಿ ಪ್ರಾಜ್ಞನೆಂದು ಹೆಸಲು. ಜಾಗರದಲ್ಲಿ ವಿಶ್ವ ಎಂದು

---

೧. ನನು ಸ್ವಾಪಸಾಕ್ಷಿಣಾ ದೃಷ್ಟಂ ಕಥಂ ಜಾಗ್ರದವಸ್ಥಃ ಸ್ಮರೇನ್ನ ಹ್ಯನ್ಯೇನ ದೃಷ್ಟಮನ್ಯಃ ಸ್ಮರತಿ ತತ್ರಾಹ । ಉಭಯಂ ಪ್ರಸ್ವಾಪಂ ಪ್ರತಿಬೋಧಂ ಚ ಸ್ಮರತೋಽನುಸಂದಧತಃ । ತಯೋಃ ಪ್ರಸ್ವಾಪಪ್ರತಿಬೋಧಯೋಃ ಪ್ರಕಾಶತ್ವೇನ ಯದನ್ವೇತಿ ತಾಭ್ಯಾಂ ವ್ಯತಿರಿಚ್ಯೇತ ಚ । ಏಕೈಕಾಪಾಯೇಽಪ್ಯನಪಾಯಾತ್ । ತಜ್ಜ್ಞಾನಂ ಪರಂ ಬ್ರಹ್ಮ ತದೇವ ನ ತು ಭಿನ್ನಮಿತ್ಯರ್ಥಃ । ಅತೋ ಬಾಲ್ಯೇ ದೃಷ್ಟಸ್ಯ ಯೌವನೇ ಸ್ಮೃತಿವದವಸ್ಥಾಂತರತ್ವೇಽಪಿ ಸ್ವಾಪಾನಂದಯೋಃ ಸ್ಮರಣಂ ಘಟತ ಇತಿ ಭಾವಃ । ತದೇವಂಭೂತಂ ಬ್ರಹ್ಮಾತ್ಮಾನಮವೇಹೀತ್ಯನುಷಂಗಃ । –ಶ್ರೀಧರಃ

ಹೆಸರು. ಬಾಲ್ಯಾವಸ್ಥೆಯಲ್ಲಿ ಬಾಲಕನೆಂದು ಯೌವನಾವಸ್ಥೆಯಲ್ಲಿ ಯುವಕನೆಂದು ಒಬ್ಬನಿಗೇ ಬೇರೆಬೇರೆ ಹೆಸರು. ಹಾಗೇ ಇದು. ತೈಜಸ ಕಂಡಿದ್ದನ್ನು ವಿಶ್ವ ಹೇಗೆ ಸ್ಮರಿಸುತ್ತಾನೆ? ಎಂದು ಪ್ರಶ್ನೆ. ಬಾಲಕನಾಗಿ ಪಡೆದ ಅನುಭವವನ್ನು ಯುವಕನಾಗಿ ಹೇಗೆ ಸ್ಮರಿಸುತ್ತಾನೆ ಎಂದು ಕೇಳುವಂತೆ ಇದೂ ಅಸಂಗತವೆ. ಈ ಪ್ರಶ್ನೆಗೆ ಉತ್ತರ, ಒಬ್ಬನಿಗೇ ಎರಡು ಅವಸ್ಥೆಗಳು ಬರುವುದರಿಂದ ಒಂದು ಅವಸ್ಥೆಯಲ್ಲಿ ಕಂಡಿದ್ದನ್ನು ಇನ್ನೊಂದು ಅವಸ್ಥೆಯಲ್ಲಿ ಅವನೇ ಸ್ಮರಿಸಬಲ್ಲ ಎಂದು. ಆದರೆ ಎರಡೂ ಅವಸ್ಥೆಗಳನ್ನು ಕಾಣುವ ಚೈತನ್ಯ ಪರಬ್ರಹ್ಮವೆ ಎನ್ನುತ್ತಾರೆ. ಕಾಣುವುದು ಜೀವಚೈತನ್ಯ, ಕಾಣದುದು ಪರಬ್ರಹ್ಮ ಎನ್ನಬೇಕು. ಮತ್ತು ಒಬ್ಬ ಕಂಡಿದ್ದನ್ನು ಇನ್ನೊಬ್ಬ ಹೇಗೆ ಸ್ಮರಿಸುತ್ತಾನೆ ಎಂಬ ಪ್ರಶ್ನೆಗೆ 'ಅನ್ವೇತಿ' ಎರಡೂ ಅವಸ್ಥೆಗಳಲ್ಲಿ ಅನಸ್ಯೂತವಾಗಿ ಒಂದೇ ಜೀವಚೈತನ್ಯವಿದೆ ಎಂದು ಹೇಳಿದರೆ ಸಾಕು. ಮುಂದಿನ 'ವ್ಯತಿರಿಚ್ಯೇತ' 'ತಜ್ಜ್ಞಾನಂ ಪರಂ ಬ್ರಹ್ಮ' ಎಂದೆಲ್ಲ ಅನಾವಶ್ಯಕವಾಗುತ್ತದೆ.

ವಸ್ತುತಃ ಜೀವ ಎಚ್ಚೆತ್ತಿರುವಾಗ ಅವನೊಳಗಿರುವ ಭಗವಂತನೂ ಎಚ್ಚೆತ್ತಿರುತ್ತಾನೆ. ಇದು 'ಅನ್ವೇತಿ' ಎಂದು ಹೇಳಿದ ಅನ್ವಯ. ಜೀವ ಮಲಗಿದಾಗಲೂ ಅವನೊಳಗಿರುವ ಭಗವಂತ ನಿದ್ದೆ ಮಾಡುವುದಿಲ್ಲ ಎಚ್ಚೆತ್ತೇ ಇರುತ್ತಾನೆ. ಇದು 'ವ್ಯತಿರಿಚ್ಯೇತ' ಎಂದು ಹೇಳಿದ ವ್ಯತಿರೇಕ. ಅದರಿಂದ ಪರಮಾತ್ಮ 'ಪರಂ' ಜೀವನಿಗಿಂತ ಬಹಳ ವಿಲಕ್ಷಣ ಸದಾ ಎಚ್ಚರ ಉಳ್ಳವನು, 'ಜ್ಞಾನಂ' ಜ್ಞಾನ ಸ್ವರೂಪನಾದ ಬ್ರಹ್ಮ ಎಂದು ವ್ಯಾಖ್ಯಾನಿಸಬೇಕು.

ಪ್ರತಿಬೋಧೇ ಅನ್ವೇತಿ ಸ್ವಯಮಪಿ ಪ್ರತಿಬುದ್ಧಃ । ಸುಪ್ತಾವಸ್ವಪನ್ ವ್ಯತಿರಿಚ್ಯೇತ ।

ಜೀವ ಎಚ್ಚೆತ್ತಿರುವಾಗ ಪರಮಾತ್ಮನಿಗೂ ಎಚ್ಚರವಿರುವುದರಿಂದ ಅನ್ವಯ. ಜೀವ ನಿದ್ರಿಸುವಾಗ ಪರಮಾತ್ಮ ನಿದ್ರಿಸುವುದಿಲ್ಲ ಎಂದು ವ್ಯತಿರೇಕ.

* * *

ಪರಮಾತ್ಮ ಜೀವನಿಗಿಂತ ಭಿನ್ನ ಎಂಬುದನ್ನು ಮರೆಯುವ ಪ್ರಯುಕ್ತವೇ ಜೀವನಿಗೆ ಸಂಸಾರ. ಶರೀರದ ಅನಂತರ ಶರೀರ ಬರುತ್ತಲೇ ಇರುತ್ತದೆ. ಜೀವ ಪರ ಮಾತ್ಮೈಕ್ಯವನ್ನು ಒಪ್ಪಿದರೆ ತಮಸ್ಸು. ದುಃಖದ ಅನಂತರ ಮತ್ತೆ ದುಃಖ. ಅದಕ್ಕೆ ಕೊನೆಯೆ ಇಲ್ಲ ಎಂದು ಭಗವಾನ್ ಸಂಕರ್ಷಣ ಚಿತ್ರಕೇತುರಾಜನಿಗೆ ಉಪದೇಶಿಸುತ್ತಾನೆ.

ಯದ್ಯೇಷ ವಿಸ್ಮೃತಃ ಪುಂಸೋ ಮದ್ಭಾವೋ ಭಿನ್ನ ಆತ್ಮನಃ ।
ತತಃ ಸಂಸಾರ ಏಕಸ್ಯ ದೇಹಾದ್ ದೇಹೋ ಮೃತೇರ್ಮೃತಿಃ ॥ ೫೭ ॥

ಜೀವ ನನ್ನ ಸ್ವರೂಪವನ್ನು ತನಗಿಂತ ಭಿನ್ನ ಎಂದು ತಿಳಿಯಬೇಕು. ನನ್ನ ಸ್ವರೂಪ ಭಿನ್ನ ಎಂಬುದನ್ನು ಮರೆತರೆ ಅದರಿಂದ ಅವನಿಗೆ ಸಂಸಾರ, ಅಂದರೆ ಒಂದು ಶರೀರದ ಅನಂತರ ಇನ್ನೊಂದು ಶರೀರ ಬರುತ್ತಲೇ ಇರುತ್ತದೆ. ಅಭೇದವನ್ನೇ ತಿಳಿದರೆ ತಮಸ್ಸು. ಒಂದು ದುಃಖದ ಅನಂತರ ಇನ್ನೊಂದು ದುಃಖ. ಇದಕ್ಕೆ ಕೊನೆಯೇ ಇರುವುದಿಲ್ಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ ಹೀಗಿದೆ–

ಯದೇತದ್ ವಿಸ್ಮೃತಂ ಪುಂಸೋ ಮದ್ಭಾವಂ ಭಿನ್ನಮಾತ್ಮನಃ ।
ತತಃ ಸಂಸಾರ ಏತಸ್ಯ ದೇಹಾದ್ದೇಹೋ ಮೃತೇರ್ಮೃತಿಃ ॥

'ಜೀವನು ತನ್ನ ಸ್ವರೂಪವಾದ ಬ್ರಹ್ಮನನ್ನು ಮರೆತರೆ ತನಗಿಂತ ಅದು ಬೇರೆಯಾಗುತ್ತದೆ. ಅದರಿಂದ ಅವನಿಗೆ ಶರೀರದ ಅನಂತರ ಶರೀರ, ಮರಣಾನಂತರ ಮರಣ ಎಂದು ಸಂಸಾರ ಉಂಟಾಗುತ್ತದೆ' ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ. 'ಜೀವನು ತನ್ನ ಸ್ವರೂಪ ಪರಮಾತ್ಮನ ಶರೀರವೆಂಬುದನ್ನು ಮರೆತರೆ ತನ್ನನ್ನು ಸ್ವತಂತ್ರನೆಂದು ತಿಳಿಯುತ್ತಾನೆ. ಅದರಿಂದ ಸಂಸಾರ ಉಂಟಾಗುತ್ತದೆ' ಎಂದು ವೀರರಾಘವವ್ಯಾಖ್ಯಾನ. ಆದರೆ ವಿಶ್ವನಾಥವ್ಯಾಖ್ಯಾನದಲ್ಲಿ ಜೀವನಿಗಿಂತ ನನ್ನ ಸ್ವರೂಪ ಭಿನ್ನವೆಂಬುದನ್ನು ಮರೆತರೆ ಅದನ್ನು ಅಭಿನ್ನವೆಂದು ತಿಳಿದರೆ ಸಂಸಾರ' ಎಂದು ಹೇಳಿದೆ. 'ನನ್ನ ಭಾವವನ್ನು ಅಂದರೆ ಭಜನವನ್ನು ಸಜ್ಜನಸಂಗಾಭಾವದಿಂದಾಗಿ ಭಿನ್ನವಾಗಿ ಅಂದರೆ ತನ್ನಿಂದ ದೂರವಾಗಿ ಮಾಡಿಕೊಂಡು, ಮರೆತು, ಜೀವ ಸಂಸಾರವನ್ನು ಹೊಂದುತ್ತಾನೆ' ಎಂದು ಶುಕದೇವವ್ಯಾಖ್ಯಾನ. ಆದರೆ ತಂತ್ರಮಾಲಾಗ್ರಂಥದಲ್ಲಿ ಬೇರೆಯೇ ರೀತಿಯಾದ ವಿವರಣವಿದೆ–

ಸರ್ವಭಿನ್ನಂ ಪರಾತ್ಮಾನಂ ವಿಸ್ಮರನ್ ಸಂಸರೇದಿಹ ।
ಅಭಿನ್ನಂ ಸಂಸ್ಮರನ್ ಯಾತಿ ತಮೋ ನಾಸ್ತ್ಯತ್ರ ಸಂಶಯಃ ॥

ಇತಿ ಚ ।

ಸರ್ವವಿಲಕ್ಷಣನಾದ ಪರಮಾತ್ಮನನ್ನು ಮರೆತರೆ, ತನಗಿಂತ ಭಿನ್ನನೆಂದು ಅನುಸಂಧಾನ ಮಾಡದಿದ್ದರೆ ಪುನಃ ಪುನಃ ಸಂಸಾರವನ್ನೇ ಹೊಂದುತ್ತಾನೆ. ತನಗಿಂತ ಅಭಿನ್ನನೆಂದು ಅನುಸಂಧಾನ ಮಾಡಿದರೆ ತಮಸ್ಸು ಉಂಟಾಗುತ್ತದೆ ಇದರಲ್ಲಿ ಸಂಶಯವಿಲ್ಲ' ಎಂದೂ ತಂತ್ರಮಾಲಾಗ್ರಂಥದಲ್ಲಿ ಉಕ್ತವಾಗಿದೆ.

'ತತಃ ಸಂಸಾರ ಏಕಸ್ಯ' ಎಂಬಲ್ಲಿ 'ಏಕ' ಎಂದರೆ ಅಭಿನ್ನ. ಅಭೇದವನ್ನು ಅನುಸಂಧಾನ ಮಾಡುವವನು. ಅವನಿಗೆ 'ಮೃತೇರ್ಮೃತಿಃ' ದುಃಖಾನಂತರ ಪುನಃ

ದುಃಖ ಹೊರತು ಸುಖವೆಂಬುದಿಲ್ಲ ಎನ್ನುವಂಥ ತಮಸ್ಸು ಎಂದು ಭಾಗವತ ಶ್ಲೋಕದಲ್ಲಿ ಹೇಳಿದೆ. ಹೀಗೆ ವ್ಯಾಖ್ಯಾನ ಮಾಡದಿದ್ದರೆ 'ಸಂಸಾರವೆಂದರೆ ಶರೀರಾನಂತರ ತಿರುಗಿ ಶರೀರ' ಎಂದು ಹೇಳಿದರೆ ಸಾಕು, ಮರಣಾನಂತರ ಮರಣ ಎಂದು ಹೇಳುವುದು ಅನಾವಶ್ಯಕವಾಗುತ್ತದೆ. ಅದಕ್ಕೆ 'ಏಕಸ್ಯ' ಎಂಬ ಪಾಠವೇ ಉತ್ತಮ. ಅದಕ್ಕೆ ತಂತ್ರಮಾಲಾ ರೀತಿಯ ವ್ಯಾಖ್ಯಾನವೆ ಉತ್ತಮ. 'ಏಕ ಅಂದರೆ ಅಭಿನ್ನ, ಅಭೇದಾನುಸಂಧಾನ ಮಾಡುವವನು ಎಂದು, ವ್ಯಾಖ್ಯಾನಿಸುವುದು, 'ಭಿನ್ನಂ ಭವತಿ' ಭಿನ್ನವಾಗುತ್ತದೆ ಅಂದರೆ ಭೇದಾನುಸಂಧಾನ ಉಂಟಾಗುತ್ತದೆ' ಎಂದು ಬೇರೆ ವ್ಯಾಖ್ಯಾನಕಾರರೂ ಹೇಳುವುದರಿಂದ ತಪ್ಪಾಗುವುದಿಲ್ಲ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ
ಷೋಡಶೋಽಧ್ಯಾಯಃ ॥

—೦—

ಅಧ್ಯಾಯ-೧೭

ಅಧ್ಯಾಯಸಾರಾಂಶ

ಮಹಾಯೋಗಿಯಾದ ಚಿತ್ರಕೇತು ಲಕ್ಷಲಕ್ಷ ವರ್ಷಗಳ ಕಾಲ ವಿದ್ಯಾಧರ ಸ್ತ್ರೀಯರೊಂದಿಗೆ ವಿಮಾನದಲ್ಲಿ ವಿಹಾರ ಮಾಡಿದ. ವಿಮಾನದಿಂದ ಸಂಚರಿಸುತ್ತ ಒಂದೆಡೆ ಶಿವನನ್ನು ಕಂಡ. ಶಿವ ಮುನಿಗಳಿಂದ ತುಂಬಿದ ಸಭೆಯಲ್ಲಿ ತೊಡೆಯ ಮೇಲೆ ಪಾರ್ವತಿದೇವಿಯನ್ನು ಕೂಡಿಸಿ ಕೊಂಡು ತತ್ತ್ವೋಪದೇಶ ಮಾಡುತ್ತಿದ್ದ. 'ಈತ ಲೋಕಕ್ಕೆ ಗುರುವೆನಿಸಿದವನು, ಎಲ್ಲರ ಮುಂದೆ ಹೆಂಡತಿಯನ್ನು ತೊಡೆಯಲ್ಲಿ ಕೂಡಿಸಿ ಕೊಳ್ಳುತ್ತಾನೆ, ನಾಚಿಕೆ ಇಲ್ಲ' ಎಂದು ಶಿವನನ್ನು ನಿಂದಿಸಿದ ಚಿತ್ರಕೇತು. ಪಾರ್ವತಿ ಕೆರಳಿದಳು. 'ಇಂದ್ರಾದಿ ದೇವತೆಗಳೂ ಶಿವನ ನಡತೆಯನ್ನು ಪ್ರಶ್ನಿಸುತ್ತಿಲ್ಲ. ಈತ ಯಾರು, ಹೀಗೆ ಆಕ್ಷೇಪಿಸಲು? ದೊಡ್ಡವರಿಗೆ ಅಪಚಾರ ಮಾಡುವ ಈತ ಅಸುರಜನ್ಮ ಹೊಂದಲಿ' ಎಂದು ಶಪಿಸಿದಳು. ಚಿತ್ರಕೇತು ಪ್ರಾರಬ್ಧವಶದಿಂದ ಶಿವನಿಗೆ ಅಪಮಾನ ಮಾಡಿದ್ದೇನೆ ಎಂದು ಕೊಂಡು ಆ ಶಾಪವನ್ನು ಮರುಮಾತಿಲ್ಲದೆ ಸ್ವೀಕರಿಸಿದ. ಪ್ರತಿಯಾಗಿ ದೇವಿಯನ್ನು ಶಪಿಸಲಿಲ್ಲ. ಅವನೆಂದ 'ಶಾಪಾದಿಗಳಿಗೆಲ್ಲ ಭಗವಂತನೆ ಕಾರಣ. ಅವನು ಕರ್ಮಾನುಗುಣವಾಗಿ ಜೀವರಿಗೆ ಸುಖದುಃಖ ನೀಡುವವನು. ಈ ಶಾಪ ಅನುಗ್ರಹ ಸ್ವರ್ಗನರಕ ಎಲ್ಲವೂ ಸಂಸಾರವೆಂಬ ಅನರ್ಥದ ಮುಂದೆ ಏನೂ ಅಲ್ಲ. ದೇವಿ, ನಾನು ಅಪರಾಧ ಮಾಡಿದ್ದೇನೆ. ನೀನು ಕೋಪಿಸಿಕೊಂಡಿರುವೆ. ಆದರಿಂದ ನಾನೀಗ ಶಾಪದ ಬಿಡುಗಡೆಯನ್ನು ಕೇಳುತ್ತಿಲ್ಲ. ಆದರೆ ನನ್ನನ್ನು ಕ್ಷಮಿಸು. ಮುಂದೆ ನನ್ನ ಜ್ಞಾನಭಕ್ತ್ಯಾದಿಗಳಿಗೆ ಯಾವ ವ್ಯತ್ಯಯವೂ ಬಾರದಂತೆ ಅನುಗ್ರಹಿಸು ಎಂದಿಷ್ಟೇ ಬೇಡಿಕೊಳ್ಳುತ್ತೇನೆ.' ಶಿವಪಾರ್ವತಿಯರು ಪ್ರಸನ್ನರಾದರು. ಅವರನ್ನು ನಮಿಸಿ ಚಿತ್ರಕೇತು ಹೊರಟುಹೋದ. ಶಿವ ಪಾರ್ವತಿಗೆ ನುಡಿದ, 'ನೋಡಿದೆಯ? ಹರಿಭಕ್ತರು ಸುಖದುಃಖಗಳನ್ನು ಸಂತೋಷದಿಂದ ಸ್ವೀಕರಿಸುತ್ತಾರೆ. ಯಾವುದಕ್ಕೂ ಭಯಪಡುವುದಿಲ್ಲ.' ಜ್ಞಾನಾದಿ ವ್ಯತ್ಯಯಕ್ಕೆ

ಮಾತ್ರ ಭಯ ಪಡುತ್ತಾರೆ. ಚಿತ್ರಕೇತು ಮುಂದೆ ಈ ಶಾಪದ ಫಲವಾಗಿ ವೃತ್ರಾಸುರನಾಗಿ ಜನಿಸಿದರೂ ಅವನಲ್ಲಿ ಜ್ಞಾನಭಕ್ತ್ಯಾದಿಗಳು ಹಾಗೇ ಇದ್ದುವು.

* * *

ಇಂದ್ರಾದಿ ದೇವತೆಗಳಿಗೆ ಎಲ್ಲರಿಗೂ ವಂದ್ಯನಾದ ಪರಮಮಂಗಳಕರನಾದ ಶಿವನನ್ನು ಚಿತ್ರಕೇತು ನಿಂದಿಸುತ್ತಿದ್ದಾನೆ ಎಂದು ಪಾರ್ವತಿದೇವಿ ಕುಪಿತಳಾದಳು.

ಏಷಾಮನುಧ್ಯೇಯಪದಾಬ್ಜಯುಗ್ಮಂ
ಜಗದ್ಗುರುಂ ಮಂಗಲಮಂಗಲಂ ಸ್ವಯಮ್ ।
ಯಃ ಕ್ಷತ್ರಬಂಧುಃ ಪರಿಭೂಯ ಸೂರೀನ್
ಪ್ರಶಾಸ್ತಿ ಧೃಷ್ಟಸ್ತದಯಂ ಹಿ ದಂಡ್ಯಃ ॥ ೧೩ ॥

ಬ್ರಹ್ಮಾದಿಗಳ ಅಭಿಪ್ರಾಯದಲ್ಲಿ ಇಂದ್ರಾದಿದೇವತೆಗಳಿಗೆ ಮುನಿಗಳಿಗೆ ಎಲ್ಲರಿಗೂ ಶಿವನ ಎರಡು ಪಾದಕಮಲಗಳು ಧ್ಯಾನಕ್ಕೆ ಯೋಗ್ಯವೆನಿಸುತ್ತವೆ. ಅಂಥ ಜಗದ್ಗುರುವಾದ ಅತ್ಯಂತ ಮಂಗಳಕರನಾದ ಸಾಕ್ಷಾತ್ ಶಿವನನ್ನು ಈ ದುಷ್ಟಕ್ಷತ್ರಿಯ ಶಾಸನಮಾಡಲು ಹೊರಟಿದ್ದಾನೆ! ಜ್ಞಾನಿಗಳಾದ ಬ್ರಹ್ಮಾದಿಗಳನ್ನು ಅವಮಾನಿಸುತ್ತಿದ್ದಾನೆ. ಅಹಂಕಾರಿ. ಈತನಿಗೆ ತಕ್ಕ ಶಿಕ್ಷೆಯಾಗಬೇಕು.

ಇಲ್ಲಿ ಶುಕದೇವ ವ್ಯಾಖ್ಯಾನ ಒಂದನ್ನು ಹೊರತು ಪಡಿಸಿ ಬೇರೆ ಎಲ್ಲ ವ್ಯಾಖ್ಯಾನಗಳೂ ಶಿವನು ಬ್ರಹ್ಮಾದಿ ವಂದ್ಯನೆಂದೇ ಹೇಳಿದ್ದಾರೆ. ಶುಕದೇವ ಹೇಳುತ್ತಾನೆ–

'ಏಷಾಮಿತ್ಯನೇನಾಸ್ಮಿನ್ನೇವ ಪುರಾಣೇ ಶಿವಸ್ಯ ಪಿತೃತ್ವೇನ ವರ್ಣಿತತ್ವಾತ್ ಬ್ರಹ್ಮಣೋ ವ್ಯತಿರಿಕ್ತಾನಾಂ ಗ್ರಹಣಂ । ಏಷಾಂ ಭೃಗ್ವಾದೀನಾಂ ಅನುಧ್ಯೇಯ ಪದಾಬ್ಜಯುಗ್ಮಂ ।

'ಇದೇ ಭಾಗವತಪುರಾಣದಲ್ಲಿ ಬ್ರಹ್ಮನನ್ನು ಶಿವನ ಪಿತನೆಂದು ವರ್ಣಿಸಿರುವುದರಿಂದ ಶಿವ ಬ್ರಹ್ಮನಿಂದ ವಂದ್ಯನಾಗಲಾರ. ಅದರಿಂದ ಬ್ರಹ್ಮನನ್ನು ಹೊರತು ಪಡಿಸಿ ಬೇರೆ ಭೃಗುಮುನಿ ಮುಂತಾದವರಿಗೆ ಶಿವನು ವಂದ್ಯ' ಎಂದು. ಅದರಿಂದ ಮೂಲಕ್ಕೆ ವಿರುದ್ಧ ಬೇರೆಯವರ ಈ ಭಾಗವತವ್ಯಾಖ್ಯಾನ ಎಂದು ಹೇಳಿದಂತಾಯಿತು. ವಸ್ತುತಃ ಬ್ರಹ್ಮನನ್ನು ಮಾತ್ರವಲ್ಲ, ವಿಷ್ಣು, ಪ್ರಾಣ, ಗರುಡ ಮುಂತಾದವರನ್ನೂ ಹೊರತು ಪಡಿಸಿ, ತನಗಿಂತ ಕೆಳಗಿನ ದೇವತೆಗಳಿಗೆ ಶಿವ ವಂದ್ಯನೆಂದು ತಂತ್ರಮಾಲಾ ಗ್ರಂಥದಲ್ಲಿಯೇ ಹೇಳಿದೆ. ಅದರಿಂದ 'ಏಷಾಂ'

ಎಂದರೆ ಹಿಂದೆ ಪ್ರಸಕ್ತರಾದ ಬ್ರಹ್ಮಾದಿಗಳ ಪಕ್ಷದಲ್ಲಿ, ಅವರ ಅಭಿಪ್ರಾಯದಲ್ಲಿ ತನಗಿಂತ ಕೆಳಗಿನವರಿಗೆಲ್ಲರಿಗೂ ವಂದ್ಯ ಎಂದೇ ವ್ಯಾಖ್ಯಾನಿಸಬೇಕು.

'ಏಷಾಂ ಪಕ್ಷೇ । ತದವರಾಣಾಮನುಧ್ಯೇಯ ಪದಾಬ್ಜಯುಗ್ಮಂ ।

ವಿಷ್ಣುಬ್ರಹ್ಮಪ್ರಾಣವೀಂದ್ರಾಂಸ್ತದ್ದಾರಾನಪ್ಯೃತೇ ಹರಃ ।
ಧ್ಯೇಯೋ ಹರೇಃ ಪಾರ್ಷದಾದ್ಯೈರ್ಧ್ಯಾಯನ್ ಹರಿಚತುರ್ಮುಖೌ ।
ಪ್ರಾಣಮೇಷಾಂ ತಥಾ ದಾರಾನ್ ನ ಸ್ವತಂತ್ರತಯಾ ಕ್ವಚಿತ್ ॥
ಇತಿ ತಂತ್ರಮಾಲಾಯಾಮ್ ।

'ಬ್ರಹ್ಮಾದಿಗಳ ಅಭಿಪ್ರಾಯದಲ್ಲಿ' ಎಂದು 'ಏಷಾಂ' ಎಂಬುದನ್ನು ವ್ಯಾಖ್ಯಾನಿಸಬೇಕು. 'ಅನುಧ್ಯೇಯ' ಎಂದರೆ ತನಗಿಂತ ಕೆಳಗಿನವರಿಂದ ಧ್ಯಾನ ಮಾಡಲು ಯೋಗ್ಯವಾದ ಪಾದಕಮಲದ್ವಂದ್ವವುಳ್ಳವನೆಂದು ಅರ್ಥವನ್ನು ಗ್ರಹಿಸಬೇಕು. ಏಕೆಂದರೆ ತಂತ್ರಮಾಲಾಗ್ರಂಥದಲ್ಲಿ ಹಾಗೇ ಹೇಳಿದೆ–

'ವಿಷ್ಣು ಬ್ರಹ್ಮ ಪ್ರಾಣ ಗರುಡರನ್ನೂ ಅವರ ಪತ್ನಿಯರನ್ನೂ ಹೊರತು ಪಡಿಸಿ ಬೇರೆ ಹರಿಯ ಪರಿವಾರದವರು ಮುಂತಾದ ಭಕ್ತರು ತನಗಿಂತ ಕೆಳಗಿನವರು ಎಲ್ಲರೂ ಶಿವನನ್ನು ಧ್ಯಾನಿಸಬೇಕು. ಮತ್ತು ಶಿವನು ಹರಿಬ್ರಹ್ಮ ವಾಯುಗಳನ್ನೂ ಅವರ ಪತ್ನಿಯರನ್ನೂ ಧ್ಯಾನಿಸುವವನೆಂದು ತಿಳಿಯಬೇಕು ಹೊರತು ಶಿವನು ಸ್ವತಂತ್ರನೆಂದು ಎಂದೂ ತಿಳಿಯಬಾರದು' ಎಂದು.

* * *

ನೀನು ಅಸುರನಾಗಿ ಜನಿಸು ಎಂದು ಪಾರ್ವತಿ ಶಾಪವಿತ್ತಾಗ ಚಿತ್ರಕೇತುರಾಜ ಹೇಳುತ್ತಾನೆ. 'ಈ ಶಾಪವನ್ನು ನಾನು ಸ್ವೀಕರಿಸುತ್ತೇನೆ. ಇದು ನನ್ನ ಕರ್ಮಾಧೀನ. ಪರಮಾತ್ಮ ನಿಷ್ಪಕ್ಷಪಾತಿಯಾಗಿ ಜೀವರಿಗೆ ಅವರವರ ಕರ್ಮಾದಿಗಳಿಗೆ ಅನುಗುಣವಾಗಿಯೇ ಸುಖದುಃಖಗಳನ್ನು ನೀಡುತ್ತ ಸಮನೆನಿಸಿದ್ದಾನೆ' ಎಂದು.

ನ ಚಾಸ್ಯ ಕಶ್ಚಿದ್ ದಯಿತೋ ನ ಪ್ರತೀಪೋ
ನ ಜ್ಞಾತಿಬಂಧುರ್ನ ಪರೋ ನ ಚ ಸ್ವಃ ।
ಸಮಸ್ಯ ಸರ್ವತ್ರ ನಿರಂಜನಸ್ಯ
ಕುತೋಽನುರಾಗಃ ಕುತ ಏವ ರೋಷಃ ॥ ೨೨ ॥

ಅವನಿಗೆ ಜೀವರಲ್ಲಿ ವಿನಾಕಾರಣ ಪಕ್ಷಪಾತವಿಲ್ಲ. ಅವರವರ ಯೋಗ್ಯತೆ ಕರ್ಮಗಳನ್ನು ನೋಡಿ ಅವುಗಳಿಗನುಗುಣವಾಗಿಯೆ ಸುಖ ದುಃಖಗಳನ್ನು ನೀಡುತ್ತಾನೆ. ಯೋಗ್ಯತಾದಿಗಳಿಗೆ ವ್ಯತಿರಿಕ್ತವಾಗಿ ಆತನಿಗೆ ಯಾರೂ ಪ್ರೀತಿಪಾತ್ರರು ಇಲ್ಲ.

ಯಾರೂ ವಿರೋಧಿಗಳಿಲ್ಲ. ಯಾರೂ ಜ್ಞಾತಿಗಳು ಬಂಧುಗಳು ಇಲ್ಲ. ಪರಕೀಯನಿಲ್ಲ ತನ್ನವನೆನ್ನುವವನಿಲ್ಲ. ನಿರ್ದೋಷನಾಗಿದ್ದು ಎಲ್ಲರಲ್ಲಿಯೂ ಸಮನಾಗಿದ್ದು ವೈಷಮ್ಯ ಮಾಡದಿರುವವನಿಗೆ ರಾಗವೆಲ್ಲಿಂದ, ದ್ವೇಷವೆಲ್ಲಿಂದ?

ಇಲ್ಲಿ ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳಲ್ಲಿ ಜೀವಸ್ವಭಾವದ ವರ್ಣನೆ ಇದೆ ಎನ್ನುತ್ತಾರೆ. ಜೀವನು ಸ್ವಭಾವತಃ ಸಮನೆನಿಸುತ್ತಾನೆ. ದೇವ ಮಾನವ ಮುಂತಾದ ಶರೀರದಲ್ಲಿ ಆತ ಜನಿಸಿದಾಗ ಅವನಲ್ಲಿ ಕಾಣುವ ವ್ಯತ್ಯಾಸಗಳು ಪ್ರಕೃತಿವಿಕಾರವಾದ ಆಯಾ ಶರೀರಗಳಲ್ಲಿಯೇ ಇರುವಂಥವು. ಜೀವನಲ್ಲಿ ಅವು ಸ್ವಭಾವಿಕವಾಗಿ ಇರುವುದಿಲ್ಲ ಎನ್ನುತ್ತಾರೆ. ಆದರೆ ಇದರ ಹಿಂದಿನ ಶ್ಲೋಕದಲ್ಲಿ

ಏಕಃ ಸೃಜತಿ ಭೂತಾನಿ ಭಗವಾನಾತ್ಮಮಾಯಯಾ ।

'ಪರಮಾತ್ಮನೊಬ್ಬನೆ ಸ್ವೇಚ್ಛೆಯಿಂದ ಜೀವಿಗಳನ್ನು ಸೃಜಿಸುತ್ತಾನೆ' ಎಂದು ಹೇಳಿ,

ನಚಾಸ್ಯ ಕಶ್ಚಿದ್ ದಯಿತಃ ಪ್ರತೀಪಃ ।

'ಈ ಪರಮಾತ್ಮನಿಗೆ ಯಾರೂ ಪ್ರಿಯರಿಲ್ಲ, ಯಾರೂ ವಿರೋಧಿಗಳಿಲ್ಲ' ಎಂದು ಈ ಶ್ಲೋಕದಲ್ಲಿ ಹೇಳಿರುವಾಗ, ಹಿಂದಿನ ಶ್ಲೋಕದಲ್ಲಿ ಹೇಳಿದ್ದು ಪರಮಾತ್ಮನ ಬಗ್ಗೆ, ಈ ಶ್ಲೋಕ ಹೇಳುವುದು ಜೀವನ ಬಗ್ಗೆ ಎನ್ನುವುದು ಸ್ವರಸವಾಗುವುದಿಲ್ಲ. 'ಸಮಸ್ಯ ಸರ್ವತ್ರ ನಿರಂಜನಸ್ಯ' ಎಲ್ಲೆಡೆ ಸಮನಾಗಿದ್ದಾನೆ, ನಿರ್ದೋಷನಾಗಿದ್ದಾನೆ' ಎಂದು ಭಗವಂತನ ಬಗ್ಗೆ ಹೇಳಿರುವುದು ಸುಸ್ಪಷ್ಟವೇ ಇದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೀಗೆ ಹೇಳಿದ್ದಾನೆ–

ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।

'ಎಲ್ಲ ಜೀವಿಗಳ ವಿಷಯದಲ್ಲಿಯೂ ನಾನು ಸಮನಾಗಿ ನಿಷ್ಪಕ್ಷಪಾತಿಯಾಗಿಯೇ ಇರುತ್ತೇನೆ. ಯಾವ ಭಕ್ತನೂ ನನಗೆ ದ್ವೇಷಪಾತ್ರನಲ್ಲ, ಯಾವ ಅಭಕ್ತನೂ ನನಗೆ ಪ್ರೀತಿಪಾತ್ರನಲ್ಲ' ಇದರ ಛಾಯೆಯಂತಿರುವ ಭಾಗವತದ ಈ ಶ್ಲೋಕ ಜೀವಸ್ವರೂಪವನ್ನು ವರ್ಣಿಸುತ್ತಿದೆ ಎನ್ನುವುದು ಉಚಿತವಲ್ಲ. ಜೀವ ಸ್ವರೂಪವರ್ಣನೆ ಎನ್ನುವ ಪಕ್ಷದಲ್ಲಿ ನ ದಯಿತಃ, ನ ಪ್ರತೀಪಃ, ನ ಪರಃ, ನ ಸ್ವಃ, ನ ರಾಗಃ, ಎಂದು ಮುಂತಾಗಿ ಎಲ್ಲ ಕಡೆ 'ವಸ್ತುತಃ' 'ಸ್ವಭಾವತಃ' ಎಂದೂ 'ಸಮಸ್ಯ ಸರ್ವತ್ರ,' ಎಂಬಲ್ಲಿ 'ದೇವಾದಿಶರೀರಗಳಲ್ಲಿ' ಎಂದೂ ಅಧ್ಯಾಹಾರ ಮಾಡಿಯೇ ವಾಕ್ಯಗಳನ್ನು ಕೂಡಿಸಬೇಕಾಗುತ್ತದೆ. ಮತ್ತು ಸ್ವಭಾವತಃ ಜೀವರೆಲ್ಲರೂ ಎಲ್ಲ ಶರೀರಗಳಲ್ಲಿಯೂ ಪ್ರಿಯಾಪ್ರಿಯರಿಲ್ಲದವರಲ್ಲ. 'ಶ್ರದ್ಧಾಮಯೋಽಯಂ ಪುರುಷಃ' ಜೀವಸ್ವರೂಪ ದಲ್ಲಿಯೇ ಸಾತ್ವಿಕ ರಾಜಸ ತಾಮಸ ಎಂದು ನಾನಾ ಬಗೆಯಾದ ಶ್ರದ್ಧೆಗಳಿರುತ್ತವೆ ಎಂದು ಭಗವದ್ಗೀತೆ ಹೇಳಿದೆ. ಬ್ರಹ್ಮವೈವರ್ತಪುರಾಣದಲ್ಲಿಯೂ ಹೀಗೇ ಹೇಳಿದೆ–

ಶ್ರದ್ಧಾ ಸ್ವರೂಪಂ ಜೀವಸ್ಯ ತಸ್ಮಾತ್ ಶ್ರದ್ಧಾವಿಭೇದತಃ ।
ಉತ್ತಮಾಧಮಮಧ್ಯಾಸ್ತು ಜೀವಾ ಜ್ಞೇಯಾಃ ಪೃಥಕ್ ಪೃಥಕ್ ।

ಆದರಿಂದ ಸಾತ್ವಿಕಶ್ರದ್ಧೆಯವರಿಗೆ ಸಾತ್ವಿಕಶ್ರದ್ಧೆಯವರೇ ಪ್ರಿಯರು, ರಾಜಸ ತಾಮಸರು ಅಪ್ರಿಯರು ದ್ವೇಷಪಾತ್ರರು ಸ್ವಾಭಾವಿಕವಾಗಿಯೇ ಆಗುತ್ತಾರೆ. ಆಯಾ ದೇಹಸಂಬಂಧದಿಂದಾಗಿ ಜೀವರಲ್ಲಿ ಆಯಾ ಸ್ವಭಾವ ಕಾಣುತ್ತದೆ ಎಂದರೂ, ಆಯಾ ದೇಹಸಂಬಂಧಗಳು ಬರಲೂ ಜೀವರ ಸ್ವಭಾವವಿಶೇಷಗಳೇ ಪ್ರಯೋಜಕವಾಗಿರುತ್ತವೆ ಎನ್ನುವುದನ್ನೂ ಗಮನಿಸಬೇಕು. ಆದರಿಂದ ಜೀವರೆಲ್ಲರೂ ಸ್ವಭಾವತಃ ಏಕಪ್ರಕಾರವಾಗಿ ಸಮರಾಗಿರುತ್ತಾರೆ ಎನ್ನುವುದನ್ನು ಒಪ್ಪಲಾಗದು.

ಶ್ರೀಧರವ್ಯಾಖ್ಯಾನದಲ್ಲಿ ಈ ಶ್ಲೋಕ ಪರಮಾತ್ಮಪರವೆ. ಪರಮಾತ್ಮನ ಸೃಷ್ಟಿಯಲ್ಲಿ ಕೆಲವರು ಸಜ್ಜನರು ಕೆಲವರು ದುರ್ಜನರು, ಕೆಲವರಿಗೆ ಸುಖ ಕೆಲವರಿಗೆ ದುಃಖ ಎಂದು ಮುಂತಾಗಿ ವೈಷಮ್ಯವೇಕೆ ಎಂಬ ಪ್ರಶ್ನೆಗೆ ಉತ್ತರವಾಗಿ ಪರಮಾತ್ಮ ಸಮನಾಗಿಯೇ ಇದ್ದಾನೆ. ವೈಷಮ್ಯಕ್ಕೆ ಅವರವರ ಕರ್ಮ ಕಾರಣ ಎಂದು ಈ ಶ್ಲೋಕ ಹೇಳುತ್ತಿದೆ ಎನ್ನುತ್ತಾರೆ. ಆದರೆ ಅದ್ವೈತದಲ್ಲಿ ಜೀವರು ತಾವು ತಮ್ಮ ಉಪಾಸನೆಗಾಗಿ ಕಲ್ಪಿಸಿಕೊಂಡಿರುವ ಪರಮಾತ್ಮ ತಮ್ಮ ಕರ್ಮಾನುಸಾರ ತಮಗೆ ಸುಖದುಃಖಾದಿಗಳನ್ನು ನೀಡುತ್ತಾನೆ ಎನ್ನುವುದು ವಿಚಿತ್ರವೆನಿಸುತ್ತದೆ. ಮತ್ತು ಶಿಶುಪಾಲ ಮುಂತಾದವರನ್ನು ಬಂಧುಗಳೆಂದು ಪ್ರೀತಿಸಿ ಅವರ ಅಪರಾಧಗಳನ್ನು ಕ್ಷಮಿಸಿದ್ದೂ ಕಾಣುತ್ತದೆ. ಆದರಿಂದ ಕರ್ಮವನ್ನು ಕಾರಣವೆನ್ನುವಂತಿಲ್ಲ. ಜೀವಸ್ವರೂಪಯೋಗ್ಯತೆಯನ್ನು ಗಮನದಲ್ಲಿ ಇಟ್ಟುಕೊಂಡೇ ಪರಮಾತ್ಮ ಸುಖದುಃಖಾದಿಗಳನ್ನು ನೀಡುತ್ತಾನೆ, ಆದರಿಂದ ಆತ ಸಮ, ನಿಷ್ಪಕ್ಷಪಾತಿ ಎನ್ನಬೇಕು.

ಸೇವಾಯೋಗ್ಯಾತಿರೇಕೇಣ ಸ್ವಾನಾಮಪಿ ನ ದಾಸ್ಯತಿ ।
ಅಪರಾಧಾತಿರೇಕೇಣ ನಾನ್ಯಸ್ಯಾತಃ ಸಮೋ ಹರಿಃ ।
ಇತಿ ಮಾಹಾತ್ಮ್ಯೇ ॥

ಭಕ್ತರಿಗೂ ಅವರ ಸ್ವರೂಪಕ್ಕೆ ಯೋಗ್ಯವಾದ ಸೇವೆ ಮಾಡದ ಹೊರತು ಸುಖ ನೀಡುವುದಿಲ್ಲ. ದ್ವೇಷಿಗಳಿಗೂ ಅವರ ಸ್ವರೂಪಕ್ಕೆ ಯೋಗ್ಯವಾದ ಅಪರಾಧ ಮಾಡದ ಹೊರತು ದುಃಖ ನೀಡುವುದಿಲ್ಲ. ಆದರಿಂದ ಶ್ರೀಹರಿ ಸಮನೆನಿಸಿದ್ದಾನೆ ಎಂದು ಮಾಹಾತ್ಮ್ಯಗ್ರಂಥದಲ್ಲಿ ಹೇಳಿದೆ.

'ಸೇವಾಯೋಗ್ಯ' ಎಂದರೆ ಯೋಗ್ಯಸೇವೆ. ಕರ್ಮಧಾರಯಸಮಾಸದಲ್ಲಿ ವಿಶೇಷಣಕ್ಕೆ ಪರನಿಪಾತ. 'ಅಪರಾಧ' ಎಂಬಲ್ಲಿಯೂ ಯೋಗ್ಯವೆಂದು ವಿಶೇಷಣ ವಿವಕ್ಷಿತವಾಗಿದೆ.

* * *

ದೇಹಿಗಳಿಗೆ ದೇಹಾಭಿಮಾನ ಪ್ರಯುಕ್ತವಾಗಿ ಬರುವ ಸುಖದುಃಖಾದಿಗಳನ್ನು ಪರಮಾತ್ಮನೇ ಕೊಡುತ್ತಾನೆ. ಅವರು ತಾವೇ ಅವುಗಳನ್ನು ತಂದುಕೊಳ್ಳುವೆವೆನ್ನುವುದು ಭ್ರಾಂತಿ ಎಂದು ಚಿತ್ರಕೇತುರಾಜ ಪಾರ್ವತಿದೇವಿಯ ಮುಂದೆ ಹೇಳಿಕೊಳ್ಳುತ್ತಾನೆ.

ದೇಹಿನಾಂ ದೇಹಸಂಯೋಗಾದ್ ದ್ವಂದ್ವಾನೀಶ್ವರಮಾಯಯಾ ।
ಸುಖಂ ದುಃಖಂ ಮೃತಿರ್ಜನ್ಮ ಶಾಪೋಽನುಗ್ರಹ ಏವ ಚ ॥ ೨೯ ॥

ಅವಿವೇಕಕೃತಃ ಪುಂಸೋ ಹ್ಯರ್ಥಭೇದ ಇಹಾತ್ಮನಿ ।
ಗುಣದೋಷವಿಕಲ್ಪಶ್ಚ ಭಿದೇವ ಸ್ವಪ್ನಕಲ್ಪಿತಾ ॥ ೩೦ ॥

ದೇಹಿಗಳಿಗೆ ದೇಹಾಭಿಮಾನ ನಿಮಿತ್ತವಾಗಿ ಬರುವ ಸುಖದುಃಖ, ಮರಣಜನ್ಮ, ಶಾಪಅನುಗ್ರಹ ಎಂದು ಮುಂತಾದ ದ್ವಂದ್ವಗಳು ಈಶ್ವರನ ಲೀಲೆಯಿಂದ ಬರುತ್ತವೆ. ಅದರಿಂದ ಅವು ಅಪರಿಹಾರ್ಯವೆಂದುಕೊಂಡು ಅವುಗಳಿಗೆ ಸಾಧುಗಳು ಭಯಪಡುವುದಿಲ್ಲ.

ಪರಮಾತ್ಮ ಕೊಟ್ಟಿರುವ ಸುಖದುಃಖಾದಿ ಪದಾರ್ಥಗಳಲ್ಲಿ ಅವನು ಕೊಟ್ಟಿದ್ದಲ್ಲ, ನಾನೇ ಸಂಪಾದಿಸಿದ್ದೆಂದು ಭೇದ, ಪುಣ್ಯಪಾಪಗಳೆಂಬ ಗುಣದೋಷಗಳಲ್ಲಿಯೂ ನಾನೇ ಮಾಡಿದ್ದೆಂದು ಭೇದ, ಇವೆರಡೂ ಜೀವನಿಗೆ ಅವಿವೇಕದಿಂದ ಭ್ರಾಂತಿಯಿಂದ ಕಂಡು ಬರುತ್ತದೆ. ಮನಸ್ಸಿನಲ್ಲಿ ವಾಸನಾರೂಪದಿಂದ ಇರುವ ಸ್ವಾಪ್ನಪದಾರ್ಥಗಳಲ್ಲಿ ಇವು ಬಾಹ್ಯಪದಾರ್ಥಗಳೇ ಹೊರತು ಆಂತರ ಪದಾರ್ಥವಲ್ಲ ಎಂಬ ಭೇದ ಭ್ರಾಂತಿಯಿಂದ ಕಾಣುವಂತೆ.

ಇಲ್ಲಿ ಶ್ರೀಧರವ್ಯಾಖ್ಯಾನಪ್ರಕಾರ 'ಗುಣದೋಷವಿಕಲ್ಪ'ವೆಂದರೆ ಇಷ್ಟಾನಿಷ್ಟಭೇದ. 'ಅರ್ಥಭೇದ'ವೆಂದರೆ ಸುಖದುಃಖಭೇದ. ಸುಖವು ಇಷ್ಟವಾಗಿ, ದುಃಖವು ಅನಿಷ್ಟವಾಗಿ ತೋರುವುದು ಅವಿವೇಕದಿಂದ. ಅಂದರೆ ಸ್ವಪ್ನದಲ್ಲಿ ಕಾಣುವುದೆಲ್ಲ ಮಿಥ್ಯೆಯಾದರೂ ಅದರಲ್ಲಿ ಕೆಲವು ಇಷ್ಟ ಕೆಲವು ಅನಿಷ್ಟವೆಂದು ತೋರುವಂತೆ ಭ್ರಾಂತಿ. ಮತ್ತು ಇದು ಹಗ್ಗದಲ್ಲಿ ಕಾಣುವ ಹಾವು ಅನಿಷ್ಟವಾಗಿ ಮಾಲೆ ಇಷ್ಟವಾಗಿ ತೋರುವಂತೆ ಭ್ರಾಂತಿಯಾಗಿದೆ. ಅವೆರಡೂ ಮಿಥ್ಯೆಯಾದರೂ ಅವಿವೇಕದಿಂದ ಭ್ರಾಂತಿಯಲ್ಲಿ ಹಾಗೆ ಕಾಣುತ್ತವೆ, ಹಾಗೇ ಇದು.

ಆದರೆ ಸ್ವಪ್ನದಲ್ಲಿ ಕಂಡಿದ್ದೆಲ್ಲ ಮಿಥ್ಯೆಯಲ್ಲ ಹಾಗೇ ಒಪ್ಪಿದರೂ, ಅವನ್ನು ಕಂಡಾಗ ಉಂಟಾಗುವ ಸುಖದುಃಖಗಳು ಮಿಥ್ಯೆಯಲ್ಲ. ಅವೂ ಮಿಥ್ಯೆ ಎನ್ನುವುದಾದರೆ ಅವನ್ನು ಕಾಣುವ ಆತ್ಮನೂ ಮಿಥ್ಯೆ ಎನ್ನಬೇಕಾದೀತು. ಅದರಿಂದ ಸ್ವಾಪ್ನಪದಾರ್ಥಗಳಲ್ಲಿ ಇಷ್ಟಾನಿಷ್ಟವಿಭಾಗ ಮಾಡುವುದು ಅವಿವೇಕವಾಗಲಾರದು. ಮತ್ತು ಹಗ್ಗದಲ್ಲಿ ಹಾವು ಮಾಲೆಗಳು ಮಿಥ್ಯೆಯಾದರೂ ಅವು ತೋರುವುದಂತೂ ಸತ್ಯವೇ. ತೋರಲೇ ಇಲ್ಲ

ಎನ್ನಲಾಗದು. ಆದರಿಂದ ಹಾವು ತೋರುವುದು ಅನಿಷ್ಟ, ಮಾಲೆ ತೋರುವುದು ಇಷ್ಟವೆಂದರೆ ಅದೂ ಅವಿವೇಕವಾಗುವುದಿಲ್ಲ.

ವೀರರಾಘವವ್ಯಾಖ್ಯಾನಪ್ರಕಾರ ಗುಣದೋಷವಿಕಲ್ಪ ಎಂದರೆ ಸುಖದುಃಖಗಳು ವರ ಶಾಪಗಳು ಎಂದು ಭೇದ. ಅರ್ಥಭೇದವೆಂದರೆ ತಾನು ದೇವನೆನಿಸುವುದು, ಮನುಷ್ಯನೆನಿಸುವುದು ಮುಂತಾದ ಭೇದ. ದೇವಮನುಷ್ಯಾದಿಭೇದವು ದೇಹಾತ್ಮೈಕ್ಯಭ್ರಾಂತಿಯಿಂದ ತೋರುತ್ತದೆ. ಇಲ್ಲದಿದ್ದರೆ ದೇಹ ದೇವಜಾತಿಯಾದರೆ, ಮನುಷ್ಯಜಾತಿಯದಾದರೆ ಆತ್ಮ ದೇವನಾಗಲಿ ಮನುಷ್ಯನಾಗಲಿ ಆಗಲು ಕಾರಣವಿಲ್ಲ. ಸ್ವಪ್ನದಲ್ಲಿ ಮನೆಯೊಳಗೆ ಮಲಗಿರುವ ಆತ್ಮ ದೇಶಾಂತರಕ್ಕೆ ಹೋದಂತೆ ಕಾಣುವುದು, ದೇಹಾತ್ಮಭ್ರಾಂತಿಮೂಲಕವಾಗಿಯೇ ಪರಮಾತ್ಮ ತೋರಿಸಿದ್ದು. ಹಾಗೇ ದೇವ ಮನುಷ್ಯಾದಿಭೇದಗಳೂ ಸುಖದುಃಖಾದಿಭೇದಗಳೂ ದೇಹಾತ್ಮೈಕ್ಯಭ್ರಾಂತಿ ಮೂಲಕವಾಗಿವೆ.

ಆದರೆ ಈ ವ್ಯಾಖ್ಯಾನಕಾರರು ಯಾರಿಗೂ ಇಲ್ಲದ ದೇಹಾತ್ಮೈಕ್ಯಭ್ರಾಂತಿಯನ್ನು ಉಂಟೆಂದು ಹೇಳುತ್ತಿದ್ದಾರೆ. ಎಲ್ಲ ಜೀವಿಗಳಿಗೂ ತಮ್ಮ ಶರೀರ ಅತ್ಯಂತಪ್ರಿಯ ವಾಗಿರುವುದರಿಂದ, ಶರೀರವೇ ತಾನೆಂಬ ಭ್ರಾಂತಿ ಇಲ್ಲದಿದ್ದರೂ, ಶರೀರದ ಮೇಲಿನ ಅಭಿಮಾನದಿಂದಾಗಿ ಸುಖದುಃಖಗಳು ಉಂಟಾಗಬಹುದು. ಅತ್ಯಂತಪ್ರಿಯವಾದ ಮನೆ ಮಠ ಮುಂತಾದ ಸೊತ್ತುಗಳ ಲಾಭನಷ್ಟಗಳಿಂದ ಸುಖದುಃಖಗಳು ಉಂಟಾಗುವುದು ಅನುಭವಸಿದ್ಧವಾಗಿವೆ. ಮನೆಯೇ ತಾನೆಂದು ಯಾರಿಗೂ ಭ್ರಾಂತಿ ಇರುವುದಿಲ್ಲ.

'ಭಿದೇವ ಸ್ರಜಿವತ್ಕೃತಃ' ಎಂದು ಶ್ರೀಧರೀಯ ಪಾಠ. 'ಭಿದೇವ ಸ್ವಪ್ನಕಲ್ಪಿತಾ' ಎಂದು ವೀರರಾಘವೀಯ ಪಾಠ. ಪ್ರಕಾಶಸಂಹಿತೆಯ ವಚನಕ್ಕೆ ಅನುಗುಣವಾದ್ದರಿಂದ ವೀರರಾಘವೀಯ ಪಾಠವೇ ಸರಿ.

ಯತ್ತದ್ ಭಗವತಾ ಕ್ಲೃಪ್ತಂ ತದೇವ ನಿಯತಂ ಭವೇತ್ ।
ಅತೋಽನ್ಯೇಷಾಂ ವರಃ ಶಾಪೋ ಗುಣದೋಷಪ್ರಕರ್ತೃತಾ ॥

ಸ್ವತಃ ಪ್ರಾಪ್ತಾದ್ ಭೇದಕೃತಿರ್ವಾಸನಾರೂಪಿಣೋ ಯಥಾ ।
ವಿದ್ಯಮಾನಸ್ಯ ಮನಸಿ ಪುನಃ ಸ್ವಪ್ನೇಷು ದರ್ಶನಮ್ ।
ಭಗವದ್ವಶತಾ ಯಸ್ಮಾತ್ ಸರ್ವೇಷಾಂ ಜ್ಞೇಯಮೇವ ತತ್ ॥

ಇತಿ ಪ್ರಕಾಶಸಂಹಿತಾಯಾಮ್ ।

ಭಗವಂತ ಏನು ಸಂಕಲ್ಪಮಾಡುವನೋ ಅದು ಮಾತ್ರವೆ ತಪ್ಪದೆ ನಡೆಯುತ್ತದೆ. ಅದರಿಂದಲೇ ಬೇರೆಯವರಿಗೆ ವರ ಶಾಪ ಪುಣ್ಯಪಾಪ ಕರ್ಮಗಳುಂಟಾಗುತ್ತವೆ. ಹೀಗೆ ಅವೆಲ್ಲವೂ 'ಸ್ವತಃಪ್ರಾಪ್ತ' ಅಂದರೆ ಸ್ವತಂತ್ರನಾದ ಭಗವಂತನಿಂದ ಲಭಿಸಿರುತ್ತವೆ. ಅವುಗಳು ಸ್ವತಃಪ್ರಾಪ್ತವಲ್ಲವೆಂದು ಭೇದವನ್ನೆಣಿಸುವುದುಂಟು. ವಾಸನಾರೂಪವಾಗಿ ಮನಸಿನಲ್ಲಿ ಇರುವುದನ್ನೇ ಸ್ವಪ್ನದಲ್ಲಿ ಪುನಃ ನೋಡುವುದು 'ಸ್ವತಃಪ್ರಾಪ್ತ'ವೇ ಆದರೂ ಹಾಗಲ್ಲ ಎಂದು ಭೇದವೆಣಿಸುತ್ತಾರೆ. ಹಾಗೇ ಇದು. ಹೀಗೆ ಸ್ವಪ್ನದಂತೆ ಜಾಗರದಲ್ಲಿ ಎಲ್ಲ ಘಟನೆಗಳೂ ಭಗವದಧೀನವೇ ಆಗಿರುವುದರಿಂದ ಭಗವತ್ಸ್ವರೂಪವನ್ನು ಎಲ್ಲರೂ ತಿಳಿಯಬೇಕು ಎಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ.

* * *

ಚಿತ್ರಕೇತುರಾಜನಿಗೆ ಪಾರ್ವತಿ ಶಾಪವಿತ್ತರೂ ರಾಜ ದೇವಿಗೆ ಪ್ರತಿಶಾಪ ಕೊಡಲಿಲ್ಲ.

ಇತಿ ಭಾಗವತೋ ದೇವ್ಯಾಃ ಪ್ರತಿಶಪ್ತುಮಲಂತಮಃ ।
ಮೂರ್ಧ್ನಾ ಸಂಜಗೃಹೇ ಶಾಪಮೇತಾವತ್ ಸಾಧುಲಕ್ಷಣಮ್ ॥ ೩೭ ॥

ಹೀಗೆ ಭಗವದ್ಭಕ್ತನಾದ ಚಿತ್ರಕೇತು ದೇವಿಗೆ ಪ್ರತಿಯಾಗಿ ಶಾಪನೀಡಲು ನಿಶ್ಚಯವಾಗಿ ಸಮರ್ಥನೇ ಆಗಿದ್ದರೂ ಅವಳ ಶಾಪವನ್ನು ತಲೆಬಾಗಿ ಸ್ವೀಕರಿಸಿದ. ಇದು ಸಾಧುಗಳ ಲಕ್ಷಣ.

ಇಲ್ಲಿ 'ಪ್ರತಿಶಪ್ತುಮಲಂತಮಃ' ಪ್ರತಿಶಾಪ ನೀಡಲು ಅತ್ಯಂತ ಸಮರ್ಥನೇ ಚಿತ್ರಕೇತು ಎಂದಿದೆ. ಬೇರೆ ವ್ಯಾಖ್ಯಾನಕಾರರು ಎಲ್ಲರೂ ಅದನ್ನು ಹಾಗೇ ಒಪ್ಪಿಕೊಂಡಿದ್ದಾರೆ. ವಸ್ತುತಃ 'ಅಲಂತಮಃ' ಎಂದರೆ 'ಶಕ್ತನೆಂಬುದರಲ್ಲಿ ಸಂದೇಹವಿಲ್ಲ' ಎಂದಿಷ್ಟೆ ಅರ್ಥ. ಅತ್ಯಂತ ಸಮರ್ಥ ಎಂದಲ್ಲ. ದೊಡ್ಡವರಿಗೆ ಸಣ್ಣವರು ಶಾಪನೀಡಲು ಶಕ್ತರೇ. ಆದರೆ ಆ ಶಾಪ ಪೂರ್ತಿಯಾಗಿ ಫಲಿಸುವುದಿಲ್ಲ. ಪೂರ್ತಿಯಾಗಿ ಅದನ್ನು ನಿರಾಕರಿಸಲೂ ದೊಡ್ಡವರು ಶಕ್ತರು. ಮತ್ತು ದೊಡ್ಡವರಿಗೆ ಪ್ರೀತಿ ಇಲ್ಲದಿದ್ದಲ್ಲಿ ಸಣ್ಣವರಿಗೆ ಜ್ಞಾನಾದಿಗುಣಗಳು ತಪಸ್ಸು ಎಲ್ಲವೂ ನಾಶವಾಗುತ್ತವೆ. ಅದರಿಂದ ಸಣ್ಣವರು ದೊಡ್ಡವರಿಗೆ ಶಾಪ ಕೊಡಲು ಶಕ್ತರಾಗಿದ್ದರೂ ಶಾಪ ಕೊಡಕೂಡದು. ಅದರಿಂದ ಚಿತ್ರಕೇತು ಪಾರ್ವತಿಗೆ ಪ್ರತಿಶಾಪ ನೀಡಿದ್ದರೆ ಅದು ಅವನಿಗೇ ಕೇಡಾಗುತ್ತಿತ್ತು. ಆದರೂ ಆತ ಆ ಭಾವನೆಯಿಂದ ಸುಮ್ಮನಾದನೆಂದಲ್ಲ. ಭಗವದ್ಭಕ್ತರ ಸ್ವಭಾವವೇ ಶಾಪಕ್ಕೆ ಪ್ರತಿಯಾಗಿ ಶಾಪ ನೀಡದಿರುವುದು, ಎಂದು ಭಕ್ತಿಯ ಮಹಿಮೆಯನ್ನು ಭಾಗವತ ಪ್ರಶಂಸಿಸುತ್ತಿದೆ.

ಪ್ರತಿಶಪ್ತುಮಲಂತಮಃ ।

ದೇವಾ ಏವ ತದನ್ಯೇಭ್ಯಃ ಶಕ್ತಾ ನಾಸ್ತ್ಯತ್ರ ಸಂಶಯಃ ।
ಅಶಕ್ತಾ ಅಪಿ ಶಕ್ತಾನಾಂ ಶಕ್ತಾಃ ಶಾಪಾದಿಷು ಸ್ಫುಟಮ್ ॥

ತಥಾಪ್ಯಶಕ್ತೈರ್ವಿಹಿತಾಃ ಶಾಪಾದ್ಯಾಃ ಶಕ್ತಿಮತ್ಸು ತು ।
ಅತ್ಯಲ್ಪಾಶ್ಚಾಲ್ಪಕಾಲಾಶ್ಚ ನ ಸಮ್ಯಕ್ ಪ್ರಭವಂತಿ ಚ ॥

ಯತ್ನೇನಾಪೋಹಿತುಂ ಶಕ್ಯಾ ಉತ್ತಮೈಸ್ತು ನ ಸಂಶಯಃ ।
ಉತ್ತಮೇಷು ಕೃತಾಃ ಶಾಪಾಃ ಕರ್ತೄಣಾಂ ಜ್ಞಾನಪುಣ್ಯಯೋಃ ॥

ನಿಃಶೇಷೇಣ ನಿಹಂತಾರಸ್ತದನುಗ್ರಹಮಂತರಾ ।
ಸದಾರಯೋರ್ಬ್ರಹ್ಮವಿಷ್ಣ್ವೋರ್ವರಶಾಪಾದಯೋಽಖಿಲಾಃ ॥

ತದನ್ಯೇನ ಕೃತಾಃ ಸರ್ವೇ ನಿಷ್ಫಲಾ ಏವ ನಿಶ್ಚಯಾತ್ ॥
ನ ಚಾಪ್ಯವಾಂತರಾಃ ಶಾಪಾ ಭವಂತ್ಯೇಷಾಂ ತು ಕುತ್ರಚಿತ್ ॥

ವರಾ ವಿಷ್ಣೋಃ ಶ್ರಿಯಶ್ಚ ಸ್ಯುರ್ಬ್ರಹ್ಮಣಶ್ಚ ಯಥಾಕ್ರಮಮ್ ।
ಉತ್ತಮೈರಧಮಾನಾಂ ತು ವರಾಃ ಶಾಪಾ ಯಥೋದಿತಮ್ ।
ಸಂಪೂರ್ಣಫಲದಾ ಏವ ನಾತ್ರ ಕಾರ್ಯಾ ವಿಚಾರಣಾ ॥

ಇತಿ ಚ ಸ್ಕಾಂದೇ ॥

'ಪ್ರತಿಶಪ್ತುಮಲಂತಮಃ' ಪ್ರತಿಶಾಪನೀಡಲು ಬಹಳ ಸಮರ್ಥ ಎಂದರ್ಥವಲ್ಲ. ಚಿತ್ರಕೇತು ಪಾರ್ವತೀದೇವಿಗಿಂತಲೂ ಹೆಚ್ಚು ಶಕ್ತಿಶಾಲಿಯಲ್ಲ. ಪ್ರತಿಶಾಪ ನೀಡಲು ಶಕ್ತಿ ಉಂಟೆನ್ನುವಲ್ಲಿ ಸಂಶಯವಿಲ್ಲ ಎಂದಿಷ್ಟೇ ಅರ್ಥ. ಏಕೆಂದರೆ ಸ್ಕಂದಪುರಾಣದಲ್ಲಿ ಹಾಗೇ ಹೇಳಿದೆ. 'ಶಾಪಾದಿಗಳ ವಿಷಯದಲ್ಲಿ ದೇವತೆಗಳೇ ಅನ್ಯರಿಗಿಂತ ಹೆಚ್ಚ ಶಕ್ತರು. ಇದರಲ್ಲಿ ಸಂಶಯವಿಲ್ಲ. ಆದರೆ ಅಶಕ್ತರಾದ ಇತರರೂ ಕೂಡ ಶಕ್ತರಾದ ದೇವತೆಗಳಿಗೆ ಶಾಪನೀಡಲು ಶಕ್ತರಾಗುತ್ತಾರೆ. ಇದರಲ್ಲಿ ಸಂಶಯವಿಲ್ಲ. ಆದರೂ ಶಕ್ತರಿಗೆ ಅಶಕ್ತರು ನೀಡಿದ ಶಾಪಾದಿಗಳು ಅತ್ಯಲ್ಪಫಲ ನೀಡಬಲ್ಲುವು ಮತ್ತು ಅಲ್ಪಕಾಲ ಮಾತ್ರ ಶಾಪಪ್ರಭಾವವಿರುತ್ತದೆ. ಅದರಿಂದ ಆ ಶಾಪಾದಿಗಳು ಚೆನ್ನಾಗಿ ಫಲಿಸುವುದಿಲ್ಲ. ಆ ಶಾಪಾದಿಗಳನ್ನು ಶಕ್ತರು ಪ್ರಯತ್ನ ಮಾಡಿದರೆ ವಿಫಲವಾಗಿಯೂ ಮಾಡಬಲ್ಲರು. ಇದರಲ್ಲಿ ಸಂಶಯವಿಲ್ಲ. ಕೆಳಗಿನವರು ಮೇಲಿನವರಿಗೆ ಶಾಪ ನೀಡಿದಾಗ ಅವರ ಮೇಲೆ ಮೇಲಿನವರಿಗೆ ಪ್ರೀತಿ ಇಲ್ಲದಿದ್ದ ಪಕ್ಷದಲ್ಲಿ ಅವರ ಜ್ಞಾನತಪಸ್ಸುಗಳೇ ಪೂರ್ತಿಯಾಗಿ ಹಾಳಾಗುತ್ತವೆ. ಬ್ರಹ್ಮವಿಷ್ಣುಗಳಿಗೂ ಅವರ ಪತ್ನಿಯರಿಗೂ ಅನ್ಯರು ಶಾಪ ವರ ಮುಂತಾದುವನ್ನು ನೀಡಿದರೆ ಅದು ನಿಶ್ಚಯವಾಗಿಯೂ ವಿಫಲವಾಗುತ್ತದೆ.

ಪಾರಲೌಕಿಕವಿಷಯದಲ್ಲಿ ಮಾತ್ರವಲ್ಲದೆ, ಐಹಿಕವಿಷಯದಲ್ಲಿಯೂ ಅನ್ಯರ ವರಶಪಾದಿಗಳು ಅವರಲ್ಲಿ ಎಂದೂ ಫಲಕಾರಿಯಾಗುವುದಿಲ್ಲ. ಶ್ರೀಹರಿ ಲಕ್ಷ್ಮೀದೇವಿಯರು ಬ್ರಹ್ಮನಿಗೂ, ಶ್ರೀಹರಿ ಲಕ್ಷ್ಮೀ ಬ್ರಹ್ಮರು ರುದ್ರಾದಿಗಳಿಗೂ ನೀಡುವ ವರಗಳು ಸಂಪೂರ್ಣ ಫಲದಾಯಕವಾಗುತ್ತವೆ. ಹೀಗೇ ಕ್ರಮವಾಗಿ ಮೇಲಿನವರು ಕೆಳಗಿನವರಿಗೆ ನೀಡುವ ವರಶಾಪಗಳು ಎಲ್ಲವೂ ಹೇಳಿದಂತೆಯೇ ಸಂಪೂರ್ಣ ಫಲದಾಯಕವಾಗುತ್ತವೆ. ಇದರಲ್ಲಿ ಸಂಶಯ ಪಡಬೇಕಾಗಿಲ್ಲ ಎಂದು ಸ್ಕಂದಪುರಾಣದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ
ಸಪ್ತದಶೋಽಧ್ಯಾಯಃ ॥

—o—

ಅಧ್ಯಾಯ-೧೮

ಅಧ್ಯಾಯಸಾರಾಂಶ

ಕಶ್ಯಪರ ಪತ್ನಿ ದಿತಿಯ ಮಕ್ಕಳು ದೈತ್ಯರು. ಅವರನ್ನು ವಿಷ್ಣುವಿನ ಸಹಾಯದಿಂದ ಇಂದ್ರ ಕೊಲ್ಲಿಸುತ್ತಾನೆ ಎಂದು ಕುಪಿತಳಾದ ದಿತಿ ಇಂದ್ರನನ್ನು ಕೊಲ್ಲುವ ಮಗನನ್ನು ಪಡೆಯಬೇಕೆಂದು ಪತಿಯನ್ನು ಬಹಳ ಸೇವೆಮಾಡಿ ಒಲಿಸಿಕೊಂಡಳು. ಪತಿ ಬೇಕಾದ ವರವನ್ನು ಕೇಳು ಎಂದರು. ಆದರೆ ದಿತಿ ಕೇಳಿದ ವರ ಅವರನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಿತು. 'ಅದಕ್ಕೆ ನೀನು ಒಂದು ವರ್ಷಕಾಲ ಕಠಿನವಾದ ಪುಂಸವನ ಎಂಬ ವಿಷ್ಣುವ್ರತವನ್ನು ಆಚರಿಸಬೇಕು. ವ್ರತ ನಿಯಮಗಳನ್ನು ಒಂದಿಷ್ಟೂ ಉಲ್ಲಂಘಿಸಬಾರದು. ಹಾಗಾದರೆ ಮಾತ್ರ ನಿನ್ನ ಅಭೀಷ್ಟ ಸಿದ್ಧಿಯಾಗುವುದು. ಇಲ್ಲದಿದ್ದರೆ ನಿನಗೆ ಹುಟ್ಟುವ ಮಗ ದೇವತೆಗಳ ಪಕ್ಷಕ್ಕೆ ಸೇರುತ್ತಾನೆ.' ಎಂದು ಹೇಳಿ ವ್ರತಕಾಲದಲ್ಲಿ ಅವಶ್ಯ ಅನುಸರಿಸಬೇಕಾದ ಎಲ್ಲ ಆಹಾರವಿಹಾರ ನಿಯಮಗಳನ್ನು ಹೇಳಿದರು.' ದಿತಿ ಅದಕ್ಕೆ ಒಪ್ಪಿ ವ್ರತವನ್ನು ಆರಂಭಿಸಿದಳು. ಇಂದ್ರನಿಗೆ ಇದು ತಿಳಿದುಹೋಯಿತು. ಆತ ಬಂದು ದಿತಿಯನ್ನು ದೊಡ್ಡಮ್ಮನೆಂದು ಪ್ರೀತಿಯಿಂದ ಸೇವೆ ಮಾಡುವಂತೆ ನಟಿಸಿ ದಿತಿ ಯಾವಾಗ ನಿಯಮವನ್ನು ಉಲ್ಲಂಘಿಸುವಳೆಂಬುದನ್ನು ಹೊಂಚುಹಾಕಿ ನೋಡ ತೊಡಗಿದ. ಭಗವಂತನ ಇಚ್ಛೆಯಿಂದ ದಿತಿ ಒಂದು ಸಂಧ್ಯಾಕಾಲದಲ್ಲಿ ಉಂಡು ಕೈ ಬಾಯಿ ತೊಳೆಯದೆ ಆಚಮನ ಮಾಡದೆ ನಿದ್ದೆ ಹೋದಳು. ಗರ್ಭಿಣಿ ಬಹುಕಾಲ ವ್ರತಾಚರಣೆ ಮಾಡಿ ಅಶಕ್ತಳಾಗಿದ್ದರಿಂದ ಹಾಗೇ ಮಾಡಿಬಿಟ್ಟಳು. ಇಂದ್ರ ಯೋಗಶಕ್ತಿಯಿಂದ ಅವಳ ಗರ್ಭವನ್ನು ಪ್ರವೇಶಿಸಿ ಶಿಶುಪಿಂಡವನ್ನು ನಲವತ್ತೊಂಬತ್ತು ಭಾಗಗಳಾಗಿ ವಜ್ರಾಯುಧದಿಂದ ಕತ್ತರಿಸಿದ. ದಿತಿ ಎಚ್ಚರಗೊಂಡು ನೋಡಿದಾಗ ನಲವತ್ತೊಂಬತ್ತು ಮಂದಿ ಮಕ್ಕಳು ಇಂದ್ರನೊಂದಿಗೆ ತನ್ನ ಮುಂದೆ ನಿಂತಿದ್ದನ್ನು ಕಂಡಳು. ಒಬ್ಬ ಪುತ್ರನ ಬದಲಿಗೆ ನಲವತ್ತೊಂಬತ್ತು ಮಂದಿ ಮಕ್ಕಳಾದರೆಂದು ಅವಳಿಗೆ ಸಂತೋಷವೇ ಆಯಿತು. ಆ ನಲವತ್ತೊಂಬತ್ತು ಮಂದಿ ವಸ್ತುತಃ ದಿತಿಯ ಪುತ್ರರಾದರೂ ಮರುದ್ದೇವತೆಗಳಾಗಿ ಇಂದ್ರನ ಪ್ರೀತಿಯ ಪರಿವಾರವೆನಿಸಿದರು.

* * *

ಅಧ್ಯಾಯ-೧೯

ಅಧ್ಯಾಯಸಾರಾಂಶ

ಪುಂಸವನ ವ್ರತದ ವಿಧಾನ ಹೀಗೆ- ಸ್ತ್ರೀಯರು ಮೋಕ್ಷಾದಿ ಸಕಲ ಪುರುಷಾರ್ಥಪ್ರದವಾದ ಪುಂಸವನ ವ್ರತವನ್ನು ಪತಿಯ ಅನುಜ್ಞೆಯಿಂದ ಮಾರ್ಗಶಿರ ಶುಕ್ಲಪಕ್ಷ ಪ್ರತಿಪದೆಯಿಂದಾರಂಭಿಸಿ ಕಾರ್ತಿಕ ಮಾಸದ ಕೊನೆಯವರೆಗೂ ಆಚರಿಸಬೇಕು. ಮೊದಲಿಗೆ ಮರುದ್ದೇವತೆಗಳ ಜನ್ಮಕಥೆಯನ್ನು ಶ್ರವಣ ಮಾಡಬೇಕು. ಸ್ನಾನ ಮಾಡಿ ವಸ್ತ್ರಾಲಂಕಾರಗಳನ್ನು ಧರಿಸಿ ಲಕ್ಷ್ಮೀನಾರಾಯಣರನ್ನು ಆವಾಹನ ಅರ್ಘ್ಯ ಪಾದ್ಯಾದಿಗಳಿಂದ ಪೂಜಿಸಬೇಕು. ನೈವೇದ್ಯಶೇಷದಿಂದ ಪತಿಯು ಅಗ್ನಿಯಲ್ಲಿ ಮಂತ್ರಪೂರ್ವಕವಾಗಿ ಹನ್ನೆರಡು ಬಾರಿ ಹೋಮಿಸಬೇಕು. ಮಂತ್ರ - ಓಂ ನಮೋ ಭಗವತೇ ಮಹಾಪುರುಷಾಯ ಮಹಾವಿಭೂತಿಪತಯೇ ಸ್ವಾಹಾ' ಬಳಿಕ ದಂಡ ಪ್ರಣಾಮಮಾಡಿ ಸ್ತೋತ್ರಮಾಡಬೇಕು. ಪುನಃ ಉತ್ತರಪೂಜೆ ಸ್ತೋತ್ರಗಳನ್ನು ಮಾಡಿ ಯಜ್ಞಶೇಷವನ್ನು ಮೂಸಿನೋಡಿ ಪುನಃ ಹರಿಯನ್ನು ಪೂಜಿಸಬೇಕು. ಸತಿಯು ಪತಿಯಲ್ಲಿ ಹರಿ ಇರುವನೆಂದು ಭಕ್ತಿಯಿಂದ ಪೂಜಿಸಿ ಅವನಿಗೆ ಪ್ರಿಯವಾದ ವಸ್ತುಗಳನ್ನು ನೀಡಬೇಕು. ಪತಿಯೂ ಪತ್ನಿಯನ್ನು ಪ್ರೀತಿಸುತ್ತ ಅವಳಿಗೆ ಪ್ರಿಯವಾದ ವಸ್ತುಗಳನ್ನು ನೀಡಬೇಕು. ಅವಳ ಎಲ್ಲ ಕಾರ್ಯಗಳನ್ನು ತಾನು ಸರಿಯಾಗಿ ನಿರ್ವಹಿಸಬೇಕು. ಪತ್ನಿಗೆ ಅನಿವಾರ್ಯಕಾರಣದಿಂದ ವ್ರತಕಾರ್ಯ ಮಾಡಲಾಗದಿದ್ದಲ್ಲಿ ಪತಿಯೇ ಅದನ್ನು ಮುಂದುವರಿಸಬೇಕು. ವಿಷ್ಣುವ್ರತವನ್ನು ಪ್ರಾರಂಸಿದ ಬಳಿಕ ಮಧ್ಯದಲ್ಲಿ ಬಿಡಬಾರದು. ಸ್ತ್ರೀಯರು ಪ್ರತಿದಿನ ಬ್ರಾಹ್ಮಣರನ್ನು ಸುಮಂಗಲಿಯರನ್ನೂ ಆರಾಧಿಸಬೇಕು. ಭಗವಂತನನ್ನು ಹೃದಯದಲ್ಲಿ ಸ್ಥಾಪಿಸಿಕೊಂಡು ಹರಿನೈವೇದ್ಯವನ್ನು ಉಣಬೇಕು. ಉದ್ಯಾಪನ ದಿನದಲ್ಲಿ ಪತಿಯು ಪ್ರಾರಂಭದ ದಿನದಂತೆಯೇ ಪೂಜೆ ಹೋಮಗಳನ್ನು ನಡೆಸಿ ಹನ್ನೆರಡು ಮಂದಿ ಬ್ರಾಹ್ಮಣರಲ್ಲಿ

ಕೇಶವಾದಿದ್ವಾದಶಮೂರ್ತಿಗಳನ್ನು ಆರಾಧಿಸಿ ಭೋಜನಮಾಡಿಸಿ ಚರುಶೇಷವನ್ನು ತಾನು ಉಂಡು ಪತ್ನಿಗೂ ನೀಡಬೇಕು. ಸ್ತ್ರೀಗೆ ಉತ್ತಮ ಸಂತತಿ ಪತಿಸೌಭಾಗ್ಯಗಳನ್ನು ಈ ವ್ರತವು ನೀಡುತ್ತದೆ. ಪುರುಷನಿಗೂ ಸಕಲಾಭೀಷ್ಟವನ್ನು ನೀಡುತ್ತದೆ. ವಿವಾಹಾದಿ ಶುಭಕಾರ್ಯಗಳಲ್ಲಿ ಮರುದ್ದೇವತೆಗಳ ಕಥಾಶ್ರವಣ ಮಾಡಿದರೆ ಪಿತೃಗಳಿಗೂ ದೇವತೆಗಳಿಗೂ ಅನಂತತೃಪ್ತಿ ಲಭಿಸುತ್ತದೆ.

* * *

ಪುಂಸವನದ ಅಂಗವಾಗಿ ಅಗ್ನಿಯಲ್ಲಿ ಪಾಯಸದ ಆಹುತಿಗಳನ್ನು ನೀಡಿದ ಬಳಿಕ ಸ್ತೋತ್ರಮಾಡಬೇಕು.

ತಸ್ಯಾ ಅಧೀಶ್ವರಃ ಸಾಕ್ಷಾತ್
ತ್ವಮೇವ ಪುರುಷಃ ಪರಃ ।
ತ್ವಂ ಸರ್ವಯಜ್ಞ ಇಜ್ಯೇಯಂ
ಕ್ರಿಯೇಯಂ ಫಲಭುಗ್ ಭವಾನ್ ॥ ೧೧ ॥

ಗುಣವ್ಯಕ್ತಿರಿಯಂ ದೇವೀ ವ್ಯಂಜಕೋ ಗುಣಭುಗ್ ಭವಾನ್ ।
ತ್ವಂ ಹಿ ಸರ್ವಶರೀರಾತ್ಮಾ ಶ್ರೀಃ ಶರೀರೇಂದ್ರಿಯಾಶಯಾ ॥ ೧೨ ॥

ನಾಮರೂಪೇ ಭಗವತೀ ಪ್ರತ್ಯಯಸ್ತ್ವಮುಪಾಶ್ರಯಃ ।
ಯಥಾ ಯುವಾಂ ತ್ರಿಲೋಕಸ್ಯ ವರದೌ ಪರಮೇಷ್ಠಿನೌ ।
ತಥೇಮಾ ಉತ್ತಮಶ್ಲೋಕ ಸಂತು ಸತ್ಯಾ ಮಮಾಶಿಷಃ ॥ ೧೩ ॥

ಲಕ್ಷ್ಮೀದೇವಿಗೆ ಅಧಿಪತಿ ನೀನು. ಸರ್ವೋತ್ತಮನಾದ ಸಾಕ್ಷಾತ್ ಪರಮಪುರುಷ ನೀನು. ನೀನೇ ಎಲ್ಲ ಯಜ್ಞಗಳ ಅಂತರ್ಯಾಮಿ. ಈ ಲಕ್ಷ್ಮೀದೇವಿ ಯಜ್ಞದ ಕ್ರಿಯೆಗಳಲ್ಲಿ ಅಂತರ್ಯಾಮಿ. ಈಕೆ ಕರ್ಮಗಳಿಗೆ ಅಭಿಮಾನಿ. ನೀನು ಕರ್ತೃಗಳಾದ ನಮ್ಮಲ್ಲಿದ್ದು ಕರ್ಮಫಲವನ್ನು ನಮಗೆ ಉಣಿಸುವವನು.

ಲಕ್ಷ್ಮೀದೇವಿ ತ್ರಿಗುಣಗಳ ಅಭಿವ್ಯಕ್ತಿಗೆ ಅಭಿಮಾನಿನಿ. ನೀನು ಅಭಿವ್ಯಕ್ತಿ ಉಂಟುಮಾಡಿ ಗುಣಗಳ ಕಾರ್ಯವಾದ ಸುಖದುಃಖಾದಿಗಳನ್ನು ನಮಗೆ ಉಣಿಸುವವನು. ನೀನು ಎಲ್ಲ ಶರೀರಿಗಳ ಅಂತರ್ಯಾಮಿ. ಈಕೆ ಶರೀರ ಇಂದ್ರಿಯ ಅಂತಃಕರಣಗಳಿಗೆ ಅಭಿಮಾನಿನಿ.

ನಾಮರೂಪಾತ್ಮಕ ಪ್ರಪಂಚಕ್ಕೆ ದೇವಿ ಭಗವತಿ ಅಭಿಮಾನಿನಿ. ತತ್ವಜ್ಞಾನವನ್ನು ನೀಡುವವನು ನೀನೇ. ನೀನೇ ಸ್ವತಂತ್ರ, ನಿನಗೆ ಯಾರ ಆಶ್ರಯವೂ ಬೇಡ, ನೀವಿಬ್ಬರೇ ಮೂಲೋಕಕ್ಕೆ ಸರ್ವೋತ್ತಮ ವರದಾಯಕರು. ಉತ್ತಮ ಕೀರ್ತಿಶಾಲಿಯಾದ ಶ್ರೀಹರಿಯೇ, ನಿಮ್ಮ ಈ ಮಹಿಮೆ ಹೇಗೆ ಸತ್ಯವೋ ಹಾಗೆ ನಮ್ಮ ಮಹಾ ಅಭಿಲಾಷೆಗಳೂ ಸತ್ಯವಾಗಲಿ ಸಫಲವಾಗಲಿ.

ಇಲ್ಲಿ 'ಯಜ್ಞ' 'ಇಜ್ಯಾ'ಗಳಿಗೆ ಏನು ವ್ಯತ್ಯಾಸವಿದೆ? ಯಜ್ಞವೆಂದರೆ ಪ್ರಧಾನಯಾಗ, ಇಜ್ಯಾ ಎಂದರೆ ಅಂಗಯಾಗ ಎಂದು ವೀರರಾಘವ ವ್ಯಾಖ್ಯಾನ ಹೇಳುತ್ತದೆ. ಯಜ್ಞವೆಂದರೆ ಯಜಮಾನನು ದೇವತೆಗಳಿಗೆ ಆಹುತಿಯನ್ನು ಮನಸಿನಲ್ಲಿ ಒಪ್ಪಿಸುವುದು. ಅದಕ್ಕೆ ಆವಶ್ಯಕವಾದ ಯಜ್ಞಕ್ರಿಯೆಯೇ ಇಜ್ಯಾ ಎಂದು ಶ್ರೀಧರ ಮುಂತಾದವರ ವ್ಯಾಖ್ಯಾನ ಹೇಳುತ್ತಿದೆ. ಎರಡೂ ಸರಿ ಎಂದು ಭಗವತ್ಪ್ರಸಾದಾಚಾರ್ಯ ವ್ಯಾಖ್ಯಾನ ಹೇಳುತ್ತದೆ. ಆದರೆ ಶ್ರೀಮದಾಚಾರ್ಯರು 'ಇಜ್ಯಾ ಎಂದರೆ ಯಜ್ಞಸಂಬಂಧಿಯಾದ ಕ್ರಿಯೆ' ಎನ್ನುತ್ತಾರೆ. ಆಹುತಿಯನ್ನು ಅಧ್ವರ್ಯು ಅಗ್ನಿಯಲ್ಲಿ ಹಾಕುವಾಗ, ಯಜಮಾನ ಆ ಆಹುತಿಯನ್ನು ಮನಸಿನಲ್ಲಿಯೇ ದೇವತೆಗೆ ಅರ್ಪಿಸುವುದು ಯಜ್ಞವೆಂದು ಮೀಮಾಂಸಕರ ಅಭಿಪ್ರಾಯವಾಗಿದೆ. ಆದರೆ ಇದೂ ಮಾನಸಕ್ರಿಯೆಯೇ. ಹೀಗಾಗಿ 'ಯಜ್ಞ' 'ಕ್ರಿಯೆ'ಗಳಿಗೆ ಏನು ವ್ಯತ್ಯಾಸವೆಂಬುದು ಸ್ಪಷ್ಟವಾಗುವುದಿಲ್ಲ. ಸತ್ಯಧರ್ಮರ ವ್ಯಾಖ್ಯಾನದಲ್ಲಿ 'ಯಜ್ಞ'ವೆಂಬುದು ಆರಂಭದಿಂದ ಅಂತ್ಯದ ವರೆಗಿನ ಎಲ್ಲ ಯಜ್ಞಕಾರ್ಯಗಳ ಸಮೂಹಕ್ಕೆ ಹೆಸರು. ಪ್ರತ್ಯೇಕವಾಗಿ ಆ ಯಜ್ಞಕಾರ್ಯಗಳೇ 'ಕ್ರಿಯೆ'ಗಳು ಎಂದಿದ್ದಾರೆ. ಶ್ರೀಮದಾಚಾರ್ಯರ ಮಾತಿಗೆ ಇದೇ ಅಭಿಪ್ರಾಯ ಕಾಣುತ್ತದೆ.

'ತ್ವಂ ಸರ್ವಯಜ್ಞಃ' ನೀನೇ ಎಲ್ಲ ಯಜ್ಞಸ್ವರೂಪನಾಗಿರುವೆ. 'ಫಲಭುಗ್ ಭವಾನ್' 'ಫಲಭೋಕ್ತನಾದ ಜೀವನೂ ನೀನೆ' ಎಂದು ಮುಂತಾಗಿ ಗಿರಿಧರವ್ಯಾಖ್ಯಾನ ಹೇಳುತ್ತದೆ. ಇದು ಸಕಲ ಪ್ರಮಾಣವಿರುದ್ಧವಾಗಿದೆ. ಎಲ್ಲ ಯಜ್ಞಗಳ ಅಂತರ್ಯಾಮಿ, ಫಲಭೋಕ್ತನಾದ ಜೀವನಲ್ಲಿಯೂ ಅಂತರ್ಯಾಮಿ, ಶ್ರೀಹರಿ ಎಂದೇ ವ್ಯಾಖ್ಯಾನ ಮಾಡಬೇಕೆಂದು ಬ್ರಹ್ಮತರ್ಕ ಹೇಳುತ್ತದೆ. 'ನೀನು ಯಜ್ಞಾಂತರ್ಯಾಮಿಯಾದರೆ ಲಕ್ಷ್ಮಿ ಯಜ್ಞಕ್ರಿಯಾಂತರ್ಯಾಮಿ ಎಂದು ಮುಂತಾಗಿ ಹೇಳುವಾಗ ಲಕ್ಷ್ಮೀ ನಾರಾಯಣರಲ್ಲಿ ಪ್ರಪಂಚನಿಯಮನ ಕಾರ್ಯವು ಸಮಾನವಾಗಿ ಹಂಚಿಹೋಗುವಂತೆ ಕಾಣುತ್ತದೆ. ಇಬ್ಬರೂ ಸಮಾನರೆಂಬ ಭಾವನೆಗೆ ಅವಕಾಶವಿದೆ. ಅದನ್ನೂ ಬ್ರಹ್ಮತರ್ಕ ನಿರಾಕರಿಸುತ್ತದೆ. ಲಕ್ಷ್ಮಿಗೂ ಅಂತರ್ಯಾಮಿ ವಿಷ್ಣು. ವಿಷ್ಣುವಿಗೆ ಯಾರೂ ಅಂತರ್ಯಾಮಿ ಇಲ್ಲ ಎನ್ನುತ್ತದೆ.

ಇಜ್ಯಾ ಕ್ರಿಯಾ ।

ಅಂತರ್ಯಾಮೀ ತು ಯಜ್ಞಾದೇರ್ವಿಷ್ಣುರಿಜ್ಯಾದಿನಾಂ ರಮಾ ।
ತತ್ತಚ್ಛಬ್ದೈಸ್ತತೋ ವಾಚ್ಯೌ ನ ತು ಸರ್ವಸ್ವರೂಪತಃ ॥
ಅಂತರ್ಯಾಮೀ ಶ್ರಿಯಶ್ಚೈವ ವಿಷ್ಣುರೇವ ನ ಸಂಶಯಃ ।
ನಾಂತರ್ಯಾಮೀ ಕಶ್ಚಿದಸ್ತಿ ವಿಷ್ಣೋಃ ಕ್ವಾಪಿ ಕುತಶ್ಚನ ।
ಇತಿ ಬ್ರಹ್ಮತರ್ಕೇ ।

ಇಜ್ಯಾ ಎಂದರೆ ಯಜ್ಞಕ್ರಿಯೆ ಯಜ್ಞಕಾರ್ಯ.

ಯಜ್ಞ, ಫಲಭೋಕ್ತ ಮುಂತಾದವುಗಳಲ್ಲಿ ಅಂತರ್ಯಾಮಿ ವಿಷ್ಣು. ಯಜ್ಞಕ್ರಿಯೆ, ತ್ರಿಗುಣಗಳ ಅಭಿವ್ಯಕ್ತಿ ಮುಂತಾದವುಗಳಿಗೆ ರಮಾದೇವಿ ಅಂತರ್ಯಾಮಿಯಾಗಿದ್ದಾಳೆ. ಅದರಿಂದಲೇ ಯಜ್ಞಾದಿಶಬ್ದಗಳಿಂದ ಅವರು ಕರೆಸಿಕೊಳ್ಳುತ್ತಾರೆ. ಹೊರತು, ಅವರು ಯಜ್ಞಾದಿಸ್ವರೂಪರೆಂದಲ್ಲ. ಶ್ರೀದೇವಿಗೂ ವಿಷ್ಣು ಅಂತರ್ಯಾಮಿ. ಅದರಲ್ಲಿ ಸಂಶಯವಿಲ್ಲ. ವಿಷ್ಣುವಿಗೆ ಅಂತರ್ಯಾಮಿಯೊಬ್ಬ ಯಾರೂ ಎಲ್ಲಿಯೂ ಯಾವ ರೀತಿಯಿಂದಲೂ ಇಲ್ಲ ಎಂದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಷಷ್ಠಸ್ಕಂಧೇ
ಏಕೋನವಿಂಶೋಽಧ್ಯಾಯಃ ॥

—೦—

॥ ಶ್ರೀಕೃಷ್ಣಾರ್ಪಣಮಸ್ತು ॥

ಸೃಷ್ಟಿ-ಸ್ಥಿತ್ಯಪ್ಯಯೇಹಾ-ನಿಯತಿ-ದೃಶಿ-ತಮೋಬಂಧ-ಮೋಕ್ಷಾಶ್ಚ ಯಸ್ಮಾ-
ದಸ್ಯ ಶ್ರೀ-ಬ್ರಹ್ಮ-ರುದ್ರ-ಪ್ರಭೃತಿ-ಸುರ-ನರ-ದ್ವ್ಯೇಶ-ಶತ್ರಾತ್ಮಕಸ್ಯ ।
ವಿಷ್ಣೋರ್ವ್ಯಸ್ತಾಃ ಸಮಸ್ತಾಃ ಸಕಲಗುಣನಿಧಿಃ ಸರ್ವದೋಷವ್ಯಪೇತಃ
ಪೂರ್ಣಾನಂದೋಽವ್ಯಯೋ ಯೋ ಗುರುರಪಿ ಪರಮಶ್ಚಿಂತಯೇ ತಂ
ಮಹಾಂತಮ್ ॥

ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯಂತಿ ಯಂ ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋ ಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ।